
ಶಾಸ್ತ್ರ ಕುತೂಹಲ

ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ



ಆಕರ ಗ್ರಂಥಮಾಲೆ

ಶಾಸ್ತ್ರ ಕುತೂಹಲ

ಕನ್ನಡ ಲೇಖನಗಳ ಸಂಗ್ರಹ

ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

SASTRA KUTOOHALA

Writer
Prof. G. Venkatasubbaiah
No. 20, 9th Main, 2nd Cross,
Rajamahal Vilas, Sadashivanagara
Bangalore- 560 080
Ph: 23611263

Publisher
N. Thippeswamy
Administrative Officer
Kannada Pustaka Pradhikara
(Kannada Book Authority)
Pampa Mahakavi Road
Chamarajpet, Bangalore- 560 018

First Print: Dec 2003
Pages: Xii +316 Price: Rs. 150-00
ISBN: 81-7713-163-X

DTP
Tejas Graphics
No.70, 2nd Main, Jabbar Block,
Vyalikaval, Bangalore-560 003
Ph: 3313400

Printed
Shakti Printers & Publishers
No. 277, 5th Cross,
Vidhanasoudha Extn.,
Kavidhama Nagar, Laggere,
Bangalore- 560 058
Ph: 2712264

ಅರ್ಪಣೆ

ನನ್ನ ಬರವಣಿಗೆಗೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಡುತ್ತಿದ್ದ

ಪತ್ನಿ ದಿವಂಗತಳಾದ

ಗಿರಿಜಾಮಣಿ

ಈಗ ಅದೇ ಬಗೆಯ ವಾತಾವರಣವನ್ನು ಕಲ್ಪಿಸಿಕೊಡುತ್ತಿರುವ

ಮಗ

ಪ್ರಾಧ್ಯಾಪಕ ಚಿ|ಡಾ| ಜಿ.ಎ.ಆನಂದ,

ಸೊಸೆ ಚಿ|ಸೌ| ಉಷಾ,

ಮಗಳು

ಚಿ|ಸೌ| ಡಾ.ವಾಣೀ,

ಅಳಿಯ

ಚಿ|ಡಾ.ರಮೇಶ ನಾರಾಯಣ,

ಮೊಮ್ಮಗ

ಚಿ| ಜಿ.ಎ.ಅಜಿತ

ಇವರುಗಳಿಗೆ

ಪ್ರೀತಿ ಸ್ನೇಹ ಪೂರ್ವಕವಾದ ಬಳುವಳಿ.

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ ಇದು. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ'ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು!ಈ ಜ್ಞಾನವು ಹಲವು ರೂಪುಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದಿಂದ ಕೇಡು'ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನವು ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ! ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಇಂದು ಜ್ಞಾನರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕೆ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯ ಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳನ್ನು ನಮ್ಮಲ್ಲಿಹಿಂದೆ ಇದ್ದವು. ೧೮೨೦ ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಮ್ ಆಯಡಂ ವರದಿಗಳು ನಮಗೆ ತಿಳಿಸುತ್ತವೆ. ಆದರೆ , ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ , ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದು ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಳಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ , ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಕನ್ನಡ ಶಾಸ್ತ್ರಸಾಹಿತ್ಯ ಬಹು ಸಮೃದ್ಧವಾಗಿದೆ. ಅದು ಇಂಗ್ಲಿಷ್, ಸಂಸ್ಕೃತ, ತೆಲುಗು, ಪಾಲಿ, ಮತ್ತು ಪ್ರಾಕೃತ ಭಾಷಾಸಾಹಿತ್ಯಗಳಿಂದ ಪಡೆದಿರುವ ಉಜ್ಜೀವನ ಅಪೂರ್ವವೇ ಸರಿ. ಆಧುನಿಕ ಶಿಕ್ಷಣಕ್ಕೆ ಸಂಸ್ಕೃತಿ ತಿಳಿವಳಿಕೆಗೆ ಜ್ಞಾನಶಾಸ್ತ್ರದ ಬಲ ನಮಗೆ ತುಂಬಾ ಬೇಕು.

ಜ್ಞಾನಮೀಮಾಂಸೆಯ ಆಳವಾದ ತಿಳಿವಳಿಕೆ ಇಲ್ಲದೆ ನಾವು ಬದುಕಲಾರೆವು. ನಮ್ಮ ಸಾಂಸ್ಕೃತಿಕ ಬದುಕಿಗೆ ಎಷ್ಟು ಶಾಸ್ತ್ರಶಾಖೆಗಳ ತಿಳಿವಳಿಕೆ ಇದ್ದರೂ ಅದು ಕಡಮೆಯೇ. ಇಂಡಾಲಜಿ ಅಥವ ಭಾರತೀಯ ಶಾಸ್ತ್ರ ಎಂಬುದು ಈ ವರ್ಗಕ್ಕೆ ಸೇರುತ್ತದೆ. ಭಾಷೆ, ಸಾಹಿತ್ಯ, ಸಂಸ್ಕೃತಿ, ನೆಲ, ಜಲ, ಭೂಮಿ, ಪರಿಸರ, ದರ್ಶನ, ಧರ್ಮ, ಮತ , ನಂಬಿಕೆ, ಆಚಾರ - ಹೀಗೆ ಹಲವು ವಿಷಯಗಳ ಸಮಗ್ರನೋಟ 'ಭಾರತೀಯಶಾಸ್ತ್ರ'ದ ಮುಖ್ಯ ನೆಲೆ ಮತ್ತು ಆಶಯವಾಗಿದೆ.

ನಮ್ಮ ನಡುವಿನ ಹಿರಿಯ ಜ್ಞಾನವಂತರಾದ ಪ್ರೊ ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರು ಈ ವರ್ಗಕ್ಕೆ ಸೇರಿದವರು. ಅವರು ಹಲವು ಭಾಷೆಗಳಲ್ಲಿ, ಹಲವು ಶಾಸ್ತ್ರಗಳಲ್ಲಿ, ಹಲವು ಜ್ಞಾನಶಾಖೆಗಳಲ್ಲಿ ಆಳವಾದ ವ್ಯುತ್ಪತ್ತಿ ಪಡೆದವರು. ಈ ವೃದ್ಧಾಪ್ಯದಲ್ಲೂ ಜ್ಞಾನದ ಹಂಬಲಕ್ಕಾಗಿ ತಪಿಸುತ್ತಿರುವ ಮಹನೀಯರು. ಅವರು ಹೆಚ್ಚು ಬರೆದವರಲ್ಲ ಆದರೆ, ಬರೆದಷ್ಟೂ ಬಂಗಾರ. ಇವರು ಮೂಲತಃ ಗಣಿತಶಾಸ್ತ್ರ ಪ್ರಾಧ್ಯಾಪಕರು. ಅವರ ಗಣಿತಪ್ರಜ್ಞೆ ಲೇಖನಗಳಲ್ಲಿ ಸೂಕ್ಷ್ಮವಾಗಿ ಕಾಣುತ್ತದೆ. ಅವರು ಪೂಣೆಯಲ್ಲಿ Professor of Actuarial Science and Statistics ಆಗಿ ಕೆಲಸ ಮಾಡಿದ್ದುಂಟು. ಆನಂತರ ಎಲ್.ಐ.ಸಿ ಯಲ್ಲಿ Asst. Divisional Manager ಆಗಿ ಹದಿಮೂರು ವರ್ಷಗಳ ಕಾಲ ದುಡಿದು; ಮೈಸೂರು ಸರ್ಕಾರದ ಇನ್ಶೂರೆನ್ಸ್ ವಿಭಾಗದಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ ಅನುಭವ. ಇವೆಲ್ಲವೂ ಅವರ ಜ್ಞಾನಕ್ಕೆ ಬೇರೆಬೇರೆ ನಂಟುಗಳನ್ನು ಕಲ್ಪಿಸಿಕೊಟ್ಟಿದೆ.

ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರು ಸ್ವಂತ ವ್ಯಾಸಂಗದಿಂದ ಕನ್ನಡ ಮತ್ತು ಸಂಸ್ಕೃತ ಭಾಷಾ-ಸಾಹಿತ್ಯಜ್ಞಾನ ಸಂಪಾದಿಸಿಕೊಂಡು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಇವರು ಅತ್ತ ಸೋಸಲೆ ಅಯ್ಯಾಶಾಸ್ತ್ರಿಗಳ ವಂಶಕ್ಕೆ ನಂಟು ಬೆಳೆಸಿಕೊಂಡವರು. ಇತ್ತ ಗರ್ಗೇಶ್ವರಿ ಮನೆತನದಿಂದ ಬಂದ ವಿದ್ವತ್ತಿನ ಬಳುವಳಿಗೆ ಸೇರಿದವರು. ಪ್ರಾಚೀನ ಶಾಸ್ತ್ರಶಾಖೆಗಳ ನಂಟು ಒಂದುಕಡೆ; ತಮ್ಮ ಸುತ್ತಮುತ್ತ ಇದ್ದ ವಿದ್ವಾಂಸರಿಂದ ಪಡೆದ ತಿಳಿವಳಿಕೆ -ಸಂಬಂಧಗಳು ಮತ್ತೊಂದು ಕಡೆ. ಇವೆರಡೂ ಅವರ ಬುದ್ಧಿ - ಭಾವಗಳನ್ನು ಬಹುವಾಗಿ ಬೆಳೆಸಿವೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರ ಲೇಖನಗಳ ಒಂದು ಕಟ್ಟನ್ನು ಕನ್ನಡಿಗರಿಗೆ ಕೊಡಮಾಡುತ್ತಿದೆ. ಶಾಸ್ತ್ರಕುತೂಹಲ ಗ್ರಂಥವು ಆಕರಗ್ರಂಥ ಮಾಲೆಯ ಒಂದು ವಿದ್ವತ್ ಕೃತಿ. ಇಲ್ಲಿಯ ಬರಹಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ಸಾಹಿತ್ಯಕ್ಕೆ, ಸಂಬಂಧಿಸಿವೆ. ಇವು ಆಳವಾದ ವ್ಯುತ್ಪತ್ತಿಯನ್ನೂ ಅಪರೂಪದ ತಿಳಿವಳಿಕೆಯನ್ನೂ ಜೋಡುಹೆಣಿಗೆಯಾಗಿ ಹಿಡಿದಿವೆ. ಈ ಬಗೆಯ ಲೇಖನಗಳನ್ನು ಬರೆಯುವವರು ನಮ್ಮ ನಡುವೆ ಈಗೀಗ ಕ್ಷೀಣಿಸುತ್ತಿದ್ದಾರೆ. ನಮಗೆಲ್ಲರಿಗೂ ತಿಳಿದಿರುವಂತೆ ವೇದಜ್ಞ, ಮಹಾಪಂಡಿತ ಡಾ.ಎ.ವೆಂಕಟಸುಬ್ಬಯ್ಯ ಒಬ್ಬರು. ಆನಂತರ

ನಿಘಂಟುಶಾಸ್ತ್ರಜ್ಞರಾದ ಆಧುನಿಕ ಕಿಟಲ್ ಪ್ರೊ.ಜಿ.ವೆಂಕಟಸುಬ್ಬಯ್ಯ ಮತ್ತೊಬ್ಬರು. ಆ ಸಾಲಿಗೆ ಸೇರಿದ ಮೂರನೆಯ ಮಹನೀಯರೆಂದರೆ: ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ. ಈ ಮೂವರು ಕನ್ನಡ ಸಾಹಿತ್ಯದ ವಿದ್ವದ್‌ತ್ರಯರು. ಇವರೆಲ್ಲರೂ ಜ್ಞಾನಶಾಸ್ತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಈಗಲೂ ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರ ಕನ್ನಡ ಲೇಖನಗಳು ಜ್ಞಾನಶಾಸ್ತ್ರಕ್ಕೆ ಬೆಲೆಯುಳ್ಳ ಬರಹಗಳಾಗಿವೆ.

ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರು ಈಗ ತೊಂಭತ್ತನಾಲ್ಕರ ಇಳಿವಯಸ್ಸಿನಲ್ಲಿದ್ದಾರೆ. ಜ್ಞಾನದ ಹಂಬಲ ಅವರಿಗೆ ಇನ್ನೂ ಹಿಂಗಿಲ್ಲ. ಅವರು ಈ ಬರಹಗಳು ಆ ಹಂಬಲದ ಸಂಕೇತಗಳಾಗಿವೆ. ಇಂಥ ಬರಹಗಳು ನಮ್ಮ ಭಾಷೆ-ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸುತ್ತವೆಂಬ ನಂಬಿಕೆ ನನ್ನದಾಗಿದೆ. ಇಂಥ ಮಹತ್ವದ ಗ್ರಂಥವನ್ನು ಪುಸ್ತಕ ಪ್ರಾಧಿಕಾರವು ಪ್ರಕಟಿಸಲು ಅನುವು ಮಾಡಿಕೊಟ್ಟ ವಿದ್ವಾಂಸರಾದ ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯನವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಪುಸ್ತಕ ಹೊರಬರಲು ಸೂಚನೆ ನೀಡಿದ ಪ್ರೊ. ಜಿ.ವೆಂಕಟಸುಬ್ಬಯ್ಯನವರನ್ನು ಈ ಹೊತ್ತು ಕೃತಜ್ಞತಾಪೂರ್ವಕ ನೆನೆಯುವುದು ನನಗೆ ಸಂತೋಷದ ಕೆಲಸ. ಪ್ರಾಧಿಕಾರದ ಸದಸ್ಯಮಿತ್ರರು ಸದಾ ನನ್ನ ಜತೆ ಇದ್ದಾರೆ. ಶಕ್ತಿಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಗೆಳೆಯರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಕನ್ನಡದ ಜನ ಈ ಕೃತಿಯನ್ನು ಪ್ರೀತಿಯಿಂದ ಬರಮಾಡಿಕೊಳ್ಳಬೇಕೆಂದು ಆಶಿಸುತ್ತೇನೆ.

ಲೇಖಕನ ಬಿನ್ನಹ

ಗಜವದನ ಹೇರಂಬ ಗಣಪತಿ |
ಭುಜಗಭೂಷಣ ವಿಘ್ನಮದಸಾ |
ಮಜಗೆ ಪಂಚಾನನ ಮಹೇಶ್ವರ ಪುತ್ರ ಶುಭಗಾತ್ರ||
ನಿನಗೆ ಶರಣೆಂಬೆ.
ಕಾವೇರೀವಿರಜಾತೋಯವಾತೋ ಯತ್ರ ಪ್ರವರ್ತತೇ|
ತದ್ದೇಶವಾಸಿನಾಂ ಮುಕ್ತಿಃ ಕಿಮು ತತ್ತೀರವಾಸಿನಾಂ||

ಕಾವೇರೀ ಮತ್ತು ಅದರ ಶಾಖೆ ವಿರಜಾನದಿ (ಇದೊಂದು ದೊಡ್ಡ ನಾಲೆ)ಯ ಮೇಲಿನ ಗಾಳಿಯು ಎಲ್ಲೆಲ್ಲಿ ಹರಡುತ್ತದೋ ಆದೇಶದ ಜನರಿಗೆಲ್ಲ ಮುಕ್ತಿದೊರಕುತ್ತದೆ. ಇನ್ನು ಅವುಗಳ ತೀರದಲ್ಲಿ ವಾಸ ಮಾಡುವವರ ಮಾತೇನು ಎಂಬ ಅಭಿಜಾತೋಕ್ತಿಯಿದೆ. ನಾನೂ ನನ್ನ ಪ್ರಿಯಮಿತ್ರರೂ ಹೆಸರಾಂತ ಕನ್ನಡ ಪ್ರಾಧ್ಯಾಪಕರೂ ನಿಘಂಟುಕಾರರೂ ಆದ ಜಿ.ವೆಂಕಟಸುಬ್ಬಯ್ಯನವರೂ ಕಾವೇರೀ ತೀರವಾಸಿಗಳಾಗಿದ್ದವರು. ಅವರ ಊರು ಶ್ರೀರಂಗಪಟ್ಟಣದ ಸಮೀಪದಲ್ಲಿ ಇರುವ ಗಂಜಾಂ; ನಮ್ಮೂರು ಕಪಿಲಾಕಾವೇರೀ ಸಂಗಮದ ಹತ್ತಿರ ಇರುವ ಗರ್ಗೇಶ್ವರಿ ಹೀಗಾಗಿ ನಾವಿಬ್ಬರೂ ಜೀವನ್ಮುಕ್ತರು!

ಸುಮಾರು 20-25 ವರ್ಷಗಳ ಹಿಂದೆ ಪ್ರಾ. ವೆಂಕಟಸುಬ್ಬಯ್ಯನವರು ಒಮ್ಮೆ "ನಿಮ್ಮ ಲೇಖನಗಳನ್ನೆಲ್ಲ ಕೂಡಿಸಿ ಇಡಿ" ಎಂದು ಹೇಳಿದ್ದರು. ಮತ್ತೆ ಭೇಟಿಯಾದಾಗೆಲ್ಲ ಜ್ಞಾಪಕ ಕೊಟ್ಟಿದ್ದರು. ಆದರೆ "ನನ್ನ ಲೇಖನಗಳಲ್ಲಿ ವಿದ್ವಾಂಸರನ್ನು ರಂಜಿಸಬಹುದಾದ ಸತ್ವವೇನಿದ್ದೀತು? ಎಂಬ ಶಂಕೆಗೊಳಗಾಗಿ ನಾನು ಉದಾಸೀನಭಾವ ತಾಳಿದ್ದೆ ಈಗ ಎರಡು ವರ್ಷಗಳಿಗೆ ಹಿಂದೆ ಕೆಲವು ದಾಖಲೆಗಳಿಗಾಗಿ ಹುಡುಕುತ್ತಿದ್ದಾಗ 8-10 ಲೇಖನಗಳ ಕಟ್ಟೊಂದು ಸಿಕ್ಕಿತು, ಇದರಿಂದ ಉತ್ತೇಜಿತನಾಗಿ ಹುಡುಕಿದಾಗ ಸುಮಾರು 40 ಲೇಖನಗಳ ಅಥವಾ ಮೇಲಚ್ಚುಗಳ ಪ್ರತಿಗಳು ದೊರಕಿದವು. ಅವುಗಳನ್ನು ವಿಷಯಾನುಸಾರ ವಿಂಗಡಿಸಿ ಮುದ್ರಣಕ್ಕೆ ಅನುಕೂಲವಾಗುವಂತೆ ಸಿದ್ಧಪಡಿಸುವಲ್ಲಿ ಮಾನ್ಯ ಯುವಮಿತ್ರ ಡಾ|ಬಿ.ಎಸ್.ರಾಮಕೃಷ್ಣರಾಯರ ಸ್ನೇಹಪೂರ್ವಕ ಸಹಕಾರ ದೊರೆಯಿತು. ಪುಸ್ತಕದ ಮೂಲಪ್ರತಿಯೇನೋ ತಯಾರಾಯ್ತು. ಆದರೆ ಮುದ್ರಿಸಲು ಹಣವಿಲ್ಲದಾದ ಕಾರಣ ಇಷ್ಟಕ್ಕೆ ಸ್ಥಗಿತವಾಯಿತು. ಈ ಪರಿಸ್ಥಿತಿಯಲ್ಲಿದ್ದಾಗ ಇದನ್ನರಿತ ಪ್ರೊ. ಜಿ.ವೆಂಕಟಸುಬ್ಬಯ್ಯನವರು

ಈ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಪ್ರೊ.ಮಲ್ಲೇಪುರಂ ವೆಂಕಟೇಶರವರೊಡನೆ ಮಾತನಾಡಲಾಗಿ ಅವರು ಪುಸ್ತಕವನ್ನು ಪ್ರಾಧಿಕಾರದ ವತಿಯಿಂದ ಪ್ರಕಟಿಸುವ ಭರವಸೆ ನೀಡಿ ಕೂಡಲೇ ಕಾರ್ಯಪ್ರವೃತ್ತರಾದರು. ಅವರ ಈ ಮಹೋಪಕಾರ ಚಿರಸ್ಮರಣೀಯ ಅವರಿಗೆ ನಾನು ತುಂಬ ಆಭಾರಿಯಾಗಿದ್ದೇನೆ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಇವರು ಪುಸ್ತಕ ಪ್ರಕಟಣೆಗೆ ಮುಂದಾಗಿ ಈ ಪುಸ್ತಕಕ್ಕೆ ಶಾಸ್ತ್ರ ಕುತೂಹಲ ಎಂಬ ಹೆಸರನ್ನು ಇಟ್ಟಿದ್ದಾರೆ. ಅವರಿಗೆ ನಾನು ಕೃತಜ್ಞ. ಈ ಮಹನೀಯರೆಲ್ಲರ ಸಹಕಾರದ ಫಲವಾಗಿ ಈ ಗ್ರಂಥ ಸಹೃದಯ ಓದುಗರ ಮುಂದಿದೆ. ಅವರು ಇದನ್ನು ಪರಿಶೀಲಿಸಿ ಸ್ವಲ್ಪಮಟ್ಟಿಗಾದರೂ ಆನಂದಪಟ್ಟರೆ ನಾನು ಧನ್ಯ!

ಈ ಪುಸ್ತಕ ಹೊರಬರಲು ಕಾರಣರಾದ ಎಲ್ಲ ಮಹನೀಯರಿಗೂ, ಆಗಾಗ ಬರವಣಿಗೆಯ ಪ್ರಗತಿ ಎಲ್ಲಿಗೆ ಬಂತು ಎಂದು ಕೇಳಿ ನನಗೆ ಬೆಂಬಲಕೊಟ್ಟ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ| ಟಿ.ವಿ.ವೆಂಕಟಾಚಲ ಶಾಸ್ತ್ರಿ ಮತ್ತು ಕಾರ್ಯದರ್ಶಿ ಪ್ರೊ.ನಾ.ಗೀತಾಚಾರ್ಯ ಇವರಿಗೂ ಕೃತಜ್ಞನಾಗಿದ್ದೇನೆ.

ಸಸ್ನೇಹ ವಂದನಾಪೂರ್ವಕವಾಗಿ,

ಡಿಸೆಂಬರ್ ೨೬, ೨೦೦೩ ಗಗ್ಗೇಶ್ವರಿ ವೆಂಕಟಸುಬ್ಬಯ್ಯ

ಬೆಂಗಳೂರು.

ವಿಷಯಸೂಚೀ

ಸಂಸ್ಕೃತ ಸಾಹಿತ್ಯ

ಇತರ ಲೇಖನಗಳು

ಕನ್ನಡ ಕಾವ್ಯ ಸಾಹಿತ್ಯ

ಪಂಪಕವಿಯ "ವಿಕ್ರಮಾರ್ಜುನ ವಿಜಯ"ದಲ್ಲಿನ "ರಂಗತ್ತುಂಗತರಂಗ..." ಎಂಬ ಮಂಗಳವೃತ್ತ

"ವಿಕ್ರಮಾರ್ಜುನ ವಿಜಯ"ದಲ್ಲಿ "ಮಂಗಳಮಹಾಶ್ರೀಯಂ ಜಯಶ್ರೀಯುಮಂ" ಎಂದು ಮುಕ್ತಾಯವುಳ್ಳ ಐದು[1] ಮಂಗಳವೃತ್ತಗಳಿವೆ. ಇವುಗಳಲ್ಲಿ ಮೊದಲನೆಯ ಪದ್ಯದ ಮುದ್ರಿತಪಾಠ ಇಂತಿದೆ :

ರಂಗ*ತ್ತುಂಗತರಂಗ ಭಂಗುರ ಲಸದ್ಗಂಗಾಜಳಂ ನರ್ಮದಾ
ಸಂಗಸ್ವಚ್ಛವನಂ ಪ್ರಸಿದ್ಧ ವರದಾ ಪುಣ್ಯಾಂಬು ಗೋದಾವರೀ ।
ಸಂಗತ್ಯೋರ್ಜಿತವಾರಿ ಸಾರಯಮುನಾ ನೀಲೋರ್ಮಿನೀರಂ ಭುಜೋ
ತ್ತುಂಗಂಗೀಗರಿಗಂಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ ॥

[ಪಾಠಾಂತರಗಳು:-*ತ್ತಾರ(ಕ,ಗ)
ಶ್ವೇತವನಂ(ಕ), ರ್ಜಿತನುಂ(ಖ), ರ್ಚಿತಮನಂ(ಗ), ರ್ಚ್ಚಿತನುಂ(ಘ)
ತ್ಯಂಚಿತ(ಕ), ತ್ಯಂಜಿತ(ಖ), ತ್ಯೋಚಿತ(ಗ), ತ್ಯೋರ್ಚಿತ(ಘ)]

ದಿವಂಗತ ಶ್ರೀಮಾನ್ ಡಿ. ಎಲ್. ನರಸಿಂಹಾಚಾರ್ಯರು ತಮ್ಮ "ಪಂಪಭಾರತ ದೀಪಿಕೆ" ಯಲ್ಲಿ "ಸಂಗತ್ಯೋರ್ಜಿತವಾರಿ" ಬದಲಾಗಿ "ಸಂಗತ್ಯೂರ್ಜಿತವಾರಿ" ಎಂದು ತೆಗೆದುಕೊಂಡಿದ್ದಾರೆ.

"ಪಂಪ ಭಾರತದಲ್ಲಿಯ ವರದಾನದಿ"[2] ಎಂಬ ಲೇಖನದಲ್ಲಿ ಶ್ರೀಯುತ ಸೀತಾರಾಮ ಜಾಗೀರ್‌ದಾರರು ಮುದ್ರಿತಪಾಠವೂ ನರಸಿಂಹಾಚಾರ್ಯರಿಂದ ಸ್ವೀಕೃತವಾದ ಪಾಠವೂ ಸರಿಯಲ್ಲವೆಂದೂ "ಘ" ಪ್ರತಿಯಲ್ಲಿನ "ಸಂಗತ್ಯೋರ್ಚಿತ" ಎಂಬುದು ಸರಿಯಾದ ಪಾಠವೆಂದೂ ಅಭಿಪ್ರಾಯಪಟ್ಟು ಆ ಪದ್ಯದಲ್ಲಿ ಬಂದಿರುವ ವರದಾನದಿ ಬನವಾಸಿಯ ವರದಾನದಿಯಲ್ಲವೆಂದೂ ಗೋದಾವರಿಯ ಉಪನದಿಯಾದ ವೈನಗಂಗಾ ನದಿಗೆ ಸೇರುವ ವರದಾ ನದಿಯೆಂದೂ ಹೇಳಿರುತ್ತಾರೆ. "ಪಂಪ ಭಾರತದಲ್ಲಿ ವರದಾ ನದಿ - ಒಂದು ಪ್ರತಿಕ್ರಿಯೆ[3]" ಎಂಬ ಲೇಖನದಲ್ಲಿ ಶ್ರೀಯುತ ಎಂ. ಎ. ಲಕ್ಷ್ಮೀತಾತಾಚಾರ್ಯರು ಜಾಗೀರ್‌ದಾರರ ಅಭಿಪ್ರಾಯಗಳನ್ನು ವಿರೋಧಿಸಿ, "ಸಂಗತ್ಯೋರ್ಜಿತ" ಅಥವಾ "ಸಂಗತ್ಯೂರ್ಜಿತ" ಎಂಬ ಪಾಠವೇ ಸಾಧುವೆಂದೂ, ಪದ್ಯದಲ್ಲಿನ ವರದಾನದಿ ಬನವಾಸಿಯ ಸಮೀಪದಲ್ಲಿ ಹರಿಯುವ ವರದಾನದಿ ಎಂಬುದನ್ನು ಖಂಡಿಸಲು ಆಧಾರಗಳಿಲ್ಲವೆಂದೂ

1 ಕರ್ನಾಟಕ ಸಾಹಿತ್ಯ ಪರಿಷತ್ತಿನ 1972ರ ಮುದ್ರಣ-ಚತುರ್ದಶಾಶ್ವಾಸ, ಪದ್ಯ 31-35

2 ಸಾಧನೆ:ಸಂಪುಟ 3, ಸಂಚಿಕೆ 3(ಜುಲೈ-ಸೆಪ್ಟೆಂಬರ್ 1973),. ಪುಟ 92-96

3 ಸಾಧನೆ-ಸಂಪುಟ 2, ಸಂಚಿಕೆ 4(ಅಕ್ಟೋಬರ್-ಡಿಸೆಂಬರ್ 1973) ಪುಟ 205-209

ಅಭಿಪ್ರಾಯಪಟ್ಟಿರುತ್ತಾರೆ. ಮುಂದೆ ಉತ್ತರ ಪ್ರತ್ಯುತ್ತರ ರೂಪವಾಗಿ ಮೂರು ಲೇಖನಗಳು[4] ಬಂದಿವೆ. ವಾದದ ಬಿಸಿ ಏರಿದಂತೆ ಲೇಖನಗಳಲ್ಲಿ ವ್ಯಕ್ತಿಪರವಾದ ಟೀಕೆಗಳು ಹೆಚ್ಚಾಗಿವೆ. ಈ ಟೀಕೆಗಳನ್ನು ಬದಿಗಿಟ್ಟು "ಯಾವುದು ಸರಿ ಎಂಬುದು ಮುಖ್ಯ; ಯಾರು ಸರಿ ಎಂಬುದು ಗೌಣ" ಎಂಬ ದೃಷ್ಟಿಯಿಂದ, ಈ ಐದು ಲೇಖನಗಳನ್ನೂ ಈ ವಿಷಯಕ್ಕೆ ಸಂಬಂಧಿಸಿದ ಇತರ ವಿದ್ವಾಂಸರ ಗ್ರಂಥ ಮತ್ತು ಲೇಖನಗಳನ್ನು ಪುನಃ ಸಾವಕಾಶವಾಗಿ ಓದಿ ನನಗೆ ತೋರಿದ ವಿಷಯಗಳನ್ನು ಓದುಗರ ಮುಂದಿಡುವುದೇ ಈ ಲೇಖನದ ಉದ್ದೇಶ. ತಿಳಿದವರು ಇದರಲ್ಲಿನ ತಪ್ಪು ಒಪ್ಪುಗಳನ್ನು ಪರಿಶೀಲಿಸಲಿ.

ಈಗ ವಿವಾದಾಸ್ಪದವಾದ ವಿಷಯಗಳು ಮೂರು[5]:

1 ಪದ್ಯದ ಮೂರನೇ ಸಾಲಿನಲ್ಲಿ "ವಾರಿ" ಆದಮೇಲೆ ಪದವಿಭಾಗ ಮಾಡಿ, "ಸಾರ"ಶಬ್ದವನ್ನು ಮುಂದಿನ ಪದದ ಭಾಗವಾಗಿ ತೆಗೆದುಕೊಳ್ಳಬೇಕೆ ಅಥವಾ 'ವಾರಿಸಾರ' ಆದಮೇಲೆ ಪದವಿಭಾಗವೆ?

2 "ಸಂಗತ್ಯೋರ್ಚಿತವಾರಿ", "ಸಂಗತ್ಯೋರ್ಜಿತವಾರಿ" ಮತ್ತು "ಸಂಗತ್ಯೂರ್ಜಿತ ವಾರಿ" ಇವುಗಳ ಪೈಕಿ ಕವಿಯ ಮೂಲಪಾಠ ಯಾವುದಿರಬಹುದು?

3 ಪದ್ಯದಲ್ಲಿನ ವರದಾ ನದಿ ಯಾವುದು?

ಈಗ ಈ ವಿಷಯಗಳನ್ನು ಒಂದೊಂದಾಗಿ ಪರಾಮರ್ಶಿಸೋಣ.

1. ಪದವಿಭಾಗ

"ವಾರಿಸಾರ" ಆದಮೇಲೆ ಪದವಿಭಾಗ ಮಾಡಬೇಕೆಂಬುದು ಜಾಗೀರ್‌ದಾರರ ನಿಲುವು. "ವಾರಿಸಾರಂ" ಎಂದು ಪ್ರಥಮಾ ವಿಭಕ್ತ್ಯಂತವಾಗಿಲ್ಲವಾದುದರಿಂದ ಈ ರೀತಿಯ ಪದವಿಭಾಗ ಸಲ್ಲದೆಂಬ ಲಕ್ಷ್ಮೀತಾತಾಚಾರ್ಯರ ಆಕ್ಷೇಪಣೆಗೆ ಉತ್ತರವಾಗಿ 'ಸಾರ' ಎಂಬುದು ಅವ್ಯಯವೆಂದೂ, "ಪಾಣಿನಿಯು ಎಲ್ಲಿಯೂ ಅವ್ಯಯಗಳು ಇಷ್ಟೇ ಎಂದು ನಿಗದಿಸಿಲ್ಲ"ವೆಂದೂ,

4 (i) "ಪಂಪ ಭಾರತದ ವರದಾನದಿ-ಒಂದು ಪ್ರತಿಕ್ರಿಯೆಗೆ ಒಂದು ಉತ್ತರ", (ಸೀತಾರಾಮ ಜಾಗೀರದಾರ); ಸಾಧನೆ-ಸಂಪುಟ 3, ಸಂಚಿಕೆ 2 (ಏಪ್ರಿಲ್-ಜೂನ್ 1974) ಪುಟ 145-149

(ii) "ಪಂಪ ಭಾರತದಲ್ಲಿ ವರದಾನದಿ-ಪ್ರತಿಕ್ರಿಯೆಯ ಉತ್ತರಕ್ಕೆ ಪ್ರತ್ಯುತ್ತರ", (ಎಂ.ಎ. ಲಕ್ಷ್ಮೀತಾತಾಚಾರ್), ಸಾಧನೆ-ಸಂಪುಟ 4, ಸಂಚಿಕೆ 1 (ಜನವರಿ-ಮಾರ್ಚ್ 1975) ಪುಟ 149-157

(iii) "ಪಂಪ ಭಾರತದ ವರದಾನದಿ - ಒಂದು ಮರು ಉತ್ತರ" (ಸೀತಾರಾಮ ಜಾಗೀರ್‌ದಾರ್); ಸಾಧನೆ-ಸಂಪುಟ 4- ಸಂಚಿಕೆ 3 (ಜುಲೈ-ಸೆಪ್ಟೆಂಬರ್ 1975) ಪುಟ 156-162

5 ಮೇಲೆ ನಿರ್ದೇಶಿಸಿರುವ ಲೇಖನಗಳ ಪೈಕಿ ಕೊನೆಯದರಲ್ಲಿ ಶ್ರೀಯುತ ಜಾಗೀರ್‌ದಾರರು ಎರಡು ವಿವಾದಾಸ್ಪದ ವಿಷಯಗಳನ್ನು ಮಾತ್ರ ಹೇಳಿದ್ದಾರೆ. ಪದ ವಿಭಾಗವೂ ಮುಖ್ಯವೆಂದು ನನಗೆ ತೋರುವುದರಿಂದ ಇಲ್ಲಿ ಮೂರು ವಿಷಯಗಳನ್ನು ತೆಗೆದುಕೊಂಡಿರುತ್ತೇನೆ.

ಸದೃಶಂ ತ್ರಿಷು ಲಿಂಗೇಷು ಸರ್ವಾಸು ಚ ವಿಭಕ್ತಿಷು ।
ವಚನೇಷು ಚ ಸರ್ವೇಷು ಯನ್ನವ್ಯೇತಿ ತದವ್ಯಯಮ್ ॥

ಎಂಬ ಭಟ್ಟೋಜಿ ದೀಕ್ಷಿತರು ಬರೆದ ಕಾರಿಕೆಯನ್ನು, ಅವ್ಯಯವನ್ನು ವಿವರಿಸುವಲ್ಲಿ ಬಳಸಿಕೊಂಡರೆ ಸಾಕೆಂದೂ ಅವರು ಹೇಳಿರುತ್ತಾರೆ.

ಪರಿಶೀಲನೆ : ''ಸದೃಶಂ ತ್ರಿಷು ಲಿಂಗೇಷು'' ಎಂಬ ಶ್ಲೋಕವು ಭಟ್ಟೋಜಿ ದೀಕ್ಷಿತರು ಬರೆದ ಕಾರಿಕೆಯಲ್ಲ. ದೀಕ್ಷಿತರ ಸಿದ್ಧಾಂತಕೌಮುದಿಯಲ್ಲಿ ಈ ಶ್ಲೋಕದ ಕೊನೆಯಲ್ಲಿ ''ಇತಿ ಶ್ರುತಿಃ'' ಎಂದೂ, ಅವರದೇ ಪ್ರೌಢಮನೋರಮಾ ವ್ಯಾಖ್ಯಾನದಲ್ಲಿ ''ಆಥರ್ವಣ ವಿದ್ಯಾಗತಶ್ರುತಿ'' ಎಂದೂ ಹೇಳಿದ್ದಾರೆ. ಆಥರ್ವವೇದೀಯ ಗೋಪಥ ಬ್ರಾಹ್ಮಣದಲ್ಲಿ ಓಂಕಾರನಿರುಕ್ತಸಂದರ್ಭದಲ್ಲಿ (ಪೂರ್ವಭಾಗ, ಪ್ರಪಾಠಕ 1, ಮಂತ್ರ 26) ಈ ಮಂತ್ರವಿದೆ. ಪತಂಜಲಿ ಮುನಿಗಳು ವ್ಯಾಕರಣ ಮಹಾಭಾಷ್ಯದಲ್ಲಿಯೂ[6] ಇದನ್ನು ಉದಾಹರಿಸಿದ್ದಾರೆ. ಈ ಶ್ಲೋಕವು 'ಅವ್ಯಯ' ಶಬ್ದದ ನಿಷ್ಪತ್ತಿಯನ್ನೂ, ಲಕ್ಷಣವನ್ನೂ ವಿವರಿಸುತ್ತದೆಯೇ ಹೊರತು, ಯಾವುದೇ ಪದವು ಅವ್ಯಯವೇ ಅಲ್ಲವೇ ಎಂದು ನಿರ್ಣಯಿಸಲು ಸಹಕಾರಿಯಾಗುವುದಿಲ್ಲ. ಸಾಮಾನ್ಯವಾಗಿ ಸಂಸ್ಕೃತ ವೈಯಾಕರಣರು ಅವ್ಯಯಗಳನ್ನು ಅಸರ್ವ ವಿಭಕ್ತಿ ತದ್ಧಿತಾಂತ, ಕೃದವ್ಯಯ, ನಿಪಾತ, ಅವ್ಯಯೀಭಾವ ಸಮಾಸಾಂತ ಮತ್ತು ಸ್ವರಾದಿ ಎಂದು ಐದು ಬಗೆಯಾಗಿ ವಿಭಜಿಸಿದ್ದಾರೆ.[7] 'ಸಾರ' ಶಬ್ದವು ಮೊದಲ ಮೂರು ಪ್ರಭೇದಗಳಿಗೆ ಸೇರುವುದಿಲ್ಲ. ''ಗೋದಾವರೀ ಸಂಗತ್ಯೋರ್ಜಿತ ವಾರಿಸಾರ' ಎಂಬಲ್ಲಿ ಅವ್ಯಯೀ ಭಾವ ಸಮಾಸವೂ ಇಲ್ಲ. ಇನ್ನುಳಿದ ಪ್ರಭೇದ ಸ್ವರಾದಿ. ಇದು ಆಕೃತಿಗಣವಾದುದರಿಂದ, ಗಣಪಾಠದಲ್ಲಿ 'ಸಾರ' ಎಂಬ ಶಬ್ದವಿಲ್ಲದಿದ್ದರೂ, ಪ್ರಯೋಗಾಧಾರವಿದ್ದಿದ್ದರೆ ಈ ಗುಂಪಿಗೆ ಸೇರಿಸಿಕೊಳ್ಳಬಹುದಾಗಿತ್ತು. ಆದರೆ ಈ ಶಬ್ದ ಅವ್ಯಯವಾಗಿ ಪ್ರಯೋಗದಲ್ಲಿ ಕಂಡು ಬರುವುದಿಲ್ಲ. ಕೋಶಗಳಲ್ಲಿ[8] ಈ ಪದ ಪುಲ್ಲಿಂಗ ನಪುಂಸಕಲಿಂಗಗಳಲ್ಲೂ, ವಿಶೇಷಣ ವಾಗಿ ಮೂರು ಲಿಂಗಗಳಲ್ಲೂ ಕೊಡಲ್ಪಟ್ಟಿದೆ. ಆಧುನಿಕ ನಿಘಂಟುಗಳಲ್ಲಿಯೂ[9] ವಿಶೇಷ್ಯನಿಘ್ನ (adjective)ವಾಗಿ ಮತ್ತು ಪುಲ್ಲಿಂಗ ನಪುಂಸಕಲಿಂಗಗಳಲ್ಲಿ ಮಾತ್ರ ಅರ್ಥಗಳೂ ಪ್ರಯೋಗಗಳೂ ಕೊಡಲ್ಪಟ್ಟಿವೆ. ಈ

---

6 ''ತದ್ಧಿತಶ್ಚಾಸರ್ವ ವಿಭಕ್ತಿಃ'' (ಪಾಣಿನಿ 1-1-38) ಎಂಬ ಸೂತ್ರಕ್ಕೆ ಸಂಬಂಧಿಸಿದ ಭಾಷ್ಯದಲ್ಲಿ.

7 ಅವ್ಯಯಕೋಶ (ಶ್ರೀವತ್ಸಾಂಕಾಚಾರ್ಯ) — Samskrit Education Society, Madras, ಉಪೋದ್ಘಾತ, ಪುಟ, 2.

8 (i) ಸಾರೋ ಬಲೇ ಸ್ಥಿರಾಂಶೇಚ ನ್ಯಾಯ್ಯೇಕ್ಲೀಬಂವರೇತ್ರಿಷು । ಅಮರಕೋಶ ನಾನಾರ್ಥವರ್ಗ.
(ii) ಸಾರಂಸ್ವಾಪತೇಯವಮರ್ಥಃಸ್ವಮ್— ಹಲಾಯುಧಕೋಶ, ಪ್ರಥಮಕಾಂಡ; ಶ್ರೇಷ್ಠೇಸ್ಥಾಮ್ನಿಧನೇಶುಕ್ರೇಮಜ್ಜ್ಞಿಸಾರ ಉದಾಹೃತಃ - ಅದೇ, ಪಂಚಮಕಾಂಡ.

ಕಾರಣಗಳಿಂದ, 'ಸಾರ' ಶಬ್ದವನ್ನು ಅವ್ಯಯವೆಂದು ಪರಿಗಣಿಸಲಾಗುವುದಿಲ್ಲವೆಂಬುದು ನಿರ್ವಿವಾದ. ಆದುದರಿಂದ 'ಪಂಪಭಾರತ ದೀಪಿಕೆ'ಯಲ್ಲಿರುವಂತೆ 'ವಾರಿ' ಎಂಬಲ್ಲಿ ಪದವಿಭಾಗ ಮಾಡಿ, 'ಸಾರ' ಶಬ್ದವನ್ನು ಮುಂದಿನ ಪದದ ಭಾಗವಾಗಿ ತೆಗೆದುಕೊಳ್ಳುವುದೇ ಸೂಕ್ತವಾಗಿದೆ.

2. **ಮೂಲಪಾಠ** : ಜಾಗೀರ್‌ದಾರರು "ಸಂಗತ್ಯೋರ್ಚಿತ" ಎಂಬುದೇ ಸರಿಯಾದ ಪಾಠ[10]ವೆಂದು ಹೇಳಿ ಅದನ್ನು ಸಮರ್ಥಿಸಲು ಕೊಟ್ಟಿರುವ ಕಾರಣಗಳು :

(i) "ಅರ್ಥ ಸೌಲಭ್ಯವುಳ್ಳ ಪಾಠಕ್ಕಿಂತ ಇಲ್ಲದಿರುವುದೇ ಪ್ರಾಚೀನತರವೆಂದು ಒಪ್ಪುವುದು" ಮತ್ತು "ವಿಸಂಧಿಯನ್ನೂ ಅಪಾಣಿನೀಯ ರೂಪಗಳನ್ನೂ ತಿದ್ದದ ಪಾಠವನ್ನೂ ಮೂಲವೆಂದು ತೋರಿಸುವುದು" ಸರಿಯಾದ ರೀತಿ. (ಇದಕ್ಕೆ ಆಧಾರವಾಗಿ ಡಾ। ಕೆ. ಕೃಷ್ಣಮೂರ್ತಿಗಳ "ಸಂಸ್ಕೃತ ಕಾವ್ಯ" ವನ್ನೂ ಡಾ. ವಿ. ಎಸ್. ಸುಕಠಂಕರರ "ಆದಿಪರ್ವ"ದ "Prolegomena" ವನ್ನೂ ಉಲ್ಲೇಖಿಸಿದ್ದಾರೆ.)

(ii) ಇಲ್ಲಿನ "ಸಂಗತ್ಯೋಃ" ಶಬ್ದದ ವಿಸರ್ಗದ ಮುಂದೆ "ಅರ್ಚಿತ"ದ "ಅ" ಬರುವುದರಿಂದ ವಿಸರ್ಗ ಲೋಪವಾಗುತ್ತದೆ. ಆದಕಾರಣ "ಸಂಗತ್ಯೋರ್ಚಿತ" ಸಾಧುವಾದ ರೂಪ.[11] ವರದಾ, ಗೋದಾವರೀ ಈ ಎರಡೂ ಸ್ತ್ರೀಲಿಂಗ ಶಬ್ದಗಳನ್ನು ಸೂಚಿಸುವ ಶಕ್ತಿ ಬರಬೇಕಾದರೆ "ಸಂಗತ್ಯೋಃ" ಎಂದು ದ್ವಿವಚನ ಬರಬೇಕಾಗುತ್ತದೆ.

(iii) "ಸಂಗತ್ಯೋರ್ಚಿತ" ಇದು "ಘ" ಪ್ರತಿಯ ಪಾಠ. ಮಿಕ್ಕಿನ ಪ್ರತಿಗಳಲ್ಲೂ ಇದಕ್ಕೆ ಹತ್ತಿರದ ರೂಪದ ಅಪಪಾಠಗಳಿವೆ. 'ಚ'ಕಾರ ಹತ್ತನೆಯ ಶತಮಾನದ "ಜ"ಕಾರ ಸ್ವರೂಪದಿಂದ ತುಂಬ ಭಿನ್ನವಾಗಿತ್ತು. ಗ್ರಂಥದಲ್ಲಿ ಶಬ್ದಗಳು

---

9 Apte's Practical Sanskrit-English Dictionary. Monier-William's Sanskrit-English Dictionary.

10. ಸಾಧನೆ, ಸಂಪುಟ 4, ಸಂಚಿಕೆ 3, ಪುಟ 159

11 ಮೂಲ ಲೇಖನದಲ್ಲಿ, ಸಂಗತ್(ಸಂಗಚ್ಛತಿ ಇತಿ)+ಯೋಃ+ಅರ್ಚಿತ ಎಂದು ಕೊಟ್ಟು "ಯೋಃ" ಎಂಬುದು ದ್ವಿವಚನವೆಂದೂ ಅದರ ಅರ್ಥ "ಯಾವುವು" ಎಂದೂ ಹೇಳಿದ್ದರು. ಮುಂದೆ ತಮ್ಮ ನಿಲುವನ್ನು ಬದಲಾಯಿಸಿ "ಸಂಗತ್ಯೋಃ" ಎಂಬುದು "ಸಂಗತಿ" ಎಂಬುದರ ಷಷ್ಠೀ ದ್ವಿವಚನವೆಂದು ಹೇಳಿದ್ದಾರೆ.

ಅರ್ಥವಾಗುವಂತೆ ವಿಕಾರ ಸ್ವರೂಪವನ್ನು ಪಡೆದಿದ್ದರೆ, ಗ್ರಂಥ ಭಾಗ ತ್ರುಟಿತವಾಗಿದ್ದರೆ ಮಾತ್ರ ಪಾಠ ನಿಯೋಜನೆ (Emendation) ಮಾಡಬೇಕು.ಇಲ್ಲಿ ಅದರ ಆವಶ್ಯಕತೆಯಿಲ್ಲ.

ಪರಿಶೀಲನೆ : ಮಹಾಭಾರತ ಪೂರ್ಣವಾಗಿ ಏಕ ಕರ್ತೃಕವಲ್ಲ; ದಿನಗಳೆದಂತೆ, ಸುತ್ತಲೂ ಬಿಳಲು ಬಿಟ್ಟು ವೃದ್ಧಿಯಾದ ಆಲದ ಮರದಂತೆ ಬೆಳೆಯುತ್ತ ಹೋದ ಗ್ರಂಥ.[12] ಅದರ ಕೆಲವು ಭಾಗಗಳಾದರೂ ಪಾಣಿನಿಗಿಂತಲೂ ಪ್ರಾಚೀನ ಅಥವಾ ಸಮಕಾಲೀನ. ಅದರ ಬಹುಭಾಗ ಸಂಸ್ಕೃತ ಆಡುಮಾತಾಗಿದ್ದು ಇನ್ನೂ ಭಾಷಾರೂಪ ಬದಲಾಗುತ್ತಿದ್ದ ಕಾಲದಲ್ಲಿ ರಚಿತವಾಗಿರಬೇಕು. ಆದರೆ ಪಂಪನ ಕಾಲಕ್ಕೆ ಸಂಸ್ಕೃತ ಗ್ರಾಂಥಿಕ ಭಾಷೆಯಾಗಿ ಹೋಗಿತ್ತು. ವ್ಯಾಕರಣ ನಿಯಮಗಳು ಬಿಗಿಯಾಗಿದ್ದುವು. ಆದುದರಿಂದ ಆದಿಪರ್ವದ ಪ್ರಸ್ತಾವನೆ (Prolegomena)ಯಲ್ಲಿನ ಸೂತ್ರಗಳೆಲ್ಲವನ್ನೂ ಪಂಪಭಾರತದ ವಿಷಯದಲ್ಲಿ ಅನ್ವಯಿಸಲಾಗುವುದಿಲ್ಲ.

ಮಹಾಭಾರತದ ಸಂಪಾದನೆಯಲ್ಲೂ ಕೂಡ ಹಸ್ತಪ್ರತಿಯ ಪಾಠವನ್ನೇ ಯಾವಾಗಲೂ ಒಪ್ಪಿಕೊಂಡಿಲ್ಲ.[13]

ಹಸ್ತಪ್ರತಿಯ ಆಧಾರವಿಲ್ಲದೆ ಪಾಠವನ್ನು ಅಂಗೀಕರಿಸಬಾರದೆಂಬ ನಿಯಮಕ್ಕೆ ಅಪವಾದವಿಲ್ಲದಿಲ್ಲ. ಸಂದರ್ಭಕ್ಕೆ ಹೊಂದದಿರುವ ಅಥವಾ ಗ್ರಂಥಕರ್ತೃ ಸಾಮಾನ್ಯವಾಗಿ ಅನುಸರಿಸುತ್ತಿರುವ ಛಂದೋ ವ್ಯಾಕರಣನಿಯಮಗಳಿಗೂ ಶೈಲಿಗೂ ವಿರೋಧವಾಗಿ

12 "In the Maha Bharata we have a text with about a dozen, more or less independent, versions, whose extreme types differ, in extent, by about 13,000 stanzas or 26,000 lines; a work which, for centuries, must have been growing not only upwards and downwards, but also laterally, like the Nyagrodha tree, growing on all sides". ಮಹಾಭಾರತ ಆದಿಪರ್ವ Prolegomena, ಪುಟ lxxvii(B.O.R.I. Edition).

"However, owing partly to the fluid character of the original and partly to the fragmentary and inadequate information we possess as regards the origin, growth and transmission of the text, it is incumbent on us to make Conservatism our watchword".ಅದೇ ಗ್ರಂಥ, ಪುಟ lxxxvi.

13 "Originality and authenticity are, unfortunately, not the prerogative of any single recension or version or manuscript. They must be established, laboriously, chapter by chapter, line by line, word by word, syllable by syllable". — Prolegomena, ಪುಟ xcvii.

ತೋರುವ ಕಡೆಗಳಲ್ಲಿ ಪಾಠನಿಯೋಜನೆ (emendation) ಆವಶ್ಯಕವಾಗುವುದು.[14]

ವರದಾ ಮತ್ತು ಗೋದಾವರೀ ನದಿಗಳು ಎರಡನ್ನೂ ಸೂಚಿಸಲು 'ಸಂಗತ್ಯೋಃ' ಎಂದು ದ್ವಿವಚನಬೇಕಾಗಿಲ್ಲ. 'ಸಂಗತಿ' ಶಬ್ದವೇ ಎರಡು ನದಿಗಳೂ ಸೇರಿರುವುದನ್ನು ಹೇಳುವುದರಿಂದಲೂ, 'ಸಂಗತ್ಯೋಃ' ಎಂದಿದ್ದರೆ ಸಂಗಮಗಳು ಎರಡೆಂದಾಗುವುದರಿಂದಲೂ ದ್ವಿವಚನ ಸರಿಯಲ್ಲ. 'ಪ್ರಸಿದ್ಧ ವರದಾಪುಣ್ಯಾಂಬು' ಮತ್ತು 'ಗೋದಾವರಿ ಸಂಗತ್ಯೋ[ರ್ಜಿ]ತವಾರಿ' ಎಂದು ಎರಡು ಪದಗಳನ್ನು ಮಾಡಿದರೆ ಅರ್ಥವೂ

"ಯಾವ ಸಮಯದಲ್ಲೂ ಪರೀಕ್ಷಿಸದೆ ಯಾವುದೇ ಹಸ್ತಪ್ರತಿಯ ಪಾಠವನ್ನೂ ಮೂಲವೆಂದು ಗ್ರಹಿಸದಿರುವುದು" ಡಾ। ಕೆ. ಕೃಷ್ಣಮೂರ್ತಿ-ಸಂಸ್ಕೃತ ಕಾವ್ಯ(1958) ಪುಟ 112.

14 "If the transmitted reading (that upon which the manuscripts are agreed) or the 'traditional reading' (that which both manuscripts and direct testimonia support).......... involves.... ..... some noticeable and inexplicable deviation of forms, constructions or usages of words characteristic of the author.......... then *we are entitled to say that it is corrupt* however strong the external evidence may be in its favour". (Italics are mine).

"We can hit upon a correction which satisfies, in all respects, the demands of sense, context, grammar, style, metre and rhythm as characterising the author. We describe this correction as 'intrinsically probable" (Dr. S. M. Katre : Introduction to Indian Textual Criticism — Second Edition, 1954; pages 63-64).

"(ಹಸ್ತಪ್ರತಿಗಳಿಗೆಲ್ಲ ಸಮಾನವಾದ) 'ಪರಂಪರಾಗತ ಪಾಠ'ವಾಗಲೀ (transmitted reading) (ಹಸ್ತಪ್ರತಿಗಳು ಮತ್ತು ಇತರ ನೇರ ಸಾಕ್ಷ್ಯಗಳು ಪುಷ್ಟೀಕರಿಸುವ) 'ಸಾಂಪ್ರದಾಯಿಕ ಪಾಠ'ವಾಗಲೀ (traditional reading) ಪೂರ್ತಿಯಾಗಿ ಅರ್ಥಹೀನವಾಗಿ ಬಿಟ್ಟಿರುವುದು,... ಗಮನಾರ್ಹವಾದ ಆದರೆ ವಿವರಿಸಲು ಸಾಧ್ಯವಿಲ್ಲದ ಶಬ್ದರೂಪಗಳೋ ರಚನೆಗಳೋ ಇರುವುದು,....ಕವಿ ಪಾಲಿಸಿಕೊಂಡುಬಂದಿರುವ ಲಯ ಅಥವಾ ಛಂದೋನಿಯಮಗಳು ಭಂಗಗೊಂಡಿರುವುದು,...ಇಂಥ ಕಡೆಗಳಲ್ಲಿ ಬಾಹ್ಯಸಾಕ್ಷಿಗಳು ಅವುಗಳಿಗೆ ಎಷ್ಟೇ ಪರವಾಗಿದ್ದರೂ ಆ ಪಾಠಭಾಗ ವಿಕೃತವಾಗಿದೆಯೆಂದು ಹೇಳಬಹುದು....ಅಂಥ ಪ್ರಸಂಗದಲ್ಲಿ ಕವಿ ಮನೋಧರ್ಮವನ್ನು ಲಕ್ಷ್ಯದಲ್ಲಿಟ್ಟು ಅರ್ಥ, ಸಂದರ್ಭ, ವ್ಯಾಕರಣ, ಶೈಲಿ, ಛಂದಸ್ಸು, ತಾಳಗಳಿಗೆ ಎಲ್ಲ ವಿಧದಲ್ಲೂ ಹೊಂದುವ ತೃಪ್ತಿಕರವಾದ ತಿದ್ದುಪಡಿಯೊಂದನ್ನು ಮಾಡಬಹುದು. ಈ ತಿದ್ದುಪಡಿಯನ್ನು ಅಂತಸ್ಸಂಭಾವ್ಯವಾದ ಪಾಠವೆಂದು ಹೇಳಬಹುದು" ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ-ಭಾರತೀಯ ಗ್ರಂಥಸಂಪಾದನ ಪರಿಚಯ (ಮೇಲಿನ ಗ್ರಂಥದ ಅನುವಾದ) ಪುಟ 77-78.

ಸುಗಮವಾಗುವುದು. ಗೋದಾವರಿಯ ನೀರು ವರ್ಧಿಸುತ್ತಿರುವುದು ವರದಾನದಿ ಸೇರಿದ್ದರಿಂದ ಮಾತ್ರವಲ್ಲ, ಅನೇಕ ಉಪನದಿಗಳು ಸೇರಿರುವುದರಿಂದ.

ಇನ್ನು ಸಂಧಿವಿಚಾರ. ವಿಸರ್ಗದ ಮುಂದೆ ಅಕಾರ ಬಂದಾಗಲೆಲ್ಲ ವಿಸರ್ಗ ಲೋಪವಾಗುವುದೆಂಬ ವ್ಯಾಕರಣ ನಿಯಮವಿಲ್ಲ. 'ಸಂಗತ್ಯಃ + ಅರ್ಚಿತ' ಎಂದಿದ್ದಲ್ಲಿ ವಿಸರ್ಗದ ಬದಲು ಉಕಾರ ಬಂದು, 'ಸಂಗತ್ಯೋ ಅರ್ಚಿತ' ಎಂದಾಗಿ, ಅನಂತರ ಪೂರ್ವರೂಪ ಸಂಧಿಯಾಗಿ 'ಸಂಗತ್ಯೋರ್ಚಿತ' ಆಗುತ್ತಿತ್ತು. 'ಸಂಗತ್ಯೋಃ ಅರ್ಚಿತ' ಇದ್ದರೆ 'ಸಂಗತ್ಯೋರರ್ಚಿತ'ವೆಂದಾಗಬೇಕು. 'ಸಂಗತ್ಯೋರರ್ಚಿತ'ವೆಂದು ಪ್ರಯೋಗಿಸಿದರೆ ಛಂದೋಭಂಗವಾಗುವುದೆಂದು 'ರ' ಬಿಟ್ಟನೆಂದು ಪಂಪನಂಥ ಮಹಾಕವಿಯ ವಿಷಯದಲ್ಲಿ ಹೇಳಲಾಗುವುದಿಲ್ಲ. ಅವನ ಮನೋಗತ 'ಸಂಗತ್ಯೋಃ ಅರ್ಚಿತ' ಎಂದೇ ಇದ್ದರೆ 'ಸಂಗತ್ಯರ್ಚಿತ'ವೆಂದು ಸಮಾಸಮಾಡಿ ಹೇಳಬಹುದಾಗಿತ್ತು.

ವ್ಯಾಕರಣ ವಿರುದ್ಧವಾಗಿದ್ದರೂ ಇಂಥ ಸಂಧಿ ಬೇರೆ ಕಡೆಗಳಲ್ಲಿ ಕಂಡುಬಂದಿದ್ದರೆ, ಪ್ರಯೋಗ ಬಲದಿಂದಾದರೂ ಒಪ್ಪಬಹುದಾಗಿತ್ತು. ಆದರೆ ಹಾಗೆಲ್ಲೂ ಕಂಡುಬರುವುದಿಲ್ಲ. ಪಂಪನ ಪ್ರಯೋಗವಾದರೋ ಇದಕ್ಕೆ ವಿರುದ್ಧವಾಗಿಯೇ ಇದೆ.

ಈ ಪದ್ಯದ ಹಿಂದಿನ ಪದ್ಯದಲ್ಲಿಯೇ[15] 'ಪ್ರಭೂತ ಸಹಜೇಷ್ಮ್ಯರ್ಯೋರಪಿ' ಮತ್ತು 'ಪರಿಹಾರಿಣೋರಪಿ' ಎಂದು ಎರಡು ಕಡೆಗಳಲ್ಲಿ, ಓಕಾರದ ಮುಂದೆ ವಿಸರ್ಗವು ಪೂರ್ವಪದಾಂತ್ಯದಲ್ಲೂ, ಅಕಾರವು ಉತ್ತರ ಪದಾದಿಯಲ್ಲೂ ಇದ್ದು, ಸಂಧಿಯಾದ ಮೇಲೆ ವಿಸರ್ಗ ಮತ್ತು ಅಕಾರಗಳ ಸ್ಥಾನದಲ್ಲಿ 'ರ' ಬಂದಿದೆ. (ಇವುಗಳ ಪೈಕಿ 'ಪರಿಹಾರಿಣೋರಪಿ' ಎಂಬುದು ನಿಯೋಜಿತ ಪಾಠವೆಂದರೂ, 'ಪ್ರಭೂತಸಹ ಜೇಷ್ಮ್ಯರ್ಯೋರಪಿ' ಎಂಬಲ್ಲಿ ಪಾಠಾಂತರವಿಲ್ಲ.) ಹೀಗೆಯೇ 'ಸಂಗತ್ಯೋಃ ಅರ್ಚಿತ' ಎಂದು ಪಂಪನ ಮನಸ್ಸಿನಲ್ಲಿದ್ದರೆ 'ಸಂಗತ್ಯೋರರ್ಚಿತ' ಎಂದೇ ಬರೆಯುತ್ತಿದ್ದನೆಂಬಲ್ಲಿ ಸಂದೇಹವಿಲ್ಲ.

ಕನ್ನಡ ಪದ್ಯಗಳಲ್ಲಿ ಸಂಸ್ಕೃತ ಭೂಯಿಷ್ಠವಾದ ಎಷ್ಟೇ ದೊಡ್ಡ ಸಮಾಸ ಪದವಿದ್ದರೂ ಪದದ ಕೊನೆಯಲ್ಲಿ ಕನ್ನಡದ ವಿಭಕ್ತಿ ಪ್ರತ್ಯಯವಿರುತ್ತದೆಯೇ ಹೊರತು ಸಂಸ್ಕೃತ ಪ್ರತ್ಯಯವಿರುವುದಿಲ್ಲ. ಆದುದರಿಂದ "ಸಂಗತ್ಯೋಃ" ಎಂದು ಸಂಸ್ಕೃತ ವಿಭಕ್ತಿ ಪ್ರತ್ಯಯಗಳುಳ್ಳ ಪದವಿರಬಾರದು. ಇದೇ ಕಾರಣದಿಂದ, "ಗೋದಾವರೀ ಸಂಗತ್ಯಾ"

15 ಚತುರ್ದಶಾಶ್ವಾಸ. ಪದ್ಯ 30.(ಇದು ಪೂರ್ಣ ಸಂಸ್ಕೃತ ಪದ್ಯ)

ಎಂಬ ಪಾಠವೂ ಸರಿಯಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ಡಾ|| ಡಿ. ಎಲ್. ನರಸಿಂಹಾಚಾರ್ಯರು ಸಮಸ್ತಪದವಾದ ''ಗೋದಾವರೀಸಂಗತ್ಯೂರ್ಜಿತವಾರಿ'' ಎಂಬ ಪಾಠವನ್ನು ಪಂಪಭಾರತ ದೀಪಿಕೆಯಲ್ಲಿ ಅನುಸರಿಸಿರುವಂತೆ ತೋರುತ್ತದೆ.

''ಚ''ಕಾರ ''ಜ''ಕಾರಗಳ ಸ್ವರೂಪ ವಿಚಾರ : ಹತ್ತನೆಯ ಶತಮಾನದಲ್ಲಿ ಈ ಅಕ್ಷರಗಳ ಸ್ವರೂಪಗಳು ಪರಸ್ಪರ ತುಂಬ ಭಿನ್ನವಾಗಿದ್ದುದು ನಿಜ. ಆದರೆ ಹನ್ನೊಂದನೆಯ ಶತಮಾನದ ಕೊನೆಯ ಹೊತ್ತಿಗೆ ಇವುಗಳ ಸ್ವರೂಪ ಬದಲಾಗಿ[16], ಅಕ್ಷರಗಳನ್ನು ಸ್ಫುಟವಾಗಿ ಬರೆಯದಿದ್ದಾಗ, ಈ ಅಕ್ಷರಗಳನ್ನು ಒಂದರ ಬದಲು ಮತ್ತೊಂದನ್ನು ಓದುವ ಸಾಧ್ಯತೆಯುಂಟಾಗಿತ್ತು. ಪಂಪಭಾರತದ ಸಂಪಾದಕರು ಉಪಯೋಗಿಸಿಕೊಂಡಿರುವ 'ಖ', 'ಗ', 'ಘ' ಈ ಮೂರು ಹಸ್ತಪ್ರತಿಗಳ ಪೈಕಿ 'ಘ' ಪ್ರತಿಯೇ ಕೇವಲ ಪೂರ್ವದ ಪ್ರತಿಯೆಂದೂ, ಎರಡು ಸ್ಥಳಗಳಲ್ಲಿ ಪದ್ಯಗಳು ಹಿಂದು ಮುಂದಾಗಿರುವುದು ಮೂರು ಪ್ರತಿಗಳಲ್ಲೂ ಒಂದೇ ರೀತಿಯಾಗಿರುವುದರಿಂದ ಮೂರಕ್ಕೂ ಒಂದೇ ಮೂಲ ಮಾತೃಕೆಯಿರಬೇಕೆಂದೂ ಸಂಪಾದಕರು ಅಭಿಪ್ರಾಯ ಪಟ್ಟಿದ್ದಾರೆ. 'ಘ' ಹಸ್ತಪ್ರತಿಯ ಕಾಲದ ವಿಷಯವಾಗಿ ಸಂಪಾದಕರು ಏನನ್ನೂ ಹೇಳಿಲ್ಲ. ಮುದ್ರಿತ ಪುಸ್ತಕ[17]ದಲ್ಲಿ ಕೊಟ್ಟಿರುವ 'ಘ' ಪ್ರತಿಯ ಛಾಯಾಚಿತ್ರ(Photo)ವನ್ನು ಪರಿಶೀಲಿಸಿದ ಲಿಪಿತಜ್ಞರು ಅದು 15ನೆಯ ಶತಮಾನಕ್ಕಿಂತ ಹಿಂದಿನದಿರಲಾರದೆಂದು ಅಭಿಪ್ರಾಯಪಟ್ಟಿದ್ದಾರೆ. ಹಸ್ತಪ್ರತಿಗಳ ಮೂಲ ಮಾತೃಕೆ 11ನೆಯ ಶತಮಾನದಷ್ಟು ಹಿಂದಿನದೆಂದು ಹೇಳಲು ಆಧಾರವೇನೂ ಇಲ್ಲ. ಇದಲ್ಲದೆ ಮೂರು ಹಸ್ತ ಪ್ರತಿಗಳ ಪೈಕಿ ಎರಡರ ಪಾಠದಲ್ಲಿ ಮಾತ್ರ 'ಚ' ಇದೆ. 'ಖ' ಪ್ರತಿಯ ಪಾಠದಲ್ಲಿ 'ಜ' ಇದೆ.[18] ಬಹುಶಃ ಮೂಲ ಮಾತೃಕೆಯಲ್ಲಿನ 'ತ್ಯೂರ್ಜಿತ' ಸ್ಪಷ್ಟವಾಗಿ ಕಾಣದೆ, ಬೇರೆ ಬೇರೆ ಹಸ್ತಪ್ರತಿಕಾರರು 'ತ್ಯೋರ್ಚಿತ', 'ತ್ಯೋಚಿತ','ತ್ಯೆಂಜಿತ' ಹೀಗೆ ಬರೆದುಕೊಂಡಿರುವಂತೆ ತೋರುತ್ತದೆ. (ರೈಸ್‌ರ ಮುದ್ರಣ ಪ್ರತಿಗೆ 'ಖ' ಮತ್ತು 'ಗ' ಹಸ್ತಪ್ರತಿಗಳೇ ಆಧಾರವಾಗಿದ್ದುದರಿಂದ 'ಕ' ಪಾಠಂತರವನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿಲ್ಲ.)

16 (i) Dr. C. Sivaramamurti-Indian Epigraphy and South Indian Scripts.
(ii) ಡಾ|| ಎ. ವಿ. ನರಸಿಂಹಮೂರ್ತಿ-ಕನ್ನಡ ಲಿಪಿಯ ಉಗಮ ಮತ್ತು ವಿಕಾಸ.
(iii) ಕರ್ನಾಟಕದ ಪರಂಪರೆ, ಸಂಪುಟ 1 ರಲ್ಲಿನ ''ಅಕ್ಷರಗಳ ವಿಕಾಸ''ದ ನಕ್ಷೆಗಳು.

17 ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರಕಟನೆಯ ಪುನರ್ಮುದ್ರಣ (1973ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ) ದಲ್ಲಿ ಪುಟ xii-xiv

18 ''ಖ'' ಪ್ರತಿಯ ಪಾಠ ''ತ್ಯೆಂಜಿತ'', ಜಾಗೀರ್‌ದಾರರು ಹೇಳಿರುವಂತೆ ''ತ್ಯೆಂಚಿತ''ವಲ್ಲ.

ಈ ಎಲ್ಲ ಕಾರಣಗಳಿಂದ, ಬೇರೆ ಸಮರ್ಪಕವಾದ ಪಾಠವಿರುವ ಹಸ್ತಪ್ರತಿ ದೊರಕುವವರೆಗಾದರೂ "ಸಂಗತ್ಯೂರ್ಜಿತ" ಎಂಬ ಪಾಠವನ್ನು ಒಪ್ಪಿಕೊಳ್ಳದೇ ಗತ್ಯಂತರವಿಲ್ಲ.

3. **ವರದಾನದಿ :** ಜಾಗೀರ್‌ದಾರರು ಪಂಪಭಾರತದ ವರದ್ಧಾನದಿ ಬನವಾಸಿ ಪ್ರದೇಶದಲ್ಲಿನದಲ್ಲ, ವಿದರ್ಭದಲ್ಲಿರುವುದು ಎಂದು ಹೇಳಿ, ಅದನ್ನು ಸಮರ್ಥಿಸಲು ಕೊಟ್ಟಿರುವ ಕಾರಣಗಳು :

(i) ಪಂಪನು ಧಾರವಾಡ ಜಿಲ್ಲೆಯಲ್ಲಿರುವ ವರದಾನದಿಯೆಂದು ಸ್ಪಷ್ಟವಾಗಿ ಹೇಳಿಲ್ಲ.

(ii) "ಪಂಪನಿಗೆ ಬನವಾಸಿಯ ಸೌಂದರ್ಯದ ವಿನಾ ನೆಲದ ವಾಸನೆಯಿಲ್ಲ. ಅವನ ಮಣ್ಣಿನ ವಾಸನೆಯೆಲ್ಲ ಸಪಾದಲಕ್ಷತಿಯಲ್ಲಿ. ಪಂಪನು ಬನವಾಸಿಯಲ್ಲೇ ಇರಲು ನೆಲೆವೀಡೊಂದನ್ನು (ಅಗ್ರಹಾರವನ್ನು) ಬಯಸಿದ್ದರೆ, ಆತನು ಅಲ್ಲಿ ಪಡೆಯಬಹುದಾಗಿತ್ತು. ಏಕೆಂದರೆ ರಾಷ್ಟ್ರಕೂಟ ಬದ್ದೆಗನನ್ನು ಸಾಮ್ರಾಟನನ್ನಾಗಿ ಮಾಡಿದ ಬಲವಂತ-ಅರಿಕೇಸರಿ. ಪಂಪನು ಪಡೆದ ಅಗ್ರಹಾರ 'ಧರ್ಮಪುರ' ಇದ್ದುದು ಸಬ್ಬಿನಾಡಿನಲ್ಲಿ ಸಪಾದಲಕ್ಷತಿಯಲ್ಲಿ!".

(iii) ಪಂಪನು ವಂಶ ಪಾರಂಪರ್ಯವಾಗಿ ಬಾಳಿ ಬದುಕಿದ (ಸುಮಾರು ಮೂರು ತಲೆಮಾರು) ಸಪಾದಲಕ್ಷತಿಯಲ್ಲೇ ಗೋದಾವರೀ ಹಾಗೂ ವರದಾ ಇವು ಇವೆ.

(iv) ವಿದರ್ಭದಲ್ಲಿನ ವರದಾನದಿ ಪಂಪನ ಪೋಷಕ ಅರಿಕೇಸರಿಯ ರಾಜ್ಯದ ಎಲ್ಲೆಯಲ್ಲೇ ಇತ್ತು.

ಪರಿಶೀಲನೆ

ಪಂಪನೇ ಯಾವ ವರದಾನದಿಯೆಂದು ಹೇಳಿದ್ದರೆ ಊಹಾಪೋಹಗಳಿಗೆ ಎಡೆಯೇ ಇರುತ್ತಿರಲಿಲ್ಲ. ಅವನು ಹಾಗೆ ಹೇಳಿಲ್ಲದಿರುವುದರಿಂದಲೇ ನಮಗೆ ಲಭ್ಯವಾಗುವ ಆಂತರಿಕ ಬಾಹ್ಯಾಧಾರಗಳಿಂದ ಅವನ ಆಶಯವೇನಿರಬಹುದೆಂದು ತಿಳಿಯಬೇಕಾಗಿದೆ.

ಪಂಪನ ತಂದೆಯ ಪೂರ್ವಜರು ವೆಂಗಿಮಂಡಲ (ಕೃಷ್ಣಾ ಗೋದಾವರೀ ನದಿಗಳ ನಡುವಣ ಆಂಧ್ರದ ಸಮುದ್ರತೀರ ಪ್ರದೇಶ)ದಲ್ಲಿದ್ದ ವೈದಿಕ ಧರ್ಮಾನುಯಾಯಿಗಳು.

ಪಂಪನ ತಂದೆ ಭೀಮಪಯ್ಯ ವೈದಿಕ ಧರ್ಮವನ್ನು ಬಿಟ್ಟು ಜೈನ ಧರ್ಮವನ್ನು ಸ್ವೀಕರಿಸಿದ. ಪಂಪನ ತಾಯಿ ಬೆಳ್ವೊಲ (ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕು)ದ ಅಣ್ಣಿಗೆಱೆಯ ಜೋಯಿಸ ಸಿಂಘನ ಮೊಮ್ಮಗಳು ಅಬ್ಬಣಬ್ಬೆ. ಗುರು ಕೊಂಡಕುಂದಾನ್ವಯದ ದೇವೇಂದ್ರ ಮುನಿ. ಕವಿಯೂ ಕಲಿಯೂ ಆದ ಪಂಪ ಗ್ರಂಥ ರಚನೆ ಮಾಡಿರುವುದು "ಸಾಜದ ಪುಲಿಗೆಱೆಯ ತಿರುಳ ಕನ್ನಡ"ದಲ್ಲಿ. ಅವನ ಆಶ್ರಯದಾತನಾದ ಅರಿಕೇಸರಿ ಕಾವ್ಯಕ್ಕೆ ಇತ್ತುದು ಧರ್ಮಪುರವೆಂಬ ಅಗ್ರಹಾರ. ಇಷ್ಟೇ ಪಂಪನ ವಿಷಯವಾಗಿ ಖಚಿತವಾಗಿ ತಿಳಿದಿರುವುದು[19]. ಜೈನಧರ್ಮವನ್ನಪ್ಪಿದ ಭೀಮಪಯ್ಯ, ಬಹುಶಃ ವೆಂಗಿಮಂಡಲದ ಶೈವ ವಾತಾವರಣ ಸರಿಹೋಗದೆ, ಬೇರೆ ಕಡೆಗೆ ವಲಸೆ ಹೋದ[20]. ಎಲ್ಲಿಗೆ ಹೋದನೆಂಬ ವಿಷಯದಲ್ಲಿ ಏಕಾಭಿಪ್ರಾಯವಿಲ್ಲ. ತೆಲಂಗಾಣದ ಸಬ್ಬಿನಾಡಿಗಡ ಹೋದನೆಂದು ಜಾಗೀರ್‌ದಾರರ ಅಭಿಪ್ರಾಯ[21]. ಇತರರ ಅಭಿಪ್ರಾಯದಂತೆ ಭೀಮಪಯ್ಯ ಹೋದುದು ಬನವಾಸಿಯ ಕಡೆಗೆ[22]. ಭೀಮಪಯ್ಯ ಅಣ್ಣಿಗೆರೆಯ ಅಬ್ಬಣಬ್ಬೆಯನ್ನು ಮದುವೆಯಾದನೆಂಬ ಸಂಗತಿ ಬಹುಶಃ ಅವನು ದೂರದ ಸಬ್ಬಿನಾಡಿನಲ್ಲಿರದೆ ಧಾರವಾಡದ ಕಡೆ ಇದ್ದಿರಬಹುದೆಂದು ಊಹಿಸಲು ಸಾಧಕವಾಗಿದೆ. ಪಂಪ ತನ್ನ ತಾಯಿಯ ತವರುಮನೆಯಾದ ಅಣ್ಣಿಗೆರೆಯಲ್ಲೇ ಹುಟ್ಟಿರಲೂಬಹುದು. ಈ ವಿಷಯವಾಗಿ ಏನನ್ನೂ ನಿಶ್ಚಯವಾಗಿ ಹೇಳಬರುವುದಿಲ್ಲವಾದರೂ, "ಪುಲಿಗೆಱೆಯ ತಿರುಳ ಕನ್ನಡ" ಪಂಪನಿಗೆ "ಸಾಜ"ವಾಗಬೇಕಾಗಿದ್ದರೆ ಅವನು ಆ ಪ್ರಾಂತದಲ್ಲಿ ಹುಟ್ಟಿರಬೇಕು ಅಥವಾ ಬೇರೆ ಕಡೆ ಹುಟ್ಟಿದ್ದರೆ ಎಳವೆಯಲ್ಲಾದರೂ ಆ ಪ್ರಾಂತಕ್ಕೆ ಬಂದಿರಬೇಕು ಎಂದು ಹೇಳಬಹುದು.[23]

---

19 (i) ವಿಕ್ರಮಾರ್ಜುನ ವಿಜಯ-ಚತುರ್ದಶಾಶ್ವಾಸ: ಪದ್ಯಗಳು 40-48, 50, 56-58

(ii) ಆದಿಪುರಾಣ(ಸಂ. ಕೆ. ಜಿ. ಕುಂದಣಗಾರ) ಆಶ್ವಾಸ 1, ಪದ್ಯ 13-14 ಮತ್ತು ಆಶ್ವಾಸಾಂತ ಗದ್ಯಗಳು.

(iii) ಜಿನವಲ್ಲಭನ ಕರಿಕ್ಕಾಲ (ಗಂಗಾಧರಂ) ಶಾಸನ

20 ಭೀಮಪಯ್ಯನ ತಂದೆಯೇ ವಲಸೆ ಹೋಗಿರಬಹುದೆಂದು ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಗಳ ಅಭಿಪ್ರಾಯ-ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ 3, ಪುಟ 417.

21 ಜಿನವಲ್ಲಭನ ಗಂಗಾಧರಂ ಶಿಲಾಶಾಸನ-ಪ್ರಬುದ್ಧ ಕರ್ನಾಟಕ, ಸಂಪುಟ 50, ಸಂಚಿಕೆ 3, ಪುಟ 34.

22 ಕ. ಅ. ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ 3, ಪುಟ 416.

ಶ್ರವಣಬೆಳಗೊಳದ ಶಾಸನದಲ್ಲಿ, ದೇವೇಂದ್ರನೆಂಬ ಹೆಸರುಳ್ಳ ಮುನಿಗಳು ಮೂವರು ಕಂಡುಬರುತ್ತಾರೆ. ಅವರು ದೇವೇಂದ್ರ ವಿಶಾಲಕೀರ್ತಿದೇವ, ದೇವೇಂದ್ರ ಸೈದ್ಧಾಂತದೇವ ಮತ್ತು ಭಾರತೀ ಭಾಳ ಪಟ್ಟಾಂಕಿತನಾದ ದೇವೇಂದ್ರ ಸೈದ್ಧಾಂತದೇವ. ದೇವೇಂದ್ರ ವಿಶಾಲಕೀರ್ತಿ ದೇವನ ಹೆಸರಿರುವುದು, ಅನವ ಶಿಷ್ಯ ಪರಂಪರೆಯಲ್ಲಿ 4ನೆಯ ತಲೆಯವನಾದ ಧರ್ಮಭೂಷಣ ದೇವನ ಕ್ರಿ. ಶ. 1372ರ ನಿಸಿದಿ ಶಾಸನ ದಲ್ಲಿ[24]. ಆದುದರಿಂದ ಈ ದೇವೇಂದ್ರ ಮುನಿ ಪಂಪನ ಕಾಲೀನನಾಗಲಾರ. ಒಬ್ಬ ದೇವೇಂದ್ರ ಸೈದ್ಧಾಂತ ದೇವನಿಗೆ ಸಂಬಂಧಪಟ್ಟ ಎರಡು ಶಾಸನಗಳಿವೆ.[25] 12ನೆಯ ಶತಮಾನದ ಲಿಪಿಯಲ್ಲಿದೆಯೆಂದು ಹೇಳಲಾದ ಒಂದು ಶಾಸನ, ಇವನ ಶಿಷ್ಯನಾದ ಚತುರ್ಮುಖದೇವನ ಶಿಷ್ಯ ಗೋಪಣಂದಿಗೆ ಎರೆಗಂಗ ಹೊಯ್ಸಳ ದತ್ತಿಕೊಟ್ಟನೆಂದು ಹೇಳಿದೆ. ಆದುದರಿಂದ ಈ ದೇವೇಂದ್ರ ಸೈದ್ಧಾಂತಿಯೂ ಪಂಪನ ಸಮಕಾಲೀನ ನಾಗಲಾರ.

ಭಾರತೀಭಾಳ ಪಟ್ಟಾಂಕಿತ ದೇವೇಂದ್ರ ಸೈದ್ಧಾಂತಿಗೆ ಸಂಬಂಧಪಟ್ಟಂತೆ ಐದು ಶಾಸನಗಳಿವೆ[26]. ಈ ದೇವೇಂದ್ರ ಸೈದ್ಧಾಂತಿ ಕೊಂಡಕುಂದಾನ್ವಯ ಮೂಲ ಸಂಘ ದೇಶೀಯ ಗಣ ಪುಸ್ತಕ ಗಚ್ಛಕ್ಕೆ ಸೇರಿದವನು. ಇವನ ಶಿಷ್ಯ ಪರಂಪರೆಯಲ್ಲಿ 8ನೇ ತಲೆಯವನಾದ ಮೇಘಚಂದ್ರ ತ್ರೈವಿದ್ಯದೇವ ಕ್ರಿ. ಶ. 1115ರಲ್ಲೂ, ಅವನ ಶಿಷ್ಯ ಪ್ರಭಾಚಂದ್ರ ಸಿದ್ಧಾಂತದೇವ ಕ್ರಿ. ಶ. 1145ರಲ್ಲೂ ಮೃತರಾದರೆಂದು ಎರಡು ಶಾಸನ ಗಳು ಹೇಳುತ್ತವೆ. ಇದೇ ದೇವೇಂದ್ರ ಸೈದ್ಧಾಂತಿಯ ಮತ್ತೊಂದು ಶಿಷ್ಯ ಪರಂಪರೆಯಲ್ಲಿ 7ನೇ ತಲೆಯವನಾದ ದಿವಾಕರಣಂದಿ ದೇವನ ಶಿಷ್ಯೆ ಶ್ರೀಮತಿ ಗಂತಿ ಕ್ರಿ.ಶ. 1119 ರಲ್ಲೂ, ಅದೇ ದಿವಾಕರಣಂದಿ ಪ್ರಶಿಷ್ಯ ಶುಭಚಂದ್ರ ಸಿದ್ಧಾಂತ ಕ್ರಿ. ಶ. 1123ರಲ್ಲೂ ಮೃತರಾದಂತೆ ಮತ್ತೆರಡು ಶಾಸನಗಳಿಂದ ತಿಳಿದುಬರುತ್ತದೆ. ಐದನೇ ಶಾಸನದಲ್ಲಿ ದೇವೇಂದ್ರ ಸಿದ್ಧಾಂತಿಯ ಬೇರೊಂದು ಶಿಷ್ಯ ಪರಂಪರೆಯಲ್ಲಿ 8ನೇ ತಲೆಯವನಾದ ನಯಕೀರ್ತಿ ಸಿದ್ಧಾಂತ ಚಕ್ರವರ್ತಿ ಕ್ರಿ. ಶ. 1176ರಲ್ಲಿ ಮೃತನಾದನೆಂದು ಹೇಳಿದೆ. ಈ ದೇವೇಂದ್ರ

---

23 ಎಲ್. ಗುಂಡಪ್ಪ-ಆದಿಪುರಾಣ ಸಂಗ್ರಹ(1969), ಪೀಠಿಕೆ, ಪುಟ 6.

24 Epigraphia Carnatica(1973 ರ ಆವೃತ್ತಿ) Vol.2ಶ್ರವಣಬೆಳಗೊಳ. ಶಾಸನ ಸಂಖ್ಯೆ 380(274)

25 ಶಾಸನ ಸಂಖ್ಯೆ 79(69) ಮತ್ತು 568

26 ಶಾಸನ ಸಂಖ್ಯೆ 156(127), 173(140), 484(351), 135(117) ಮತ್ತು 73(66)

ಸೈದ್ಧಾಂತಿ ಪಂಪನ ಗುರುವಿರಬಹುದೆಂದು ತೋರುತ್ತದೆ. ಈತನ ಬೇರೆ ಬೇರೆ ಮೂರು ಶಿಷ್ಯಶಾಖೆಗಳ ಮುನಿಗಳು ಶ್ರವಣಬೆಳಗೊಳದಲ್ಲಿದ್ದುದರಿಂದ ಈತನು ಶ್ರವಣಬೆಳಗೊಳ ಪ್ರಾಂತದಲ್ಲೋ ಅಥವಾ ಅದಕ್ಕೆ ಸಮೀಪದಲ್ಲೋ ಇದ್ದಿರಬೇಕು. ಪಂಪನ ವಿದ್ಯಾಭ್ಯಾಸ ಈ ದೇವೇಂದ್ರ ಸೈದ್ಧಾಂತಿಯ ಗುರುಕುಲದಲ್ಲಿ ನಡೆದಿರಬೇಕು.

''ಮಱಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್'', ''ಆರಂಕುಸವಿಟ್ಟೊಡಂ ನೆನೆವುದೆನ್ನಮನಂ ವನವಾಸಿ ದೇಶಮಂ'', ''ತೆಂಕನಾಡ ಮಱಿಯಲ್ಕಿನ್ನೇಂ ಮನಂ ಬರ್ಕುಮೇ'' ಎಂಬ ಮಾತುಗಳು, ದೂರದಲ್ಲಿರುವವನು ತನ್ನ ತಾಯ್ನಾಡನ್ನು ನೆನೆದು ಹಂಬಲಿಸಿದಂತಿವೆ. ಆದುದರಿಂದ ಪಂಪನಿಗೆ ''ಬನವಾಸಿಯ ಸೌಂದರ್ಯದ ವಿನಾ ನೆಲದ ವಾಸನೆಯಿಲ್ಲ' ಎಂಬ ಮಾತನ್ನು ಒಪ್ಪಲಾಗುವುದಿಲ್ಲ. ಒಂದುವೇಳೆ ಪಂಪನ ತಂದೆ ವೇಮುಲವಾಡ ಪ್ರಾಂತದಲ್ಲೇ ನೆಲೆಸಿದ್ದರೂ, ಮಣ್ಣಿನ ವಾಸನೆ ತಂದೆಯ ಕಡೆಯಿಂದ ಬಂದಂತೆ ತಾಯಿಯ ಕಡೆಯಿಂದಲೂ ಬಂದಿರಬೇಕಷ್ಟೇ !

ಇನ್ನು ಧರ್ಮಪುರವನ್ನು ಪಡೆದ ಪ್ರಸಂಗಕ್ಕೆ ಬರಬಹುದು. ಸ್ವಸಂತೋಷದಿಂದ ಅರಿಕೇಸರಿ ಕೊಟ್ಟುದನ್ನು ತೆಗೆದುಕೊಂಡಿರಬೇಕಲ್ಲದೆ, ಮಹಾಕವಿಯೂ ಸ್ವಯಂ ಯೋಧನೂ ಆದ ಪಂಪ ತಾನಾಗಿ ಜಹಗೀರುಬೇಕೆಂದು ಖಂಡಿತವಾಗಿಯೂ ಕೇಳಿಕೊಂಡಿರಲಾರ. ಅವನಿಗೆ ಬನವಾಸಿಯ ಮೇಲೆ ಎಷ್ಟೇ ಮಮತೆಯಿದ್ದರೂ, ರಾಜನು ಕೊಟ್ಟ ಗ್ರಾಮವನ್ನೊಪ್ಪಿಕೊಳ್ಳದೆ ಬೇರೆ ಊರನ್ನು ಬಯಸುವಂತಹ ಅಲೌಕಿಕಕಾರ್ಯಕ್ಕೆ ಪಂಪ ಮನಗೊಡುತ್ತಿದ್ದನೆಂದರೆ ಅವನಿಗೆ ಅಪಚಾರವಾದೀತು. ಆದುದರಿಂದ ಧರ್ಮಪುರವನ್ನು ಪಂಪ ಒಪ್ಪಿಕೊಂಡ ಮಾತ್ರದಿಂದ ಅವನು ಆ ಪ್ರಾಂತದಲ್ಲೇ ಹುಟ್ಟಿ ಬೆಳೆದವನೆಂದು ಹೇಳಲಾಗುವುದಿಲ್ಲ. ವಿದ್ವತ್ಸಭೆಯಲ್ಲೋ ರಣರಂಗದಲ್ಲೋ ಅರಿಕೇಸರಿಯ ಗಮನವನ್ನು ಸೆಳೆದು, ಅವನ ಆಶ್ರಯವನ್ನು ಪಡೆದು ಆ ಪ್ರಾಂತದಲ್ಲಿ ನೆಲೆಸಿರುವುದು ಸಂಭವ.

ಒಟ್ಟಿನಲ್ಲಿ, ಪಂಪ ಎಲ್ಲೇಹುಟ್ಟಿರಲಿ, ಎಳೆಯ ವಯಸ್ಸಿನಲ್ಲಿ ಅಣ್ಣಿಗೇಱಿ,ಪುಲಿಗೇಱಿ ಬನವಾಸಿ ಈ ಪ್ರಾಂತದಲ್ಲಿ ಬೆಳೆದು ಆ ಪ್ರದೇಶದ ಮೇಲೆ ಅತ್ಯಂತ ಮಮತೆ ಇಟ್ಟಿದ್ದನೆಂದು ಹೇಳಬಹುದು. ಆದುದರಿಂದ ಬನವಾಸಿಯ ವರದಾ ನದಿಯನ್ನು ಈ ಪದ್ಯದಲ್ಲಿ ಹೇಳಿರಬಹುದೆಂದು ತೋರುತ್ತದೆ.

ಅರಿಕೇಸರಿಯ ರಾಜ್ಯದ ವ್ಯಾಪ್ತಿ ಈಗಿನ ತೆಲಂಗಾಣ ಪ್ರದೇಶ (ವಾರಂಗಲ್ಲು ಹೊರತಾಗಿರಬಹುದು) ಮತ್ತು ಪ್ರಾಯಶಃ ರಾಯಚೂರು ಜಿಲ್ಲೆಗೆ ಸೀಮಿತವಾಗಿರಬಹುದು[27]. ವಿದರ್ಭದ ಯಾವ ಭಾಗವೂ ಅವನ ಆಳ್ವಿಕೆಗೆ ಒಳಪಟ್ಟಿದ್ದಂತೆ ತೋರುವುದಿಲ್ಲ. ವಿದರ್ಭದಲ್ಲಿನ ವರದಾನದಿ ಉತ್ತರದಿಂದ ಹರಿದುಬಂದು ಆಗ್ನೇಯಕ್ಕೆ ತಿರುಗಿ ಪೈನಗಂಗಾನದಿಗೆ ಸೇರಿದ ಮೇಲೆ, ಒಟ್ಟಾದ ನದಿ "ಪ್ರಾಣಹಿತಾ" ಎಂಬ ಹೆಸರು ಹೊಂದಿ ಮುಂದೆ ಹರಿದು ಗೋದಾವರಿಗೆ ಸೇರುತ್ತದೆ. ಈ ವರದಾನದಿ ಅರಿಕೇಸರಿಯ ರಾಜ್ಯದಲ್ಲಿದ್ದಿರಲಾರದು. ಪಂಪನು ಈ ಮಂಗಳವೃತ್ತದಲ್ಲಿ ಗಂಗಾ, ಯಮುನಾ, ನರ್ಮದಾ ಮತ್ತು ಅರಿಕೇಸರಿಯ ರಾಜ್ಯದಲ್ಲಿ ಹರಿಯುತ್ತಿದ್ದ ಗೋದಾವರೀ, ಈ ಮಹಾನದಿಗಳನ್ನು ಹೇಳಿದ್ದಾನೆ.[28] ಅರಿಕೇಸರಿಯ ರಾಜ್ಯದಲ್ಲಿನದೇ ಮತ್ತೊಂದು ನದಿಯನ್ನು ಹೇಳಬೇಕೆಂದು ಪಂಪನ ಅಪೇಕ್ಷೆಯಿದ್ದರೆ, ರಾಜಧಾನಿಯಾದ ಬೋದನದ ಪಕ್ಕದಲ್ಲೇ ಹರಿದು ನೇರವಾಗಿ ಗೋದಾವರಿಯನ್ನು ಸೇರುವ ಮಾಂಜರಾನದಿಯನ್ನು ಬಿಟ್ಟು, ಹೆಚ್ಚೆಂದರೆ ರಾಜ್ಯದ ಗಡಿಯಲ್ಲಿ ಹರಿದು ಗೋದಾವರಿಯ ಉಪನದಿಗೆ ಸೇರುವ ವರದಾನದಿಯನ್ನು ಹೇಳುತ್ತಿದ್ದುದು ಅಸಂಭವ.

ಪಂಪನು ವಿದ್ಯಾಭ್ಯಾಸಕಾಲದಲ್ಲೋ ಅನಂತರ ದೇಶಸಂಚಾರ ಕಾಲದಲ್ಲೋ ಐಹೊಳೆಯ ಇಮ್ಮಡಿ ಪುಲಿಕೇಶಿ ಪ್ರಶಸ್ತಿ ಶಾಸನ[29]ವನ್ನು ನೋಡಿ, ಅದರಲ್ಲಿನ "ವರದಾ ತುಙ್ಗ ತರಙ್ಗ ರಙ್ಗ ವಿಲಸತ್" ಎಂಬ ಪದಪುಂಜದಿಂದ ಪ್ರಭಾವಿತನಾಗಿ "ರಂಗತ್ತುಂಗ ತರಂಗ ಭಂಗುರಲಸತ್" ಎಂಬ ಪದಪುಂಜವನ್ನು ಈ ಮಂಗಲವೃತ್ತದಲ್ಲೂ, ಇದನ್ನು ಹೋಲುವ "ಭಂಗುರ ತುಂಗ ತರಂಗ" ಎಂಬ ಪದಪುಂಜವನ್ನು ಮತ್ತೊಂದು

---

27 ಆರ್. ಎಸ್. ಪಂಚಮುಖಿ: ಕರ್ನಾಟಕದ ಇತಿಹಾಸ(1967) ಭಾಗ 1 ಪುಟ 256"ಅಂತು ಅರಿಕೇಸರಿಯ ಮನೆತನದ ರಾಜ್ಯವು ನಜೀಮಾಬಾದ್, ಕರೀಂನಗರ; ನಲ್ಗೊಂಡ, ರಾಯಚೂರು ಜಿಲ್ಲೆಗಳನ್ನೊಳಗೊಂಡಿರಬೇಕೆಂದು ಸ್ಪಷ್ಟವಾಗುತ್ತದೆ".

28 ಈಗಲೂ ಪುಣ್ಯಕಾರ್ಯಗಳಲ್ಲಿ ಕಲಶವನ್ನು ಪೂಜಿಸುವಾಗ
ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು ॥
ಎಂದು ಪ್ರಾರ್ಥಿಸುವುದು ರೂಢಿಯಲ್ಲಿದೆ. ದೂರದ ಸಿಂಧು, ಕಾವೇರಿಗಳನ್ನೂ, ಅದೃಶ್ಯವಾದ ಸರಸ್ವತಿಯನ್ನೂ ಬಿಟ್ಟು ಉಳಿದ ನಾಲ್ಕು ನದಿಗಳನ್ನು, ಪಂಪ ಈ ಮಂಗಳ ವೃತ್ತದಲ್ಲಿ ಹೇಳಿದ್ದಾನೆ.

29 F. Kielhorn-Aihole Inscription of Pulikesin II- Epigraphia Indica, Vol. VI.

ಪದ್ಯ[30]ದಲ್ಲೂ ಪ್ರಯೋಗಿಸಿರುವಂತೆ ತೋರುತ್ತದೆ. ಶಾಸನ ಪದ್ಯದಲ್ಲಿ ಬನವಾಸಿಯ ಸಮೀಪದ ವರದಾನದಿಯನ್ನು ಹೇಳಿರುವುದರಿಂದ ಪಂಪನೂ ಅದೇ ನದಿಯನ್ನೇ ಹೇಳಿರಬಹುದೆಂಬುದಕ್ಕೆ ಪುಷ್ಟಿ ದೊರೆಯುತ್ತದೆ.

ಸಾವಿರ ವರ್ಷಗಳ ಹಿಂದೆ ಬಾಳಿದ ಪಂಪನ ಮನೋಗತವೇನಿತ್ತೆಂದು ಖಚಿತ ವಾಗಿ ಹೇಳಲು ಸಾಧ್ಯವಿಲ್ಲವಾದರೂ, ಚಾರಿತ್ರಿಕ, ಭೌಗೋಲಿಕ ಮತ್ತು ಆಂತರಿಕ ಪ್ರಮಾಣಗಳನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿದರೆ, ಪ್ರಸ್ತುತ ಪದ್ಯದಲ್ಲಿನ ವರದಾನದಿ ಬನವಾಸಿಯ ಸಮೀಪದ ವರದಾನದಿಯೆನ್ನುವುದೇ ಸಂಭಾವ್ಯವೆಂದು ಹೇಳಬಹುದು.

ನಾಗವರ್ಮರು: ಒಂದು ಸಮೀಕ್ಷೆ

ಛಂದೋಂಬುಧಿಯ ನಾಗವರ್ಮ ಹೇಮಚಂದ್ರನಿಗಿಂತ ಅರ್ವಾಚೀನನಲ್ಲ. ಬಹುಶಃ ಈ ನಾಗವರ್ಮ ಮತ್ತು ಛಂದೋನುಶಾಸನದ ಕರ್ತೃ ಜಯಕೀರ್ತಿ ಸಮಕಾಲೀನರು. ಒಬ್ಬನ ಗ್ರಂಥವನ್ನು ಮತ್ತೊಬ್ಬ ನೋಡಿರಲಾರ. ಉದಯಾದಿತ್ಯಾಲಂಕಾರದ ಕರ್ತೃ ಛಂದೋಂಬುಧಿಕಾರನಲ್ಲ. ಕಾದಂಬರಿ ಛಂದೋಂಬುಧಿಗಳು ಏಕಕರ್ತೃಕಗಳಾಗಿರುವುದೇ ಹೆಚ್ಚು ಸಂಭಾವ್ಯ.

ಇದುವರೆಗೆ ಸೂಚಿತವಾಗಿರುವ ವರ್ಧಮಾನ ಪುರಾಣ ರಚನಾಕಾಲಗಳ ಪೈಕಿ ಕ್ರಿ.ಶ. 1042ರ ಚಿತ್ರಭಾನುವಿನಲ್ಲಿ ಮಾತ್ರ ನಾಗವರ್ಮನು ಹೇಳಿರುವ ತಿಥಿ, ವಾರ, ನಕ್ಷತ್ರಗಳು ಗ್ರಹಗಣಿತದಂತೆ ಹೊಂದುತ್ತವೆ. ಇದೇ ಸರಿಯಾದ ಕಾಲವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಕಾಲಸೂಚಕ ಪದ್ಯದ ಮೊದಲ ಸಾಲಿನ ಪರಿಷ್ಕೃತ ಪಾಠಗಳ ವಿಚಾರ. ಕಾವ್ಯಾವಲೋಕನಕಾರನು ಹೇಮಚಂದ್ರನಿಗೆ ಋಣಿಯಲ್ಲ.

ಕರ್ಣಾಟಕ ಭಾಷಾಭೂಷಣಕ್ಕೂ ಶಬ್ದಸ್ಮೃತಿಗೂ ಅನೇಕ ಕಡೆಗಳಲ್ಲಿ ವಿರೋಧ ವ್ಯತ್ಯಾಸಗಳು ಕಂಡು ಬರುತ್ತವೆ. ಈ ಎರಡು ಗ್ರಂಥಗಳ ನಾಗವರ್ಮರೂ ಬೇರೆ. ಹೊಯ್ಸಳ ಒಂದನೇ ನರಸಿಂಹನಿಗೆ ಜಗದೇಕಮಲ್ಲನೆಂಬ ಬಿರುದಿತ್ತು, ಭಾಷಾಭೂಷಣದ ನಾಗವರ್ಮ ಇವನ ಆಸ್ಥಾನದಲ್ಲಿ ಕಟಕೋಪಾಧ್ಯಾಯನಾಗಿದ್ದು, ಜನ್ನನಿಗೆ ಬಾಲ್ಯದಲ್ಲಿ ಉಪಾಧ್ಯಾಯನಾಗಿದ್ದಾನೆಂದು ಹೇಳಬಹುದು.

''ನಾಗವರ್ಮ'', ಕನ್ನಡ ವಾಙ್ಮಯದಲ್ಲಿ ಬಹಳ ಪ್ರಖ್ಯಾತವಾದ ಹೆಸರು; ಸಾಹಿತ್ಯಾಭ್ಯಾಸಿಗಳಿಗೆ ಪ್ರಿಯವಾದ ಹೆಸರು. ನಮಗೆ ಉಪಲಬ್ಧವಾಗಿರುವ ಅತಿ ಪುರಾತನ ಕನ್ನಡ ಛಂದೋಗ್ರಂಥ ''ಛಂದೋಂಬುಧಿ''ಯ ಕರ್ತೃ ನಾಗವರ್ಮ. ಬಾಣಭಟ್ಟನ ''ಕಾದಂಬರಿ''ಯನ್ನು ಸಂಸ್ಕೃತದಿಂದ ಅನುವಾದ ಮಾಡಿ, ಮೊತ್ತಮೊದಲ ಕನ್ನಡ ಪ್ರಣಯ ಕಾವ್ಯವನ್ನು ನಮಗೆ ಕೊಟ್ಟವನು ನಾಗವರ್ಮ. ಮೊದಲ ಕನ್ನಡ ವ್ಯಾಕರಣ ''ಶಬ್ದಸ್ಮೃತಿ'' ಯನ್ನೊಳಗೊಂಡ ಅಲಂಕಾರ ಗ್ರಂಥ ಕಾವ್ಯಾವಲೋಕನವನ್ನೂ ಸಂಸ್ಕೃತ ಕನ್ನಡ ನಿಘಂಟುವಾದ ಅಭಿಧಾನ ವಸ್ತುಕೋಶವನ್ನೂ ಬರೆದವನು ನಾಗವರ್ಮ. ಸಂಸ್ಕೃತ ಪಂಡಿತರ ಮುಂದೆ ಕನ್ನಡದ ಅಭಿಮಾನವನ್ನು ಮೆರೆಸಿ, ಸಂಸ್ಕೃತದಲ್ಲಿಯೇ ಸೂತ್ರ ಮತ್ತು ವೃತ್ತಿರೂಪವಾದ ಕನ್ನಡ ವ್ಯಾಕರಣ ಕರ್ಣಾಟಕ ಭಾಷಾಭೂಷಣವನ್ನು ರಚಿಸಿದವನೂ ನಾಗವರ್ಮ. ಚಂದ್ರಚೂಡಾಮಣಿಶತಕಕಾರ ನಾಗವರ್ಮ. ಈಚೆಗೆ ನಾಗವರ್ಮನ ವರ್ಧಮಾನ ಪುರಾಣ ಸಿಕ್ಕಿದೆ. ಹೀಗೆ ಅನೇಕ ''ನಾಗವರ್ಮ'' ಕೃತ ಗ್ರಂಥಗಳು

ದೊರೆತಿರುವಾಗ ನಾಗವರ್ಮರೆಷ್ಟು ಮಂದಿ, ಅವರ ಕಾಲ ಮತ್ತು ಗ್ರಂಥಗಳು ಯಾವುವು ಎಂಬ ವಿಷಯಕವಾದ ಜಿಜ್ಞಾಸೆ ಹುಟ್ಟಿ ಸುಮಾರು ನೂರು ವರ್ಷಗಳಿಂದ ಚರ್ಚೆ ನಡೆಯುತ್ತಲೇ ಇರುವುದು ಸಹಜವೇ.

''ನಾಗವರ್ಮನ ಕನ್ನಡ ಛಂದಸ್ಸಿ''ನ ಪ್ರಸ್ತಾವನೆಯಲ್ಲಿ ಕಿಟ್ಟೆಲ್ಲರು ಆ ಗ್ರಂಥವನ್ನು ರಚಿಸಿದ ನಾಗವರ್ಮನೇ ''ವಸ್ತುಕೋಶ'' ''ಕಾವ್ಯಾವಲೋಕನ''ಗಳನ್ನೂ ರಚಿಸಿದನೆಂದು ಹೇಳಿ, ಅವನ ಕಾಲ ಕ್ರಿ.ಶ. ಹನ್ನೆರಡನೆಯ ಶತಮಾನವೆಂದು ಅಭಿಪ್ರಾಯಪಟ್ಟರು. ಅವರ ಪ್ರಕಾರ ಗ್ರಂಥಕರ್ತೃ ಬ್ರಾಹ್ಮಣ ಧರ್ಮದಿಂದ ಜೈನಧರ್ಮಕ್ಕೆ ಮತಾಂತರ ಹೊಂದಿದವನು! ''ಕರ್ಣಾಟಕ ಭಾಷಾಭೂಷಣ''ವನ್ನು ಸಂಪಾದಿಸಿದ ರೈಸರು ಸಹ ಕಿಟ್ಟೆಲ್ಲರನ್ನು ಅನುಮೋದಿಸಿ ಅದೇ ನಾಗವರ್ಮನೇ ''ಕಾದಂಬರಿ'' ''ಭಾಷಾಭೂಷಣ''ಗಳನ್ನೂ ರಚಿಸಿದನೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.[2] ಅವರು ಬಹುಶಃ ಕಾವ್ಯವಲೋಕನ ಸಮಗ್ರ ಗ್ರಂಥವನ್ನು ನೋಡಿರಲಾರರು. ಕಾದಂಬರಿಯನ್ನು ಮೊದಲ ಬಾರಿ ಸಂಪಾದಿಸಿದ ಬಿ. ಮಲ್ಲಪ್ಪನವರ ಅಭಿಪ್ರಾಯದಂತೆಯೂ ನಾಗವರ್ಮ ಒಬ್ಬನೇ.[3]

1902ರಲ್ಲಿ ಕಾವ್ಯಾವಲೋಕನವನ್ನು ಮೊದಲ ಬಾರಿ ಮುದ್ರಿಸಿದಾಗ ಆರ್. ನರಸಿಂಹಾಚಾರ್ಯರು ತಮ್ಮ ಪೀಠಿಕೆಯಲ್ಲಿ ಈ ವಿಷಯವನ್ನು ಚರ್ಚಿಸಿ ಛಂದೋಂಬುಧಿ ಮತ್ತು ಬಹುಶಃ ಕಾದಂಬರಿಗಳ ಕರ್ತೃ ನಾಗವರ್ಮ ಕ್ರಿ.ಶ. ಹತ್ತನೇ ಶತಮಾನದ ಕೊನೆಯಲ್ಲಿದ್ದನೆಂದೂ ಉಳಿದ ಮೂರು ಗ್ರಂಥಗಳನ್ನು ಬರೆದ ಎರಡನೆಯ ನಾಗವರ್ಮ ಸುಮಾರು 150 ವರ್ಷಗಳ ಅನಂತರದಲ್ಲಿದ್ದನೆಂದೂ ನಿರ್ಣಯಿಸಿದರು. ಈ ಇಬ್ಬರಲ್ಲದೆ ಚಂದ್ರಚೂಡಾಮಣಿ ಶತಕವನ್ನು ರಚಿಸಿದ ನಾಗವರ್ಮಾಚಾರ್ಯನೊಬ್ಬನು ಸುಮಾರು ಕ್ರಿ.ಶ. 1070ರಲ್ಲಿದ್ದನೆಂದೂ ಹೇಳಿದರು.[4] ಈ ವಿವರಗಳನ್ನೇ ತಮ್ಮ ''ಕವಿಚರಿತೆ''ಯ ಮೊದಲನೆಯ ಸಂಪುಟದಲ್ಲಿಯೂ ಉಲ್ಲೇಖಿಸಿ, ಮೊದಲನೆಯ ನಾಗವರ್ಮನ ಕಾಲ ಸುಮಾರು ಕ್ರಿ.ಶ. 990 ಮತ್ತು ಎರಡನೆಯ ನಾಗವರ್ಮನ ಕಾಲ ಸು. 1145 ಎಂದು ಬರೆದರು. ಚಂದ್ರಚೂಡಾಮಣಿ ಶತಕದ ನಾಗವರ್ಮಾಚಾರ್ಯ ಬೇರೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಉಳಿದ ಐದು ಗ್ರಂಥಗಳ ವಿಷಯದಲ್ಲಿ ನರಸಿಂಹಾಚಾರ್ಯರನ್ನು ವಿರೋಧಿಸಿ, ಆ ಎಲ್ಲ ಗ್ರಂಥಗಳನ್ನೂ ಕ್ರಿ.ಶ. 1030-50ರ ಅವಧಿಯಲ್ಲಿ ಒಬ್ಬನೇ ನಾಗವರ್ಮ ಬರೆದನೆಂದು ಡಾ|| ಎ. ವೆಂಕಟಸುಬ್ಬಯ್ಯನವರು ವಾದಿಸಿದರು.[5] ಕವಿಚರಿತೆಕಾರರು ಇದನ್ನೊಪ್ಪದೆ ತಮ್ಮ ಮೊದಲಿನ ನಿಲುವನ್ನೇ ಸಮರ್ಥಿಸಿದರು.[6] ಕಾದಂಬರಿ ಛಂದೋಂಬುಧಿಗಳ ನಾಗವರ್ಮರು ಭಿನ್ನರಿರಬಹುದೇ ಎಂಬ ಸಂದೇಹಕ್ಕೆ ಅವಕಾಶವಿದೆಯೆಂದೂ ಹೇಳಿದರು.[7]

"ಹನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯ" ಎಂಬ ಲೇಖನದಲ್ಲಿ ಎಚ್. ಚೆನ್ನಕೇಶವಯ್ಯಂಗಾರ್ಯರು ಕಾದಂಬರಿ ಛಂದೋಂಬುಧಿಗಳ ನಾಗವರ್ಮರು ಭಿನ್ನರೆಂದು ತೀರ್ಮಾನಿಸಿದರು. ಇದಕ್ಕೆ ಅವರು ಕೊಡುವ ಕಾರಣಗಳು ಇಂತಿವೆ :

1) ಛಂದೋಂಬುಧಿಯ ನಾಗವರ್ಮನು ತನ್ನ ಜಾತಿ, ವಂಶ ಪೋಷಕರನ್ನು ಹೇಳಿಕೊಂಡಿರುವಂತೆ ಕಾದಂಬರಿಯವನು ಹೇಳಿಕೊಂಡಿಲ್ಲ.
2) ಕಾದಂಬರಿಯನ್ನು ಬರೆದ ಸೂಚನೆ ಛಂದೋಂಬುಧಿಯಲ್ಲಾಗಲೀ, ಛಂದೋಂಬುಧಿಯ ಸೂಚನೆ ಕಾದಂಬರಿಯಲ್ಲಾಗಲೀ ಇಲ್ಲ.
3) ಎರಡು ಗ್ರಂಥಗಳ ಶೈಲಿಗಳೂ ಬೇರೆ ಬೇರೆ.

ಪ್ರೊ. ಟಿ. ಎಸ್. ವೆಂಕಣ್ಣಯ್ಯನವರು ಅಯ್ಯಂಗಾರ್ಯರ ತೀರ್ಮಾನವನ್ನು ಪರಿಶೀಲಿಸಿ "ಇದಮಿತ್ಥಂ ಎಂದು ನಿರ್ಧರಿಸಲು ಈಗ ದೊರೆತಿರುವ ಸಾಧನಗಳು ಸಾಲವು. ಈ ಎರಡು ಗ್ರಂಥಗಳನ್ನೂ ಒಬ್ಬನೇ ಬರೆದಿರಬಹುದಾದದ್ದು ಅಸಂಭವವಲ್ಲ ವೆಂದು ತೋರುತ್ತದೆ" ಎಂದು ಅಭಿಪ್ರಾಯಪಟ್ಟರು.[9]

ಈಚೆಗೂ ಅನೇಕ ವಿದ್ವಾಂಸರು ಈ ವಿಷಯಗಳನ್ನು ಚರ್ಚಿಸಿದ್ದರೂ, ಒಟ್ಟಿನಲ್ಲಿ ಕವಿಚರಿತೆಕಾರರ ಮತ್ತು ಪ್ರೊ।। ವೆಂಕಣ್ಣಯ್ಯನವರ ಅಭಿಪ್ರಾಯ ಬಹುಮಂದಿ ವಿದ್ವಾಂಸರಿಗೆ ಮಾನ್ಯವಾಗಿತ್ತು.[10]

ನಾಗವರ್ಮನ ವರ್ಧಮಾನ ಪುರಾಣವೂ ಡಾ।। ಎಲ್. ಬಸವರಾಜು ಸಂಪಾದಿತ 'ಕನ್ನಡ ಛಂದಸ್ಸಂಪುಟ' ಮತ್ತು ಶ್ರೀ ಕುಕ್ಕಿಲ ಕೃಷ್ಣಭಟ್ಟ ಸಂಪಾದಿತ 'ಛಂದೋಂಬುಧಿ' ಈ ಗ್ರಂಥಗಳೂ ಹೊರಬಂದ ಮೇಲೆ ನಾಗವರ್ಮರ ವಿಷಯದಲ್ಲಿ ಚರ್ಚೆ ಮತ್ತೆ ಬಿರುಸಾಗಿದೆ.

"ಒಂದನೆಯ" ನಾಗವರ್ಮ

ಡಾ।। ಎಲ್. ಬಸವರಾಜು ಅವರು ಕಾದಂಬರಿ ಮತ್ತು ಛಂದೋಂಬುಧಿಗಳ ಕರ್ತೃಗಳು ಬೇರೆ ಬೇರೆ ನಾಗವರ್ಮರೆಂದೂ, ಛಂದೋಂಬುಧಿ ಕ್ರಿ.ಶ. 1173ರ ಅನಂತರ ರಚಿತವಾಗಿರಬೇಕೆಂದೂ ಸಾಧಿಸುತ್ತಾರೆ. ಅವರು ಕೊಡುವ ಕಾರಣಗಳು ಹೀಗಿವೆ :

1. ಕಾದಂಬರಿಯನ್ನು ಬರೆದವನು ಬ್ರಾಹ್ಮಣ; ಛಂದೋಂಬುಧಿಯನ್ನು ಬರೆದವನು ಶೈವ.

2. 'ಅರಸಂ ರಕ್ಕಸಗಂಗಂ' ಮತ್ತು 'ಗಂಡರ ಮೂಕುತಿ' ಈ ಪದ್ಯಗಳೂ ಕವಿಯ ವಂಶಸಂಬಂಧವಾದ ಪದ್ಯಗಳೂ ಪ್ರಕ್ಷಿಪ್ತಗಳು.
3. ನಾಗವರ್ಮನ ಛಂದೋಂಬುಧಿಯು ಜಯಕೀರ್ತಿಯ ಛಂದೋನು-ಶಾಸನದ ಕನ್ನಡಿಗರ ಸಂಕ್ಷಿಪ್ತ ಆವೃತ್ತಿ.
4. ನಾಗವರ್ಮ ಹೇಮಚಂದ್ರನನ್ನು ಅನುಸರಿಸಿದ್ದಾನೆ. ಹೇಮಚಂದ್ರ ಮೃತನಾದುದು ಸುಮಾರು ಕ್ರಿ.ಶ. 1173ರಲ್ಲಿ. ಆದುದರಿಂದ ಛಂದೋಂಬುಧಿ ರಚನೆಯ ಕಾಲದ ಪೂರ್ವಮಿತಿ 12ನೇ ಶತಮಾನದ ತುದಿ.[11]

ಡಾ॥ ಬಸವರಾಜು ಅವರು ಮುದ್ರಿತಪ್ರತಿಗಳ ಜೊತೆಗೆ ಆರು ಕಾಗದ ಮತ್ತು ಓಲೆಪ್ರತಿಗಳನ್ನು ಬಳಸಿಕೊಂಡಿರುವಂತೆ ಹೇಳಿರುತ್ತಾರೆ[12] ಆದರೆ ಪ್ರತಿಗಳ ವಯೋಮಾನ, ಸಮಗ್ರತೆ, ಶುದ್ಧತೆಗಳ ವಿವರಗಳನ್ನು ಕೊಟ್ಟಿಲ್ಲ. KA8 ಹಲವು ಪ್ರತಿಗಳಲ್ಲಿ ಅತ್ಯಂತ ವಿಶ್ವಾಸಾರ್ಹವಾದ ಜೈನಪ್ರತಿ[13] KA12 ಅಷ್ಟು ಶುದ್ಧವಲ್ಲದ ವೈಷ್ಣವ ಪ್ರತಿ KA283 ವಿಸ್ತೃತ ಪಾಠಗಳನ್ನೊಳಗೊಂಡ ಕೆಟ್ಟ ಪ್ರತಿಗಳು[14] ಎಂದಿಷ್ಟು ಮಾತ್ರ ಹೇಳಿದ್ದಾರೆ. KA8 ಮತ್ತು KA12 ಎಲ್ಲಕ್ಕಿಂತ ಶುದ್ಧ ಪ್ರತಿಗಳೆಂದು ಹೇಳಿದ್ದರೂ ಅವುಗಳಲ್ಲಿಲ್ಲದ ಪಿನಾಕಿಸ್ತುತಿ, ಮಹಿಷಾಸುರ ಮರ್ದಿನಿ ಸ್ತುತಿಪದ್ಯಗಳನ್ನು ಆದಿಯ ಪದ್ಯಗಳನ್ನಾಗಿ ಸ್ವೀಕರಿಸಿದ್ದಾರೆ. KA8 ಹೊರತು ಮಿಕ್ಕೆಲ್ಲ ಪ್ರತಿಗಳಲ್ಲಿರುವಂತೆ ಹೇಳಿರುವ ದ್ವಿತೀಯಾಧಿಕಾರದ ಕೊನೆಯ ''ಯುಗ ಋತು ಗಜ ನಾಗಾಂಬರ'' ಮತ್ತು ತೃತೀಯಾಧಿಕಾರದ ಮೊದಲಿನ ''ಶ್ರೀರಮಣನಖಿಲ ಸುರವಿಸ್ತಾರಕ'' ಎಂಬ ಪದ್ಯಗಳನ್ನು ಪ್ರಕ್ಷಿಪ್ತವೆಂದೆಣಿಸಿದ್ದಾರೆ.[15] ಇದನ್ನು ನೋಡಿದರೆ ನಾಗವರ್ಮನು ''ತೀವ್ರಶೈವ''ನೆಂದು ಮೊದಲು ನಿರ್ಧರಿಸಿ, ಆ ನಿರ್ಧಾರಕ್ಕೆ ಪೋಷಕವಾಗುವ ಪದ್ಯಗಳನ್ನು ಶುದ್ಧವೆನ್ನುವ ಪ್ರತಿಗಳಲ್ಲಿಲ್ಲದಿದ್ದರೂ ಪರಿಗ್ರಹಿಸಿ, ವಿರೋಧವೆಂದು ಭಾಸವಾಗಬಹುದಾದ ಪದ್ಯಗಳ ಪ್ರಕ್ಷಿಪ್ತವೆಂದಿರುತ್ತಾರೆಂಬ ಭಾವನೆಯುಂಟಾಗುತ್ತದೆ.

ನಾಗವರ್ಮನು ಗುರುಲಘುಗಳಿಗೆ ''ತ್ರಿಯಂಬಕ'', ''ಮುರಾಂತಕ'' ಎಂಬ ಸಂಜ್ಞೆಗಳನ್ನು ಕೊಟ್ಟಿರುವುದು ನಿಜ. ಆದರೆ ಬ್ರಹ್ಮ, ವಿಷ್ಣು ಗಣಗಳನ್ನೂ ಹೆಸರಿಸಿರುವುದರಿಂದ ಅವನು ಶಿವಪಾರಮ್ಯವಾದಿಯಾದರೂ ವಿಷ್ಣು ವಿರೋಧಿಯಲ್ಲ. ಆದುದರಿಂದ ಅನೇಕ ಹಸ್ತಪ್ರತಿಗಳಲ್ಲಿರುವ ''ಶ್ರೀವಧುವಂ ಪಯೋಧಿಮಥನೋದ್ಭವ'' ಎಂದು ಮೊದಲಾಗುವ ವಿಷ್ಣುಸ್ತುತಿಯೂ ಮೂಲಪಾಠದಲ್ಲೇ ಇರುವುದು ಅಸಂಭವವಲ್ಲ. 'ನರೇಂದ್ರಚಂದ್ರ'ನನ್ನು ಕೃತಿಪತಿಯಾಗುಳ್ಳ ಕರ್ನಾಟಕ ಕಾದಂಬರಿಯ ಮಂಗಳ ಪದ್ಯ

"ಗಿರೀಶ ಚಂಚಜ್ಜಟಾಜಾಲಜೂಟವ್ಯೋಮಪ್ರೋದ್ಭಾಸಿಚಂದ್ರ" ನ ಸ್ತುತಿ. ಗ್ರಂಥ ದಲ್ಲಿಯೂ ಶೈವ ವಾತಾವರಣವೇ ಇರುವುದರಿಂದ ಕವಿ ಶಿವೋಪಾಸಕನೇ ಎನ್ನಲು ಯಾವ ಅಡ್ಡಿಯೂ ಇಲ್ಲ. ಆದುದರಿಂದ ಮತದ ಕಾರಣದಿಂದ ಕಾದಂಬರಿ ಛಂದೋಂಬುಧಿಗಳು ಭಿನ್ನಕರ್ತೃಕಗಳೆನ್ನಲಾಗುವುದಿಲ್ಲ.

ಕವಿಯ ವಂಶಾವಳಿ ಮತ್ತು ಪೋಷಕರಾಜರ ವಿಷಯಕವಾದ ಪದ್ಯಗಳು ಕೆಲವು ಪ್ರತಿಗಳಲ್ಲಿ ಮಾತ್ರ ಇರುವುದರಿಂದಲೂ ಜೈನಪ್ರತಿ KA-8ರಲ್ಲಿ ಇಲ್ಲವಾದುದರಿಂದಲೂ ಅವು "ಆಸಕ್ತರೂ ಅಶಕ್ತರೂ ಛಂದೋಂಬುಧಿಯ ಪ್ರತಿಗಳೊಳಕ್ಕೆ ಪ್ರಕ್ಷೇಪಿಸಿದ ಭಾಗಗಳ ಪಡಿನುಡಿಗಳು" ಎಂದೂ "ಕಾದಂಬರಿಯ ನಾಗವರ್ಮನೇ ಛಂದೋಂಬುಧಿ ಯವನೆಂಬುದನ್ನು ಆಭಾಸಿಸುವ ವೈದಿಕ ಪ್ರಕ್ಷೇಪಗಳೂ ಸೇರಿ ಉರಿದವು" ಎಂದೂ ಅಭಿಪ್ರಾಯ ಪಡುತ್ತಾರೆ" ಡಾ|| ಬಸವರಾಜು.[16]

ಜೈನಕವಿಗಳು ತಮ್ಮ ಧಾರ್ಮಿಕ ಗುರುಗಳ ವಿಷಯ ಹೇಳುವಾಗ ಸಾಮಾನ್ಯವಾಗಿ ಗುರುಪರಂಪರೆಯನ್ನು ಅನೇಕ ಪದ್ಯಗಳಿಂದ ಹೇಳುವುದು ಕಂಡುಬರುತ್ತದೆ. ಹಾಗೆ ಮಾಡದೆ, "ಗುರುಗಳ್ ನೆಗಳ್ದಜಿತವೀರಸೇನರ್" ಎಂದು ಇಷ್ಟು ಮಾತ್ರ ಹೇಳ ಬೇಕಾದರೆ ಅಜಿತವೀರಸೇನರು ಅವನ ಲೌಕಿಕ ವಿದ್ಯಾಭ್ಯಾಸದ ಗುರುಗಳಿರಬಹುದು. ಶ್ರೀ ಕುಕ್ಕಿಲ ಕೃಷ್ಣಭಟ್ಟರು ಹೇಳುವಂತೆ "ಜೈನರಾಜನಲ್ಲಿ ಆಶ್ರಯ ಪಡೆದ ಹಾಗೂ ಜೈನ ಗುರುವಿನಿಂದ ವಿದ್ಯಾಭ್ಯಾಸ ಪಡೆದ ಮಾತ್ರಕ್ಕೆ ಆತನು ಜೈನನೇ ಆಗಬೇಕೆಂದಿಲ್ಲ. ತನ್ನ ಆಶ್ರಯದಾತರಾದ ರಾಜ, ಮಂತ್ರಿಗಳ ಗುರುವನ್ನು ಕೇವಲ ಗೌರವ ಬುದ್ಧಿಯಿಂದ ತಾನೂ ಗುರುವೆಂದಿದ್ದಿರಬಹುದು".[17] ಅವನು ಜೈನನೆಂದು ತೋರಿಸುವ ಉದ್ದೇಶ ದಿಂದ ಪದ್ಯಗಳನ್ನೂ ಪ್ರಕ್ಷೇಪಿಸಿದ್ದರೆ, ಗುರು ಪರಂಪರಾಪದ್ಯಗಳನ್ನಾಗಲೀ ಆದಿಯಲ್ಲಿ ಜಿನಸ್ತುತಿಯನ್ನಾಗಲೀ, ಸೇರಿಸದಿರುತ್ತಿರಲಿಲ್ಲ. "ಅಪ್ರತಿಮ ಭುಜಬಲ ಪರಾಕ್ರಮ ಉಳ್ಳವನು ಎಂದು ವಿಶೇಷವಾಗಿ ಹೇಳಿ ಕೊಂಡವನಿಗೆ, ಒಬ್ಬ ರಾಜನ ಅಥವಾ ಮಂತ್ರಿ, ಸೇನಾಧಿ ಪತಿಗಳ ಆಶ್ರಯವೊಂದಿದ್ದಿರಬೇಕು ತಾನೆ ? ಮೇಲಿನ ಪದ್ಯಗಳನ್ನು ಬಿಟ್ಟರೆ ಈ ಗ್ರಂಥದಲ್ಲಿ ಇನ್ನೆಲ್ಲಿಯೂ ಅಂತಹ ಆಶ್ರಯವನ್ನು ಸೂಚಿಸುವ ಬೇರೆ ಪದ್ಯಗಳಿಲ್ಲದಿರು ವುದನ್ನೂ ಗಮನಿಸಿದರೆ ಮೇಲಿನ ಪದ್ಯಗಳು ಪ್ರಕ್ಷಿಪ್ತಗಳಲ್ಲವೆಂದೇ ಹೇಳಬೇಕು"[17]

ಇನ್ನು ವೈದಿಕ ಪ್ರಕ್ಷೇಪದ ವಿಷಯ. ಕಾದಂಬರಿಯನ್ನು ಬರೆದ ನಾಗವರ್ಮನೇ ಛಂದೋಂಬುಧಿಯನ್ನು ಬರೆದನೆಂದು ಸೂಚಿಸಲು ಅವನಿಗೆ ವಂಶಾವಳಿಯನ್ನೇ ಸೃಷ್ಟಿಸಿ ಪ್ರಕ್ಷೇಪಿಸಿದರೆನ್ನುವುದು ಸಹಜವಲ್ಲ. ಆ ಉದ್ದೇಶವಿದ್ದರೆ ಕಾದಂಬರಿಯನ್ನು ಬರೆದಿರುವು ದಾಗಿಯೇ ಹೇಳದೆ ಇರುತ್ತಿರಲಿಲ್ಲ.

ಅಜಿತವೀರಸೇನನನ್ನು ಗುರುವೆಂದಿರುವುದಾಗಲೀ ತನ್ನ ಹಿರಿಯರ ಹೆಸರುಗಳು ದಾಮಮಯ್ಯ, ವೆಣ್ಣಮಯ್ಯ ಇತ್ಯಾದಿ ಎಂದಿರುವುದಾಗಲೀ ನಾಗವರ್ಮನ ಶೈವ ಬ್ರಾಹ್ಮಣತ್ವಕ್ಕೆ ಹಾನಿಯನ್ನುಂಟು ಮಾಡುವುದಿಲ್ಲ. ಹಾಗೆಯೇ ಅವನ ಮುತ್ತಾತ ವೆಂಗಿಪಳುವಿನಲ್ಲಿದ್ದುದು ನಾಗವರ್ಮನು ಸಯ್ಯಡಿಯವನೆನ್ನುವುದಕ್ಕೆ ವಿರೋಧಿಯಲ್ಲ. ಮೂರು ತಲೆಮಾರಿನಲ್ಲಿ ಸ್ಥಳ ಬದಲಾವಣೆಯಾಗಿರಬಹುದು. ಪ್ರಾಂತೀಯ ಭಾವನೆಯಿಂದ ವೆಂಗಿಪಳುವಿನ ಹೆಸರನ್ನು ಸೇರಿಸಿದ್ದಾರೆನ್ನುವುದು ಸರಿಯಾಗಿ ಕಾಣುವುದಿಲ್ಲ.

KA-8 ರಲ್ಲೂ ಇತರ ಕೆಲವು ಪ್ರತಿಗಳಲ್ಲೂ ಈ ಪದ್ಯಗಳಿಲ್ಲವೆನ್ನುವುದು ಪರಿಶೀಲಿಸತಕ್ಕ ವಿಷಯ. ಡಾ|| ಬಸವರಾಜು ಹಸ್ತಪ್ರತಿಗಳ ವರ್ಣನಾತ್ಮಕ ವಿವರವನ್ನು ಕೊಟ್ಟಿಲ್ಲವೆಂಬ ವಿಷಯವನ್ನು ಹಿಂದೆಯೇ ಹೇಳಿದೆ. ಹಸ್ತಪ್ರತಿಗಳ ವಿಷಯವಾಗಿ ಶ್ರೀ ಕುಕ್ಕಿಲ ಕೃಷ್ಣಭಟ್ಟರು ಹೀಗೆ ಹೇಳಿದ್ದಾರೆ :

''ಗ್ರಂಥಗಳನ್ನು ಪ್ರತಿ ಮಾಡಿಕೊಳ್ಳುವವರಲ್ಲಿ ತಮ್ಮ ಕಾರ್ಯಕ್ಕೆ ಬೇಕಷ್ಟನ್ನೇ ಬರೆದುಕೊಂಡು ಹಿಂದು ಮುಂದಿನವನ್ನೆಲ್ಲ ಅನವಶ್ಯವೆಂದು ಬಿಟ್ಟುಬಿಡುವವರಿದ್ದಾರೆ. ಸಾಮಾನ್ಯವಾಗಿ ಶಿಷ್ಯರಿಗೆ ಪಾಠ ಹೇಳುವುದಕ್ಕೆ ನೆನಪಿಗಾಗಿ ಬರೆದುಕೊಳ್ಳುವವರು ಹೀಗೆ ಮಾಡುವುದಿದೆ; ಶಿಷ್ಯರೂ ಅಭ್ಯಾಸಕ್ಕಾಗಿ ಅರ್ಧಂಬರ್ಧ ಪ್ರತಿ ಮಾಡಿಡುವುದುಂಟು. ಇಂತಹ 'ಪಾಠಪ್ರತಿ'ಗಳು ಹೆಚ್ಚಾಗಿ ಶಾಸ್ತ್ರಗ್ರಂಥಗಳಲ್ಲೇ ದೊರೆಯುವುದೂ ಸಹಜವಾದ್ದರಿಂದ 'ಛಂದೋಂಬುಧಿ'ಯಲ್ಲಿಯೂ ಅಂಥ ಪ್ರತಿಗಳಿದ್ದರೆ ಆಶ್ಚರ್ಯವಲ್ಲ. ಮೈಸೂರು ವಿ.ವಿ.ನಿಲಯದ ಅಧ್ಯಯನ ಸಂಸ್ಥೆಯ ಲಿಖಿತ ಗ್ರಂಥ ಭಂಡಾರದಲ್ಲಿ ಅಂಥ ಒಂದೆರಡು ಪ್ರತಿಗಳಿರುತ್ತವೆ. ಅವುಗಳಲ್ಲಿ KA-8 ಎಂಬ ಒಂದು ಕಾಗದದ ಪುಸ್ತಕದಲ್ಲಿ ಅಂಥ ಎರಡು ಪ್ರತಿಗಳಿಂದ ಬರೆದದ್ದಿದೆ. ಮೊದಲನೆಯದರಲ್ಲಿ ಒಂದೇ ಒಂದು ಸ್ತುತಿ ಪದ್ಯವಾಗಲಿ ಅಧಿಕಾರಾಂತದ ಗದ್ಯವಾಗಲಿ ಇರುವುದಿಲ್ಲ.... ಅದೇ ಎರಡನೇ ಪ್ರತಿಯಲ್ಲಿ ಮೊದಲಿಗೆ 'ಅತಿಮಧುರಪ್ರಸನ್ನೆ .....' (2-6) ಎಂಬ ಭಾರತೀ ಸ್ತುತಿಪದ್ಯವೊಂದಿದೆ.... ಇದರಲ್ಲಿ ನಾಲ್ಕನೆಯ ಅಧಿಕಾರಾಂತದವರೆಗಷ್ಟೇ ಇರುವುದು........ ಇವೆರಡೂ ಪಾಠಪ್ರತಿಗಳು ಎಂಬುದರಲ್ಲಿ ಸಂದೇಹವಿಲ್ಲ. ಇಂಥ ಒಂದೆರಡು ಪ್ರತಿಗಳಲ್ಲಿ ಇಲ್ಲವೆಂಬುದರಿಂದ, ದೊರೆತ ಹಲವಾರು ಪ್ರತಿಗಳಲ್ಲಿ ಇದ್ದೇ ಇರುವ ಮಂಗಲಾಚಾರದ ಪದ್ಯಗಳು, ವಂಶಚಾರಿತ್ರ, ದೇಶಕಾಲಾದಿ ವಿಚಾರಗಳನ್ನು ತಿಳಿಸುವ ಪದ್ಯಗಳೆಲ್ಲವೂ ಪ್ರಕ್ಷಿಪ್ತಗಳೆಂದು ಭಾವಿಸಿದರೆ ನ್ಯಾಯವಾಗದು.[18]

ಶ್ರೀ ಕೃಷ್ಣಭಟ್ಟರ ಈ ವಿಚಾರ ಸರಣಿ ಸರಿಯಾಗಿ ತೋರುತ್ತದೆ.

ಡಾ|| ಬಸವರಾಜು ಅವರು 15 ಸಮವೃತ್ತಗಳ ಒಂದು ಪಟ್ಟಿಯನ್ನು ಕೊಟ್ಟು, ''ಜಯಕೀರ್ತಿ ಹೇಮಚಂದ್ರರು ಒಬ್ಬೊಬ್ಬರೇ ಅಥವಾ ಇಬ್ಬರೂ ಹೇಳಿರುವ ವೃತ್ತಗಳನ್ನು ನಾಗವರ್ಮನು ಯತಿ-ಹೆಸರುಗಳು ದೃಷ್ಟಿಯಿಂದ ತದ್ವತ್ತಾಗಿ, ಅಥವಾ ಯತಿಯನ್ನು ಬದಲಿಸಿ, ಹೆಸರನ್ನು ಯಥಾವತ್ತಾಗಿರಿಸಿ ಅನುಸರಿಸಿದ್ದಾನೆ — ಕೇದಾರ ಭಟ್ಟನನ್ನೂ

ಅಷ್ಟೇ" ಎಂದಿದ್ದಾರೆ.[19] ಹೆಚ್ಚು ಪ್ರಚಾರದಲ್ಲಿರುವ ಛಂದೋಗ್ರಂಥಗಳ ಪಾಠಕರು ಬೇರೆ ಕಡೆ ಕಂಡುಬಂದ ವೃತ್ತಗಳನ್ನು ಗ್ರಂಥದಲ್ಲಿ ಅಲ್ಲಲ್ಲಿ ಸೇರಿಸಿ ಕೊಳ್ಳುವುದೂ (ಈಗಿನ ಪುಸ್ತಕಗಳಲ್ಲಿರುವಂತೆ — ಎಷ್ಟೋ ಮುದ್ರಿತ ಪುಸ್ತಕಗಳಲ್ಲಿ ಇದಕ್ಕಾಗಿ ಮಧ್ಯೇ ಮಧ್ಯೇ ಸ್ಥಳ ಬಿಟ್ಟಿರುತ್ತಾರೆ), ಇಂತಹ ಗ್ರಂಥಗಳನ್ನು ಮಾಡುವಾಗ ಲಿಪಿಕಾರರು ಆ ಪ್ರಕ್ಷೇಪ ಸಮೇತ ಪ್ರತಿ ಮಾಡುವುದೂ ಸಾಮಾನ್ಯ.[20] ಆದುದರಿಂದ, ಬೇರೆ ಆಧಾರಗಳಿಂದ ಇಂತಹ ಗ್ರಂಥಗಳ ಕಾಲ ಗೊತ್ತಿದ್ದಾಗ ಹೊರತಾಗಿ, ಒಬ್ಬ ಗ್ರಂಥಕಾರ ಇನ್ನೊಬ್ಬನನ್ನು ಅನುಸರಿಸುತ್ತಾನೆನ್ನುವುದು ವಿಶ್ವಾಸಾರ್ಹವಲ್ಲ.

ಕನ್ನಡ ಛಂದಃಪ್ರಕಾರಗಳನ್ನು ನಾಗವರ್ಮನಿಗಿಂತ ಜಯಕೀರ್ತಿ ವಿವರ ವಾಗಿಯೂ, ಕೆಲವು ಕಡೆಗಳಲ್ಲಿ ಹೆಚ್ಚು ಶಾಸ್ತ್ರೀಯವಾಗಿಯೂ ಹೇಳಿರುವುದರಿಂದ, ನಾಗವರ್ಮನು ಜಯಕೀರ್ತಿಯನ್ನು 'ಹಸುವನ್ನು ಕರುವಿನಂತೆ ಅನುಸರಿಸಿ'ದ್ದಾನೆಂದೂ "ಛಂದೋಂಬುಧಿ"ಯು ಜಯಕೀರ್ತಿಯ ಛಂದೋನುಶಾಸನದ ಕನ್ನಡಿಗರ ಸಂಕ್ಷಿಪ್ತ ಆವೃತ್ತಿಯಷ್ಟೆ" ಎಂದೂ ಡಾ|| ಬಸವರಾಜು ಅವರ ಅಭಿಪ್ರಾಯ.[21] ಸಂಸ್ಕೃತದಲ್ಲಿ ಹೆಚ್ಚು ಪ್ರಚಾರದಲ್ಲಿರುವ ವರ್ಣವೃತ್ತಗಳನ್ನೇ ವಿವರವಾಗಿ ಪ್ರಸ್ತಾಪಿಸಿರುವ ನಾಗವರ್ಮನು ಜಯಕೀರ್ತಿಯ ಗ್ರಂಥವನ್ನು ನೋಡಿದ್ದಲ್ಲಿ, ಆ ಸಂಸ್ಕೃತ ಗ್ರಂಥದಲ್ಲಿರುವ ಕನ್ನಡ ಛಂದೋಭೇದಗಳನ್ನು ಅದಕ್ಕಿಂತ ಸಂಕ್ಷೇಪವಾಗಿ ಕೊಡುತ್ತಿರಲಿಲ್ಲ. ಜಯಕೀರ್ತಿಯ ಕಾಲ ಸುಮಾರು ಕ್ರಿ.ಶ. 1000 ಇರಬಹುದೆಂದೂ, ಇವನು ಕೇದಾರಭಟ್ಟನಿಗಿಂತ ಈಚಿನವನೆಂದೂ ಎಚ್.ಡಿ. ವೇಲಣಕರರು ಹೇಳುತ್ತಾರೆ.[22] ಬಹುಶಃ ನಾಗವರ್ಮ ಮತ್ತು ಜಯಕೀರ್ತಿ ಸಮಕಾಲೀನರು. ಒಬ್ಬನ ಗ್ರಂಥವನ್ನು ಮತ್ತೊಬ್ಬ ಕಂಡಿರಲಾರ.[23] ಜೈನನಾದ ಜಯಕೀರ್ತಿಗೆ ಜೈನ ಗ್ರಂಥ ಭಂಡಾರಗಳಲ್ಲಿದ್ದ ಗ್ರಂಥಗಳ ಪರಿಚಯವಿದ್ದು ಅವನು ನಾಗವರ್ಮನಿಗಿಂತ ಚೆನ್ನಾಗಿ ಕನ್ನಡ ಪ್ರಕಾರಗಳನ್ನು ವಿವರಿಸಲು ಸಾಧ್ಯವಾಗಿರ ಬಹುದು. ಇಬ್ಬರೂ ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ (7-10) ಸೂಚಿಸಿರುವ "ಕರ್ಣಾಟಚ್ಛಂದೋಮತ"ವನ್ನು ಅನುಸರಿಸಿರಲೂಬಹುದು.

ಹೇಮಚಂದ್ರ ಘನವಿದ್ವಾಂಸನಾಗಿದ್ದರೂ ಅತಿಚತುರ ಸಂಗ್ರಹಕಾರನೇ ಹೊರತು ಸ್ವತಂತ್ರ ಗ್ರಂಥಕಾರನಲ್ಲವೆಂದು ವಿದ್ವಾಂಸರ ಮತ.[24] ಆದುದರಿಂದ ಹೇಮಚಂದ್ರನ ಗ್ರಂಥದಲ್ಲಿರುವ ವೃತ್ತಗಳು ಛಂದೋಂಬುಧಿಯಲ್ಲಿಯೂ ಇವೆಯೆಂಬ ಕಾರಣದಿಂದ ನಾಗವರ್ಮನು ಹೇಮಚಂದ್ರನಿಗಿಂತ ಈಚಿನವನೆನ್ನುವುದು ಸಾಧುವಾಗಲಾರದು. "ಜಯದೇವಾದ್ಯರ ಛಂದೋನ್ವಯ" ಎಂಬ ಷಷ್ಠಾಧಿಕಾರದ ಮೊದಲ ಪದ್ಯದಲ್ಲಿನ 'ಆದ್ಯ' ಪದದಿಂದ, ಡಾ|| ಟಿ. ವಿ. ವೆಂಕಟಾಚಲಶಾಸ್ತ್ರಿಗಳು ಸೂಚಿಸಿರುವಂತೆ, ಜಯದೇವನ

ಆದ್ಯರಾದ ಭರತ, ಜನಾಶ್ರಯ, ವಿರಹಾಂಕಾದಿಗಳು ಸೂಚಿತರಾಗಿರಬಹುದೇ ಹೊರತು ಜಯಕೀರ್ತಿ ಹೇಮಚಂದ್ರರಲ್ಲ.[25]

ಶ್ರೀ ಕುಕ್ಕಿಲ ಕೃಷ್ಣಭಟ್ಟರೂ ಛಂದೋಂಬುಧಿ, ಕಾದಂಬರಿಗಳ ನಾಗವರ್ಮರು ಭಿನ್ನರೆಂದು ಹೇಳುತ್ತಾರೆ. ಅವರು ಕೊಡುವ ಕಾರಣಗಳು:

(ಅ) ಕಾದಂಬರಿಯ ರಚನೆಯಲ್ಲಿರುವ ಕವಿಪ್ರತಿಭೆ, ಲಾಲಿತ್ಯಾದಿ ಗುಣಗಳು ಛಂದೋಂಬುಧಿಯಲ್ಲಿ ಅಷ್ಟಿಲ್ಲ.

(ಆ) ಕಾದಂಬರಿಯ ಕವಿಯ ಆಶ್ರಯದಾತನೂ ಕವಿಯ ಬಿರುದೂ ಬೇರೆ.

(ಇ) ಛಂದೋಂಬುಧಿಯಲ್ಲಿ ನಾಗವರ್ಮನು ತನ್ನನ್ನು ಹೊಗಳಿಕೊಂಡಿರುವ ವಿಶೇಷಣಗಳೂ ಅವನ ವಂಶದವರ ಉಲ್ಲೇಖವೂ ಕಾದಂಬರಿಯಲ್ಲಿಲ್ಲ.

(ಈ) ಉಚಿತ ಕೊಟ್ಟಾತನು ಧಾರಾಪುರದ ಭೋಜನಾಗಿದ್ದರೆ ಛಂದೋಂಬುಧಿಯ ನಾಗವರ್ಮನಿಗಿಂತ ಕಾದಂಬರಿಯವನು ಸುಮಾರು 20-25 ವರ್ಷ ಅನಂತರದವನಿರಬೇಕು ಹಾಗೂ ಕುದುರೆ ಹತ್ತಿ ಯುದ್ಧ ಮಾಡುವಷ್ಟು ಚೈತನ್ಯವೂ ಆಗ ಇದ್ದಿರಬೇಕು. ಛಂದೋಂಬುಧಿಯ ನಾಗವರ್ಮ ಆ ಗ್ರಂಥ ಬರೆದಾಗಲೇ ಮಧ್ಯವಯಸ್ಸಿನವ ನಾಗಿರಬೇಕಾದುದರಿಂದ ಇದು ಸಾಧ್ಯವಿಲ್ಲ.[26]

ಮೊದಲಿನ ಮೂರು ಕಾರಣಗಳು ಹಿಂದೆ ಚೆನ್ನಕೇಶವಯ್ಯಂಗಾರ್ಯರು ಕೊಟ್ಟಿದ್ದು, ಪ್ರೊ॥ ವೆಂಕಣ್ಣಯ್ಯನವರು ಪರಿಶೀಲಿಸಿದ್ದವುಗಳೇ. ಛಂದೋಂಬುಧಿಯಲ್ಲಿ ಕವಿ ತನ್ನ ಹೆಂಡತಿಯನ್ನು ಬಗೆಬಗೆಯಾಗಿ ಸಂಬೋಧಿಸಿರುವುದೂ, ತನ್ನನ್ನು ಅತಿಯಾಗಿ ಹೊಗಳಿಕೊಂಡಿರುವುದೂ, ಅವನ ಯೌವನದಶೆಯಲ್ಲಿ ಗ್ರಂಥವನ್ನು ಬರೆದಿರಬೇಕೆಂದು ಸೂಚಿಸುತ್ತದೆ. ತಾನು ಯೋಧನೆಂದು ಹೇಳಿಕೊಂಡಿರುವ ಅವನಿಗೆ, 20-25 ವರ್ಷಗಳ ಅನಂತರ ಅಂದರೆ 55 ವರ್ಷ ವಯಸ್ಸಿನ ಸುಮಾರಿನಲ್ಲಿ ಕುದುರೆ ಹತ್ತಿ ಯುದ್ಧ ಮಾಡುವ ಶಕ್ತಿಯಿರುವುದು ಅಸಾಧ್ಯವಲ್ಲ. ಕಾದಂಬರಿಯನ್ನು ಬರೆಯುವ ಹೊತ್ತಿಗೆ ವಯಸ್ಸಾದಂತೆ ಅನುಭವ ಪಕ್ವವಾಗಿ, ವಿನಯ ಹೆಚ್ಚಿ, ಬಾಣಭಟ್ಟನಿಗೆ ಹೋಲಿಸಿ ಕೊಂಡರೆ ತನ್ನದೇನೂ ಅತಿಶಯವಿಲ್ಲವೆಂಬ ಭಾವನೆಯಿಂದಲೂ ತನ್ನದು ಅನುವಾದ ವಾದುದರಿಂದಲೂ ಕವಿಯು ಸ್ವ ವಿಷಯವನ್ನು ಹೆಚ್ಚು ಹೇಳಿಕೊಳ್ಳದೆ ಭೋಜರಾಜ ನಿಂದ ಸನ್ಮಾನಿತನಾದುದನ್ನು ಮಾತ್ರ ಹೇಳಿರಬಹುದು. ಈ ಸಂದರ್ಭದಲ್ಲಿ "ಅಲ್ಪಜ್ಞನಾಗಿದ್ದಾಗ ನಾನು ಗರ್ವಿತನಾಗಿದ್ದೆ. ವಿದ್ವಾಂಸರ ಸಹವಾಸ ಹೆಚ್ಚಿದಂತೆ ನನ್ನ ಮೂರ್ಖತನದ ಅರಿವಾಗಿ, ಜ್ವರ ಇಳಿಯುವಂತೆ ನನ್ನ ಸೊಕ್ಕು ಇಳಿಯಿತು" ಎಂಬ ಭರ್ತೃಹರಿಯ ಪದ್ಯವನ್ನು ಜ್ಞಾಪಿಸಿಕೊಳ್ಳಬಹುದು.[27]

ಛಂದೋಂಬುಧಿಯ ಶೈಲಿಯನ್ನು ಗಮನಿಸಿದರೆ, ನಾಗವರ್ಮನು ತನ್ನನ್ನು ಕವಿರಾಜ ಹಂಸ, ಅತಿಶಯ ವಾಕ್ಸಂಪನ್ನ, ಚತುರಕವಿ ಲಲಾಮ ಇತ್ಯಾದಿ ಹೊಗಳಿ ಕೊಂಡಿರುವುದರಲ್ಲಿ ಅತ್ಯುಕ್ತಿಯಿರುವುದು ವೇದ್ಯವಾಗುತ್ತದೆ.[28] ಮುಂದೆ 20-25 ವರ್ಷಗಳು ಕಳೆಯುವ ವೇಳೆಗೆ ಕವಿಪ್ರತಿಭೆ ಬೆಳಗಿ ಶೈಲಿಯೂ ಪಳಗಿರುವುದೂ, ಒಂದು ಶಾಸ್ತ್ರಗ್ರಂಥ ಇನ್ನೊಂದು ಕಾವ್ಯವೆಂಬುದೂ ಶೈಲಿಯ ವ್ಯತ್ಯಾಸಕ್ಕೆ ಕಾರಣವಿರಬಹುದು.

ಛಂದೋಂಬುಧಿಯನ್ನೂ, ಕಾದಂಬರಿಯನ್ನೂ ಒಬ್ಬನೇ ಕವಿ ಬೇರೆ ಬೇರೆ ಪೋಷಕರ ಆಶ್ರಯದಲ್ಲಿದ್ದಾಗ ಬರೆದಿರುವುದು ಅಸಾಧ್ಯವಲ್ಲ. ಯೋಧರೂ, ಕವಿಗಳೂ ಒಬ್ಬ ರಾಜನ ಆಶ್ರಯವನ್ನು ಬಿಟ್ಟು ಮತ್ತೊಬ್ಬನ ಆಶ್ರಯವನ್ನು ಪಡೆಯುತ್ತಿದ್ದುದು ಅಪೂರ್ವವಲ್ಲ.

ಶ್ರೀ ಎಂ..ವಿ. ಸೀತಾರಾಮಯ್ಯನವರು ''ಅರಸಂ ರಕ್ಕಸಗಂಗಂ'' ಇತ್ಯಾದಿ ಪದ್ಯಗಳು ಪ್ರಕ್ಷಿಪ್ತಗಳಿರಬಹುದೆಂದೂ, ಛಂದೋಂಬುಧಿಯ ನಾಗವರ್ಮನೇ ''ಉದಯಾದಿತ್ಯಾಲಂಕಾರ''ವನ್ನೂ ಬರೆದಿರಬಹುದೆಂದೂ, ಆ ಗ್ರಂಥದ ಕಾಲ ಸುಮಾರು ಕ್ರಿ.ಶ. 1140 ಇರಬಹುದೆಂದೂ ಊಹೆ ಮಾಡಿದ್ದಾರೆ. ಆದರೆ ಅದು ಸಿದ್ಧಾಂತವಲ್ಲವೆಂದೂ ಸಂಭಾವನೀಯ ಊಹೆ ಮಾತ್ರವೆಂದೂ ಹೇಳಿ, ''ಕರ್ತೃ ನಾಗವರ್ಮ ಇತ್ಯಾದಿ ಊಹೆಗಳನ್ನು ಮಾಡುವುದು ನನ್ನ ದೃಷ್ಟಿಯಿಂದ ನಿಲ್ಲುವುದಿಲ್ಲ'' ಎಂಬ ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರ ಅಭಿಪ್ರಾಯವನ್ನೂ ಉಲ್ಲೇಖಿಸಿದ್ದಾರೆ.[29]

ಉದಯಾದಿತ್ಯಾಲಂಕಾರವನ್ನು ನಾಗವರ್ಮನು ಬರೆದನೆನ್ನಲು ಅವರು ಹೇಳುವ ಆಧಾರ 47ನೆಯ ಪದ್ಯದಲ್ಲಿನ ''ನೋಡಾವಗಮುದೆಗನರೂಪಂ ಭಾವಿಸುವೊಡೆ ಕೆಳದಿ ತನ್ಮಯಂ ಜಗಮೆಲ್ಲಂ'' ಎಂಬ ಭಾಗ ಮತ್ತು ''ಅಬ್ಬಲೋಚನೇ'' ಎಂದು ಕೊನೆ ಯಾಗುವ 48ನೆಯ ಪದ್ಯ. ಕವಿ ತನಗರಿವಿಲ್ಲದಂತೆ ಪತ್ನಿಯನ್ನು ಸಂಬೋಧಿಸಿ ಬರೆದಿದ್ದರೂ, ಮತ್ತೊಮ್ಮೆ ಓದಿದಾಗ ಅವನಿಗೆ ತನ್ನ ತಪ್ಪು ಅರಿವಾಗದಿರುತ್ತಿರ ಲಿಲ್ಲಬಹುಶಃ ಈ ಪದ್ಯದಲ್ಲಿನ 'ಕೆಳದಿ' ಎನ್ನುವ ಪದ ಕವಿಯ ಪತ್ನಿಯ ಸಂಬೋಧನೆ ಇರಲಾರದು. ''ನೋಡಾವಗಂ...... ಕೆಳದಿ ತನ್ಮಯಂ ಜಗಮೆಲ್ಲಂ'' ಎನ್ನುವ ಭಾಗ ಉದೆಗನಲ್ಲಿ ಅನುರಾಗವುಳ್ಳ ನಾಯಿಕೆ ತನ್ನ ಕೆಳದಿಗೆ ಹೇಳಿದಂತಿದ್ದು ಅಲಂಕಾರಕ್ಕೆ ಉದಾಹರಣೆಯೆನ್ನಬಹುದು. ಶ್ರೀ ಸೀತಾರಾಮಯ್ಯನವರು ಈ ಲಕ್ಷ್ಯ ಅಷ್ಟು ಸಮರ್ಪಕವಾಗಿಲ್ಲವೆಂದಿದ್ದಾರೆ. ಇದೇ ರೀತಿ ಅಭಿಪ್ರಾಯವಿದ್ದವರು ಯಾರೋ 48ನೆಯ ಪದ್ಯವನ್ನು ರಚಿಸಿ ಸೇರಿಸಿರಬಹುದು. ಈ ಪದ್ಯ 'ಗ' ಪ್ರತಿಯಲ್ಲಿಲ್ಲವೆಂದು 'ಕ' ಮುದ್ರಣದ ಸಂಪಾದಕರು ಹೇಳಿರುವುದೂ ಈ ಪದ್ಯ ಪ್ರಕ್ಷಿಪ್ತವೆನ್ನುವುದಕ್ಕೆ ಉಪಷ್ಟಂಭಕನಾಗಿ ಇದೆ.

ಅನಗತ್ಯ ಹೆಚ್ಚಿಗೆ ಉದಾಹರಣೆಯಾದುದರಿಂದ 63ನೆಯ ಪದ್ಯ ಪ್ರಕ್ಷಿಪ್ತವಿರಬಹುದೆಂಬ ಸೀತಾರಾಮಯ್ಯನವರ ಅಭಿಪ್ರಾಯ 48ನೆಯ ಪದ್ಯಕ್ಕೂ ಅನ್ವಯಿಸುತ್ತದೆ.[30] ಈ ಎರಡು ಪದ್ಯಗಳನ್ನು (47, 48) ಬಿಟ್ಟರೆ, ನಾಗವರ್ಮನು ಉದಯಾದಿತ್ಯಾಲಂಕಾರದ ಕರ್ತೃವೆನ್ನಲು ಆಧಾರವಿಲ್ಲವಾದುದರಿಂದ ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ಅಭಿಪ್ರಾಯವೇ ಸರಿಯಾಗಿದೆ. "ಅರಸಂ ರಕ್ಕಸಗಂಗಂ" ಇತ್ಯಾದಿ ಪದ್ಯಗಳ ವಿಷಯವನ್ನು ಈಗಾಗಲೇ ಪರಿಶೀಲಿಸಿಯಾಗಿದೆ.

ಒಟ್ಟಿನಲ್ಲಿ, ವಸ್ತುನಿಷ್ಠದೃಷ್ಟಿಯಿಂದ ನೋಡಿದರೆ, ಛಂದೋಂಬುಧಿ ಕಾದಂಬರಿಗಳನ್ನು (ಕ್ರಿ.ಶ. ಹತ್ತನೆಯ ಶತಮಾನದ ಕೊನೆ ಮತ್ತು ಹನ್ನೊಂದನೆಯ ಶತಮಾನದ ಆದಿಯಲ್ಲಿದ್ದ) ಒಬ್ಬನೇ ಬರೆದಿರುವುದು ಅಸಂಭವವಲ್ಲ; ಆದರೆ 'ಇದಮಿತ್ಥಂ' ಎಂದು ನಿರ್ಧರಿಸಲು ಸಾಧನಗಳು ಸಾಲವು ಎಂಬ ಪ್ರೊ. ವೆಂಕಣ್ಣಯ್ಯನವರ ಮಾತು ಇಂದಿಗೂ ನಿಜ. ಎರಡೂ ಏಕಕರ್ತೃಕಗಳಾಗಿರುವುದೇ ಹೆಚ್ಚು ಸಂಭಾವ್ಯವೆಂದು ನನ್ನ ಅಭಿಪ್ರಾಯ.

ಎರಡನೆಯ ನಾಗವರ್ಮ

ವರ್ಧಮಾನ ಪುರಾಣದ ಕಾಲ

ವರ್ಧಮಾನ ಪುರಾಣ ಸಿಕ್ಕುವುದಕ್ಕೆ ಮುಂಚೆ ಕಾವ್ಯಾವಲೋಕನಾದಿಗಳ ಕರ್ತೃ ನಾಗವರ್ಮನ ಕಾಲವನ್ನು ಅವನ ಗ್ರಂಥಗಳಲ್ಲಿ ಉದಾಹೃತರಾದ ಇತರ ಗ್ರಂಥಕರ್ತೃಗಳ ಮತ್ತು ಅವನನ್ನು ಹೆಸರಿಸಿರುವ ಇತರ ಕವಿಗಳ ಕಾಲದ ಆಧಾರದ ಮೇಲೆ ಊಹಿಸಬೇಕಾಗಿತ್ತು. ವರ್ಧಮಾನ ಪುರಾಣದಲ್ಲಿ ಕವಿಯೇ ಗ್ರಂಥ ಪರಿಸಮಾಪ್ತಿ ಕಾಲವನ್ನು ಕೊಟ್ಟಿರುವುದರಿಂದ, ಈಗ ಅದಕ್ಕೆ ಪ್ರಾಮುಖ್ಯವನ್ನು ಕೊಟ್ಟು ಇತರ ಪ್ರಮಾಣಗಳನ್ನು ಅದರೊಡನೆ ಸಮನ್ವಯ ಮಾಡಲು ಯತ್ನಿಸುವುದು ನ್ಯಾಯವಾಗಿದೆ. ಆ ಗ್ರಂಥದ ಸಂಪಾದಕರು ಶ್ರೀ ಬಿ. ಎಸ್. ಸಣ್ಣಯ್ಯನವರ ಪ್ರಕಾರ, ಷೋಡಶಾಶ್ವಾಸದ 47ನೆಯ ಪದ್ಯ ಹಸ್ತಪ್ರತಿಯಲ್ಲಿ ಇಂತಿದೆ —

> ವಸುವರ್ಗಾಂಕಮಿದ....... ತೀತಳಕಭೂಭೃದ್ವತ್ಸರಂ ಚಿತ್ರಭಾ।
> ನುಸಮಾಖ್ಯಾಬ್ಧಕಮಾಶ್ವಯುಗ್ಬಹುಳ ಷಷ್ಠೀವಾಸರಂ ತಾ ಪುನ ॥
> ರ್ವಸು ರುಕ್ಷಂ ಸುರಮಂತ್ರಿವಾರಮಭಿಜಿಲ್ಲಗ್ನೋದಯಂ ಕೂಡೆ ವ।
> ರ್ತಿಸೆ, ಳ್ದಂ ಕವಿತಾಗುಣೋದಯನಿದಂ ಚೆಲ್ವಾಗೆ ತಾತ್ಪರ್ಯದಿಂ ॥3॥

ಚಿತ್ರಭಾನು ಸಂವತ್ಸರದ ಆಶ್ವಯುಜ ಬಹುಳ ಷಷ್ಠೀ, ಪುನರ್ವಸು ನಕ್ಷತ್ರ,

ಸುರಮಂತ್ರಿವಾರ, ಅಭಿಜಿಲ್ಲಗ್ನೋದಯ ಇಷ್ಟು ಭಾಗ ಸ್ಪಷ್ಟವಾಗಿದೆ. ಆದರೆ ಮೊದಲ ಪಾದದಲ್ಲಿ ಒಂದಕ್ಷರ ಹೋಗಿರುವುದರಿಂದ, ಆ ಪಾದವನ್ನು ಬೇರೆ ಬೇರೆ ವಿದ್ವಾಂಸರು ತಮಗೆ ಸರಿತೋರಿದಂತೆ ತಿದ್ದಿ ಶಕವರ್ಷ ನಿರ್ಣಯ ಮಾಡಿದ್ದಾರೆ. ಕಾಲ ನಿರ್ಣಯ ಮತ್ತು ತಿದ್ದಿದ ಪಾಠಗಳು ಹೀಗಿವೆ —

I ಕಾಲ, ಶಾಲಿವಾಹನ ಶಕ ವರ್ಷ 1084

ವಸುವರ್ಗಾಂ[ತ] ಮಿ [ದಾಕ್ಷಿ] ತೀತಳಕ ಭೂಭೃದ್ವತ್ಸರಂ—ಡಾ॥ ಸಂಗಮೇಶ ಬಿರಾದಾರ
ವಸುವರ್ಗಾಂ [ತವಿಧುಪ್ರ] ತೀತ [ಶ] ಕ ಭೂಭೃದ್ವತ್ಸರಂ—ಶ್ರೀ ಹೆಚ್. ದೇವೀರಪ್ಪ

II ಕಾಲ ಶಾಲಿವಾಹನ ಶಕ ವರ್ಷ 1024

ವಸುವರ್ಗಾಂಕಮಿದ [ರ್ಧ] ತೀತ [ಶ] ಭೂಭೃದ್ವತ್ಸರಂ — ಶ್ರೀ ಬಿ. ಬಿ. ಮಹೀಶವಾಡಿ - 34

III ಕಾಲ, ಶಾಲಿವಾಹನ ಶಕ ವರ್ಷ 964

ವಸುವರ್ಗಾಂಕಮಿದ [ಂತ] ತೀತ [ಶ] ಕ ಭೂಭೃದ್ವತ್ಸರಂ—ಶ್ರೀ ಬಿ. ಎಸ್. ಸಣ್ಣಯ್ಯ - 35
ವಸುವರ್ಗಾಂಕಮಿ [ರಲ್ಕ] ತೀತ [ಶ] ಕ ಭೂಭೃದ್ವತ್ಸರಂ—ಶ್ರೀ ಬಿ. ಎಸ್. ಸಣ್ಣಯ್ಯ - 35
ವಸುವರ್ಗಾಂ [ತನಿಧಿಪ್ರ] ತೀತ [ಶ] ಕ ಭೂಭೃದ್ವತ್ಸರಂ—ಡಾ॥ ಎಂ. ಎಂ. ಕಲಬುರ್ಗಿ- 36
ವಸುವರ್ಗಾಂಕಮಿದ [ಕ್ಕ] ತೀತ [ಶ] ಕ ಭೂಭೃದ್ವತ್ಸರಂ—ಶ್ರೀ ಬಿ. ಬಿ. ಮಹೇಶವಾಡಿ - 34
ವಸುವರ್ಗಾಂಕಮಿದ [ವ್ಯ] ತೀತ [ಶ] ಕ ಭೂಭೃದ್ವತ್ಸರಂ—ಶ್ರೀಎಂ. ವಿ. ಸೀತಾರಾಮಯ್ಯ- 37

ಡಾ॥ ಬಿರಾದಾರರು 'ಕ್ಷಿತೀತಳಕ'ವೆಂದರೆ ಪಾತಾಳವೆಂದು ಅರ್ಥ ಮಾಡಿರುವುದೂ, ''ಸುರಮಂತ್ರಿವಾರ''ವೆಂದರೆ ಗುರುವಾರವಲ್ಲ, ಸೋಮವಾರವೆಂದು ಹೇಳಿರುವುದೂ ಸರಿಯಲ್ಲವೆಂದು ಶ್ರೀ ಎಂ. ವಿ. ಸೀತಾರಾಮಯ್ಯನವರೂ ಶ್ರೀ ದೇವೀರಪ್ಪನವರೂ, ತಮ್ಮ ಲೇಖನಗಳಲ್ಲಿ ಸ್ಪಷ್ಟಪಡಿಸಿದ್ದಾರೆ. 'ಸುರಮಂತ್ರಿ' ಎಂಬ ಪದಕ್ಕೆ 'ಬೃಹಸ್ಪತಿ' ಎಂಬ ಅರ್ಥವಿದ್ದರೂ ಸಾಹಿತ್ಯಾಧಾರವಿಲ್ಲವೆಂದು ಆಕ್ಷೇಪಿಸಿರುವ ಡಾ॥ ಬಿರಾದಾರರು, ನಿಘಂಟಿನಲ್ಲೂ ಇಲ್ಲದ ಸಾಹಿತ್ಯಾಧಾರವೂ ಇಲ್ಲದ 'ಸೋಮ' ಎಂಬರ್ಥವನ್ನು ಕೊಟ್ಟಿರುವುದು ಆಶ್ಚರ್ಯಕರ.

ಶ್ರೀ ದೇವೀರಪ್ಪನವರು 'ವಸು' ಎಂಬ ಪದಕ್ಕೆ ಅಗ್ನಿ ಎಂಬ ಅರ್ಥವನ್ನು ತೆಗೆದುಕೊಂಡು, ಅದು ನಾಲ್ಕರ ಸಂಕೇತವೆನ್ನುತ್ತಾರೆ. 'ವಸು'ವಿಗೆ ಅಗ್ನಿ ಎನ್ನುವುದು ಅಪ್ರಸಿದ್ಧಾರ್ಥ. 'ಅಗ್ನಿ' ಅಥವಾ ಅದರ ಸಮಾನಾರ್ಥಕ ಪದಗಳನ್ನು ಗಣಿತ ಗ್ರಂಥಗಳಲ್ಲಿ ಮೂರರ ಸಂಕೇತವಾಗಿ ಮಾತ್ರ ಉಪಯೋಗಿಸುತ್ತಾರೆ. ಸ್ವಯಂ ಕೋಶಕಾರನೂ, ಲಾಕ್ಷಣಿಕನೂ ಆದ ನಾಗವರ್ಮನು ಅಪ್ರಸಿದ್ಧಾರ್ಥದಲ್ಲಿ ಪದವನ್ನು ಉಪಯೋಗಿಸಿ,

ರೂಢಿಯಲ್ಲಿಲ್ಲದ ಸಂಖ್ಯಾಸೂಚಕವಾಗಿ ಖಂಡಿತವಾಗಿಯೂ ಬಳಸಿರಲಾರ.[38] 'ವರ್ಗ' ಎಂಬ ಪದವನ್ನು ಸಂಖ್ಯಾವಿಶಿಷ್ಟವಾಗಿ ಚತುರ್ವರ್ಗ, ಅಷ್ಟವರ್ಗ, ಈ ರೀತಿ ಉಪಯೋಗಿಸುತ್ತಾರೆಯೇ ಹೊರತು, 'ವರ್ಗ' ಯಾವ ಸಂಖ್ಯೆಗೂ ಸಂಕೇತವಲ್ಲವೆಂಬಂಶವನ್ನು ಶ್ರೀಮಾನ್ ಸೀತಾರಾಮಯ್ಯನವರು ಈಗಾಗಲೇ ಹೇಳಿದ್ದಾರೆ. ಶ್ರೀ ದೇವೀರಪ್ಪನವರು ನಿರ್ದೇಶಿಸಿರುವ 'ಜಾತಕತಿಲಕ'ದ 363ನೆಯ ಪುಟದಲ್ಲಿಯೂ ''ಅಷ್ಟಕವರ್ಗ'' ಎಂದೇ ಇದೆ. 'ಅಂತ' 'ಅಗ್ರ' ಎಂಬ ಪದಗಳನ್ನು ಸಮಾನಾರ್ಥಕವಾಗಿ ಭಾವಿಸಿ 'ಅಂತ'ಕ್ಕೆ ಸೊನ್ನೆ ಎಂಬರ್ಥ ಮಾಡಿರುವುದೂ ಸರಿಯಾಗಿ ಕಾಣುವುದಿಲ್ಲ. 'ಅಗ್ರ'ಕ್ಕೆ ಮೊದಲು ಎಂದೂ 'ಅಂತ'ಕ್ಕೆ ಕೊನೆ ಎಂದೂ ಅರ್ಥವಿರುವುದರಿಂದ ಇವು ವಿರೋಧಾರ್ಥಕಗಳು.[39] ಹೀಗೆ, 'ವಸುವರ್ಗಾಂತವಿಧು'' ಎಂಬ ಪಾಠವನ್ನಿಟ್ಟುಕೊಂಡು ಶಾಲಿವಾಹನಶಕ 1084 ಎಂದು ಕಾಲನಿರ್ಣಯ ಮಾಡುವುದು ಸರಿಯಾಗದು.

ಶಾಲಿವಾಹನ ಶಕ 1084ಕ್ಕೆ ಸರಿಯಾದ ಚಿತ್ರಭಾನುವಿನಲ್ಲಿ, ಸ್ವಾಮಿಕಣ್ಣುಪಿಳ್ಳೆಯವರ Ephemerisನಂತೆ, ಆಶ್ವಯುಜ ಬಹುಳ ಷಷ್ಠೀ ದಿವಸ ಸೋಮವಾರ ಆರ್ದ್ರಾ ನಕ್ಷತ್ರ, ಆದರೆ ನಾಗವರ್ಮ ಹೇಳಿರುವುದು ಗುರುವಾರ ಪುನರ್ವಸು. ಇದಕ್ಕೆ ಶ್ರೀ ದೇವೀರಪ್ಪನವರು ಹೇಳಿರುವ ಸಮಾಧಾನ : ಸ್ವಾಮಿಕಣ್ಣು ಪಿಳ್ಳೆಯವರ ಲೆಕ್ಕಾಚಾರ ''ನೂರಕ್ಕೆ ನೂರು ಸರಿಯಾಗಿರುವುದಿಲ್ಲ''ವೆಂದು. ಆದರೆ ಪಿಳ್ಳೆಯವರ ಲೆಕ್ಕಾಚಾರ ಇಲ್ಲಿ ತಪ್ಪೋ ಸರಿಯೋ ಎಂದು ನಿರ್ಣಯಿಸಲು ಶ್ರೀ ದೇವೀರಪ್ಪನವರು ಯಾವ ಪ್ರಯತ್ನವನ್ನೂ ಮಾಡಿದಂತೆ ತೋರುವುದಿಲ್ಲ. ''ಸಣ್ಣಪುಟ್ಟ ವ್ಯತ್ಯಾಸಗಳನ್ನು ಕುರಿತು ''ಕವಿಚರಿತೆಕಾರರ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ. ಈ ಅಭಿಪ್ರಾಯ ಮಹತ್ವಪೂರ್ಣವಾದುದು ನಿಜ. ಆದರೆ ಶಾಸ್ತ್ರಜ್ಞರಲ್ಲದ ಕವಿಗಳು ಇಂತಹ ತಪ್ಪುಗಳನ್ನು ಮಾಡಬಹುದೇ ಹೊರತು, ನಾಗವರ್ಮನಂತಹ ವಿದ್ವಾಂಸನು ವಾರ, ನಕ್ಷತ್ರಗಳನ್ನು ತಪ್ಪಾಗಿ ಹೇಳಿರುವುದು ಅಸಂಭಾವ್ಯ. ''ನಾಗವರ್ಮನು ಸೂಚಿಸಿರುವ ನಕ್ಷತ್ರ ವಾರಗಳೇ ಸರಿಯಾದುದಾಗಿರ ಬೇಕು'' ಎಂದು ಅವರೇ ಹೇಳಿಯೂ, ಕವಿಚರಿತೆಕಾರರ ಅಭಿಪ್ರಾಯವನ್ನು ಏಕೆ ಉಲ್ಲೇಖಿಸಿದಾರೋ ತಿಳಿಯುವುದಿಲ್ಲ.

ಶ್ರೀ ಮಹೀಶವಾಡಿಯವರು ವಸು = 32 ಎಂದು ತೆಗೆದುಕೊಂಡಿರುವುದಕ್ಕೂ ಅಪ್ರಸಿದ್ಧ ಸಂಕೇತವೆನ್ನುವ ಆಕ್ಷೇಪ ಅನ್ವಯಿಸುತ್ತದೆ. ಅವರು ವಸುವರ್ಗ = 1024 ಎಂದು ತೆಗೆದುಕೊಂಡು, 'ಅರ್ಥತೀತ' ಎಂದರೆ ಅರ್ಧಕಳೆದಿದೆಯೆಂದು ಅರ್ಥ ಮಾಡಿದ್ದಾರೆ. ಅರ್ಧ+ಅತೀತ ಎಂದಿದ್ದರೆ ''ಅರ್ಧಾತೀತ''ವೆಂದಾಗಬೇಕು; ಎರಡೂ ಸಂಸ್ಕೃತ ಪದಗಳಾಗಿರುವುದರಿಂದ, ಲೋಪಸಂಧಿಯಾಗಿ 'ಅರ್ಧತೀತ' ಎಂದಾಗುವುದಿಲ್ಲ. ಇದೂ

ಅಲ್ಲದೆ, ಶಕಸಂವತ್ಸರಗಳನ್ನು ಸೂಚಿಸುವಾಗ ಗತಸಂವತ್ಸರವನ್ನಾಗಲೀ ವರ್ತಮಾನ ಸಂವತ್ಸರ ವನ್ನಾಗಲೀ ಹೇಳುತ್ತಾರೆಯೇ ಹೊರತು ಅರ್ಧಕಳೆದಿದೆಯೆಂದು ಸೂಚಿಸುವುದಿಲ್ಲ. ಆಶ್ವಯುಜ ಬಹುಳ ಷಷ್ಠಿಗೆ ಅರ್ಧವರ್ಷಕ್ಕಿಂತಲೂ 21 ದಿನಗಳು ಹೆಚ್ಚಾಗಿ ಕಳೆದಿರುತ್ತವೆ. ಇಷ್ಟೇ ಅಲ್ಲದೆ ವಾರವು ಶನಿವಾರವಾಗುವುದು. ನಾಗವರ್ಮನು ಹೇಳಿದಂತೆ ಗುರುವಾರವಲ್ಲ. ("ಸುರಮಂತ್ರಿವಾರ"ವೆಂದರೆ ಶನಿವಾರವೆಂದು ತಿಳಿಯಬೇಕಾಗುತ್ತದೆ" ಎನ್ನುವ ಶ್ರೀ ಮಹೀಶವಾಡಿಯವರ ಅಭಿಪ್ರಾಯ ಸರಿಯಲ್ಲ). ನಕ್ಷತ್ರ ಆರ್ದ್ರಾ, ಪುನರ್ವಸುವಲ್ಲ ಎಂದೂ ಅವರೇ ಹೇಳಿದ್ದಾರೆ.

ಈ ಎಲ್ಲ ಕಾರಣಗಳಿಂದ ನಾಗವರ್ಮನು ಹೇಳಿರುವ ಚಿತ್ರಭಾನು. ಶಾ.ಶ. 1084 ಆಗಲೀ, 1024 ಆಗಲೀ ಅಲ್ಲವೆನ್ನಬೇಕಾಗುವುದು.

ಮೇಲಿನ ಪದ್ಯದಂತೆ ಗ್ರಂಥಸಮಾಪ್ತಿಕಾಲ ಶಾ.ಶ. 964 ಎನ್ನುವುದನ್ನು ಒಪ್ಪದೆ ಕೆಲವು ವಿದ್ವಾಂಸರು ಈ ರೀತಿ ಆಕ್ಷೇಪಿಸಿದ್ದಾರೆ :

1. 'ವಸು' ಎಂಬುದಕ್ಕೆ 32 ಎಂದು ಅರ್ಥ ಮಾಡಲು ಜೈನಶಾಸ್ತ್ರಾಧಾರವಿದೆ. "8 ಎಂದು ಅರ್ಥ ಹಚ್ಚುವುದು ಸರಿಯಲ್ಲ, ಅದಕ್ಕೆ ಆಧಾರವಿಲ್ಲ" — ಶ್ರೀ ಮಹೀಶವಾಡಿ.
2. "ಅಂಕಗಳನ್ನು ಸಂಕೇತಿಸುವ ಪದಗಳನ್ನು ವರ್ಗಿಸುವುದಾಗಲಿ (ವಸು × ವಸು) ಅಂಕಗಳನ್ನೇ ವರ್ಗಿಸುವುದಾಗಲೀ (8×8) ನಮ್ಮ ಕವಿಗಳ ಪದ್ಧತಿಯಲ್ಲ". "ಏಕದ ಸ್ಥಾನದಲ್ಲಿಯೋ ದಶಕದ ಸ್ಥಾನದಲ್ಲಿಯೋ ಶತಕದ ಸ್ಥಾನದಲ್ಲಿಯೋ ಸಹಸ್ರದ ಸ್ಥಾನದಲ್ಲಿಯೋ10ನ್ನೂ ಅದಕ್ಕಿಂತ ಹೆಚ್ಚಿನ ಅಂಕಗಳನ್ನೂ ಇಡುವುದಕ್ಕೆ ಬರುವುದಿಲ್ಲ. ಹತ್ತಕ್ಕೂ ಅದರ ಮುಂದಿನ ಅಂಕಗಳಿಗೂ ಸಂಕೇತಗಳಿರುತ್ತವೆಯಾದರೂ ಅವನ್ನು ಪ್ರಸಕ್ತವೃತ್ತದಂತಹ ಕಾಲ ಸೂಚಕಗಳಲ್ಲಿ ಬಳಸುವುದಕ್ಕಾಗುವುದಿಲ್ಲ; ಬಳಸಬಾರದು" — ಶ್ರೀದೇವೀರಪ್ಪ.
3. 'ಸುರಮಂತ್ರಿ'ಗೆ ಗುರು ಎಂಬ ಅರ್ಥ ಮಾಡಿರುವುದು ಸರಿಯಲ್ಲ. Monier Williams ಇದಕ್ಕೆ ಸಾಹಿತ್ಯಾಧಾರವಿಲ್ಲವೆಂದಿದ್ದಾರೆ. ಶಾಶ. 964ರಲ್ಲಿ ಆಶ್ವಯುಜ ಬಹುಳ ಷಷ್ಠಿಯ ನಕ್ಷತ್ರ ಆರ್ದ್ರಾ, ಪುನರ್ವಸುವಲ್ಲ— ಡಾ|| ಬರಾದಾರ.

ಮೇಲಿನ ಆಕ್ಷೇಪಗಳ ನಿರಾಕರಣ

ಸಂಖ್ಯಾಸೂಚಕ ಪದಗಳನ್ನು ಗಣಿತ ಮತ್ತು ಜ್ಯೋತಿಶ್ಶಾಸ್ತ್ರಜ್ಞರು (Mathematicians and Astronomers) ಯಾವ ರೀತಿ ಉಪಯೋಗಿಸುತ್ತಾರೋ ಆ ರೀತಿಯಲ್ಲಿ ಕವಿಗಳೂ ಉಪಯೋಗಿಸಬೇಕೇ ಹೊರತು, ಕವಿಗಳ ಪದ್ಧತಿಯೆಂದು ಬೇರೆ ಇಲ್ಲ. ಒಂದು ಪದಕ್ಕೆ ಅನೇಕಾರ್ಥಗಳಿದ್ದರೂ ಯಾವ ಪ್ರಸಿದ್ಧವಾದ ಅರ್ಥದಲ್ಲಿ ಹಿಂದಿನವರು ಸಂಖ್ಯಾಸೂಚಕ ವಾಗಿ ಉಪಯೋಗಿಸಿದ್ದಾರೋ ಆ ಅರ್ಥದಲ್ಲಿ ಉಪಯೋಗಿಸದೆ ಬೇರೆ ಅರ್ಥದಲ್ಲಿ

ಉಪಯೋಗಿಸಿದರೆ ಗೊಂದಲವಾಗುವುದರಿಂದ ಹಾಗೆ ಉಪಯೋಗ ಮಾಡುವುದು ಸಲ್ಲದು. ಯಾವುದಾದರೂ ಪದ ಎರಡು ಸಂಖ್ಯಾಸೂಚಕ ಪದಗಳಿಗೆ ಸಮಾನಾರ್ಥಕ ವಾಗಿದ್ದರೆ ಅದನ್ನು ಉಪಯೋಗಿಸಬಾರದು. ಇದು ಎಲ್ಲ ಗಣಿತಶಾಸ್ತ್ರಜ್ಞರೂ ಪಾಲಿಸಿಕೊಂಡು ಬಂದಿರುವ ನಿಯಮ. ಉದಾಹರಣೆಗೆ, 'ಅಗ್ನಿ' ಮತ್ತು ಅದರ ಸಮಾನಾರ್ಥಕ ಪದಗಳನ್ನು 3ನ್ನು ನಿರ್ದೇಶಿಸುವುದಕ್ಕೂ, 'ಸೂರ್ಯ' ಮತ್ತು ಅದರ ಪರ್ಯಾಯ ಪದಗಳನ್ನು 12ನ್ನು ನಿರ್ದೇಶಿಸುವುದಕ್ಕೂ ಉಪಯೋಗಿಸಿದ್ದಾರೆ. 'ವಿಭಾವಸು', 'ಚಿತ್ರಭಾನು' ಈ ಪದಗಳಿಗೆ ಅಗ್ನಿ, ಸೂರ್ಯ ಎಂಬ ಎರಡೂ ಅರ್ಥಗಳಿರುವುದರಿಂದ ಆ ಪದಗಳನ್ನು ಸಂಖ್ಯಾಸೂಚಕಗಳಾಗಿ ಉಪಯೋಗಿಸಿಲ್ಲ.

'ವಸು' ಎಂದರೆ 32 ಎಂದು ಅರ್ಥ ಮಾಡಲು ಜೈನಶಾಸ್ತ್ರಾಧಾರವಿರಬಹುದು. ಆದರೆ 32ನ್ನು ಸೂಚಿಸಲು ಅದನ್ನು ಪ್ರಯೋಗಿಸಿರುವುದು ಕಂಡುಬರುವುದಿಲ್ಲ. ಶ್ರೀ ಮಹೀಶವಾಡಿಯವರೂ ಯಾವ ಪ್ರಯೋಗವನ್ನೂ ಉದಾಹರಿಸಿಲ್ಲ. ಪುರಾಣಗಳಲ್ಲೂ, ಮಹಾಭಾರತದಲ್ಲೂ ಅಷ್ಟವಸುಗಳ ಉಲ್ಲೇಖವಿದೆ. ಜೈನನಾದ ಆದಿಪಂಪನೂ, ವಿಕ್ರಮಾರ್ಜುನ ವಿಜಯದಲ್ಲಿ, ಎಂಟನೆಯ ವಸುವು ವಸಿಷ್ಠನ ಶಾಪದಿಂದ ಭೀಷ್ಮನಾಗಿ ಹುಟ್ಟಿದನೆಂದು ಹೇಳಿದ್ದಾನೆ.[40] ಗಣಿತ ಮತ್ತು ಜ್ಯೋತಿಶ್ಶಾಸ್ತ್ರಗಳಲ್ಲಿ 8ನ್ನು ಸೂಚಿಸಲು 'ವಸು' ಎಂಬ ಪದವನ್ನು ಬಹಳ ಕಡೆಗಳಲ್ಲಿ ಉಪಯೋಗಿಸಿದ್ದಾರೆ.

ದೊಡ್ಡ ಸಂಖ್ಯೆಗಳನ್ನು ಸೂಚಿಸುವಾಗ ಅಂಕಗಳನ್ನು ವರ್ಗಿಸುವುದಷ್ಟೇ ಅಲ್ಲ, ಘನವನ್ನು (Cube) ಮಾಡುವುದೂ 10ಕ್ಕಿಂತ ಹೆಚ್ಚಿನ ಸಂಖ್ಯಾಸೂಚಕಗಳನ್ನು ಉಪಯೋಗಿಸುವುದೂ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ''ಅಂಕಾನಾಂ ವಾಮತೋ ಗತಿಃ'' ಎಂಬ ಸೂತ್ರಾನುಸಾರವಾಗಿ, ಸಂಖ್ಯಾಸೂಚಕ ಪದಗಳಿಂದ ನಿರ್ದಿಷ್ಟವಾದ ಸಂಖ್ಯೆಗಳನ್ನು ಒಂದರ ಎಡಕ್ಕೊಂದು ಬರೆದುಕೊಂಡು ಓದಬೇಕೇ ಹೊರತು, ಏಕ, ದಶಕ ಇತ್ಯಾದಿ ಒಂದೊಂದು ಸ್ಥಾನದಲ್ಲಿನ ಅಂಕವನ್ನು ಸೂಚಿಸಲೂ ಒಂದೊಂದು ಪದವನ್ನು ಉಪಯೋಗಿಸಬೇಕಾಗಿಲ್ಲ. ಆದುದರಿಂದ 10 ಅಥವಾ ಹೆಚ್ಚಿನ ಸಂಖ್ಯೆಯ ಸಂಕೇತ ಪದಗಳನ್ನು ಉಪಯೋಗಿಸ ಬಾರದೆಂಬ ಶ್ರೀ ದೇವೀರಪ್ಪನವರ ಅಭಿಪ್ರಾಯ ನಿರಾಧಾರವಾದುದು.

ಜ್ಯೋತಿಶ್ಶಾಸ್ತ್ರ ಗ್ರಂಥಗಳಿಂದ ಕೆಲವು ಉದಾಹರಣೆಗಳನ್ನು ಕೆಳಗೆ ಕೊಟ್ಟಿದೆ :

1. ಖಚತುಷ್ಕರದಾರ್ಣವಾಃ (4320000)
   0000, 32, 4
   ವಸ್ವಗ್ನಿಯಾಮಾಶ್ವಿಶಿಖಿದಸ್ರಕಾಃ (232238)
   8, 3, 2, 2, 3, 2 — ಸೂರ್ಯಸಿದ್ಧಾಂತ (ಸು. ಕ್ರಿ.ಶ. 400)[41]

2. ಭವರೂಪಾಗ್ನ್ಯಷ್ಟಿಹೃತೇ (163111ರಿಂದ ಭಾಗಿಸಿದರೆ)
11, 1, 3, 16 — ವರಾಹಮಿಹಿರ (ಸು. ಕ್ರಿ.ಶ. 505)[42]

3. ಖಖಷಡ್ಘನ ಭಾಗೇನ (21600ನೇ ಭಾಗದಿಂದ)
0,0, 6ರ ಘನ —ಭಾಸ್ಕರ I (ಸು. ಕ್ರಿ.ಶ. 600)[43]

4. ಶಾಕೇ ನಖಾಬ್ಧಿರಹಿತೇ (ಶಕವರ್ಷಗಳಲ್ಲಿ 420ನ್ನು ಕಳೆದು)
20, 4
ಕಲ್ಯಾಬ್ದಾತ್ ಖಖ ಷಟ್ಕೃತಿಹೀನಾತ್ (ಕಲ್ಯಾದಿ ವರ್ಷಗಳಲ್ಲಿ 3600ನ್ನು ಕಳೆದು)
0,0, 6ರ ವರ್ಗ — ಶಿಷ್ಯಧೀವೃದ್ಧಿದ ತಂತ್ರ (ಲಲ್ಲ) (ಕ್ರಿ.ಶ. 7-8 ಶತಮಾನ)[44]

5. ತಿಥಿಕೃತಿ ನಿಹತಂ (225ರಿಂದ ಗುಣಿಸಿದ್ದು)
15ರ ವರ್ಗ —ಪರಮೇಶ್ವರ (ಕ್ರಿ.ಶ. 1431)[45]

6. ಶಾಕೇತ್ರ್ಯಬ್ಧೀಂದ್ರ ತುಲ್ಯೇ (ಶಕ 1443ರಲ್ಲಿ)
3, 4, 14
ಶಾಕೇಷ್ವಾದ್ರಿಮನೂನ್ಮಿತೇ (ಶಕ 1478ರಲ್ಲಿ)
8, 7, 14 — ಗಣೇಶ ದೈವಜ್ಞ (ಕ್ರಿ.ಶ. 15 ಶತಮಾನ)[46]

7. ತಿಥಿ ವಸುಚಂದ್ರೋನ್ಮಿತೇ ಶಕ ನೃಪಾಬ್ದೇ (ಶಕ 1815ರಲ್ಲಿ)
15, 8, 1 — ಜ್ಯೋತಿರ್ಗಣಿತ[47]

ಮೋನಿಯರ್ ವಿಲಿಯಮ್ಸ್ ಅವರಿಗೆ 'ಸುರಮಂತ್ರಿ' ಪದದ ಪ್ರಯೋಗ ಸಿಕ್ಕದಿರಬಹುದು. ಆದರೆ (ನಾಗವರ್ಮನು ವರ್ಧಮಾನ ಪುರಾಣವನ್ನು ರಚಿಸಿದ ಏಳು ವರ್ಷಗಳ ಅನಂತರ ಅಂದರೆ ಶಾ.ಶ. 971ರಲ್ಲಿ ರಚಿತವಾದ) ''ಜಾತಕ ತಿಲಕ''ದಲ್ಲಿ ಶ್ರೀಧರಾಚಾರ್ಯನು 'ಸುರಮಂತ್ರಿ' ಎಂಬ ಪದಕ್ಕೆ ಸಮಾನಾರ್ಥಕವಾದ ಪದಗಳನ್ನು 'ಗುರು'ವಿಗೆ ಪರ್ಯಾಯ ಪದಗಳನ್ನಾಗಿ ಪ್ರಯೋಗಿಸಿದ್ದಾನೆಂದು ದೇವೀರಪ್ಪನವರು ಈಗಾಗಲೇ ತಮ್ಮ ಲೇಖನದಲ್ಲಿ ಹೇಳಿದ್ದಾರೆ.[48]

ಇಷ್ಟರಿಂದಲೇ ವರ್ಧಮಾನ ಪುರಾಣದ ಕಾಲ ''ವಸುವರ್ಗಾಂಕ'' ಎಂದರೆ ಶಾ.ಶ. 964 ಎಂದು ಸಿದ್ಧವಾದರೂ, ಡಾ|| ಬಿರಾದಾರರು ಆ ವರ್ಷದಲ್ಲಿ ಇಷ್ಟು ದಿನದ ನಕ್ಷತ್ರ ಪುನರ್ವಸುವಾಗುವುದಿಲ್ಲವೆಂದು ಹೇಳಿರುವುದರಿಂದಲೂ, ಶ್ರೀ ದೇವೀರಪ್ಪ ನವರು ಸ್ವಾಮಿಕಣ್ಣು ಪಿಳ್ಳೆಯವರ ಕೋಷ್ಟಕದಲ್ಲಿನ ವಿವರಗಳು ಸರಿಯಿಲ್ಲದಿರ ಬಹುದೆಂದು ಸಂದೇಹವನ್ನು ವ್ಯಕ್ತಪಡಿಸಿರುವುದರಿಂದಲೂ, ನಾಗವರ್ಮನಿಗಿಂತ ಬಹಳ ಹಿಂದಿನಿಂದ ಇಂದಿನವರೆಗೂ ಪ್ರಚಾರದಲ್ಲಿರುವ ಸೂರ್ಯಸಿದ್ಧಾಂತವನ್ನು ಅನುಸರಿಸಿರುವ ''ಜ್ಯೋತಿಸ್ಸಿದ್ಧಾಂತ ಸಂಗ್ರಹ''ವೆಂಬ ಕರಣಗ್ರಂಥದ ಪ್ರಕಾರ ಮತ್ತು ಸ್ವತಂತ್ರಕರಣ

ಗ್ರಂಥವಾದ "ಗ್ರಹಲಾಘವ"ದ ಪ್ರಕಾರ ಗ್ರಹಗಣಿತ ಮಾಡಿ ವಿವರಗಳನ್ನು ಕೆಳಗೆ ಕೊಟ್ಟಿರುತ್ತೇನೆ.[49]

1. ಶಾಲಿವಾಹನ ಗತಾಬ್ದ 1084 (ಗತ ಕಲ್ಯಬ್ದ 4263) ಚಿತ್ರಭಾನು ಆಶ್ವಯುಜ ಬಹುಳ ಷಷ್ಠೀ ಸೋಮವಾರವಾಗುತ್ತದೆ.

(ಜ್ಯೋತಿಸ್ಸಿದ್ಧಾಂತ ಸಂಗ್ರಹದಂತೆ)	(ಗ್ರಹಲಾಘವದಂತೆ)
ಸ್ಫುಟ ರವಿ ರಾಶ್ಯಾದಿ 6-3-38-35 (ಮಧ್ಯಾಹ್ನಕಾಲ)	6-3-22-57 (ಸೂರ್ಯೋದಯ)
ಗತಿ ಕಲಾದಿ 59-49	59-49
ಸ್ಫುಟಚಂದ್ರರಾಶ್ಯಾದಿ 2-11-21-53 (ಮಧ್ಯಾಹ್ನ ಕಾಲ)	2-8-15-48 (ಸೂರ್ಯೋದಯ)
ಗತಿ ಕಲಾದಿ 746-49	744-27
ಸೂರ್ಯೋದಯದಲ್ಲಿ ಷಷ್ಠೀ ಶೇಷ ಘಟೀ 37-8	ಘಟೀ 37-26
ಸೂರ್ಯೋದಯದಲ್ಲಿ ಆರ್ದ್ರಾ ಶೇಷ ಘಟೀ 56-21	ಘಟೀ 56-45

2. ಶಾಲಿವಾಹನ ಶಕ ಗತಾಬ್ದ 1024 (ಗತ ಕಲ್ಯಬ್ದ 4203) ಚಿತ್ರಭಾನು ಆಶ್ವಯುಜ ಬಹುಳ ಷಷ್ಠೀ ಶನಿವಾರವಾಗುತ್ತದೆ.

(ಜ್ಯೋತಿಸ್ಸಿದ್ಧಾಂತ ಸಂಗ್ರಹದಂತೆ)	(ಗ್ರಹಲಾಘವದಂತೆ)
ಸ್ಫುಟ ರವಿ 6-7-9-43 (ಮಧ್ಯಾಹ್ನ)	6-6-54-9 (ಸೂರ್ಯೋದಯ)
ಗತಿ 59-56	59-56
ಸ್ಫುಟ ಚಂದ್ರ 2-17-30-45 (ಮಧ್ಯಾಹ್ನ)	2-14-28-7 (ಸೂರ್ಯೋದಯ)
ಗತಿ 731-2	737-45
ಸೂರ್ಯೋದಯದಲ್ಲಿ ಷಷ್ಠೀ ಶೇಷ ಘಟೀ 23-31	23-33
ಸೂರ್ಯೋದಯದಲ್ಲಿ ಆರ್ದ್ರಾ ಶೇಷ 26-55	26-59

3. ಶಾಲಿವಾಹನ ಶಕ ಗತಾಬ್ದ 964 (ಗತಕಲ್ಯಬ್ದ 4143) ಚಿತ್ರಭಾನು ಆಶ್ವಯುಜ ಬಹುಳ ಷಷ್ಠೀ ಗುರುವಾರವಾಗುತ್ತದೆ.

(ಜ್ಯೋತಿಸ್ಸಿದ್ಧಾಂತ ಸಂಗ್ರಹದಂತೆ)	(ಗ್ರಹಲಾಘವದಂತೆ)
ಸ್ಫುಟರವಿ 6-10-41-19 (ಮಧ್ಯಾಹ್ನ)	6-10-25-41 (ಸೂರ್ಯೋದಯ)
ಗತಿ 60-5	60-3
ಸ್ಫುಟಚಂದ್ರ 2-19-33-52 (ಮಧ್ಯಾಹ್ನ)	2-15-54-28 (ಸೂರ್ಯೋದಯ)
ಗತಿ 813-28	819-10
ಸೂರ್ಯೋದಯದಲ್ಲಿ ಷಷ್ಠೀ ಶೇಷ ಘಟೀ 29-33	30-55
ಸೂರ್ಯೋದಯಲ್ಲಿ ಆರ್ದ್ರಾ ಶೇಷ ಘಟೀ 16-33	17-59

ಎರಡು ಕರಣ ಗ್ರಂಥಗಳ ಪ್ರಕಾರವಾಗಿಯೂ ಶಾ.ಶ. 1034 ಮತ್ತು ಶಾ.ಶ. 1024ರಲ್ಲಿ ವಾರ ಗುರುವಾರವಾಗುವುದಿಲ್ಲ; ಮತ್ತೂ ಷಷ್ಠೀ ಮುಗಿದ ಮೇಲೆ ಪುನರ್ವಸು

ಪ್ರಾರಂಭವಾಗುತ್ತದೆ. ಶಾ.ಶ. 964ರಲ್ಲಿ ಮಾತ್ರ, ನಾಗವರ್ಮ ಹೇಳಿದಂತೆ, ಗುರುವಾರವಾಗುತ್ತದೆ ಮತ್ತು ಸೂರ್ಯೋದಯದಲ್ಲಿ ಆರ್ದ್ರಾ ನಕ್ಷತ್ರವಿದ್ದರೂ ಷಷ್ಠೀ ಮುಗಿಯುವುದಕ್ಕೆ 5 ಗಂಟೆಗಳಿಗೂ ಮುಂಚೆ ಪುನರ್ವಸು ನಕ್ಷತ್ರ ಆರಂಭವಾಗುತ್ತದೆ. ನವೀನ ಪಾಶ್ಚಾತ್ಯ ಸಿದ್ಧಾಂತಾನುಸಾರಿಯಾದ, ಕೇತಕರರ ಜ್ಯೋತಿರ್ಗಣಿತದಂತೆಯೂ ಶಾ.ಶ. 964ರ ಚಿತ್ರಭಾನು ಆಶ್ವಯುಜ ಬಹುಳ ಷಷ್ಠೀ ಗುರುವಾರವಾಗುತ್ತದೆ. (ಈ ದಿನದ ತಾರೀಖು ಕ್ರಿ.ಶ. 1042 ಅಕ್ಟೋಬರ್ 7). ಸೂರ್ಯೋದಯ ಕಾಲದಲ್ಲಿ ಷಷ್ಠೀ ಶೇಷ 15 ಘಳಿಗೆ 48 ವಿಘಳಿಗೆ ಮತ್ತು ಆರ್ದ್ರಾಶೇಷ 11 ಘಳಿಗೆ 28 ವಿಘಳಿಗೆ ಇದ್ದು, ಮಧ್ಯಾಹ್ನ ಕಾಲದಲ್ಲಿ ಷಷ್ಠೀ ಮತ್ತು ಪುನರ್ವಸು ನಕ್ಷತ್ರಗಳ ಯೋಗವಿದೆ. ಆದುದರಿಂದ ವರ್ಧಮಾನ ಪುರಾಣ ರಚನಾಕಾಲ ಕ್ರಿ.ಶ. 1042 ಎಂಬಲ್ಲಿ ಯಾವ ಸಂದೇಹವೂ ಇಲ್ಲ.

ಕಾಲಸೂಚಕ ಪದ್ಯದ ಮೊದಲ ಪಾದದ ಪರಿಷ್ಕೃತ ಪಾಠಗಳು

ಹಿಂದೆ ಕೊಟ್ಟಿರುವ ಎಂಟು ತಿದ್ದಿದ ಪಾಠಗಳ ಪೈಕಿ ಮೊದಲ ಮೂರು ಶಾ.ಶ. 1084 ಮತ್ತು 1024 ಎಂಬ ತಪ್ಪು ಕಾಲಗಳನ್ನು ಕೊಡುವುದರಿಂದ ಅವು ಗ್ರಾಹ್ಯವಲ್ಲ. ಉಳಿದ 5 ಪಾಠಗಳನ್ನು ಈಗ ಪರಾಮರ್ಶಿಸಬಹುದು.

(1) ವಸುವರ್ಗಾಂಕಮಿದ [ವ್ಯ] ತೀತ [ಶ] ಕ ಭೂಭೃದ್ವತ್ಸರಂ

ಈ ಪಾಠವನ್ನು ಸೂಚಿಸಿರುವ ಶ್ರೀ ಮಹೀಶವಾಡಿಯವರು, ವಸುವರ್ಗಾಂಕ ವೆಂದರೆ 32ರ ವರ್ಗ = 1024, ಈ ಚಿತ್ರಭಾನುವಿಗೆ ಅತೀತ ಎಂದರೆ ಹಿಂದಿನ (ಕಳೆದ) ಚಿತ್ರಭಾನು 964 ಎಂದು ಅರ್ಥ ಮಾಡುತ್ತಾರೆ. 32ನ್ನು ಸೂಚಿಸಲು 'ವಸು' ಪದದ ಪ್ರಯೋಗ ಕಂಡುಬಂದಿಲ್ಲವೆಂದು ಹಿಂದೆಯೇ ಹೇಳಿದೆ. ಇಷ್ಟವಾದ ಕಾಲಕ್ಕಿಂತ 60 ವರ್ಷ ಮುಂದಿನ ಕಾಲವನ್ನು ಕೊಟ್ಟು, ಅದರ ಹಿಂದಿನ ಚಿತ್ರಭಾನು ಎಂದು ಕವಿ ಹೇಳಿದ್ದಾನೆನ್ನುವುದು ಬಹಳ ಅಸಹಜ. ಆದುದರಿಂದ ಈ ಪರಿಷ್ಕೃತ ಪಾಠವೂ ಗ್ರಾಹ್ಯವಲ್ಲ.

(2) ವಸುವರ್ಗಾಂಕಮಿದ [ವ್ಯ] ತೀತ [ಶ] ಕ ಭೂಭೃದ್ವತ್ಸರಂ

ಈ ಪಾಠವನ್ನು ಸೂಚಿಸಿರುವ ಶ್ರೀ ಎಂ. ವಿ. ಸೀತಾರಾಮಯ್ಯನವರು 'ಅವ್ಯತೀತ' ಎಂದರೆ 'ವರ್ತಮಾನ' ಶಕ 964 ಎಂದು ಹೇಳಿದ್ದಾರೆ. ಆದರೆ ಈ ಚಿತ್ರಭಾನುವಿಗೆ ವರ್ತಮಾನ ಶಾಲಿವಾಹನ ಶಕ ಸಂವತ್ಸರ 964 ಅಲ್ಲ. ಹಿಂದೆ ಗ್ರಹಗಣಿತದ ಫಲಿತಾಂಶ ಭಾಗದಲ್ಲಿ ಹೇಳಿರುವಂತೆ 964 ಗತಶಾಲಿವಾಹನ ಶಕ ಸಂವತ್ಸರಗಳು.50 ಆದುದರಿಂದ ಈ ಪರಿಷ್ಕರಣವೂ ಸರಿಯಲ್ಲ.

(3) ವಸುವರ್ಗಾಂ [ತನಿಧಿಪ್ರ] ತೀತ [ಶ] ಕ ಭೂಭೃದ್ವತ್ಸರಂ

ಡಾ॥ ಕಲಬುರ್ಗಿಯವರ ಈ ಪರಿಷ್ಕೃತ ಪಾಠವು ವ್ಯಾಕರಣ ಮತ್ತು ಭಾಷಾ ದೃಷ್ಟಿಯಿಂದ ಸರಿಯಾಗಿದೆ. ಶ್ರೀ ಸಂಗಮೇಶ ಬಿರಾದಾರರು ಹಸ್ತಪ್ರತಿಯ ಪದ್ಯವನ್ನು ತಮಗೆ ಪೂರೈಸಿದರೆಂಬ ಡಾ॥ ಕಲಬುರ್ಗಿಯವರ ಮಾತಿನಿಂದ, ಅವರು ತಮ್ಮ ಪಾಠವನ್ನೂ ಸೂಚಿಸಿದಾಗ ವರ್ಧಮಾನ ಪುರಾಣದ ಮುದ್ರಿತ ಪ್ರತಿಯನ್ನು ನೋಡಿರಲಿಲ್ಲವೆಂದು ತಿಳಿಯುತ್ತದೆ. ಹಸ್ತಪ್ರತಿಯ ಪಾಠವನ್ನು ಬಹಳ ತಿದ್ದಿರುವುದರಿಂದ ಅವರ ಪಾಠವೂ ಗ್ರಾಹ್ಯವಲ್ಲ.

ಇನ್ನುಳಿದವು ಶ್ರೀ ಸಣ್ಣಯ್ಯನವರ ಎರಡು ಪಾಠಗಳು —

(4) ವಸುವರ್ಗಾಂಕಮಿದ [ಂತ] ತೀತ [ಶ] ಕ ಭೂಭೃದ್ವತ್ಸರಂ;

(5) ವಸುವರ್ಗಾಂಕ ಮಿ [ರಲ್ಕ] ತೀತ [ಶ] ಕ ಭೂಭೃದ್ವತ್ಸರಂ.

ಇವುಗಳ ಪೈಕಿ ಮೊದಲನೆಯದರಲ್ಲಿ "ಅಂತು" ಎಂಬ ಪದ ನಿರರ್ಥಕವಾದುದರಿಂದಲೂ, ಆ ಪಾಠವನ್ನು ಮುಂಚೆ ಸೂಚಿಸಿದ್ದ ಸಂಪಾದಕರೇ ಬೇರೆ ಪಾಠವನ್ನು ಮುದ್ರಿತ ಗ್ರಂಥದಲ್ಲಿ ಕೊಟ್ಟಿರುವುದರಿಂದಲೂ ಆ ಪರಿಷ್ಕೃತ ಪಾಠವನ್ನು ಕೈಬಿಡ ಬಹುದು. ಎರಡನೆಯ ಪರಿಷ್ಕರಣದ ವಿಷಯದಲ್ಲಿ ಶ್ರೀ ಎಂ. ವಿ. ಸೀತಾರಾಮಯ್ಯ ನವರು ಎರಡು ಆಕ್ಷೇಪಗಳನ್ನೆತ್ತಿ ಆ ಪಾಠ ಊರ್ಜಿತವಾಗುವುದಿಲ್ಲವೆನ್ನುತ್ತಾರೆ.[51]

'ಅತೀತ' ಎಂಬ ಪದಕ್ಕೆ 'ಕಳೆದುಹೋದ' ಎಂಬ ಅರ್ಥವನ್ನು ಇಟ್ಟುಕೊಂಡರೆ, "ಕಳೆದ ಅಥವಾ ಹಿಂದಿನ ಶಾಲಿವಾಹನ ಶಕ ವರ್ಷ ಚಿತ್ರಭಾನು" ಎಂದು ತಾತ್ಪರ್ಯವಾಗಿ ಒಟ್ಟಿನ ಅರ್ಥ ಅಸಂಗತವಾಗಿ ತೋರುತ್ತದೆ ಎಂಬುದು ಮೊದಲ ಆಕ್ಷೇಪ. 'ಅತೀತ ಶಕವತ್ಸರ'ವೆಂದರೆ 'ಗತಶಕವರ್ಷ'ವೆಂದರ್ಥವಾಗುವುದರಿಂದಲೂ, ಗತಶಕವರ್ಷ 964 ಚಿತ್ರಭಾನುವಾಗುವುದರಿಂದಲೂ, ಈ ಆಕ್ಷೇಪ ಸರಿಯಲ್ಲ.

ಎರಡನೆಯ ಆಕ್ಷೇಪ 'ದ → ರ' ತಿದ್ದುಪಾಟಿನ ವಿಷಯ. ಮುದ್ರಿತ ವರ್ಧಮಾನ ಪುರಾಣದಲ್ಲಿ ಹಸ್ತಪ್ರತಿಯ ಎರಡು ಪುಟಗಳ ಛಾಯಾಚಿತ್ರವನ್ನು ಕೊಟ್ಟಿದ್ದಾರೆ. ಅದರಲ್ಲಿ ಅನೇಕ ಕಡೆ 'ರ' ಮತ್ತು 'ದ'ಗಳಿಗೆ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ. 22ನೆಯ ಪತ್ರದ ಛಾಯಾಚಿತ್ರದ 6ನೆಯ ಸಾಲಿನ "ಗಿರಿಕಂದರಂತರ" ಎಂಬಲ್ಲಿನ 'ದ' 'ರ'ಗಳು ಒಂದೇ ತರಹ ಕಾಣುತ್ತವೆ. ಆದುದರಿಂದ ಹಸ್ತಪ್ರತಿಯಲ್ಲಿ ಪಾಠ "ವಸುವರ್ಗಾಂಕಮಿರ" ಇರುವುದು ಸಂಭಾವ್ಯ. 'ರ'ವನ್ನು ಒಪ್ಪಿಕೊಂಡರೆ "ವಸುವರ್ಗಾಂಕ ಮಿರ [ಲ್ಕ] ತೀತ [ಶ]

ಕ ಭೂಭೃದ್ವತ್ಸರಂ'' ಎಂಬ ಪಾಠವನ್ನು ಒಪ್ಪಿಕೊಳ್ಳಬಹುದು. ಹಾಗಿಲ್ಲದೆ 'ದ'ವೇ ಸರಿಯಾದರೆ,

ವಸುವರ್ಗಾಂಕಮಿ [ದುವ್ಯ] ತೀತ [ಶ]ಕ ಭೂಭೃದ್ವತ್ಸರಂ

ಎಂದು ಪಾಠವನ್ನು ತಿದ್ದಿಕೊಳ್ಳಬಹುದು. 'ದ' ಕಾರಕ್ಕೆ 'ಕೊಂಬು' ಮತ್ತು 'ವ್ಯ' ಎಂಬ ಅಕ್ಷರಗಳು ಅಕ್ಷರಪಾತವಾಗಿರುವ ಭಾಗದವು. ಈ ಪಾಠದ ಅರ್ಥ 'ಗತಶಕ ಸಂವತ್ಸರಗಳು 964' ಎಂದಾಗಿ ಗ್ರಹಗಣಿತಕ್ಕೆ ಹೊಂದುತ್ತದೆ.

ಮೇಲೆ ನಿರ್ಣಯಿಸಿದ ಕಾಲಕ್ಕೆ ಬಾಧಕವೆನ್ನಲಾದ ಇತರ ಪ್ರಮಾಣಗಳು —

(1) ಕಾವ್ಯಾವಲೋಕನದ ರಸಪ್ರಕರಣ ಮತ್ತು ಕಾವ್ಯಪ್ರಭೇದ ವಿಷಯಕ ಸೂತ್ರಗಳಿಗೂ ಹೇಮಚಂದ್ರನ ಕಾವ್ಯಾನುಶಾಸನ ಸೂತ್ರಗಳಿಗೂ ಹೋಲಿಕೆಯಿದೆ. ಉದಾಹರಣ ರೂಪವಾದ ''ಇವಳೀ ಪ್ರಿಯಂಗು'' (881ನೆಯ ಪದ್ಯ) ಮತ್ತು ''ಪಾರಾವಾರಂ'' (910ನೆಯ ಪದ್ಯ) ಈ ಪದ್ಯಗಳಿಗೆ ಸಂವಾದಿ ಪದ್ಯಗಳು ಕಾವ್ಯಾನುಶಾಸನದಲ್ಲಿವೆ. ಹೀಗೆ ನಾಗವರ್ಮನು ಹೇಮಚಂದ್ರನನ್ನು ಅನುಸರಿಸಿರುವುದರಿಂದ, ಅವನಿಗಿಂತ ಅರ್ವಾಚೀನ. (ಡಾ|| ಸಂಗಮೇಶ ಬಿರಾದಾರರ ಅಭಿಪ್ರಾಯ).32

2. ಕಾವ್ಯಾವಲೋಕನದಲ್ಲಿ 'ಧರ್ಮಾಮೃತ'ದ ಪದ್ಯವೊಂದು ಕಾ. 230, ಧ. 1-141) ಉದಾಹೃತವಾಗಿದೆ. (ಪ್ರೊ. ಎಚ್. ಎಂ. ಶಂಕರನಾರಾಯಣ ರಾವ್ — ಭಾಷಾಭೂಷಣದಲ್ಲಿ).[10]

3. ಕರ್ಣಾಟಕ ಭಾಷಾಭೂಷಣದಲ್ಲಿನ ''ದೀರ್ಘೋಕ್ತಿರ್ನಯಸೇನಸ್ಯ'' ಎಂಬ ಸೂತ್ರದಲ್ಲಿ ಉಲ್ಲೇಖಿತನಾದ ನಯಸೇನ ಧರ್ಮಾಮೃತದ ಕರ್ತೃವೇ.

   ಧರ್ಮಾಮೃತದ ಕಾಲದ ಕ್ರಿ.ಶ. 1112 ಆದುದರಿಂದ ನಾಗವರ್ಮ ಅನಂತರದ ಕಾಲದವನಿರಬೇಕು.

4 ಭಾಷಾಭೂಷಣದಲ್ಲಿ ''ಬಹುತಾಪಕ್ಕೆ ಬಿಗುರ್ತು'' ಎಂಬ ನಾಗಚಂದ್ರನ ಪಂಪರಾಮಾಯಣ ಪದ್ಯ ಉದಾಹೃತವಾಗಿರುವುದರಿಂದ, ನಾಗವರ್ಮನು ನಾಗಚಂದ್ರನಿಗಿಂತ ಅರ್ವಾಚೀನ. ನಾಗಚಂದ್ರನ ಕಾಲ ಕ್ರಿ.ಶ. ಹನ್ನೆರಡನೆಯ ಶತಮಾನದ ಪೂರ್ವಾರ್ಧ.

5. ಕ್ರಿ.ಶ. 1230ರಲ್ಲಿ ರಚಿತವಾದ ಅನಂತನಾಥ ಪುರಾಣದ ''ಜನನಾಥಂ ಜಗದೇಕನಲ್ಲಿ'' ಪದ್ಯದಲ್ಲಿ ಜನ್ನನು ನಾಗವರ್ಮನನ್ನು ತನ್ನ ಗುರುವೆಂದು ಹೇಳಿಕೊಂಡಿರುವುದರಿಂದ ನಾಗವರ್ಮನು ಕ್ರಿ.ಶ. 1042ರಲ್ಲಿ ಅಂದರೆ ಸುಮಾರು 190 ವರ್ಷಗಳ ಹಿಂದೆ ಇದ್ದಿರಲಾರ.

ಈಗ ಈ ಪ್ರಮಾಣಗಳ ವಿಷಯವನ್ನು ವಿವೇಚಿಸಬಹುದು.

ಹೇಮಚಂದ್ರ ಸ್ವತಂತ್ರ ಗ್ರಂಥಕಾರನಲ್ಲ, ಚತುರ ಸಂಗ್ರಹಕಾರ ಎಂಬ ವಿದ್ವಾಂಸರ ಅಭಿಪ್ರಾಯವನ್ನು ಹಿಂದೆಯೇ ಹೇಳಿದೆ. ಕಾವ್ಯಾನುಶಾಸನದ ಮತ್ತು ಅದರ ಸ್ವೋಪಜ್ಞವೃತ್ತಿ 'ಅಲಂಕಾರ ಚೂಡಾಮಣಿ'ಯ ರಸನಿರೂಪಣ ಭಾಗದಲ್ಲಿ ಅವನು ಭರತನ ನಾಟ್ಯಶಾಸ್ತ್ರವನ್ನು ಅನುಸರಿಸಿರುವುದಲ್ಲದೆ, 'ಕಾವ್ಯಾನುಶಾಸನ ವಿವೇಕ'ದಲ್ಲಿ ನಾಟ್ಯಶಾಸ್ತ್ರದ ವ್ಯಾಖ್ಯಾನ 'ಅಭಿನವ ಭಾರತಿ'ಯಿಂದ ಅನೇಕ ಭಾಗಗಳನ್ನು ಹಾಗೆಯೇ ಎತ್ತಿಕೊಂಡಿದ್ದಾನೆ.[52] ಉದಾಹರಣೆಗೆ, ನಾಟ್ಯಶಾಸ್ತ್ರದಲ್ಲಿನ ಹಾಸ್ಯರಸ ವಿಷಯಕ ಭಾಗ :

ಅಥ ಹಾಸ್ಯೋ ನಾಮ ಹಾಸ ಸ್ಥಾಯಿಭಾವಾತ್ಮಕಃ। ಸ ಚ ವಿಕೃತ ಪರವೇಷಾಲಂಕಾರ ಧಾರ್ಷ್ಟ್ಯಲೌಲ್ಯಕುಹಕಾಸತ್ಪ್ರಲಾಪ ವ್ಯಂಗ್ಯದರ್ಶನ ದೋಷೋದಾ ಹರಣಾದಿಭಿರ್ವಿಭಾವೈರುತ್ಪದ್ಯತೇ । ತಸ್ಯೋಷ್ಠನಾಸಾಕಪೋಲಸ್ಪಂದನ ದೃಷ್ಟಿವ್ಯಾಕೋಶಾ ಕುಂಚನ ಸ್ವೇದಾಸ್ಯರಾಗ ಪಾರ್ಶ್ವಗ್ರಹಣಾದಿಭಿರನು ಭಾವೈರಭಿನಯಃ ಪ್ರಯೋಕ್ತವ್ಯಃ ವ್ಯಭಿಚಾರಿಣಶ್ಚಾಸ್ಯಾವಹಿತ್ಥಾಲಸ್ಯತಂದ್ರಾನಿದ್ರಾಸ್ವಪ್ನ ಪ್ರಬೋಧಾಸೂಯಾದಯಃ।[53]

ಕಾವ್ಯಾನುಶಾಸನ ಸೂತ್ರ - ವಿಕೃತವೇಷಾದಿವಿಭಾವೋ ನಾಸಾಸ್ಪಂದನಾದ್ಯನು ಭಾವೋ ನಿದ್ರಾದಿವ್ಯಭಿಚಾರೀ ಹಾಸೋ ಹಾಸ್ಯಃ।

ಅಲಂಕಾರ ಚೂಡಾಮಣಿವೃತ್ತಿ — ನಾಸೌಷ್ಠಕಪೋಲಸ್ಪಂದನ ದೃಷ್ಟಿವ್ಯಾಕೋಶಾ ಕುಂಚನ ಸ್ವೇದಾಸ್ಯರಾಗಪಾರ್ಶ್ವಗ್ರಹಣಾದ್ಯನುಭಾವೋ ನಿದ್ರಾವಹಿತ್ಥಶ್ರಪಾಲಸ್ಯಾದಿ ವ್ಯಭಿಚಾರೀ ಹಾಸಃ ಸ್ಥಾಯೀ ಚರ್ವಣೀಯತ್ವಮಾಗತೋ ಹಾಸ್ಯಃ॥[54]

ನಾಗವರ್ಮನು ಎಲ್ಲಿಯೂ ಹೇಮಚಂದ್ರನ ಹೆಸರನ್ನು ಹೇಳಿಲ್ಲ. 961ನೆಯ ಪದ್ಯದಲ್ಲಿ ''ವಾಮನನುಂ ರುದ್ರಟನುಂ ಭಾಮಹನುಂ ದಂಡಿಯುಂ ಮನಂಗೊಳೆ ಪೇೞ್ದಂತೆ'' ತಾನು ಹೇಳಿರುವೆನೆಂದಿದ್ದಾನೆ. ರಸಪ್ರಕರಣದ 200ನೇ ಸೂತ್ರದಲ್ಲಿ ''ಭರತಶಾಸ್ತ್ರಕ್ರಮದಿ'' ಎಂದು ಹೇಳಿದ್ದಾನೆ. ಭರತನು ''ಅಷ್ಟೌ ನಾಟ್ಯೇ ರಸಾಃ ಸ್ಮೃತಾಃ'' ಎಂದಿರುವಂತೆ ನಾಗವರ್ಮನೂ 195ನೆಯ ಸೂತ್ರದಲ್ಲಿ ''ರಸಂಗಳ್ ವರ್ತಿಸು

ಗುಮಂತವೆಂಟೆ ವಲಂ'' ಎಂದಿದ್ದಾನೆ. ಈ ಎಂಟು ರಸಗಳ ನಿರೂಪಣೆಯಲ್ಲಿ (ಸೂತ್ರ 201-4) ಭರತ ರುದ್ರಟರನ್ನನುಸರಿಸಿದ್ದಾನೆ. ನಾಟ್ಯಶಾಸ್ತ್ರದಲ್ಲಿ ಶಾಂತರಸವನ್ನು ನಿರೂಪಿಸಿರುವ ಭಾಗ ಪ್ರಕ್ಷಿಪ್ತವೆಂದು ವಿದ್ವಾಂಸರ ಮತ. ನಾಗವರ್ಮನೂ ಶಾಂತವನ್ನು ಇತರ ರಸಗಳ ಗುಂಪಿಗೆ ಸೇರಿಸದೆ, ಕೊನೆಯಲ್ಲಿ (ಸೂತ್ರ 205) ಬೇರೆಯಾಗಿ ನಿರೂಪಿಸಿದ್ದಾನೆ. ಈ ನಿರೂಪಣೆ ರುದ್ರಟನ ಕಾವ್ಯಾಲಂಕಾರವನ್ನು ಅನುಸರಿಸಿದೆ.

ಕಾವ್ಯಪ್ರಭೇದ ನಿರೂಪಣೆಯಲ್ಲಿ (ಸೂತ್ರ 238-40) ನಾಗವರ್ಮನು ದಂಡಿಯನ್ನು ಅನುಸರಿಸಿರುತ್ತಾನೆ. ಆರ್. ನರಸಿಂಹಾಚಾರ್ಯರು ಕಾವ್ಯಾವಲೋಕನದ ಪರಿಶಿಷ್ಟ 1ರಲ್ಲಿ ದಂಡಿ ರುದ್ರಟರ ಸಂವಾದಿಪದ್ಯಗಳನ್ನು ಕೊಟ್ಟಿರುತ್ತಾರೆ.[55] ಪರಿಶಿಷ್ಟ 6ರಲ್ಲಿ ಕಾವ್ಯಾವಲೋಕನದಲ್ಲಿನ ಆರು ಉದಾಹರಣ ಪದ್ಯಗಳಿಗೆ (ಇವುಗಳಿಗೆ ಡಾ|| ಬಿರಾದಾರರು ಕೊಟ್ಟಿರುವ 2 ಪದ್ಯಗಳೂ ಸೇರಿವೆ). ಹೇಮಚಂದ್ರನ ಕಾವ್ಯಾನುಶಾಸನ ದಲ್ಲಿನ ಸಂವಾದಿ ಉದಾಹರಣ ಪದ್ಯಗಳನ್ನು ಕೊಟ್ಟಿದ್ದಾರೆ. ಆದರೆ ಹೇಮಚಂದ್ರನು ಅನೇಕ ಕವಿಗಳ ಪದ್ಯಗಳನ್ನು ಉದಾಹರಿಸಿರುವುದರಿಂದ, ಈ ಪದ್ಯಗಳನ್ನು ಹೇಮಚಂದ್ರನ ಸ್ವಂತ ಪದ್ಯಗಳೆನ್ನುವಂತಿಲ್ಲ.

ಒಟ್ಟಿನಲ್ಲಿ ನಾಗವರ್ಮನು ಹೇಮಚಂದ್ರನಿಗೆ ಋಣಿ ಎಂದಾಗಲೀ ಅವನಿಗಿಂತ ಅರ್ವಾಚೀನನೆಂದಾಗಲೀ ಹೇಳಲು ಏನೂ ಆಧಾರವಿಲ್ಲ.

ಕಾವ್ಯಾವಲೋಕನದಲ್ಲಿ ಉದಾಹೃತವಾದ ''ಬಾಟಿಯ ಖರ್ಜೂರದ ಕಿತ್ತೀಟಿಯ'' ಎಂಬ ಪದ್ಯ ಉದ್ಯಾನವರ್ಣನಾ ರೂಪದಲ್ಲಿದೆ. ಇದಕ್ಕೆ ಕೆಲವು ಮಟ್ಟಿಗೆ ಸಂವಾದಿಯಾದ ಧರ್ಮಾಮೃತದ ಪದ್ಯದಲ್ಲಿ ಆ ಹಣ್ಣುಗಳನ್ನು ''ಮೆಲ್ದಾದರದಿಂ'' ಎಂದಿದೆ. ಕಾವ್ಯಾವ ಲೋಕನದಲ್ಲಿ ಉದಾಹೃತವಾದ ಯಾವನೋ ಹಿಂದಿನ ಕವಿಯ ಪದ್ಯವನ್ನು ಅಲ್ಲಿಯೋ ಮೂಲಗ್ರಂಥದಲ್ಲಿಯೋ ನೋಡಿದ ನಯಸೇನ ಆ ಪದ್ಯವನ್ನು ಮಾರ್ಪಡಿಸಿ ತನ್ನ ಗ್ರಂಥದಲ್ಲಿ ಉಪಯೋಗಿಸಿಕೊಂಡಿರಬಹುದು. ಇದೊಂದು ಪದ್ಯಭಾಗದ ಸಾಮ್ಯದಿಂದ ಕಾವ್ಯಾವಲೋಕನವು ಧರ್ಮಾಮೃತಕ್ಕಿಂತ ಈಚಿನದೆನ್ನಲಾಗುವುದಿಲ್ಲ.

ಇನ್ನುಳಿದ ಬಾಧಕವೆನ್ನುವ ಪ್ರಮಾಣಗಳು ಭಾಷಾಭೂಷಣಕ್ಕೆ ಸಂಬಂಧಿಸಿವೆ. ಈಗ ಅವುಗಳನ್ನು ಪರಿಶೀಲಿಸಬಹುದು.

ನಯಸೇನನ ವಿಚಾರ

ಒಬ್ಬನೇ ಕವಿಯ ಪ್ರಯೋಗದ ಆಧಾರದಿಂದ ವ್ಯಾಕರಣ ಸೂತ್ರ ರಚಿತ ವಾಗುವುದು ಅಸಹಜ. ಹಾಗೆ ಸೂತ್ರವನ್ನು ರಚಿಸಬೇಕಾದರೆ ಸೂತ್ರಕಾರ ಅನೇಕ ಕಡೆ

ಪ್ರಯೋಗಗಳನ್ನು ಕಂಡಿರಬೇಕು. ಆದುದರಿಂದ ನಾಗವರ್ಮನು ಧರ್ಮಾಮೃತವನ್ನು ಮಾತ್ರ ನೋಡಿ ''ದೀರ್ಘೋರ್ಕಿರ್ತ್ರಯಸೇನಸ್ಯ'' (ಭಾಷಾಭೂಷಣ 73)[56] ಸೂತ್ರವನ್ನು ರಚಿಸಿರಲಾರ. ಗುಣವರ್ಮಾದಿಗಳ ಪ್ರಯೋಗಗಳನ್ನು ವೃತ್ತಿಯಲ್ಲಿ ಉದಾಹರಣೆಗಳಾಗಿ ಕೊಟ್ಟಿರುವಂತೆ ನಯಸೇನನ ಪ್ರಯೋಗಗಳನ್ನು ಕೊಡದೆ 'ನಯಸೇನಸ್ಯ' ಎಂದು ಸೂತ್ರದಲ್ಲಿ ಹೇಳಿ, ವೃತ್ತಿಯಲ್ಲಿ 'ನಯಸೇನಮುನೇರ್ಮತೇ' ಎಂದು ಹೇಳಿರುವುದನ್ನು ನೋಡಿದರೆ, ಆ ನಯಸೇನ ಪ್ರಸಿದ್ಧ ವೈಯಾಕರಣನಾಗಿರಬೇಕು. ವ್ಯಾಕರಣವನ್ನೂ ಬರೆದಿರಬಹುದು. ಧರ್ಮಾಮೃತದ ನಯಸೇನ ''ಕನ್ನಡ ಭಾಷೆಯ ಶುದ್ಧತೆಯ ಬಗೆಗೆ ತನ್ನ ಅತೀವ ಕಳಕಳಿಯನ್ನು'' ವ್ಯಕ್ತಪಡಿಸಿದ ಮಾತ್ರಕ್ಕೆ ಅವನು ವೈಯಾಕರಣನೆಂದು ಹೇಳಲಾಗುವುದಿಲ್ಲ. ಮುಳುಗುಂದ ಶಾಸನದಲ್ಲಿನ ನಯಸೇನ ಪಂಡಿತ ಸಂಸ್ಕೃತ ವ್ಯಾಕರಣ ಪಂಡಿತನಾದ ಮಾತ್ರಕ್ಕೆ ಕನ್ನಡ ವ್ಯಾಕರಣಜ್ಞನಲ್ಲವೆನ್ನುವುದೂ ಸರಿಯಾಗದು. ಭಾಷಾಭೂಷಣದಲ್ಲಿ ''ನಯಸೇನಮುನಿ' ಮತ್ತು ಧರ್ಮಾಮೃತದಲ್ಲಿ ''ನಯಸೇನ ಮುನೀಂದ್ರ'' ಹೀಗೆ ಎರಡು ಕಡೆಗಳಲ್ಲೂ ನಯಸೇನನಿಗೆ 'ಮುನಿ' ಎಂಬ ಉಪಾಧಿ ಸೇರಿರುವುದರಿಂದ ಇಬ್ಬರೂ ಅಭಿನ್ನರಾಗಿರುವುದು ಸಂಭಾವ್ಯವಾದರೂ, ಹೀಗೇ ಸರಿಯೆಂದು ದೃಢವಾಗಿ ಹೇಳಲು ಪ್ರಮಾಣ ಸಾಲದು.

ನಾಗಚಂದ್ರನ ವಿಚಾರ

''ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ'' ಎಂಬ ಭಾಷಾ ಭೂಷಣದಲ್ಲಿನ ಉದಾಹರಣ. ನಾಗವರ್ಮನ ಕಾಲ ಕ್ರಿ.ಶ. 1042 ಎಂಬುದಕ್ಕೆ ಅಡ್ಡಿಯಾಗುವುದಿಲ್ಲವೆಂದು ಸಾಧಿಸಲು ವಿದ್ವಾಂಸರು ಬೇರೆ ಬೇರೆ ಕಾರಣಗಳನ್ನು ಕೊಟ್ಟಿದ್ದಾರೆ.

1. ಈ ''ಪದ್ಯಭಾಗ ಈಗ ದೊರೆಯದಿರುವ ಬೇರಾವುದಾದರೂ ಕಾವ್ಯದಿಂದ ತೆಗೆದುಕೊಂಡುದಾಗಿರಬಹುದೇ ? ಈ ಪದ್ಯ ಭಾಗಕ್ಕೆ 'ಭೂತಾಪಕ್ಕೆ ಬಿಗುರ್ತು ಭೂಪ ಪಡೆದಂ ರಾಜ್ಯಾಧಿಕಾರತ್ವಮಂ' ಎಂಬ ಪಾಠಾಂತರವೂ ಇದೆ'' ಎನ್ನುತ್ತಾರೆ ಶ್ರೀ ಸಣ್ಣಯ್ಯನವರು.[57]

2. ಶ್ರೀ ಎಂ. ವಿ. ಸೀತಾರಾಮಯ್ಯನವರು ಕೊಟ್ಟಿರುವ ಕಾರಣಗಳು :

    1. ಮೇಲ್ಕಂಡ ಉದಾಹರಣೆ ರೈಸ್‌ರವರು ಸಂಪಾದಿಸಿದ ಭಾಷಾ ಭೂಷಣದ ಪ್ರತಿಯಲ್ಲಿಲ್ಲ. ನರಸಿಂಹಾಚಾರ್ಯರು ಉಪಯೋಗಿಸಿದ

ಒಂದು ಹಸ್ತ ಪ್ರತಿಯಲ್ಲೂ ಇಲ್ಲ. ಈ ಪ್ರಯೋಗಕ್ಕೆ ಪಾಠಾಂತರ ಗಳೂ ಇವೆ.

2. ಪಂಪ ರಾಮಾಯಣದ ಕವಿಪಾಠ ಬಹುಶಃ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪದೆದಂ ಮತ್ಸ್ಯಾವತಾರಕ್ಕೆ" ಎಂದಿರಬೇಕು. (ಪದೆ = ಈಪ್ಸಾಯಾಂ). ಮತ್ಸ್ಯಾವತಾರವನ್ನು ಹೊಂದಿದ ಎನ್ನುವುದಕ್ಕಿಂತ ಬಯಸಿದ ಎನ್ನುವ ಅರ್ಥ ಹೆಚ್ಚು ಉಚಿತ. ಲಲಿತ ಶೈಲಿಯ ನಾಗಚಂದ್ರ ವಿಚಿತ್ರವಾದ ವಿಭಕ್ತಿ ಪಲ್ಲಟದ ಪ್ರಯೋಗ ವನ್ನು ಮಾಡಿರಲಾರ. ನಾಗಚಂದ್ರನ ಪ್ರಯೋಗ ಭಾಷಾಭೂಷಣದ ಸೂತ್ರಕ್ಕೆ ಹೊಂದುವುದೇ ಇಲ್ಲ.

3. ನಾಗವರ್ಮನು ನಾಗಚಂದ್ರನಿಗಿಂತ ಈಚಿನವನಾಗಿದ್ದರೆ ಪುರಾಣ ಕರ್ತರ ಶ್ರೇಣಿಯಲ್ಲಿ ನಾಗಚಂದ್ರನ ಹೆಸರನ್ನೇಕೆ ಅವನು ಎತ್ತಲಿಲ್ಲ ಎಂಬ ಪ್ರಶ್ನೆ ಏಳುತ್ತದೆ.

4. "ಕವಿಚರಿತೆಕಾರರ ಪುನರ್ವಿಮರ್ಶೆಯಂತೆ ನಾಗಚಂದ್ರನ ಕಾಲ ಕ್ರಿ.ಶ. 1068". ಪಂಚಲಿಂಗಾಲದ ಶಾಸನ (1068) ಕರ್ತ ನಾಗಚಂದ್ರನೇ ಪಂಪರಾಮಾಯಣದ ಕರ್ತೃ ಎಂಬುದನ್ನು ಒಪ್ಪಿ ಕೊಂಡರೆ ಪಂಪ ರಾಮಾಯಣದ ಕಾಲ ನಾಗವರ್ಮನ ವರ್ಧಮಾನ ಪುರಾಣ ಮತ್ತು ಭಾಷಾಭೂಷಣಗಳ ಕಾಲಗಳ ಮಧ್ಯವರ್ತಿಯಾಗುವುದು. ಒಟ್ಟಿನ ಮೇಲೆ ನಾಗಚಂದ್ರನ ಕಾಲ ಈಗ ಪುನರ್ವಿಮರ್ಶೆಯಾಗಬೇಕಾಗಿದೆ.

ರೈಸರ ಮುದ್ರಣದಲ್ಲಿ ಕೊಟ್ಟಿರುವ ಪಂಪರಾಮಾಯಣದ ಉದ್ಧೃತ ಭಾಗವೂ ಅದರ ಪಾಠಾಂತರವೂ ತಪ್ಪು ಎಂದು ಅಭಿಪ್ರಾಯಪಟ್ಟಿರುವ ಆರ್. ಎಸ್. ರಾಮರಾಯರು, ನರಸಿಂಹಾಚಾರ್ಯರ ಮುದ್ರಣದಲ್ಲಿರುವ ಉದ್ಧೃತ ಪಾಠ ಸರಿಯಾಗಿದ್ದರೂ ಅದು ಪ್ರಕ್ಷಿಪ್ತವಿರಬಹುದೆನ್ನುತ್ತಾರೆ.[18] ಕಾರಣಗಳು —

1. ಈ ಲಕ್ಷ್ಯ ಒಂದು ಹಸ್ತಪ್ರತಿಯಲ್ಲಿಲ್ಲವಾದುದರಿಂದ "ನಾಗವರ್ಮ ನಾಗಚಂದ್ರನ ಕಾವ್ಯದಿಂದ ಉದಾಹರಣೆ ಕೊಟ್ಟಿರಲಾರನು ಎಂಬ ಸಂದೇಹಕ್ಕೆ ಇಲ್ಲಿ ಅವಕಾಶವಿದೆ". ಪ್ರತಿಕಾರ ಇದನ್ನು ಸೇರಿಸಬಹುದು.

2. ಇದೇ ರೀತಿ ಪ್ರತಿಕಾರ ಸೇರಿಸಿರಬಹುದಾದ ಇತರ ಉದಾಹರಣೆಗಳಿವೆ. ''ಭಾರತೇ ಹಂಪಸ್ಯ ಪ್ರಯೋಗಃ'' ಎಂದು ಹೇಳಿಕೊಟ್ಟಿರುವ 187ನೆಯ ಸೂತ್ರದ ಒಂದು ಉದಾಹರಣೆ ''ಮದಗಜವೆರಡಱ ಬಾಲದ'' ಎಂಬ ಪದ್ಯ ಆದಿಕವಿ ಪಂಪನದಲ್ಲ; ಇನ್ನೊಂದು ಉದಾಹರಣೆ ''ಕರಿಯುಗದ ಪುಚ್ಛಯುಗಮಂ'' ಎಂಬ ಪದ್ಯವನ್ನೂ ''ಹಿರಿಯ ಹಂಪದೇವಂಗಳ ಪ್ರಯೋಗಂ'' ಎಂದು ಹೇಳಿರುವುದೂ ಸರಿಯಲ್ಲ. ಅದು ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿ ದೊರಕುತ್ತವೆ.

ಆಕ್ಷೇಪಗಳ ಪರಿಶೀಲನೆ

ರೈಸರ ಮುದ್ರಣದಲ್ಲಿ ಅನೇಕ ಕಡೆ ಸ್ಖಾಲಿತ್ಯಗಳಿವೆ. ಅವರು ಉಪಯೋಗಿಸಿರುವ ಹಸ್ತಪ್ರತಿಗಳು ಅಶುದ್ಧವಾಗಿದ್ದುದೇ ಇದಕ್ಕೆ ಕಾರಣವಿರಬಹುದು. ಸರಿಯಾದ ಅರ್ಥಜ್ಞಾನ ವಿಲ್ಲದ ಪ್ರತಿಕಾರ ''ಮತ್ಸ್ಯಾವತಾರಕ್ಕೆ'' ಎನ್ನುವುದನ್ನು ''ಮತ್ಸ್ಯಾವತಾರಾಂಕ ಮಂ'' ಎಂದು ತಿದ್ದಿರಬಹುದು. ಒಬ್ಬನು ಹಸ್ತಪ್ರತಿಯನ್ನೋದಿ ಮತ್ತೊಬ್ಬ ಬರೆಯುವಾಗ 'ಬಹು' ಎನ್ನುವುದು 'ಭೂ' ಆಗಿರುವುದು ಸಾಧ್ಯ. ಭಾಷಾಭೂಷಣದ ನರಸಿಂಹಾಚಾರ್ಯರ ಆವೃತ್ತಿಯಲ್ಲಿರುವ ನಾಲ್ಕು ಉದಾಹರಣ ಪದ್ಯಗಳಲ್ಲಿ ಯಾವುದೂ ಅವರು ಉಪಯೋಗಿಸಿಕೊಂಡಿರುವ ಒಂದು ಹಸ್ತಪ್ರತಿಯಲ್ಲಿ ಇಲ್ಲ. ಬಹುಶಃ ವಿದ್ಯಾರ್ಥಿಯೊಬ್ಬನು ಪಾಠಕ್ಕಾಗಿ ಪ್ರತಿ ಮಾಡಿಕೊಳ್ಳುವಾಗ ಪದ್ಯಗಳನ್ನು ಬಿಟ್ಟು ಇತರ ಉದಾಹರಣೆಗಳನ್ನು ಬರೆದುಕೊಂಡಿರಬಹುದು. ಹಾಗೆಯೇ, ''ಬಹುತಾಪಕ್ಕೆ'' ಎಂಬ ಪದ್ಯಭಾಗವನ್ನೂ ಬಿಟ್ಟಿರಬಹುದು.

''ಮದಗಜವೆರಡಱ ಬಾಲದ'' ಎಂಬ ಪದ್ಯ ಮುದ್ರಿತ ಪಂಪಭಾರತದಲ್ಲಿಲ್ಲದ ಮಾತ್ರಕ್ಕೆ ಪಂಪನದಲ್ಲವೆಂದು ಹೇಳಲಾಗುವುದಿಲ್ಲ. ಪಂಪಭಾರತದ ಸಂಪಾದಕರು ತಮಗೆ ಸಿಕ್ಕಿದ್ದ ಮೂರು ಹಸ್ತಪ್ರತಿಗಳಿಗೂ ಒಂದೇ ಮೂಲಮಾತೃಕೆಯಿರಬಹುದೆಂದು ಅಭಿಪ್ರಾಯಪಟ್ಟಿದ್ದರು.[59] ಈಚೆಗೆ ಬೇರೆ ಹಸ್ತಪ್ರತಿಗಳು ಸಿಕ್ಕಿದಂತಿಲ್ಲ. ಬೇರೆ ಹಸ್ತಪ್ರತಿ ದೊರಕಿದರೆ ಅದರಲ್ಲಿ ಈ ಪದ್ಯ ಸಿಕ್ಕಲೂಬಹುದು. ಈ ಪದ್ಯವನ್ನು ಶಬ್ದಮಣಿ ದರ್ಪಣದಲ್ಲಿ ''ಭೂತಭವಿಷ್ಯತ್ಕ್ರಿಯೆಗಳುಪೇತ'' ಎಂಬ ಸೂತ್ರ (ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುದ್ರಣದಲ್ಲಿ 73ನೆಯದು)ದ ಕೆಳಗೆ ಪ್ರಯೋಗವಾಗಿ ಕೊಟ್ಟಿರುವುದರಿಂದ ಇದು ಪುರಾತನ ಪದ್ಯವೆನ್ನುವುದರಲ್ಲಿ ಸಂದೇಹವಿಲ್ಲ. ಇದರ ಅನುಕರಣವಾದ

"ಕರಿಯುಗದ ಪುಚ್ಛಯುಗಮಂ" ಎಂಬ ಪದ್ಯ ನರಸಿಂಹಾಚಾರ್ಯರ ಮುದ್ರಣದಲ್ಲಿ ವೃತ್ತಿಯಲ್ಲಿಲ್ಲ; ಕನ್ನಡ ಟೀಕೆಯಲ್ಲಿದೆ. ಒಂದೇ ಅರ್ಥವಿರುವ ಎರಡು ಪದ್ಯಗಳನ್ನು ಒಂದೇ ಸೂತ್ರಕ್ಕೆ ಉದಾಹರಣೆಯಾಗಿ ವೃತ್ತಿಕಾರ ಕೊಟ್ಟಿರುವುದು ಅಸಂಭವ. ಟೀಕಾಕಾರ ನೇಮಿನಾಥ ಪುರಾಣದ ಪದ್ಯವನ್ನು ಹಂಪನದೆಂದು ತಪ್ಪಾಗಿ ಹೇಳಿದ್ದಾನೆ. ಇದೇ ಟೀಕಾಕಾರ ಇದೇ ಸೂತ್ರದ ಟೀಕೆಯಲ್ಲಿ ಕಾವ್ಯಾವಲೋಕನದ ಸೂತ್ರವೆಂದು ಕೊಟ್ಟಿರುವ "ನಿರುತಂ ಗಾಅಪ್ರತ್ಯಯ" ವೆಂಬ ಪದ್ಯಮುದ್ರಿತ ಕಾವ್ಯಾವಲೋಕನದಲ್ಲಿಲ್ಲ ವೆಂಬುದನ್ನೂ ಗಮನಿಸಬಹುದು. ಈ ಎರಡು ಪದ್ಯಗಳೂ ರೈಸರ ಮುದ್ರಣದಲ್ಲಿ ವೃತ್ತಿಯ ಭಾಗವಾಗಿ ಸೇರಿಹೋಗಿರುವುದು ಪ್ರತಿಕಾರನ ತಪ್ಪಿನಿಂದಿರಬಹುದು.

ನಾಗಚಂದ್ರ ವಿಭಕ್ತಿಪಲ್ಲಟ ಮಾಡಿರಲಾರ ಮತ್ತು ಅವನ ಪ್ರಯೋಗ ಭಾಷಾಭೂಷಣದ ಸೂತ್ರಕ್ಕೆ .. ಹೊಂದುವುದಿಲ್ಲ ಎಂಬ ಶ್ರೀ ಸೀತಾರಾಮಯ್ಯನವರ ಆಕ್ಷೇಪಗಳನ್ನು ಶ್ರೀ ದೇವೀರಪ್ಪನವರು ಸಕಾರಣವಾಗಿ ತಳ್ಳಿಹಾಕಿದ್ದಾರೆ. ಶ್ರೀ ಸೀತಾರಾಮಯ್ಯನವರು ಸೂಚಿಸಿರುವ "ಪದೆದಂ' ಎಂಬ ಪಾಠಾಂತರಕ್ಕೆ ಹಸ್ತಪ್ರತಿಯ ಆಧಾರವಿರುವಂತಿಲ್ಲ. ಒಂದು ವೇಳೆ ಈ ಪಾಠವಿದ್ದರೂ ಬಯಸಿದ ಎಂಬರ್ಥದ ಈ ಕ್ರಿಯಾಪದಕ್ಕೆ ಕರ್ಮಪದವಾಗಿ "ಮತ್ಸ್ಯಾವತಾರಮಂ" ಎಂದಿರದೆ "ಮತ್ಸ್ಯಾವತಾರಕ್ಕೆ" ಎಂದಿರುವುದೂ ವಿಭಕ್ತಿಪಲ್ಲಟವೇ.

ನಾಗಚಂದ್ರನ ಕಾಲ ಸು. ಕ್ರಿ.ಶ. 1100 ಎಂದು ನಿರ್ಣಯಿಸಿದ ಕವಿಚರಿತೆಕಾರರು, ಶ್ರೀ ಸೀತಾರಾಮಯ್ಯನವರು ಹೇಳಿದಂತೆ, ಆ ಕಾಲವನ್ನು ಎಲ್ಲೂ ಪುನರ್ವಿಮರ್ಶಿಸಿದಂತೆ ಕಂಡು ಬರುವುದಿಲ್ಲ. ಪಂಚಲಿಂಗಾಲಯದ ಶಾಸನ ಗದ್ಯದಲ್ಲಿದ್ದು, ಶೈವದೇವಾಲಯಕ್ಕೆ ದತ್ತಿಕೊಟ್ಟದ್ದನ್ನು ಹೇಳುವುದರಿಂದ, ಜೈನನಾದ ಪಂಪರಾಮಾಯಣಕಾರನೇ ಈ ಶಾಸನ ಕವಿಯೆಂದು, ನಾಗಚಂದ್ರನೆಂಬ ನಾಮಸಾದೃಶ್ಯ ಮಾತ್ರದಿಂದಲೇ ನಿಶ್ಚಯಿಸುವುದು ಸಾಧುವಲ್ಲ. ಪ್ರೊ|| ಡಿ. ಎಲ್. ನರಸಿಂಹಾಚಾರ್ಯರು ಪಂಪರಾಮಾಯಣ ಸಂಗ್ರಹದ ಮೂರನೆಯ ಮುದ್ರಣದ ಪೀಠಿಕೆಯಲ್ಲಿ ನಾಗಚಂದ್ರನ ಕಾಲದ ವಿಷಯವನ್ನು ಚರ್ಚಿಸಿ, ಅವನು ಕ್ರಿ.ಶ. ಹನ್ನೆರಡನೆಯ ಶತಮಾನದ ಪೂರ್ವಾರ್ಧದವನೆಂದು ನಿರ್ಣಯಿಸಿರುವುದನ್ನು ಶ್ರೀ ದೇವೀರಪ್ಪನವರು ಈಗಾಗಲೇ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಈ ಎಲ್ಲ ಕಾರಣಗಳಿಂದ ಭಾಷಾಭೂಷಣಕಾರನು ಪಂಪರಾಮಾಯಣದ ಪದ್ಯವನ್ನು ಉದಾಹರಿಸಿರುವ ವಿಷಯದಲ್ಲಿ ಸಂದೇಹಪಡಬೇಕಾಗಿ ಕಾಣುವುದಿಲ್ಲ.

ಭಾಷಾಭೂಷಣದಲ್ಲಿ ಪಂಪರಾಮಾಯಣದ ಪದ್ಯ ಉದಾಹೃತವಾಗಿರುವುದರಿಂದಲೂ, 73ನೆಯ ಸೂತ್ರದಲ್ಲಿನ ನಯಸೇನನು 'ಧರ್ಮಾಮೃತ'ದ ನಯಸೇನನೇ ಆಗಿರುವುದು ಸಂಭಾವ್ಯವಾಗಿರುವುದರಿಂದಲೂ, ಭಾಷಾಭೂಷಣವು ಸುಮಾರು ಕ್ರಿ.ಶ. 1120ರ ಅನಂತರ ರಚಿತವಾಯಿತೆನ್ನಬೇಕಾಗುತ್ತದೆ. ಹಾಗಿದ್ದ ಪಕ್ಷದಲ್ಲಿ, ಕ್ರಿ.ಶ. 1042ರಲ್ಲಿ ವರ್ಧಮಾನ ಪುರಾಣವನ್ನು ಬರೆದ ಕಾವ್ಯಾವಲೋಕನ ಕರ್ತೃ ನಾಗವರ್ಮನೂ ಭಾಷಾಭೂಷಣಕಾರ ನಾಗವರ್ಮನೂ ಭಿನ್ನರಾಗಬೇಕಾಗುವುದು. ಇವರು ಭಿನ್ನರೆನ್ನಲು ಆಂತರಿಕ ಪ್ರಮಾಣಗಳೂ ಇವೆ.

ಕರ್ಣಾಟಕ ಭಾಷಾಭೂಷಣ

ವರ್ಧಮಾನ ಪುರಾಣದ ಪೀಠಿಕೆಯಲ್ಲಿ ಸಂಪಾದಕ ಶ್ರೀ ಸಣ್ಣಯ್ಯನವರು ಕವಿ ಕಾವ್ಯ ವಿಚಾರವನ್ನು ಚರ್ಚಿಸಿ, ವರ್ಧಮಾನ ಪುರಾಣದ ನಾಗವರ್ಮನೇ ವಸ್ತುಕೋಶ, ಕಾವ್ಯಾವಲೋಕನಗಳನ್ನು ಬರೆದನೆಂಬ ನಿರ್ಣಯಕ್ಕೆ ಬಂದಿದ್ದಾರೆ. ಕಾರಣಗಳು ಇಂತಿವೆ :

1. ಕಾವ್ಯಾವಲೋಕನ ಮತ್ತು ವಸ್ತುಕೋಶಗಳ ಮೊದಲ ಪದ್ಯಗಳಲ್ಲಿ ವರ್ಧಮಾನ ತೀರ್ಥಂಕರನ ಸ್ತೋತ್ರವಿದೆ; ಎಂದರೆ, ನಾಗವರ್ಮನಿಗೆ ವರ್ಧಮಾನ ಸ್ವಾಮಿಯೇ ಇಷ್ಟದೈವನಾಗಿದ್ದನೆಂಬುದು ಖಚಿತ. ತನ್ನ ಇಷ್ಟದೈವವಾದ ವರ್ಧಮಾನನನ್ನು ಕುರಿತು ಆತನು ಕಾವ್ಯವನ್ನು ರಚಿಸಿರುವುದು ಸಾಧ್ಯ.[60]

2. ಕಾವ್ಯಾವಲೋಕನದ, ನಾಗವರ್ಮನ ವಿಚಾರವನ್ನು ತಿಳಿಸುವ, 'ಸಾರವಿಚಾರ ಚಂಚುರ' ಮೊದಲಾದ ಕೆಲವು ಪದ್ಯಗಳು ವರ್ಧಮಾನ ಪುರಾಣದಲ್ಲಿಯೂ ಕಂಡುಬರುತ್ತವೆ.

3. ಕಾವ್ಯಾವಲೋಕನದ ಅಧಿಕರಣಾಂತ ಗದ್ಯಗಳೂ ವರ್ಧಮಾನ ಪುರಾಣದ ಆಶ್ವಾಸಾಂತ ಗದ್ಯಗಳೂ ಸಮಾನವಾಗಿವೆ. ಎರಡರಲ್ಲೂ ''ಕವಿತಾ ಗುಣೋದಯ ಶ್ರೀಮನ್ನಾಗವರ್ಮ''ನೆಂದಿದೆ.

4. ವರ್ಧಮಾನ ಪುರಾಣದಲ್ಲಿ ''ಜನಕಂ ವಿಪ್ರಕುಳಪ್ರದೀಪನನಘಂ ದಾಮೋದರಂ'', ಕಾವ್ಯಾವಲೋಕನದಲ್ಲಿ ''ಪೇಳ್ದಿಂ ದಾಮೋದರ ಪ್ರಿಯಸುತಂ ಕವಿಕರ್ಣಪೂರಂ'' ಹೀಗೆ ಮೂರು ಗ್ರಂಥಗಳಲ್ಲೂ ನಾಗವರ್ಮನ ತಂದೆಯ ಹೆಸರು ದಾಮೋದರನೆಂದಿದೆ. ಇಷ್ಟೇ ಅಲ್ಲದೆ, ವಸ್ತುಕೋಶ ವರ್ಧಮಾನ ಪುರಾಣಗಳೆರಡರಲ್ಲೂ ''ಕವಿಕರ್ಣಪೂರ'' ವೆಂಬ

ಬಿರುದು ಕಂಡುಬರುವುದನ್ನೂ "ಇದು ಸಮಸ್ತ ಭುವನಜನಸ್ತೂಯ ಮಾನಾನೂನ ಕವಿತಾಗುಣೋದಯಂ ಶ್ರೀನಾಗವರ್ಮ ವಿರಚಿತಮಪ್ಪ ಅಭಿಧಾನ ಕೋಶದೊಳ್" ಎಂಬ ಕಾಂಡಾಂತ್ಯಗದ್ಯವನ್ನೂ ಗಮನಿಸ ಬಹುದು. ಈ ಕಾರಣಗಳಿಂದ ಮೇಲಿನ ಮೂರೂ ಗ್ರಂಥಗಳು ಒಬ್ಬನೇ ನಾಗವರ್ಮನ ಕೃತಿಗಳೆಂದು ದೃಢವಾಗುತ್ತದೆ. ವರ್ಧಮಾನ ಪುರಾಣದ ಪದ್ಯಗಳನ್ನು ಕಾವ್ಯಾವಲೋಕನದಲ್ಲಿ ಉದಾಹರಿಸಿರುವುದರಿಂದಲೂ[61] ಕಾವ್ಯಾವಲೋಕನದ ಕೊನೆಯ ಪದ್ಯದಲ್ಲಿ ಅಭಿಧಾನ ವಸ್ತುಕೋಶದ ಹೆಸರಿರುವುದರಿಂದಲೂ, ನಾಗವರ್ಮನು ಉಳಿದೆರಡು ಗ್ರಂಥಗಳನ್ನು ರಚಿಸಿದ ಮೇಲೆ ಕಾವ್ಯಾವಲೋಕನವನ್ನು ರಚಿಸಿರಬೇಕು.

ಮೇಲೆ ಹೇಳಿದ ಯಾವುದೇ ಗ್ರಂಥದ ಹೆಸರು ಭಾಷಾಭೂಷಣದಲ್ಲಾಗಲೀ ಭಾಷಾಭೂಷಣದ ಹೆಸರು ಆ ಗ್ರಂಥಗಳಲ್ಲಿಯಾಗಲೀ ಕಂಡುಬರುವುದಿಲ್ಲ. ಆದರೆ ಕಾವ್ಯಾವಲೋಕನದ ಪ್ರಥಮಾಧಿಕರಣ ಶಬ್ದಸ್ಮೃತಿಯ ಕೊನೆಯ ಪದ್ಯದಲ್ಲಿನ "ಅಭಿನವಶರ್ವವರ್ಮ"ನೆಂಬ ಬಿರುದು ಈ ಅಧಿಕರಣ ಬರೆದುದರ ಪ್ರಯುಕ್ತ ಬಂದಿದ್ದರೆ, ಅಧಿಕರಣ ಬರೆಯಲಾರಂಭಿಸಿದ ಮೇಲೆ ಮುಗಿಸಿರುವುದರೊಳಗೆ ಬಂದಿರಬೇಕೆಂದೂ ಇದು ಅಸಂಭವವಲ್ಲದಿದ್ದರೂ ನಂಬುವುದು ಕಷ್ಟವಾದುದರಿಂದ ಆ ಪದ್ಯದಲ್ಲಿನ 'ಶಬ್ದಸಂಸ್ಕರಣ' ಭಾಷಾಭೂಷಣಕ್ಕೆ ಅನ್ವಯಿಸುವಂತೆ ತೋರುವುದೆಂದೂ ಡಾ|| ಎ. ವೆಂಕಟಸುಬ್ಬಯ್ಯನವರು ಅಭಿಪ್ರಾಯ ಪಟ್ಟಿದ್ದಾರೆ.[62] ನಾಗವರ್ಮನು ಶಬ್ದಸ್ಮೃತಿಯನ್ನು ಬರೆದ ನಂತರ, ಅದನ್ನು ವಿಸ್ತರಿಸಿ ಭಾಷಾಭೂಷಣ ಬರೆದನೆಂದು ಇತರ ವಿದ್ವಾಂಸರ ಮತ.

ಭಾಷಾ ಭೂಷಣದಲ್ಲಿನ 269 ಸೂತ್ರಗಳ್[63] ಪೈಕಿ 178 ಸೂತ್ರಗಳಿಗೆ ಸಂವಾದಿಯಾಗಿ ಶಬ್ದಸ್ಮೃತಿಯಲ್ಲಿ 90 ಸೂತ್ರಗಳಿವೆ. ಶಬ್ದ ಸ್ಮೃತಿಯಲ್ಲಿ ಸಂವಾದಿಯಿಲ್ಲದ 91 ಸೂತ್ರಗಳ ವಿವರ ಇಂತಿದೆ —

ಅಧಿಕಾರ ಸೂತ್ರಗಳು, ಸಂಜ್ಞೆ ಮತ್ತು ವಿವರಣಾತ್ಮಕ ಸೂತ್ರಗಳು	14
ಅವ್ಯಯ ಮತ್ತು ನಿಪಾತ ವಿಧಾನ ಸೂತ್ರಗಳು	29
ಇತರ ಸೂತ್ರಗಳು	48

ಭಾಷಾಭೂಷಣಕಾರನೇ ಅದನ್ನು ಬರೆದ ಮೇಲೆ ಶಬ್ದಸ್ಮೃತಿಯನ್ನು ಬರೆದಿದ್ದರೆ,

ಅಧಿಕಾರ, ಸಂಜ್ಞಾ, ವಿವರಣಾತ್ಮಕ ಸೂತ್ರಗಳನ್ನೂ, ಅವ್ಯಯ ನಿಪಾತ ವಿಧಾನಗಳಲ್ಲಿನ ಸೂತ್ರಗಳನ್ನೂ — ಈ ಸೂತ್ರಗಳು ಅವ್ಯಯ ನಿಪಾತಗಳ ಅರ್ಥವನ್ನು ಕೊಡುತ್ತವೆ, ವ್ಯಾಕರಣಾಂಶವೇನೂ ಅವುಗಳಲ್ಲಿಲ್ಲ — ಗ್ರಂಥ ವಿಸ್ತಾರವಾಗದಿರಲೆಂದು ಬಿಟ್ಟನೆನ್ನ ಬಹುದು. ಆದರೆ ಉಳಿದ 48 ಸೂತ್ರಗಳಲ್ಲಿ ದಿಗ್ವಾಚಕ ಸಂಖ್ಯಾವಾಚಕಗಳು, ಕಾರಕ ವಿಷಯ, ಸರ್ವನಾಮ ಬಹುವಚನ ರೂಪಗಳು ಮೊದಲಾದ ವಿಷಯಗಳಿವೆ. ಇವು ಶಬ್ದಸ್ಮೃತಿಯಲ್ಲಿ ಸೇರಿರುವ ವಿಷಯಗಳಷ್ಟೇ ಮುಖ್ಯವಾಗಿರುವುದರಿಂದಲೂ, ಇವನ್ನು ಹೇಳಲು 20-25 ಸೂತ್ರಗಳು ಸಾಕಾಗುತ್ತಿದ್ದುದರಿಂದಲೂ, ಗ್ರಂಥವಿಸ್ತಾರ ಭಯದಿಂದ ಈ ಭಾಗವನ್ನು ಬಿಡುತ್ತಿರಲಿಲ್ಲ. ಆದುದರಿಂದ ಭಾಷಾಭೂಷಣಕಾರನೇ ಆ ಗ್ರಂಥವನ್ನು ರಚಿಸಿದ ಮೇಲೆ ಶಬ್ದಸ್ಮೃತಿಯನ್ನು ಬರೆದನೆಂಬ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ.

ಎರಡು ಗ್ರಂಥಗಳೂ ಭಿನ್ನಕರ್ತೃಕಗಳೆಂಬುದನ್ನು ಸೂಚಿಸುವ ಆಂತರಿಕ ಪ್ರಮಾಣ ಗಳನ್ನು ಈಗ ಪರೀಕ್ಷಿಸಬಹುದು.

1. ವರ್ಧಮಾನ ಪುರಾಣ, ವಸುತ್ಕೋಶ, ಕಾವ್ಯಾವಲೋಕನಗಳಲ್ಲಿರುವಂತೆ ಭಾಷಾಭೂಷಣದ ಮೊದಲಲ್ಲಿ ವರ್ಧಮಾನ ಸ್ತುತಿಯಿಲ್ಲ.

ಸರ್ವಜ್ಞಂ ತದಹಂ ವಂದೇ । ಪರಂಜ್ಯೋತಿಸ್ತಮೋಪಹಮ್ ॥
ಪ್ರವೃತ್ತಾ ಯನ್ಮುಖಾದ್ದೇವೀ । ಸರ್ವಭಾಷಾಸರಸ್ವತೀ ॥

ಎಂಬ ಭಾಷಾಭೂಷಣದ ಮೊದಲ ಪದ್ಯಕ್ಕೆ 'ಯಾರ ಮುಖದಿಂದ ಸರ್ವಭಾಷಾ ಸರಸ್ವತೀ ದೇವಿಯು ಉದಿಸಿದಳೋ ಆ ತಮೋಪಹಾರಿಯಾದ ಪರಂಜ್ಯೋತಿ ಸರ್ವಜ್ಞನನ್ನು ವಂದಿಸುತ್ತೇನೆ' ಎಂದು ಅರ್ಥವಾಗುತ್ತದೆ. ಇಲ್ಲಿ 'ಸರ್ವಜ್ಞ'ನೆಂದರೆ ಜಿನನೇ ಎನ್ನಲಾಗುವುದಿಲ್ಲ. ಶಿವನೂ ಆಗಬಹುದು. ಅಕಾರಾದಿ ವರ್ಣಗಳನ್ನು ಹೇಳುವ "ಅಇಉಣ್" ಇತ್ಯಾದಿ ಸೂತ್ರಗಳನ್ನು ಸಂಸ್ಕೃತ ವೈಯಾಕರಣರು ಮಾಹೇಶ್ವರ ಸೂತ್ರಗಳೆನ್ನುತ್ತಾರೆ. ಅಕಾರಾದಿ ವರ್ಣಗಳು ಭರತ ಖಂಡದ ಭಾಷೆಗಳೆಲ್ಲಕ್ಕೂ ಸಮಾನವಾದುದರಿಂದ 'ಯಾರ ಮುಖದಿಂದ ಸರ್ವಭಾಷಾ ಸರಸ್ವತೀ ದೇವಿಯು ಉದಿಸಿದಳೋ' ಎನ್ನುವ ವಿಶೇಷಣವನ್ನು ಶಿವನಿಗೆ ಅನ್ವಯಿಸಬಹುದು. ಭಾಮಹನ ಕಾವ್ಯಾಲಂಕಾರದ "ಪ್ರಣಮ್ಯ ಸಾರ್ವಂ ಸರ್ವಜ್ಞಂ" ಎಂಬ ಪದ್ಯ ಶಿವ, ಬುದ್ಧ ಇಬ್ಬರಿಗೂ ಅನ್ವಯಿಸುತ್ತದೆಯೆಂಬ ಅಭಿಪ್ರಾಯ ವಿರುವಂತೆ ಭಾಷಾಭೂಷಣದ ಶ್ಲೋಕವೂ ಶಿವ, ಜಿನ ಇಬ್ಬರಿಗೂ ಅನ್ವಯಿಸುವಂತೆ ಬರೆದದ್ದಿರಲೂಬಹುದು.

2. ಭಾಷಾಭೂಷಣಕ್ಕೂ ಶಬ್ದಸ್ಮೃತಿಗೂ ಅನೇಕ ಕಡೆಗಳಲ್ಲಿ ವಿರೋಧ ವ್ಯತ್ಯಾಸಗಳು ಕಂಡುಬರುತ್ತವೆ. ಮುಖ್ಯವಾದ ಕೆಲವು ಇಂತಿವೆ —

1. ಅದಂತಾನ್ನಾಗಮಃ ಪೂರ್ವಸ್ಮಿನ್‌ಗಳಃ (ಭಾಷಾಭೂಷಣ. ಸೂತ್ರ 49) ಅದಂತಲಿಂಗದೊಳಾವರ್ಜಿತಮಪ್ಪ ಮಾಗಮಂಗಳ್ಗಕ್ಕುಂ (ಶಬ್ದಸ್ಮೃತಿ. ಸೂತ್ರ 20). ಭಾಷಾಭೂಷಣದಂತೆ, ಅಕಾರಾಂತ ಪದಗಳಿಗೆ ಬಹುವಚನ ಪ್ರತ್ಯಯ 'ಗಳ್' ಸೇರುವಾಗ 'ನ' ಆಗಮ ಬರುತ್ತದೆ. ಶಬ್ದಸ್ಮೃತಿಯಂತೆ 'ಮ' ಆಗಮ.

2. "ಅಱುವೆಂದಕ್ಕುಮವು ಸರ್ವನಾಮದ ಪಕ್ಕದೊಳಿರೆ ಮೊದಲೊಳಿರ್ದು ಕಾರದ ನೆಲೆಯೊಳ್" ಎಂಬ ಸ್ಮೃತಿಯ 24ನೆಯ ಸೂತ್ರದ ಪ್ರಕಾರ ಉಕಾರಾಂತ ಸರ್ವನಾಮಗಳಿಗೆ ವಿಭಕ್ತಿ ಪ್ರತ್ಯಯ ಸೇರುವಾಗ 'ಉ'ಗೆ 'ಅಱ್' ಆದೇಶ ವಾಗುವುದು.

   "ಅಱುಕಾರಸ್ಯ ಸಂಖ್ಯಾ ಸರ್ವನಾಮಗುಣವಚನೇಷು" (ಭಾಷಾ. 55) ಸೂತ್ರದ ಪ್ರಕಾರ ಸಂಖ್ಯಾವಾಚಕ ಗುಣವಚನ ಶಬ್ದಗಳ 'ಉ' ಕಾರಕ್ಕೂ 'ಅಱ್' ಆದೇಶವಾಗುತ್ತದೆ.

3. ಕವಿರಾಜಮಾರ್ಗಕಾರ "ಕಾರಕಮಾಱು ಕರ್ಮಕರಣಾದಿಕದಿಂ" ಎಂದು ಆರು ಕಾರಕಗಳನ್ನು ಹೇಳಿದ್ದಾನೆ. ಈ ಆರು ಕಾರಕಗಳು ಯಾವುವು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಮುಳಿಯ ತಿಮ್ಮಪ್ಪಯ್ಯನವರೂ ಶ್ರೀ ಎಂ. ವಿ. ಸೀತಾರಾಮಯ್ಯನವರೂ ಕರ್ತೃಕಾರಕವಲ್ಲ, ಸಂಬಂಧಕಾರಕ ವುಂಟೆನ್ನುತ್ತಾರೆ.[64] ಇತರರು ಇದನ್ನು ಒಪ್ಪುವುದಿಲ್ಲ.[65] ಈ ರೀತಿಯಾದ ಚರ್ಚೆಗೆ ಎಡೆಯಿಲ್ಲದಂತೆ, ಶಬ್ದಸ್ಮೃತಿಕಾರ

   ಪರಿವಿಡಿಯೆ ಕರ್ತೃಕರ್ಮಂ
   ಕರಣಾಖ್ಯಂ ಸಂಪ್ರದಾನಮಪನಯನಾಖ್ಯಾ।
   ನಿರತಮಪಾದಾನಮುಮಧಿ
   ಕರಣಮುಮೆನೆ ಕಾರಕಂಗಳಾಱುಂ ನೆಗಱ್ಗುಂ ॥ (ಸೂತ್ರ 16)

ಎಂದು ಸಂಬಂಧಕಾರಕವನ್ನು ಬಿಟ್ಟು ಸಂಸ್ಕೃತ ವೈಯಾಕರಣರು ಹೇಳಿರುವ ಆರು ಕಾರಕಗಳನ್ನು ಹೇಳಿದ್ದಾನೆ.

ರೈಸರ ಆವೃತ್ತಿ ಭಾಷಾಭೂಷಣದ 75ನೆಯ ಸೂತ್ರ "ಅಥ ಕಾರಕಂ ನಿರೂಪ್ಯತೇ" ಎಂದಿದ್ದು, ಅದಕ್ಕೆ "ಸಂಜ್ಞಾಸಂಧಿವಿಭಕ್ತಿ ನಿಯಮಾನನ್ತರಂ ಕರ್ತೃಕರ್ಮಕರಣ ಸಂಪ್ರದಾನಾಪಾದಾನ ಸ್ವಾಮ್ಯಾಧಿಕರಣಾಖ್ಯಂ ಕಾರಕಂ ಯಥಾಕ್ರಮಂ ನಿರೂಪ್ಯತೇ" ಎಂದು ವೃತ್ತಿಯಿದೆ. ನರಸಿಂಹಾಚಾರ್ಯರು ಈ ಸೂತ್ರವನ್ನು ಶಿರೋನಾಮವಾಗಿ ಪರಿಗಣಿಸಿ ವೃತ್ತಿಯನ್ನು ಬಿಟ್ಟಿದ್ದಾರೆ. ಆದರೆ ಇದರ ಕೆಳಗಿನ ಕನ್ನಡ ಟೀಕೆಯನ್ನು ನೋಡಿದರೆ ಬಹುಶಃ ಮೇಲಿನಂತೆ ವೃತ್ತಿ ಇದ್ದಿರಬೇಕೆಂದು ತೋರುತ್ತದೆ. ಈ ಸೂತ್ರವೃತ್ತಿಗ್ಗಳನ್ನು ಬಿಟ್ಟರೂ "ಅಪಾದಾನೇ ಪಂಚಮೀ" (ಸೂತ್ರ 84) ಮತ್ತು "ಅಧಿಕರಣೇ ಸಪ್ತಮೀ" (ಸೂತ್ರ 86) ಇವುಗಳ ಮಧ್ಯೆ "ಸಂಬಂಧೇ ಷಷ್ಠೀ" ಎಂಬ ಸೂತ್ರವೂ ಅದಕ್ಕೆ "ಸ್ವಸ್ವಾಮಿಭಾವಾದಿ ಸಂಬಂಧೇ ಷಷ್ಠೀವಿಭಕ್ತಿರ್ಭವತಿ" ಎಂಬ ವೃತ್ತಿಯೂ ಇರುವುದರಿಂದ ಭಾಷಾಭೂಷಣ ಕಾರನ ಮತದಂತೆ ಸಂಬಂಧಕಾರಕವುಂಟು ಮತ್ತು ಒಟ್ಟು ಕಾರಕಗಳು ಏಳು.

4. ಶಬ್ದಸ್ಮೃತಿಯಲ್ಲಿನ "ಭಾವದೊಳಮೇಕವಚನಮೆ ಅಕ್ಕುಂ" (ಸೂತ್ರ 35) ಮತ್ತು "ಎಸೆಗುಂ ಭಾವದೊಳಮರ್ದನೇಕ ಸಂಜ್ಞವಚನಂ" (ಸೂತ್ರ 95) ಎಂಬ ಪ್ರಕಾರ ಭಾವಾರ್ಥದಲ್ಲಿ ಏಕವಚನವೇ ಇರಬೇಕು.

   ಆದರೆ ಭಾಷಾಭೂಷಣದ "ಭಾವ ವಚನೇಪಿ" (ಸೂತ್ರ 91) ಮತ್ತು "ಭಾವೇ ಚ" (ಸೂತ್ರ 206) ಮತ್ತು ಇವುಗಳ ವೃತ್ತಿಗಳಂತೆ ಏಕವಚನ ವನ್ನಾಗಲೀ ಬಹುವಚನವನ್ನಾಗಲೀ ಸಂದರ್ಭಾನುಸಾರ ಉಪಯೋಗಿಸ ಬಹುದು.

5. "ಕೆಚ್ಚನೆ ಬೆಚ್ಚನೆ ಪಚ್ಚನೆ ಶಬ್ದಾನಾಂ ಚಾದೇರ್ಮತ್ವಂ" "ಸ್ವಂತತಾಚ" (ಭಾಷಾ. ಸೂತ್ರ 145, 146) ಸೂತ್ರಗಳ ವೃತ್ತಿಯಲ್ಲಿ 'ಪಚ್ಚನೆ' ಶಬ್ದಕ್ಕೆ ಸಂಬಂಧಿಸಿದ ಉದಾಹರಣೆ, ಪಸುವಂದರ್, ಪಸುವೊನ್.

ಇದಕ್ಕೆ ಸಂವಾದಿಯಾದ ಶಬ್ದಸ್ಮೃತಿ 52ನೆಯ ಸೂತ್ರ, "ಪಚ್ಚನೆಯುಂ ಕೆಚ್ಚನೆಯುಂ ಬೆಚ್ಚನೆಯುಮೆನಿಪ್ಪ..... ಕೆಲರಿಚ್ಚೆಯಿಪರ್ ಸ್ವಂತಮುಮಂ" ಎಂಬುದಕ್ಕೆ ಉದಾಹರಣೆ "ಪಸುರ್ವೊನ್ನ ಜಗಲಿ ಪಚ್ಚೆಯ । ಪಸುರ್ವಂದರ್ ಮುತ್ತಿನಕ್ಕಿ ನೀಲದ ಜಾಗಂ ॥"73

6. ಶಬ್ದಸ್ಮೃತಿಯ ಸಮಾಸ ಪ್ರಕರಣದ 58ನೆಯ ಸೂತ್ರದಲ್ಲಿ, "ಅದಿದೆನ್ನದೆ ಮೂಱಿಂಬೀ ಪದದಂತಂ ಲೋಪಮೆಯ್ದುಗುಂ" ಎಂದು ಹೇಳಿ "ಮೂಲೋಕ"ವೆಂಬ ಪದವಿರುವ ಪದ್ಯವನ್ನು ಉದಾಹರಿಸಿದೆ.

ಭಾಷಾಭೂಷಣದಲ್ಲಿ "ತ್ರ್ಯಾದೀನಾಂ ವ್ಯಂಜನೇಷ್ವೇವ" (ಸೂತ್ರ 156) ಎಂದು

ಹೇಳಿ, ಸ್ವರ ಪರವಾದರೆ, ಲೋಪವಿಲ್ಲವೆನ್ನುವುದಕ್ಕೆ 'ಮೂಱಡಿ' ಇತ್ಯಾದಿ ಉದಾಹರಣೆ ಗಳನ್ನು ಕೊಟ್ಟಿದ್ದಾನೆ.

7. ''ಅದು ಇದು ಏನ್ಭ್ಯಃ ಪ್ರಮಾಣೇ ನಿತುಃ'' ''ಪ್ರಕಾರಕಾಲಾರ್ಥೇಂ ತೂಂದೂ'' (ಭಾಷಾ. ಸೂತ್ರ 181, 182) ಇವುಗಳ ಪ್ರಕಾರ, ''ಏನ್'' ಎಂಬುದರಿಂದ 'ಎನಿತು', 'ಎಂತು', 'ಎಂದು', ಎಂಬ ಪದಗಳು ಉತ್ಪನ್ನವಾಗುತ್ತವೆ.

ಆದರೆ ಶಬ್ದಸ್ಮೃತಿಯ ''ಅದುವಿದುವುದುವೆಂಬಿಂತೀ ವಿದಿತಾರ್ಥದ....... ಪರಿಮಾಣ ದೊಳನಿತಿನಿತೆನಿತೆನಿಪ್ಪ ರೂಪನಿಪಾತಂ'' ಮತ್ತು ''ಮತ್ತಮುವರ್ಕಕ್ಕುಂ ಸಮುಪಾತ್ತ ನಕಾರಂ ಪ್ರಕಾರ ಕಾಲಾರ್ಥಂ ಮೆಯ್ವೆತ್ತಿರೆ ತುದುವೆಂಬಿವು'', ಎಂಬ 79, 80ನೇ ಸೂತ್ರಗಳ ಪ್ರಕಾರ ಎನಿತು, ಎಂತು, ಎಂದು ಎಂಬ ಪದಗಳು ''ಉದು'' ಎಂಬುದರಿಂದ ಉತ್ಪನ್ನವಾಗುತ್ತವೆ.[66]

8. ''ದದಪವಕಾರಂಗಳ್..... ವಿಭಕ್ತಿತ್ರಿತಯಕ್ಕದೆಲ್ಲ ವಚನಂಗಳೊಳ ಮಿದಾಗಮ ಮಕ್ಕುಂ'' ಎಂಬ ಶಬ್ದಸ್ಮೃತಿಯ 86ನೆಯ ಸೂತ್ರದಂತೆ 'ಇಕಾರಾಗಮ' ನಿತ್ಯ. ಉದಾಹರಣ ಪದ್ಯಗಳಲ್ಲಿನ 'ಆಡಿದಂ, 'ಪಾಡಿ ದುದು', 'ಮಾಡಿದಪಂ' ಮೊದಲಾದ ಪದಗಳಲ್ಲೆಲ್ಲ ಇಕಾರಾಗಮ ಬಂದಿದೆ.

ಭಾಷಾಭೂಷಣದ ''ದಾದಾವಿದಾಗವೋ ಬಹುಳಂ'' ಎಂಬ 210ನೆಯ ಸೂತ್ರದಂತೆ 'ಇಕಾರಾಗಮ' ನಿತ್ಯವಲ್ಲ. ವೃತ್ತಿಯಲ್ಲಿ 'ನಡೆದತ್ತು', 'ಪಡೆದಂ' ಇತ್ಯಾದಿ ಇಕಾರಾಗಮವಿಲ್ಲದ ಉದಾಹರಣೆಗಳಿವೆ.

3. ಶಬ್ದಸ್ಮೃತಿಯಲ್ಲಿರುವ ಕೆಲವು ವಿಷಯಗಳು ಭಾಷಾಭೂಷಣದಲ್ಲಿಲ್ಲ.

1. ಶಬ್ದಸ್ಮೃತಿ. ಸೂತ್ರ 33.

''ಮೊದಲ ವಿಭಕ್ತಿಯೆ ವಾಕ್ಯದ
ಮೊದಲೊಳ್ ಪುದಿದಿರೆಯುಮುರು ವಿಶೇಷಣಗತಿಯಿಂ।
ಪದಸಂತಾನಂ ತಾನದು
ತುದಿಯ ವಿಭಕ್ತಿಯೊಳೆ ಕಾರಕಾನ್ವಿತಮಕ್ಕುಂ॥''

ಈ ಸೂತ್ರದಂತೆ ವಿಶೇಷ್ಯ ಯಾವ ವಿಭಕ್ತಿಯಲ್ಲಿದ್ದರೂ, ವಿಶೇಷಣ ಪ್ರಥಮಾ ವಿಭಕ್ತಿಯಲ್ಲಿರಬಹುದು. (ಸಂಸ್ಕೃತ ವ್ಯಾಕರಣದಂತೆ ವಿಶೇಷ್ಯ ವಿಶೇಷಣಗಳು ಒಂದೇ

ವಿಭಕ್ತಿಯಲ್ಲಿರಬೇಕಾದುದರಿಂದ, ಶಬ್ದಸ್ಮೃತಿಕಾರನೇ ಭಾಷಾಭೂಷಣವನ್ನು ಬರೆದಿದ್ದರೆ, ಕನ್ನಡದಲ್ಲಿ ವಿಶೇಷಣ ಬೇರೆ ವಿಭಕ್ತಿಯಲ್ಲಿರಬಹುದೆಂಬ ವಿಷಯವನ್ನು ಭಾಷಾಭೂಷಣದಲ್ಲಿ ಹೇಳದಿರುತ್ತಿರಲಿಲ್ಲ).

2. ''ಮಾಯೆಂಬುದು ಮಹಿಮಾಭಿಪ್ರಾಯದೊಳೊಂದಿರ್ಕುಮೊಂದಿ ಮಹತೆಂಬುದಱೊಳ್'' (ಶಬ್ದ. ಸೂತ್ರ 55) ಉದಾಹರಣೆ — ಮಾದೇವ, ಮಾದಾನಿ.

3. ''ಕೆಲಬರುಪಾಂತ್ಯದಕಾರದ ನೆಲೆಯೊಳೊಕಾರಂ..... ಅಕ್ಕುಮದೆಂಬರ್'' (ಶಬ್ದ. ಸೂತ್ರ 66) ಉದಾಹರಣೆ — ಆವೊಂ, ಕಾವೊಂ.

4. ''ಅಲ್ಲಿ ಇದುಂಟೆಂಬರ್ಥದೊಳೆಲ್ಲಿಯುಮುಳ್ಳೊಡೆಯ ವಂತಶಬ್ದಮವಕ್ಕುಂ। ಎಲ್ಲಂದದೊಳಂ ಪೋಲಿಸುವಲ್ಲಿ ಗುಣಾಧಿಕರೊಳಂತೆ ವೋಲ್ ತಾನಕ್ಕುಂ ॥'' (ಶಬ್ದ. ಸೂತ್ರ 74)

ಭಾಷಾಭೂಷಣದಲ್ಲಿ ''ತದಸ್ಯಾಸ್ತೀತಿವಂತಃ'' (ಸೂತ್ರ 172) ಮತ್ತು ''ಉಪಮಾನೇ ವೋಲ್'' (ಸೂತ್ರ 173) ಎಂಬಲ್ಲಿ 'ವಂತ', 'ವೋಲ್' ಪ್ರತ್ಯಯಗಳನ್ನು ಮಾತ್ರ ಹೇಳಿದೆ. 'ಉಳ್ಳ' 'ಒಡೆಯ' ಮತ್ತು 'ಅಂತೆ' ಪ್ರತ್ಯಯಗಳನ್ನು ಹೇಳಿಲ್ಲ.

5. ''ಗಣನಾ ವಿಶೇಷ ಪರಿಪೂರಣದೊಳಮನಿತಿನಿತೆನಿತ್ತು ಶಬ್ದಂಗಳ ಪೂ।
ರಣದೊಳಮನೆಯ ಪ್ರತ್ಯಯಮೊಣರ್ದು ಸಮಂತೊಂದಿ ತೋಱುಗುಂ
ತದ್ಧಿತದೊಳ್ ॥ (ಶಬ್ದ. ಸೂತ್ರ 81)
''ಸಂಖ್ಯಾಯಾಃ ಪೂರಣೇऽನೆಯಃ'' (ಭಾಷಾ. ಸೂತ್ರ 176).

ಭಾಷಾಭೂಷಣದಲ್ಲಿ ಸಂಖ್ಯೆಗಳಿಗೆ ಮಾತ್ರ 'ಆನೆಯ' ಪ್ರತ್ಯಯವನ್ನು ಹೇಳಿದೆ; ಆನಿತು ಮೊದಲಾದ ಶಬ್ದಗಳಿಗೆ ಹೇಳಿಲ್ಲ.

6. ''ಪ್ರತಿಷೇಧದೊಳಂ ಕೆಲಬರ ಮತದಿಂದಲ್ ವರ್ತಿಕುಂ.... ಚತುರ್ಥಿ ಸಮಸಲ್ಗು ಮೆಂಬರದಱೊಳ್ ಕೆಲಬರ್'' (ಶಬ್ದ. ಸೂತ್ರ 94).

ಉದಾಹರಣೆ — ಬಿತ್ತರಿಸಲ್ಕೆ ವೇೞ್ ವರೂಥೋತ್ಕರಮಂ.

ಶಬ್ದಸ್ಮೃತಿಯನ್ನು ಬರೆದ ನಾಗವರ್ಮನೇ, ಅನಂತರ ಭಾಷಾಭೂಷಣವನ್ನೂ ಬರೆದಿದ್ದರೆ ಶಬ್ದಸ್ಮೃತಿಯಲ್ಲಿದ್ದ ಈ ವಿಷಯಗಳನ್ನು ಭಾಷಾಭೂಷಣದಲ್ಲಿ ಹೇಳದಿರುತ್ತಿರಲಿಲ್ಲ.

ಈ ಎಲ್ಲ ಆಂತರಿಕ ಪ್ರಮಾಣಗಳನ್ನೂ ಪರಿಶೀಲಿಸಿದರೆ, ಶಬ್ದಸ್ಮೃತಿಯನ್ನು ಅನುಸರಿಸಿ, ಬೇರೊಬ್ಬ ನಾಗವರ್ಮ ಭಾಷಾಭೂಷಣವನ್ನು ಬರೆದಿದ್ದಾನೆಂದು ಹೇಳಬಹುದು. ಈ ನಾಗವರ್ಮ ನಾಗಚಂದ್ರನಿಗಿಂತ ಈಚಿನವನಾದರೂ ವರ್ಧಮಾನ ಪುರಾಣದ ನಾಗವರ್ಮ ನಾಗಚಂದ್ರನಿಗಿಂತ ಹಿಂದಿನವನು. ನಾಗವರ್ಮನು ವರ್ಧಮಾನ ಪುರಾಣದಲ್ಲಿ ಪುರಾಣಕರ್ತರ ಶ್ರೇಣಿಯಲ್ಲಿ ನಾಗಚಂದ್ರನ ಹೆಸರನ್ನೇಕೆ ಎತ್ತಲಿಲ್ಲ ಎಂಬ ಶ್ರೀ ಸೀತಾರಾಮಯ್ಯನವರ ಪ್ರಶ್ನೆಗೆ ಇಲ್ಲಿ ಉತ್ತರ ಸಿಕ್ಕುತ್ತದೆ.

ಕೊನೆಯದಾಗಿ ಜನ್ನನ ಅನಂತನಾಥಪುರಾಣದ ಪದ್ಯವಿಚಾರ : ಬಹುಚರ್ಚೆಗೆ ಒಳಗಾದ ಅನಂತನಾಥಪುರಾಣದ ಪದ್ಯದ ಪಾಠ ಹೀಗಿದೆ[67] —

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ
ರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ।
ದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ
ಕ್ತಿನವೀನೋಜ್ವಳ ಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ॥ 1.34

ಆರ್. ನರಸಿಂಹಾಚಾರ್ಯರು "ಜನ್ನಂಗುಪಾಧ್ಯಾಯನ್" ಎನ್ನುವವರೆಗೆ ಒಂದು ವಾಕ್ಯವೆಂದೂ ಉಳಿದ ಭಾಗ ಮತ್ತೊಂದು ವಾಕ್ಯವೆಂದೂ ಅಭಿಪ್ರಾಯಪಟ್ಟು ಕಾವ್ಯಾವಲೋಕನಾದಿ ಗ್ರಂಥಗಳ ಕರ್ತೃವಾದ "ಅಭಿನವ ಶರ್ವವರ್ಮ ಬಿರುದುಳ್ಳ ಎರಡನೆಯ ನಾಗವರ್ಮನು ಚಾಳುಕ್ಯ ಎರಡನೆಯ ಆಸ್ಥಾನದಲ್ಲಿ ಸುಮಾರು ಕ್ರಿ.ಶ. 1145ರಲ್ಲಿ ಜನ್ನನ ಕಟಕೋಪಾಧ್ಯಾಯನೆಂದೂ ಪ್ರತಿಪಾದಿಸಿದರು. ನಾಗವರ್ಮ ಒಬ್ಬನೇ ಮತ್ತು ಅವನು ಒಂದನೆಯ ಜಗದೇಕಮಲ್ಲನ ಕಾಲದಲ್ಲಿ (ಕ್ರಿ.ಶ. 1015-42) ಇದ್ದನೆಂದು ವಾದಿಸಿದ ಡಾ॥ ಎ. ವೆಂಕಟಸುಬ್ಬಯ್ಯನವರು, ಅನಂತನಾಥ ಪುರಾಣದ ಕಾಲಕ್ಕಿಂತ ಸುಮಾರು 200 ವರ್ಷ ಹಿಂದೆ ಇದ್ದ ನಾಗವರ್ಮನು ಜನ್ನನ ಗುರುವಾಗು ವುದು ಸಾಧ್ಯವಿಲ್ಲವೆಂದು ಹೇಳಿ ನರಸಿಂಹಾಚಾರ್ಯರ ಅಭಿಪ್ರಾಯವನ್ನು ತಳ್ಳಿಹಾಕಿದರು. ಡಾ॥ ವೆಂಕಟಸುಬ್ಬಯ್ಯನವರ ಅಭಿಪ್ರಾಯದಂತೆ 'ನಾಗವರ್ಮನ್' ಎಂಬಲ್ಲಿಗೇ ಮೊದಲ ವಾಕ್ಯ ಮುಗಿಯುತ್ತದೆ; 'ಅಭಿನವ ಶರ್ವವರ್ಮ' ಮತ್ತು 'ಇದಾನೀಂತನ ಶರ್ವವರ್ಮ' ಸಮಾನಾರ್ಥಕಗಳಲ್ಲ. ಸುಮನೋಬಾಣನಲ್ಲಿ ನಾಗವರ್ಮನ ಸಾದೃಶ್ಯವನ್ನು ಪ್ರತಿಪಾದಿಸಿ, 'ಇದಾನೀಂತನ ಶರ್ವವರ್ಮ'ನಾದ ಸುಮನೋಬಾಣನೇ ಜನ್ನನ ಗುರುವೆಂದು ಹೇಳುವುದು ಕವಿಯ ಉದ್ದೇಶವೆಂದು ಅವರ ನಿರ್ಣಯ.

ವರ್ಧಮಾನ ಪುರಾಣದ ಕಾಲ ಕ್ರಿ.ಶ. 1042 ಎಂದು ನಿರ್ಣಯವಾಗಿರು ವುದರಿಂದ, ಆ ಗ್ರಂಥವನ್ನೂ, ಕಾವ್ಯಾವಲೋಕನವನ್ನೂ ಬರೆದ "ಅಭಿನವ ಶರ್ವ

ವರ್ಮ'' ನಾಗವರ್ಮನು ಜನ್ನನ ಗುರುವಲ್ಲವೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಕಾರಣದಿಂದ , ಡಾ|| ಕಲಬುರ್ಗಿ, ಶ್ರೀ ಸಣ್ಣಯ್ಯ ಮತ್ತು ಶ್ರೀ ಸೀತಾರಾಮಯ್ಯ ನವರು, ಡಾ|| ವೆಂಕಟಸುಬ್ಬಯ್ಯನವರ ಅಭಿಪ್ರಾಯವನ್ನು ಅನುಮೋದಿಸಿ, ''ಇದಾನೀಂತನ ಶರ್ವವರ್ಮ'' ನೆಂಬ ಬಿರುದನ್ನು ಸುಮನೋಬಾಣನಿಗೆ ಅನ್ವಯಿಸಿ ಅವರು ಜನ್ನನ ಗುರುವೆನ್ನುತ್ತಾರೆ.

ನರಸಿಂಹಾಚಾರ್ಯರು ಪದ್ಯವನ್ನು ವಾಕ್ಯಗಳಾಗಿ ವಿಭಾಗ ಮಾಡಿರುವುದು ಹೆಚ್ಚು ಸರಳ ಮತ್ತು ಸಹಜ ಎಂಬಂಶವನ್ನು ಬಿಟ್ಟರೂ, ಬೇರೆ ಕಾರಣಗಳಿಂದಾಗಿ ಡಾ|| ವೆಂಕಟಸುಬ್ಬಯ್ಯ ನವರ ವಿವರಣೆಯನ್ನು ಒಪ್ಪಲಾಗುವುದಿಲ್ಲ.

(1) ಜನ್ನನಿಗೆ 'ಕವಿಚಕ್ರವರ್ತಿ'ಯೆಂಬ ಬಿರುದನ್ನಿತ್ತ ಹೊಯ್ಸಳ ವೀರಬಲ್ಲಾಳನು ಚಾಳುಕ್ಯರ ಅಧಿರಾಜತ್ವವನ್ನೊಪ್ಪದೆ ಸ್ವತಂತ್ರನಾಗಿದ್ದ. ಇವನ ಮಗ ಎರಡನೆಯ ನರಸಿಂಹನ ಆಶ್ರಯದಲ್ಲಿ ಜನ್ನನು ಅನಂತನಾಥಪುರಾಣವನ್ನು ಬರೆಯುವ ಹೊತ್ತಿಗೆ ಚಾಳುಕ್ಯ ಸಾಮ್ರಾಜ್ಯ ನಾಮಾವಶೇಷವಾಗಿತ್ತು. ಹೀಗಿರುವಾಗ, ಸುಮಾರು 200 ವರ್ಷಗಳ ಹಿಂದೆ ಚಾಳುಕ್ಯ ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ಕಟಕೋಪಾಧ್ಯಾಯನಾಗಿದ್ದನೆನ್ನುವ ಮತ್ತು ತನಗೆ ಯಾವ ಸಂಬಂಧವೂ ಇಲ್ಲದಿದ್ದ ನಾಗವರ್ಮನಿಗೆ ತನ್ನ ಸಮಕಾಲೀನನಾದ ಕಟಕೋಪಾಧ್ಯಾಯ ಸುಮನೋಬಾಣನನ್ನು ಜನ್ನನು ಹೋಲಿಸುವುದು ತೀರ ಅಸಂಭವ. ಹೀಗೆ ಹೋಲಿಸುವುದು ಚಾಳುಕ್ಯರ ಅಧಿರಾಜತ್ವವನ್ನು ನೆನಪು ಮಾಡುವುದರಿಂದ ಅಲೌಕಿಕವೂ ಸಹ.

(2) ಸುಮನೋಬಾಣನ ಗ್ರಂಥಗಳಾವುವೂ ನಮಗೆ ಸಿಕ್ಕಿಲ್ಲ. ಅವನ ಯಾವುದೇ ಕೃತಿಯ ಹೆಸರೂ ಸಹ ನಮಗೆ ಗೊತ್ತಿಲ್ಲ. ಕೇಶಿರಾಜನು ''ಕವಿ ಸುಮನೋಬಾಣ'' ನೆಂದಿದ್ದಾನೆಯೇ ಹೊರತು, ವೈಯಾಕರಣನೆಂದು ಹೇಳಿಲ್ಲವೆಂಬುದನ್ನು ಗಮನಿಸಿದರೆ, ಕೇಶಿರಾಜನ ಮಾತಾಮಹನೆಂಬ ಕಾರಣದಿಂದ ಸುಮನೋಬಾಣನೂ ವೈಯಾಕರಣ ನೆಂದೂ, ಜನ್ನನು ಅವನನ್ನು ''ಇದಾನೀಂತನ ಶರ್ವವರ್ಮ''ನೆಂದು ಕರೆದಿದ್ದಾನೆಂದೂ ಹೇಳುವುದು ಸಾಧುವಲ್ಲ.

ಈ ಕಾರಣಗಳಿಂದ ನರಸಿಂಹಾಚಾರ್ಯರು ವಾಕ್ಯವಿಭಾಗ ಮಾಡಿರುವುದನ್ನೂ, ಕಟಕೋಪಾಧ್ಯಾಯನಾಗಿದ್ದ ನಾಗವರ್ಮನೆಂಬ ವೈಯಾಕರಣನೊಬ್ಬನು ಜನ್ನನಿಗೆ ಗುರುವಾಗಿದ್ದನೆಂಬುವುದನ್ನೂ ಒಪ್ಪಬೇಕಾಗುವುದು. ಆದರೆ ಈ ನಾಗವರ್ಮನು ಯಾರು, ಅವನು ಯಾವ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದ, ಜನ್ನನಿಗೂ

ಸುಮನೋಬಾಣನಿಗೂ ಏನು ಸಂಬಂಧ ಎಂಬ ವಿಷಯಗಳನ್ನು ಪರ್ಯಾಲೋಚಿಸು ವುದು ಅಗತ್ಯ.

ಸುಮನೋಬಾಣನ ವಿಚಾರ

ಯಶೋಧರ ಚರಿತೆಯ[68]

ವಾಣೀ ಪಾರ್ವತಿ ಮಾಡಿದ ಜಾಣೆಂತುಟೊ ಭಾಳಲೋಚನಂ ಕವಿಸುಮನೋ।
ಬಾಣನ ಮಗನೆಂದಖಿಳ ಕ್ಷೋಣಿಗೆ ಪೆಸರಾಯ್ತು ಕೂರ್ಮೆಗಿದು ಕೌತುಕಮೇ ॥

ಎಂಬ ಪದ್ಯದ ಆಧಾರದ ಮೇಲೆ, ಸುಮನೋಬಾಣನು ಜನ್ನನ ತಂದೆಯೆಂದು ನರಸಿಂಹಾಚಾರ್ಯರೆಂದರೆ, ತಂದೆಗೆ ಸಮಾನನಾಗಿದ್ದನೆಂದು ಶ್ರೀ ಮಹೀಶವಾಡಿ ಹೇಳುತ್ತಾರೆ.[69] ಈ ವಿಷಯದ ಚರ್ಚೆ ಇಲ್ಲಿ ಅಪ್ರಕೃತ. ಜನ್ನನು ತನ್ನ ಮತ್ತು ತನ್ನ ಪತ್ನಿಯ ಧಾರ್ಮಿಕ ಗುರುಪರಂಪರೆಯನ್ನು ಹೇಳುವ ಪದ್ಯಗಳಿಗೆ (ಪದ್ಯ 18-33) ಸೇರಿದಂತೆ 'ಜನನಾಥಂ ಜಗದೇಕನಲ್ಲಿ' ಪದ್ಯವನ್ನು ಹೇಳಿರುವುದರಿಂದ, ಸುಮನೋಬಾಣನು ಜನ್ನನ ವಿದ್ಯಾಗುರುವೆನ್ನುವುದು ಸೂಕ್ತ ಎಂಬ ಡಾ॥ ಕಲಬುರ್ಗಿಯವರ ಅಭಿಪ್ರಾಯ ಸಾಧುವಾಗಿದೆ.[70] ಸುಮನೋಬಾಣನು ಜನ್ನನ ತಂದೆಯೇ ಆಗಿರಲಿ, ತಂದೆಗೆ ಸಮಾನನೇ ಆಗಿರಲಿ ವಿದ್ಯಾಗುರುವೂ ಆಗಿರುವುದು ಸಾಧ್ಯವಷ್ಟೆ ? ಸುಮನೋಬಾಣ ಜನ್ನನ ಉಪಾಧ್ಯಾಯನಲ್ಲವೆನ್ನುವ ಶ್ರೀ ಮಹೀಶವಾಡಿಯವರು ತಮ್ಮ ಅಭಿಪ್ರಾಯಕ್ಕೆ ಯಾವ ಕಾರಣವನ್ನೂ ಕೊಟ್ಟಿಲ್ಲ.

ಜಗದೇಕ ಮತ್ತು ನಾಗವರ್ಮ

ಡಾ॥ ಸಂಗಮೇಶ ಬಿರಾದಾರರು ಒಂದನೆಯ ಹೊಯ್ಸಳ ನರಸಿಂಹನಿಗೂ ಜಗದೇಕಮಲ್ಲನೆಂಬ ಬಿರುದಿತ್ತೆಂದು ಹೇಳಿ ಅದಕ್ಕೆ ಆಧಾರಗಳನ್ನು ಕೊಟ್ಟಿರುತ್ತಾರೆ.[71] ಈ ನರಸಿಂಹನ ಆಸ್ಥಾನದಲ್ಲಿ "ಇದಾನೀಂತನ ಶರ್ವವರ್ಮ" ನಾಗವರ್ಮನೂ ಎರಡನೆಯ ನರಸಿಂಹನ ಆಸ್ಥಾನದಲ್ಲಿ ಸುಮನೋಬಾಣನೂ ಕಟಕೋಪಾಧ್ಯಾಯ ರಾಗಿದ್ದರೆಂದೂ, ಇವರಿಬ್ಬರೂ ಜನ್ನನ ಗುರುಗಳೆಂದೂ, ಇಬ್ಬರು ನರಸಿಂಹರನ್ನು ಪ್ರತ್ಯೇಕಿಸುವ ಸಲುವಾಗಿ ಜನ್ನನು ಒಂದನೆಯ ನರಸಿಂಹನನ್ನು 'ಜಗದೇಕ'ನೆಂದು ಕರೆದಿದ್ದಾನೆಂದೂ ಅವರ ತೀರ್ಮಾನ. ಈ ಅಭಿಪ್ರಾಯವು ಯುಕ್ತಿಯುಕ್ತವೂ, ಗ್ರಾಹ್ಯವೂ ಆಗಿದೆ.

ಕ್ರಿ.ಶ. 1190ರ ಚನ್ನರಾಯಪಟ್ಟಣ 179ನೆಯ ಶಾಸನವನ್ನು ಬರೆದಾಗ ಜನ್ನನ ವಯಸ್ಸು ಸುಮಾರು 25 ವರ್ಷಗಳೆಂದು ಭಾವಿಸಿದರೆ, ಒಂದನೆಯ ನರಸಿಂಹನ

ಆಸ್ಥಾನದಲ್ಲಿದ್ದ ನಾಗವರ್ಮನು ಬಾಲ್ಯದಲ್ಲಿಯೂ, 1230ರಲ್ಲಿ ಅನಂತನಾಥ ಪುರಾಣ ರಚಿತವಾದಾಗ ಜೀವಂತನಾಗಿದ್ದ ಸುಮನೋಬಾಣನು ನಾಗವರ್ಮನ ಅನಂತರವೂ ಜನ್ನನ ಉಪಾಧ್ಯಾಯರಾಗಿರುವುದು ಸಾಧ್ಯ.

'ಅಭಿನವ ಶರ್ವವರ್ಮ'ನೆಂಬ ಬಿರುದು ಶಬ್ದಸ್ಮೃತಿಕಾರನಿಗೆ ಹೊಂದುವಂತೆ, 'ಇದಾನೀಂತನ ಶರ್ವವರ್ಮ'ನೆಂಬ ಬಿರುದು ಭಾಷಾಭೂಷಣಕಾರನಿಗೆ ಹೊಂದುತ್ತದೆ. ಹಿಂದೆಯೇ ಸೂಚಿಸಿರುವಂತೆ, ಭಾಷಾಭೂಷಣವು ಕ್ರಿ.ಶ. 1120ಕ್ಕಿಂತ ಈಚೆಗೆ ರಚಿತವಾಗಿರಬಹುದಾದುದರಿಂದ, ಭಾಷಾಭೂಷಣಕಾರ ನಾಗವರ್ಮನೇ ಜನ್ನನ ಗುರುವಾಗಿದ್ದ ನಾಗವರ್ಮನೆಂದು ಹೇಳಬಹುದು.[72]

ಟಿಪ್ಪಣಿಗಳು

1. ನಾಗವರ್ಮನ ಕನ್ನಡ ಛಂದಸ್ಸು, Ed. Rev. F. Kittel, Basel Mission, Mangalore ಪುಟಗಳು xix ರಿಂದ xxii, xxix, xxxvi ರಿಂದ xxxviii.
2. ಕರ್ಣಾಟಕ ಭಾಷಾಭೂಷಣ. Ed. Lewis Rice ಪುಟಗಳು i ರಿಂದ iii.
3. ಕರ್ಣಾಟಕ ಕಾದಂಬರಿ (1892), ಪೀಠಿಕೆ, ಪುಟ v.
4. ನಾಗವರ್ಮ ವಿರಚಿತಂ ಕಾವ್ಯಾವಲೋಕನಂ (ಮೈಸೂರು ವಿಶ್ವವಿದ್ಯಾನಿಲಯ, ತೃತೀಯ ಮುದ್ರಣ (1967) Introd. ಪುಟಗಳು xiv ರಿಂದ xxiii.
5. ಎ. ವೆಂಕಟಸುಬ್ಬಯ್ಯ; ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ (1927), ಪುಟಗಳು 155-181.
6. ಕರ್ಣಾಟಕ ಕವಿಚರಿತೆ, ತೃತೀಯ ಸಂಪುಟ (1974ರ ಮುದ್ರಣ, ಕನ್ನಡ ಸಾಹಿತ್ಯ ಪರಿಷತ್ತು) ಅವತರಣಿಕೆ, ಪುಟಗಳು xLix ರಿಂದ Lvi.
7. ಕರ್ಣಾಟಕ ಕವಿಚರಿತೆ, ತೃತೀಯ ಸಂಪುಟ (1929) ಪುಟ 478.
8. ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 14, ಸಂಚಿಕೆ 3, (1929), ಪುಟಗಳು 174-185.
9. ಕರ್ಣಾಟಕ ಕಾದಂಬರೀ ಸಂಗ್ರಹ (1953), ಐದನೆಯ ಮುದ್ರಣ (1969), ಪೀಠಿಕೆ ಪುಟ iv-ix.
10. ವಿವರಗಳನ್ನು ಈ ಗ್ರಂಥಗಳಲ್ಲಿ ನೋಡಬಹುದು —
    1) ಒಂದನೆಯ ನಾಗವರ್ಮ (ಐ.ಬಿ.ಎಚ್. ಪ್ರಕಾಶನ, ಕವಿಕಾವ್ಯಪರಂಪರೆಯ 2ನೇ ಗ್ರಂಥ. 1973). 'ಕಾಲ, ದೇಶ, ಕೃತಿಗಳು' — ಎಂಬ ಎಚ್. ಎಂ. ಶಂಕರ ನಾರಾಯಣರಾವ್ ಅವರ ಲೇಖನ.
    2) ಕರ್ಣಾಟಕ ಭಾಷಾಭೂಷಣಂ (ಶಾರದಾ ಮಂದಿರದ ಪುನರ್ಮುದ್ರಣ 1975). 'ಕನ್ನಡ ಸಾಹಿತ್ಯದಲ್ಲಿ ನಾಗವರ್ಮರು' ಎಚ್. ಎಂ. ಶಂಕರನಾರಾಯಣರಾವ್ ಅವರ ಬರಹ. ಪುಟಗಳು ix ರಿಂದ xxxiv.
    3) ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ — ಮೂರನೆಯ ಸಂಪುಟ (ಮೈಸೂರು ವಿಶ್ವವಿದ್ಯಾನಿಲಯ, 1976); 'ನಾಗವರ್ಮ ಸಮಸ್ಯೆ' — ಸಿ. ಪಿ.

ಕೃಷ್ಣಕುಮಾರ್ ಅವರ ಲೇಖನ. ಪುಟಗಳು 528-41.

11. ಕನ್ನಡ ಛಂದಸ್ಸಂಪುಟ, ಸಂ. ಎಲ್. ಬಸವರಾಜು (1974). ಪೀಠಿಕೆ ಪುಟಗಳು xxviii, xLix-Lii.

12. ಅದೇ. ಅರಿಕೆ, ಪುಟ iv

13. ಅದೇ. ಪೀಠಿಕೆ ಪೂಟ Lii

14. ಅದೇ. ಪುಟಗಳು 2, 3, 4ರಲ್ಲಿ ಅಡಿಟಿಪ್ಪಣಿ.

15. ಅದೇ. ಪುಟಗಳು 2, 79 ಅಡಿಟಿಪ್ಪಣಿ, 80.

16. ಅದೇ. ಪುಟಗಳು Lii, Liii.

17. ಛಂದೋಂಬುಧಿ (1975), ಪೀಠಿಕೆ ಪುಟ Lxiii

18. ಅದೇ, ಪುಟ Lxiv

19. ಕನ್ನಡ ಛಂದಸ್ಸಂಪುಟ, ಪೀಠಿಕೆ ಪುಟಗಳು xLix, L
ಈ ವೃತ್ತಗಳ ಪೈಕಿ 6 ವೃತ್ತಗಳು ಜಯಕೀರ್ತಿಗಿಂತ ಪ್ರಾಚೀನರ ಗ್ರಂಥಗಳಲ್ಲಿ ಈ ರೀತಿ ಕಂಡು ಬರುತ್ತವೆ —

1. ಸೈನಿಕ (11)

   1. ಶ್ಯೇನೀ ಜ್ರೌಲೌಗ್ — ಪಿಂಗಳ ಛಂದಶ್ಶಾಸ್ತ್ರ (6.25) (ನಿರ್ಣಯಸಾಗರ ಪ್ರೆಸ್, ಮುಂಬಯಿ, 1927)

   2. ಶ್ಯೇನ್ಯುದೀರಿತಾ ರಜೌರಲೌಗುರುಃ — ಜಯದೇವ ಛಂದಸ್ (6-27) (ಜಯದಾಮನ್ — ಸಂ. ಎಚ್. ಡಿ. ವೇಲಣಕರ, 1949).

2. ಚಂದ್ರಿಕೆ (11)

   1. ನನರಲಗಿತಿ ಚೈವ ಭದ್ರಿಕಾ — ಜಯದೇವ ಛಂದಸ್ (6.26).

   2. ಪ್ರಸಭಮಪಿ ನನೌರಲೌ ಗುರುಃ — ಬೃಹತ್ಸಂಹಿತೆಯ ಭಟ್ಟೋತ್ಪಲ ವ್ಯಾಖ್ಯಾನ (104-13) (ಪಂಡಿತ ಭೂಷಣ ವಿ. ಸುಬ್ರಹ್ಮಣ್ಯ ಶಾಸ್ತ್ರಿಗಳ ಆವೃತ್ತಿ, 1947).

   3. ಯದಿ ಖಲು ಚರಣೇ ತು ಸಪ್ತಮಂ। ಪುನರಪಿ ನವಮಂ ಸನಿಧನಂ ॥ ಗುರು ತದಪರವಕ್ತ್ರಮುಚ್ಯತೇ। ನಿಯತಮಿತಿ ನಿದರ್ಶನಂ ಯಥಾ ॥
   — ನಾಟ್ಯಶಾಸ್ತ್ರ (ಭರತ), ಅಧ್ಯಾಯ 32-216.

   (Oriental Institute, Baroda. Vol. IV, 1964)

3. ದ್ರುತಪದ (12) ದ್ರುತಪದಂ ನಭಜಯ್ಯೈಃ ಕಥಿತಂ ತತ್ — ಭಟ್ಟೋತ್ಪಲವ್ಯಾಖ್ಯಾ (104-20).

4. ಲಲಿತಪದ (12) ಲಲಿತಪದಂ ನಜಯ್ಯೈರ್ಭವತೀಹ — ಭಟ್ಟೋತ್ಪಲವ್ಯಾಖ್ಯಾ (104-29).

5. ವನಮಯೂರ (14) ವರಸುಂದರೀ ಬೌಸ್ಜಗೌ — ಪಿಂಗಳ ಛಂದಶ್ಶಾಸ್ತ್ರ (8-9).

6. ಭದ್ರಕ (22)

   1. ಚತುರ್ಥಮಾದ್ಯಂ ಷಷ್ಠಂ ಚ ದಶಮಂ ದ್ವಾದಶಂ ತಥಾ।

ಷೋಡಶಾಷ್ಟಾದಶೇ ಚೈವ ನೈಧನಂ ಚ ಗುರೂಣ್ಯಥ ॥
ದ್ವಾವಿಂಶತ್ಯಕ್ಷರೇ ಪಾದೇ ಶೇಷಾಣಿ ಚ ಲಘೂನಿ ಚ ।
ಭವಂತಿ ಯತ್ರ ತಜ್ಞೇಯಂ ಮದ್ರಕಂ ನಾಮತೋ ಯಥಾ ॥

— ನಾಟ್ಯಶಾಸ್ತ್ರ (16-100, 101)

(Ed. Manmohan Ghosh. Vol. I. 1967)

1. ಭದ್ರಕಂ ಭ್ರೌನ್ರೌನ್ಗಾ ದಿಗಾದಿತ್ಯಾಃ—ಪಿಂಗಳ ಛಂದಶ್ಯಾಸ್ತ್ರ (7-25)
3. ವಿದ್ಧಿ ಭರೌನರೌ ನರನಗಾ ದಶೋಷ್ಣಗು ವಿರಾಮಿಮದ್ರಕಮಿದಂ

ಜಯದೇವ ಛಂದಸ್ (7-25)

20. ಕೇದಾರಭಟ್ಟನು ವೃತ್ತರತ್ನಾಕರದ ಪ್ರಮಾಣವನ್ನು 136 ಶ್ಲೋಕ (32 ಅಕ್ಷರಕ್ಕೆ ಒಂದು ಶ್ಲೋಕ)ವೆಂದು ಹೇಳಿದ್ದಾನೆ. ಪ್ರೊ. ವೇಲಣಕರರು, ವೃತ್ತರತ್ನಾಕರದ ಅನೇಕ ಪ್ರತಿಗಳ ಮತ್ತು ವ್ಯಾಖ್ಯಾನಗಳ ಸಹಾಯದಿಂದ ಮೂಲಪಾಠವನ್ನು ಊಹಿಸಿ 'ಜಯದಾಮನ್' ಗ್ರಂಥದಲ್ಲಿ ಮುದ್ರಿಸಿದ್ದಾರೆ. ಅದರಲ್ಲಿನ ಅಡಿಟಿಪ್ಪಣಿಗಳನ್ನು ನೋಡಿದರೆ ಪ್ರಕ್ಷೇಪಗಳ ಪ್ರಮಾಣ ಎಷ್ಟು ದೊಡ್ಡದಿತ್ತೆಂದು ತಿಳಿಯುತ್ತದೆ.

21. ಕನ್ನಡ ಛಂದಸ್ಸಂಪುಟ, ಪೀಠಿಕೆ, ಪುಟಗಳು xxxii, xxxiii ಮತ್ತು xxviii

22. ಜಯದಾಮನ್, General Introduction, Page 37. "It stands midway between Kedara's Vrttaratnakara and Hemachandra's Chandonusasana in respect of chronology and development". ಅದೇ ಪುಟದಲ್ಲಿ

23. ಗೋವಿಂದ ಪೈಯವರ ಪ್ರಕಾರ ಛಂದೋನುಶಾಸನದ ಕಾಲ ಸುಮಾರು ಕ್ರಿ.ಶ. 900 ಮತ್ತು ಪ್ರಾಯಶಃ ನಾಗವರ್ಮನೂ ಜಯಕೀರ್ತಿಯ ಗ್ರಂಥವನ್ನು ಕಂಡಿರಲಾರ. ನೋಡಿ, 'ಜಯಕೀರ್ತಿಯ ಛಂದೋನುಶಾಸನದ ಕಾಲ' — ಪ್ರಬುದ್ಧ ಕರ್ಣಾಟಕ. ಸಂಪುಟ 28, ಸಂಚಿಕೆ 3 (1947), ಪುಟಗಳು 115, 120.

24. (1) His chief merit however is not originality, but a careful collection and appreciative selection of the already existing material on the subject which he undertakes to handle — H.D., Velankar (ಜಯದಾಮನ್, General Introduction, ಪುಟ 44)

    (2) Hemachandra's learned books, it is true, are not distinguished by any great originality, but they display a truely encyclopaedic erudition and an enormous amount of reading) besides a practical sense which makes them very useful — Winternitz (foreword to "The Life of Hemachandra" by Dr. Buhler, 1936, page xiv.)

25. ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಮೂರನೆಯ ಸಂಪುಟ, ಪುಟ 542.

26. ಛಂದೋಂಬುಧಿ, ಪೀಠಿಕೆ ಪುಟ Lxv

27. ಯಥಾ ಕಿಂಚಿಜ್ಜ್ಞೋಽಹಂ ದ್ವಿಪ ಇವ ಮದಾಂಧಸ್ಸಮಭವಂ

ತದಾ ಸರ್ವಜ್ಞೋಽಸ್ಮೀತ್ಯಭವದವಲಿಪ್ತಂ ಮಮ ಮನಃ ।
ಯದಾ ಕಿಂಚಿತ್ಕಿಂಚಿದ್ಬುಧಜನಸಕಾಶಾದವಗತಂ
ತದಾ ಮೂರ್ಖೋಽಸ್ಮೀತಿ ಜ್ವರ ಇವ ಮದೋ ಮೇ ವ್ಯಪಗತಃ ॥

— ಭರ್ತೃಹರಿ ಶತಕತ್ರಯಂ

28. ನಾಗವರ್ಮನು ಎಷ್ಟೋ ವೃತ್ತಗಳಲ್ಲಿ, ಅವು ತನ್ನ ಕಲ್ಪನೆಗಳೆಂದು ತೋರಿಬರುವಂತೆ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಇಲ್ಲೂ ಕೂಡ ಅತ್ಯುಕ್ತಿ ಇರುವಂತೆ ತೋರುತ್ತದೆ. ಉದಾಹರಣೆಗೆ, ''ಮತ್ತೇಭವಿಕ್ರೀಡಿತಂ ಪೆಸರಾಯ್ತಿಂತಿದು ನಾಗವರ್ಮ ಕವಿಯಿಂ'' ಎಂಬುದನ್ನು ಗಮನಿಸಬಹುದು. ಈ ವೃತ್ತಬದ್ಧವಾದ ಪದ್ಯಗಳು ಕವಿರಾಜಮಾರ್ಗದಲ್ಲಿಯೂ, ಪಂಪ ರನ್ನರ ಕಾವ್ಯಗಳಲ್ಲಿಯೂ ಇವೆ. ಒಂದು ವೇಳೆ ವೃತ್ತಕ್ಕೆ ಈ ಹೆಸರು ನಾಗವರ್ಮ ಕೊಟ್ಟದ್ದೆಂದು ಅವನ ಅಭಿಪ್ರಾಯವಾಗಿದ್ದರೆ, ಅವನು ಜಯಕೀರ್ತಿ ಹೇಮಚಂದ್ರರಿಗಿಂತ ಹಿಂದಿನವನೆನ್ನಲು ಇದೂ ಒಂದು ಆಧಾರವಾಗುವುದು. (ಈ ವೃತ್ತ ವೃತ್ತರತ್ನಾಕರದಲ್ಲಿ ಪ್ರಕ್ಷಿಪ್ತ — ನೋಡಿ, 'ಜಯದಾಮನ್')

29. 1) ಉದಯಾದಿತ್ಯಾಲಂಕಾರ (1970), ಪೀಠಿಕೆ ಪುಟಗಳು 7-15.
    2) 'ಉದಯಾದಿತ್ಯಾಲಂಕಾರ ಕರ್ತೃ ವಿಚಾರ'. ಕರ್ನಾಟಕ ಭಾರತಿ, ಸಂಪುಟ 7, ಸಂಚಿಕೆ 4, (1975, ಪುಟ 34.

30. ಉದಯಾದಿತ್ಯಾಲಂಕಾರ — 47, 48, 63ನೇ ಪದ್ಯಗಳಿಗೆ ಟಿಪ್ಪಣಿ (ಪುಟಗಳು 38, 81).

31. 'ನಾಗವರ್ಮ ಮತ್ತು ವರ್ಧಮಾನ ಪುರಾಣ'. ಪ್ರಬುದ್ಧ ಕರ್ಣಾಟಕ, ಸಂಪುಟ 55, ಸಂಚಿಕೆ 2 (1973).

32. 'ಎರಡನೆಯ ನಾಗವರ್ಮನ ಕಾಲ', ಸಾಧನೆ, ಸಂಪುಟ 4, ಸಂಚಿಕೆ 3 (1975), ಪುಟಗಳು 79-92.

33. 'ಕವಿತಾ ಗುಣೋದಯ ನಾಗವರ್ಮನ ಕಾಲ ವಿಚಾರ'. ಸಾಧನೆ, ಸಂಪುಟ 6, ಸಂಚಿಕೆ 3 (1977).

34. ಕವಿಚಕ್ರವರ್ತಿ ಜನ್ನ ವಿರಚಿತ ಅನಂತನಾಥ ಪುರಾಣಂ (ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣ, 1975), ಪ್ರಸ್ತಾವನೆ, ಪುಟಗಳು

35. ಎರಡನೆಯ ನಾಗವರ್ಮ ವಿರಚಿತ ವರ್ಧಮಾನ ಪುರಾಣಂ (1974), ಪುಟ 279.

36. 'ನಾಗವರ್ಮನು ಜನ್ನನ ಗುರುವಲ್ಲ'. ಕರ್ನಾಟಕ ಭಾರತಿ, ಸಂಪುಟ 7, ಸಂಚಿಕೆ 1, (1974).

37. 'ಎರಡನೆಯ ನಾಗವರ್ಮನ ಕಾಲವಿಚಾರ'. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 60, ಸಂಚಿಕೆ 2, (1975).

38. ಶ್ರೀ ದೇವೀರಪ್ಪನವರು ಸಂಖ್ಯಾಸೂಚಕ ಪದಗಳಿಗೆ ಆಧಾರಗ್ರಂಥವಾಗಿ ಕೊಟ್ಟಿರುವ ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳ ''ಪುರಾತತ್ತ್ವ ಶೋಧನೆ'' (1960)ಯ 250ನೆಯ ಪುಟ ದಲ್ಲಿಯೂ 'ಅಗ್ನಿ'ಯನ್ನು 3ರ ಸಂಕೇತವಾಗಿಯೂ, 'ವಸು'ವನ್ನು 8ರ ಸಂಕೇತವಾಗಿಯೂ ಕೊಟ್ಟಿದ್ದಾರೆ.

39. ಆಪ್ಟೆಯವರ Sanskrit English Dictionary (1975 Poona) ಯಲ್ಲಿ,
'ಅಗ್ರ'ಕ್ಕೆ ಅರ್ಥಗಳು — First, foremost, front. beginning ಇತ್ಯಾದಿ.
'ಅಂತ'ಕ್ಕೆ ಅರ್ಥಗಳು — last, end, termination ಇತ್ಯಾದಿ.

40. ಶಂತನುಗಮಮಳ ಗಂಗಾಕಾಂತೆಗಮೆಂಟನೆಯ ವಸು ವಸಿಷ್ಠನ ಶಾಪ ।
ಭ್ರಾಂತಿಯೊಳೆ ಬಂದು ನಿರ್ಜಿತ ಕಂತುವೆನಲ್ಕಂತು ಪುಟ್ಟಿದಂ ಗಾಂಗೇಯಂ ॥
— ವಿಕ್ರಮಾರ್ಜುನ ವಿಜಯ, ಪ್ರಥಮಾಶ್ವಾಸ, 67.

41. ಸೂರ್ಯಸಿದ್ಧಾಂತ (ಲಕ್ಷ್ಮೀವೆಂಕಟೇಶ್ವರ ಪ್ರೆಸ್, ಕಲ್ಯಾಣ್, 1924), ಮಧ್ಯಮಾಧಿಕಾರ, ಶ್ಲೋಕಗಳು, 29, 33.

42. ಪಂಚಸಿದ್ಧಾಂತಿಕಾ (Ed. Thibaut and Sudhakar, Dwivedi, 1889, Lazarus & Co. Benares.
ರೋಮಕ ಸಿದ್ಧಾಂತೇSರ್ಕ ಗ್ರಹಣಂ (8ನೇ ಅಧ್ಯಾಯ) ಪುಟ 24 ಶ್ಲೋಕ 8.

43. ಲಘುಭಾಸ್ಕರೀಯಂ (ಆನಂದಾಶ್ರಮ, ಪೂನಾ 1946), ದ್ವಿತೀಯಾಧ್ಯಾಯ ಶ್ಲೋಕ 19.

44. ಪರಮೇಶ್ವರ (ಕ್ರಿ.ಶ. 1430)ನಿಂದ, ಆರ್ಯಭಟೀಯ ಕಾಲಕ್ರಿಯಾಪದದ 10ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಉದಾಹೃತ — ಆರ್ಯಭಟೀಯಂ (Sastra Publishing House, Madhurapur, 1906).

45. ದೃಗ್ಗಣಿತ — (Vishveshvarananda Vedic Research Institute, Hoshiarpur. 1963); ಚತುರ್ಥ ಪರಿಚ್ಛೇದ ಶ್ಲೋಕ 9.

46. 'ಮುನೀಶ್ವರ' ನ 'ಮರೀಚಿ' ವ್ಯಾಖ್ಯಾನದಲ್ಲಿ ಉದಾಹೃತ — ಜ್ಯೋತಿರ್ಗಣಿತಂ (ವೆಂಕಟೇಶ ಕೇತಕರ, 1898), ಪುಟ 269.

47. ಜ್ಯೋತಿರ್ಗಣಿತಂ (ಕೇತಕರ), ಪುಟ 426, ಶ್ಲೋಕ 5.

48. ಟಿಪ್ಪಣಿ 33 ನೋಡಿ.
ಜಾತಕ ತಿಲಕದಲ್ಲಿನ ಪ್ರಯೋಗಗಳು —
1. ಸುರಸಚಿವ ತ್ರಿಂಶಾಂಶದೊಳಿರೆ (ಚತುರ್ಥಾಧಿಕಾರ, 7).
2. ದಿವಿಜಾಮಾತ್ಯನಾತ್ಮತುಂಗೋದಯದೊಳ್ ನಿಲೆ (ದ್ವಾದಶಾಧಿಕಾರ, 16).

49. (1) ಜ್ಯೋತಿಸ್ಸಿದ್ಧಾಂತ ಸಂಗ್ರಹಃ — ಪಿಲ್ಲಲಮರ್ರಿ ಪೂರ್ಣಯ್ಯ ಸಿದ್ಧಾಂತಿಕೃತ
(ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳ ವ್ಯಾಖ್ಯಾನದೊಡನೆ, 1898).
(2) ಗ್ರಹಲಾಘವಂ—ಗಣೇಶ ದೈವಜ್ಞಕೃತ
(ಲಕ್ಷ್ಮೀವೆಂಕಟೇಶ್ವರ ಪ್ರೆಸ್, ಮುಂಬಯಿ, 1925).

50. ಗ್ರಹಲಾಘವಗಣಿತಕ್ಕೆ ಗತ ಶಾಲಿವಾಹನ ಶಕ ಸಂವತ್ಸರಗಳನ್ನೇ ತೆಗೆದುಕೊಳ್ಳಬೇಕು. ಗತ ವರ್ಷಗಳು 964 ತೆಗೆದುಕೊಂಡರೆ ಮೇಲೆ ಕೊಟ್ಟಿರುವಂತೆ ವಾರ ನಕ್ಷತ್ರಗಳು ಸರಿಬರುತ್ತವೆ. ವರ್ತಮಾನ 964, ಎಂದರೆ ಗತ 963, ತೆಗೆದುಕೊಂಡರೆ ಸರಿಬರುವುದಿಲ್ಲ. ಶೃಂಗೇರಿ ಪಂಚಾಂಗದಂತೆ ಈ ಕಾಳಯುಕ್ತಿ ಸಂವತ್ಸರಕ್ಕೆ ಗತ ಶಾಲಿವಾಹನ ಶಕ ವರ್ಷಗಳು 1900. ಇದಕ್ಕೆ 960 ವರ್ಷಗಳ ಹಿಂದಿನ ಕಾಳೆಯುಕ್ತಿಗೆ ಗತಶಕ ವರ್ಷಗಳು 940. ಅದಕ್ಕೆ 24 ವರ್ಷ ಮುಂದಿನದಾದ

ಚಿತ್ರಭಾನುವಿಗೆ ಗತ ಶಕ ವರ್ಷಗಳು 964.

ಪಂಚಾಂಗಕರ್ತರು ಜ್ಯೋತಿಸ್ತಂತ್ರವಿಶಾರದ ವಿದ್ವಾನ್ ಕೊಳ್ಳೇಗಾಲದ ವೆಂಕಟಸುಬ್ಬಾ ಶಾಸ್ತ್ರಿಗಳಲ್ಲಿ ಈ ವಿಚಾರ ಪ್ರಸ್ತಾಪಿಸಿದಾಗ, ಶಾಲಿವಾಹನ ಶಕದ ಮೊದಲನೆಯ ವರ್ಷ ಬಹುಧಾನ್ಯವೆಂದು ಹೇಳಿದರು. ಆದುದರಿಂದಲೂ ವರ್ಧಮಾನ ಪುರಾಣ ರಚನೆಗೆ ಹಿಂದಿನ ಬಹುಧಾನ್ಯಕ್ಕೆ ಗತ ಶಕವರ್ಷ 960 ಮತ್ತು 4 ವರ್ಷ ಮುಂದಿನ ಚಿತ್ರಭಾನುವಿಗೆ ಗತಶಕವರ್ಷಗಳು 964.

51. ಟಿಪ್ಪಣಿ 37ರಲ್ಲಿ ಕೊಟ್ಟಿರುವ ಲೇಖನ, ಪುಟಗಳು 3, 4.

52. (1) Hemachandra, in his Kavyanusasana Viveka has incorporated Verbatim the famous text of Abhinavagupta dealing with the Rasa portion and the process of aesthetic enjoyment stated in the Abbinavabharati in the sixth chapter of Bharatas Natyasastra.

—ನಾಟ್ಯಶಾಸ್ತ್ರಂ (ಶ್ರೀಮದಭಿನವ ಗುಪ್ತಾಚಾರ್ಯ ವಿರಚಿತ ವಿವೃತಿ ಸಮೇತಂ)

(2) The Kavyanusasana is a compilation and exhibits hardly any originaltiy - P. V. Kane (History of Sanskrit Poetics. Fourth Edition, 1971), Page 288.

53. ನಾಟ್ಯಶಾಸ್ತ್ರಂ Vol. 1 (Baroda), ಪುಟಗಳು 312-3.

54. ಶ್ರೀ ಹೇಮಚಂದ್ರ ವಿರಚಿತಂ ಕಾವ್ಯಾನುಶಾಸನಂ (ಕಾವ್ಯಮಾಲಾ, ನಿರ್ಣಯ ಸಾಗರ ಪ್ರೆಸ್, 2ನೇ ಆವೃತ್ತಿ 1934), ಪುಟ 89.

55. ಕಾವ್ಯಾವಲೋಕನಂ (ಮೈಸೂರು ವಿಶ್ವವಿದ್ಯಾನಿಲಯ, ತೃತೀಯ ಮುದ್ರಣ), ಪುಟಗಳು 218, 219, 226.

ಪ್ರಕೃತ ಲೇಖನದಲ್ಲಿ ಸೂತ್ರ ಮತ್ತು ಪದ್ಯ ಸಂಖ್ಯೆಗಳನ್ನು ಈ ಮುದ್ರಣದಲ್ಲಿರುವಂತೆ ಕೊಟ್ಟಿದೆ.

ಕಾವ್ಯಾವಲೋಕನದ 240ನೆಯ ಸೂತ್ರದಲ್ಲಿನ ಮುಕ್ತಕ, ಕುಳಕ, ಕೋಶ ಇವು ದಂಡಿಯ ಕಾವ್ಯಾದರ್ಶದಲ್ಲಿ ''ಮುಕ್ತಕಂ ಕುಲಕಂ ಕೋಷಃ ಸಂಘಾತ ಇತಿ ತಾದೃಶಃ'' ಎಂದು ಉಲ್ಲೇಖಿತವಾಗಿವೆ-- (ವಾವಿಳ್ಳ ರಾಮಸ್ವಾಮಿ ಶಾಸ್ತ್ರಿ ಅಂಡ್ ಸನ್ಸ್, ಮದರಾಸು, 1964), 13.

56. ಭಾಷಾಭೂಷಣ ಸೂತ್ರ ಸಂಖ್ಯೆಗಳನ್ನು ಆರ್. ನರಸಿಂಹಾಚಾರ್ಯರ ಆವೃತ್ತಿ (ಶಾರದಾಮಂದಿರದ ಪುನರ್ಮುದ್ರಣ)ಯಲ್ಲಿರುವಂತೆ ಕೊಟ್ಟಿದೆ.

57. ವರ್ಧಮಾನ ಪುರಾಣಂ, ಪೀಠಿಕೆ, ಪುಟ xxiv

58. ನಾಗಚಂದ್ರ (ಐ.ಬಿ.ಎಚ್. ಪ್ರಕಾಶನ, ಕವಿಕಾವ್ಯ ಪರಂಪರೆಯ 10ನೆಯ ಗ್ರಂಥ). 'ಕವಿ, ಕಾಲ, ಕೃತಿಗಳು'. ಪುಟಗಳು 33, 34.

59. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಯ ಪುನರ್ಮುದ್ರಣ (ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ, 1973), ಪುಟಗಳು xii ರಿಂದ xiv.

60. ವರ್ಧಮಾನ ಪುರಾಣದ ಮೊದಲಲ್ಲಿ ಕೆಲವು ಪದ್ಯಗಳು ಲುಪ್ತವಾಗಿವೆಯೆಂದು ಸಂಪಾದಕರು ಹೇಳಿದ್ದಾರೆ. ಬೇರೆ ಹಸ್ತಪ್ರತಿಯದಿರಬಹುದೆಂದು ಹೇಳಲಾದ ಮುದ್ರಿತ ಪ್ರತಿಯ ಮೊದಲ ಪದ್ಯವೂ ವರ್ಧಮಾನ ಸ್ತುತಿಯೇ. (ಮೊದಲ ಪದ್ಯಕ್ಕೆ ಅಡಿಟಪ್ಪಣಿ).

61. ವಿವರಗಳಿಗೆ, ವರ್ಧಮಾನ ಪುರಾಣಂ, ಪೀಠಿಕೆ ಪುಟ xvii ನೋಡಿ.

62. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ಪುಟ 177.

63. ಇದು ಆರ್. ನರಸಿಂಹಾಚಾರ್ಯರಿಂದ ಸಂಪಾದಿತವಾದ ಭಾಷಾಭೂಷಣದಲ್ಲಿ ಸೂತ್ರಸಂಖ್ಯೆ. ರೈಸರ ಆವೃತ್ತಿಯಲ್ಲಿ 280 ಸೂತ್ರಗಳಿವೆ. ಕೆಲವು ಕಡೆ ನರಸಿಂಹಾಚಾರ್ಯರ ಆವೃತ್ತಿಯಲ್ಲಿನ ಒಂದು ಸೂತ್ರವನ್ನು ಒಡೆದು 2 ಸೂತ್ರಗಳಾಗಿ ಮಾಡಿರುವುದರಂದಲೂ, ಕೆಲವು ಅವ್ಯಯಗಳನ್ನು ಹೆಚ್ಚಾಗಿ ಹೇಳಿರುವುದರಿಂದಲೂ, ವೃತ್ತಿಯ ಭಾಗಗಳನ್ನು ಸೂತ್ರಗಳಾಗಿ ಮಾಡಿರುವುದರಿಂದಲೂ ಸೂತ್ರಸಂಖ್ಯೆಯಲ್ಲಿ ವ್ಯತ್ಯಾಸವುಂಟಾಗಿದೆ.

64. 1. ಮುಳಿಯ ತಿಮ್ಮಪ್ಪಯ್ಯ : ಕವಿರಾಜಮಾರ್ಗ ವಿವೇಕ, (1973), ಭಾಗ ಎರಡು, ಕಾರಕ ದೋಷ, ಪುಟಗಳು 141-7.

    2. ಶ್ರೀ ವಿಜಯಕೃತ ಕವಿರಾಜಮಾರ್ಗಂ—ಸಂಪಾದಕ, ಎಂ. ವಿ. ಸೀತಾರಾಮಯ್ಯ (1968), ಪುಟಗಳು 162-173.

65. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ : 'ಕವಿರಾಜ ಮಾರ್ಗದಲ್ಲಿ ಕಾರಕ ವಿಚಾರ'. ಸಾಧನೆ, ಸಂಪುಟ 2, ಸಂಚಿಕೆ) 2, (1973) ಪುಟಗಳು 24-43.

66. ಮದರಾಸು ಯೂನಿವರ್ಸಿಟಿಯಿಂದ 1938ರಲ್ಲಿ ಪ್ರಕಾಶಿತವಾದ ಶಬ್ದಮಣಿ ದರ್ಪಣದ ಅವತರಣಿಕೆಯಲ್ಲಿ, ಪ್ರಧಾನ ಸಂಪಾದಕ ಶ್ರೀ ಎಚ್. ಚೆನ್ನಕೇಶವ ಅಯ್ಯಂಗಾರ್ಯರು ಮೂಲಪದ 'ಎದು' ಇರಬಹುದೆಂದು ಸೂಚಿಸಿದ್ದಾರೆ. (1973ರ ಮುದ್ರಣದಲ್ಲಿ ಅವತರಣಿಕೆ, ಪುಟ 99).

67. ಪದ್ಯದ ಮೂರನೆಯ ಸಾಲಿನಲ್ಲಿ 'ಕ್ಷಿತಿಪಾಲ' ಎಂಬುದಕ್ಕೆ 'ಕ್ಷಿತಿನಾಥ' ಎಂಬ ಪಾಠಾಂತರವಿದೆ. ಕರ್ನಾಟಕ ವಿಶ್ವವಿದ್ಯಾಲಯದ ಮುದ್ರಣದಲ್ಲಿ, ಮೊದಲೆರಡು ಸಾಲುಗಳಲ್ಲಿನ "ಕಟಕೋಪಾಧ್ಯಾಯನಾ ನಾಗವರ್ಮನಿದಾನೀಂತನ" ಎನ್ನುವುದರ ಬದಲು "ಕಟಕೋಪಾಧ್ಯಾಯ ನಾರ್ನಾಗವರ್ಮನಿಳಾನೀಂತನ" ಎಂಬ ಪಾಠವಿದೆ. 'ಆ ನಾಗವರ್ಮ'ನಿಗೆ ಬದಲು 'ಆರ್. ನಾಗವರ್ಮ' ಎಂದು ತೆಗೆದುಕೊಂಡರ ಒಟ್ಟರ್ಥದಲ್ಲಿ ವ್ಯತ್ಯಾಸವಾಗುವುದಿಲ್ಲ. 'ಇಳಾನೀಂತನ'ಕ್ಕೆ ಸಂಪಾದಕ ಶ್ರೀ ಮಹೀಶವಾಡಿಯವರು, ಇಳಾ+ ಆನೀತ (ಆನತ) ಆನತನ → ಆನೀಂತನ ಎಂಬ ವಿವರಣೆ ಕೊಟ್ಟು 'ಇಳಾವಂದಿತ'ನೆಂದು ಅರ್ಥ ಮಾಡಿದ್ದಾರೆ. (ಪ್ರಸ್ತಾವನೆ, ಪುಟ). ಈ ವಿವರಣೆ ನಿರಾಧಾರವಾದುದು. ಇದೇ ಗ್ರಂಥದಲ್ಲಿ "ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ" (14-77) ಎಂದು ಹೊಗಳಿಕೊಂಡಿರುವ ಕವಿ, 'ಆನತ'ಕ್ಕೆ ಬದಲಾಗಿ 'ಆನೀಂತನ' ಎಂಬ ಅಪಶಬ್ದವನ್ನು ಉಪಯೋಗಿಸಿರಲಾರ. ಸಂಪಾದಕರು ತಾವು ಉಪಯೋಗಿಸಿರುವ ಪ್ರತಿ ಶುದ್ಧವಾಗಿದೆಯೆಂದು ಹೇಳಿದ್ದಾರೆಯೇ ಹೊರತು ಹಸ್ತಪ್ರತಿಗಳ ವರ್ಣನಾತ್ಮಕ ವಿವರವೇನನ್ನೂ ಕೊಟ್ಟಿಲ್ಲ. ಈ ಕಾರಣಗಳಿಂದ 'ಇಳಾನೀಂತನ' ಎಂಬ ಪಾಠವನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ.

68. ಜನ್ನಕವಿಯ ಯಶೋಧರ ಚರಿತೆ (ಕನ್ನಡ ಸಾಹಿತ್ಯ ಪರಿಷತ್ತು, 1976), ಒಂದನೆಯ ಅವತಾರ, ಪದ್ಯ 23.

69. ಅನಂತನಾಥ ಪುರಾಣಂ, ಪ್ರಸ್ತಾವನೆ ಪುಟ - xx "ಭಾಳಲೋಚನನು ವಾಣೀಪ್ರಿಯ, ಸುಮನೋಬಾಣನು ಪಾರ್ವತೀಪ್ರಿಯ". "ಪ್ರೀತಿಯಿಂದ ಭಾಳಲೋಚನನು ಸುಮನೋಬಾಣನ ಮಗನಂತೆ ವಾಣಿ ಪಾರ್ವತಿಯ ಸೊಸೆಯಂತೆ ವರ್ತಿಸಿ, ನಿಜವಾದ ಮಗ ಸೊಸೆಯಂದಿರೇ ಎಂದೆನಿಸಿಕೊಂಡಿರಬಹುದು" ಇತ್ಯಾದಿ ಊಹೆಗಳನ್ನು ಮಾಡಿರುವ ಶ್ರೀ ಮಹೀಶವಾಡಿಯವರು, ಜನ್ನನು ತನ್ನ ಪತ್ನಿಯ ಹೆಸರು ಲಕುಮಾದೇವಿಯೆಂದು ಇದೇ ಗ್ರಂಥ (1-26)ದಲ್ಲಿ ಹೇಳಿರುವುದನ್ನು ಮರೆತಂತಿದೆ.

70. ಟಿಪ್ಪಣಿ 36ರಲ್ಲಿ ಕೊಟ್ಟಿರುವ ಲೇಖನ, ಪುಟ 146.

71. ಡಾ|| ಬಿರಾದಾರರು A History of Karnataka by P. B. Desai and others. The Hoysalas by Duncan & Derrett ಮತ್ತು S.I.I. by Sewell & Iyengar ಎಂಬ ಗ್ರಂಥಗಳನ್ನು ಆಧಾರವಾಗಿ ಕೊಟ್ಟಿದ್ದಾರೆ. ದ ಸಹಲೇಖಕರಾದ ಡಾ|| ಬಿ. ಆರ್. ಗೋಪಾಲ್ ಅವರು, ನನ್ನ ಪತ್ರಕ್ಕೆ ಉತ್ತರವಾಗಿ, ಒಂದನೆಯ ನರಸಿಂಹನಿಗೆ "ಜಗದೇಕಮಲ್ಲ"ನೆಂಬ ಬಿರುದು ಇದ್ದುದಕ್ಕೆ Epigraphia Carnatica (ಕನ್ನಡ ಅಧ್ಯಯನ ಸಂಸ್ಥೆಯ 1975ರ ಪರಿಷ್ಕೃತ ಮುದ್ರಣ)ದ ನಾಲ್ಕನೆಯ ಸಂಪುಟದಲ್ಲಿನ Ch 122 (M.A.R. 1933-41), KO 87 ಮತ್ತು HS 15 ಎಂಬ ಶಾಸನಗಳನ್ನು ನಿರ್ದೇಶಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

72. ಕಾವ್ಯಾವಲೋಕನಕಾರನಿಂದ ಭಿನ್ನನಾದ ನಾಗವರ್ಮನೊಬ್ಬನು ಜನ್ನನ ಗುರುವಾಗಿದ್ದನೆಂದು ಒಪ್ಪುವ ಶ್ರೀ ಮಹೀಶವಾಡಿಯವರು, ಛಂದೋಂಬುಧಿಕಾರ ನಾಗವರ್ಮನಿಗೆ ಡಾ|| ಬಸವರಾಜು ಅವರು ಹೇಳುವ ಕಾಲ (ಕ್ರಿ.ಶ. 1173ರ ತರುವಾಯ)ವನ್ನು ಅನುಮೋದಿಸಿ, ಛಂದೋಂಬುಧಿಕಾರ ನಾಗವರ್ಮನು ಜನ್ನನ ಗುರು ಏಕಾಗಿರಬಾರದು ಎಂದಿದ್ದಾರೆ. ಪ್ರಸ್ತುತ ಲೇಖನದಲ್ಲಿ ಹಿಂದೆಯೇ ಹೇಳಿರುವಂತೆ ಛಂದೋಂಬುಧಿ, ಕಾದಂಬರಿಗಳು ಏಕಕರ್ತೃಕಗಳಾಗಿರುವುದೇ ಹೆಚ್ಚು ಸಂಭಾವ್ಯವಾಗಿರುವುದರಿಂದಲೂ, ಛಂದೋಂಬುಧಿಕಾರನು ವ್ಯಾಕರಣ ಗ್ರಂಥವನ್ನು ಬರೆದಿರುವನು ಎನ್ನುವುದಕ್ಕೆ ಯಾವ ಆಧಾರವೂ ಇಲ್ಲವಾದುದರಿಂದಲೂ ಅವನು ಜನ್ನನ ಗುರುವಾಗಿರುವ ಸಾಧ್ಯತೆಯಿಲ್ಲ.

73. "ಪಸುರ್ವೊನ್", "ಪಸುರ್ವಂದರ್" ಎಂಬ ಪದಗಳಲ್ಲಿನ "ಪಸುರ್" ಎಂಬ ಭಾಗ 'ಸುರ್' ಅಂತವಾಗಿರುವುದರಿಂದ, ಈ ಪದಗಳು "ಸು" ಅಂತಕ್ಕೆ ಉದಾಹರಣೆಗಳಾಗಲಾರವು. ಆದುದರಿಂದ ಶಬ್ದಸ್ಮೃತಿಯ ಉದಾಹರಣ ಪದ್ಯದ ಮೂಲಪಾಠ "ಪಸುವನ್ನ ಜಗಲಿ ಪಚ್ಚೆಯ । ಪಸುವಂದರ್ ಮುತ್ತಿನಕ್ಕಿ ನೀಲದ ಜಾಗಂ" ಇರಬಹುದು ಎಂದು, ಈ ಲೇಖನವನ್ನು ದಯೆಯಿಟ್ಟು ಓದಿ ನೋಡಿದ ವಿಶ್ರಾಂತ ಸಂಸ್ಕೃತ ವ್ಯಾಕರಣ ಪ್ರಾಧ್ಯಾಪಕರೂ ಸಂಸ್ಕೃತ ಕನ್ನಡ ಭಾಷಾ ಪಂಡಿತರೂ ಆದ ವಿದ್ವಾನ್ ಎನ್. ರಂಗನಾಥ ಶರ್ಮರು ಸೂಚಿಸಿದರು. ಈ ಪಾಠ ಯುಕ್ತಿಯುಕ್ತವಾಗಿದೆ. ಆದರೆ ಆರ್. ನರಸಿಂಹಾಚಾರ್ಯರಿಂದ ಪ್ರಕಾಶಿತವಾದ ಕಾವ್ಯಾವಲೋಕನ ದಲ್ಲಿ ಈ ಪದ್ಯಕ್ಕೆ ಪಾಠಾಂತರಗಳೇನೂ ಇಲ್ಲವಾದುದರಿಂದ, ಅವರು ಉಪಯೋಗಿಸಿಕೊಂಡಿರುವ ನಾಲ್ಕು

ಹಸ್ತಪ್ರತಿಗಳಲ್ಲೂ ಪಸುರ್ವೊನ್, ಪಸುರ್ವಂದರ್ ಎಂಬ ರೂಪಗಳೇ ಇದ್ದಿರಬೇಕು. ಪ್ರೊ. ಬಸವನಾಳ ಮತ್ತು ಕೇಪು ಶಂಕರನಾರಾಯಣ ಇವರ ಸಂಸ್ಕರಣದಲ್ಲಿಯೂ ಈ ರೂಪಗಳೇ ಇವೆ. ಪಂಪಭಾರತದಲ್ಲಿ "ಪಸುರ್ವೊನ್ನ ರಥಮನೇಱೆ" (12-53 ವಚನ) ಮತ್ತು "ಪಸುರ್ವಂದರ್ ಪಸೆಯೆಂಬಿವಂ ಸಮದು'' (1-78) ಎಂದೂ, ಆದಿಪುರಾಣದಲ್ಲಿ ''ಪಸೆಯಂ ಪಸುರ್ವಂದರುಮಂ ಪೊಸೆಯಿಸಿ" (9-127 ಎಸ್. ಜಿ. ನರಸಿಂಹಾಚಾರ್ಯರ ಸಂಸ್ಕರಣ) ಎಂದೂ ಪ್ರಯೋಗಗಳಿವೆ. ಪಸುವೊನ್, ಪಸುವಂದರ್, ಈ ಪದಗಳ ಪ್ರಯೋಗ ಕಂಡುಬಂದಿಲ್ಲ'. ಶಬ್ದಸ್ಮೃತಿಯಲ್ಲಿನ ಉದಾಹರಣ ಪದ್ಯದ ಆಕರ ಗೊತ್ತಿಲ್ಲ. ಕೆಚ್ಚನೆ, ಬೆಚ್ಚನೆ ಶಬ್ದಗಳಿಗೆ ಮಾತ್ರ "ಸು" ಅಂತವಾದ 'ಕಿಸು' 'ಬಿಸು' ಎಂಬ ರೂಪಾಂತರಗಳೂ, ಪಚ್ಚನೆ ಶಬ್ದಕ್ಕೆ 'ಪಸುರ್' ಎಂಬ ರೂಪಾಂತರವೂ ಶಬ್ದಸ್ಮೃತಿಕಾರನ ಅಭಿಮತವೇ ಎಂಬುದು ವಿಚಾರಾರ್ಹ.

'ಪಸುರ್ವೊನ್', 'ಪಸುರ್ವಂದರ್' ಎಂದು ಪೂರ್ವಕವಿ ಪ್ರಯೋಗಗಳಿದ್ದರೂ ಸಹ, ಭಾಷಾಭೂಷಣಕಾರನ ಮತದಂತೆ — 'ಸ್ವಂತತಾಚ' ಎಂಬ ಸೂತ್ರದ ಪ್ರಕಾರ, ಕೆಚ್ಚನೆ ಬೆಚ್ಚನೆ ಪದಗಳು 'ಕಿಸು', 'ಬಿಸು' ಎಂದು ರೂಪಾಂತರ ಹೊಂದಿದಂತೆ ಪಚ್ಚನೆ ಎಂಬ ಪದವೂ 'ಪಸು' ಎಂದು ರೂಪಾಂತರ ಹೊಂದಿ — ಪಸುವೊನ್, ಪಸುವಂದರ್ ಎಂಬ ರೂಪಗಳೇ ಸಾಧು. (ಶಬ್ದಮಣಿದರ್ಪಣದಲ್ಲಿನ ''ಜನಿಯಿಸುಗುಂ ಪಚ್ಚನೆ'' ಎಂಬ ಸೂತ್ರದ ವೃತ್ತಿಯಲ್ಲಿ 'ಪಸುರ್ವಂದರ್' ಎಂಬ ರೂಪ ಕಂಡುಬರುತ್ತದೆ. ಶಬ್ದಾನುಶಾಸನದಲ್ಲಿ (ಸೂತ್ರ 341-3) ಕೆಚ್ಚನೆ, ಬೆಚ್ಚನೆ ಶಬ್ದಗಳಿಗೆ ಕಿಸು, ಬಿಸು ಎಂಬ ರೂಪಾಂತರಗಳನ್ನು ಕೊಟ್ಟಿದೆಯೇ ಹೊರತು, ಪಚ್ಚನೆ ಶಬ್ದಕ್ಕೆ 'ಸು' ಅಂತ ರೂಪವನ್ನು ಕೊಟ್ಟಿಲ್ಲ).

ಕಾವ್ಯಾರ್ಥಕುತೂಹಲ-ಪ್ರತಿಕ್ರಿಯೆ

ಶ್ರೀಮಾನ್ ವಿ. ವಿ. ಜೋಶಿಯವರು ''ಕಾವ್ಯಾರ್ಥ ಕುತೂಹಲ''ವೆಂಬ ಲೇಖನದಲ್ಲಿ[1] ತಮ್ಮ ಆಳವಾದ ಕಾವ್ಯಾಧ್ಯಯನದ ಫಲವನ್ನು ವಾಚಕರೊಡನೆ ಹಂಚಿಕೊಂಡಿರುವುದಲ್ಲದೆ, ಅವರ ಪ್ರತಿಕ್ರಿಯೆಯನ್ನೂ ಕೇಳುವ ಸೌಜನ್ಯವನ್ನೂ ತೋರಿಸಿದ್ದಾರೆ. ಆ ಲೇಖನವನ್ನು ಓದಿದ ಮೇಲೆ ನನಗೆ ತೋರಿದ ಅಭಿಪ್ರಾಯಗಳನ್ನು ಇಲ್ಲಿ ಹೇಳಬಯಸುತ್ತೇನೆ.

೧

ತೆಂಕಣಗಾಳಿ ಸೋಂಕಿದೊಡ ಮೊಳ್ನುಡಿಗೇಳ್ದೊಡ ಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದಮಲ್ಲಿಗೆಗಂಡೊಡಮಾದ ಕೆಂದಲಂ ।
ಪಂ ಕೆಳೆಗೊಂಡೊಡಂ ಮಧುಮಹೋತ್ಸವ ಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ॥

(ಪಂಪ ಭಾರತ ೪-೬೮)

ಈ ಪದ್ಯದ ಕೊನೆಯ ಸಾಲಿನ ಅರ್ಥದ ವಿಷಯವನ್ನು ಚರ್ಚಿಸುವಾಗ, ಕನ್ನಡ ನಿಘಂಟಿನಲ್ಲಿ ಆಱು ಶಬ್ದಕ್ಕೆ 'ನಿಚುಲವೃಕ್ಷ'ವೆಂಬ ಅರ್ಥ ಕೊಟ್ಟಿರುವುದನ್ನು ಗಮನಿಸಿ, ''ಅಮರಕೋಶವು ನಿಚುಲ=ಪನಸ ಎನ್ನುತ್ತದೆ'' ಎಂದು ಹೇಳಿದ್ದಾರೆ.

ಅಮರಕೋಶದ ಲೂಯಿರೈಸರ[2] ಆವೃತ್ತಿಯಲ್ಲಿ ''ಪನಸಃ ಕಂಟಕಫಲೋ ನಿಚುಲೋಽಂಬುಜ ಇಜ್ಜಲಃ'' ಎಂದಿದೆ. ಇತರ ಆವೃತ್ತಿಗಳಲ್ಲಿ ಪಾಠಾಂತರಗಳಿವೆ.[3]

ಅಮರಕೋಶದ ಈ ಶ್ಲೋಕಾರ್ಥದಲ್ಲಿರುವ ಐದು ಪದಗಳೂ ಸಮಾನಾರ್ಥಕಗಳಲ್ಲ. ನಾನು ನೋಡಿರುವ ಎಲ್ಲ ಪ್ರತಿಗಳಲ್ಲೂ ಮೊದಲ ಪಾದವನ್ನು ಒಂದು ಘಟಕವನ್ನಾಗಿಯೂ ಉಳಿದ ಭಾಗವನ್ನು ಮತ್ತೊಂದು ಘಟಕವನ್ನಾಗಿಯೂ ತೆಗೆದುಕೊಂಡಿದ್ದಾರೆ. ಎಲ್ಲ ವ್ಯಾಖ್ಯಾನಕಾರರೂ ಪನಸ ಮತ್ತು ಕಂಟಕಫಲ (ಅಥವಾ ಕಂಟಕಿಫಲ) ಗಳನ್ನು ಪನಸಕ್ಕೂ, ಉಳಿದ ಮೂರು ಪದಗಳನ್ನು ನಿಚುಲಕ್ಕೂ ಅನ್ವಯಿಸಿದ್ದಾರೆ.

---

1. ಕರ್ನಾಟಕ ಲೋಚನ, ಜೂನ್ 1993ರ ಸಂಚಿಕೆ - ಪುಟಗಳು 40-44.
2. ಅಮರಕೋಶ-ಲೂಯಿರೈಸ್, 1970ರ ಆವೃತ್ತಿ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
3. (a) ಪನಸಃ ಕಂಟಕಿಫಲೋ, ನಿಚುಲೋ ಹಿಜ್ಜಲೋಽಮ್ಬುಜಃ ।
   ನಾಮಲಿಂಗಾನುಶಾಸನಂ, ಭಟ್ಟಕ್ಷೀರಸ್ವಾಮಿ ಪ್ರಣೀತೇನ ಅಮರಕೋಶೋದ್ಘಾಟನೇನ ಸಹಿತಂ; Oriental Book Agency, Poona, 1941.

ಲೂಯಿರೈಸರ ಆವೃತ್ತಿಯಲ್ಲಿ ಪನಸಕ್ಕೆ The Jack tree [Artocarpus Integripolia], ಹಲಸಿನಗಿಡ ಎಂದೂ ನಿಚುಲಕ್ಕೆ [The tree Barringtonia Acutangula] ನೀರು ಹಲಸಿನಗಿಡ ಎಂದೂ ಇಂಗ್ಲೀಷ್ ಮತ್ತು ಕನ್ನಡ ಪರ್ಯಾಯ ಪದಗಳನ್ನು ಕೊಟ್ಟಿದ್ದಾರೆ.

ಕ್ಷೀರಸ್ವಾಮಿಯು 'ನಿಚುಲ'ದ ಪರ್ಯಾಯಪದವಾದ 'ಹಿಜ್ಜಲ' ಶಬ್ದವು 'ಹಿತಜಲ'ದ ಅಪಭ್ರಂಶವೆಂದೂ[4], ಹಿಜ್ಜಲವು 'ಅಂಬುವೇತಸ'ದ ಭೇದವೆಂದೂ ಹೇಳಿದ್ದಾನೆ. 'ಅಂಬುವೇತಸ' ಶಬ್ದಕ್ಕೆ ವ್ಯಾಖ್ಯಾನ ಮಾಡುವಾಗ ಧನ್ವಂತರಿ ನಿಘಂಟಿನ ಶ್ಲೋಕಗಳನ್ನು ಕೊಟ್ಟಿದ್ದಾನೆ. ಈ ಶ್ಲೋಕಗಳಲ್ಲಿ ವೇತಸ, ಅಂಬುವೇತಸ, ನಿಚುಲ, ಇವುಗಳ ವಿಷಯ ವಿದ್ದು, ಅಂಬುವೇತಸವು ನೀರಿನಲ್ಲಿ ಹುಟ್ಟುವುದೆಂದೂ ಇದಕ್ಕೆ ನೀರಿನ ಆವಶ್ಯಕತೆಯಿದೆ ಯೆಂದೂ, ನಿಚುಲವು 'ಸ್ಥಲವೇತಸ'ವೆಂದೂ ಹೇಳಿದೆ. 'ವೇತಸ'ವೆಂದರೆ ಬೆತ್ತ. ರೈಸರ ಆವೃತ್ತಿಯಲ್ಲಿ 'ವೇತಸ'ದ ಪರ್ಯಾಯ ಪದಗಳು The rattan (Calamus Spp.) ಮತ್ತು ಹಬ್ಬೆಗಿಡ. 'ಅಂಬುವೇತಸ'ಕ್ಕೆ A Kind of same growing in water ಎಂದು ಹೇಳಿ ನೀರುಹಬ್ಬೆ ಎಂಬ ಕನ್ನಡದ ಪರ್ಯಾಯಪದವನ್ನು ಕೊಟ್ಟಿದೆ.

ರಾಯಮುಕುಟನ ವ್ಯಾಖ್ಯಾನದಲ್ಲಿ 'ನಿಚುಲ'ದ ಪರ್ಯಾಯ ಪದವಾದ 'ಅಮ್ಬುಜ' ಶಬ್ದಕ್ಕೆ "ಅಮ್ಬುನೋ ಜಾತಃ ಅಮ್ಬುಜಃ"(ನೀರಿನಲ್ಲಿ ಹುಟ್ಟಿದ್ದು ಅಮ್ಬುಜ) ಎಂಬ ನಿಷ್ಪತ್ತಿಯನ್ನು ಹೇಳಿ 'ನಿಚುಲ', 'ಇಜ್ಜಲ', 'ಹಿಜ್ಜಲ'ಗಳು ಪರ್ಯಾಯ ಪದಗಳೆಂದು ಹೇಳುವ 'ರಭಸಕೋಶ'ದ ವಾಕ್ಯವನ್ನು ಉದ್ಧರಿಸಿದ್ದಾನೆ ವ್ಯಾಖ್ಯಾನಕಾರ.

ಹೀಗೆ ಅಂಬುವೇತಸ ಮತ್ತು ನಿಚುಲ (ಅಥವಾ ಸ್ಥಲವೇತಸ)ಗಳೆರಡೂ ವೇತಸ (ಎಂದರೆ) ಬೆತ್ತದ ಪ್ರಭೇದಗಳು. ಅಂಬುವೇತಸ ನೀರಿನಲ್ಲಿ ಬೆಳೆದರೆ ನಿಚುಲ ನೀರಿನ

(b) ಪನಸಃ ಕಂಟಕಿಫಲೋ, ನಿಚುಲೋಽಮ್ಬುಜ ಇಜ್ಜಲಃ ।
ನಾಮಲಿಂಗಾನು ಶಾಸನೇ ರಾಯಮುಕುಟಕೃತಾ ಪದಚಂದ್ರಿಕಾ.
Sanskrit College, Calcutta-1973.

4. ಹಿತಜಲಸ್ಯಾಪಭ್ರಂಶೋ ಹಿಜ್ಜಲೋಽಮ್ಬುವೇತಸ ವಿಶೇಷತ್ವಾತ್ ।

5. ವೇತಸೋ ವಿದುಲೋ ನಮ್ರೋ ವಂಜುಲೋ ದೀರ್ಘಪತ್ರಕಃ ॥
ನಾದೇಯೀ ಗಂಧಪತ್ರಶ್ಚ ಜಲೌಕಾಸ್ಸಭೃತಸ್ತಥಾ ।
ನದೀಕೂಲಪ್ರಿಯಸ್ತ್ವನ್ಯಃ ಸುಶೀತೋ ಘನಪುಷ್ಪಕಃ ॥
ಜಲಜಾತಸ್ತೋಯಕಾಮೋ ವಿದುಲೋ ಜಲವೇತಸಃ ।
ನಿಚುಲೋ ವೇತಸಾದನ್ಯೋ ವಕ್ಷ್ಯತೇ ಸ್ಥಲವೇತಸಃ ॥
(ಧನ್ವಂತರಿ ನಿಘಂಟು, 5-116).

6. "ನಿಚುಲೇಜ್ಜಲಹಿಜ್ಜಲಾಃ" ಇತಿ ರಭಸಾತ್ । 'ಹಿಜ್ಜಲಃ' ಅಪಿ । ತ್ರೀಣಿ ಹಿಜ್ಜಲಸ್ಯ । ಅಡಿ ಟಿಪ್ಪಣಿಯಲ್ಲಿ 'ಸ್ಥಲವೇತಸಃ' ಎಂದಿದೆ. ನಾಮಲಿಂಗಾನು ಶಾಸನೇ ರಾಯಮುಕುಟಕೃತಾ ಪದಚಂದ್ರಿಕಾ.

ಸಮೀಪದಲ್ಲಿ ನೆಲದ ಮೇಲೆ ಬೆಳೆಯುತ್ತದೆ. ಆಪ್ಟೆಯವರ ಸಂಸ್ಕೃತ-ಇಂಗ್ಲೀಷ್ ಕೋಶ ದಲ್ಲಿ 'ಅಂಬುವೇತಸ'ವನ್ನು (A Kind of cane or reed growing in water) (ನೀರಿನಲ್ಲಿ ಬೆಳೆಯುವ ಬೆತ್ತ ಅಥವಾ ಜೊಂಡುಹುಲ್ಲಿನ ಪ್ರಭೇದ) ಎಂದು ವಿವರಿಸಿ, ಅದಕ್ಕೆ ಮರಾಠೀಯಲ್ಲಿ ಲವ್ಹಾಳಾ ಎಂಬ ಪರ್ಯಾಯ ಪದವನ್ನು ಕೊಟ್ಟಿದ್ದಾರೆ.(ಬಹುಶಃ ಇದು ಹಿಂದೆ ಲೇಖನಿಗಾಗಿ ಉಪಯೋಗಿಸುತ್ತಿದ್ದ ಲಾಳದ ಕಡ್ಡಿಯಿರಬಹುದು).

ಆಪ್ಟೆಯವರು ಮೇಘದೂತದ ವಾಕ್ಯದ ಮೇಲೆ ಮಲ್ಲಿನಾಥನ ವಿವರಣೆ ಬಹಳ ಸಂದೇಹಾಸ್ಪದವೆಂದು -"ಸಮಂಜಸವಾಗಿಲ್ಲವೆಂದು" ಅಲ್ಲ- ಹೇಳಿದ್ದರೂ, 'a kind of reed' ಎಂಬ ವಿವರಣೆಗೆ ಇದು ಅನ್ವಯಿಸುವುದಿಲ್ಲ. ಆಪ್ಟೆಯವರ ಕೋಶದಲ್ಲಿ 'ನಿಚುಲ' ಶಬ್ದಕ್ಕೆ

i) ಒಂದು ಜಾತಿಯ ಜೊಂಡುಹುಲ್ಲು ;
ii) ಕಾಳಿದಾಸನ ಸಹಪಾಠಿ;
iii)" ಮೇಲಿನ ಕವಚ(ಅಂಗಿ);
iv) ಹಿಜ್ಜಲವೆಂಬ ಮರ;
v) ತಾವರೆ;
vi) ತೆಂಗಿನ ಮರ; ಎಂಬ ಅರ್ಥಗಳನ್ನು ಹೇಳಿ,

"ನಿಚುಲೋ ಹಿಜ್ಜಲೇ ಪದ್ಮೇऽಪ್ಯಸ್ತ್ರೀ ಮಧುಫಲೇऽಪಿ ಚ" ಎಂಬ ನಾನಾರ್ಥ ಮಂಜರಿಯ ಶ್ಲೋಕಾರ್ಥವನ್ನು ಉದ್ಧರಿಸಿದ್ದಾರೆ".

ಈ ಎಲ್ಲ ಆಧಾರಗಳಂತೆ ನಿಚುಲ ಹಲಸಿನ ಮರಕ್ಕಿಂತ ಭಿನ್ನವಾದುದು. ಹಾಗಾದರೆ, ನಿಚುಲ (ಹಿಜ್ಜಲ) ಯಾವುದು?

---

7. ನಿಚುಲಃ — 1) A kind of reed.
2) Name of a poet and friend of ಕಾಲಿದಾಸ; ಸ್ಥಾನಾದಸ್ಮಾತ್ಸರಸನಿಚುಲಾದುತ್ಪತೋದಙ್ಮುಖಃ ಖಮ್ । (Where Mallinatha observes - but this explanation ನಿಚುಲೋ ನಾಮ ಮಹಾಕವಿಃ ಕಾಲಿದಾಸಸ್ಯ ಸಹಾಧ್ಯಾಯಃ is very doubtful
3) An upper garment, cover; of ನಿಚೋಲ.
4) The tree called ಹಿಜ್ಜಲ, (Barringtonia Acutangula)
5) A lotus,
6) A coconut tree,

Apte — The Practical Sanskrit English Dictionary, 1957 edition. (Prasad Prakashan, Poona)

ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ನಿಘಂಟಿನಲ್ಲಿ "ಆರು ಎಂಬ ಕನ್ನಡ ಪದಕ್ಕೆ ರೂಢವಾದ ಹಲಸಿನ ಮರ ಎಂದು ಹೇಳದೆ ನಿಚುಲವೃಕ್ಷ ಎಂದಿರುವುದು ಸೋಜಿಗವಲ್ಲವೆ?" ಎಂದು ಜೋಶಿಯವರು ಕೇಳಿದ್ದಾರಷ್ಟೆ!

ಪರಿಷತ್ತಿನ ನಿಘಂಟಿನಲ್ಲಿ ಆರ್(ಅಥವಾ ಆರ) ಎಂಬ ಶಬ್ದಕ್ಕೆ ನಿಚುಳ ವೃಕ್ಷ ಎಂಬ ಅರ್ಥವನ್ನು ಹೇಳಿ "ನಿರ್ಜುಳ ನಿಚುಳ ಮಾರುಂ" ಎಂಬ ಮಂಗರಾಜನ ಅಭಿನವಾಭಿಧಾನದ ವಾಕ್ಯವನ್ನು ಉದ್ಧರಿಸಿದ್ದಾರೆ. ಅದೇ ನಿಘಂಟಿನಲ್ಲಿ ನಿಚುಲ(ನಿಚುಳ) ಎಂಬ ಶಬ್ದಕ್ಕೆ ಕೊಟ್ಟಿರುವ ಅರ್ಥ, ವಿವರಣೆಗಳು ಇಂತಿವೆ :

೧. ಒಂದು ಬಗೆಯ ಸಸ್ಯ; ಹಬಸೆಗಿಡ : "ವಂಜುಲಃ, ನಿಚುಲ:-ಈ ೨ ಹಬಸೇಗಿಡದ ಪೆಸರ್" ಹಲಾಯುಧನ ಅಭಿಧಾನ ರತ್ನಮಾಲೆಯ ಕನ್ನಡ ಟೀಕೆ ೩೨-೪೨;

೨. ಒಂದು ಬಗೆಯ ಮರ: ನೀರು ಹಲಸು ;

೩. ಒಂದು ಬಗೆಯ ಕಣಗಿಲೆ ಮರ ; ತೊರೆಗಣಗಿಲೆ ; (ನಾಚಿರಾಜೀಯದ ಹಸ್ತಪ್ರತಿ)

೪. (ಒಳ ಅಂಗಿಯ ಮೇಲೆ ತೊಡುವ) ಮೇಲಿನ ಅಂಗಿ, ಕವಚ ;

ನಿಚುಳ : ೧. "ನಿರ್ಜುಳ ನಿಚುಳ (ಪಾಠಾಂತರ - ನಿಚುಲ) ಮಾರುಂ (ಮಂಗರಾಜನ ಅಭಿನವಾಭಿಧಾನ ೩೪-೧೦)

೨. "ನಿಚುಳಃ, ಅಂಬುಜಃ, ಇಜ್ಜಲಃ -೩ ಗನ್ನೇರಳೇಗಿಡದ ಹೆಸರುಗಳು - ಇದನ್ನು ನೀರುಹಲಸಿನಗಿಡವೆನ್ನುವರು" (ಸಟೀಕ ಅಮರ ಕೋಶವು - ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ)

ಶಾರ್ಙ್ಗಧರ ಪದ್ಧತಿಯಲ್ಲಿ "ನಿಚುಲನಿಕುಂಜ"ವೆಂಬ ಪ್ರಯೋಗವಿದೆ[8]. ಪರಿಷತ್ತಿನ ಕನ್ನಡ ನಿಘಂಟಿನಲ್ಲಿ 'ನಿಕುಂಜ' ಶಬ್ದಕ್ಕೆ ಪೊದೆ, ಮೆಳೆ, ಹೊದರು, ಬಳ್ಳಿಮಾಡ, ಲತಾಗೃಹ ಎಂಬರ್ಥಗಳನ್ನು ಹೇಳಿ, ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳ ಸಟೀಕ ಅಮರಕೋಶದ "ನಿಕುಂಜಃ, ಕುಂಜಃ -೨ ಲತಾದಿಪಿಹಿತೋದರೇ-ಬಳ್ಳಿಗಳು ರೆಂಬೆ ಮುಂತಾದವುಗಳು ಸುತ್ತಿಕೊಂಡು ಮನೆಯಹಾಗಿರುವ ಬೇಲಿ, ಲತಾಗೃಹ" ಎಂಬ

---

8. ಇಹ ನಿಚುಲನಿಕುಂಜೇ ವಂಶಸಂಭಾರ ಭಾಜಿ
ಸ್ವಪಿಷಿ ಯದಿ ಮುಹೂರ್ತಂ ಪಶ್ಯಸಿ ಕ್ಷೇತ್ರಮೇತತ್ ॥
ಇತಿ ಪಥಿಕಮಕಸ್ಮಾನ್ಮಾರ್ಗ ಏವೋಪವಿಷ್ಟಂ
ವದತಿ ತರುಣಕಾಂತಂ ಗೋಪಿಕಾ ಸಾಂಗಭಂಗಮ್ ॥

(ಸುಂದರನಾದ ತರುಣ ಪ್ರಯಾಣಿಕನು ಮಧ್ಯದಾರಿಯಲ್ಲಿಯೇ ಆಕಸ್ಮಾತ್ ಕುಳಿತಿರುವುದನ್ನು ನೋಡಿದ

ಭಾಗವನ್ನು ಕೊಟ್ಟಿದ್ದಾರೆ. ಇದರಿಂದಲೂ 'ನಿಚುಲ'ವು ನೀರಿನ ಸಮೀಪದಲ್ಲಿ ಪೊದೆಯಾಗುವಂತೆ ಬೆಳೆಯುವ ಸಸ್ಯವೆಂದು ಹೇಳಿದಂತಾಯಿತು.

ಹೀಗೆ ಕನ್ನಡ ಕೋಶಕಾರರೂ ''ನಿಚುಲ''ವು ಹಲಸು ಎಂದು ಹೇಳಿಲ್ಲ.

''ಆರಂಕುಸ ಮಿಟ್ಟೊಡಂ'' ಎಂಬುದರ ಅರ್ಥವನ್ನು ವಿಚಾರಮಾಡುತ್ತಾ ''ಅಂಕುಶದಿಂದ ತಿವಿಯುವ ಮಾತು ಯಾಕೆ? ಅರ್ಜುನನಿಗೆ ಅಂಕುಶದ ಭಯ ಯಾರಿಂದ ?'' ಎಂಬ ಪ್ರಶ್ನೆಗಳನ್ನು ಎತ್ತಿದ್ದಾರೆ ಜೋಶಿಯವರು. ಇಲ್ಲಿ 'ಅಂಕುಸ'ಕ್ಕೆ ಆಯುಧವೆಂದು ಪದಶಃ ಅರ್ಥಮಾಡದೆ, ''ಅಂಕುಸವಿಡು'' ಎಂಬುದಕ್ಕೆ ಲಾಕ್ಷಣಿಕ ವಾಗಿ ಅಡ್ಡಿಮಾಡು ಎಂದು ಅರ್ಥಮಾಡುವುದು ಸೂಕ್ತ. ಹಲಸಿನಮರ ಅಂಕುಸ ವಿಡುವುದೆಂದರೇನು ಎಂಬ ಪ್ರಶ್ನೆಯನ್ನೆತ್ತಿ, ಹಲಸಿನ ಹೂವು ಇಲ್ಲವೆ ಹೀಚನ್ನು ಅಂಕುಸವೆನ್ನ ಬಹುದೆ? ಎಂದಾಗ, ಅವರೂ ಲಾಕ್ಷಣಿಕ ಅರ್ಥವನ್ನೇ ಮಾಡಿದ್ದಾರಷ್ಟೇ ! ಅರ್ಜುನ, ಅರಿಕೇಸರಿಗಳಿಗೆ ಅಭೇದವನ್ನು ಕಲ್ಪಿಸಿದ್ದಾನೆ ಪಂಪ. ರಾಜನು, ಮಂತ್ರಿಗಳು, ಸಾಮಂತ ರಾಜರು, ಪರದೇಶಗಳ ರಾಜದೂತರು (ambassadors) ಮುಂತಾದ ಪ್ರಮುಖರೊಡನೆ ಮಂತ್ರಾಲೋಚನೆಯೇ ಮೊದಲಾದ ಕಾರ್ಯಗಳಲ್ಲಿ ತೊಡಗಿರು ವಾಗ, ಇತರ ಕಡೆಗೆ ಗಮನಹರಿಸಲು ಆ ಪ್ರಮುಖರೇ ಅಡ್ಡಿಯಾಗಬಹುದಷ್ಟೆ ? ಹಾಗಾದಾಗಲೂ, ತೆಂಕಣಗಾಳಿ ಸೋಂಕಿದೊಡೆ, ಒಳ್ನುಡಿಗೇಳ್ದೊಡೆ... ಅವನ ಮನಸ್ಸು ಅಡ್ಡಿಯನ್ನು ಮೀರಿ ಬನವಾಸಿ ದೇಶವನ್ನು ನೆನೆಯುವುದೆಂದು ಅಭಿಪ್ರಾಯ.

೨

ಶುಶ್ರೂಷಸ್ವ ಗುರೂನ್ ಕುರು ಪ್ರಿಯಸಖೀಮತ್ತಿಂ ಸಪತ್ನೀ ಜನೇ
ಭರ್ತುರ್ವಿಪ್ರಕೃತಾಪಿ ರೋಷಣತಯಾ ಮಾ ಸ್ಮ ಪ್ರತೀಪಂ ಗಮಃ।
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೇಷ್ವನುತ್ಸೇಕಿನೀ
ಯಾಂತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ॥

ಎಂಬ ಪದ್ಯದ 'ವಾಮಾಃ ಕುಲಸ್ಯಾಧಯಃ' ಎಂದು ಮುಗಿಯುವ ಭಾಗಕ್ಕೆ ''ಪಂಡಿತರು ಹೇಳಿರುವ ಅರ್ಥ ಸಮಂಜಸವಲ್ಲವೆನಿಸುತ್ತದೆ. ಏಕೆಂದರೆ ಆ ಶ್ಲೋಕದ

ಗೊಲ್ಲರ ತರುಣಿ ''ಇಲ್ಲಿ ಬಿದಿರುಮೆಳೆಗೆ ಹೊಂದಿಕೊಂಡಿರುವ ನಿಚುಲದ ಬಳ್ಳಿ ಮಾಡಿದಲ್ಲಿ ಮುಹೂರ್ತ ಕಾಲ ವಿಶ್ರಾಂತಿ ಪಡೆದರೆ ಈ 'ಕ್ಷೇತ್ರ'ವನ್ನು ನೋಡುವೆ'' ಎಂದು, ಅಂಗಚೇಷ್ಟೆ ಮಾಡುತ್ತಾ ನುಡಿದಳು.

ಶಾರ್ಙ್ಗಧರ ಪದ್ಧತಿ, ಚೌಖಂಬಾ ಸಂಸ್ಕೃತ ಪ್ರತಿಷ್ಠಾನ, ದಿಲ್ಲೀ, 1987ರ ಪುನರ್ಮುದ್ರಣ, 3918ನೆಯ ಪದ್ಯ.

ಮಾತುಗಳು ಹಿತವಚನಗಳೇ ಹೊರತು ಆದೇಶಗಳಲ್ಲ. ಅಂತಹ ಸಂದರ್ಭದಲ್ಲಿ ಕಣ್ವರಂಥ ಮೃದುಹೃದಯದ ತಂದೆ ಅಪನಂಬಿಕೆಯನ್ನು ಸೂಚಿಸಲಾರರು" ಎಂದು ಹೇಳಿ "ಕೋಮಲೆಯರಾದ ಯುವತಿಯರು ಗೃಹಿಣೀಪದವನ್ನು ಪಡೆದು (ಅದಕ್ಕೆ ಆವಶ್ಯಕವಾದ ಸ್ಥೈರ್ಯವನ್ನೂ ಕೆಲಮಟ್ಟಿನ ಕಾಠಿನ್ಯವನ್ನೂ ರೂಢಿಸಿಕೊಂಡು) ಒಂದು ಕಾಲಕ್ಕೆ ಆಧಾರಭೂಮಿಯಾಗುತ್ತಾರೆ" ಎನ್ನುತ್ತಾರೆ ಲೇಖಕರು. ಈ ಕೆಲಸವನ್ನು ಕೋಮಲೆಯರು ಮಾತ್ರವಲ್ಲ, ಎಲ್ಲ ತಾಯಿಯರೂ ಮಾಡುತ್ತಾರೆ.

ಶಕುಂತಲೆ ಋಷ್ಯಾಶ್ರಮದಲ್ಲಿನ ಸೌಮ್ಯ ವಾತಾವರಣದಲ್ಲಿ ಬೆಳೆದವಳು. ಆಶ್ರಮವಾಸಿಗಳ ಸಾಹಚರ್ಯದಲ್ಲಿಯೇ ಬೆಳೆದ ಅವಳಿಗೆ, ಆಶ್ರಮದ ಹೊರಗಿನ, ಅದರಲ್ಲೂ ಅರಮನೆಯ, ವಾತಾವರಣ ಹೇಗಿರಬಹುದೆಂದು ಏನೇನೂ ತಿಳಿಯದು. ಅಲ್ಲಿ ಸಪತ್ನೀ ಜನರಿದ್ದಾರೆ, ಏನು ತೊಂದರೆಯಾದೀತೋ ಎಂದು ಸಾಕಿದ ತಂದೆ ಆತಂಕ ಪಡುವುದು ಸಹಜ. ಆದುದರಿಂದ ರಾಜನ, ಸಪತ್ನಿಯರ ಮತ್ತು ಪರಿಜನರೊಡನೆ ಹೇಗೆ ನಡೆಯಬೇಕೆಂದು ಹೇಳಿ, ಹಾಗೆ ನಡೆದವರು ಮಾತ್ರ ಗೃಹಿಣೀಪದವನ್ನು ಹೊಂದುತ್ತಾರೆ; ಇಲ್ಲದಿದ್ದರೆ ಕುಲಕ್ಕೆ ಕೊರಗನ್ನು ಉಂಟುಮಾಡುತ್ತಾರೆ ಎಂದು ಮಗಳನ್ನು ಎಚ್ಚರಿಸುವುದೂ ಸಹಜವೇ. ಇದರಿಂದ ಅವಳ ನಡತೆಯ ವಿಷಯವಾಗಿ ಅಪನಂಬಿಕೆಯನ್ನು ಸೂಚಿಸಿದಂತಾಗದು. ಆದುದರಿಂದ ಇಲ್ಲಿ 'ವಾಮಾ' ಶಬ್ದಕ್ಕೆ "ಪ್ರತೀಪದರ್ಶಿನೀ" ಎಂಬ ಅರ್ಥವೇ ಸೂಕ್ತ. ಕೋಮಲೆ ಎಂಬ ಅರ್ಥ ಈ ಸಂದರ್ಭಕ್ಕೆ ಹೊಂದುವುದಿಲ್ಲ.

'ಆಧಿ ಎಂದರೆ ಮಾನಸಿಕ ವ್ಯಥೆ. (ವ್ಯಾಧಿ ಶಾರೀರಿಕ ವ್ಯಥೆ) ಆಪ್ಟೆಯವರು ತಮ್ಮ ಕೋಶದಲ್ಲಿ ಈ ಅರ್ಥವನ್ನು ಕೊಟ್ಟ ಮೇಲೆ 'a bane, curse' (ವ್ಯಥೆ, ಶಾಪ) ಎಂಬ ಅರ್ಥಗಳನ್ನೂ ಹೇಳಿ ಮೇಲಿನ ಪದ್ಯದ ಕೊನೆಯ ಪಾದವನ್ನೇ ಈ ಅರ್ಥಗಳಿಗೆ ಉದಾಹರಣೆಯಾದ ಪ್ರಯೋಗವಾಗಿ ಕೊಟ್ಟಿದ್ದಾರೆ. ಮುಂದೆ 'a place, a residence' (ಸ್ಥಾನ, ವಾಸಸ್ಥಾನ) ಎಂಬರ್ಥಗಳಿವೆ. ಇತರ ಅನೇಕ ಅರ್ಥಗಳನ್ನು ಕೊಟ್ಟಿದ್ದಾರೂ, "ತಳಹದಿ" ಅವುಗಳಲ್ಲೊಂದಲ್ಲ. ಈ ಅರ್ಥದಲ್ಲಿ 'ಆಧಿ' ಶಬ್ದದ ಪ್ರಯೋಗ ಕಂಡುಬಂದಂತಿಲ್ಲ.

ಈ ಕಾರಣಗಳಿಂದ, ಇದುವರೆಗೆ ವಿದ್ವಾಂಸರು ಹೇಳಿರುವ ಅರ್ಥ ಅಸಮಂಜಸವಲ್ಲ.

9. 'ಕೃಪಾ' ಶಬ್ದಕ್ಕೂ ಚಂದ್ರನ ಪ್ರಕಾಶ ಕ್ರಮವಾಗಿ ಬೆಳೆದು ಇಳಿಯುವುದಕ್ಕೂ, ಸಂಬಂಧವಿಲ್ಲ. ಕೋಶಕಾರರು (ಕ್ಷೀರಸ್ವಾಮಿ, ಆಪ್ಟೆ) ಈ ಶಬ್ದಕ್ಕೆ ಕ್ಷಪಯತಿ ಚೇಷ್ಟಾಂ' (ಚಟುವಟಿಕೆಯನ್ನು ನಿಲ್ಲಿಸುತ್ತದೆ ಅಥವಾ ಕಡಿಮೆ ಮಾಡುತ್ತದೆ) ಎಂಬ ನಿಷ್ಪತ್ತಿಯನ್ನು ಕೊಟ್ಟಿದ್ದಾರೆ. ಕ್ಷಪಾ = ರಾತ್ರಿ; ಅದರ ನಾಥ ಕ್ಷಪಾನಾಥ = ಚಂದ್ರ.

೩

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ
ಸರಸ್ವತೀ ಶ್ರುತಿಮಹತಾಂ ಮಹೀಯತಾಮ್ ।
ಮಮಾಪಿ ಚ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತಶಕ್ತಿರಾತ್ಮಭೂಃ ॥

ಈ ಭರತವಾಕ್ಯದಲ್ಲಿ, ಪೂರ್ವಾರ್ಧದಲ್ಲಿ ಶುಭಾಶಂಸನಮಾಡಿದಮೇಲೆ, ಉತ್ತರಾರ್ಧದಲ್ಲಿ "ನೀಲಲೋಹಿತಃ ಮಮ ಪುನರ್ಭವಂ ಕ್ಷಪಯತು" (ನೀಲ ಲೋಹಿತನಾದ ಶಿವನು ನನ್ನ ಪುನರ್ಜನ್ಮವನ್ನು ನಾಶಮಾಡಲಿ) ಎಂದು ಪ್ರಾರ್ಥಿಸುತ್ತಾನೆ ಕಾಳಿದಾಸ.

'ಕ್ಷಪಯತು' ಶಬ್ದ 'ಕ್ಷಿ' ದಾತುವಿನ ಣಿಜಂತರೂಪ. ಆಪ್ಟೆಯವರ ಶಬ್ದಕೋಶ ದಲ್ಲಿ ಈ ಶಬ್ದಧ ಅಡಿಯಲ್ಲಿ "to destroy, remove, put an end to" ಎಂಬ ಅರ್ಥಗಳನ್ನೂ, ಪ್ರಯೋಗಕ್ಕೆ ನಿದರ್ಶನವಾಗಿ ಮೇಲಿನ ಶ್ಲೋಕದ ಉತ್ತರಾರ್ಧವನ್ನೂ ಕೊಟ್ಟಿದೆ. ಕವಿ ಪುನರ್ಜನ್ಮದ ನಾಶ ಎಂದರೆ ಮೋಕ್ಷವನ್ನು ಕೊಡೆಂದು ಪ್ರಾರ್ಥಿಸುವುದು ಸಹಜ;ಕ್ರಮವಾಗಿ ಜನನ ಮರಣ ಚಕ್ರವನ್ನು ನಿಲ್ಲಿಸು ಎಂದು ಕೇಳಿ ಕೊಳ್ಳುವುದು ಅಸಂಭಾವ್ಯ. ತಿರುಗುತ್ತಿರುವ ಚಕ್ರಕ್ಕೆ ಹೆದ್ದನೆ (brake) ಹಾಕಿದರೆ, ಅದು ಗಕ್ಕನೆ ನಿಲ್ಲುವುದಷ್ಟೇ ! 'ಪರಿಭ್ರಮ' ಶಬ್ದಕ್ಕೆ ಸುತ್ತುವುದು (wandering) ಎಂಬ ಅರ್ಥವಿದೆ. ಇದನ್ನು ಎಳೆದು, ಸಂಸಾರಚಕ್ರಕ್ಕೆ ಅನ್ವಯಿಸಿ, 'ಪುನರ್ಭವ' ಶಬ್ದಕ್ಕೆ ಬದಲಾಗಿ 'ಪರಿಭ್ರಮ' ಶಬ್ದವಿರಬೇಕೆನ್ನುವ ಆವಶ್ಯಕತೆಯೇನೂ ಕಂಡುಬರುವುದಿಲ್ಲ. ಜೋಶಿ ಯವರೇ ಶಾಕುಂತಲದ ಯಾವ ಮುದ್ರಣದಲ್ಲಿಯೂ 'ಪರಿಭ್ರಮ' ಶಬ್ದ ಕಂಡುಬರುವುದಿಲ್ಲವೆಂದೂ, "ಅಧ್ಯಾಪಕರಾರೋ ಹಾಗೆ ಅದನ್ನು ನುಡಿದಿರಬಹುದು" ಎಂದೂ ಹೇಳಿರುವುದರಿಂದ, ಮನಸ್ಸಿಗೆ ಹಿಡಿಸಲಿಲ್ಲವೆಂಬ ಕಾರಣಕ್ಕಾಗಿ, ಸರಿಯಾದ ಆಧಾರವಿಲ್ಲದೆ ಪಾಠವನ್ನು ಬದಲಾಯಿಸುವುದು ಉಚಿತವಲ್ಲ.

ಕಾವ್ಯಾರ್ಥ ಕುತೂಹಲ - ಪ್ರತಿಕ್ರಿಯೆಗಳ ಪುನಃಪರಿಶೀಲನೆ

"ಕಾವ್ಯಾರ್ಥ ಕುತೂಹಲ" ಎಂಬ ಶ್ರೀಮಾನ್ ಪಿ. ವಿ. ಜೋಶಿಯವರ ಲೇಖನವನ್ನು[1] ನೋಡಿ ನಾನು ಬರೆದಿದ್ದ "ಕಾವ್ಯಾರ್ಥಕುತೂಹಲ - ಪ್ರತಿಕ್ರಿಯೆ" ಎಂಬ ಲೇಖನಕ್ಕೆ[2] ಉತ್ತರರೂಪವಾಗಿ ಜೋಶಿಯವರು "ಸಾಹಿತ್ಯ ಕುತೂಹಲ - ಪ್ರತಿಕ್ರಿಯೆಗೆ ಪ್ರತಿಕ್ರಿಯೆ" ಎಂಬ ಲೇಖನವನ್ನು[3] ಬರೆದಿದ್ದಾರೆ. ಅದರಲ್ಲಿ "ಪಂಡಿತ ಪ್ರಪಂಚದ ವಿಸ್ತಾರವೂ ನನಗೊಂದು ಕುತೂಹಲವೇ. ಆ ವಿಸ್ತಾರವನ್ನು ನೋಡಿ ಸುಖಿಸುವುದಕ್ಕೆ ಮತ್ತೆ ಪ್ರತಿವಾದಗಳನ್ನು ಮಂಡಿಸುತ್ತೇನೆ" ಎಂದಿದ್ದಾರೆ. ಹಾಗೆ ಸುಖಿಸಲು ಜೋಶಿಯವರು ಇನ್ನಿಲ್ಲವಲ್ಲ ಎಂದು ವ್ಯಸನವಾಗುತ್ತಿದೆ.

1.
ಆರು, ನಿಚುಲ, ಪನಸ.

"ಪಂಪನ ಪದ್ಯವನ್ನು ಅರ್ಥ ಮಾಡುವಲ್ಲಿ ಪ್ರಸ್ತುತವಾದದ್ದು 'ನಿಚುಲ' ಪದದ ಅರ್ಥವಲ್ಲ. 'ಆರು' ಪದದ ಅರ್ಥ ಎಂದಿದ್ದಾರೆ" ಜೋಶಿಯವರು. ಮೂಲ ಲೇಖನದಲ್ಲಿ "ಆಱು" ಶಬ್ದಕ್ಕೆ ಒಂದು ಅರ್ಥ 'ನಿಚುಲವೃಕ್ಷ' ಎಂದು ಕಣ್ಣಿಗೆ ಬಿತ್ತು" ಎಂದು ಹೇಳಿ, ಮುಂದೆ "ಅಮರಕೋಶವು ನಿಚುಲ = ಪನಸ ಎನ್ನುತ್ತದೆ" ಎಂದು ಬರೆದಿದ್ದರು. ಆದುದರಿಂದ 'ನಿಚುಲ' ಪದದ ಅರ್ಥ ಪ್ರಸ್ತುತವೇ. "ನಿಚುಲ"ವು "ಪನಸ"ವಲ್ಲ ಎಂದು ನನ್ನ ಹಿಂದಿನ ಲೇಖನದಲ್ಲಿಯೇ ವಿವರಿಸಿದ್ದೇನೆ. ಈಗ ಜೋಶಿಯವರು 'ಚುಲ್' ಧಾತುವಿನಿಂದ 'ನಿಚುಲ' ಶಬ್ದದ ರೂಪನಿಷ್ಪತ್ತಿಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಪಾಣಿನೀಯ ಧಾತುಪಾಠದಲ್ಲಿ "ಚುಲ ಸಮುಚ್ಛ್ರಾಯೇ" ಎಂದಿದೆ. ಸಮುಚ್ಛ್ರಾಯ ಎಂದರೆ ಮೇಲೇರುವುದು ಅಥವಾ ಮೇಲಕ್ಕೆ ಏರಿಸುವುದು. ಆಪ್ಟೆಯವರ ಕೋಶದಲ್ಲಿ ಈ ಧಾತುವಿಗೆ To raise or elevate, To rise, increase, To dip, dive or plunge into (ಮೇಲೇರಿಸು, ಏಳು, ಹೆಚ್ಚು ಆದ್ದು ಒಳಗೆ ಮುಳುಗು) ಎಂಬ ಅರ್ಥಗಳನ್ನು ಹೇಳಿದೆ. ಜೋಶಿಯವರು ಬರೆದಿರುವಂತೆ "ಮುಂದೆ ಸರಿಸು, ಹುಟ್ಟಿಸು" ಎಂಬ

---

1. ಕರ್ನಾಟಕ ಲೋಚನ, ಜೂನ್ 1993ರ ಸಂಚಿಕೆ; ಪುಟಗಳು 40-44
2. ಅದೇ, ಡಿಸೆಂಬರ್ 1993ರ ಸಂಚಿಕೆ; ಪುಟಗಳು 72-78
3. ಅದೇ, ಜೂನ್ 1994ರ ಸಂಚಿಕೆ; ಪುಟಗಳು 47, 48.

ಅರ್ಥಗಳು ಈ ಕೋಶದಲ್ಲೇ ಆಗಲಿ, ಬೇರೆ ಕೋಶ ಗಳಲ್ಲಾಗಲೀ ಕಂಡು ಬರುವುದಿಲ್ಲ. 'ನಿ' ಎಂಬ ಉಪಸರ್ಗ ಸಹಿತವಾದ 'ಚುಲ್' ಧಾತುವಿನಿಂದ 'ನಿಚುಲ' ಪದದ ನಿಷ್ಪತ್ತಿಯಾಗಿದೆ. ಕ್ಷೀರ ಸ್ವಾಮಿಯು, ಅಮರಕೋಶದ ವ್ಯಾಖ್ಯಾನದಲ್ಲಿ "ನಿಚೋಲ್ಯತೇ ಅಂಬುನಾ" (ನೀರಿನಿಂದ ಅಭಿವೃದ್ಧಿ ಪಡಿಸಲ್ಪಡುತ್ತದೆ) ಎಂಬ ವ್ಯುತ್ಪತ್ತಿಯನ್ನು ಕೊಟ್ಟಿದ್ದಾನೆ. ರಾಯಮುಕುಟನು ತನ್ನ ಪದಚಂದ್ರಿಕಾ ವ್ಯಾಖ್ಯಾನದಲ್ಲಿ "ಈ ಎರಡು ವ್ಯುತ್ಪತ್ತಿಗಳನ್ನು ಕೊಟ್ಟಿದ್ದಾನೆ.

1. ನಿಚುಲ್ಯತೇ ಸಮುಚ್ಛ್ರೀಯತೇ (ವರ್ಧಿಸಲ್ಪಡುತ್ತದೆ);
2. ನಿಚಿನೋತಿ ಪತ್ರಶಾಖಾದಿ ಸಂಚಯಂ ಕರೋತಿ (ಎಲೆ, ರೆಂಬೆ ಇತ್ಯಾದಿಗಳನ್ನು ಬೆಳೆಸಿಕೊಳ್ಳುತ್ತದೆ).

ಈ ವ್ಯುತ್ಪತ್ತಿಗಳಂತೆ ನಿಚುಲ ಶಬ್ದವು ಎಲ್ಲ ಗಿಡಗಳಿಗೂ ಅನ್ವಯಿಸುತ್ತದೆಯಾದರೂ ನನ್ನ ಹಿಂದಿನ ಲೇಖನದಲ್ಲಿ ವಿವರಿಸಿರುವಂತೆ, "ನಿಚುಲ" ಶಬ್ದವು ಕೆಲವು ಗಿಡಗಳ ಹೆಸರಿಗೆ ಮಾತ್ರ ಸೀಮಿತವಾಗಿದೆ. ಅವುಗಳಲ್ಲಿ ಹಲಸು ಸೇರಿಲ್ಲ.

ಶಬ್ದಗಳನ್ನು ಅಪ್ರಸಿದ್ಧಾರ್ಥದಲ್ಲಿ, ಕುಚೋದ್ಯಕ್ಕಾಗಲೀ, ಶ್ಲೇಷೋಕ್ತಿಯಲ್ಲಾಗಲೀ ಪ್ರಯೋಗಿಸುತ್ತಾರೆ. ಬೇರೆ ಕಡೆಗಳಲ್ಲಿ ಇಂತಹ ಪ್ರಯೋಗವು ದೋಷವೆಂದು ಪರಿಗಣಿಸಲ್ಪಟ್ಟಿದೆ. ಅಂತಹ ಪ್ರಯೋಗದಿಂದ ಅಪಾರ್ಥವೂ ಆಗಬಹುದು.

"ಹಲಸಿನ ಮರದ ಎಲೆಗಳೂ ಆಲದ ಮರದ ಎಲೆಗಳಂತೆಯೇ ಇರುವವಲ್ಲ! ಆಲದ ಮರಕ್ಕಿರುವಂತೆ ಹಲಸಿನಮರಕ್ಕೂ ಹಾಲು ಇದೆಯಲ್ಲ! ಆದ್ದರಿಂದ ಒಂದು ಆರ ಒಂದು ಆಲ ಏಕಾಗಿರಬಾರದು ?" ಎಂದು ಪ್ರಶ್ನಿಸಿದ್ದಾರೆ ಈ ಲೇಖನದಲ್ಲಿ. ಈ ರೀತಿಯ ಅರ್ಥಕಲ್ಪನೆಗಳ ಬಗೆಗೆ ಟೀಕೆ ಅನಗತ್ಯ.

---

4. ಕೆಲವು ಉದಾಹರಣೆಗಳು :

1. 'ಕೇಸರೀ' ಎಂಬ ಪದಕ್ಕೆ ಸಿಂಹ, (ಕನ್ನಡವಲ್ಲಿ) ಕುಂಕುಮ ಕೇಸರಿ (ಸುಗಂಧದ್ರವ್ಯ) ಎಂಬ ಅರ್ಥಗಳಿವೆ. ಕೈಲಾಸಂರವರು ತಮ್ಮ ನಾಟಕವೊಂದರಲ್ಲಿ (ನಮ್ ಬ್ರಾಹ್ಮಣ್ಕೆ) "ಕೇ=ನೀರಿನಲ್ಲಿ, ಸರತಿ = ಚಲಿಸುತ್ತದೆ" ಎಂದು ವ್ಯುತ್ಪತ್ತಿಯನ್ನು ಹೇಳಿ, 'ಕೇಸರಿ' ಎಂದರೆ ಮೀನು ಎಂದು ಹೇಳಿದ್ದಾರೆ.
2. 'ವಿಶ್ವಾಸ' ಎಂಬ ಶಬ್ದಕ್ಕೆ ನಂಬಿಕೆ, ಪ್ರೀತಿ, ಸ್ನೇಹ ಎಂಬ ಅರ್ಥಗಳಿವೆಯಷ್ಟೆ ಕುಚೋದ್ಯಕ್ಕಾಗಿ, ವಿಶ್ವಾಸ = 'ವಿಗತಶ್ವಾಸ' ಎಂದರೆ ಉಸಿರು ಹೋದದ್ದು = ಶವ ಎಂದು ಅರ್ಥ ಮಾಡಬಹುದು.
3. ಪಂಕಜ = ಕೆಸರಿನಲ್ಲಿ ಹುಟ್ಟಿದ್ದು, ತಾವರೆ. ಇದರ ಪ್ರಸಿದ್ಧಾರ್ಥ. ಮಣ್ಣುಹುಳು ಎಂದು ಅರ್ಥ ಮಾಡಬಹುದು.

ಅಭಿಜ್ಞಾನಶಾಕುಂತಲನಾಟಕದಲ್ಲಿನ "ಶುಶ್ರೂಷಸ್ವ ಗುರೂನ್" ಎಂದಾರಂಭವಾಗುವ ಪದ್ಯದ 'ವಾಮಾಃ ಕುಲಸ್ಯಾಧಯಃ' ಎಂಬ ಭಾಗದ ಅರ್ಥ ವಿಚಾರ.

ಈ ಲೇಖನದಲ್ಲಿ ಜೋಶಿಯವರು ಕುಲಸ್ಯಾಧಯಃ = ಕುಲಸ್ಯ + ಅಧಯಃ ಎಂದು ಪದ ವಿಭಾಗ ಮಾಡಿ "ಅಧಿ ಎಂದರೆ ಮೊದಲು ಹುಟ್ಟಿದ್ದು" ಎಂದು ಹೇಳಿ ವೇದದಲ್ಲಿನ ಎರಡು ಪ್ರಯೋಗಗಳನ್ನು ಉದಾಹರಿಸಿದ್ದಾರೆ. ಈ ಎರಡು ಪ್ರಯೋಗಗಳೂ ಸಹ ಋಗ್ವೇದದ ಹತ್ತನೇ ಮಂಡಲದಲ್ಲಿನ, 'ಋತಂ ಚ ಸತ್ಯಂ ಚ' ಎಂದು ಮೊದಲಾಗುವ 190ನೆಯ ಸೂಕ್ತದ ಭಾಗಗಳು. ಇಲ್ಲಿ 'ಅಧಿ' ಶಬ್ದಕ್ಕೆ ಮೊದಲು ಹುಟ್ಟಿದ್ದು ಎಂದು ಅರ್ಥವಲ್ಲ.

"ಋತಂ ಚ ಸತ್ಯಂ ಚ ಅಭೀದ್ಧಾತ್ ತಪಸಃ ಅಧಿ ಅಜಾಯತ" ಎಂಬ ವಾಕ್ಯಕ್ಕೆ, "ಋತ ಎಂದರೆ ವಾಕ್; ಸತ್ಯ ಎಂದರೆ ಸತ್ಯವಾದ ವಾಕ್, ಪ್ರಾಣ. ಇವೆರಡೂ ತಪೋನಿಷ್ಠನಾದ ಬ್ರಹ್ಮನಿಂದ ಹುಟ್ಟಿದವು" ಎಂದು ವೇಂಕಟಮಾಧವಾಚಾರ್ಯರ ವ್ಯಾಖ್ಯಾನ. "ಋತ ಎನ್ನುವುದು ಸತ್ಯದ ಹೆಸರು; ಇದು ಮನಸ್ಸಂಕಲ್ಪರೂಪವಾದದ್ದು. ಯಥಾರ್ಥವನ್ನು ನುಡಿಯುವುದು ವಾಚಿಕ ಸತ್ಯ. ಇವೆರಡೂ ಸೃಷ್ಟ್ಯರ್ಥವಾಗಿ ತಪಸ್ಸು ಮಾಡಿದ ಬ್ರಹ್ಮನ ತಪಸ್ಸಿನಿಂದ ಅನಂತರ ಉತ್ಪನ್ನವಾದುವು. ಅಥವಾ ಅಭೀದ್ಧಾತ್ = ಸರ್ವತ್ರ ಪ್ರಕಾಶಮಾನನಾದ ಪರಮಾತ್ಮನಿಂದ ಋತ ಮತ್ತು ಸತ್ಯಗಳು ಹುಟ್ಟಿದವು" ಎಂದು ಸಾಯಣ ಭಾಷ್ಯ".[5]

"ಸಮುದ್ರಾತ್ ಅರ್ಣವಾತ್ ಅಧಿ ಸಂವತ್ಸರೋ ಅಜಾಯತ" ಎಂಬ ವಾಕ್ಯಕ್ಕೆ "ಸಮುದ್ರದಿಂದ ಸಂವತ್ಸರವು ಹುಟ್ಟಿತು" (ಎಂದರೆ ಸಮುದ್ರದ ಅನಂತರ ಸಂವತ್ಸರವು ಹುಟ್ಟಿತು) ಎಂದು ಅರ್ಥ ಹೇಳಿದ್ದಾರೆ. ವೇಂಕಟಮಾಧವಾಚಾರ್ಯರು. ಇವರು

---

5. ಋತಂ ಚ ಸತ್ಯಂ ಚ ಅಭೀದ್ಧಾತ್ ತಪ್ಯಮಾನಾತ್ ಬ್ರಹ್ಮಣಃ ಅಜಾಯತ ॥ "ತತ್ ಯತ್ ಋತಂ ಇತಿವಾಕ್. ಸಾ ಯತ್ ಸತ್ಯಂ ಇತಿ ಪ್ರಾಣಃ ಇತಿ ಶಾಕಟಾಯನಕಂ ।

(ವೇಂಕಟಮಾಧವಾಚಾರ್ಯ ವ್ಯಾಖ್ಯಾನ)

Pub : Vishveshvaranand Vedic Research Institute, Hoshiarpur

ಋತಮಿತಿ ಸತ್ಯನಾಮ । ಋತಂ ಮಾನಸಂ ಯಥಾರ್ಥ ಸಂಕಲ್ಪನಂ, ಸತ್ಯಂ ವಾಚಿಕಂ ಯಥಾರ್ಥ ಭಾಷಣಂ । xx ತತ್ಸರ್ವಂ ಅಭೀದ್ಧಾತ್ ಅಭಿತಪ್ತಾತ್ ಬ್ರಹ್ಮಣಾಪುರಾಸೃಷ್ಟ್ಯರ್ಥಂ ಕೃತಾತ್ ತಪಸಃ ಅಧಿ । ಅಧ್ಯುಪರ್ಯರ್ಥೇ । ಉಪರ್ಯಜಾಯತ । ಉದಪದ್ಯತ xx ತಪಶ್ಚಾತ್ರ ಸ್ರಷ್ಟವ್ಯಪರ್ಯಾಲೋಚನ ಲಕ್ಷಣಂ । xx ಯದ್ವಾ ಅಭೀದ್ಧಾತ್ ಅಭಿತಃ ಪ್ರಕಾಶಮಾನಾತ್ ಪರಮಾತ್ಮನೋ ಮಾಯಾಧಿಷ್ಠಾನ-ರೂಪಾತ್ ಉಪಾದಾನ ಭೂತಾತ್ ಋತಂ ಸತ್ಯಂ ಚ ಅಜಾಯತ । (ಸಾಯಣಾಚಾರ್ಯ ವಿರಚಿತ ಮಾಧವೀಯ ವೇದಾರ್ಥ ಪ್ರಕಾಶವೆಂಬ ಋಗ್ಭಾಷ್ಯ)
ಪ್ರಕಾಶಕ - ಪುಣೆ ವೈದಿಕ ಸಂಶೋಧನ ಮಂಡಲ

''ಅಧಿ'' ಶಬ್ದಕ್ಕೆ ಬೇರೆಯಾಗಿ ವ್ಯಾಖ್ಯಾನ ಮಾಡಿಲ್ಲ. ಸಾಯಣಾಚಾರ್ಯರು ''ಸಮುದ್ರದ ಸೃಷ್ಟಿಯಾದ ನಂತರ, ಸಂವತ್ಸರ ಶಬ್ದದಿಂದ ಸೂಚಿತವಾದ ''ಕಾಲ''ವೆಲ್ಲವೂ ಉತ್ಪನ್ನವಾಯಿತು'' ಎಂದು ವಿವರಿಸಿದ್ದಾರೆ.[6]

''ಅಧಿ'' ಶಬ್ದವು ಅವ್ಯಯ. ಇದು ಧಾತುವಿಗೆ ಉಪಸರ್ಗವಾಗಿಯೂ ನಾಮಪದದೊಡನೆ ಉಪಪದವಾಗಿಯೂ ಪ್ರಯೋಗಿಸಲ್ಪಡುತ್ತದೆ. ಈ ಮಂತ್ರಗಳಲ್ಲಿ ಭಾಷ್ಯಕಾರರು ಅದನ್ನು ತಪಸಃ ಮತ್ತು ಅರ್ಣವಾತ್ ಎಂಬ ಪಂಚಮೀವಿಭಕ್ತ್ಯಂತ ಪದಗಳೊಡನೆ ಅನ್ವಯಿಸಿದ್ದಾರೆ. ಸಾಯಣಾಚಾರ್ಯರು ''ಅಧಿ'' ಶಬ್ದಕ್ಕೆ ''ಉಪರಿ'' (ಅನಂತರ) ಎಂದು ಅರ್ಥ ಹೇಳಿದ್ದಾರೆ. Wilsonರವರು ತಮ್ಮ ಋಗ್ವೇದದ ಆಂಗ್ಲಾನುವಾದದಲ್ಲಿ ''ಅಧಿ'' ಶಬ್ದವನ್ನು from, after-wards ಎಂದು ಅನುವಾದಿಸಿದ್ದಾರೆ.

ಮೇಲಿನ ವೈದಿಕ ಪ್ರಯೋಗಗಳಲ್ಲಿರುವ ''ಅಧಿ'' ಅವ್ಯಯವಾದುದರಿಂದ ಅದಕ್ಕೆ ''ಅಧಯಃ'' ಎಂಬ ಬಹುವಚನರೂಪವಿಲ್ಲ. ಆಪ್ಟೆ ಕೋಶದಲ್ಲಿ ''ಆಧಿಃ'' ಎಂಬ ನಾಮ ಪದಕ್ಕೆ Mental pain or Agony (ಮಾನಸಿಕ ಚಿಂತೆ, ವ್ಯಥೆ) ಎಂಬ ''ಆಧಿ'' ಶಬ್ದಕ್ಕಿರುವ ಅರ್ಥಗಳನ್ನೇ ಕೊಟ್ಟಿದ್ದಾರೆ.

ನನ್ನ ಮಾನ್ಯಮಿತ್ರರಾದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಶ್ರೀ ಕೌಳಗಿ ಶೇಷಾಚಾರ್ಯರು ತಮ್ಮ 21.11.94ರ ಪತ್ರದಲ್ಲಿ, ''ಆಧಿ ಮತ್ತು ಅಧಿಷ್ಠಾನ ಪರ್ಯಾಯ ಪದ ಗಳಲ್ಲವೇ ? ಪ್ರಸಕ್ತ ಶ್ಲೋಕದಲ್ಲಿ ಆಧಿಯನ್ನು ಪೀಡಾರ್ಥದಲ್ಲೂ ಮತ್ತು ಅಧಿಷ್ಠಾನಾರ್ಥದಲ್ಲೂ ಕಾಳಿದಾಸ ಪ್ರಯೋಗಿಸಿಲ್ಲವೇ'' ಎಂದು ಕೇಳಿದ್ದಾರೆ. ಕಲ್ಕತ್ತಾದ ರಮೇಂದ್ರಮೋಹನ ಬೋಸ್ ಅವರ ಅಭಿಜ್ಞಾನ ಶಾಕುಂತಲದ ಆವೃತ್ತಿಯ ಈ ಭಾಗದ ಫೋಟೋ ಪ್ರತಿಯನ್ನು ದಯೆಯಿಟ್ಟು ಕಳುಹಿಸಿ ತುಂಬ ಉಪಕಾರ ಮಾಡಿದ್ದಾರೆ.

ಬೋಸ್ ಅವರು ತಮ್ಮ ಸಂಸ್ಕೃತ ವ್ಯಾಖ್ಯಾನದಲ್ಲಿ 'ವಾಮಾ' ಶಬ್ದಕ್ಕೆ 'ಯೌವನದಿಂದ ಉಂಟಾದ ಗರ್ವದಿಂದ ಪ್ರತೀಪ = ಪ್ರತಿಕೂಲವಾಗಿ ಆಚರಿಸು ವವಳು' ಎಂದೂ 'ಆಧಿ' ಶಬ್ದಕ್ಕೆ ಪೀಡೆ ಎಂದೂ ಅರ್ಥಹೇಳಿ ಅಮರಕೋಶ ಪಂಕ್ತಿಯನ್ನು ಉದಾಹರಿಸಿದ್ದಾರೆ

---

6. ಸಮುದ್ರಾತ್ ಉದಕವತಃ ಸಂವತ್ಸರಃ ಅಬ್ದಃ ಅಜಾಯತ ।
(ವೇಂಕಟಮಾಧವಾಚಾರ್ಯ)
ಅರ್ಣವಾತ್ ಸಮುದ್ರಾತ್ ಸೃಷ್ಟಾತ್ ಅಧಿ ಊರ್ಧ್ವಂ ಸಂವತ್ಸರಃ
ಸಂವತ್ಸರೋಪಲಕ್ಷಿತಃ ಸರ್ವಃ ಕಾಲಃ ಅಜಾಯತ । (ಸಾಯಣಾಚಾರ್ಯ)

"ಉಪದೇಶಿಸಿರುವುದಕ್ಕೆ ವಿರೋಧವಾಗಿ ವರ್ತಿಸಬೇಡ ಎಂದು ಭಾವ" ಎಂದೂ ಹೇಳಿರುತ್ತಾರೆ.[7]

ಮುಂದೆ, ತಮ್ಮ ಇಂಗ್ಲೀಷ್ ಟಿಪ್ಪಣಿಯಲ್ಲಿ, 'ವಾಮಾ' ಶಬ್ದಕ್ಕೆ (1) ಸ್ತ್ರೀ ಸಾಮಾನ್ಯಳು ಅಥವಾ (2) ಪ್ರತಿಕೂಲವಾಗಿ ಆಚರಿಸುವವಳು (ಪ್ರತೀಪಾ) ಎಂದೂ, 'ಅಧಿ' ಶಬ್ದಕ್ಕೆ (1) ಶಾಪ, ಪೀಡೆ ಅಥವಾ (2) ಮುಖ್ಯಾಧಾರ (ಅಧಿಷ್ಠಾನ) ಎಂದೂ ಅರ್ಥ ಹೇಳಿ, "ಆದುದರಿಂದ, ಪದ್ಯದ ಕೊನೆಯ ಸಾಲಿನ ಅನ್ವಯವು 'ಏವಂ ಯುವತಯಃ ವಾಮಾಃ (ನಾರ್ಯಃ) ಕುಲಸ್ಯ ಆಧಯಃ (ಭೂತ್ವಾಕಾಲೇನ) ಗೃಹಿಣೀಪದಂ ಯಾಂತಿ" ಎಂದು ಬೇರೆ ರೀತಿಯಲ್ಲಿ ಆಗಬಹುದೆಂದೂ, ಆಗ ಆ ಸಾಲಿನ ಅರ್ಥವು "ಹೀಗೆ ಯುವತಿಯರಾದ ಸ್ತ್ರೀಯರು ತಮ್ಮ ಸಂಸಾರಕ್ಕೆ ಮುಖ್ಯಾಧಾರವಾಗುತ್ತಾರೆ ಮತ್ತು (ಕಾಲ ಸಂದಂತೆ) 'ಗೃಹಿಣೀ' ಸ್ಥಾನವನ್ನು ಪಡೆಯುತ್ತಾರೆ" ಎಂದು ಆಗುವುದೆಂದೂ ಹೇಳಿದ್ದಾರೆ.[8]

ಬೋಸ್ ಅವರು ಕೊಟ್ಟಿರುವ ಅನ್ವಯದಲ್ಲಿ 'ಯುವತಯಃ' ಎಂಬ ಶಬ್ದಕ್ಕೇ ಯೌವನವತಿಯರಾದ ಸ್ತ್ರೀಯರು ಎಂದು ಅರ್ಥವಾಗುವುದರಿಂದ, "ವಾಮಾಃ" (ನಾರ್ಯಃ) ಎಂಬ ಪದ ಅನಾವಶ್ಯಕವಾಗುತ್ತದೆ. ಆದುದರಿಂದ 'ವಾಮಾಃಕುಲಸ್ಯಾಧಯಃ' ಎಂಬುದನ್ನು ಸ್ವತಂತ್ರವಾಕ್ಯವಾಗಿ ತೆಗೆದುಕೊಳ್ಳುವುದೇ ನನಗೆ ಯುಕ್ತವಾಗಿ ಕಾಣುತ್ತದೆ. ಜೋಶಿಯವರ "ಅದಕ್ಕೆ, ಕ್ರಿಯಾಪದವಿಲ್ಲ ಕರ್ತೃಪದವಿಲ್ಲ" ಎಂಬ ಆಕ್ಷೇಪ ಸರಿಯಲ್ಲ. ಏಕೆಂದರೆ, 'ವಾಮಾಃ' ಎಂಬುದೇ ಕರ್ತೃ. "ಭವಂತಿ" (ಆಗುತ್ತಾರೆ) ಎಂಬ ಕ್ರಿಯಾಪದ ವಾಡಿಕೆಯಂತೆ ಅಧ್ಯಾಹಾರವಾಗುತ್ತದೆ.

---

7. ವಾಮಾಃ ಯೌವನಜನಿತಗರ್ವೇಣ ಪ್ರತೀಪಾಃ ಪ್ರತಿಕೂಲಚಾರಿಣ್ಯಃ ಇತ್ಯರ್ಥಃ । 'ಕುಲಸ್ಯ' ವಂಶಸ್ಯ 'ಆಧಯಃ' ಪೀಡಾಃ (ಬಂಧಕಂ ವ್ಯಸನಂ ಚೇತಃಪೀಡಾಧಿಷ್ಠಾನ ಮಾಧಯಃ ಇತ್ಯಮರಃ) ವ್ಯಾಧಯ ಇವ ಕ್ಲೇಶದಾಯಿನ್ಯಃ ಭವಂತಿ । ಅತಃ ಉಕ್ತರೂಪ ವಿಪರೀತಾ ಮಾಭೂಃ ಇತಿಭಾವಃ ।
(Modern Book Agency Pvt. Ltd., Bankim Chandra Chatterjee Street, Calcutta-12 ಇವರಿಂದ ಪ್ರಕಟವಾದ ರಮೇಂದ್ರ ಮೋಹನ ಬೋಸ್‌ರವರ ಗ್ರಂಥದ ನಾಲ್ಕನೆಯ ಆವೃತ್ತಿ (1963)ಯಲ್ಲಿ 400ನೇ ಪುಟ.)

8. ವಾಮಾ XX It means either (i) women in general, or (ii) one acting in a refractory way (ಪ್ರತೀಪಾ). Similarly ಅಧಿ - means either (i) a curse or bane (ಪೀಡಾ) or (ii) main-stay (ಅಧಿಷ್ಠಾನ). Hence the last line may be construed differently thus ಏವಂ ಯುವತಯಃ ವಾಮಾಃ (ನಾರ್ಯಃ) ಕುಲಸ್ಯ ಆಧಯಃ (ಭೂತ್ವಾಕಾಲೇನ) ಗೃಹಿಣೀಪದಂ ಯಾಂತಿ । In this way young women become the main-stay of their family (and incourse of time) attain etc.

— ಅದೇ, ಪುಟ 402

ಹೀಗೆ ಪಂಡಿತರು ಹೇಳಿರುವ ಅರ್ಥವೂ,[9] ಜೋಶಿಯವರು ತಮ್ಮ ಮೊದಲನೆಯ ಲೇಖನದಲ್ಲಿ ಕೊಟ್ಟಿದ್ದ ಭಾವಾರ್ಥವೂ ಎರಡೂ ಸಂದರ್ಭಕ್ಕೆ ಹೊಂದುತ್ತವೆ ಮತ್ತೂ ಎರಡೂ ಪ್ರಕೃತವೇ.[10] ಆದುದರಿಂದ, ಪದ್ಯದ ಕೊನೆಯ ಸಾಲಿಗೆ ''ಹೀಗೆ (ಆಚರಿಸುವುದರಿಂದ) ಯುವತಿಯರು ಗೃಹಿಣೀಸ್ಥಾನವನ್ನು ಪಡೆಯುತ್ತಾರೆ. ಸ್ತ್ರೀಯರೇ ಸಂಸಾರಕ್ಕೆ ಮುಖ್ಯವಾದ ಆಧಾರ. ಪ್ರತಿಕೂಲವಾಗಿ ವರ್ತಿಸುವವರು ಕುಲಕ್ಕೆ ವ್ಯಥೆಯನ್ನುಂಟು ಮಾಡುತ್ತಾರೆ'', ಎಂದು ಅರ್ಥ ಮಾಡುವುದು ಸೂಕ್ತವೆಂದು ತೋರುತ್ತದೆ.

ಕಣ್ವರ ಉಪದೇಶ ವಾಕ್ಯಗಳು ಹಿತವಚನಗಳು ಮಾತ್ರವಲ್ಲ; ಅವು ಎಚ್ಚರಿಕೆಯ ಮಾತುಗಳೂ ಸಹ, ''ಪ್ರತಿಕೂಲವಾಗಿ ವರ್ತಿಸುವವರು ಕುಲಕ್ಕೆ ವ್ಯಥೆಯನ್ನುಂಟು ಮಾಡುತ್ತಾರೆ'' ಎಂದು, ಉಪದೇಶಗಳ ನಂತರ, ಹೇಳಿದ ಮಾತ್ರದಿಂದ ''ಕಣ್ವರಂಥ ಮೃದುಹೃದಯದ ತಂದೆ ಅಪನಂಬಿಕೆಯನ್ನು ಸೂಚಿಸಿ''ದಂತಾಯಿತೆಂದು ಹೇಳುವಂತಿಲ್ಲ. ಏಕೆಂದರೆ ಅವರೇ ಮುಂಚೆ (ಶ್ಲೋಕದ ಎರಡನೆಯ ಸಾಲಿನಲ್ಲಿ) ''ಭರ್ತುರ್ವಿಪ್ರಕೃತಾಪಿ ರೋಷಣತಯಾ ಮಾ ಸ್ಮ ಪ್ರತೀಪಂ ಗಮಃ'' (ಗಂಡನಿಂದ - ಯಾವಾಗಲಾದರೊಮ್ಮೆ - ಅಪಮಾನಿತಳಾದರೂ ಕೋಪದಿಂದ ಅವನಿಗೆ ಪ್ರತಿಕೂಲೆ ಯಾಗಬೇಡ; ಪತಿಯೊರ್ಮೆ ಹೇವಗೊಳಿಸಲ್ ಮುಳಿಸಿಂ ಪ್ರತಿಕೂಲೆಯಾಗದಿರ್) ಎಂದು ಎಚ್ಚರಿಸಿದ್ದಾರಷ್ಟೆ. ಈ ವಾಕ್ಯವು ಮುಂದೆ ದುಷ್ಯಂತನಿಂದ ಶಕುಂತಲೆ ತಿರಸ್ಕೃತೆಯಾಗುವುದರ ಸೂಚನೆಯಂತಿದೆ.

---

9. ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳ ''ಕರ್ಣಾಟಕ ಶಾಕುಂತಲ ನಾಟಕ''ದಲ್ಲಿ ಈ ಪದ್ಯದ ಅನುವಾದ ಹೀಗಿದೆ :

ಪಿರಿಯರ ಸೇವೆಗೆಯ್ ಸವತಿಯರ್ಕಳೊಳಿಷ್ಟವಯಸ್ಯೆಯಂದದಿಂ
ದಿರು ಪತಿಯೊರ್ಮೆ ಹೇವಗೊಳಿಸಲ್ ಮುಳಿಸಿಂ ಪ್ರತಿಕೂಲೆಯಾಗದಿರ್ ।
ಪರಿಜನವಂ ಕರಂ ಸಲಹು ಭಾಗ್ಯದೆ ಬಾಗಿರು ಪೆಣ್ಗಳಿಂತಿರಲ್
ಗರತಿಯರಪ್ಪರಿಂತಿರದರನ್ವಯಕಾಧಿಯನುಂಟು ಮಾಳ್ಪರೌ ॥

(ಅಂಕ 4, ಪದ್ಯ 96)

- ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳ ಸಮಗ್ರ ಕೃತಿಗಳು; ಪ್ರಕಾಶಕರು : ಪ್ರಬೋಧ ಪುಸ್ತಕಮಾಲೆ, ಬಸವೇಶ್ವರ ರಸ್ತೆ, ಮೈಸೂರು-4 (1977)

10. 'ವಾಮಾ' ಮತ್ತು 'ಆಧಿ' ಶಬ್ದಗಳಿಗೆ ಅಪ್ರಸಿದ್ಧಾರ್ಥಗಳನ್ನು ಹೇಳಬೇಕಾಗುವುದೆಂಬ ಕಾರಣಕ್ಕಾಗಿ ಎಂ. ಆರ್. ಕಾಳೆಯವರು ''ಸ್ತ್ರೀಯರೇ ಸಂಸಾರಕ್ಕೆ ಮುಖ್ಯಾಧಾರ'' ಎಂಬ ಅರ್ಥವನ್ನು ಒಪ್ಪಿಲ್ಲ.
"Some construe the fourth line as ವಾಮಾಃ ರಮಣೀಯಾಃ ಯುವತಯಃ ಕುಲಸ್ಯ ಆಧಯಃ ಆಧಾರಃ ಪ್ರತಿಷ್ಠಾ ಇತಿಯಾವತ್ ಸತ್ಯಃ ಏವಂ ಗೃಹಿಣೀಪದಂ ಯಾಂತಿ. But this is not a good way, as ವಾಮಾ and ಆಧಿ have to be taken in an obscure sense.
ಅಭಿಜ್ಞಾನ ಶಾಕುಂತಲಂ of ಕಾಲಿದಾಸ, 1994 reprint of 10th edition (1969) - Motilal Banarsidas, Delhi, Page 111 of notes. ಇದರ ಮೊದಲ ಆವೃತ್ತಿ 1898ರಲ್ಲಿ ಪ್ರಕಟವಾದುದು.

ಶಾಕುಂತಲದ ಭರತವಾಕ್ಯದ ಉತ್ತರಾರ್ಧದಲ್ಲಿನ "ಮಮಾಪಿಚ ಕ್ಷಪಯತು ನೀಲಲೋಹಿತಃ ಪುನರ್ಭವಂ" ಎಂಬ ಭಾಗದ ಅರ್ಥವಿಚಾರ.

ಮೊದಲಿನ ಲೇಖನದಲ್ಲಿ ಜೋಶಿಯವರೇ "ಬೇರೆ ಬೇರೆ ಮುದ್ರಣದ ಪುಸ್ತಕಗಳನ್ನು ನೋಡಿದರೂ ಎಲ್ಲೆಡೆಯೂ 'ಪುನರ್ಭವಂ' ಕಂಡಿತೇ ಹೊರತು 'ಪರಿಭ್ರಮಂ' ಕಾಣಲೇ ಇಲ್ಲ" ಎಂದು ಹೇಳಿದ್ದಾರೆ. ಪಾಠವನ್ನು ತಿದ್ದುವುದಕ್ಕೆ ಆಧಾರವಾಗಲೀ, ತಿದ್ದುವ ಆವಶ್ಯಕತೆಯಾಗಲೀ ಇಲ್ಲವೆಂದು ನನ್ನ ಹಿಂದಿನ ಲೇಖನದಲ್ಲಿ ನಿರೂಪಿಸಿದ್ದೇನೆ. ಈಗಿರುವ 'ಪುನರ್ಭವಂ' "ಶಬ್ದವೇ ಸಂದರ್ಭಕ್ಕೆ ಹೊಂದುತ್ತದೆ. ಈಗ ಜೋಶಿಯವರು "ಪುನರ್ಭವ ನಾಶವಾದ ಮಾತ್ರಕ್ಕೆ ಮೋಕ್ಷವೇ ಆದೀತೆಂಬ ಭರವಸೆ ಎಲ್ಲಿದೆ ?" ಎಂದು ಪ್ರಶ್ನಿಸಿದ್ದಾರೆ. ಪುನರ್ಭವ (ಎಂದರೆ ಪುನರ್ಜನ್ಮ) ವಿಲ್ಲದುದೇ ಮೋಕ್ಷ.

ಕ್ಷೀರಸ್ವಾಮಿಯು ತನ್ನ ಅಮರಕೋಶ ವ್ಯಾಖ್ಯಾನದಲ್ಲಿ ಮಹಾನಂದ ಮತ್ತು ಅಪುನರ್ಭವ ಈ ಎರಡು ಶಬ್ದಗಳನ್ನು ಮೋಕ್ಷಕ್ಕೆ ಪರ್ಯಾಯ ಪದಗಳಾಗಿ ಕೊಟ್ಟಿದ್ದಾನೆ.[11] ಆಪ್ಟೆಯವರು ತಮ್ಮ ಕೋಶದಲ್ಲಿ ಅಪುನರ್ಭವ ಎಂಬ ಶಬ್ದಕ್ಕೆ Not being born again (ಮತ್ತೆ ಹುಟ್ಟದಿರುವುದು), final beatitude (ಮೋಕ್ಷ) ಎಂಬ ಅರ್ಥಗಳನ್ನು "ತುಲಯಾಮ ಲವೇನಾಪಿ ನ ಸ್ವರ್ಗಂ ನ ಅಪುನರ್ಭವಂ"[12] ಎಂಬ ಭಾಗವತದಲ್ಲಿನ ಪ್ರಯೋಗವನ್ನೂ ಕೊಟ್ಟಿದ್ದಾರೆ. ಶಂಕರಾಚಾರ್ಯರ ಸ್ತೋತ್ರಗಳಲ್ಲೂ "ಅಪುನರ್ಭವ" ಶಬ್ದವು ಮೋಕ್ಷವೆಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ.[13] ಇತರ ಸಂಸ್ಕೃತ ಕೋಶಗಳಲ್ಲೂ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿಯೂ ಈ ಅರ್ಥಗಳೂ, ಅವುಗಳಿಗೆ ಪ್ರಯೋಗಗಳೂ ಇವೆ.

---

11. ಭಾವೇಭ್ಯೋಽಪವರ್ಜನಂ ಅಪವರ್ಗಃ । ಮಹಾನಂದೋ ಅಪುನರ್ಭವಶ್ಚ ।। - ಧೀವರ್ಗದ "ಮುಕ್ತಿಃ ಕೈವಲ್ಯ ನಿರ್ವಾಣಶ್ರೇಯೋ ನಿಶ್ರೇಯಸಾಮೃತಂ ಮೋಕ್ಷೋಽಪವರ್ಗೋ" ಎಂಬ ಭಾಗದ ವ್ಯಾಖ್ಯಾನದಲ್ಲಿ.

12. ತುಲಯಾಮ ಲವೇನಾಪಿ ನಸ್ವರ್ಗಂ ನ ಅಪುನರ್ಭವಂ । ಭಗವತ್ಸಂಗಿಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ।। (ಶ್ರೀ ಮದ್ಭಾಗವತ, ಪ್ರಥಮ ಸ್ಕಂಧ. 18ನೇ ಅಧ್ಯಾಯದ 13ನೆಯ ಶ್ಲೋಕ - Gorakhpur Edition.

13. ಆರಾಧಯಾಮಿ ಮಣಿಸನ್ನಿಭಮಾತ್ಮಲಿಂಗಂಮಾಯಾಪುರೀಹೃದಯ ಪಂಕಜಸನ್ನಿವಿಷ್ಟಮ್ । ಶ್ರದ್ಧಾನದೀ ವಿಮಲಚಿತ್ತ ಜಲಾಭಿಷೇಕೈಃ ನಿತ್ಯಂ ಸಮಾಧಿಕುಸುಮೈಃ ಅಪುನರ್ಭವಾಯ ।। (ನಿರ್ಗುಣಮಾನಸ ಪೂಜಾಸ್ತೋತ್ರ)

"ರಟ್ಟಮತ"ದ ಕರ್ತೃ ಅರ್ಹದ್ದಾಸ ಮತ್ತು ಶ್ರವಣ ಬೆಳಗೊಳದ ಸಿದ್ಧರ ಬಸದಿ ಶಾಸನ

"ಅರ್ಹದ್ದಾಸನ ಕಾಲವಿಚಾರ" ಎಂಬ ತಮ್ಮ ಲೇಖನದಲ್ಲಿ[1] ಶ್ರೀಯುತ ಸೀತಾರಾಮ ಜಾಗಿರ್‌ದಾರರು ಶ್ರವಣಬೆಳಗೊಳದ ಸಿದ್ಧರ ಬಸದಿಯಲ್ಲಿರುವ ಸಿಂಹಣಾರ್ಯ ಪಂಡಿತನ ನಿಸಿದಿಶಾಸನದ[2] ಕೊನೆಯ ಪದ್ಯವನ್ನೂ ಆ ವಿಷಯದಲ್ಲಿ ಕರ್ಣಾಟಕ ಕವಿಚರಿತೆಕಾರರ ಅಭಿಪ್ರಾಯವನ್ನೂ ಉದಾಹರಿಸಿ ಕೆಲವು ನಿರ್ಣಯಗಳನ್ನು ಮಂಡಿಸಿದ್ದಾರೆ. ಆ ನಿರ್ಣಯಗಳ ಪರಿಶೀಲನೆ ಈ ಲೇಖನದ ಉದ್ದೇಶ.

ಶಾಸನ ಪದ್ಯ ಇಂತಿದೆ :

ಇತ್ಯಾಕೃತಕ್ಕ್ಯಾನಿಜವಯುಕ್ತ್ಯೇರ್ಹದ್ದಾಸೋದಿತಂ ಶಾಸನಮೇತದುವ್ಯ್ಯಾಂ।
ಶಾಸ್ತ್ರೌಘಕರ್ತೃತ್ರಯ ಶಂಸನಾಂಗಮಾಚಂದ್ರ ತಾರಾ ರವಿಮೇರುಜೀಯಾತ್ ॥

ಈಗ ಶ್ರೀಯುತ ಜಾಗಿರ್‌ದಾರರು ಮಂಡಿಸಿರುವ ನಿರ್ಣಯಗಳನ್ನು[1] ಒಂದೊಂದಾಗಿ ಉಲ್ಲೇಖಿಸಿ ಪರಿಶೀಲಿಸಲಾಗುವುದು.

ನಿರ್ಣಯ 1. ಶ್ರೀಮಾನ್ ಆರ್. ನರಸಿಂಹಾಚಾರ್ಯರು ಶಾಸನ ಸಂಪುಟದ ಮುನ್ನುಡಿಯಲ್ಲಿ "the composer being the Sanskrit poet Arhaddasa" ಎಂದು ಬರೆದಿದ್ದಾರೆ. ಇದರ ಪ್ರಕಾರ "ಅರ್ಹದ್ದಾಸ ಕೇವಲ ಸಂಸ್ಕೃತ ಕವಿ". ಇದು ಸರಿಯಲ್ಲ.

ಪರಿಶೀಲನೆ : ಮೇಲಿನ ಪದ್ಯದಲ್ಲಿಯೇ ಆಗಲಿ, ಶಾಸನದ ಬೇರಾವ ಪದ್ಯದಲ್ಲಿಯೇ ಆಗಲಿ ಶಾಸನಕವಿಯ ವಿಷಯವಾದ ಯಾವ ವಿವರವೂ ಇಲ್ಲ. ಶಾಸನದ ಬಂಧ ಪ್ರೌಢವಾಗಿದ್ದರೂ, ತನ್ನ ಶಕ್ತಿಯಿದ್ದ ಮಟ್ಟಿಗೆ ಆತ್ಮ ಮುಕ್ತಿಗಾಗಿ -

---

1. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ - ಸಂಪುಟ 58, ಸಂಚಿಕೆ 2 (ಡಿಸೆಂಬರ್ 1973)
2. Epigraphia Carnatica, Vol. II ಆರ್. ನರಸಿಂಹಾಚಾರ್ಯರ 1923ರ ಮುದ್ರಣದಲ್ಲಿ ಶಾಸನ ಸಂಖ್ಯೆ 254 (105). ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ 1973ರ ಪರಿಷ್ಕೃತ ಪುನರ್ಮುದ್ರಣದಲ್ಲಿ ಶಾಸನ ಸಂಖ್ಯೆ 360 (254).

1. ಜಾಗೀರ್‌ದಾರರ ಲೇಖನದಲ್ಲಿ ನಿರ್ಣಯಗಳಿಗೆ ಕ್ರಮಸಂಖ್ಯೆಗಳನ್ನು ಕೊಟ್ಟಿಲ್ಲ. ಇಲ್ಲಿ ಸೌಕರ್ಯಕ್ಕಾಗಿ ಕ್ರಮಸಂಖ್ಯೆಗಳನ್ನು ಕೊಟ್ಟು, ಪ್ರತಿ ನಿರ್ಣಯವನ್ನೂ ಸಾಧ್ಯವಾದ ಮಟ್ಟಿಗೂ ಅವರ ಲೇಖನದಲ್ಲಿರುವಂತೆಯೇ ಉಲ್ಲೇಖಿಸಿ, ಅನಂತರ ಅದರ ಪರಿಶೀಲನೆಯನ್ನು ಕೊಟ್ಟಿದೆ.

ಇತ್ಯಾತ್ಮಶಕ್ತ್ಯಾ ನಿಜಮುಕ್ತಯೇ - ಬರೆದಿರುತ್ತೇನೆಂದು ನಮ್ರತೆಯಿಂದ ಹೇಳಿರುವ ಕವಿಯು, ಜಿನಮುನಿಗಳ ಪ್ರಶಂಸಾ ಸಂದರ್ಭದಲ್ಲಿ ತನ್ನ ಹೆಸರನ್ನು ಮುಂದುಮಾಡಬಾರದೆಂದು ತನ್ನನ್ನು ಅರ್ಹದ್ದಾಸನೆಂದು ಕರೆದುಕೊಂಡಿದ್ದಾನೋ, ಅವನ ನಿಜವಾದ ಹೆಸರೇ ಅರ್ಹದ್ದಾಸನೋ ತಿಳಿಯದು. (ರಟ್ಟಮತದ ಕರ್ತೃವಿನ ಹೆಸರು ಸೋಮನಾಥನೆಂದೂ, ಅರ್ಹದ್ದಾಸನೆಂಬುದು ಅವನ ಬಿರುದುಗಳಲ್ಲೊಂದೆಂದೂ ಜಾಗಿರ್‌ದಾರರು ತಮ್ಮ ಲೇಖನದಲ್ಲಿ ಹೇಳಿದ್ದಾರೆ). ಶಾಸನದಲ್ಲಿರುವ ಅನೇಕ ಸ್ರಗ್ಧರಾವೃತ್ತಗಳಲ್ಲಿ ಯತಿಭಂಗವಿದೆ. ''ಯತಿವಿಲಂಘನದಿಂದ ರಿದಲ್ತೆ ಕನ್ನಡಂ'' ಎಂಬ ಕೇಶಿರಾಜನ ಉಕ್ತಿಯನ್ನು ಗಮನಿಸಿ, ಈ ಶಾಸನ ಪದ್ಯಗಳಲ್ಲಿನ ಯತಿಭಂಗವು ಕನ್ನಡ ಕಾವ್ಯರಚನೆಯ ಪ್ರಭಾವದಿಂದಿರ ಬಹುದೆಂದೂ, ಶಾಸನಕವಿಯು ಕನ್ನಡ ಕವಿಯೂ ಇರಬಹುದೆಂದೂ ಊಹಿಸ ಬಹುದೇನೋ ! ಶಾಸನ ಸಂಪೂರ್ಣವಾಗಿ ಸಂಸ್ಕೃತ ಭಾಷೆ ಯಲ್ಲಿರುವುದರಿಂದ, ನರಸಿಂಹಾಚಾರ್ಯರು, ಸಹಜವಾಗಿ "Sanskrit poet Arhaddasa" ಎಂದು ಹೇಳಿರಬಹುದೇ ಹೊರತು, ''ಕೇವಲ'' ಸಂಸ್ಕೃತ ಕವಿ, ಎಂದರೆ ಸಂಸ್ಕೃತದಲ್ಲಿ ಮಾತ್ರವೇ ಗ್ರಂಥ ರಚನೆ ಮಾಡಿರುವ ಕವಿ ಎಂಬರ್ಥ ಬರುವ ಪದಗಳನ್ನು ಅವರು ಪ್ರಯೋಗಿಸಿಲ್ಲ

ನಿರ್ಣಯ 2. "The Composer of the epitaph was Arhaddasa, who says that it is devoted to the praise of the triad of authors of sastras, meaning apparently Abhayasuri, Charukirti and Pandita" ಎಂಬ ಶ್ರೀಯುತರ ವಿವರಣೆ ಸರಿಯಲ್ಲವೆಂದು ತೋರುತ್ತದೆ. ''ಏಕೆಂದರೆ ಕವಿಯು ಈ ಮೂವರು ಯತಿಗಳನ್ನು ಸ್ಪಷ್ಟವಾಗಿ ಮೇಲಿನ ಪದ್ಯದಲ್ಲಿ ಹೆಸರಿಸಿಲ್ಲ''.

ಪರಿಶೀಲನೆ : ಕೊನೆಯ ಪದ್ಯದಲ್ಲಿ ಕವಿ ಮೂವರು ಯತಿಗಳ ಹೆಸರುಗಳನ್ನು ಹೇಳಿಲ್ಲವೆಂಬುದು ನಿಜ. ಆದರೆ ಶಾಸನದ ವಿಷಯ ಪಂಡಿತಾರ್ಯನ ನಿಸಿದಿಯ ನಿರ್ಮಾಣ. ಪಂಡಿತಾರ್ಯನ ಗುರು ಚಾರುಕೀರ್ತಿ; ಚಾರುಕೀರ್ತಿಯ ಗುರು ಅಭಯಸೂರಿ. (ಚಾರುಕೀರ್ತಿ ಗಣಿಪದಕ್ಕೆ

ಬರುವುದಕ್ಕೆ ಮುಂಚೆ ಗಣಪದದಲ್ಲಿದ್ದವನು ಅಭಯಚಂದ್ರನ ತಮ್ಮನೂ ಚಾರುಕೀರ್ತಿಯ ತಂದೆಯೂ ಆದ ಶ್ರುತಕೀರ್ತಿ ಯಾದರೂ, ಚಾರುಕೀರ್ತಿಯ ಗುರು ಅಭಯಸೂರಿಯೆಂದು, ಶಾಸನದ 97-99 ಸಾಲುಗಳಲ್ಲಿರುವ "ಆತೀಯ್ಯೈರ್ವ ಸ್ವಯಂ ಸೋಖಿಲ ವಿದಭಯ ಸೂರೇಸ್ತಥಾ" ಎಂದು ಮೊದಲಾಗುವ ಪದ್ಯಭಾಗದಿಂದ ತಿಳಿಯಬರುತ್ತದೆ). ಶಾಸನದ ಮೊದಲ 59 ಸಾಲುಗಳಲ್ಲಿ ಹಿಂದಿನ ಜೈನ ಗುರುಗಳ ಪರಂಪರೆಯ ವಿವರವಿದ್ದು, ಉಳಿದ 95 ಸಾಲುಗಳಲ್ಲಿ, ಮಾಘನಂದಿಯ ಪರಂಪರೆಯಲ್ಲಿ ಬಂದ, ಅಭಯಚಂದ್ರನಿಂದ ಪಂಡಿತಾರ್ಯನವರೆಗಿನ, ಆರು ಗಣಿಗಳ ಪ್ರಶಂಸೆ ಇದೆ. ಈ ಭಾಗದ ಸುಮಾರು ಮುಕ್ಕಾಲು ಪಾಲು ಅಭಯಸೂರಿ, ಚಾರುಕೀರ್ತಿ ಮತ್ತು ಪಂಡಿತಾರ್ಯರ ಪ್ರಶಂಸೆಯೇ. ಶಾಸನದ 114-135 ಸಾಲುಗಳಲ್ಲಿ ಕವಿಯು ಈ ಮೂವರನ್ನು ಈ ಕ್ರಮದಲ್ಲಿಯೇ ಹೊಗಳಿದ್ದಾನೆ. ಈ ಕಾರಣಗಳಿಂದ ಕೊನೆಯ ಪದ್ಯದ "ಶಾಸ್ತ್ರೌಘಕರ್ತೃತ್ರಯ"ರು ಇವರೆಂದು ಹೇಳುವುದು ಅಸಮಂಜಸ ವಾಗಿ ಕಾಣುವುದಿಲ್ಲ. ಜೈನ ವಾಙ್ಮಯದಲ್ಲಿ ಪರಿಶ್ರಮವುಳ್ಳ ವಿದ್ವಾಂಸರು ಈ ವಿಷಯದಲ್ಲಿ ನಿಶ್ಚಿತವಾದ ಅಭಿಪ್ರಾಯ ಕೊಡಬೇಕು. ಆ ಮೂವರು ಯತಿಗಳು ಇವರೇ ಆಗಲಿ, ಅಥವಾ ಶಾಸನದಲ್ಲಿ ಹೇಳಿರುವ ಬೇರೆ ಯಾರೇ ಆಗಲಿ, ರಟ್ಟಮತದ ಕರ್ತೃವೂ ಶಾಸನ ಕರ್ತೃವೂ ಅಭಿನ್ನರೇ ಅಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಲು, ಅದರಿಂದ ಯಾವ ಸಹಾಯವೂ ದೊರೆಯುವುದಿಲ್ಲ.

ನಿರ್ಣಯ 3. "ಕವಿಚರಿತೆಕಾರರು ರಟ್ಟಮತದ ಅರ್ಹದ್ದಾಸನು ಮತ್ತು ಶಾಸನದ ಈ ಅರ್ಹದ್ದಾಸನು ಒಬ್ಬನೆಂದು ನಿರೂಪಿಸಿಲ್ಲ". ಅರ್ಹದ್ದಾಸನು ತನ್ನನ್ನು "ಕರ್ತೃಶಾಸ್ತ್ರೌಘತ್ರಯ" ಎಂದು ಹೇಳಿಕೊಂಡಿದ್ದಾನೆ.

---

1. ಜಾಗಿರ್‌ದಾರರು ತಮ್ಮ ಲೇಖನದಲ್ಲಿ ಎರಡು ಕಡೆ, ರಟ್ಟಮತದ ಕರ್ತೃವು ವರಾಹ ಮಿಹಿರನ ಬೃಹಜ್ಜಾತಕವನ್ನು ಅನುಸರಿಸಿರುವುದಾಗಿ ಹೇಳಿ, ಅಡಿ ಟಿಪ್ಪಣಿಗಳಲ್ಲಿ ಅಟ್ಟಮತದ ಎರಡು ಪದ್ಯಗಳನ್ನು ಆಧಾರವಾಗಿ ನಿರ್ದೇಶಿಸಿದ್ದಾರೆ. ಅವುಗಳಲ್ಲಿ ಒಂದಾದ ಪ್ರಥಮಾಧ್ಯಾಯದ 34ನೆಯ ಪದ್ಯದಲ್ಲಿ "ವರಾಹ ಮಿಹಿರಸ್ಮೃತಿ" ಎಂದಿದೆ. ಇನ್ನೊಂದು ಪದ್ಯದಲ್ಲಿ (9ನೆಯ

"ಶಾಸ್ತ್ರೌಘತ್ರಯ" ಎಂದರೆ ಜ್ಯೋತಿಷ ಶಾಸ್ತ್ರದ ಅಂಗಗಳಾದ ತಂತ್ರ, ಹೋರಾ ಮತ್ತು ಸಂಹಿತೆ ಎಂದರ್ಥ. "ರಟ್ಟನು ಅನುಸರಿಸಿದ ವರಾಹಮಿಹಿರನ ಬೃಹಜ್ಜಾತಕದಲ್ಲಿ[1] ವರಾಹಮಿಹಿರನು ಜ್ಯೋತಿಷ್ಯ ಶಾಸ್ತ್ರವನ್ನು ತಂತ್ರ, ಹೋರಾ ಮತ್ತು ಸಂಹಿತೆ ಎಂದು 3 ವಿಭಾಗಗಳನ್ನು ಮಾಡಿದ್ದಾನೆ. ಕಾರಣ ರಟ್ಟನೂ ಜ್ಯೋತಿಷ್ಯ ಶಾಸ್ತ್ರವನ್ನು 3 ಭಾಗಗಳಲ್ಲಿ ಬರೆದಿರಬೇಕು". "ಆತ್ಮಮುಕ್ತಿಗಾಗಿ ಜಿನಮುನಿಗಳ ಸ್ತುತಿಯನ್ನೂ ಲೋಕಕಲ್ಯಾಣಕ್ಕಾಗಿ ಜ್ಯೋತಿಷ್ಯ ಶಾಸ್ತ್ರವನ್ನೂ ಬರೆದಿದ್ದಾನೆ. ಸಂಸ್ಕೃತ, ಕನ್ನಡದಲ್ಲಿ ಪರಿಣತನಾದ ಆತ ಉಭಯ ಭಾಷೆಗಳಲ್ಲೂ ರಚನೆಗೈದಿದ್ದಾನೆ. ಆತ ಏವ ಅಟ್ಟಶಾಸ್ತ್ರವನ್ನೂ ಮತ್ತು ಸಿಂಹಣಾರ್ಯ ಪಂಡಿತ ಅಥವಾ ಪಂಡಿತಾಚಾರ್ಯ ಜಿನಮುನಿಯ ನಿಷಧಿಶಾಸನವನ್ನೂ ಒಬ್ಬ ಅರ್ಹದ್ದಾಸನೇ ರಚಿಸಿದ್ದಾನೆ".

ಪರಿಶೀಲನೆ : ಶಾಸನ ಪದ್ಯದಲ್ಲಿ, "ಶಾಸ್ತ್ರೌಘಕರ್ತೃ ತ್ರಯಶಂಸನಾಂಗಂ" ಎಂಬ ಸಮಾಸ ಪದವಿದೆ. "ಓಘ" ಶಬ್ದವು "ಶಾಸ್ತ್ರ"ಕ್ಕೂ, "ತ್ರಯ" ಶಬ್ದವು "ಕರ್ತೃ"ವಿಗೂ ಅನ್ವಯಿಸುವುದರಿಂದ "ಅನೇಕ ಶಾಸ್ತ್ರ ಕರ್ತೃಗಳಾದ ಮೂವರ ಪ್ರಶಂಸಾತ್ಮಕವಾದ" ಎಂದು ಅರ್ಥವಾಗುವುದು. ಆದುದರಿಂದ "devoted to the praise of the triad of authors of sastras" ಎಂಬ ಆರ್. ನರಸಿಂಹಾಚಾರ್ಯರ ಅನುವಾದ ಸರಿಯಾಗಿಯೇ ಇದೆ. ಕನ್ನಡ ಅಧ್ಯಯನ ಸಂಸ್ಥೆಯ ಪರಿಷ್ಕೃತ ಪುನರ್ಮುದ್ರಣದಲ್ಲಿಯೂ ಈ ಅನುವಾದವನ್ನೇ

ಅಧ್ಯಾಯದ 7ನೆಯ ಪದ್ಯ) "ವರಾಹ" ಎಂದು ಮಾತ್ರ ಇದೆ. ಎರಡು ಕಡೆಗಳಲ್ಲಿಯೂ ಗ್ರಂತದ ಹೆಸರಿಲ್ಲ. "ಬೃಹಜ್ಜಾತಕ" ಹೆಸರಿಗೆ ಅನುಗುಣವಾಗಿ, ಜಾತಕ ವಿಷಯಕ ಗ್ರಂಥ. ಅದರಲ್ಲಿ ಮಳೆಗೆ ಸಂಬಂಧಿಸಿದ ವಿಷಯಗಳಿಲ್ಲ. "ಬೃಹತ್ಸಂಹಿತಾ" ಎಂಬ 107 ಅಧ್ಯಾಯಗಳುಳ್ಳ, ವರಾಹಮಿಹಿರನ ಬೇರೊಂದು ಗ್ರಂಥದಲ್ಲಿ, ಮಳೆಗೆ ಸಂಬಂಧಿಸಿದ ಗರ್ಭಲಕ್ಷಣಂ, ಗರ್ಭಧಾರಣಾಧ್ಯಾಯ, ಪ್ರವರ್ಷಣಾಧ್ಯಾಯ, ರೋಹಿಣೀ ಯೋಗಾಧ್ಯಾಯ, ಸ್ವಾತಿಯೋಗಾಧ್ಯಾಯ, ಆಷಾಡೀಯೋಗಾಧ್ಯಾಯ, ವಾತಚಕ್ರಂ, ಸದ್ಯೋವರ್ಷಣಾಧ್ಯಾಯ ಎಂಬ 8 ಅಧ್ಯಾಯಗಳಿವೆ (ಪಂಡಿತ ಭೂಷಣ ವಿ. ಸುಬ್ರಹ್ಮಣ್ಯ ಶಾಸ್ತ್ರಿಗಳ 1947ರ ಆವೃತ್ತಿ). ಆದುದರಿಂದ ರಟ್ಟಮತಕಾರನು ಅನುಸರಿಸಿದ ವರಾಹಮಿಹಿರನ ಗ್ರಂಥ ಬೃಹತ್ಸಂಹಿತೆ ಯಿರಬೇಕು. ಜಾಗಿರ್‌ದಾರರು ನಿರ್ದೇಶಿಸಿರುವ A. B. Keithರ History of Sanskrit Literature ಪುಟ 529ರಲ್ಲೂ ಬೃಹತ್ಸಂಹಿತಾ ಎಂದೇ ಇದೆ.

ಉಳಿಸಿಕೊಂಡಿದ್ದಾರೆ. "ಕವಿಯು ಈ ಮೂವರು ಯತಿಗಳನ್ನು ಸ್ಪಷ್ಟವಾಗಿ ಮೇಲಿನ ಪದ್ಯದಲ್ಲಿ ಹೆಸರಿಸಿಲ್ಲ" ಎಂದು ಶ್ರೀಯುತ ಜಾಗಿರ್‌ದಾರರು ಬರೆದಿರುವುದರಿಂದ, ಮೇಲಿನ ಅನುವಾದ ಅವರಿಗೂ ಒಪ್ಪಿಗೆಯಾಗಿರಬಹುದೆಂದು ತೋರುತ್ತದೆ. ಆದರೆ ಅವರೇ, ಮುಂದೆ ಶಬ್ದಗಳ ಸ್ಥಾನ ಪಲ್ಲಟ ಮಾಡಿ, ಅರ್ಹದ್ದಾಸನು ತನ್ನನ್ನು "ಕರ್ತೃ ಶಾಸ್ತ್ರೌಘತ್ರಯ" ಎಂದು ಹೇಳಿಕೊಂಡಿದ್ದಾನೆ ಎಂದು ಬರೆದಿರುವುದು ಆಶ್ಚರ್ಯಕರವಾಗಿದೆ. ಸಮಾಸಪದದಲ್ಲಿರುವ ಶಬ್ದಗಳ ಕ್ರಮವನ್ನು ಬದಲಾಯಿಸಿ, ಮುಂದೆ ಅದರ ಅರ್ಥವನ್ನು ವಿವರಿಸುವಾಗ, "ಓಘ" ಎಂಬ ಶಬ್ದವನ್ನು ಬಿಟ್ಟು ಮೂರು ಶಾಸ್ತ್ರಗಳ ಕರ್ತೃ ಎಂದು ಅರ್ಥ ಮಾಡಿ ಅದನ್ನು ಅರ್ಹದ್ದಾಸನಿಗೆ ಅನ್ವಯಿಸಿರುವುದು ಸಮಂಜಸವಾಗಿಲ್ಲ. ಹಾಗೆ ಮಾಡಲು ಶ್ರೀಯುತ ಜಾಗಿರ್‌ದಾರರು ಯಾವ ಕಾರಣವನ್ನೂ ಕೊಟ್ಟಿಲ್ಲ.

ತಲೆಮಾರಿನ ಸರಾಸರಿ ಲೆಕ್ಕದ ಪ್ರಕಾರ ರಟ್ಟಮತದ ಅರ್ಹದ್ದಾಸನ ಕಾಲವೂ ಈ ಶಾಸನದ ಕಾಲವೂ ಒಂದೇ ಮತ್ತು ಶಾಸನ ಕರ್ತೃವಿನ ಹೆಸರೂ ಅರ್ಹದ್ದಾಸ ಎಂಬಿಷ್ಟು ಕಾರಣದಿಂಧಲೇ ಶಾಸನದ ಕವಿಯೇ ರಟ್ಟಮತದ ಕರ್ತೃವೆಂದು ಖಂಡಿತವಾಗಿ ಹೇಳಲಾಗುವುದಿಲ್ಲ. ಇದರ ಸಾಧ್ಯತೆಯಿದೆಯೆಂದು ಮಾತ್ರ ಹೇಳಬಹುದು.

ಒಟ್ಟಿನಲ್ಲಿ, ಈ ಶಾಸನಕರ್ತೃವೂ ರಟ್ಟಮತದ ಕರ್ತೃವೂ ಅಭಿನ್ನ ರೆಂದಾಗಲೀ, ರಟ್ಟಮತದ ಕರ್ತೃವು ಜ್ಯೋತಿಷದ ಮೂರು ಸ್ಕಂದ ಗಳಲ್ಲೂ ಗ್ರಂಥರಚನೆ ಮಾಡಿದ್ದನೆಂದಾಗಲೀ ಸಾಧಿಸಲು ಈ ಶಾಸನ ದಿಂದ ಯಾವ ಬೆಂಬಲವೂ ದೊರೆಯುವುದಿಲ್ಲ.

'ಅರ್ಹದ್ದಾಸ ಮತ್ತು ಶ್ರವಣಬೆಳಗೊಳದ ಸಿದ್ಧರಬಸದಿ ಶಾಸನ' ಆಕ್ಷೇಪಣೆಗೆ ಉತ್ತರ

'ಅರ್ಹದ್ದಾಸನ ಕಾಲವಿಚಾರ' ಎಂಬ ಲೇಖನದಲ್ಲಿ[1] ಶ್ರೀಯುತ ಸೀತಾರಾಮ ಜಾಗೀರ್‌ದಾರರು, ಶ್ರವಣಬೆಳಗೊಳದ ಸಿದ್ಧರ ಬಸದಿ ಶಾಸನದ ಕೊನೆಯ ಪದ್ಯದ ವಿಷಯವಾಗಿ ವ್ಯಕ್ತಪಡಿಸಿದ್ದ ಅಭಿಪ್ರಾಯಗಳು ಸಮಂಜಸವಲ್ಲವೆಂದೂ, ಆ ಶಾಸನ ಕರ್ತೃವೂ ರಟ್ಟಮತದ ಕರ್ತೃವೂ ಅಭಿನ್ನರೆಂದು ಆ ಶಾಸನದಿಂದ ಸಾಧಿಸಲಾಗುವುದಿಲ್ಲ ವೆಂದೂ ನನ್ನ 'ರಟ್ಟಮತದ ಕರ್ತೃ ಅರ್ಹದ್ದಾಸ ಮತ್ತು ಶ್ರವಣಬೆಳಗೊಳದ ಸಿದ್ಧರ ಬಸದಿ ಶಾಸನ' ಎಂಬ ಲೇಖನದಲ್ಲಿ[2] ಬರೆದಿದ್ದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಡಿಸೆಂಬರ್ 1978ರ ಸಂಚಿಕೆಯಲ್ಲಿ[3] ಶ್ರೀಮಾನ್ ಜಾಗೀರ್‌ದಾರರ 'ಅರ್ಹದ್ದಾಸನ ಕಾಲವಿಚಾರ - ಒಂದು ಉತ್ತರ' ಎಂಬ ಲೇಖನ ಪ್ರಕಟವಾಗಿದೆ.

ಶ್ರೀಯುತರು ಆ ಲೇಖನದ ಮೊದಲ ಖಂಡ (paragraph)ದಲ್ಲಿ "ಖಂಡನೆಗಳು - ಮಂಡನೆಗಳು ಆಗಬೇಕಾದದ್ದೇ. ಅದಕ್ಕೆ ಸದಾ ಸ್ವಾಗತ" ಎಂದು ಹೇಳಿದ್ದರೂ, ತಮ್ಮ ಅಭಿಪ್ರಾಯಗಳನ್ನು ಬೇರೆಯವರು ಅನುಮೋದಿಸಲಿಲ್ಲವೆಂಬ ಸಿಟ್ಟಿನಿಂದ ಇತರ ಸಾಹಿತ್ಯ ಚರಿತ್ರೆಗಳ ಲೇಖಕರನ್ನು "ಗತಾನುಗತಿಕರು; ಪೂರ್ವಗ್ರಹಪೀಡಿತ ಹಳೆಯ ಹಳವಂಡದಲ್ಲಿರುವವರು, ಇಲ್ಲವೇ ಅಭ್ಯಾಸವನ್ನು ಮಾಡದವರು" ಎಂದು ಕರೆದಿದ್ದಾರೆ.[4] ನನ್ನ ವಿಷಯವಾಗಿ "ಈ ಲೇಖಕರು ನಿಸ್ಪೃಹ ವಿಮರ್ಶಕರಲ್ಲ, ಇಲ್ಲವೆಂದರೆ 2 ಪ್ರೊ.ರಿಗೆ ಬರೆಯಲಿಕ್ಕೆ ಬಾರದು - ಇದರಲ್ಲಿ ಒಂದು ಸಿದ್ಧ" ಎಂದಿದ್ದಾರೆ.[5] ವ್ಯಕ್ತಿನಿಷ್ಠವಾದ ಟೀಕೆ ಅನುಚಿತವೆಂಬುದನ್ನೂ, ಇತರರನ್ನು

---

1 ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 58 ಸಂಚಿಕೆ 2 (ಡಿಸೆಂಬರ್ 1973)

2 ಅದೇ ಸಂಪುಟ 61 ಸಂಚಿಕೆ 2 (ಡಿಸೆಂಬರ್ 1976)

3 ಅದೇ ಸಂಪುಟ 63 ಸಂಚಿಕೆ 2; ಪುಟ 99-102

4 ಅವರ ಈಗಿನ ಲೇಖನದ ಅಡಿಟಿಪ್ಪಣಿ 7

5 ಅದೇ ಅಡಿಟಿಪ್ಪಣಿ 5

ತೆಗಳುವುದರಿಂದ ತಮ್ಮ ನಿಲುವನ್ನು ಸಮರ್ಥಿಸಿದಂತಾಗುವುದಿಲ್ಲವೆಂಬುದನ್ನೂ ಶ್ರೀಯುತರು ಕೋಪದ ಕಾವಿನಲ್ಲಿ ಮರೆತಂತಿದೆ.

"ನಿಸ್ಪೃಹ"ವೆಂಬ ಶಬ್ದಕ್ಕೆ ಆಪ್ಟೆಯವರ ಕೋಶದಲ್ಲಿ 1. free from desire; 2. regardless of, indifferent to; 3. content, unenvious; 4. free from any wordly ties ಎಂಬ ಅರ್ಥಗಳಿವೆ.[6] unenvious ಎಂಬ ಅರ್ಥವನ್ನು ತೆಗೆದುಕೊಂಡಲ್ಲಿ, ಲೇಖನಗಳಿಂದ ಮಾತ್ರ ನನಗೆ ಪರಿಚಿತರಾದ ಶ್ರೀ ಜಾಗೀರ್‌ದಾರರ ವಿಷಯದಲ್ಲಿ ನಾನು ಅಸೂಯೆ ಪಡುವ ಕಾರಣವಿಲ್ಲವೆಂದು ಹೇಳಬಯಸುತ್ತೇನೆ. ಇತರ ಅರ್ಥಗಳನ್ನು ತೆಗೆದುಕೊಂಡರೆ ನಾನು ನಿಸ್ಪೃಹನಲ್ಲೆಂಬುದು ನಿಜ; ಹಾಗೆ ನಿಸ್ಪೃಹನಾಗಿದ್ದರೆ ಲೇಖನ ಬರೆಯುವ ಹವ್ಯಾಸವಿರುತ್ತಿರಲಿಲ್ಲ. ಶ್ರೀಯುತರು ಬರೆದಿರುವ ರೀತಿಯಲ್ಲಿ ಬರೆಯಲು ನನಗೆ ಬಾರದೆಂದೂ ಒಪ್ಪುತ್ತೇನೆ.

ಶ್ರೀಯುತರು ಶಾಂತರೀತಿಯಲ್ಲಿ ನನ್ನ ಲೇಖನವನ್ನು ಓದಿ ನೋಡಿದ್ದರೆ, ರಟ್ಟಮತದ ಕರ್ತೃ ಅರ್ಹದ್ದಾಸನಕಾಲ ಮತ್ತು ವಂಶ ವಿಚಾರಕ್ಕೆ ಸಂಬಂಧಿಸಿದ ಅವರ ಅಭಿಪ್ರಾಯ ಗಳನ್ನು ನಾನು ಖಂಡಿಸಿಲ್ಲವೆಂದೂ, ನನ್ನ ಲೇಖನ ರಟ್ಟಮತದ ಕರ್ತೃ ಅರ್ಹದ್ದಾಸ ಮತ್ತು ಶಾಸನಕರ್ತೃ ಅರ್ಹದ್ದಾಸ ಅಭಿನ್ನರೇ ಅಲ್ಲವೇ ಎಂಬ ವಿಷಯಕ್ಕೆ ಮಾತ್ರ ಸೀಮಿತವಾಗಿದೆ ಯೆಂದೂ ತಿಳಿಯುತ್ತಿತ್ತು. ನನ್ನ ಲೇಖನದ ಶೀರ್ಷಿಕೆಯೂ ಇದನ್ನು ಸ್ಪಷ್ಟಪಡಿಸುತ್ತದೆ.

ತಮ್ಮ ಈಗಿನ ಲೇಖನದಲ್ಲಿ ಶ್ರೀ ಜಾಗೀರ್‌ದಾರರು "ರಾ. ನರಸಿಂಹಾಚಾರ್ಯರು ಶ್ರವಣ ಬೆಳಗೊಳದ ಕೆಲಶಾಸನಗಳನ್ನು ತಪ್ಪುತಪ್ಪಾಗಿ ಅರ್ಥ ಮಾಡಿಕೊಂಡು ತಪ್ಪು ತಪ್ಪು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ" ಎಂದು ಹೇಳಿ[7], ಬೇರೆ ಒಂದು ಶಾಸನದ ಭಾಷಾಂತರ ವಿಷಯವನ್ನು ಚರ್ಚಿಸಿ, "ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅಂತಹವರು ರಾ. ನರಸಿಂಹಾಚಾರ್ಯ ಮೊದಲಾದವರು ಅರ್ಥಮಾಡಿದ್ದಾರೆಂದು ಕಣ್ಣುಮುಚ್ಚಿಕೊಂಡು ಒಪ್ಪಿಕೊಂಡು ಹೋಗಬಹುದು. ಆದುದರಿಂದ ಸಿದ್ಧರ ಬಸದಿಯ ಶಾಸನದ ಭಾಷಾಂತರವೂ ಈ ಬಗೆಯದ್ದೇ" ಎಂದು

6 Prin. V. S. Apte's The Practical Sanskrit-English Dictionary (Prasad Prakashan, Poona 1958), Vol. II Page 932

7 ಜಾಗೀರ್‌ದಾರರ ಈಗಿನ ಲೇಖನ ಪುಟ 100

8 ಅದೇ ಪುಟ 101

ಹೇಳಿದ್ದಾರೆ.[8] ಕೆಲವು ಶಾಸನಗಳ ಭಾಷಾಂತರ ತಪ್ಪಾದ ಮಾತ್ರಕ್ಕೆ ಎಲ್ಲ ಭಾಷಾಂತರಗಳೂ ತಪ್ಪಲ್ಲವಷ್ಟೆ! ರಾ. ನರಸಿಂಹಾಚಾರ್ಯರ ಎಲ್ಲ ಭಾಷಾಂತರಗಳೂ ಸರಿಯೆಂದು ನಾನು ಎಲ್ಲಿಯೂ ಹೇಳಿಲ್ಲವಾದ ಕಾರಣ, ಶ್ರೀ ಜಾಗೀರ್‌ದಾರರು ಈ ಲೇಖನದಲ್ಲಿ ಉದಾಹರಿಸಿರುವ ಶಾಸನದ ಭಾಷಾಂತರ ಇಲ್ಲಿನ ಚರ್ಚೆಗೆ ಅಪ್ರಕೃತ. ಶ್ರೀಯುತರು ಆಪಾದಿಸಿರುವಂತೆ ನಾನು "ಕಣ್ಣು ಮುಚ್ಚಿಕೊಂಡು" ನರಸಿಂಹಾಚಾರ್ಯರ ಸಿದ್ಧ ಬಸದಿ ಶಾಸನದ ಭಾಷಾಂತರವನ್ನು ಒಪ್ಪಿಕೊಂಡಿಲ್ಲ. ನನ್ನ ಲೇಖನದ 22ನೆಯ ಪುಟದಲ್ಲಿನ "ಪರಿಶೀಲನೆ" ಎಂಬ ಭಾಗದಲ್ಲಿ ಶಾಸನಪದ್ಯದಲ್ಲಿನ "ಶಾಸ್ತ್ರೌಘ ಕರ್ತೃತ್ರಯಶಂಸನಾಂಗಂ" ಎಂಬ ಸಮಾಸ ಪದದ ಅರ್ಥವನ್ನು ವಿವರಿಸಿದ ಮೇಲೆಯೇ ಆರ್. ನರಸಿಂಹಾಚಾರ್ಯರ ಅನುವಾದ ಸರಿಯೆಂದು ಹೇಳಿ, ಶ್ರೀ ಜಾಗೀರ್‌ದಾರರು ಶಾಸನದಲ್ಲಿನ ಪದವನ್ನು "ಕರ್ತೃಶಾಸ್ತ್ರೌಘತ್ರಯ"ವೆಂದು ಬದಲಾಯಿಸಿ ಅದಕ್ಕೆ ಮೂರು ಶಾಸ್ತ್ರಗಳ ಕರ್ತೃವೆಂದು ಅರ್ಥಮಾಡಿ ಅದನ್ನು ಅರ್ಹದ್ದಾಸನಿಗೆ ಅನ್ವಯಿಸಿರುವುದು ಸಮಂಜಸವಾಗಿಲ್ಲವೆಂದು ಹೇಳಿದ್ದೇನೆ. "ಶಾಸ್ತ್ರೌಘಕರ್ತೃತ್ರಯಶಂಸನಾಂಗಂ" ಎಂಬ ಪದ "ಶಾಸನಂ" ಎಂಬ ಪದದ ವಿಶೇಷಣವಾದುದರಿಂದ ಅರ್ಹದ್ದಾಸನಿಗೆ ಅದು ಅನ್ವಯಿಸಲಾರದು.

ಸಮಾಸ ಪದದಲ್ಲಿರುವ ಶಬ್ದಗಳ ಸ್ಥಾನಪಲ್ಲಟ ಮಾಡಿ "ಓಘ" ಶಬ್ದವನ್ನು ಬಿಟ್ಟು ತಾವು ಅರ್ಥಮಾಡಿರುವುದು ಹೇಗೆ ಸರಿ, ನಾನು ಹೇಳಿರುವ "ಅನೇಕ ಶಾಸ್ತ್ರಕರ್ತೃಗಳಾದ ಮೂವರ ಪ್ರಶಂಸಾತ್ಮಕವಾದ" ಎಂಬ ಅರ್ಥವೂ ಆರ್. ನರಸಿಂಹಾಚಾರ್ಯರ "devoted to the praise of the triad of authors of sastras" ಎಂಬ ಅನುವಾದವೂ ಹೇಗೆ ತಪ್ಪು ಎಂದು ವಿವರಿಸದೆ, "ಶಾಸನವನ್ನು ನಾನು ಸರಿಯಾಗಿ ವಿವರಿಸಿದ್ದೇನೆಯೆಂದು ಸಹೃದಯ ವಿದ್ವಲ್ಲೋಕಕ್ಕೆ ಇನ್ನೊಮ್ಮೆ ಬಿನ್ನಯಿಸಿಕೊಳ್ಳುವೆ" ಎಂದು ಈಗಿನ ಲೇಖನದಲ್ಲಿ ಹೇಳಿ ಮುಗಿಸಿದ್ದಾರೆ. ನಾನು ಹೇಳಿರುವ ಅರ್ಥವೂ ಮೇಲೆ ಕೊಟ್ಟಿರುವ ನರಸಿಂಹಾಚಾರ್ಯರ ಇಂಗ್ಲೀಷ್ ಅನುವಾದವೂ ತಪ್ಪೆಂದೂ, ಸಿದ್ಧರ ಬಸದಿ ಪದ್ಯದ ಆಧಾರದ ಮೇಲೆ ರಟ್ಟಮತದ ಕರ್ತೃವೂ ಶಾಸನಕರ್ತೃವೂ ಅಭಿನ್ನರು ಮತ್ತು ಅರ್ಹದ್ದಾಸನು ಜ್ಯೋತಿಷದ ಮೂರು ಸ್ಕಂಧಗಳಲ್ಲೂ ಗ್ರಂಥರಚನೆ ಮಾಡಿದ್ದನು ಎಂದು ಹೇಳಬಹುದೆಂದೂ ಸಂಸ್ಕೃತಜ್ಞರಾದ ಯಾವ ವಿದ್ವಾಂಸರೂ ಅಭಿಪ್ರಾಯ ಪಡಲಾರ ರೆಂದು ನನಗೆ ಪೂರ್ಣ ಭರವಸೆಯಿದೆ.

ಈಗಿನ ಲೇಖನದ 11ನೆಯ ಅಡಿಟಿಪ್ಪಣಿಯಲ್ಲಿ "ವರಾಹಮಿಹಿರನ ಬೃಹತ್ಸಂಹಿತೆ ಇದನ್ನು ಮಾತ್ರ ಕೇವಲ ಕವಿ ಬಳಸಿದ್ದಾನೆಯೆ" ಎಂದು ಶ್ರೀಯುತ ಜಾಗೀರ್‌ದಾರರು ಪ್ರಶ್ನಿಸಿದ್ದಾರೆ. ಈ ಗ್ರಂಥವನ್ನು ಮಾತ್ರ ಬಳಸಿದ್ದಾನೆಂದು ನಾನೆಲ್ಲಿಯೂ ಹೇಳಿಲ್ಲ. ಶ್ರೀ ಜಾಗೀರ್‌ದಾರರು ಹಿಂದಿನ ಲೇಖನದಲ್ಲಿ ಹೇಳಿದ್ದಂತೆ ರಟ್ಟನು ಬೃಹಜ್ಜಾತಕವನ್ನು ಅನುಸರಿಸಿಲ್ಲ; ಬೃಹತ್ಸಂಹಿತೆಯನ್ನು ಅನುಸರಿಸಿರಬೇಕು ಎಂದು ಮಾತ್ರ ಹೇಳಿದ್ದೆ. ಅದನ್ನು ಶ್ರೀಯುತರು ಈಗ ಒಪ್ಪಿದಂತಿದೆ.

ಶ್ರೀಯುತರು ತಮ್ಮ ಈಗಿನ ಲೇಖನದ ಕೊನೆಯಲ್ಲಿ "ನನ್ನ ಊಹೆಯನ್ನು ನಿರ್ಣಯ ಎಂದು ಖಂಡಿಸಿದ್ದಾರೆ. ಇದು ಶೋಚನೀಯ" ಎಂದು ಬರೆದಿರುತ್ತಾರೆ. ಅವರು ಹಿಂದಿನ ಲೇಖನದಲ್ಲಿ "ಅಟ್ಟಶಾಸ್ತ್ರವನ್ನೂ ಮತ್ತು ಸಿಂಹಣಾರ್ಯಪಂಡಿತ ಅಥವಾ ಪಂಡಿತಾಚಾರ್ಯ ಜಿನಮುನಿಯ ನಿಷಧಿ ಶಾಸನವನ್ನೂ ಒಬ್ಬ ಅರ್ಹದ್ದಾಸನೇ ರಚಿಸಿದ್ದಾನೆ" ಎಂದು ಬರೆದಿದ್ದರು. "ರಚಿಸಿರಬಹುದು" ಎಂದಾಗಲೀ "ರಚಿಸಿದ್ದಾನೆಂದು ಊಹಿಸಬಹುದು" ಎಂದಾಗಲೀ ಬರೆದಿರಲಿಲ್ಲವಾದ ಕಾರಣ, ನಾನು ಅದನ್ನು ಅವರ ನಿರ್ಣಯವೆಂದು ಭಾವಿಸಿದ್ದು ಹೇಗೆ ತಪ್ಪು? ಅದು ನಿರ್ಣಯವೇ ಆಗಲಿ ಅಥವಾ ಶ್ರೀಯುತರು ಈಗ ಹೇಳಿರುವಂತೆ ಊಹೆಯೇ ಆಗಲಿ, ಅದಕ್ಕೆ ಈ ಶಾಸನದಲ್ಲಿ ಆಧಾರವಿಲ್ಲವೆಂದು ತೋರಿಸಿದ್ದು ತಪ್ಪಲ್ಲ.

ಶ್ರೀಯುತ ಸೀತಾರಾಮ ಜಾಗೀರ್‌ದಾರರು ಸಿದ್ಧರಬಸದಿ ಶಾಸನದ ಕೊನೆಯ ಪದ್ಯವನ್ನು ಯಾರಾದರೂ ಸಂಸ್ಕೃತ ಭಾಷಾನಿಷ್ಣಾತರಿಗೆ ತೋರಿಸಲಿ; ಪದ್ಯಭಾಗಕ್ಕೆ ನಾನು ಹೇಳಿರುವ ಅರ್ಥವೂ ರಾ. ನರಸಿಂಹಾಚಾರ್ಯರು ಕೊಟ್ಟಿರುವ ಅನುವಾದವೂ ತಪ್ಪೆಂದೂ, ಆ ಪದ್ಯದಂತೆ ಅರ್ಹದ್ದಾಸನು ಜ್ಯೋತಿಷದ ಮೂರು ಸ್ಕಂಧಗಳಲ್ಲೂ ಗ್ರಂಥರಚನೆ ಮಾಡಿದ್ದಾನೆ ಮತ್ತು ಶಾಸನಕರ್ತೃ ರಟ್ಟಮತದ ಕರ್ತೃಗಳು ಅಭಿನ್ನರು ಎಂದು ಹೇಳಬಹುದೆಂದೂ ಆ ವಿದ್ವಾಂಸರು ಅಭಿಪ್ರಾಯಪಟ್ಟರೆ ಆ ಅಭಿಪ್ರಾಯವನ್ನು ವಿವರಗಳೊಡನೆ ಪ್ರಕಟಿಸಲಿ.

ಕನ್ನಡ ಶಾಸ್ತ್ರ ಸಾಹಿತ್ಯ

ಪ್ರಾಚೀನ ಕನ್ನಡ ವ್ಯಾಕರಣಗಳಲ್ಲಿ ಕಾರಕಗಳ ನಿರೂಪಣೆ

ಕನ್ನಡದ ಪ್ರಥಮ ವ್ಯಾಕರಣವೆನ್ನಬಹುದಾದ [1] ಶಬ್ದಸ್ಮೃತಿಯಲ್ಲಿ ಎರಡನೆಯ ನಾಗವರ್ಮನು

ಧಾತು ವಿವರ್ಜಿತಮರ್ಥೋಪೇತಂ ಲಿಂಗಂ ಮಮಿಂಕೆಯುದದೊಳ್ [2] ಎಂದಿಂ
ತೀ ತೆಱದಿಂದೇೞಕ್ಕುಂ ಖ್ಯಾತ ವಿಭಕ್ತಿಗಳದರ್ಕೆ ಕಾರಕವಶದಿಂ ॥

ಸೂತ್ರ 15

ಪರಿಮಿಡಿಯೆ ಕರ್ತೃ ಕರ್ಮಂ ಕರಣಾಖ್ಯಂ ಸಂಪ್ರದಾನಮಪನಯನಾಖ್ಯಾ
ನಿರತಮಪಾದಾನಮುಮಧಿಕರಣಮುಮೆನೆ ಕಾರಕಂಗಳಾಱುಂ ನೆಗೞ್ಗುಂ ॥

ಸೂತ್ರ 16

ಎಂಬ ಪದಗಳಲ್ಲಿ ಕಾರಕವಶದಿಂದ ಲಿಂಗಕ್ಕೆ ಏಳು ವಿಭಕ್ತಿಗಳಾಗುವುದೆಂದು ಹೇಳಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಗಳೆಂದು ಆರು ಕಾರಕಗಳನ್ನು ಹೇಳಿದ್ದಾನೆ.

---

1. ಕಾವ್ಯಾವಲೋಕನದ ಪ್ರಥಮಾಧಿಕರಣವಾದ ಶಬ್ದಸ್ಮೃತಿ, ಸ್ವತಂತ್ರ ಗ್ರಂಥವೆನಿಸುವಷ್ಟು ದೊಡ್ಡದು. ಇದರ ಗಾತ್ರ ಉಳಿದ ನಾಲ್ಕು ಅಧಿಕರಣಗಳ ಒಟ್ಟು ಗಾತ್ರಕ್ಕಿಂತ ಸ್ವಲ್ಪ ಕಡಿಮೆ. ಈ ಗ್ರಂಥಕ್ಕಿಂತ ಸುಮಾರು ಇನ್ನೂರು ವರ್ಷಗಳ ಹಿಂದೆ ರಚಿತವಾದ ಕವಿರಾಜಮಾರ್ಗದಲ್ಲಿ ವ್ಯಾಕರಣ ಭಾಗವಿಲ್ಲ. ಅದರ ಪ್ರಥಮ ಪರಿಚ್ಛೇದದಲ್ಲಿ ಕಾವ್ಯದೋಷಗಳನ್ನು ಹೇಳುವಾಗ ಆನುಷಂಗಿಕವಾಗಿ ಕೆಲವು ವ್ಯಾಕರಣ ವಿಷಯಗಳ ಪ್ರಸ್ತಾಪವಿದೆ.

   ಕಾವ್ಯಾವಲೋಕನದಲ್ಲಿ ಕವಿರಾಜಮಾರ್ಗವನ್ನು ಉಲ್ಲೇಖಿಸಿಲ್ಲವಾದರೂ ಗ್ರಂಥಕಾರನು ಅದನ್ನು ನೋಡಿರಬಹುದು. ಮೊದಲು ಕನ್ನಡ ವ್ಯಾಕರಣವಾದ ಶಬ್ದಸ್ಮೃತಿಯನ್ನು ಬರೆದು ಅದು ವಿದ್ವನ್ಮಾನ್ಯತೆಯನ್ನು ಪಡೆದು ತಾನು **ಅಭಿನವ ಶರ್ವವರ್ಮ**ನೆಂಬ ಹೊಗಳಿಕೆಗೆ ಪಾತ್ರನಾದ ಮೇಲೆ. ಕವಿರಾಜಮಾರ್ಗವನ್ನು ಮೀರಿಸಬೇಕೆಂಬ ಅಭಿಲಾಷೆಯಿಂದ, ಶಬ್ದಸ್ಮೃತಿಯನ್ನು ಮೊದಲನೆಯ ಅಧಿಕರಣವನ್ನಾಗಿ ಮಾಡಿ, ಅದಕ್ಕೆ ಅಲಂಕಾರಶಾಸ್ತ್ರ ವಿಷಯಕವಾದ ಮುಂದಿನ ಭಾಗವನ್ನು ಸೇರಿಸಿ ಪೂರ್ಣ ಗ್ರಂಥವನ್ನು ಕಾವ್ಯಾವಲೋಕನವೆಂದು ಕರೆದಿರುವ ಸಾಧ್ಯತೆ ಇದೆ.

   ಸಂಸ್ಕೃತದಲ್ಲಿ ಭೋಜಕೃತವಾದ **ಸರಸ್ವತೀಕಂಠಾಭರಣ**ವೆಂಬ ಒಂದೇ ಹೆಸರುಳ್ಳ ಎರಡು ಗ್ರಂಥಗಳಿವೆ - ಒಂದು ವ್ಯಾಕರಣ, ಮತ್ತೊಂದು ಅಲಂಕಾರಶಾಸ್ತ್ರ (ಭೋಜನ ಕಾಲ ಕ್ರಿಸ್ತಶಕ 10-11 ಶತಮಾನ).

2. ಮೈಸೂರು ವಿಶ್ವವಿದ್ಯಾನಿಲಯದಿಂದ 1967ರಲ್ಲಿ ಪ್ರಕಟಿತವಾದ ಕಾವ್ಯಾವಲೋಕನದಲ್ಲಿ **ಮಮಿಂಕೆಯದದೊಳ್** ಎಂದಿದೆ. ಇತರ ಕನ್ನಡ ವ್ಯಾಕರಣಗಳ ಪ್ರಕಾರ ಸಪ್ತಮೀ ವಿಭಕ್ತಿ ಪ್ರತ್ಯಯ 'ಒಳ್' ಆದುದರಿಂದಲೂ. ಮುಂದಿನ ಪದ್ಯ (86)ದಲ್ಲಿನ 'ನೆಲದೊಳೊದೆ ವಿಸುಜಸಮಂ' ಎಂಬ ಪ್ರಯೋಗದಲ್ಲಿ ಒಳ್ ಪ್ರತ್ಯಯವೇ ಇರುವುದರಿಂದಲೂ 'ದೊಳ್' ಎಂಬುದು ಅಚ್ಚಿನ ದೋಷವಿರುವಂತೆ ತೋರುತ್ತದೆ. ಹಿಂದಿನ ಮುದ್ರಣದ ಪ್ರತಿ ನನಗೆ ದೊರಕಲಿಲ್ಲ.*

ಕರ್ನಾಟಕ ಭಾಷಾಭೂಷಣಕಾರ ನಾಗವರ್ಮನಾದರೋ[3] 'ಅಥ ಕಾರಕಂ ನಿರೂಪ್ಯತೇ'[4] ಎಂಬ ಸೂತ್ರವನ್ನೂ, ಅದಕ್ಕೆ "ಸಂಜ್ಞಾಸಂಧಿ ವಿಭಕ್ತಿನಿಯಮಾನನ್ತರಂ ನಿರೂಪ್ಯತೇ" ಎಂಬ ವೃತ್ತಿಯನ್ನೂ ಕೊಟ್ಟು, 'ಸ್ವಾಮ್ಯ' ಎಂಬ ಕಾರಕವನ್ನು ಹೆಚ್ಚಾಗಿ ಹೇಳಿದ್ದಾನೆ. ಈ ಸೂತ್ರದನಂತರ ಕಾರಕ ಮತ್ತು ವಿಭಕ್ತಿಗಳಿಗೆ ಸಂಬಂಧಿಸಿದ 14 ಸೂತ್ರಗಳಿವೆ, ಇವುಗಳ ಪೈಕಿ 3 ಸೂತ್ರಗಳು 'ಅಪಾದಾನೇ ಪಂಚಮೀ', 'ಸಂಬಂಧೇ ಷಷ್ಠೀ' ಮತ್ತು 'ಅಧಿಕರಣೇ ಸಪ್ತಮೀ'.[5] 'ಸಂಬಂಧೇ ಷಷ್ಠೀ' ಸೂತ್ರಕ್ಕೆ 'ಸ್ವಸ್ವಾಮಿ ಭಾವಾದಿ ಸಂಬಂಧೇ ಷಷ್ಠೀ ವಿಭಕ್ತಿರ್ಭವತಿ' ಎಂಬ ವೃತ್ತಿಯಿದೆ.

ಕೇಶಿರಾಜನ ಶಬ್ದಮಣಿದರ್ಪಣದ ನಾಮಪ್ರಕರಣದಲ್ಲಿ

ಸಂದಿಸಿ ಮಮಿಂಕೆಯದ ದೊಳೆ । ಯೆಂದಿರ್ಪುವು ಸಪ್ತವಿಧ ವಿಭಕ್ತಗಳವು ಮಾ
ರ್ಗಂದಪ್ಪದರ್ಥವಶದಿಂ । ಪಿಂದೆಣಿಸಿದ ವಿವಿಧವಿಧದ ಲಿಂಗಕ್ಕೆಲ್ಲಂ ॥[6]

ಎಂಬ ವಿಭಕ್ತಿಗಳನ್ನು ಹೇಳುವ ಸೂತ್ರದಲ್ಲಿ ಕಾರಕಗಳ ನಿರ್ದೇಶವಿಲ್ಲ. ಕಾರಕ ಮತ್ತು

---

* ಶಿ. ಶಿ. ಬಸವನಾಳ ಮತ್ತು ಕೇಪು ಶಂಕರನಾರಾಯಣ, ಇವರಿಂದ ಸಂಪಾದಿತವಾಗಿ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ 1939ರಲ್ಲಿ ಪ್ರಕಾಶಿತವಾದ ಕಾವ್ಯಾವಲೋಕನಂ ಪ್ರತಿಯಲ್ಲಿ 'ಮಮೆಂಕೆಯದದೊಳ್' ಎಂಬ ಶುದ್ಧರೂಪವೇ ಇದೆ.
-ಸಂ.

3. ಕಾವ್ಯಾವಲೋಕನ ಭಾಷಾಭೂಷಣಗಳು ಭಿನ್ನ ಕರ್ತೃಕಗಳೆಂದೂ, ಭಾಷಾಭೂಷಣವು ಕ್ರಿ. ಶ. 1120ರ ಅನಂತರ ರಚಿತವಾಯಿತೆಂದೂ ನನ್ನ ಅಭಿಪ್ರಾಯ. ವಿವರಗಳಿಗೆ ನೋಡಿ -
ಶಂ. ಬಾ. ಜೋಶಿ ಅಭಿನಂದನ ಗ್ರಂಥ 'ಅಧ್ಯಯನ' (ಬೆಂಗಳೂರು, 1980):
ನಾಗವರ್ಮರು (ಒಂದು ಸಮೀಕ್ಷೆ) ಎಂಬ ಲೇಖನ, ಪುಟ 541-554.
ಪ್ರೊ॥ ಪಿ. ಶ್ರೀಕೃಷ್ಣಭಟ್ಟರು ಸಹ ಈ ಗ್ರಂಥಗಳು ಭಿನ್ನ ಕರ್ತೃಕಗಳೆಂಬ ತೀರ್ಮಾನಕ್ಕೆ ಬಂದಿದ್ದಾರೆ. (ಕರ್ನಾಟಕ ಭಾರತಿ ಸಂಪುಟ 8, ಸಂಚಿಕೆ 4- ಮೇ 1976)-'ಕರ್ನಾಟಕ ಭಾಷಾಭೂಷಣದ ಕರ್ತೃ?' ಎಂಬ ಲೇಖನ, ಪುಟ 3-23. ಈ ಲೇಖನ ಪ್ರಕಟವಾಗುವ ಮುಂಚೆಯೇ ನನ್ನ ಲೇಖನವನ್ನು ಬರೆದಾಗಿತ್ತು. ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಈ ಲೇಖನವನ್ನು ನನ್ನ ಗಮನಕ್ಕೆ ತರುವ ಹೊತ್ತಿಗೆ 'ಅಧ್ಯಯನ' ಗ್ರಂಥದ ಬಹುಭಾಗ ಅಚ್ಚಾಗಿತ್ತು. ಆದುದರಿಂದ ಭಟ್ಟರ ಲೇಖನವನ್ನು ನಾನು ಉಲ್ಲೇಖಿಸಲು ಆಗಲಿಲ್ಲ.
ಈಚೆಗೆ ಶ್ರೀಮಾನ್ ಸೀತಾರಾಮ ಜಾಗೀರ್‌ದಾರ್ ಸಹ ಕಾವ್ಯಾವಲೋಕನ ಭಾಷಾಭೂಷಣಗಳ ನಾಗವರ್ಮರು ಭಿನ್ನರೆಂದು ಬರೆದಿದ್ದಾರೆ. (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ 70, ಸಂಚಿಕೆ 2, ಡಿಸೆಂಬರ್ 1985- ಪುಟ 105-108 ಮತ್ತು 106ನೇ ಪುಟದಲ್ಲಿನ ಅಡಿ ಟಿಪ್ಪಣಿ 5). 'ಪಂಪ, ಅಭಿನವ ಪಂಪ ; ಕೆಲವು ಸಮಸ್ಯೆಗಳು' ಎಂಬ ಲೇಖನ.

4. ಕರ್ನಾಟಕ ಭಾಷಾಭೂಷಣ (Ed. Lewis Rice 1884) ಸೂತ್ರ 75.

5. ಆರ್. ನರಸಿಂಹಾಚಾರ್ಯರಿಂದ ಸಂಪಾದಿತವಾದ ಕರ್ನಾಟಕ ಭಾಷಾಭೂಷಣಂ (ಶಾರದಾ ಮಂದಿರದ ಪುನರ್ಮುದ್ರಣ, 1975), ಸೂತ್ರಗಳು 84-86.

6. ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ (ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು, 1920), ಸೂತ್ರ 92.

ವಿಭಕ್ತಿಗಳ ಯೋಗವನ್ನು ಹೇಳುವ ಸೂತ್ರಗಳಲ್ಲಿ (126 ರಿಂದ 133) ಬೇರೆ ಬೇರೆ ಕಾರಕಗಳ ಹೆಸರುಗಳಿವೆಯೇ ಹೊರತು 'ಕಾರಕ' ಎಂಬ ಪದವಿಲ್ಲ. ಮುಂದೆ 138, 140 ಮತ್ತು 145ನೆಯ ಸೂತ್ರಗಳಲ್ಲಿ ಕಾರಕ ಪದವನ್ನು ಉಪಯೋಗಿಸಿದ್ದರೂ ಕಾರಕಗಳೆಷ್ಟೆಂದು ಯಾವ ಸೂತ್ರದಲ್ಲಿಯೂ ಹೇಳಿಲ್ಲ. ಆದರೆ ಮೇಲೆ ಕೊಟ್ಟಿರುವ ಸೂತ್ರ 93ರ ವೃತ್ತಿಯು

"ಪಿಂತೆ ಪೇಲ್ದ ನಾನಾ ತೆಱದ ಲಿಂಗಂಗಳ್ಗೆ ಪರವಾಗಿ ನಾಮ ವಿಭಕ್ತಿಗಳ್, ...ಏೞಾಗಿ, ಕಾರಕವಶದಿಂ ಪೆತ್ತುಗುಂ. ಆ ಕಾರಕವೆಂಬುದು ಕ್ರಿಯಾ ನಿಮಿತ್ತಂ; ಅದು ಕರ್ತೃವೆಂದುಂ, ಕರ್ಮವೆಂದುಂ, ಕರಣವೆಂದುಂ, ಸಂಪ್ರದಾನವೆಂದುಂ, ಅಪಾದಾನವೆಂದುಂ, ಅಧಿಕರಣ ವೆಂದುಂ ಷಡ್ವಿಧವಾಗಿರ್ಪುದು; ಷಷ್ಠಿಯೆಂದು ಸಂಬಂಧಾರ್ಥಂ" ಎಂದಿರುವುದರಿಂದಲೂ ವೃತ್ತಿ ಕೇಶಿರಾಜನದೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲದಿರುವುದರಿಂದಲೂ ಕೇಶಿರಾಜನು ಶಬ್ದಸ್ಮೃತಿಯಲ್ಲಿನ ಕಾರಕ ನಿರೂಪಣೆಯನ್ನು ಪೂರ್ಣವಾಗಿ ಒಪ್ಪಿದಂತಾಯಿತು.

ಶಬ್ದಾನುಶಾಸನದ ಯಾವ ಸೂತ್ರದಲ್ಲಿಯೂ ಕಾರಕವೆಂಬ ಪದವಿಲ್ಲ. ಶಾಸನದ ವೃತ್ತಿ ಭಾಷಾಮಂಜರಿಯಲ್ಲಿ 'ಕರ್ಮಣ್ಯಮ್' (ಸೂ. 204) ಮತ್ತು 'ಗೆದಾಪ್ಯೇ - ದೇಯ್ಯೈಃ' (ಸೂ. 213) ಎಂಬ ಸೂತ್ರಗಳ ವೃತ್ತಿಯಲ್ಲಿ ಕಾರಕವೆಂಬ ಪದವಿರುವುದರಿಂದ 'ಕರ್ಮ' ಮತ್ತು 'ದೇಯೈರಾಪ್ಯ' ಎಂದರೆ ಸಂಪ್ರದಾನ[7] ಇವು ಕಾರಕಗಳೆಂದು ಹೇಳಿದಂತಾಯಿತು. ವೃತ್ತಿಯಲ್ಲಿ ಎಲ್ಲಿಯೂ ಇತರ ಕಾರಕಗಳ ಹೆಸರಾಗಲೀ ಕಾರಕಗಳೆಷ್ಟೆಂದಾಗಲೀ ಹೇಳಿಲ್ಲ.

ಸೂತ್ರ, ವೃತ್ತಿಗಳಿಗೆ ವ್ಯಾಖ್ಯಾನವಾದ ಮಂಜರೀಮಕರಂದದಲ್ಲಿ 'ಕರ್ಮಣ್ಯಮ್' ಸೂತ್ರದ ವ್ಯಾಖ್ಯಾನದಲ್ಲಿ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣಗಳ ವಿವರಣೆಯಿದೆ. 'ಕರೋತೀತಿ ಕಾರಕಂ' (ಮಾಡುವವನು ಕಾರಕ) ಎಂದು ಕಾರಕಪದದ ವ್ಯುತ್ಪತ್ತಿಯಾದುದರಿಂದ ಕರ್ತೃವಿಗೆ ಮಾತ್ರ ಕಾರಕತ್ವವಲ್ಲವೇ ಎಂಬ ಪೂರ್ವಪಕ್ಷವನ್ನೆತ್ತಿ ಕ್ರಿಯೆಯಲ್ಲಿ ಮುಖ್ಯ ಮತ್ತು ಉಪಸರ್ಜನ ಎಂದು ಎರಡು ಭೇದಗಳಿವೆಯೆಂದೂ ಸ್ವತಂತ್ರವಾಗಿ ಮುಖ್ಯಕ್ರಿಯೆಯನ್ನು ಕರ್ತೃಕಾರಕವು ನಿರ್ವಹಿಸುವುದೆಂದೂ ಅಂಗಕ್ರಿಯೆಗಳನ್ನು ಕರ್ಮಾದಿ ಕಾರಕಗಳು ನಿರ್ವಹಿಸುವುದೆಂದೂ ಸಮಾಧಾನ ಹೇಳಿದ್ದಾನೆ. ತನ್ನ ಹೇಳಿಕೆಗೆ ಪ್ರಮಾಣವಾಗಿ ಕಾರಿಕೆಯೊಂದನ್ನೂ ಉದಾಹರಿಸಿದ್ದಾನೆ.[8]

7. 'ಕರ್ಮಣ್ಯಮ್' ಸೂತ್ರದ ವೃತ್ತಿ - ಕ್ರಿಯಾ ವ್ಯಾಪ್ಯಂ ಕರ್ಮ. ತಸ್ಮಿನ್ ಅನುಕ್ತೇ ಕಾರಕೇ ಲಿಂಗಾತ್ ಅಮ್ ಪ್ರತ್ಯಯೋ ಭವತಿ.

'ಗೆದ್ವಾಪೇ ದೇಯ್ಯೈಃ' ಸೂತ್ರದ ವೃತ್ತಿ - ದೇಯ್ಯೈರಾಪ್ಯೇ ಕಾರಕೇ ಲಿಂಗಾತ್ ಗೆದ್ಭವತಿ.ಕರ್ನಾಟಕ ಶಬ್ದಾನುಶಾಸನಂ (Ed.ಆರ್. ನರಸಿಂಹಾಚಾರ್, Bangalore 1923)

ಪ್ರೊ || ಶಿ. ಶಿ. ಬಸವನಾಳರ ಸಂಪಾದಕತ್ವದಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ 1941ರಲ್ಲಿ ಪ್ರಕಾಶಿತವಾದ ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆಯ 302ನೇ ಪುಟದಲ್ಲಿರುವ

ಕರ್ತಾ ಕರ್ಮ ಚ ಕರಣಂ ಸಂಪ್ರದಾನಂ ತಥೈವ ಚ ।
ಅಪಾದಾನಂ ಚಾಧಿಕರಣಂ ಷಡ್ವಿಧಂ ಕಾರಕಂ ಮತಮ್ ॥

ಎಂಬ ಶ್ಲೋಕವು ಶಬ್ದಾನುಶಾಸನ ಅದರ ವೃತ್ತಿ ವ್ಯಾಖ್ಯಾನಗಳಲ್ಲಿಲ್ಲ. ಅದು ವಿದ್ವಾನ್ ಕುಂಡಲಿಗಿರಿಯಾಚಾರ್ಯರಿಂದ ಉದಾಹೃತವಾದ ಪ್ರಾಚೀನ ಶ್ಲೋಕ.

ಮಂಜರೀಮಕರಂದದಲ್ಲಿನ ಕಾರಕನಿರೂಪಣೆ ಶಬ್ದ ಸ್ಮೃತಿ ಮತ್ತು ಶಬ್ದ ಮಣಿ ದರ್ಪಣಗಳ ನಿರೂಪಣೆಗಳೊಂದಿಗೆ ಹೊಂದುತ್ತದೆ. ಮಂಜರೀ ಮಕರಂದ ವ್ಯಾಖ್ಯಾನಕಾರನು ಸೂತ್ರಕಾರನಲ್ಲವೆಂಬ ಅನೇಕ ವಿದ್ವಾಂಸರ ಅಭಿಪ್ರಾಯವು ಇಲ್ಲಿ ಉಲ್ಲೇಖನೀಯ[9].

---

8. ನನು ಕಥಂ ಕರ್ಮಾದೇಃ ಕಾರಕತ್ವಂ? ಯತಃ ಕರೋತೀತಿ ಕಾರಕಮಿತಿ ವ್ಯುತ್ಪತ್ತ್ಯಾ ಕರ್ತುರೇವ ಕಾರಕತಾ, ಕರ್ಮಾದೀನಾಂತು ಕ್ರಿಯತೇ ಇತಿ ಕರ್ಮ, ಕ್ರಿಯತೇ ಅನೇನೇತಿ ಕರಣಂ, ಸಂಪ್ರದೀಯತೇ ಅಸ್ಮಾ ಇತಿ ಸಂಪ್ರದಾನಂ, ಅಪಾಯತೇ ಅಸ್ಮಾದಿತ್ಯಪಾದಾನಂ, ಅಧಿಕ್ರಿಯತೇ ಅಸ್ಮಿನ್ನಿತ್ಯಧಿಕರಣಂ - ಇತಿ ವ್ಯುತ್ಪತ್ತ್ಯಾ ಕರ್ತೃಸಾಧನಕಾರಕಪದೇನ ಸಾಮಾನಾಧಿಕರಣ್ಯಾಭಾವಾದಿತಿ ಚೇತ್ - ಸತ್ಯಂ. ಕ್ರಿಯಾ ಹಿ ದ್ವೇಧಾ :- ಮುಖ್ಯೋಪಸರ್ಜನ ಭೇದಾತ್. ತತ್ರ ಯಾ ಸಾಕ್ಷಾದ್ಧಾತುನೋಚ್ಯತೇ ಸಾ ಮುಖ್ಯಾ. ಯಾ ತು ನಾನ್ತರೀಯಕ ಸಿದ್ಧಾ ಸಾ ಉಪಸರ್ಜನಾ ....ಸಾಮಾನ್ಯತಃ ಕಾರಕಮಾತ್ರಸ್ಯ ಕರ್ತೃತ್ವೇಽಪಿ ವಿಶೇಷೇಣ ತು ಯದ್ವ್ಯಾಪಾರಾಯತ್ತೇ ಕಾರಕಾಂತರ ಪ್ರವೃತ್ತಿನಿವೃತ್ತೀ ಸಕಲಕಾರಕ ಸಾಕಲ್ಯ ಸಾಧ್ಯಾಯಾಂ ಕ್ರಿಯಾಯಾಂ ಯತ್ ಸ್ವತಂತ್ರತಯಾ ಕಾರಕಾಂತರಸ್ಯ ಯಥಾ ಸ್ವಂ ಸ್ವಯಮೇವ ಪ್ರವರ್ತಕಂ ನಿವರ್ತಕಂ ವಾ ಸ್ವಯಂ ಕೇನಚಿತ್ ಅಪ್ರಯುಕ್ತಮಿತಿ ಅಪರತಂತ್ರಂ ತತ್ ಕರ್ತೃಕಾರಕಮುಚ್ಯತೇ ; ಸ್ವತಂತ್ರಃ ಕರ್ತಾ ಇತಿ ವಚನಾತ್. ಇತರತ್ ಸಾಧಕತಮತ್ವಾದಿ ಧರ್ಮ ವಿವಕ್ಷಾಯಾಂ ಕರಣಾದಿವ್ಯ ಪದೇಶ ಭಾಗ್ಭವತಿ. ತದುಕ್ತಂ - ಸ್ವವ್ಯಾಪಾರೇಷು ಕರ್ತೃತ್ವಂ ಸರ್ವತ್ರೈವಾಸ್ತಿ ಕಾರಕೇ । ವ್ಯಾಪಾರಭೇದಾಪೇಕ್ಷಾಯಾಂ ಕರಣತ್ವಾದಿ ಸಂಭವಃ ॥ ಇತಿ.

(ಮೇಲಿನ ಶ್ಲೋಕದ ಆಕರ ತಿಳಿಯದು. ಅದಕ್ಕೂ ಭರ್ತೃಹರಿಕೃತ ವಾಕ್ಯಪದೀಯದ ಸಾಧನ ಸಮುದ್ದೇಶದ 18ನೇ ಕಾರಿಕೆಗೂ ಮೊದಲ ಪದದಲ್ಲಿ ಮಾತ್ರ ವ್ಯತ್ಯಾಸವಿದೆ. ಆ ಕಾರಿಕೆಯಲ್ಲಿ ಮೊದಲ ಪದ 'ನಿಷ್ಪತ್ತಿ ಮಾತ್ರೇ').

ತಮ್ಮ ತಮ್ಮ (ಅಂಗ) ಕ್ರಿಯೆಗಳಲ್ಲಿ ಎಲ್ಲ ಕಾರಕಗಳಿಗೂ ಕರ್ತೃತ್ವವಿದೆ. (ಪ್ರಧಾನ ಕ್ರಿಯೆಯಲ್ಲಿ) ಇವುಗಳ ಪಾತ್ರಭೇದವನ್ನು ಹೇಳುವಾಗ ಕರಣಾದಿ ಸಂಜ್ಞೆಗಳು ಉಂಟಾಗುತ್ತವೆ, ಎಂದು ಶ್ಲೋಕದ ತಾತ್ಪರ್ಯ.

9 (i) ಇವನು ಬರೆದಿರುವ ವೃತ್ತಿಯನ್ನೂ ವ್ಯಾಖ್ಯಾನವನ್ನೂ ಲಕ್ಷ್ಯಗಳನ್ನೂ ಪರಾಮರ್ಶಿಸಿ ನೋಡಿದಲ್ಲಿ ಇವನು ಸೂತ್ರಕಾರನಲ್ಲವೆಂಬ ನಿಶ್ಚಯವು ಹುಟ್ಟದಿರಲಾರದು.

ಈ ನಾಲ್ಕು ವ್ಯಾಕರಣಗಳಿಗಿಂತಲೂ ಪ್ರಾಚೀನವಾದ ಕವಿರಾಜಮಾರ್ಗವು ವ್ಯಾಕರಣ ಗ್ರಂಥವಲ್ಲವಾದರೂ ಅದರಲ್ಲಿ ಕಾರಕಗಳ ಪ್ರಸ್ತಾಪವಿರುವುದರಿಂದ ಅಲ್ಲಿನ ನಿರೂಪಣೆಯನ್ನೂ ಈಗ ಪರಿಶೀಲಿಸಬಹುದು . ಈ ಗ್ರಂಥದ ಪ್ರಥಮ ಪರಿಚ್ಛೇದದ 114ನೇ ಪದ್ಯ ಇಂತಿದೆ :

ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿ ಭೇದ ನಿ
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞನಿಕ್ಕುಮಾ ।
ಚಾರುಗುಣೋದಯಂ ವಚನಮೇಕ ಬಹುಕ್ರಮದಿಂದೆರ ೞ್ತೆಱ
ಕ್ಕಾರಯೆ ಪೇೞ್ವನಿಂತಿವಱ ಜಾತಿವಿಭಾಗ ಗುಣಾಗುಣಂಗಳಂ ॥

ಇಲ್ಲಿ ಕರ್ಮಕರಣಾದಿ ಭೇದದಿಂದ ಕಾರಕ ಆರು ಬಗೆ , ಪ್ರಥಮಾದಿ ಭೇದದಿಂದ ಅದನ್ನು ಹಿಡಿದು ನಿಲ್ಲುವ ವಿಭಕ್ತಿಗಳು ಏಳು ಎಂದು ಹೇಳಿದೆಯೇ ಹೊರತು ಆ ಆರು ಕಾರಕಗಳ ಹೆಸರಿಲ್ಲ.

ಶಬ್ದಸ್ಮೃತಿ, ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನದಲ್ಲಿನ ಕಾರಕ ನಿರೂಪಣೆಯ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಉಂಟಾಗಿಲ್ಲ. ಆದರೆ ಭಾಷಾಭೂಷಣ ಮತ್ತು ಕವಿರಾಜ ಮಾರ್ಗಗಳಲ್ಲಿನ ನಿರೂಪಣೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಕಂಡು ಬಂದಿವೆ. ಇವುಗಳನ್ನು ಈಗ ವಿವೇಚಿಸಬಹುದು.

ಪಂಡಿತ ಕಾನಕಾನಹಳ್ಳಿ ವರದಾಚಾರ್ಯರ ಲೇಖನ "ಕರ್ಣಾಟಕ ಶಬ್ದಾನುಶಾಸನ ತತ್ತ್ವಾಲೋಕಂ" - ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ; ಸಂಪುಟ 1, ಸಂಚಿಕೆ 3 (ಅಕ್ಟೋಬರ್ 1916), ಪುಟ 212.

(ii) ವೃತ್ತಿ ವ್ಯಾಖ್ಯಾನಗಳ ಬಗ್ಗೆ ಭಟ್ಟಾಕಳಂಕನ ಹೆಸರೇ ನಿಬಂಧಿತವಾದರೂ ಬೇರೆಯವರ ಕೈವಾಡವೂ ವೃತ್ತಿವ್ಯಾಖ್ಯಾನಗಳ ರಚನೆಯ ಬಗ್ಗೆ ಸೇರಿದೆಯೆಂಬ ಊಹೆಯೂ ಬರಲು ಅಲ್ಲಲ್ಲಿ ಕಾರಣಗಳು ಮೂಡಿ ಬರುತ್ತಿವೆ....ಸೂತ್ರವೃತ್ತಿಗಳ ನಿರ್ಮಾಣ ಕರ್ತೃ ಮಾತ್ರ ಭಟ್ಟಾಕಳಂಕ ದೇವನೆಂದೂ ವ್ಯಾಖ್ಯಾನಕಾರನು ಕೃತಿಕಾರ ಅಥವಾ ಸೂತ್ರಕಾರನಿಂದ ಭಿನ್ನನೆಂದೂ ತಿಳಿದು ಬರುತ್ತದೆ.

- ಟಿ. ವೆಂಕಟರಾಮಯ್ಯನವರ ಲೇಖನ "ಭಟ್ಟಾಕಳಂಕ ದೇವ" -
ಜಯ ಕರ್ನಾಟಕ ಸಂಪುಟ 38, ಸಂಚಿಕೆ 7 (ಜುಲೈ 1960), ಪುಟ 12.

ಏನೇ ಇರಲಿ ಶಾಸನ ನಿರ್ಮಾಣದ ಬಗ್ಗೆ ಪೂರ್ಣ ಸ್ವಾಮ್ಯವು ಭಟ್ಟಾಕಳಂಕ ದೇವನಿಗೆ ಸಂದಿದೆ. ಬಹುಶಃ ಈ ವಿಧದ ಭಿನ್ನತೆಯನ್ನು ತಾನೇ ಹುಟ್ಟಿಸಿ ಪಕ್ಷ ಪ್ರತಿಪಕ್ಷಗಳನ್ನು ಕಲ್ಪಿಸಿಕೊಂಡು ಸಮಾಧಾನ ತೋರಿಸಿರಬಹುದು. ಹಾಗಿದ್ದರೆ ಇದು ಇವನ ಅಗಾಧ ಪಾಂಡಿತ್ಯ ತರ್ಕಶಕ್ತಿಯ ನಿಲುವುಗಳನ್ನು ಸೂಚಿಸುತ್ತದೆ ಎಂದರೆ ತಪ್ಪಾಗದು.

— ಟಿ. ವೆಂಕಟರಾಮಯ್ಯನವರ ಮತ್ತೊಂದು ಲೇಖನ - ಜಯಕರ್ನಾಟಕ ಸಂಪುಟ 38, ಸಂಚಿಕೆ 11 (ನವೆಂಬರ್ 1960), ಪುಟ 17.

ಭಾಷಾಭೂಷಣದಲ್ಲಿನ ನಿರೂಪಣೆ - ರೈಸರು ಸಂಪಾದಿಸಿರುವ ಭಾಷಾಭೂಷಣದಲ್ಲಿ 75ನೇ ಸೂತ್ರವಾಗಿರುವ 'ಅಥ ಕಾರಕಂ ನಿರೂಪ್ಯತೇ' ಎಂಬುದನ್ನು ಆರ್. ನರಸಿಂಹಾಚಾರ್ಯರು ತಮ್ಮ ಆವೃತ್ತಿಯಲ್ಲಿ ಸೂತ್ರವಾಗಿ ಪರಿಗಣಿಸಿಲ್ಲ. ಆದರ ವೃತ್ತಿಯನ್ನೂ ಕೊಟ್ಟಿಲ್ಲ. ಅಡಿ ಟಿಪ್ಪಣಿಯಲ್ಲಿ (ಶಾರದಾ ಮಂದಿರದ ಪುನರ್ಮುದ್ರಣ , ಪುಟ 33) ''ಇದು ಸೂತ್ರವಾಗಿ ಕಾಣುವುದಿಲ್ಲ'' ಎಂದು ಹೇಳಿದ್ದಾರೆ. ಈಚೆಗೆ ಪ್ರೊ॥ ಎಂ. ವಿ. ಸೀತಾರಾಮಯ್ಯ ನವರು 'ನರಸಿಂಹಾಚಾರ್ಯರ ಮುದ್ರಣದಲ್ಲಿನ ಟೀಕೆಯಲ್ಲಿ ವೃತ್ತಿಯ ಮೂಲವಾಕ್ಯಗಳು ದೊರೆಯುವುದರಿಂದ, ಟೀಕಾಕಾರನು ಉಪಯೋಗಿಸಿದ ಮೂಲ ಮಾತೃಕೆಯಲ್ಲಿ ವೃತ್ತಿ ಇದ್ದಿರಬೇಕು ಎಂದು ಅನುಮಾನವಾಗುತ್ತದೆ. ಎಂದ ಮೇಲೆ, ವೃತ್ತಿ ನಾಗವರ್ಮಕೃತ ಎಂದೆನ್ನ ಬೇಕಾಗುತ್ತದೆ. ಸೂತ್ರವಿಲ್ಲದೆ ವೃತ್ತಿಯಿರದಷ್ಟೆ? ಹೀಗೆ 'ಸೂತ್ರವೂ ನಾಗವರ್ಮಕೃತವೇ' ಎಂದು ಸಿದ್ಧವಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ [10]. ಟೀಕಾಕಾರನು ಎಲ್ಲ ಕಡೆಯೂ ಸೂತ್ರದಲ್ಲಿರುವ ಪದಗಳನ್ನು ಕೊಟ್ಟು ಅನಂತರ ಅರ್ಥವನ್ನು

ಈ ಲೇಖನಗಳಿರುವ ಜಯ ಕರ್ನಾಟಕ ಸಂಪುಟ ನನಗೆ ನೋಡ ಸಿಗಲಿಲ್ಲ. ಈ ಮೇಲಿನ ವಾಕ್ಯಗಳನ್ನು ತಮ್ಮ ಲೇಖನದಲ್ಲಿ ಉದ್ಧರಿಸಿರುವ ಶ್ರೀ. ಪಿ. ರಾಮಭಟ್ಟರು, ಶ್ರೀ ವೆಂಕಟರಾಮಯ್ಯನವರು '' ಈ ಕೃತಿಯ ಭಿನ್ನ ಕರ್ತೃತ್ವದ ಸಂದೇಹದ ಅವಕಾಶಗಳನ್ನು ಹಲವೆಡೆಯಲ್ಲಿ ಎತ್ತಿ ತೋರಿಸಿದರೂ ಕೊನೆಯಲ್ಲಿ ಏಕಕರ್ತೃತ್ವದ ಕಡೆಗೆ ಒಲ್ಲದ ಮನಸ್ಸಿನಿಂದ ಮಣಿದಂತಿದೆ'' ಎಂದಿದ್ದಾರೆ.

- ಕರ್ನಾಟಕ ಶಬ್ದಾನುಶಾಸನದ ಕರ್ತೃ (ಕರ್ನಾಟಕ ಭಾರತಿ : ಸಂಪುಟ 10, ಸಂಚಿಕೆ 4- ಮೇ 1978) ಪುಟ 3.

(iii) ಶ್ರೀ ರಾಮಭಟ್ಟರು, ''ಕೇವಲ ಒಂದೆರಡು ಕಡೆ, ಸೂತ್ರಕಾರ ಬೇರೆ, ವೃತ್ತಿಕಾರ ಬೇರೆ, ವ್ಯಾಖ್ಯಾನಕಾರ ಇನ್ನೊಬ್ಬನಿರಬಹುದೆಂಬುದಕ್ಕೆ ಹೆಚ್ಚಿನ ಅವಕಾಶವಿದೆ.'' (ಪುಟ 4) ಎಂದೂ ''ಒಬ್ಬನೇ ಕರ್ತೃವಾಗಿರಬಹುದೆಂಬುದಕ್ಕೆ ಆಧಾರವಿದ್ದರೂ ಸಂಶಯಕ್ಕೆ ಆಸ್ಪದ ವಿದೆಯೆಂಬುದು ನಮ್ಮ ಪ್ರತಿಪಾದನೆಯ ಉದ್ದೇಶ. ಒಬ್ಬನದನ್ನು ಇನ್ನೊಬ್ಬನಿಗೆ ಕಟ್ಟಬೇಕೆಂಬ ದುರುದ್ದೇಶವಿಲ್ಲ''(ಪುಟ 6) ಎಂದೂ ಹೇಳಿದ್ದಾರೆ.

- ಮೇಲಿನ ಲೇಖನ.

(iv) ಶ್ರೀ ಎಚ್. ನಂಜೇಗೌಡರು ತಮ್ಮ ಲೇಖನದಲ್ಲಿ ಪಂಡಿತ ಕಾನಕಾನಹಳ್ಳಿ ವರದಾಚಾರ್ಯರ ಲೇಖನದ ವಿಷಯವನ್ನು ಪ್ರಸ್ತಾಪಿಸಿ,

''ಶ್ರೀ ಆರ್. ನರಸಿಂಹಾಚಾರ್ಯರು ಶಬ್ದಾನುಶಾಸನದ ಮುನ್ನುಡಿಯಲ್ಲಿ ಅದನ್ನು ಅಲ್ಲಗಳೆದಿದ್ದಾರೆ. ಅಲ್ಲದೆ ಸ್ವಲ್ಪಮಟ್ಟಿಗೆ ವ್ಯಂಗ್ಯವಾಗಿಯೂ ಕಟಕಿಯಾಡಿದ್ದಾರೆ. ಆದರೆ ಶ್ರೀ ನರಸಿಂಹಾಚಾರ್ಯರು ವರದಾಚಾರ್ಯರು ಎತ್ತಿರುವ ಆಕ್ಷೇಪವನ್ನು ಸುಲಭವಾಗಿ ತಳ್ಳಿಹಾಕಿರುವುದು ಸಮಂಜಸವಾಗಿ ಕಾಣಲಾರದು'' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಲೇಖನದ ಕೊನೆಯಲ್ಲಿ ಸೂತ್ರವೃತ್ತಿಗಳು ಅನ್ಯರಚಿತ, ವರದಾಚಾರ್ಯರು ಹೇಳಿದಂತೆ ಅವೆರಡನ್ನೂ ತನ್ನ ಹೆಸರಿನಲ್ಲಿ ಪ್ರಕಟಿಸಿ ಕೊಂಡನೇನೋ ? ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೇಳಿರುವುದರಿಂದಲೂ ನರಸಿಂಹಾಚಾರ್ಯರ ಆವೃತ್ತಿಯಲ್ಲಿನ ಟೀಕೆಯಲ್ಲಿಯೂ ಸೂತ್ರದ ಮೂರು ಪದಗಳೂ ಇರುವುದರಿಂದಲೂ, ಟೀಕಾಕಾರನ ಮುಂದಿದ್ದ ಮೂಲಗ್ರಂಥದಲ್ಲಿ ಇದು ಸೂತ್ರವಾಗಿದ್ದಿರಲೇ ಬೇಕು.[10a]

ಇತರ ವೈಯಾಕರಣರು ಹೇಳಿರುವ ಷಟ್ಕಾರಕಗಳ ಜೊತೆಗೆ ಏಳನೆಯದಾಗಿ ಭಾಷಾಭೂಷಣಕಾರನು ಸೇರಿಸಿರುವ 'ಸಾಮ್ಯ'ಕಾರಕವು ಟೀಕೆಗೆ ಗುರಿಯಾದ ಮತ್ತೊಂದು ವಿಷಯ.

ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು "ಷಷ್ಠೀ ವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ ಸಂಬದ್ಧಕಾರಕ ಎಂದು ಕರೆಯಬಹುದು" ಎಂದೂ "ಪ್ರಾಕೃತ ದೇಶಿಗಳಲ್ಲಿ ಷಷ್ಠೀ ವಿಭಕ್ತಿ ಕರ್ಮಾದಿಯಾದ ಕೆಲವು ಕಾರಕಗಳ ಅಧಿಕಾರವೂ ಇದ್ದಂತೆ ಗೊತ್ತಾಗುತ್ತಿದೆ" ಎಂದೂ ಹೇಳಿ ಲಕ್ಷ್ಮೀಧರನ ಷಡ್ಭಾಷಾ ಚಂದ್ರಿಕೆಯಿಂದ ಎರಡು ಶ್ಲೋಕಗಳನ್ನೂ ಇತರ ವಿಭಕ್ತಿಗಳ ಸ್ಥಾನದಲ್ಲಿ ಷಷ್ಠೀ ವಿಭಕ್ತಿ ಬಂದಿರುವ ಕೆಲವು ದೃಷ್ಟಾಂತಗಳನ್ನೂ ಕೊಟ್ಟು, ಈ ವಿಚಾರವನ್ನೆಲ್ಲ ಮಥನವೆಸಗಿಯೆ ಆಗಿರಬೇಕು - ನಾಗವರ್ಮನು ತನ್ನ ಭಾಷಾಭೂಷಣ ದಲ್ಲಿ" 'ಅಥ ಕಾರಕಂ ನಿರೂಪ್ಯತೇ' ಎಂಬ ಸೂತ್ರವನ್ನೂ ಅದರ ವೃತ್ತಿಯನ್ನೂ ರಚಿಸಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.[11]

ಕಾರಕ ವಿಚಾರದಲ್ಲಿ ಮುಳಿಯ ತಿಮ್ಮಪ್ಪಯ್ಯನವರ ನಿಲುವನ್ನು ಒಪ್ಪಿರುವ ಪ್ರೊ|| ಎಂ. ವಿ. ಸೀತಾರಾಮಯ್ಯನವರು "ನಾಗವರ್ಮನು ಭಾಷಭೂಷಣದಲ್ಲಿ ಕಾರಕ ವಿಚಾರಕ್ಕೆ ಸಂಬಂಧಪಟ್ಟಂತೆ ಕವಿರಾಜಮಾರ್ಗವನ್ನು ಅನುಸರಿಸಿರುವಂತೆ ಕಾಣುತ್ತದೆ ಎನ್ನುತ್ತಾರೆ.[12]

ಕರ್ನಾಟಕ ಶಬ್ದಾನುಶಾಸನ - ಒಂದು ವಿವೇಚನೆ. (ನಂದನವನ-ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳವರ ಅಭಿನಂದನಾ ಸಮಿತಿ, ಮಲ್ಲಾಡಿಹಳ್ಳಿ, 1978) ಭಾಗ 2, ಪುಟ 209 ಮತ್ತು 215.

10. ಪ್ರಾಚೀನ ಕನ್ನಡ ವ್ಯಾಕರಣಗಳು-ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವ ವಿದ್ಯಾನಿಲಯ, 1979. ಪುಟ 50, ಅಡಿ ಟಪ್ಪಣಿ 47.

10a. ನರಸಿಂಹಾಚಾರ್ಯರ ಆವೃತ್ತಿಯಲ್ಲಿ ಟೀಕೆ ಹೀಗಿದೆ : ಅಥ = ಸಂಜ್ಞಾ ಸಂಧಿ ವಿಭಕ್ತಿ ವ್ಯಾಖ್ಯಾನಾನಂತರಂ, ಕಾರಕಂ = ಕರ್ತೃ ಕರ್ಮ ಕರಣ ಸಂಪ್ರದಾನಾಪಾದಾನಸ್ವಾಮ್ಯಾಧಿ ಕರಣಂಗಳೆಂಬ ಪೆಸರನುಳ್ಳ ಕಾರಕಂ, ಯಥಾಕ್ರಮದಿಂ, ನಿರೂಪ್ಯತೇ = ಪೇಟಲ್ಪಡುತ್ತಿರ್ಪುದು.

11. ಕವಿರಾಜಮಾರ್ಗ ವಿವೇಕ - ಗೀತಾ ಬುಕ್ ಹೌಸ್, ಮೈಸೂರು, 1973. ಪುಟ 146-7.

12. ಪ್ರಾಚೀನ ಕನ್ನಡ ವ್ಯಾಕರಣಗಳು , ಪುಟ 50.

ಭಾಷಾಭೂಷಣದ ಸೂತ್ರ ವೃತ್ತಿಗಳನ್ನು ನೋಡಿದರೆ ಅದರಲ್ಲಿ ಕಾಣಬರುವುದು ಸಂಸ್ಕೃತವ್ಯಾಕರಣದ ಪ್ರಭಾವ; ಪ್ರಾಕೃತ ವ್ಯಾಕರಣದ ಪ್ರಭಾವವಿದ್ದಂತಿಲ್ಲ. ಕಾವ್ಯಾವ-ಲೋಕನದ ಐದು ಅಧಿಕರಣಗಳ ಪೈಕಿ ನಾಲ್ಕು ಅಲಂಕಾರಶಾಸ್ತ್ರ ವಿಷಯಕಗಳಾದುದರಿಂದ ಕಾವ್ಯಾವಲೋಕನಕಾರ ಕವಿರಾಜಮಾರ್ಗದಿಂದ ಪ್ರಭಾವಿತನಾಗಿರಬಹುದು. ಆದರೆ ಭಾಷಾಭೂಷಣಕಾರನು ಸ್ವಾಮ್ಯವನ್ನು ಕಾರಕಪಂಕ್ತಿಯಲ್ಲಿ ಸೇರಿಸಿದ್ದರೂ, ಅವನು ಹೇಳಿರುವುದು ಏಳು ಕಾರಕಗಳನ್ನು; ಕವಿರಾಜಮಾರ್ಗಕಾರನಂತೆ ಆರನ್ನಲ್ಲ. ಇದೂ ಅಲ್ಲದೆ ಕವಿರಾಜಮಾರ್ಗದಲ್ಲಿ ಹೇಳಿರುವ ಆರು ಕಾರಕಗಳಲ್ಲಿ ಸ್ವಾಮ್ಯ ಸೇರಿದೆಯೇ ಎಂಬುದೇ ವಾದಗ್ರಸ್ತ ವಿಷಯವಾಗಿದೆ. (ಈ ಲೇಖನದಲ್ಲಿ ಮುಂದೆ ಈ ವಿಷಯವನ್ನು ಪರಿಶೀಲಿಸಿದೆ). ಈ ಕಾರಕದಿಂದ ಭಾಷಾಭೂಷಣಕಾರನು ಕವಿರಾಜ ಮಾರ್ಗವನ್ನು ಅನುಸರಿಸಿದ್ದಾನೆನ್ನುವುದು ಯುಕ್ತವಾಗಿ ಕಾಣುವುದಿಲ್ಲ.

ಡಾ|| ಕೆ. ಕೃಷ್ಣಮೂರ್ತಿಗಳು ಸಂಪಾದಿಸಿರುವ ಕವಿರಾಜಮಾರ್ಗದ ನೂತನ ಸಂಸ್ಕರಣದ ವಿಮರ್ಶಾತ್ಮಕವಾದ ಲೇಖನದಲ್ಲಿ ವಿದ್ವಾನ್ ರಂಗನಾಥ ಶರ್ಮರು "ಅಧಿ ೀಶ್ವರನ ಮನೆ, ಮರದ ಹಣ್ಣು, ನನ್ನ ಮಡದಿ - ಮೊದಲಾದ ಸ್ಥಳದಲ್ಲಿ ಕ್ರಿಯಾ ಶಬ್ದವಿಲ್ಲದ್ದರಿಂದ ಷಷ್ಠಿಯು ಎಂದಿಗೂ ಕಾರಕವಿಭಕ್ತಿ ಎನ್ನಿಸುವುದಿಲ್ಲ. ನಾಗವರ್ಮನು ಭಾಷಾಭೂಷಣದಲ್ಲಿ ಸ್ವಾಮ್ಯರ್ಥವನ್ನು ಕಾರಕವೆಂದಿರುವುದು ಪ್ರಾಮಾದಿಕ" ಎಂದು ಹೇಳಿದ್ದಾರೆ.[13]

ನಾಗವರ್ಮನು ಏಳು ಕಾರಕಗಳನ್ನು ಹೇಳಿರುವುದನ್ನು ನಾವು ಒಪ್ಪಲಿ ಅಥವಾ ಒಪ್ಪದಿರಲಿ, ಕಾರಕಗಳು ಏಳೆಂಬುದಕ್ಕೆ ಏನಾದರೂ ಪೂರ್ವಾಧಾರಗಳಿವೆಯೇ ಅಥವಾ ಅದು ಸ್ವಕಪೋಲಕಲ್ಪಿತವೇ ಎಂದು ವಿಚಾರ ಮಾಡುವುದು ಬೋಧಪ್ರದ.

ಪಾಣಿನ್ಯಷ್ಟಾಧ್ಯಾಯಿಯ ಪ್ರಥಮಾಧ್ಯಾಯ ಚತುರ್ಥ ಪಾದದಲ್ಲಿ ಆರು ಕಾರಕಗಳ ನಿರೂಪಣೆಯಿದೆ. ದ್ವಿತೀಯಾಧ್ಯಾಯ ತೃತೀಯ ಪಾದದಲ್ಲಿ ಪ್ರಥಮಾದಿಂದ ಪಂಚಮೀ ವರೆಗಿನ ಮತ್ತು ಸಪ್ತಮೀ ವಿಭಕ್ತಿಗಳ ವಿಷಯವನ್ನು ಹೇಳಿಯಾದ ಮೇಲೆ "ಷಷ್ಠೀ ಶೇಷೇ" (2-3-50) ಎಂಬ ಸೂತ್ರವಿದೆ. ಪತಂಜಲಿಯು ಈ ಸೂತ್ರದ ಭಾಷ್ಯದಲ್ಲಿ ಮೊದಲು ಶೇಷವಂದರೇನು ಎಂದು ಪ್ರಶ್ನಿಸಿ ಕರ್ಮಾದಿಗಳಿಂದ ಭಿನ್ನವಾದ ಅರ್ಥವೇ ಶೇಷವೆಂದು ಉತ್ತರಿಸಿದ್ದಾನೆ. ಅನಂತರ "ರಾಜ್ಞಃ ಪುರುಷಃ" (ರಾಜನ ಸೇವಕ) ಎನ್ನುವಲ್ಲಿ 'ರಾಜ' ಕರ್ತೃ, ಅವನಿಂದ ಧನವನ್ನು

---

13. ಕವಿರಾಜಮಾರ್ಗದ ನೂತನ ಸಂಸ್ಕರಣ (ಗ್ರಂಥ ಸಮೀಕ್ಷೆ)-ಲೋಚನ, ಸಂಪುಟ 1- ಸಂಚಿಕೆ2 (ಡಿಸೆಂಬರ್ 1983)-ಪುಟ 49.

ಪಡೆಯುವ ಕಾರಣದಿಂದ 'ಪುರುಷ' ಸಂಪ್ರದಾನ; ''ವೃಕ್ಷಸ್ಯ ಶಾಖಾ'' (ಮರದ ಕೊಂಬೆ) ಎನ್ನುವಲ್ಲಿ ಆಕ್ಷೇಪವನ್ನೆತ್ತಿ ''ಹಾಗಾದರೆ ಕರ್ಮಾದಿಗಳ ಅವಿವಕ್ಷೆಯೇ ಶೇಷ'' ಎಂದು ಸಮಾಧಾನವನ್ನು ಹೇಳಿದ್ದಾನೆ.[14] (ಅವಿವಕ್ಷೆಯೆಂದರೆ ಕರ್ಮಾದಿ ಸಂಬಂಧವನ್ನು ಹೇಳಬೇಕೆಂಬ ಇಷ್ಟವಿಲ್ಲದಿರುವುದು.)

ಕಾಶಿಕಾವೃತ್ತಿಕಾರಕನು (ಕ್ರಿ. ಶ. 7ನೆಯ ಶತಮಾನ) ಮೇಲಿನ ಸೂತ್ರದ ವೃತ್ತಿಯಲ್ಲಿ ಕರ್ಮಾದಿಗಳಿಂದಲೂ ಪ್ರಾತಿಪದಿಕಾರ್ಥದಿಂದಲೂ ಭಿನ್ನವಾದ ಸ್ವಸ್ವಾಮಿ ಸಂಬಂಧ ಮೊದಲಾದುವು **ಶೇಷ**ವೆಂದು ಹೇಳಿ, 'ಪಶೋಃ ಪಾದಃ' (ಹಸುವಿನ ಕಾಲು), ಪಿತುಃ ಪುತ್ರಃ (ತಂದೆಯ ಮಗ) ಎಂಬ ಉದಾಹರಣೆಗಳನ್ನು ಕೊಟ್ಟಿದ್ದಾನೆ.[15] ಕರ್ಮಾದಿಗಳ ಅವಿವಕ್ಷೆಯೇ ಶೇಷವೆಂಬ ಮಹಾಭಾಷ್ಯದ ವೃತ್ತಿಯಲ್ಲಿ, 'ಮಾತುರಧ್ಯೇತಿ', 'ಮಾತುಃ ಸ್ಮರತಿ' (ತಾಯಿಯನ್ನು ಸ್ಮರಿಸುತ್ತಾನೆ), 'ಏಧೋದಕಸ್ಯೋಪಸ್ಕುರುತೇ' (ಕಟ್ಟಿಗೆಯು ನೀರನ್ನು ಪರಿಷ್ಕರಿಸುತ್ತದೆ), 'ಚೌರಸ್ಯ ರುಜತಿ ರೋಗಃ' (ರೋಗವು ಕಳ್ಳನನ್ನು ಭಂಗಪಡಿಸುತ್ತದೆ) ಮೊದಲಾದ ಪ್ರಯೋಗಗಳಿವೆ. ಇಲ್ಲೆಲ್ಲ ವೃತ್ತಿಯಲ್ಲಿ 'ಶೇಷತ್ವೇನ ವಿವಕ್ಷಿತೇ' ಎಂದು ಹೇಳಿದೆ. ಕಾಶಿಕಾವೃತ್ತಿಯ ವ್ಯಾಖ್ಯಾನವಾದ 'ಪದಮಂಜರಿ'ಯಲ್ಲಿ ಹರದತ್ತನು (ಕ್ರಿ. ಶ. 10-11ನೆಯ ಶತಮಾನ), ಮೇಲಿನ ಪ್ರಯೋಗಗಳಲ್ಲಿ ಕ್ರಿಯಾಪದವಿದ್ದು ಮಾತೃ ಮೊದಲಾದುವುಗಳಿಗೆ ಕರ್ಮತ್ವವಿದ್ದರೂ ಅದು ಅವಿವಕ್ಷಿತವಾಗಿರುವುದರಿಂದ (ಕರ್ಮತ್ವವನ್ನು ಹೇಳುವ ಅಪೇಕ್ಷೆ ಇಲ್ಲದ್ದರಿಂದ) ಮತ್ತು ಮಾತೃ ಸಂಬಂಧಿಯಾದ ಸ್ಮರಣೆ ಇತ್ಯಾದಿ ಸಂಬಂಧಮಾತ್ರ ವಿವಕ್ಷಿತವಾಗಿರುವುದರಿಂದ ಶೇಷತ್ವವುಂಟಾಗಿ ಮಾತೃ ಮೊದಲಾದ ಪದಗಳಿಗೆ ಷಷ್ಠೀ ವಿಭಕ್ತಿ ಬಂದಿದೆಯೆಂದು ವಿವರಿಸಿ, ಈ ವಿಧದ ಇನ್ನೂ ಕೆಲವು ಪ್ರಯೋಗಗಳನ್ನು- 'ನ ಮಾಷಾಣಾ ಮಶ್ನೀಯಾತ್' (ಉದ್ದನ್ನು

---

14. ಕಃ ಶೇಷಃ ?ಕರ್ಮಾದಿಭ್ಯೋ ಯೋऽನ್ಯೋ ಅರ್ಥಾಃ ಸ ಶೇಷಃ। ಯದ್ಯೇವಂ ಶೇಷೋ ನ ಪ್ರಕಲ್ಪತೇ। ನ ಹಿ ಕರ್ಮಾದಿಭ್ಯೋऽನ್ಯೇ ಅರ್ಥಾಃ ಸಂತಿ। ಇಹ ತಾವದ್- 'ರಾಜ್ಞಃ ಪುರುಷಃ' ಇತಿ ರಾಜಾ ಕರ್ತಾ ಪುರುಷಃ ಸಂಪ್ರದಾನಂ। 'ವೃಕ್ಷಸ್ಯ ಶಾಖಾ' ಇತಿ ವೃಕ್ಷಃ ಶಾಖಾಯಾ ಅಧಿಕರಣಂ। .....ಅತ್ರ ಚ ಸರ್ವತ್ರ ಕರ್ಮಾದಯಸ್ಸಂತಿ। ಏವಂ ತರ್ಹಿ ಕರ್ಮಾದೀನಾಮವಿವಕ್ಷಾ ಶೇಷಃ।

    ಶ್ರೀಮದ್ಭಗವತ್ಪತಂಜಲಿಮುನಿ ವಿರಚಿತಂ ಮಹಾಭಾಷ್ಯಂ (ಮೋತೀಲಾಲ್ ಬನಾರಸೀದಾಸ್, 1967); ದ್ವಿತೀಯ ಖಂಡ; ಪುಟ 518-9.

15. ಕರ್ಮಾದಿಭ್ಯೋ ಯೋऽನ್ಯಃ ಪ್ರಾತಿಪದಿಕಾರ್ಥವ್ಯತಿರಿಕ್ತಃ ಸ್ವಸ್ವಾಮಿ ಸಂಬಂಧಾದಿಃ ಶೇಷಃ ತತ್ರ ಷಷ್ಠೀ ವಿಭಕ್ತಿರ್ಭವತಿ। ರಾಜ್ಞಃ ಪುರುಷಸ್ಯ ಗೃಹಂ। ಪಶೋಃ ಪಾದಃ, ಪಿತುಃ ಪುತ್ರಃ। ಕಾಶಿಕಾ ವೃತ್ತಿಃ, ದ್ವಿತೀಯೋ ಭಾಗಃ (ಪ್ರಾಚ್ಯ ಭಾರತೀ ಪ್ರಕಾಶನಂ, ವಾರಾಣಸೀ, 1965), ಪುಟ 209, 211

ತಿನ್ನಬಾರದು), 'ಅನುಕರೋತಿ ಭಗವತೋ ನಾರಾಯಣಸ್ಯ (ಭಗವಾನ್ ನಾರಾಯಣನನ್ನು ಹೋಲುತ್ತಾನೆ ಅಥವಾ ಅನುಕರಿಸುತ್ತಾನೆ) ಇತ್ಯಾದಿ - ಕೊಟ್ಟಿದ್ದಾನೆ.[16]

ಮೇಲೆ ಹೇಳಿರುವ ರಾಜ್ಞಃ ಪುರುಷಃ, ಪಶೋಃ ಪಾದಃ ಮೊದಲಾದ ಪ್ರಯೋಗಗಳಲ್ಲಿ ಕ್ರಿಯಾಪದವೇ ಇಲ್ಲವಾದುದರಿಂದ ಕಾರಕತ್ವದ ಪ್ರಸಕ್ತಿಯಿಲ್ಲ. ಆದರೆ 'ಮಾತು ಃ ಸ್ಮರತಿ' ಇತ್ಯಾದಿ ಪ್ರಯೋಗಗಳಲ್ಲಿ ಕ್ರಿಯಾಪದವಿದ್ದು ಕರ್ಮತ್ವ ಅವಿವಕ್ಷಿತವಾಗಿ ಶೇಷಷಷ್ಠಿ ಬಂದಿದ್ದರೂ ಆ 'ಶೇಷ' ಕ್ಕೆ ಕಾಶಿಕಾವೃತ್ತಿಕಾರಕನು ಕಾರಕತ್ವವನ್ನು ಹೇಳಿಲ್ಲ.

ಜೈನೇಂದ್ರ ವ್ಯಾಕರಣ, ಹೇಮಚಂದ್ರನ ಶಬ್ದಾನುಶಾಸನ, ಭೋಜನ ಸರಸ್ವತೀ ಕಂಠಾಭರಣಗಳಲ್ಲಿ ಶೇಷಷಷ್ಠಿಯನ್ನು ವಿಧಿಸುವ ಸೂತ್ರಗಳಿವೆ. ಕಾತಂತ್ರದಲ್ಲಿ ಸ್ವಾಮ್ಯಾದಿಗೆ ಷಷ್ಠಿಯನ್ನು ಹೇಳಿದೆ. ಸ್ವಾಮ್ಯಾದಿಯನ್ನು ಕಾರಕಗಳ ಸಾಲಿನಲ್ಲಿ ಸೇರಿಸಿಲ್ಲ. ಚಾಂದ್ರ ವ್ಯಾಕರಣದಲ್ಲಿ ''ಷಷ್ಠೀ ಸಂಬಂಧೇ'' ಎಂಬ ಸೂತ್ರವು ಇದೆ. (ಭಾಷಾಭೂಷಣದ ಸೂತ್ರ ಸಂಬಂಧೇ ಷಷ್ಠೀ). ಶಾಕಟಾಯನ ವ್ಯಾಕರಣದಲ್ಲಿನ 'ಙಸೋಸಾಮ್' (1-3-163) ಸೂತ್ರದ ಅಮೋಘ ವೃತ್ತಿಯಲ್ಲಿ ಶೇಷಷಷ್ಠಿಗೆ ಉದಾಹರಣೆಗಳಿವೆ.[17] ಈ ಎಲ್ಲ ವ್ಯಾಕರಣ ಗಳಲ್ಲಿಯೂ ಅಷ್ಟಾಧ್ಯಾಯಿಯಲ್ಲಿರುವ ಆರು ಕಾರಕಗಳನ್ನೇ ಹೇಳಿದೆಯೇ ಹೊರತು ಎಲ್ಲಿಯೂ ಏಳನೆಯ ಕಾರಕವನ್ನು ಹೇಳಿಲ್ಲ.

---

16. ಏವಂ ಚ ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್, ಅನುಕರೋತಿ ಭಗವತೋ ನಾರಾಯಣಸ್ಯೇತ್ಯಾದೌ ಶ್ರೂಯಮಾಣೇಪಿ ಕ್ರಿಯಾಶಬ್ದೇ ಮಾತೃಸಂಬದ್ಧಂ ಸ್ಮರಣಮಿತಿ ಸಂಬಂಧ ಮಾತ್ರಂ ವಿವಕ್ಷಿತಂ, ಕರ್ಮತ್ವಂ ತು ಸತ್ಯವಿವಕ್ಷಿತಮಿತಿ ಷಷ್ಠೀ ಭವತಿ.
ಮೇಲಿನ ಗ್ರಂಥ, ಪುಟ 210

17 (i) ತಾ ಶೇಷೇ 1-4-57 (''ತಾ'' ಈ ವ್ಯಾಕರಣದಲ್ಲಿ ಷಷ್ಠೀ ವಿಭಕ್ತಿಗೆ ಸಂಜ್ಞೆ). ಜೈನೇಂದ್ರ ವ್ಯಾಕರಣಂ ದೇವನಂದಿ ವಿರಚಿತ ಮಹಾವೃತ್ತಿ ಸಹಿತಂ (Reprint from Pandit) - ಇದರ ಕಾಲ ಸು. ಕ್ರಿ. ಶ. 5ನೇ ಶತಮಾನ.

(ii) ಶೇಷೇ 2-2-81(ಹಿಂದಿನ ಸೂತ್ರದಿಂದ 'ಷಷ್ಠೀ'ಎಂಬುದರ ಅನುವೃತ್ತಿ.) ಸಿದ್ಧಹೇಮಚಂದ್ರಾಭಿಧಾನಶಬ್ದಾನುಶಾಸನ (Sri Jain Yasovijaya Series-3, 1905, Benares). ಹೇಮಚಂದ್ರನ ಕಾಲ ಕ್ರಿ. ಶ. 1088-1172.

(iii) ಷಷ್ಠೀ ಶೇಷೇ - ಸರಸ್ವತೀ ಕಂಠಾಭರಣ ಸೂತ್ರ 3-1-280. ಈ ಗ್ರಂಥ ನನಗೆ ಸಿಕ್ಕಿಲ್ಲ. ಮುಂದೆ ಹೇಳಿರುವ ಚಾಂದ್ರ ವ್ಯಾಕರಣದಲ್ಲಿ ಅದರ ಸಂಪಾದಕರು ಪ್ರತಿ ಸೂತ್ರದ ಪಕ್ಕದಲ್ಲೂ ಅನುವಾದಿಯಾದ ಪಾಣಿನಿಯ ಮತ್ತು ಸರಸ್ವತೀ ಕಂಠಾಭರಣದ ಸೂತ್ರಗಳನ್ನು ಕೊಟ್ಟಿದ್ದಾರೆ.

ಕಾರಕಗಳ ಹೆಸರುಗಳಲ್ಲಿ ಮ್ಮಾತ್ರ ವ್ಯತ್ಯಾಸಗಳಿವೆ. ಕರ್ಮಕಾರಕವನ್ನು ಜೈನೇಂದ್ರಗಲ್ಲಿ 'ಆಪ್ಯ' ಎಂದೂ ಚಾಂದ್ರದಲ್ಲಿ 'ವ್ಯಾಪ್ಯ'ವೆಂದೂ ಕರೆದಿದ್ದಾರೆ. ಹೀಗೆಯೇ ಚಾಂದ್ರ ಶಾಕಟಾಯನಗಳಲ್ಲಿ ಸಂಪ್ರದಾನಕ್ಕೆ 'ದೇಯೈರಾಪ್ಯ'ವೆಂದೂ ಹೆಸರುಗಳಿವೆ.

ಕಾಶಿಕಾವೃತ್ತಿ ಮತ್ತು ಶಾಕಟಾಯನ ಮೊದಲಾದ ವ್ಯಾಕರಣಕಾರರಿಗಿಂತ ಪ್ರಾಚೀನನಾದ ಭರ್ತೃಹರಿಯ[18] ವಾಕ್ಯಪದೀಯದ ಸಾಧನ ಸಮುದ್ದೇಶದಲ್ಲಿ ಕಾರಕಗಳ ತಾತ್ತ್ವಿಕವಾದ ವಿವೇಚನೆಯಿದೆ. ಈ ಸಮುದ್ದೇಶದಲ್ಲಿನ 44ನೆಯ ಕಾರಿಕೆ :-

---

(iv) ಕಾತಂತ್ರ ಸೂತ್ರಗಳು :- ಪ್ರಥಮಾ ವಿಭಕ್ತಿರ್ಲಿಂಗಾರ್ಥವಚನೇ (2-4-17) ಆಮಂತ್ರಣೇ ಚ । 2-4-18 ಶೇಷಾಃ ಕರ್ಮಕರಣ ಸಂಪ್ರದಾನಾಪಾದಾನ ಸ್ವಾಮ್ಯಾದ್ಯಧಿಕರಣೇಷು । 2-4-19

ಕಾತಂತ್ರ ವ್ಯಾಕರಣ ನನಗೆ ಸಿಕ್ಕಲಿಲ್ಲ. ಡಾ|| ಜಾನಕೀಪ್ರಸಾದ ದ್ವಿವೇದಿಗಳ 'ಕಾತಂತ್ರ ವ್ಯಾಕರಣ ವಿಮರ್ಶಃ'(ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸೀ 1975) ಎಂಬ ಗ್ರಂಥದಿಂದ ಕಾತಂತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಸಂಗ್ರಹಿಸಿದ್ದೇನೆ.

(v) ಚಾಂದ್ರ ಸೂತ್ರ 2-1-95. Chandra Vyakarana of Chandragomin, Part I (Ed. Kshitish Chandra Chatterjee (Deccan College, Poona 1953) ಇದರ ಕಾಲ ಕ್ರಿ. ಶ. 500ಕ್ಕೆ ಹಿಂದೆ.

(vi) ಶಾಕಟಾಯನ ವ್ಯಾಕರಣಂ, ಅಮೋಘ ವೃತ್ತಿಸಮಲಂಕೃತಂ - ಭಾರತೀಯ ಜ್ಞಾನಪೀಠ ಪ್ರಕಾಶನ, 1971. ಈ ವ್ಯಾಕರಣದ ಕಾಲ ಕ್ರಿ. ಶ. 9ನೇ ಶತಮಾನ.

18. ಮುಂದಿನ ಸಂಸ್ಕೃತ ವೈಯಾಕರಣರು ಮುನಿತ್ರಯರೆಂದು ಕರೆದಿರುವ ಪಾಣಿನಿ, ಕಾತ್ಯಾಯನ, ಪತಂಜಲಿಗಳಿಗೆ ಪಾಣಿನಿ ವ್ಯಾಕರಣ ಸಂಪ್ರದಾಯದಲ್ಲಿ ಅಗ್ರಸ್ಥಾನ; ಅದರ ಮುಂದಿನ ಸ್ಥಾನವೇ ಭರ್ತೃಹರಿಯದು. ಇವನ ವಾಕ್ಯಪದೀಯದಲ್ಲಿ ವ್ಯಾಕರಣ ವಿಷಯಗಳ ದಾರ್ಶನಿಕ ಮತ್ತು ತಾತ್ತ್ವಿಕ ವಿವೇಚನೆಯಿದೆ. ವೈಯಾಕರಣರೂ ದಾರ್ಶನಿಕರೂ (ವೈದಿಕ ಮತ್ತು ಅವೈದಿಕರು ಸಹ) ತಮ್ಮ ಗ್ರಂಥಗಳಲ್ಲಿ ಭರ್ತೃಹರಿಯ ಅನೇಕ ಕಾರಿಕೆಗಳನ್ನು ಉದಾಹರಿಸಿದ್ದಾರೆ. ಇವನು ಪತಂಜಲಿ ಮಹಾಭಾಷ್ಯಕ್ಕೆ ವ್ಯಾಖ್ಯಾನವನ್ನೂ ಬರೆದಿದ್ದಾನೆ. ಅದರ ಸ್ವಲ್ಪ ಭಾಗ ಮಾತ್ರ ದೊರಕಿ ಮಹಾಭಾಷ್ಯ ದೀಪಿಕೆ ಎಂಬ ಹೆಸರಿನಲ್ಲಿ ಅಚ್ಚಾಗಿದೆ.
ಮಹಾಭಾಷ್ಯದ ಪ್ರಖ್ಯಾತ ವ್ಯಾಖ್ಯಾನಕಾರನಾದ ಕೈಯಟನು ತಾನು ''ಅಗಾಧವಾದ ಮಹಾಭಾಷ್ಯ ಸಮುದ್ರವನ್ನು ಭರ್ತೃಹರಿಯು ಕಟ್ಟಿದ ಸುದೃಢವಾದ ಗ್ರಂಥಸೇತುವಿನ ಮೇಲೆ ಹೆಳವನಂತೆ ಮೆಲ್ಲಗೆ ತೆವಳುತ್ತಾ ದಾಟಿದೆ'' ಎಂದು ಹೇಳಿಕೊಂಡಿದ್ದಾನೆ -

ಸಾಮಾನ್ಯಂ ಕಾರಕಂ ತಸ್ಯ ಸಪ್ತಾದ್ಯಾ ಭೇದಯೋನಯಃ।
ಷಟ್ ಕರ್ಮಾಖ್ಯಾದಿ ಭೇದೇನ ಶೇಷ ಭೇದಸ್ತು ಸಪ್ತಮೀ॥

ತಾತ್ಪರ್ಯ - (ಸಾಧನ) ಸಾಮಾನ್ಯವೇ ಕಾರಕ. ಅದರ ಭೇದಗಳಿಗೆ, ಪ್ರಧಾನವಾದ ಏಳು (ಕಾರಕಶಕ್ತಿಗಳು) ಕಾರಣ, ಕರ್ಮ ಮೊದಲಾದ ಹೆಸರುಳ್ಳ ಭೇದಗಳು ಆರು. **ಶೇಷ**ವೆಂಬುದು ಏಳನೆಯದು .

ಭರ್ತೃಹರಿಯು, ಮಹಾಭಾಷ್ಯದಲ್ಲಿ ಬೀಜರೂಪದಲ್ಲಿ ಕಾಣಬರುವ ಎಷ್ಟೋ ವಿಷಯಗಳನ್ನು ತನ್ನ ಕಾರಿಕೆಗಳಲ್ಲಿ ವಿಸ್ತರಿಸಿ ಹೇಳಿರುವುದು ಕಂಡುಬರುತ್ತದೆ. ಇಲ್ಲಿ "ಕರ್ಮಾದೀನಾಮವಿವಕ್ಷಾ ಶೇಷಃ" ಎಂಬ ಭಾಷ್ಯವಾಕ್ಯವನ್ನು ಅನುಸರಿಸದೆ "ಕರ್ಮಾದಿಭ್ಯೋ ಯೋಽನ್ಯೋ ಅರ್ಥಾ ಸ ಶೇಷಃ" (ಕರ್ಮಾದಿಗಳಿಂದ ಭಿನ್ನವಾದ ಅರ್ಥವೇ ಶೇಷ) ಎಂಬರ್ಥವನ್ನು ಶೇಷಕ್ಕೆ ಸ್ವೀಕರಿಸಿರುವುದಲ್ಲದೆ 'ಶೇಷ'ಕ್ಕೆ ಕಾರಕತ್ವವನ್ನೂ ಹೇಳಿದ್ದಾನೆ. ಆದರೆ ಉಳಿದ ಕಾರಕಗಳ ಸಾಲಿನಲ್ಲಿ ಇದನ್ನು ಸೇರಿಸದೆ ಏಳನೆಯದೆಂದು ಹೇಳಿರುವುದರಿಂದ ಶೇಷಕಾರಕ್ಕೆ ಗೌಣಸ್ಥಾನ ಕೊಟ್ಟಂತೆ ಕಾಣುತ್ತದೆ.

ಮುಂದೆ ಇದೇ ಸಮುದ್ದೇಶದಲ್ಲಿ ಶೇಷಾಧಿಕಾರದ ಮೊದಲ ಕಾರಿಕೆ :

ಸಂಬಂಧಃ ಕಾರಕೇಭ್ಯೋಽನ್ಯ ಃ ಕ್ರಿಯಾಕಾರಕಪೂರ್ವಕಃ।
ಶ್ರುತಾಯಾಮಶ್ರುತಾಯಾಂ ವಾ ಕ್ರಿಯಾಯಾಂ ಸೋಽಭಿಧೀಯತೇ ॥156॥

(ತಾತ್ಪರ್ಯ) ಕ್ರಿಯೆ ಉಕ್ತವಾಗಿರಲಿ ಅಥವಾ ಉಕ್ತವಾಗಿಲ್ಲದಿರಲಿ ಕ್ರಿಯಾ ಕಾರಕ ಸಂಬಂಧವನ್ನು ಅನುಸರಿಸುವ ಆದರೆ (ಕರ್ಮವೇ ಮೊದಲಾದ ಆರು) ಕಾರಕಗಳಿಂದ ಭಿನ್ನವಾದ (ಶೇಷರೂಪವಾದ) ಸಂಬಂಧವು (ಈಗ) ಹೇಳಲ್ಪಡುತ್ತದೆ.

ವಾಕ್ಯಪದೀಯದ ವ್ಯಾಖ್ಯಾನಕಾರ ಹೇಲಾರಾಜನು[19] ಮೇಲಿನ ಕಾರಿಕೆಯ ವ್ಯಾಖ್ಯಾನ ವನ್ನು "ಇದಾನೀಂ ಷಷ್ಠ್ಯರ್ಥಃ ಸಪ್ತಮಃ ಕಾರಕಭೇದೋ ವಿಚಾರ್ಯತೇ" (ಈಗ ಷಷ್ಠಿಯ

ಭಾಷ್ಯಾಬ್ಧಿಃ ಕ್ವಾತಿಗಂಭೀರಃ ಕ್ವಾಹಂ ಮಂದಮತಿಸ್ತತಃ।
ಛಾತ್ರಾಣಾಮುಪಹಾಸ್ಯತ್ವಂ ಯಾಸ್ಯಾಮಿ ಪಿಶುನಾತ್ಮನಾಮ್ ॥

ತಥಾಪಿ ಹರಿಬದ್ಧೇನ ಸಾರೇಣ ಗ್ರಂಥ ಸೇತುನಾ
ಕ್ರಮಮಾಣಃ ಶನೈಃ ಪಾರಂ ತಸ್ಯ ಪ್ರಾಪ್ತಾಸ್ಮಿ ಪಂಗುವತ್ ॥

ಭರ್ತೃಹರಿಯ ಕಾಲ ಕ್ರಿ. ಶ. 6ನೆಯ ಶತಮಾನಕ್ಕೆ ಹಿಂದೆ. ನೋಡಿ, Bhartrhari by K. A. Subramania Iyer (Deccan College, Poona 1969), ಪುಟ 2.

19. ಹೇಲಾರಾಜನ ಕಾಲ 10ನೇ ಶತಮಾನದ ಪೂರ್ವಾರ್ಧ. ಮೇಲಿನ ಗ್ರಂಥ, ಪುಟ 40.

ಅರ್ಥವಾದ ಇಳನೇ ಕಾರಕಭೇದವನ್ನು ವಿವೇಚಿಸಲಾಗುತ್ತದೆ) ಎಂಬ ಅವತರಣಿಕೆ ಯೊಡನೆ ಪ್ರಾರಂಭಿಸಿ, ಕಾರಿಕೆಯಲ್ಲಿ 'ಕ್ರಿಯಾಕಾರಕ ಸಂಬಂಧವನ್ನು ಅನುಸರಿಸುವ' ಎಂದು ಹೇಳಿರುವುದರಿಂದ ಕಾರಿಕಾಕಾರನು ಶೇಷಕ್ಕೆ ಕಾರಕತ್ವವನ್ನು ಕೊಟ್ಟಿದ್ದಾನೆ - ಎಂದು ಮುಂದುವರಿಸಿ ಅಶ್ರೂಯಮಾಣ ಕ್ರಿಯೆ (ಉಕ್ತವಾಗಿಲ್ಲದ ಕ್ರಿಯೆ) ಮತ್ತು ಶ್ರೂಯಮಾಣ ಕ್ರಿಯೆ (ಉಕ್ತವಾದ ಕ್ರಿಯೆ)ಗಳನ್ನು ಅನುಸರಿಸುವ ಸಂಬಂಧಗಳನ್ನು ಹೀಗೆ ವಿವರಿಸುತ್ತಾನೆ :

ಅಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಂಬಂಧ. 'ರಾಜ್ಞಃ ಪುರುಷಃ, ವೃಕ್ಷಸ್ಯ ಶಾಖಾ,ಪಶೋಃ ಪಾದಃ ,ಪಿತುಃ ಪುತ್ರಃ' ಇವುಗಳಲ್ಲಿ ಕ್ರಿಯೆಯನ್ನು ಹೇಳಿಲ್ಲವಾದರೂ ಸ್ವಸ್ವಾಮಿ ಭಾವ, ಅವಯವ ಅವಯವೀ ಭಾವ, ಜನ್ಯ ಜನಕ ಭಾವ ಸಂಬಂಧಗಳು ದಾನ, ಸ್ಥಿತಿ (ಇರುವಿಕೆ), ಜನನ ಕ್ರಿಯೆಗಳಿಂದ ಉಂಟಾಗಿರುವುದರಿಂದ, ಆ ಕ್ರಿಯೆಗಳಿಂದ ಉಂಟಾದ ಹಿಂದಿನ ಕಾರಕತ್ವ ಮುಂದೆಯೂ ಅನುಗತವಾಗಿ ಶೇಷವು ಕಾರಕವೇ ಆಗುತ್ತದೆ. ರಾಜನು ಸೇವಕನಿಗೆ ಧನವನ್ನು ಕೊಡುವುದರಿಂದ ಸ್ವಾಮಿಭೃತ್ಯ ಸಂಬಂಧವುಂಟಾಗುತ್ತದೆ. ದಾನಕ್ರಿಯೆಗೆ ಕರ್ತೃ ಮತ್ತು ಸಂಪ್ರದಾನರೂಪವಾಗಿ ಉಂಟಾದ ಕ್ರಿಯಾಕಾರಕ ಸಂಬಂಧವು ಕಾರಣ; ಅನಂತರ ಸ್ವಸ್ವಾಮಿರೂಪವಾದ ಶೇಷಸಂಬಂಧವು ಫಲ.

ಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಂಬಂಧ. ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್ - ಇತ್ಯಾದಿ ಪ್ರಯೋಗಗಳಲ್ಲಿ ಕಂಡುಬರುವ ಸಂಬಂಧವು ಕಾರಕಭೇದವೇ. ಇಲ್ಲಿ ಮಾತೃ, ಮಾಷ ಇವು ನಿಜವಾಗಿ ಕರ್ಮಕಾರಕಗಳೇ ಆದರೂ ಆ ವಿಶೇಷ ಸಂಬಂಧವನ್ನು ಹೇಳುವ ಉದ್ದೇಶವಿಲ್ಲದೆ ಸಾಮಾನ್ಯಸಂಬಂಧವನ್ನು ಮಾತ್ರ ಹೇಳಿರುವುದರಿಂದ, ಆ ಸಾಮಾನ್ಯ ಸಂಬಂಧವೂ ಕ್ರಿಯಾಕಾರಕ ಸಂಬಂಧವೇ. ಹಿಂದಿನ ಬೇರೊಂದು ಕ್ರಿಯೆಯನ್ನು ಅನುಸರಿಸಿ ಬಂದ ಸಂಬಂಧವಲ್ಲ. ಹಾಗೆಯೇ 'ಸರ್ಪಿಷೋ ಜಾನೀತೇ' ಕರಣಕಾರಕವಾದರೂ ಆ ಸಂಬಂಧ ಅವಿವಕ್ಷಿತವಾಗಿ ಸಾಮಾನ್ಯ ಸಂಬಂಧ ಮಾತ್ರ ಉಕ್ತವಾಗಿದೆ. ಹೀಗೆ ಕರ್ಮಕರಣ ಕಾರಕಭೇದಗಳೇ ಅವಿವಕ್ಷಿತವಾಗಿ 'ಶೇಷ' ಭೇದ ವಾಯಿತು. ಈ ಶೇಷವು ಕಾರಕವೇ.[20]"

---

20 (i) ಕ್ರಿಯಾಕಾರಕಪೂರ್ವಕಃ ಇತ್ಯನೇನ ಕಾರಕತ್ವಂ ವ್ಯಾಚಷ್ಟೇ ಶೇಷಸ್ಯ ।
ತಥಾ ಹಿ 'ರಾಜ್ಞಃ ಪುರುಷಃ, ವೃಕ್ಷಸ್ಯ ಶಾಖಾ, ಪಶೋಃ ಪಾದಃ, ಪಿತುಃ ಪುತ್ರಃ'
ಇತ್ಯಾದಾವಶ್ರೂಯಮಾಣ ಕ್ರಿಯಾವಿಷಯೇ ಸ್ವಸ್ವಾಮಿಭಾವಾವಯವಾವ
ಯವಿಭಾವಜನ್ಯಜನಕಭಾವಾದೌ ಸಂಬಂಧೇ ದದಾತಿ ಸ್ಥಿತಿಜನ್ಯಾದಿ ಕ್ರಿಯಾ
ಪ್ರಭಾವಿತೇ ಪೂರ್ವಭಾವಿ ಕಾರಕತ್ವಂ ಉತ್ತರಾವಸ್ಥಾಯಾಮಪಿ ಅನುಗತಮಿತಿ
ಭವತ್ಯೇವ ಶೇಷಃ ಕಾರಕಂ ।

ಇದೇ ಸಮುದ್ದೇಶದ 129ನೇ ಕಾರಿಕೆಯ ವ್ಯಾಖ್ಯಾನದಲ್ಲಿ ಹೇಲಾರಾಜನು ಸಂಪ್ರದಾನ ವೆಂಬ ಶಬ್ದವನ್ನು ವಿವರಿಸುತ್ತಾ, "ದಾನವು ತ್ಯಾಗರೂಪವಾದದ್ದು. ಆ ದಾನಕ್ರಿಯೆಯ ಫಲವಾಗಿ ದಾನ ಕೊಟ್ಟು ವಸ್ತುವಿನ ಮೇಲಿನ ಸ್ವಾಮ್ಯವು ಕರ್ತೃವಿನಿಂದ ಸಂಪ್ರದಾನಕ್ಕೆ ಹೋಗುತ್ತದೆ"ಯೆಂದು ಹೇಳಿ ಈ ಉದಾಹರಣೆಗಳನ್ನು ಕೊಟ್ಟಿದ್ದಾನೆ :-

1. ಉಪಾಧ್ಯಾಯಾಯ ಗಾಂ ದದಾತಿ (ಗುರುವಿಗೆ ಹಸುವನ್ನು ಕೊಡುತ್ತಾನೆ). ಇಲ್ಲಿ ಹಸುವಿನ ಸ್ವಾಮ್ಯವು ಕರ್ತೃವಿನಿಂದ ಸಂಪ್ರದಾನ ಕಾರಕ ಗುರುವಿಗೆ ಹೋಗು ತ್ತದೆ.

2. ಕನ್ಯಾಂ ದದಾತಿ (ಕನ್ಯೆಯನ್ನು ದಾನಮಾಡುತ್ತಾನೆ). ಇಲ್ಲಿ ಕರ್ತೃ ಮತ್ತು ಕನ್ಯೆಯರ ಜನ್ಯಜನಕ ಭಾವಸಂಬಂಧ ಮುಂದೆಯೂ ಇದ್ದರೂ, ಕನ್ಯೆಯ ಸ್ವಾಮಿತ್ವ ದಾನ ಪಡೆಯುವವನಿಗೆ ಹೋಗುತ್ತದೆ. (ಆದುದರಿಂದ ದಾನ ಪಡೆಯುವವನಿಗೆ ಸಂಪ್ರದಾನತ್ವ).

ರಾಜಾ ಹಿ ಪುರುಷಾಯ ದದಾತಿ ಯತಸ್ತತೋ ರಾಜ್ಞಃ ಪುರುಷ ಇತಿ ಸ್ವಸ್ವಾಮಿ ಭಾವಃ ಅವತಿಷ್ಠತಿ । ತತ್ರ ಕ್ರಿಯಾಕಾರಕ ಸಂಬಂಧ : ಕಾರಣಭೂತಃ ಶೇಷ ಸಂಬಂಧಸ್ತು ಫಲಭೂತಃ । (ಪುಟ 366)

ಶ್ರೂಯಮಾಣ ಕ್ರಿಯಾ ವಿಷಯಸ್ತು ಸಂಬಂಧಃ ಕಾರಕಭೇದ ಏವ, ಅವಿವಕ್ಷಿತ ಕರ್ಮಾದಿ ವಿಶೇಷಃ ಸಂಬಂಧ ಸಾಮಾನ್ಯ ಸ್ವಭಾವಃ ಕ್ರಿಯಾಕಾರಕ ಸಂಬಂಧ ಏವ ಸ ಇತಿ ನ ತತ್ಪೂರ್ವಕಃ ? ....**ಕಾರಕೇಭ್ಯೋಽನ್ಯಃ ಅಯಂ ಶೇಷಃ ಕಾರಕ ಏವ** । ತಥಾ ಚೋಪಯೋಗ ಗ್ರಹಣಂ ಅರ್ಥವದಿತ್ಯುಕ್ತಂ ।, ಏವಂ ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್, ಸರ್ಪಿಷೋ ಜಾನೀತೇ ಇತ್ಯಾದೌ ಕರ್ಮಾದಿ ಕಾರಕಭೇದ ಏವ ಅವಿವಕ್ಷಿತ ತದ್ರೂಪಃ ಶೇಷ ಇತ್ಯುಕ್ತಂ । ಪುಟ 368, 369)

-ವಾಕ್ಯಪದೀಯಂ [ತೃತೀಯಂ ಕಾಂಡಂ, ದ್ವಿತೀಯೋ ಭಾಗಃ], ಪಂಡಿತ ರಘುನಾಥ ಶರ್ಮಣಾ ವಿರಚಿತಯಾ ಅಂಬಾಕರ್ತ್ರೀ ವ್ಯಾಖ್ಯಯಾ ಸಮಲಂಕೃತಂ.

Sampurnanand Sanskrit Vishvavidyalaya, Varanasi, 1979.

(ii) ಮಾತುಃ ಸ್ಮರತಿ, ನ ಮಾಷಾಣಾಮಶ್ನೀಯಾತ್, ಸರ್ಪಿಷೋ ಜಾನೀತೇ ಇತ್ಯಾದೌ ಯಥಾಕ್ರಮಂ ಪ್ರಥಮ ದ್ವಿತೀಯಯೋಃ ಕರ್ಮಕಾರಕಭೇದಃ, ತೃತೀಯೇ ಕರಣರೂಪಃ ಕಾರಕಭೇದ ಏವ ಅವಿವಕ್ಷಿತ ಕರ್ಮಕರಣಾದಿ ಭೇದ ರೂಪಃ ಶೇಷ ಇತ್ಯುಕ್ತಂ। (ಅಂಬಾ ಕರ್ತ್ರೀ ವ್ಯಾಖ್ಯಾನ) ಮೇಲಿನ ಗ್ರಂಥ, ಪುಟ 369.

3. ಖಂಡಿಕೋಪಾಧ್ಯಾಯಃ ತಸ್ಮೈ ಚಪೇಟಾಂ ದದಾತಿ (ಕ್ರುದ್ಧನಾದ ಗುರುವು ಅವನಿಗೆ ಕೆನ್ನೆಯೇಟು ಕೊಡುತ್ತಾನೆ). ಇಲ್ಲಿ ಕೆನ್ನೆಯೇಟಿನ ಮೇಲೆ, ವಾಸ್ತವವಾಗಿ, ಯಾರ ಸ್ವಾಮ್ಯವೂ ಇಲ್ಲದಿದ್ದರೂ ಅದನ್ನು ಕೊಡುವ ಗುರು ಕರ್ತೃ. ಆ ಏಟಿನಿಂದಾಗಿ ಶಿಷ್ಯನು ಅಭ್ಯಾಸನಿರತನಾಗುವುದರಿಂದ ಏಟಿನ ಫಲ ಅವನಿಗೆ ಹೋಗುತ್ತದೆ.
4. ರಜಕಸ್ಯ ವಸ್ತ್ರಂ ದದಾತಿ (ಅಗಸನಿಗೆ ಬಟ್ಟೆಯನ್ನು ಕೊಡುತ್ತಾನೆ). ಇಲ್ಲಿ ವಸ್ತ್ರದ ಸ್ವಾಮ್ಯ ಕರ್ತೃವಿನಲ್ಲೇ ಉಳಿದಿದ್ದು ಅಗಸನಿಗೆ ಹೋಗುವುದಿಲ್ಲವಾದ ಕಾರಣ 'ದದಾತಿ' ಎಂಬ ಪದದ ಪ್ರಯೋಗ ಗೌಣ. ಅದಕ್ಕೆ ದಾನವೆಂಬ ಅರ್ಥವಿಲ್ಲ.[21] (ಈ ಬಗೆಯ ಮತ್ತೊಂದು ಪ್ರಯೋಗ 'ದೇವದತ್ತಸ್ಯ ವಸ್ತ್ರಂ ದರ್ಶಯತಿ'- ದೇವದತ್ತನಿಗೆ ಬಟ್ಟೆಯನ್ನು ತೋರಿಸುತ್ತಾನೆ.) (ಜೈನೇಂದ್ರ ಮಹಾವೃತ್ತಿ),

ಮೊದಲಿನ ಮೂರು ಉದಾಹರಣೆಯಲ್ಲಿ ಸಂಪ್ರದಾನತ್ವವಿರುವುದರಿಂದ ಚತುರ್ಥೀ ವಿಭಕ್ತಿ ಪ್ರಯೋಗಕ್ಕೆ ಅವಕಾಶವಿದೆ. ನಾಲ್ಕನೆಯ ಉದಾಹರಣೆಯಲ್ಲಿ ರಜಕನಿಗೆ ಸಂಪ್ರದಾನತ್ವ ವಾಗಲೀ ಕರ್ತೃ, ಕರ್ಮ, ಕರಣ, ಅಪಾದಾನ, ಅಧಿಕರಣತ್ವವಾಗಲೀ ಇಲ್ಲ. ಆದುದರಿಂದ ಇಲ್ಲಿ ಷಷ್ಠೀಪ್ರಯೋಗವಾಗಿದೆ. ಇಲ್ಲಿ ಅವಿವಕ್ಷಿತ ಕರ್ಮಾದಿ ಕಾರಕತ್ವವಿಲ್ಲ. ಅವುಗಳೆಲ್ಲಕ್ಕಿಂತ ಭಿನ್ನವಾದ ಬೇರೆ ಬಗೆಯ ಸಂಬಂಧವಿದೆ. ರಜಕನಿಗೆ ಕ್ರಿಯಾನ್ವಯಿತ್ವವಿರುವುದರಿಂದ ಕಾರಕತ್ವವಿದೆ. ಇದು

---

21 ಅನ್ವರ್ಥತ್ವಾತ್ ಸಂಪ್ರದಾನಶಬ್ದಸ್ಯ 'ತ್ಯಾಗಾಂಗಂ' ಇತಿ ಲಕ್ಷಣ ಲಾಭಃ ।
ತ್ಯಾಗೋ ದೀಯಮಾನಸ್ಯ ಸ್ವತ್ವನಿವೃತ್ತ್ಯಾಪರಸ್ವತ್ವಾಪಾದನಂ ॥

- ಮೇಲಿನ ಗ್ರಂಥ, ಪುಟ 313

'ಉಪಾಧ್ಯಾಯಾಯ ಗಾಂ ದದಾತಿ' ಇತ್ಯಾದೌ ತ್ಯಜ್ಯಮಾನಂ ಕರ್ಮ ಗವಾದಿ ಉಪಾಧ್ಯಾಯಾದಿನಾ ಸಂಬಧ್ಯತೇ, ತದಭಿಪ್ರಾಯೇಣೈವ ತ್ಯಾಗಾತ್ ।....ತಥಾ ಚ ತ್ಯಾಗೋಪಕಾರಿತ್ವಾತ್ ತ್ಯಾಗಾಂಗಂ ಭವತ್ಯೇವ ಕಾರಕಂ ಸಂಪ್ರದಾನಂ । - ಅದೇ ಪುಟ 314

'ಕನ್ಯಾಂ ದದಾತಿ' ಇತಿ ಜನ್ಯಜನಕ ಭಾವಾವ್ಯಾವೃತ್ತಾವಪಿ ಸ್ವಸ್ವಾಮಿಸಂಬಂಧಸ್ಯ ನಿವೃತ್ತೇರ್ಮುಖ್ಯ ಏವ ದದಾತ್ಯರ್ಥಃ । 'ಖಂಡಿಕೋಪಾಧ್ಯಾಯಸ್ತಸ್ಮೈ ಚಪೇಟಾಂ ದದಾತಿ' ಇತ್ಯಾದೌ ವಸ್ತುತಃ ಅಸತ್ಯಪಿ ಚಪೇಟಾದಿ ಸ್ವಾಮ್ಯೇ ತದುಪಕಾರಿತಯಾ ದಾತುಃ ಸ್ವಾಮಿತ್ವಾಭಿ ಸಂಧಿರಸ್ತ್ಯೇವ । ಯದ್ಯಪಿ ಪ್ರತಿಕೂಲ ರೂಪತ್ವಾತ್ ಚಪೇಟಾಯಾಃ ತದಾನೀಮುಪಯೋಗೋ ನಾಸ್ತಿ, ತಥಾಪಿ ಫಲದ್ವಾರೇಣಾಸ್ತ್ಯೇವ ಪರೋಪಯೋಗಿತ್ವಂ । ಚಪೇಟಾಸಹತ್ವೇ ಶಾಸ್ತ್ರಾಭ್ಯಾಸ ಯೋಗ್ಯತ್ವಾತ್ ಫಲಾವಾಪ್ತೇಃ ।

-ಪುಟ 316

'ರಜಕಸ್ಯ ವಸ್ತ್ರಂ ದದಾತಿ' 'ಘ್ನತಃ ಪೃಷ್ಠಂ ದದಾತಿ' ಇತ್ಯಾದೌ ತು ದದಾತ್ಯರ್ಥೋ ನಾಸ್ತಿ । ತ್ಯಾಗೋ ಹಿ ಸಃ । ತೇನ ಚ ಹಾನಾತ್ಮಕೇನ ಮಮತಾವಿಚ್ಛೇದಸ್ಯ ಆಕ್ಷೇಪಾದೇವ ಪರೋಪ ಯೋಗಾಭಿಸಂಧಿನಾ ಪರಸ್ವತ್ವಾಪಾದನಮಪಿ ಸ್ವೀಕೃತಂ ।ಅತ್ರ ಚ ತದಭಾವ ಇತಿ ಗೌಣೋಽಯಂ ದದಾತೇಃಪ್ರಯೋಗಃ - ಅದೇ ಪುಟ 315

ಮೇಲೆ ಹೇಳಿದ ಅಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಂಬಂಧ ಮತ್ತು ಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಅವಿವಕ್ಷಿತ ಕರ್ಮಾದಿ ಸಂಬಂಧಗಳಿಂದ ಭಿನ್ನವಾದ ಮೂರನೆಯ ಬಗೆಯ ಶೇಷಕಾರಕ.

ಭರ್ತೃಹರಿಯ ಕಾರಿಕೆಗಳನ್ನು ಪ್ರಮಾಣವಾಕ್ಯಗಳಾಗಿ ಬಹಳವಾಗಿ ಉದಾಹರಿಸಿರುವ ಮುಂದಿನ ವೈಯಾಕರಣರು ಯಾರೂ, ಶೇಷಕ್ಕೆ ಕಾರಕತ್ವವನ್ನು ಹೇಳುವ ಭರ್ತೃಹರಿಯ ಅಭಿಪ್ರಾಯವನ್ನು, ಅದು ಯುಕ್ತಿಯುಕ್ತವಾಗಿದ್ದರೂ, - ಬಹುಶಃ ಅದು ಅಪಾಣಿನೀಯವೆಂಬ ಕಾರಣದಿಂದ - ಅನುಮೋದಿಸಲಿಲ್ಲ.ಆದರೆ ಗಮನಾರ್ಹವಾದ ವಿಷಯವೆಂದರೆ ಅದನ್ನು ಯಾರೂ ಖಂಡಿಸಿರುವಂತೆಯೂ ಕಾಣುವುದಿಲ್ಲ.

ಭಾಷಾಭೂಷಣಕಾರನು, ವಾಕ್ಯಪದೀಯ ಮತ್ತು ಹೇಲಾರಾಜನ ವ್ಯಾಖ್ಯಾನಗಳಿಂದ ಪ್ರಭಾವಿತನಾಗಿ, ಏಳು ಕಾರಕಗಳನ್ನು ಹೇಳಿರಬಹುದೆಂದು ತೋರುತ್ತದೆ. ಆದರೆ ಶ್ರೂಯಮಾಣ ಕ್ರಿಯೆಯನ್ನು ಅನುಸರಿಸುವ ಸಾಮಾನ್ಯ ಸಂಬಂಧ ಸೂಚಕ ಶೇಷಕಾರಕ ಮತ್ತು ಮೂರನೆಯ ಬಗೆಯ ಶೇಷಕಾರಕಗಳ (ಮೇಲಿನ) ಉದಾಹರಣೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದಾಗ ಶೇಷಷಷ್ಠಿಗೆ ಬದಲು ದ್ವಿತೀಯಾ, ತೃತೀಯಾ, ಚತುರ್ಥೀ ವಿಭಕ್ತಿಗಳೇ ಬಂದು ಅವು ಕರ್ಮಾದಿಕಾರಕಗಳೇ ಆಗುವುದರಿಂದ, ಅಲ್ಲಿ ಶೇಷಕಾರಕದ ಪ್ರಸಕ್ತಿಯೇ ಬರುವುದಿಲ್ಲ. ಆದುದರಿಂದ ಭಾಷಾಭೂಷಣಕಾರನು (ಅಶ್ರೂಯಮಾಣ ಕ್ರಿಯೆಯನ್ನು ಅನುಸರಿಸಿರುವ) ಸ್ವಸ್ವಾಮಿಭಾವಾದಿ ಸಂಬಂಧದ ಷಷ್ಠಿಯನ್ನು ಮಾತ್ರ ಹೇಳಿ, ನಾಡೆಟಿಯಂ, ಮರದ ಕೊಂಬು ಇತ್ಯಾದಿ ಉದಾಹರಣೆಗಳನ್ನು ಕೊಟ್ಟು ಕಾರಕವನ್ನು 'ಸ್ವಾಮ್ಯ' ವೆಂದು ಕರೆಯಬೇಕಾಯಿತು.[22] ನಾಡೆಟಿಯ, ಮರದ ಕೊಂಬು ಇತ್ಯಾದಿಗಳನ್ನು ವಾಕ್ಯದಲ್ಲಿ ತಂದಾಗ ಷಷ್ಠೀವಿಭಕ್ತಿಯುತವಾದ ನಾಡು, ಮರ ಇವುಗಳ ಶೇಷಕಾರಕತ್ವವು ವಾಕ್ಯದಲ್ಲಿಲ್ಲದ ಬೇರೊಂದು ಕ್ರಿಯೆಗೆ ಸಂಬಂಧಿಸಿರುವುದೇ ಹೊರತು ವಾಕ್ಯದಲ್ಲಿನ ಕ್ರಿಯೆಗೂ ಇವುಗಳಿಗೂ ಕ್ರಿಯಾಕಾರಕ ಸಂಬಂಧವಿರುವುದಿಲ್ಲ. ಆದುದರಿಂದ ಸ್ವಾಮ್ಯರ್ಥವನ್ನು ಕಾರಕವೆಂದಿರುವುದು ಪ್ರಾಮಾದಿಕವೆಂಬ ವಿದ್ವಾನ್ ರಂಗನಾಥ ಶರ್ಮರ ಅಭಿಪ್ರಾಯವನ್ನು ತಳ್ಳಿಹಾಕುವುದು ಕಷ್ಟ.

ಈಗ ಷಷ್ಠೀವಿಭಕ್ತಿಯಿರುವ ಕೆಲವು ವಾಕ್ಯಗಳನ್ನು ಪರಿಶೀಲಿಸಬಹುದು :

---

22. ನೆನೆಯಬೇಕು ಹರಿಯ, ದುರ್ಜನರ ಸೇರದಿರು ಮನವೇ ಎಂಬ ಪ್ರಯೋಗಗಳಲ್ಲಿ ದ್ವಿತೀಯೆಯನ್ನುಪಯೋಗಿಸದೆ ಷಷ್ಠಿಯನ್ನುಪಯೋಗಿಸಿದೆ. ಇದನ್ನು ವಿಭಕ್ತಿಪಲ್ಲಟವೆನ್ನ ಬಹುದಾದರೂ ಈ ವಾಕ್ಯಗಳು 'ಮಾತುಃ ಸ್ಮರತಿ' ಎಂಬ ವಾಕ್ಯವನ್ನು ಹೋಲುತ್ತವೆ ಎಂಬುದು ಗಮನಾರ್ಹ. ಈ ಬಗೆಯ ಪ್ರಾಚೀನ ಪ್ರಯೋಗಗಳಿವೆಯೇ ?

(1) ನ್ಯಾಯಾಧೀಶನ ಭೃತ್ಯನು ಆಹಾರ ಪದಾರ್ಥಗಳನ್ನು ಮುಟ್ಟುಗೋಲು ಹಾಕಿಕೊಂಡನು. ಇಲ್ಲಿ ಭೃತ್ಯನು ಪದಾರ್ಥಗಳನ್ನು ಮುಟ್ಟುಗೋಲು ಹಾಕಿಕೊಂಡದ್ದು ನ್ಯಾಯಾಧೀಶನ ಪರವಾಗಿ, ಅವನ ಆಜ್ಞಾಧಾರಕನಾಗಿ. ಆದುದರಿಂದ ನ್ಯಾಯಾಧೀಶನಿಗೆ ಮುಟ್ಟುಗೋಲು ಹಾಕಿಕೊಳ್ಳುವ ಕ್ರಿಯೆಯೊಡನೆ ಪ್ರತ್ಯಕ್ಷವಾಗಿ ಸಂಬಂಧವಿಲ್ಲದಿದ್ದರೂ ಅವನ ಆಜ್ಞೆಯಿಂದ ಭೃತ್ಯನು ಕ್ರಿಯೆಯಲ್ಲಿ ಪ್ರವೃತ್ತನಾದುದರಿಂದ ನ್ಯಾಯಾಧೀಶ ಪ್ರಯೋಜಕ ಕರ್ತೃವೆನ್ನಬಹುದು.

(2) (i) ಅನ್ನದಲ್ಲಿ ತಲೆಯ ಕೂದಲು ಸಿಕ್ಕಿತು.

(ii) ತಲೆಯ ಕೂದಲುಗಳು ಉದುರುತ್ತಿವೆ.

ಮೊದಲನೆಯ ವಾಕ್ಯದಲ್ಲಿ ತಲೆಗೂ ಸಿಕ್ಕುವ ಕ್ರಿಯೆಗೂ ಸಂಬಂಧವಿಲ್ಲ. ಆದರೆ ಎರಡನೆಯ ವಾಕ್ಯದಲ್ಲಿ ಕೂದಲು ತಲೆಯಿಂದ ಉದುರುತ್ತಿರುವುದರಿಂದ, ಉದುರುವ ಕ್ರಿಯೆಗೆ ತಲೆ ಅಪಾದಾನಕಾರಕ. ಆದರೆ ಈ ಕಾರಕ ಅವಿವಕ್ಷಿತ ವಾಗಿ ಶೇಷ ಷಷ್ಠೀ ಪ್ರಯೋಗವಿರುವುದರಿಂದ, ತಲೆ ಶೇಷಕಾರಕವಾಗುತ್ತದೆ.

(3) (i) ಮರದ ಎಲೆಗಳು ಹಾರಾಡುತ್ತಿವೆ.

(ii) ಮರದ ಎಲೆಗಳೆಲ್ಲ ಉದುರಿಹೋದವು.

ಮೊದಲನೆಯ ವಾಕ್ಯದಲ್ಲಿ ಮರಕ್ಕೂ ಹಾರಾಡುವ ಕ್ರಿಯೆಗೂ ಸಂಬಂಧವಿಲ್ಲ. ಎರಡನೆಯ ವಾಕ್ಯದಲ್ಲಿ ಮರಕ್ಕೆ ಅಪಾದಾನತ್ವವಿದ್ದರೂ ಅದು ಅವಿವಕ್ಷಿತ ವಾಗಿರುವುದರಿಂದ, ಮರ ಶೇಷಕಾರಕ.

(4) (i) ಮಳೆ ಹನಿಹನಿಯಾಗಿ ಬೀಳುತ್ತಿದೆ.

(ii) ಮಳೆಯ ಹನಿಗಳು ಬೀಳುತ್ತವೆ.

ಈ ಎರಡು ವಾಕ್ಯಗಳೂ ಸಮಾನಾರ್ಥಕವಾದರೂ, ಮಳೆ ರಭಸದಿಂದ ಬೀಳದೆ ಹನಿಹನಿಯಾಗಿ ಬೀಳುತ್ತಿರುವುದರಿಂದ ವಿಷಯವನ್ನು ಒತ್ತಿ ಹೇಳುವುದಕ್ಕಾಗಿ ಎರಡನೆಯ ವಾಕ್ಯದಲ್ಲಿ ಹನಿಗಳಿಗೆ ಕರ್ತೃತ್ವ ಬಂದಿದೆ. ಆದರೆ ಮಳೆಯು ಹನಿಗಳಿಂದ ಭಿನ್ನವಲ್ಲ. ಬೀಳುತ್ತಿರುವುದು ಮಳೆಯೇ. ಆದುದರಿಂದ ಮಳೆಗೆ ಕರ್ತೃತ್ವವಿದ್ದೇ ಇದೆ. ಅದು ಇಲ್ಲಿ ಅವಿವಕ್ಷಿತವಾಗಿ ಶೇಷಕಾರಕತ್ವ ಬಂದಿದೆ ಎನ್ನಬಹುದು.

(5) (i) ರಾಮನು ಬಾಣದಿಂದ ಸಪ್ತಸಾಲವೃಕ್ಷಗಳನ್ನು ಭೇದಿಸಿದನು.

(ii) ರಾಮನ ಬಾಣವು ಸಪ್ತಸಾಲವೃಕ್ಷಗಳನ್ನು ಭೇದಿಸಿತು.

ಮೊದಲ ವಾಕ್ಯದಲ್ಲಿ ರಾಮ ಕರ್ತೃ, ಬಾಣ ಕರಣ. ಬಾಣಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವ ಎರಡನೆಯ ವಾಕ್ಯದಲ್ಲಿ ಬಾಣ ಕರ್ತೃ. ಆದರೆ ರಾಮನಿಲ್ಲದೆ ಬಾಣವು ಸಾಲವೃಕ್ಷಗಳನ್ನು ಭೇದಿಸಲಾರದು. ಆದುದರಿಂದ ರಾಮನಿಗೆ ಕ್ರಿಯಾನ್ವಯಿತ್ವವಿದೆ. ಕರ್ತೃತ್ವ ಅವಿವಕ್ಷಿತವಾಗಿರುವುದರಿಂದ ಶೇಷತ್ವ ಬಂದು 'ರಾಮ' ಶೇಷಕಾರಕವಾಯಿತು ಎನ್ನಬಹುದು.

ಮೇಲಿನ ಉದಾಹರಣೆಗಳಿಂದ ಕನ್ನಡದಲ್ಲಿಯೂ ಶೇಷಕಾರಕವುಂಟೆಂದು ಹೇಳಲು ಅಡ್ಡಿಯಿಲ್ಲ. ಪ್ರಾಚೀನ ಕಾವ್ಯಗಳಲ್ಲಿಯೂ ಹುಡುಕಿದರೆ ಇಂತಹ ಪ್ರಯೋಗಗಳು ಸಿಕ್ಕುವ ಸಾಧ್ಯತೆಯಿದೆ. ಭಾಷಾಭೂಷಣಕಾರನು ಹಾಗೆ ಹುಡುಕಿ ಪ್ರಯೋಗಗಳನ್ನು ಕೊಟ್ಟಿದ್ದು ಸ್ವಾಮ್ಯಕ್ಕೆ ಬದಲು ಶೇಷಕಾರಕವೆಂದೋ ಸಾಮಾನ್ಯಕಾರಕವೆಂದೋ ಹೇಳಿದ್ದರೆ, ಭರ್ತೃಹರಿ ಹೇಲಾರಾಜರಂತೆ ಏಳು ಕಾರಕಗಳನ್ನು ಹೇಳಿರುವುದು ಸಮಂಜಸವಾಗುತ್ತಿತ್ತು. ಆದರೆ ಅವನು ಶಬ್ದಸ್ಮೃತಿಕಾರ ಮತ್ತು ಕೇಶಿರಾಜರಂತೆ ಪೂರ್ವಕವಿ ಪ್ರಯೋಗಗಳನ್ನೇ ಉದಾಹರಣೆಗಳಾಗಿ ಕೊಡುವ ಪ್ರಯತ್ನವನ್ನು ಮಾಡಲಿಲ್ಲ. ಅವನ ಬಹುಪಾಲು ಉದಾಹರಣೆಗಳು ಒಂದೆರಡು ಪದಗಳೇ. ಪೂರ್ವಕವಿ ಪ್ರಯೋಗಗಳು ಇಪ್ಪತ್ತಕ್ಕೂ ಕಡಿಮೆ. ಅವುಗಳಲ್ಲೂ ಅರ್ಧದಷ್ಟು ಶಬ್ದಸ್ಮೃತಿಯಿಂದ ಎತ್ತಿಕೊಂಡವು.

ಕವಿರಾಜಮಾರ್ಗದಲ್ಲಿನ ನಿರೂಪಣೆ

ಕವಿರಾಜಮಾರ್ಗಕಾರನು ಆರು ಕಾರಕಗಳ ಹೆಸರುಗಳನ್ನು ಹೇಳಿಲ್ಲವಾದುದರಿಂದ ಅವು ಯಾವುವು ಎಂಬ ಚರ್ಚೆಗೆ ಅವಕಾಶವಾಯಿತು.

ಮದರಾಸು ಯೂನಿವರ್ಸಿಟಿಯ ಮುದ್ರಣದಲ್ಲಿ ಅದರ ಸಂಪಾದಕರು, "ಷಷ್ಠಿಗೆ ಕಾರಕತ್ವವಿಲ್ಲವಾಗಿ ಕಾರಕಗಳು ಆಱಾದುದರಿಂದ ಇಲ್ಲಿ 'ವಿಭಕ್ತಿಗಳಾಱನಿಕ್ಕುಂ' ಎಂದಿರಬಹುದೆಂದು ತೋರುವುದು. ಆದರೆ ಲಕ್ಷ್ಯದಲ್ಲಿ ಷಷ್ಠಿಯ ವಿಭಕ್ತಿಯನ್ನೂ ಕಾರಕಕ್ಕೆ ಉದಾಹರಣೆಯಾಗಿ[23] ಕವಿಯು ಕೊಟ್ಟಿರುವನು :-

ಆಧೀಶ್ವರನಾ ದಯೆ - ಈ ಕವಿಗೆ ಕಾರಕವೆಂದರೆ ನಾಮ ವಿಭಕ್ತಿಪ್ರತ್ಯಯವೆಂಬ

---

23. ಉದಾಹರಣ ಪದ್ಯ :-(ಪ್ರಥಮ ಪರಿಚ್ಛೇದದಲ್ಲಿ 115ನೆಯದು)

ನರಪತಿ ಬಂದನಾ ನೃಪನನೞ್ತಿಯೆ ಕಾಣ್ಬುದು ತನ್ನರೇಂದ್ರನಿಂ

ಅಭಿಪ್ರಾಯವಿದ್ದಂತೆ ಕಾಣುವುದು'' ಎಂದು ಹೇಳಿದ್ದಾರೆ.[24]

'ವಿಭಕ್ತಿಗಳಾಱನಿಕ್ಕುಂ'[25] ಎಂದು ಮೊದಲನೆಯ ವಾಕ್ಯದಲ್ಲಿ ಸೂಚಿಸಿರುವ ಊಹಿತಪಾಠವನ್ನು ಸಂಪಾದಕರೇ ಕೈ ಬಿಟ್ಟಿರುವುದು ಎರಡನೆಯ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಬೇರೆ ಯಾರೂ ಈ ಪಾಠವನ್ನು ಒಪ್ಪಿಲ್ಲ. ಷಷ್ಠಿಯ ವಿಭಕ್ತಿಯನ್ನೂ ಕಾರಕಕ್ಕೆ ಉದಾಹರಣೆ ಯಾಗಿ ಕವಿ ಕೊಟ್ಟಿದ್ದಾನೆಂದು ಹೇಳಿರುವುದು ನಿರಾಧಾರವಾದುದು. ಅವನು ಕೊಟ್ಟಿರುವುದು ಏಳು

ಧರಣಿ ಸನಾಥೆ ಭೂಪತಿಗೆ[a] ಕಪ್ಪವನೀಗವನೀಶಱನತ್ತಣಿಂ ।
ಪರಿಭವಮಂ ಕಟಲ್ಚುವುದಧೀಶ್ವರನಾ ದಯೆ ಸಾಲ್ದು ಮಾ ಮಹೀ
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತ ವಿಭಕ್ತ್ಯನುಕ್ರಮಂ ॥

---

a. ಇದು ಮದರಾಸು ಮುದ್ರಣದ ಮತ್ತು ಮುಳಿಯ ತಿಮ್ಮಪ್ಪಯ್ಯನವರ ಪಾಠ.
ಪಾಠಾಂತರಗಳು :
ಕಪ್ಪವನಿತ್ತವನೀಶ (ಪ್ರೊ ॥ ಕೆ. ಕೃಷ್ಣಮೂರ್ತಿ),
ಕಪ್ಪವನಿತ್ತವನೀಶ (ಪ್ರೊ ॥ ಎಂ. ವಿ. ಸೀತಾರಾಮಯ್ಯ) - ಈ ಪಾಠವನ್ನು ತೆಗೆದುಕೊಂಡರೆ ಚತುರ್ಥೀ ಪಂಚಮೀ ವಿಭಕ್ತಿಗಳೆರಡಕ್ಕೂ ಸೇರಿ ಒಂದೇ ಉದಾಹರಣವಾಕ್ಯವಾಗುತ್ತದೆ. ಆದರೆ ಉಳಿದ ವಿಭಕ್ತಿಗಳಿಗೆ ಪ್ರತಿಯೊಂದಕ್ಕೂ ಬೇರೆ ಬೇರೆ ಉದಾಹರಣ ವಾಕ್ಯಗಳಿವೆ.

24. ಕರ್ಣಾಟಕ ಕವಿರಾಜಮಾರ್ಗಂ (Ed. A. Venkata Rau & H. Sesha Aiyangar) ; University of Madras, Reprint 1973). 22ನೇ ಪುಟದಲ್ಲಿ ಅಡಿಟಿಪ್ಪಣಿ.

25. ಸಂಸ್ಕೃತ ವ್ಯಾಕರಣದಲ್ಲಿ 'ಸುಪ್' ಎಂದು ಕರೆಯಲ್ಪಡುವ 21 ಪ್ರತ್ಯಯಗಳನ್ನು ಹೇಳಿದೆ. ಇವುಗಳನ್ನು ಮೂರುಮೂರಾಗಿ ತೆಗೆದುಕೊಂಡು ಅವುಗಳಿಗೆ ವಿಭಕ್ತಿ ಎಂಬ ಸಂಜ್ಞೆ ಕೊಟ್ಟಿದೆ. ಪ್ರತಿಯೊಂದು ವಿಭಕ್ತಿಯಲ್ಲಿನ ಮೂರು ಪ್ರತ್ಯಯಗಳು ಕ್ರಮವಾಗಿ ಏಕ, ದ್ವಿ, ಬಹುವಚನಗಳಿಗೆ ಅನ್ವಯಿಸುತ್ತವೆ. ಕರ್ತೃ ಕರ್ಮಗಳು ಕ್ರಿಯಾಪದದಿಂದ ಅಭಿಹಿತವಾದಾಗ (ನಿರ್ದಿಷ್ಟವಾದಾಗ) ಪ್ರಥಮಾ ವಿಭಕ್ತಿಯಲ್ಲಿರುತ್ತವೆ. ಷಷ್ಠೀ ವಿಭಕ್ತಿ ಸಂಬಂಧ ಸೂಚಕ. ಉಳಿದ ವಿಭಕ್ತಿಗಳು ಕ್ರಮವಾಗಿ ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣಗಳನ್ನು ನಿರ್ದೇಶಿಸುತ್ತವೆ. (ಇದು ಸಾಮಾನ್ಯ ನಿಯಮ. ಆದರೆ ಒಂದೇ ಕಾರಕವು ಬೇರೆ ಬೇರೆ ವಿಭಕ್ತಿಗಳಿಂದ ನಿರ್ದಿಷ್ಟವಾಗುವುದು ಅಪೂರ್ವವಲ್ಲ.) ಹೀಗೆ ಸುಪ್ ಪ್ರತ್ಯಯಗಳು - ಕಾರಕಾದಿಗಳು ಮತ್ತು ವಚನಗಳು ಇವೆರಡನ್ನೂ ನಿರ್ದೇಶಿಸುತ್ತವೆ.

ಕನ್ನಡ ವ್ಯಾಕರಣದಲ್ಲಿ ಹೇಳಿರುವ ಸುಪ್ ಅಥವಾ ನಾಮವಿಭಕ್ತಿ ಪ್ರತ್ಯಯಗಳು ಏಳು ಮಾತ್ರ. ಇವು ಕಾರಕಾದಿಗಳನ್ನು ಮಾತ್ರ ನಿರ್ದೇಶಿಸುತ್ತವೆ. ಆಗಮಗಳೆಂದು ಕರೆಯಲ್ಪಟ್ಟಿರುವ ಗಳ್, ಅರ್, ಮೊದಲಾದುವು ವಾಸ್ತವವಾಗಿ ಬಹುವಚನ ಸೂಚಕ ಪ್ರತ್ಯಯಗಳು. ಪ್ರಥಮಾ ವಿಭಕ್ತಿ ಪ್ರತ್ಯಯವೆಂದು ಹೇಳಿರುವ 'ಮ್' ಅಕಾರಾಂತ ಶಬ್ದಗಳ ಏಕವಚನದಲ್ಲಿ ಮಾತ್ರ ಬರುತ್ತದೆ. ಆದುದರಿಂದ ಇದು ವಚನಸೂಚಕ ಪ್ರತ್ಯಯ. ಆದಕಾರಣ ನಿಜವಾದ ವಿಭಕ್ತಿಪ್ರತ್ಯಯಗಳು ಆರೇ.

ವಿಭಕ್ತಿಗಳಿಗೆ ಏಳು ಉದಾಹರಣೆಗಳು.

ವಿಭಕ್ತಿಗಳು ಪ್ರತ್ಯಯಗಳೇ ಹೊರತು ಪ್ರಕೃತಿಯಲ್ಲ. ವಿಭಕ್ತಿಯು ಕಾರಕವನ್ನು ನಿರ್ದೇಶಿಸುತ್ತದೆಯೇ ವಿನಾ ಅದೇ ಕಾರಕವಲ್ಲ.[26] ಹೀಗಿರುವಾಗ 'ಕವಿಗೆ ಕಾರಕವೆಂದರೆ ನಾಮವಿಭಕ್ತಿಪ್ರತ್ಯಯವೆಂಬ ಅಭಿಪ್ರಾಯ'ವೆಂದು ಹೇಳಿದರೆ ಕವಿಗೆ ಅಪಚಾರವೆಸಗಿದಂತಾಗುತ್ತದೆ.

ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಮತ್ತು ಪ್ರೊ|| ಎಂ. ವಿ. ಸೀತಾರಾಮಯ್ಯನವರ ಮತದಂತೆ ಕವಿರಾಜಮಾರ್ಗಕಾರನು ಹೇಳಿರುವ ಆರು ಕಾರಕಗಳು ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬದ್ಧಕಾರಕ (ಅಥವಾ ಷಷ್ಠೀಕಾರಕ) ಮತ್ತು ಅಧಿಕರಣ; ಹಾಗೂ ಕರ್ತೃ ಕಾರಕವಲ್ಲ.[27] ಇತರರು ಇದನ್ನು ವಿರೋಧಿಸಿದ್ದಾರೆ.[28]

ಹಾಗೆಂದಮಾತ್ರಕ್ಕೆ ಈ ವಿಶ್ಲೇಷಣೆಯಿಂದ ಕಂಡುಬರುವ ಅಭಿಪ್ರಾಯವನ್ನು ವಿಭಕ್ತಿಗಳ ವಿಷಯದಲ್ಲೂ ಸಂಸ್ಕೃತ ವ್ಯಾಕರಣವನ್ನೇ ಅನುಸರಿಸಿರುವ ಹಿಂದಿನ ಕನ್ನಡ ವ್ಯಾಕರಣಕಾರರಿಗೆ ಆರೋಪಿಸುವುದು ಎಂದಿಗೂ ಸರಿಯಾಗದು.

ವಿಭಕ್ತಿಗಳು ಆರೆಂದು ಹೇಳಿದ ಮಾತ್ರಕ್ಕೆ ಈ ಆರು ವಿಭಕ್ತಿಗಳೂ ಕ್ರಮವಾಗಿ ಆರು ಕಾರಕಗಳನ್ನು ನಿರ್ದೇಶಿಸುತ್ತವೆಯೆಂದಾಗಲೀ ಕರ್ತೃವು ಕಾರಕವಲ್ಲವೆಂದಾಗಲಿ ಅರ್ಥವಲ್ಲ.

26 (i) ವಿಭಕ್ತಿಶಬ್ದಸ್ಸುಪಾಂ ವಾಚಕಃ ವಿಭಾಗವಚನೋ ವಾ. -ಪಾಣಿನಿ ಸೂತ್ರದ (1-2-44 ಏಕ ವಿಭಕ್ತಿ ಚಾಪೂರ್ವನಿಪಾತೇ) ಕಾಶಿಕಾವೃತ್ತಿಗೆ ನ್ಯಾಸ ವ್ಯಾಖ್ಯಾನದಲ್ಲಿ.

(ii) ವಿಭಕ್ತಿ ಶಬ್ದಃ ಸುಪಾಂ ವಾಚಕಃ ಕಾರಕಶಕ್ತಿ ವಚನೋ ವಾ;
ವಿಭಜ್ಯತೇ ಅನಯಾ ಪ್ರಾತಿಪದಿಕಾರ್ಥ ಇತಿ ಕೃತ್ವಾ

- ಅದೇ ಸೂತ್ರದ ಪದಮಂಜರೀ ವ್ಯಾಖ್ಯಾನದಲ್ಲಿ.

(iii) ಮ್, ಅಮ್, ಇಮ್, ಕೆ, ಅತ್, ಅತ್, ಒಳ್ ಇತಿ ತಾಃ ಪುನಃ ಸಪ್ತ ವಿಭಕ್ತಯೋ ಜ್ಞಾತವ್ಯಾಃ --ಭಾಷಾಭೂಷಣದ 39ನೇ ಸೂತ್ರಕ್ಕೆ ವೃತ್ತಿ.

27 (i) ಪ್ರಥಮಾ ವಿಭಕ್ತಿ ಪ್ರತ್ಯಯಯುತ 'ಕರ್ತೃ' ಪದವೊಂದು ಮಾತ್ರ 'ಕಾರಕವಲ್ಲ' -ಉಳಿದುವೆಲ್ಲ ಕಾರಕಗಳು ಎಂಬ ಭಾವನೆ ಅವನಿಗೆ ಇದ್ದಂತೆ ತೋರುತ್ತದೆ. (ಪುಟ 145)

(ii) ಷಷ್ಠೀ ವಿಭಕ್ತಿಯುಕ್ತ ಪದವು ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ 'ಸಂಬದ್ಧಕಾರಕ' ಎಂದು ಕರೆಯಬಹುದು. (ಪುಟ 146) - ಕವಿರಾಜಮಾರ್ಗ ವಿವೇಕ.

'ಕಾರಕಮಾಱು' ಪದ್ಯದ ಹೊಸಗನ್ನಡ ಅನುವಾದ ಭಾಗದಲ್ಲಿ ಡಾ|| ಕೆ. ಕೃಷ್ಣಮೂರ್ತಿಗಳು "ಕನ್ನಡದಲ್ಲಿ ಷಷ್ಠಿಗೂ ಕಾರಕತ್ವವುಂಟೆನ್ನುವುದಾದರೆ ಕರ್ತೃವಿಗೆ ಕಾರಕತ್ವ ವಿಲ್ಲವೆಂದು ಭಾವಿಸಬೇಕು" ಎಂದು ಹೇಳಿದ್ದಾರೆ.[29]

ವಿದ್ವಾನ್ ತಿಮ್ಮಪ್ಪಯ್ಯನವರು ತಮ್ಮ ನಿಲುವಿಗೆ ಕೊಡುವ ಕಾರಣಗಳು :-

(1) 'ಕಾರಯತೀತಿ (ಮಾಡಿಸುತ್ತಿದೆ) ಎಂಬ ವ್ಯುತ್ಪತ್ತಿಗನುಸಾರವಾಗಿ 'ಕಾರಕ ' ಎಂಬುದು ಸಂಸ್ಕೃತರೂಪದಲ್ಲಿ ರೂಪಿತವಾದ ಪ್ರಕೃತಿ ಅಥವಾ ಲಿಂಗ ... ಇದರಿಂದ 'ಕಾರಕ' ಎಂದರೆ 'ಮಾಡಿಸುವ' ಇಲ್ಲವೆ 'ಮಾಡಿಸುವ ಪದಾರ್ಥವನ್ನು ಸೂಚಿಸುವ' ಎಂದಾಗುತ್ತದೆ.[30]

'ಕಾರಕ' ಎಂಬ ಪದವು ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ 'ಮಾಡಿಸುವ ವ್ಯಕ್ತಿ'ಯನ್ನು ಸೂಚಿಸುವುದಲ್ಲದೆ 'ಮಾಡುವ ವ್ಯಕ್ತಿ'ಯನ್ನಲ್ಲ.... 'ಕರೋತಿ ಇತಿ ಕರ್ತಾ' ಎಂದು ಕರ್ತೃ ಪದವು ರೂಪಿತವಾಗಿದೆ. ಇಂಥ 'ಕರ್ತೃ' ಎಂಬ ಪದವು ಕಾರಕವೆನ್ನಿಸುವುದು ಹೇಗೆ ?[31]

(2) ಗ್ರಂಥಕಾರನು 'ಕಾರಕಮಾಱು ಕರ್ಮಕರಣಾದಿಕದಿಂ' ಎಂದೂ 'ಪ್ರಥಮಾದಿ ಭೇದ ನಿರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞುನಿಕ್ಕುಂ' ಎಂದಿದ್ದಾನಷ್ಟೆ. ಇದನ್ನು ಅವಗಾಹಿಸಿ ನೋಡಿದಲ್ಲಿ ಅವನೆಣಿಕೆಯುಂತೆ, 'ಕರ್ಮ'ವನ್ನು ಹಿಡಿದು ಮೊದಲ್ಗೊಂಡು 'ಅಧಿಕರಣ'ದವರೆಗಿನವೆಲ್ಲ - ಎಂದರೆ 'ಸಂಬಂಧ' (ಷಷ್ಠಿ) ಸಹಿತವಾಗಿ - ಕಾರಕಗಳು ಎಂಬ ಭಾವನೆ ಹೊಳೆಯುತ್ತಿದೆ. ಅಲ್ಲವಾಗಿದ್ದರೆ

(iii) ಅವನ ಮತದಂತೆ, - ಕಾರಕಗಳು ಆರು, ಅವುಗಳಲ್ಲಿ ಕರ್ತೃ ಸೇರುವುದಿಲ್ಲ; ಷಷ್ಠಿಗೂ ಕಾರಕತ್ವ ಉಂಟು.

-ಶ್ರೀ ವಿಜಯಕೃತ ಕವಿರಾಜಮಾರ್ಗಂ (ಸಂ. ಎ. ಸೀತಾರಾಮಯ್ಯ), ಕರ್ನಾಟಕ ಸಂಘ, ಸರಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು, 1968, ಪುಟ 172.

28 (i) ಎ. ಕೃಷ್ಣಸ್ವಾಮಿ ಅಯ್ಯಂಗಾರ್ : 'ಕವಿರಾಜಮಾರ್ಗದಲ್ಲಿ ಕಾರಕ ವಿಚಾರ', ಸಾಧನೆ ಸಂಪುಟ 2, ಸಂಚಿಕೆ 2 (1973), ಪುಟಗಳು 24-43.

(ii) ವಿದ್ವಾನ್ ರಂಗನಾಥ ಶರ್ಮರ ಲೇಖನ. (ವಿವರಕ್ಕೆ ಅಡಿಟಿಪ್ಪಣಿ 13 ನೋಡಿ.) ಪುಟ 43-51.

29. ಕವಿರಾಜಮಾರ್ಗಂ (ಐಬಿಎಚ್ ಪ್ರಕಾಶನ, ಬೆಂಗಳೂರು, 1983), ಪುಟ 29.

30. ಕವಿರಾಜಮಾರ್ಗ ವಿವೇಕ, ಪುಟ 142. 31. ಅದೇ ಪುಟ 145.

'ಕಾರಕಮಾಙು ಕರ್ತೃಕರ್ಮಾದಿಕದಿಂ' ಎನ್ನಬೇಕಾಗಿತ್ತು, ಹಾಗೆಂದರೆ, ಛಂದೋಭಂಗವಾಗುತ್ತಿತ್ತು ಎಂದೆನ್ನಬಾರದು. 'ಇಲ್ಲಿಗಿದು ತಕ್ಕುದಿಲ್ಲಿಗೆ ಪೊಲ್ಲದಿದೆಂದಱಿದು' ಪದಗಳನ್ನು ಬಳಸಬೇಕು ಎಂದು ಬೋಧಿಸಿದ 'ಮಾಗಧಿಪ'ನಿಗೆ ತಕ್ಕಂತೆ ಪದಗಳನ್ನು ಪ್ರಯೋಗಿಸಲು ತಿಳಿಯುತ್ತಿದ್ದಿಲ್ಲವೆ ?[32]

(3) 'ಅಧೀಶ್ವರನಾ ದಯೆ ಸಾಲ್ಗುಂ' ಎಂಬುದನ್ನು ಮನನವೆಸಗುವ ಇಲ್ಲಿ 'ಅಧೀಶ್ವರನಾ' ಎಂಬ ಷಷ್ಠೀ ವಿಭಕ್ತಿಯುತವಾದ ಪದವು 'ಸಾಲ್ಗುಂ' ಎಂಬ ಕ್ರಿಯೆಯ ಕಾರಕವಲ್ಲವೆಂಬುದೇನೋ ಸರಿ. ಆ ಕ್ರಿಯೆಗೆ ಕರ್ತೃ 'ದಯೆ'. ಅಂತಹ ಕರ್ತೃರೂಪದ ದಯೆ 'ಅಧೀಶ್ವರನ ಸಂಬಂಧವಾದುದು'. ಮೇಲಿನ ವಿವೇಚನೆಗನುವಾಗಿ 'ಕರ್ತೃ' ಕಾರಕವಾಗದು ಎಂಬುದು ಸರಿಯಾದರೆ, ಈ ವಾಕ್ಯದಲ್ಲಿ 'ಕಾರಕ'ವೇ ಇಲ್ಲವೆನಿಸುತ್ತದೆ. ಆದರಿಂದ, ಮುಂದಿನ ನಾಮಪದಕ್ಕೆ ತನ್ನ ಸಂಬಂಧವನ್ನು ಮಾತ್ರ ಕೊಡುವ 'ಅಧೀಶ್ವರನಾ' ಎಂಬ ಪದವು ಆ ಸ್ವಸಂಬಂಧಿಯಾದ 'ದಯೆ'ಎಂಬ ಕರ್ತೃವಿನ ಮೂಲಕವಾಗಿ 'ಸಾಲ್ಗುಂ' ಎಂಬುದಕ್ಕೆ ಕರ್ತೃವಾಗಲಾರದು. ಆದರಿಂದಲೇ ಷಷ್ಠೀ ವಿಭಕ್ತಿಯುಕ್ತ ಪದವು ಮುಂದಿನ ನಾಮ ಪದಕ್ಕೆ ತನ್ನ ಸಂಬಂಧವನ್ನಿತ್ತು ಆ ಮೂಲಕವಾಗಿ ಕ್ರಿಯೆಗೆ ಕಾರಕವಾಗುವುದು. ಅದನ್ನು ಬೇಕಾದರೆ 'ಸಂಬದ್ಧ ಕಾರಕ'ಎಂದು ಕರೆಯಬಹುದು.[33]

'ಕಾರಕ' ಶಬ್ದದ ವ್ಯುತ್ಪತ್ತಿಯ ವಿಷಯ.

(i) ಕಾವ್ಯಗಳಲ್ಲಿ ಒಂದೇ ಶಬ್ದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸುವುದು ಸಾಮಾನ್ಯ. ಶ್ಲೇಷಕ್ಕಾಗಿಯೋ ಚಮತ್ಕಾರ ಪ್ರದರ್ಶನ ಕ್ಕಾಗಿಯೋ ಅಪ್ರಸಿದ್ಧಾರ್ಥದಲ್ಲಿ ಅಥವಾ ಹೊಸ ವ್ಯುತ್ಪತ್ತಿಯನ್ನನುಸರಿಸಿ ಪದಪ್ರಯೋಗ ಮಾಡುವುದುಂಟು.[34] ಆದರೆ ಶಾಸ್ತ್ರದಲ್ಲಿ ಇದು ಸಲ್ಲದು. ಪಾರಿಭಾಷಿಕ ಶಬ್ದಗಳ ಅರ್ಥ ನಿಷ್ಕೃಷ್ಟ. ಕಾರಕ ಎನ್ನುವುದು ವ್ಯಾಕರಣ ಶಾಸ್ತ್ರದಲ್ಲಿ ಒಂದು ಪಾರಿಭಾಷಿಕ ಶಬ್ದ. ಎರಡು ಸಾವಿರ ವರ್ಷಗಳಿಗೂ ಹಿಂದೆಯೇ ಪತಂಜಲಿಯು 'ಕಾರಕ' ಎಂಬುದು ಅನ್ವರ್ಥ

---

32. ಅದೇ ಪುಟ 144-5.

33. ಅದೇ ಪುಟ 145-6.

34. ಟಿ. ಪಿ. ಕೈಲಾಸಂ ಅವರು, ತಮ್ಮ ನಾಟಕವೊಂದರಲ್ಲಿ 'ಕೇ ಸರತೀತಿ ಕೇಸರೀ' (ನೀರಿನಲ್ಲಿ ಓಡಾಡುವುದು) ಎಂಬ ವ್ಯುತ್ಪತ್ತಿ ಹೇಳಿ 'ಕೇಸರಿ' ಎಂದರೆ ಮೀನು ಎಂದು ಅರ್ಥ ಮಾಡಿದ್ದಾರೆ.

ಸಂಜ್ಞೆಯೆಂದು ಹೇಳಿ 'ಕರೋತೀತಿ ಕಾರಕಂ' ಎಂಬ ವ್ಯುತ್ಪತ್ತಿಯನ್ನು ತೋರಿಸಿದ್ದಾನೆ. ಅಲ್ಲಿಂದೀಚೆಗೆ ಎಲ್ಲ ವೈಯಾಕರಣರೂ ಇದೇ ಅರ್ಥದಲ್ಲಿಯೇ ಈ ಪದವನ್ನು ಪ್ರಯೋಗಿಸಿರುವುದಲ್ಲದೆ ಕ್ರಿಯೆಗೆ ಹೇತುವೇ ಕಾರಕವೆಂದು ವಿವರಿಸಿಯೂ ಇದ್ದಾರೆ.[35]

(ii) ವಿದ್ವಾನ್ ತಿಮ್ಮಪ್ಪಯ್ಯನವರು, ಸಂಸ್ಕೃತ ವ್ಯಾಕರಣಾನುಸಾರವಾದ ವ್ಯುತ್ಪತ್ತಿಯಂತೆ 'ಕಾರಕ' ಪದವು ಸೂಚಿಸಿರುವುದು ಮಾಡಿಸುವ ವ್ಯಕ್ತಿಯನ್ನು; ಮಾಡುವ ವ್ಯಕ್ತಿಯನ್ನಲ್ಲ ಎನ್ನುತ್ತಾರಷ್ಟೆ.[36]

'ಣ್ವುಲ್ ತೃಚೌ' (ಪಾಣಿನಿ 3-1-133) ಎಂಬ ಸೂತ್ರದಲ್ಲಿ ವಿಧಿಸಿರುವ ಣ್ವುಲ್ ಮತ್ತು ತೃಚ್ ಈ ಕೃತ್ಪ್ರತ್ಯಯಗಳೆರಡೂ ಒಂದೇ ಅರ್ಥವನ್ನು ಬೋಧಿಸುತ್ತವೆ. ಯಾವ ಧಾತುವಿಗೆ ಈ ಪ್ರತ್ಯಯಗಳು ಸೇರುತ್ತವೆಯೋ ಆ ಧಾತುವಿನ ಅರ್ಥವಾದ ಕ್ರಿಯೆಗೆ ಈ ಕೃದಂತ ಪದವು ಕರ್ತೃ ಎಂಬುದೇ ಈ ಅರ್ಥ.[37] ಣ್ವುಲ್ ಪ್ರತ್ಯಯದ ಅನುಬಂಧಗಳಾದ ಣಕಾರ ಲಕಾರಗಳು ಹೋಗಿ

---

35 (i) ಮಹತ್ಯಾಃ ಸಂಜ್ಞಾಯಾಃ ಕರಣೇ ಏತತ್ಪ್ರಯೋಜನಂ-ಅನ್ವರ್ಥ ಸಂಜ್ಞಾ ಯಥಾ ವಿಜ್ಞಾಯೇತ । ಕರೋತೀತಿ ಕಾರಕಮಿತಿ ।

-'ಕಾರಕೇ' (ಪಾಣಿನಿ 1-4-23) ಸೂತ್ರಕ್ಕೆ ಪತಂಜಲಿಯ ಭಾಷ್ಯ (ಪುಟ 242)

(ii) ಕಾರಕ ಶಬ್ದಶ್ಚ ನಿಮಿತ್ತ ಪರ್ಯಾಯಃ । ಕಾರಕಂ ಹೇತುರಿತ್ಯನರ್ಥಾಂತರಂ । ಕಸ್ಯಹೇತುಃ ? ಕ್ರಿಯಾಯಾಃ । -ಕಾಶಿಕಾ ವೃತ್ತಿ (ಮೇಲಿನ ಸೂತ್ರಕ್ಕೆ)

(iii) ಕಾರಕ ಶಬ್ದೋಯಮಸ್ಮಿ ಣ್ವುಲಂತಃ :- ಕರೋತೀತಿ ಕಾರಕಮಿತಿ; ಅಸ್ಯ ವ್ಯುತ್ಪನ್ನಃ ಸಂಜ್ಞಾಶಬ್ದೋ ನಿಮಿತ್ತಪರ್ಯಾಯಃ । (ಅದೇ ಸೂತ್ರಕ್ಕೆ ಹರದತ್ತನ ಪದಮಂಜರೀ)

(iv) ಕಾರಕಂ ನಿರ್ವರ್ತಕಂ ಹೇತುರ್ವಾ । ಕಸ್ಯ ? ಕ್ರಿಯಾಯಾಃ । - ಜೈನೇಂದ್ರ ವ್ಯಾಕರಣದ 1-2-108 ಸೂತ್ರದ ಮಹಾವೃತ್ತಿ.

(v) ಕ್ರಿಯಾ ಹೇತುಃ ಕಾರಕಂ । -ಹೇಮಚಂದ್ರನ ಶಬ್ದಾನುಶಾಸನ ಸೂತ್ರ 2-2-1.

36. ವಿದ್ವಾನ್ ರಂಗನಾಥ ಶರ್ಮರು ತಮ್ಮ ಲೇಖನದಲ್ಲಿ (ಪುಟ 47) ''ಇದು ಅತ್ಯಂತ ನಿರಾಧಾರವೂ ಪ್ರಮಾಣ ವಿರುದ್ಧವೂ ಆದ ಹೇಳಿಕೆ. 'ಕಾರಯತೀತಿ ಕಾರಕಃ' ಎಂದು ಈ ಕಾರಕ ಶಬ್ದಕ್ಕೆ ಯಾವನು ಎಲ್ಲಿ ವ್ಯುತ್ಪತ್ತಿಯನ್ನು ತೋರಿಸಿದ್ದಾನೆ'' ಎಂದು ಪ್ರಶ್ನಿಸಿ ಕರ್ತೃ ಕಾರಕವಲ್ಲ ಮತ್ತು ಪ್ರಥಮಾಂತ ಪದವೂ ಕಾರಕವಲ್ಲ ಎಂಬ ನಿಲುವಿನಿಂದ ಉಂಟಾಗುವ ಗೊಂದಲವನ್ನು ಉದಾಹರಣೆಗಳೊಡನೆ ತೋರಿಸಿದ್ದಾರೆ.

37. 'ಕರ್ತರಿ ಕೃತ್' (ಪಾಣಿನಿ 3-4-67) ಎಂಬ ಸೂತ್ರದ ಪ್ರಕಾರ ಕೃತ್ಪ್ರತ್ಯಯವು (ಅದಕ್ಕೆ ಬೇರೆ ವಿಶೇಷಾರ್ಥವನ್ನು ವಿಧಿಸದಿದ್ದಾಗ) ಬೋಧಿಸುವುದು ಕರ್ತೃವನ್ನೇ.

ಕೃತ್ಸಂಜ್ಞಕಾಃ ಪ್ರತ್ಯಯಾಃ ಕರ್ತರಿ ಕಾರಕೇ ಭವಂತಿ । -ಮೇಲಿನ ಸೂತ್ರಕ್ಕೆ ಕಾಶಿಕಾ ವೃತ್ತಿ

ಉಳಿಯುವ 'ವೃ'ಗೆ ಎಂಬ ಆದೇಶವಾಗುತ್ತದೆ. ತೃಚ್ ಪ್ರತ್ಯಯದ ಅನುಬಂಧ ಚಕಾರವು ಹೋಗಿ 'ತೃ' ಉಳಿಯುತ್ತದೆ. ಈ 'ತೃ' 'ಅಕ'ಗಳನ್ನು ಶುದ್ಧ ಧಾತುವಿಗಾಗಲೀ ಣ್ಯಂತ (ಪ್ರೇರಕಾರ್ಥ ಪ್ರತ್ಯಯ ಸೇರಿದ) ಧಾತುವಿಗಾಗಲೀ ಸೇರಿಸಬಹುದು. ಉದಾಹರಣೆಗೆ :

ದಾ (ದಾನ ಕೊಡು)ಧಾತುವಿಂದ - ದಾತೃ, ದಾಯಕ(ಕೊಡುವವನು); ದಾಪಯಿತೃ, ದಾಪಕ (ಕೊಡಿಸುವವನು). ಅಧೀ (ಕಲಿ) ಧಾತುವಿನಿಂದ - ಅಧ್ಯೇತೃ, ಅಧ್ಯಾಯಕ (ಕಲಿಯು ವವನು); ಅಧ್ಯಾಪಯಿತೃ, ಅಧ್ಯಾಪಕ (ಕಲಿಸುವವನು). ಗೈ (ಹಾಡು) ಧಾತುವಿನಿಂದ - ಗಾತೃ, ಗಾಯಕ (ಹಾಡುವವನು); ಗಾಪಯಿತೃ, ಗಾಪಕ (ಹಾಡಿಸುವವನು).

ಶುದ್ಧ ಮತ್ತು ಣ್ಯಂತ ಧಾತುಗಳಿಗೆ 'ತೃ' ಸೇರಿದಾಗ ನಿಷ್ಪನ್ನವಾಗುವ ರೂಪಗಳು ಯಾವಾಗಲೂ ಭಿನ್ನವಾಗಿರುತ್ತವೆ. 'ಅಕ' ಸೇರಿದಾಗ ಕೆಲವು ಧಾತುಗಳಿಂದ ಸಮಾನ ರೂಪಗಳು ನಿಷ್ಪನ್ನವಾಗುತ್ತವೆ. ದಹ್ (ಸುಡು), ಕೃ (ಮಾಡು) ಇವು ಎರಡನೆಯ ಬಗೆಯ ಧಾತುಗಳು.

ದಹ್ ಧಾತುವಿನಿಂದ - **ದಗ್ಧೃ** (ಸುಡುವವನು), **ದಾಹಯಿತೃ** (ಸುಡಿಸುವವನು); ದಾಹಕ(ಸುಡುವವನು/ಸುಡಿಸುವವನು).

ಕೃ ಧಾತುವಿನಿಂದ - **ಕರ್ತೃ** (ಮಾಡುವವನು), **ಕಾರಯಿತೃ** (ಮಾಡಿಸುವವನು); **ಕಾರಕ** (ಮಾಡುವವನು/ಮಾಡಿಸುವವನು).

ರೂಪನಿಷ್ಪತ್ತಿ ಪ್ರಕಾರವಾಗಿ ಹೀಗೆ ಕಾರಕ ಶಬ್ದಕ್ಕೆ ಮಾಡುವವನು, ಮಾಡಿಸುವವನು ಎರಡೂ ಅರ್ಥಗಳಿರುವಾಗ, ಈ ಶಬ್ದ ಸೂಚಿಸುವುದು ಮಾಡುವ ವ್ಯಕ್ತಿಯನ್ನಲ್ಲ ಎಂದು ವಿದ್ವಾನ್ ತಿಮ್ಮಪ್ಪಯ್ಯನವರು ಹೇಳಿರುವುದು ಸರಿಯಲ್ಲ.

ಕಾರಕ ಪಾರಿಭಾಷಿಕ ಶಬ್ದವೆಂಬುದನ್ನು ಸದ್ಯಕ್ಕೆ ಪರಿಗಣಿಸದೆ, ರೂಪನಿಷ್ಪತ್ತಿಯಂತೆ ಎರಡು ಅರ್ಥಗಳನ್ನು ತೆಗೆದುಕೊಂಡರೂ, ಎರಡು ಅರ್ಥಗಳಲ್ಲಿ ಯಾವುದು ಸಂದರ್ಭಕ್ಕೆ ಹೊಂದುವುದೋ ಅದನ್ನು ಪರಿಗ್ರಹಿಸಬೇಕಾಗುತ್ತದೆ.

ಒಬ್ಬನು ಕ್ರಿಯೆಯನ್ನು ಮಾಡುವವನು, ಮತ್ತೊಬ್ಬನು ಮಾಡಿಸುವವನು ಎನ್ನಬೇಕಾದರೆ, ಮಾಡುವವನು ಮಾಡಿಸುವವನಿಗೆ ಅಧೀನನಾಗಿರಬೇಕು ಎಂದರೆ ಅವನ ಆಜ್ಞಾನುಸಾರ ಕೆಲಸ ಮಾಡಬೇಕು, ಅಥವಾ ಅವನಿಂದ ಪ್ರೇರಿತನಾಗಿ ಕೆಲಸ ಮಾಡಬೇಕು. ಉದಾಹರಣೆಗೆ,

ಗುರುವು ರಾಜನಿಂದ ದಾನ ಮಾಡಿಸಿದನು.

ಗುರುವು ಶಿಷ್ಯನಿಂದ ಅಧ್ಯಯನ ಮಾಡಿಸಿದನು — ಎಂಬ ವಾಕ್ಯಗಳಲ್ಲಿ ಕೆಲಸ ಮಾಡಿಸುವವನು ಗುರು. ಮೊದಲನೆಯ ವಾಕ್ಯದಲ್ಲಿ ಶಿಷ್ಯ ಅವನ ಅಧೀನ.

ಆದುದರಿಂದ ವಿದ್ವಾನ್ ತಿಮ್ಮಪ್ಪಯ್ಯನವರು ಹೇಳುವುದು ಸರಿಯಾದರೆ, ಕ್ರಿಯೆಯನ್ನು ಮಾಡುವ ಕರ್ತೃವು, ಕ್ರಿಯೆಯನ್ನು ನಡೆಸಲು ಕರ್ಮ ಕರಣಾದಿಗಳಿಂದ ಪ್ರೇರಿತನಾಗಿರಬೇಕು; ಅಥವಾ ಅವುಗಳ ಅಧೀನನಾಗಿ ಕ್ರಿಯೆಯನ್ನು ಮಾಡಬೇಕು.

ಇದು ವಸ್ತುಸ್ಥಿತಿಗೆ ಹೊಂದುವುದೇ ಎಂದು ನೋಡಲು ಈ ಉದಾಹರಣೆಗಳನ್ನು ಪರಿಶೀಲಿಸಬಹುದು :-

1. **ಬಡಗಿಯು ಗರಗಸದಿಂದ ಹಲಗೆಯನ್ನು ಕೊಯ್ದನು.**
2. **ಅಡಿಗೆಯವನು ಸೌದೆಯಿಂದ ತಪ್ಪಲೆಯಲ್ಲಿ ಅನ್ನವನ್ನು ಅಟ್ಟನು.**

ವಿದ್ವಾನ್ ತಿಮ್ಮಪ್ಪಯ್ಯನವರ ಮತದಂತೆ ಈ ವಾಕ್ಯಗಳಲ್ಲಿ ಕ್ರಮವಾಗಿ ಬಡಗಿ ಮತ್ತು ಅಡಿಗೆಯವನು ಕಾರಕಗಳಲ್ಲ, ಕರ್ತೃಗಳು. ಗರಗಸ ಹಲಗೆಗಳೂ ಸೌದೆ ತಪ್ಪಲೆ ಅನ್ನಗಳೂ ಕಾರಕಗಳು. ಈ ಕಾರಕಗಳು ಕೊಯ್ಯುವ ಮತ್ತು ಅಡುವ ಕೆಲಸಗಳನ್ನು ಮಾಡಿಸುತ್ತವೆ. ಬಡಗಿ ಮತ್ತು ಅಡಿಗೆಯವನು ಈ ಕೆಲಸಗಳನ್ನು ಮಾಡುತ್ತಾರೆ. ಆದರೆ ಗರಗಸ ಹಲಗೆಗಳನ್ನು ನೋಡಿದಾಗಲೆಲ್ಲ ಬಡಗಿ ಕೊಯ್ಯಲು ಹೊರಡುವುದಿಲ್ಲ. ಅವನಿಗೆ ಸಣ್ಣ ಹಲಗೆಗಳ ಆವಶ್ಯಕತೆಯಿದ್ದಾಗ ಮಾತ್ರ ಸಾಧನಗಳನ್ನು ಸಿದ್ಧಪಡಿಸಿಕೊಂಡು ಕೊಯ್ಯುವ ಕ್ರಿಯೆಯಲ್ಲಿ ತೊಡಗುತ್ತಾನೆ. ಆದುದರಿಂದ ಅವನು ಗರಗಸ ಹಲಗೆಗಳಿಂದ ಪ್ರೇರಿತನಾಗಿ ಕೊಯ್ಯುವುದಿಲ್ಲ. ಅವುಗಳಿಗೆ ಅಧೀನನಲ್ಲ, ಸ್ವತಂತ್ರನೆಂಬುದಂತೂ ಸುಸ್ಪಷ್ಟ.[38] ಹೀಗೆಯೇ ಅಡಿಗೆಯವನು ಸೌದೆ ಇತ್ಯಾದಿಗಳಿಂದ ಪ್ರೇರಿತನೂ ಅಲ್ಲ, ಅವುಗಳಿಗೆ ಅಧೀನನೂ ಅಲ್ಲ. ಆದುದರಿಂದ ವಿದ್ವಾನ್ ತಿಮ್ಮಪ್ಪಯ್ಯನವರು ಕೊಟ್ಟಿರುವ ವ್ಯುತ್ಪತ್ತಿ ಶಾಸ್ತ್ರವಿರುದ್ಧವಷ್ಟೇ ಅಲ್ಲ, ಲೋಕವ್ಯವಹಾರಕ್ಕೂ ವಿರುದ್ಧ.[39]

ವಿದ್ವಾನ್ ತಿಮ್ಮಪ್ಪಯ್ಯನವರ ಮತದಂತೆ, 'ನರಪತಿ ಶಿಲ್ಪಿಯಿಂ ರಥಮಂ ಮಾಡಿಸಿದಂ' ಎಂಬ ವಾಕ್ಯದಲ್ಲಿ ನರಪತಿ ಕರ್ತೃ ಶಿಲ್ಪಿ ರಥಗಳು ಕಾರಕಗಳು. ಆದರೆ ಮಾಡಿಸುವವನು

---

38 **'ಸ್ವತಂತ್ರಃ ಕರ್ತಾ'** ಎಂಬ ಪಾಣಿನಿಸೂತ್ರ (1-4-54) ಲೋಕವ್ಯವಹಾರಕ್ಕೆ ಅನುಗುಣವಾಗಿಯೇ ಇದೆ.

39 **'ಕರೋತೀತಿ ಕಾರಕಂ'** ಎಂದು 'ಕಾರಕ'ದ ವ್ಯುತ್ಪತ್ತಿಯಾದರೆ, ಕರ್ಮಕರಣಾದಿಗಳಿಗೆ ಹೇಗೆ ಕಾರಕತ್ವ ಬರುತ್ತದೆ ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಮಂಜರೀ ಮಕರಂದಕಾರನು ಕೊಟ್ಟಿರುವ ವಿವರಣೆಯನ್ನೂ ಅವನು ತನ್ನ ವಿವರಣೆಗೆ ಪ್ರಮಾಣವಾಗಿ ಕೊಟ್ಟಿರುವ ಕಾರಿಕೆಯನ್ನೂ ಹಿಂದೆ

ನರಪತಿಯೇ ಆದುದರಿಂದ, ಅವನು ಕಾರಕವೂ ಆಗಬೇಕಾಯಿತು, ಆದುದರಿಂದ ಅವರ ಮತದಂತೆಯೇ ಇಲ್ಲಿ ಕರ್ತೃವೂ ಕಾರಕವಾಗಬೇಕಾಗುತ್ತದೆ.

(ಅಡಿಟಿಪ್ಪಣಿ 8) ಉಲ್ಲೇಖಿಸಿದೆ. ಈ ವಿವರಣೆ ಪಾಣಿನಿಯ ಕಾರಕೇ (1-4-23) ಎಂಬ ಸೂತ್ರದ ವಾರ್ತಿಕೆಗಳಲ್ಲೂ ಪತಂಜಲಿಮಹಾಭಾಷ್ಯ ವಾಕ್ಯಪದೀಯಗಳಲ್ಲೂ ಕೊಟ್ಟಿರುವ ವಿವರಣೆಗಳಿಗೆ ಅನುಸಾರವಾಗಿಯೇ ಇದೆ.

ದೇವದತ್ತಃ ಸ್ಥಾಲ್ಯಾಂ ಏಧೋಭಿಃ ಪಚತಿ (ದೇವದತ್ತನು ತಪ್ಪಲೆಯಲ್ಲಿ ಸೌದೆಯಿಂದ ಅಡುತ್ತಾನೆ) ಎಂಬ ವಾಕ್ಯದಲ್ಲಿನ ಕಾರಕಗಳು. ಪಚನಕ್ರಿಯೆಯಲ್ಲಿ ಯಾವ ರೀತಿ ಕರ್ತೃತ್ವವನ್ನು ಹೊಂದುತ್ತವೆ ಎಂದು ವಿವರಿಸುವ ವಾರ್ತಿಕಗಳಿಗೆ ಪತಂಜಲಿಯ ಭಾಷ್ಯ ಇಂತಿದೆ :-

ಅಧಿಶ್ರಯಣೋದಕಾಸೇಚನ ತಂಡುಲಾವಪನ್ನೈಧೋಪಕರ್ಷಣಾದಿ ಕ್ರಿಯಾಃ ಕುರ್ವನ್ನೇವ ದೇವದತ್ತಃ ಪಚತೀತ್ಯುಚ್ಯತೇ । ತತ್ರ ತದಾ ಪಚಿರ್ವರ್ತತೇ । ಏಷ ಪ್ರಧಾನಸ್ಯ ಕರ್ತುಃ ಪಾಕಃ । ಏತತ್ಪ್ರಧಾನ ಕರ್ತುಃ ಕರ್ತೃತ್ವಮ್ ।

ದ್ರೋಣಂ ಪಚತ್ಯಾಢಕಂ ಪಚತೀತಿ ಸಂಭವನ ಕ್ರಿಯಾಂ ಧಾರಣ ಕ್ರಿಯಾಂ ಚ ಕುರ್ವತೀ ಸ್ಥಾಲೀ ಪಚತೀತ್ಯುಚ್ಯತೇ । ತತ್ರ ತದಾ ಪಚಿರ್ವರ್ತತೇ । ಏಷಃ ಅಧಿಕರಣಸ್ಯ ಪಾಕಃ । ಏತದಧಿಕರಣಸ್ಯ ಕರ್ತೃತ್ವಮ್ ।

ಏಧಾಃ ಪಕ್ಷ್ಯನ್ತ್ಯಾವಿಕ್ಲಿತ್ತೇಃ ಜ್ವಲಿಷ್ಯಂತೀತಿ ಜ್ವಲನಕ್ರಿಯಾಂ ಕುರ್ವಂತಿ ಕಾಷ್ಠಾನಿ ಪಚಂತೀತ್ಯುಚ್ಯಂತೇ । ತತ್ರ ತದಾ ಪಚಿರ್ವರ್ತತೇ । ಏಷ ಕರಣಸ್ಯಪಾಕಃ । ಏತತ್ಕರಣಸ್ಯ ಕರ್ತೃತ್ವಂ । -ಮಹಾಭಾಷ್ಯಂ ಪುಟ 242-3

ಕಥಂ ಪುನರ್ಜ್ಞಾಯತೇ - ಕರ್ತಾ ಪ್ರಧಾನಮಿತಿ ? ಯತ್ಸರ್ವೇಷು ಸಾಧನೇಷು ಸಂನಿಹಿತೇಷು ಕರ್ತಾ ಪ್ರವರ್ತಯಿತಾ ಭವತಿ । -ಪುಟ 245

ಸಾಮಾನ್ಯ ಭೂತಾ ಕ್ರಿಯಾ ವರ್ತತೇ । ತಸ್ಯಾ ನಿರ್ವರ್ತಕಂ ಕಾರಕಂ । - ಪುಟ 246

(ಮೇಲಿನ ಭಾಷ್ಯದ ಸಾರಾಂಶ) ತಪ್ಪಲೆಯನ್ನು ಒಲೆಯ ಮೇಲಿಡುವುದು, ಅದರಲ್ಲಿ ನೀರು ಸುರಿಯುವುದು, ಅಕ್ಕಿ ಹಾಕುವುದು, ಸೌದೆಯನ್ನು ಹೊತ್ತಿಸುವುದು, ಅನ್ನವಾದ ಮೇಲೆ ಉರಿಯುವ ಸೌದೆಯನ್ನು ತೆಗೆಯುವುದು, ಇವು ಪ್ರಧಾನ ಕರ್ತೃ ದೇವದತ್ತನ ಕ್ರಿಯೆಗಳು.

ನೀರು ಅಕ್ಕಿಗಳನ್ನು ತನ್ನಲ್ಲಿ ಧರಿಸುವುದು, ಶಾಖವು ಎಲ್ಲೆಡೆಗೆ ಹೋಗುವಂತೆ ಮಾಡುವುದು, ಅಧಿಕರಣವಾದ ಸ್ಥಾಲಿಯ (ತಪ್ಪಲೆ)ಯ ಕ್ರಿಯೆಗಳು.

ಅನ್ನವಾಗುವವರೆಗೂ ಉರಿದು ಶಾಖವನ್ನು ಕೊಡುವುದು ಕರಣವಾದ ಏಧಸ್ (ಸೌದೆ) ಮಾಡುವ ಕ್ರಿಯೆ.

(ಹೀಗೆಯೇ ಅಕ್ಕಿಯಾಗಿದ್ದುದು ನೀರು ಶಾಖಗಳಿಂದ ಅನ್ನವಾಗಿ ರೂಪಾಂತರ ಹೊಂದುವುದು ಕರ್ಮಕಾರಕದ ಕ್ರಿಯೆ).

ಈ ಎಲ್ಲ ಅಂಗಕ್ರಿಯೆಗಳೂ ಸೇರಿದ ಸಾಮೂಹಿಕ ಕ್ರಿಯೆಯೇ ಅಡುವುದು. ದೇವದತ್ತ ತಪ್ಪಲೆ ಇತ್ಯಾದಿಗಳೆಲ್ಲ ಸೇರಿ ಈ ಸಾಮೂಹಿಕ ಕ್ರಿಯೆಯನ್ನು ನಿರ್ವಹಿಸುವುದರಿಂದ ಎಲ್ಲವೂ ಕಾರಕ (ಮಾಡುವ ವ್ಯಕ್ತಿ)ಗಳು. ಅವುಗಳ ಪಾತ್ರವನ್ನನುಸರಿಸಿ ಕರ್ತೃ, ಕರ್ಮ ಮೊದಲಾದ ಸಂಜ್ಞೆಗಳು ಬರುತ್ತವೆ. ಇತರ ಕಾರಕಗಳು

ಕರ್ತೃ ಕರ್ಮಾದಿಕಂ ಎಂದು ಹೇಳದೆ ಕರ್ಮಕರಣಾದಿಕಂ ಎಂದು ಹೇಳಿರುವ ವಿಚಾರ.

ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಕಾರಕಗಳನ್ನು ನಿರೂಪಿಸುವಾಗ ಅವುಗಳನ್ನು ಅಪಾದಾನ, ಸಂಪ್ರದಾನ, ಕರಣ, ಅಧಿಕರಣ, ಕರ್ಮ, ಕರ್ತೃ ಈ ಕ್ರಮದಲ್ಲಿ ಹೇಳಿದೆ. **ಜೈನೇಂದ್ರ ವ್ಯಾಕರಣದಲ್ಲಿಯೂ** ಇದೇ ಕ್ರಮ. **ಕಾತಂತ್ರದಲ್ಲಿ** ಈ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಅಧಿಕರಣವಾದ ಮೇಲೆ ಕರಣವನ್ನು ಹೇಳಿದೆ. ಈ ಕ್ರಮದಲ್ಲಿ, ಕ್ರಿಯಾನಿರ್ವಹಣೆ ಯಲ್ಲಿ ಬೇರೆ ಬೇರೆ ಕಾರಕಗಳ ಪಾತ್ರದ ಮಹತ್ವಾನುಸಾರವಾಗಿ, ಅತಿ ಮಹತ್ವವುಳ್ಳ ಕರ್ತೃವನ್ನು ಕೊನೆಯಲ್ಲಿ ಕೊಟ್ಟಿದೆ.[40] ಕಾರಕ ವಿಭಕ್ತಿಗಳೆರಡನ್ನೂ ಒಟ್ಟಿಗೆ ನಿರೂಪಿಸಿರುವ ವ್ಯಾಕರಣಗಳಲ್ಲಿ ವಿಭಕ್ತಿಕ್ರಮವನ್ನನುಸರಿಸಿ ಕರ್ಮ, ಕರ್ತೃ-ಕರಣಗಳು, ಸಂಪ್ರದಾನ, ಅಪಾದಾನ, ಅಧಿಕರಣ ಈ ಕ್ರಮದಲ್ಲಿ ಕಾರಕಗಳು ಬರುತ್ತವೆ. ವಾಕ್ಯಪದೀಯದ ಸಾಧನಸಮುದ್ದೇಶದಲ್ಲಿ ಕರ್ಮ, ಕರಣ, ಕರ್ತೃ, ಸಂಪ್ರದಾನ, ಅಪಾದಾನ, ಅಧಿಕರಣ ಈ ಕ್ರಮದಲ್ಲಿ ಆರು ಕಾರಕಗಳನ್ನು ಹೇಳಿ, ಅನಂತರ ಶೇಷಕಾರಕವನ್ನು ನಿರೂಪಿಸಿದೆ.

ಕರಣಕಾರಕವು ತೃತೀಯಾ ವಿಭಕ್ತಿಯಿಂದಲೇ ಹೇಳಲ್ಪಡುವುದರಿಂದಲೂ, ಕರ್ತೃವು ತೃತೀಯಾ ಷಷ್ಠೀ ವಿಭಕ್ತಿಗಳೆರಡರಿಂದಲೂ ಹೇಳಲ್ಪಡುವುದರಿಂದಲೂ ಮೊದಲು ಕರಣ ವಿಚಾರವನ್ನೂ ಅನಂತರ ಕರ್ತೃವಿಚಾರವನ್ನೂ ಭರ್ತೃಹರಿ ಹೇಳಿದ್ದಾನೆಂದು ವ್ಯಾಖ್ಯಾನಕಾರರು ವಿವರಿಸಿದ್ದಾರೆ.[41] (ಕ್ರಿಯಾಪದಕ್ಕೆ ಬದಲು ಕೃದಂತವನ್ನು ಉಪಯೋಗಿಸಿದಾಗ ಕರ್ತೃವಿಗೆ

ತಮ್ಮ ಕ್ರಿಯೆಗಳನ್ನು ಮಾಡುವಂತೆ ದೇವದತ್ತನು ಯೋಜಿಸುವುದರಿಂದ ಅವನಿಗೆ ಪ್ರಾಧಾನ್ಯ, ಮತ್ತು ಸ್ವತಂತ್ರನಾದುದರಿಂದ ಕರ್ತೃಸಂಜ್ಞೆ.

40. In the Karaka sections of Panini, Katantra and most other grammars that distinguish between Karaka and Vibhakti, the order of the cases is as follows :- Ablative, Dative, Instrumental, Locative, Accusative and Nominative. This order is fixed according to Panini's paribhasha : ವಿಪ್ರತಿಷೇಧೇ ಪರಂ ಕಾರ್ಯಂ 1-4-2 i. e. in case of conflict between two rules the later is to prevail over the earlier. Thus the order of the cases in Panini shows the relative importance of the cases according to the view-point of Indian Grammarians.

Kshitish chandra chatterji - Technical terms and technique of sanskrit Grammar, Part I, University of Calcutta, 1964. Page 375.

ವ್ಯಾಕರಣ ಪಾರಿಭಾಷಿಕ ಶಬ್ದಗಳ ವಿಷಯದಲ್ಲಿ ಆಭಿರುಚಿಯಿರುವವರು ಅವಶ್ಯ ನೋಡಬೇಕಾದ ಗ್ರಂಥವಿದು.

ಷಷ್ಠೀವಿಭಕ್ತಿ ಬರುತ್ತದೆ. - ಉದಾ. ರಘುವಂಶವು ಕಾಳಿದಾಸನ ಕೃತಿ.) ಆದುದರಿಂದ ವಿಭಕ್ತಿಕಾರಕಗಳೆರಡನ್ನೂ ಒಟ್ಟಿಗೆ ಹೇಳಿರುವ ಕವಿರಾಜಮಾರ್ಗಕಾರನು, ಅವನಿಗಿಂತ ಪ್ರಾಚೀನರಾದ ವೈಯಾಕರಣರ ಮಾರ್ಗವನ್ನನುಸರಿಸಿ 'ಕರ್ಮಕರಣಾದಿಕದಿಂ' ಎಂದು ಹೇಳಿರುವುದು ಸಹಜವೇ. ಇದರಿಂದ ಅವನು ಕರ್ತೃವು ಕಾರಕವಲ್ಲವೆಂದು ತಿಳಿದಿದ್ದನೆಂದು ಹೇಳುವುದು ಸಲ್ಲದು.

'ಅಧೀಶ್ವರನಾ ದಯೆ ಸಾಲ್ಗುಂ'. 'ಅಧೀಶ್ವರನಾ' ಎಂಬ ಪದ 'ಸಾಲ್ಗುಂ' ಎಂಬ ಕ್ರಿಯೆಗೆ ಕಾರಕವಲ್ಲವೆಂಬುದು ಸರಿಯೆಂದು ಮೊದಲೇ ಒಪ್ಪಿಕೊಂಡು, ಅನಂತರ ತಮ್ಮ ಪ್ರಕಾರ ಕರ್ತೃವು ಕಾರಕವಲ್ಲವಾದುದರಿಂದ ವಾಕ್ಯದಲ್ಲಿ ಕಾರಕವೇ ಇಲ್ಲವೆನಿಸುವುದರಿಂದ ಕಾರಕವನ್ನು ತೋರಿಸುವುದಕ್ಕಾಗಿ 'ಅಧೀಶ್ವರ'ನಿಗೆ ಕಾರಕತ್ವ ಕೊಡುವ ಪ್ರಯತ್ನ ನಡೆದಿರು ವಂತೆ ತೋರಿಬರುತ್ತಿದೆ. ಉದಾಹರಣ ಪದ್ಯದ 'ನರಪತಿ ಬಂದಂ'ಎಂಬ ಮೊದಲ ವಾಕ್ಯ ದಲ್ಲಿಯೇ ತಮ್ಮ ಪ್ರಕಾರ ಕಾರಕವಿಲ್ಲವೆಂಬುದನ್ನು ಶ್ರೀಯುತರು ಗಮನಿಸಿಲ್ಲ. 'ಅಧೀಶ್ವರನಾ' ಎಂಬ ಪದಕ್ಕೆ ಸಂಬಂಧವಿರುವುದು 'ದಯೆ'ಯೊಡನೆ. ಕ್ರಿಯೆಗೆ 'ದಯೆ' ಕರ್ತೃವಾದುದ ರಿಂದ, ಅದರ ಮೂಲಕ ಕ್ರಿಯೆಗೆ ಸಂಬಂಧವಿದೆಯೆಂದೂ ಆದಕಾರಣ 'ಅಧೀಶ್ವರ'ಕಾರಕ ವೆಂದೂ ಹೇಳುವುದಾದರೆ, 'ಮಾನ್ಯಖೇಟದ ಅಧೀಶ್ವರನಾ ದಯೆ ಸಾಲ್ಗುಂ' ಎನ್ನುವ ವಾಕ್ಯದಲ್ಲಿ 'ಮಾನ್ಯಖೇಟ'ಕ್ಕೂ ಕಾರಕತ್ವವುಂಟೆನ್ನಬೇಕಾದಿತು ! ಏಕೆಂದರೆ ಶ್ರೀಯುತರು ಹೇಳಿರುವಂತೆ ಇನ್ನೊಬ್ಬನ ದಯೆ ಸಾಲದಾದರೆ, ಮಾನ್ಯಖೇಟಕ್ಕೆ ಅಧೀಶ್ವರ ನಾದುದರಿಂದ ತಾನೆ ಅವನ ದಯೆ ಸಾಕಾಗುವುದು ? ಈ ರೀತಿಯ ಸಂಬಂಧಕ್ಕೆ ಕೊನೆಯಿದೆಯೆ ?

ವಿದ್ವಾನ್ ತಿಮ್ಮಪ್ಪಯ್ಯನವರ ಮತವನ್ನು ಒಪ್ಪಿರುವ ಪ್ರೊ|| ಎಂ. ವಿ. ಸೀತಾರಾಮಯ್ಯ ನವರು ಕೊಟ್ಟಿರುವ ಇತರ ಕಾರಣಗಳು :-

(i) ಆಧುನಿಕ ಭಾಷಾ ಶಾಸ್ತ್ರಜ್ಞರ ಪ್ರಕಾರ, ಕನ್ನಡದಲ್ಲಿ ಪ್ರಥಮಾ ವಿಭಕ್ತಿಯಿದ್ದರೂ ಅದನ್ನು ಸಂಕೇತಿಸುವ ಪ್ರತ್ಯಯ ನುಡಿಯ ಜಾಯಮಾನಕ್ಕೆ ಹೊರತು. ನಾಮ ಪ್ರಕೃತಿಯೇ ಪ್ರಥಮೆಯ ಅರ್ಥದಲ್ಲಿ ಪ್ರಯೋಗವಾಗುತ್ತದೆ....ಕನ್ನಡದಲ್ಲಿ ಸಹಜವಾಗಿಯೆ ಪ್ರಥಮಾ ಮೂಲಕವಾದ ಕರ್ತೃಕಾರಕತ್ವಕ್ಕೆ ಎಡೆಯಿಲ್ಲವೆಂದು ಕಂಡುಬರುತ್ತದೆ.[42]

(ii) ಲಕ್ಷಣಪದ್ಯದಲ್ಲಿ (114) 'ಕಾರಕಮಾಱು ಕರ್ಮಕರಣಾದಿಕದಿಂ' ಎಂದಿರುವಲ್ಲಿ ಮಾರ್ಗಕಾರನು 'ಕರ್ತೃ'ಕಾರಕವನ್ನು ಹೆಸರಿಸದೆ ಬಿಟ್ಟಿರುವುದು ಕಂಡುಬರುತ್ತದೆ. ಎಂದರೆ ಅವನು 'ಷಷ್ಠಿ'ಗೆ ಕಾರಕತ್ವವನ್ನು ಆರೋಪಿಸಿ ದಂತಾಯಿತು.[43]

---

41. **ದ್ವಿತೀಯಾರ್ಥೇ ಕರ್ಮಣಿ ವಿಚಾರಿತೇ ತೃತೀಯಾರ್ಥಃ ಕರಣಂ ಪೂರ್ವಂ ವಿಚಾರ್ಯತೇ। ಕರ್ತಾ ತು ಷಷ್ಠ್ಯಾ ಅಪ್ಯರ್ಥ ಇತಿ ಸಾಧಾರಣತ್ವಾತ್ ನ್ಯೂನತ್ವೇನ ಪಶ್ಚಾದ್ವಿಚಾರಯಿಷ್ಯತೇ।**
-ಹೇಲಾರಾಜನ ವ್ಯಾಖ್ಯಾನದಲ್ಲಿ ಸಾಧನ ಸಮುದ್ದೇಶದ 90ನೇ ಕಾರಿಕೆಯ ವ್ಯಾಖ್ಯಾನಕ್ಕೆ ಅವತರಣಿಕೆ.

ಯದ್ಯಪಿ ಕರ್ತಾಪಿ ತೃತೀಯಾರ್ಥ ಇತಿ ತಸ್ಯಾಪಿ ಪೂರ್ವಂ ವಿಚಾರ್ಯತ್ವ ಪ್ರಾಪ್ತೌ ಕರಣಸ್ಯ ಪೂರ್ವಂ ವಿಚಾರ್ಯತ್ವೇ ವಿನಿಗಮನಾವಿರಹಸ್ತಥಾಪಿ = ಕರ್ತುಃ ತೃತೀಯಾರ್ಥತ್ವೇಽಪಿ ಕರ್ತಾ ತು ಷಷ್ಠ್ಯಾ ಅಪ್ಯರ್ಥ ಇತಿ ಕರ್ತುಃ ಷಷ್ಠೀ ತೃತೀಯಯೋಃ ಸಾಧಾರಣಾರ್ಥತ್ವಾತ್ ಅಸಾಧಾರಣ ತೃತೀಯಾರ್ಥ ಕರಣಾಪೇಕ್ಷಯಾ ತಸ್ಯ ನ್ಯೂನತ್ವೇನ ಸ ಪಶ್ಚಾದ್ವಿಚಾರಯಿಷ್ಯತೇ। (ಅಂಬಾ ಕರ್ತ್ರೀ) ವಾಕ್ಯಪದೀಯ, ಪುಟ 254.

42 ಶ್ರೀ ವಿಜಯಕೃತ ಕವಿರಾಜಮಾರ್ಗಂ -ಪುಟ 168.

43 ಅದೇ ಪುಟ 163-4

(iii) ಮಾರ್ಗಕಾರನು ಕರ್ತೃವನ್ನು ಕಾರಕಾನುಕ್ರಮದಲ್ಲಿ ಸೇರಿಸಿಲ್ಲ; ಹಾಗೂ ಕಾರಕಗಳು ಆರೆಂದು ಸ್ಪಷ್ಟವಾಗಿ ಹೇಳಿ, 'ಇದು ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂದು ಉಪಲಕ್ಷಿಸುವಲ್ಲಿ ಷಷ್ಠಿಯನ್ನೂ ಆ ಅನುಕ್ರಮದಲ್ಲಿ ಸೇರಿಸಿ ಕೊಂಡಿರುವುದರಿಂದ ಅವನು ಷಷ್ಠಿಗೂ ಕಾರಕತ್ವವನ್ನು ಆರೋಪಿಸಿರುವವನೆಂದು ಅನುಮಾನಿಸಬೇಕಾಗುತ್ತದೆ. ಅವನ ಅಭಿಪ್ರಾಯದಂತೆ, ಕರ್ತೃ ಕಾರಕವಲ್ಲದಿದ್ದರೂ ಅದು ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗಿ, ವಿಭಕ್ತಿಗಳು ಏಳು; ಇದರಲ್ಲಿ ಸಂದೇಹವಿಲ್ಲ.[44]

ಮೇಲಿನ ಅಭಿಪ್ರಾಯಗಳ ಪರಿಶೀಲನೆ.

ಪ್ರಥಮಾ ಮೂಲಕವಾದ ಕರ್ತೃ ಕಾರಕತ್ವಕ್ಕೆ ಎಡೆಯಿಲ್ಲವೆಂಬ ಮಾತ್ರಕ್ಕೆ ಕರ್ತೃಕಾರಕವೇ ಇಲ್ಲವೆನ್ನಲಾಗುವುದಿಲ್ಲ. ಮಾರ್ಗಕಾರನ ಅಭಿಪ್ರಾಯದಂತೆ ಕರ್ತೃ ಪ್ರಥಮಾ ವಿಭಕ್ತಿಯಿಂದ ನಿರ್ದಿಷ್ಟವಾಗುವುದೆಂಬ ಶ್ರೀಯುತರ ಹೇಳಿಕೆಗೆ ಆ ಗ್ರಂಥದಲ್ಲಿ ಆಧಾರವಿಲ್ಲ. ಇವನಿಗಿಂತ ಹಿಂದಿನ ಮತ್ತು ಈಚಿನ ಎಲ್ಲ ಸಂಸ್ಕೃತ ವೈಯಾಕರಣರ ಮತದಂತೆಯೂ, ಭಾಷಾಭೂಷಣ, ಶಬ್ದಮಣಿದರ್ಪಣ, ಶಬ್ದಾನುಶಾಸನಗಳ ಪ್ರಕಾರವೂ, ಕರ್ತೃವು ವಿಭಕ್ತಿಯಿಂದ ನಿರ್ದಿಷ್ಟವಾದಾಗ ತೃತೀಯಾ ವಿಭಕ್ತಿ ಪ್ರಯೋಗವಾಗುತ್ತದೆ, ಪ್ರಥಮಾವಿಭಕ್ತಿಯಲ್ಲ.[45]

ಮಾರ್ಗಕಾರನು ಕರ್ತೃಕಾರಕವನ್ನು ಹೆಸರಿಸಿಲ್ಲವಾದರೂ, ಅದರ ಸ್ಥಾನ ಕರಣದ ಅನಂತರವಾದುದರಿಂದ 'ಆದಿ' ಪದದಿಂದ ಅದು ಸೂಚಿಸಲ್ಪಡುತ್ತದೆ. ಅವನು ಷಷ್ಠಿಗೆ ಕಾರಕತ್ವವನ್ನು ಆರೋಪಿಸಿಲ್ಲ.

ಕಾರಕಾನುಕ್ರಮ ವಿಷಯ : ಶ್ರೀಯುತರು 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂಬ ಪದಪುಂಜಕ್ಕೆ 'ಕಾರಕಗಳೊಡನೆ ಕೂಡಿದ ವಿಭಕ್ತಿಗಳ ಅನುಕ್ರಮ' ಎಂದು ಪದಶಃ ಅರ್ಥಮಾಡಿದಂತಿದೆ. ಹೀಗೆ ಅರ್ಥಮಾಡಿದರೆ, ವಿಭಕ್ತಿಗಳ ಅನುಕ್ರಮದಲ್ಲಿ ಪ್ರಥಮಾ ವಿಭಕ್ತಿಯೂ ಸೇರಿರುವುದರಿಂದ ಏಳು ವಿಭಕ್ತಿಗಳೂ 'ಕಾರಕಯುಕ್ತ ವಿಭಕ್ತಿ'ಗಳಾಗ ಬೇಕಾಗುತ್ತದೆ. ವಿದ್ವಾನ್ ತಿಮ್ಮಪ್ಪಯ್ಯನವರು 'ನರಪತಿ ಬಂದಂ' ಮೊದಲಾದ ಏಳು ವಾಕ್ಯಗಳನ್ನು ಕೊಟ್ಟು 'ಇದು ಕಾರಕಯುಕ್ತ ಸಪ್ತ ವಿಭಕ್ತಿಗಳ ಅನುಕ್ರಮ' ಎಂದೇ ಹೇಳಿದ್ದಾರೆ.[46] ಆದರೆ ಗ್ರಂಥಕಾರನು ಹೇಳಿರುವುದು ಆರೇ ಕಾರಕಗಳನ್ನು. ಹೀಗೆಯೇ 114ನೇ ಪದ್ಯದಲ್ಲಿನ 'ಅದಂ ಪಿಡಿದು ನಿಲ್ವ ವಿಭಕ್ತಿಗಳೇೞನಿಕ್ಕುಂ' ಎನ್ನುವುದಕ್ಕೆ ಪದಶಃ ಅರ್ಥ 'ಅದನ್ನು ಆಧಾರವಾಗಿ ಹೊಂದಿರುವ ವಿಭಕ್ತಿಗಳು ಏಳು' ಎಂದಾಗಿ, 'ಅದಂ' ಎನ್ನುವುದು 'ಕಾರಕಂ' ಎಂಬ ಪದಕ್ಕೆ ಅನ್ವಯಿಸುವುದರಿಂದ ಆರು ಕಾರಕಗಳನ್ನು ಏಳು ವಿಭಕ್ತಿಗಳು ನಿರ್ದೇಶಿಸುತ್ತವೆ ಎಂದಂತಾಗುತ್ತದೆ. ಅಂದರೆ ಯಾವುದಾದರೂ ಎರಡು ವಿಭಕ್ತಿಗಳು ಒಂದೇ ಕಾರಕವನ್ನು ನಿರ್ದೇಶಿಸಬೇಕಾಗುತ್ತದೆ. ಆದರೆ ಉದಾಹರಣ ಪದ್ಯದಲ್ಲಿ ಹೀಗಿರುವುದು ಕಂಡು ಬರುವುದಿಲ್ಲ. ಬಹುಶಃ, ಪ್ರತಿಪದಾರ್ಥ ಮಾಡಿದರೆ ಉಂಟಾಗುವ ಇಂತಹ ಅರ್ಥಕ್ಲೇಶಗಳನ್ನು ಕಂಡೇ ಡಾ|| ಕೆ. ಕೃಷ್ಣಮೂರ್ತಿಗಳು "ಕವಿರಾಜಮಾರ್ಗಕಾರನು ಶಾಸ್ತ್ರವನ್ನು ಛಂದೋಬದ್ಧವಾಗಿ ಬರೆದಿದ್ದಾನೆ. ಆ ಛಂದೋ ನಿಯಮಗಳ ಸಲುವಾಗಿ, ಪ್ರಾಸಾದಿಗಳ ನಿರ್ಬಂಧಕ್ಕಾಗಿ, ಎಷ್ಟೋ ಪಾದ ಪೂರಣ ಪದಗಳನ್ನೂ ಬಳಸಬೇಕಾಗುತ್ತದೆ. ಅವಕ್ಕೆ ವಿಶೇಷಾರ್ಥದ ವಿವಕ್ಷೆಯಿರುವುದಿಲ್ಲ. ಅವನ್ನು ಅರ್ಥಮಾಡುವಾಗ ವಿಶಿಷ್ಟ ತಾತ್ಪರ್ಯಕ್ಕೆ ನಮ್ಮ ಮುಖ್ಯ ಗಮನವಿರಬೇಕೇ ಹೊರತು, ಒಂದೊಂದು ಶಬ್ದಕ್ಕೂ ಪ್ರತಿಶಬ್ದ ಕಲ್ಪಿಸಿಕೊಳ್ಳುವ ಹಟವೂ ಸಲ್ಲದು" ಎಂದು ಹೇಳಿದಂತೆ ತೋರುತ್ತದೆ.[47] 114ನೇ ಪದ್ಯದ ಅನುವಾದ ಮಾಡುವಾಗ ಅವರು 'ಅದಂ ಪಿಡಿದು ನಿಲ್ವ ವಿಭಕ್ತಿಗಳೇೞನಿಕ್ಕುಂ' ಎಂಬ ಭಾಗವನ್ನು ಬಿಟ್ಟು ಬಿಟ್ಟಿದ್ದಾರೆ ಮತ್ತು 115ನೇ ಪದ್ಯದ 'ಕಾರಕಯುಕ್ತ ವಿಭಕ್ತ್ಯನುಕ್ರಮಂ' ಎಂಬ ಭಾಗಕ್ಕೆ 'ಅನುಕ್ರಮವಾಗಿ ನಾಮವಿಭಕ್ತಿಗಳಿಗೆ ಉದಾಹರಣೆಗಳು' ಎಂದು ಅರ್ಥ ಕೊಟ್ಟಿದ್ದಾರೆ.

44 ಅದೇ ಪುಟ 166

45 ಭಾಷಾಭೂಷಣ ಸೂತ್ರಗಳು 78,74,75, ಶಬ್ದಮಣಿ ದರ್ಪಣ ಸೂತ್ರಗಳು 128, 126 ಶಬ್ದಾನುಶಾಸನ ಸೂತ್ರ 209

46. ಕವಿರಾಜಮಾರ್ಗ ವಿವೇಕ, ಪುಟ 142

47. 'ವಿರಾಜಮಾರ್ಗಂ, ಪೀಠಿಕೆ ಪುಟ 28-9

ಗ್ರಂಥ ರಚನಾ ಕಾಲನಿರ್ಣಯ

ಪಾಠ ಪರಿಷ್ಕರಣವು ಗ್ರಂಥ ಸಂಪಾದನೆಯ ಒಂದು ಮುಖ್ಯವಾದ ಅಂಗ. ಗ್ರಂಥಕಾರನ ಶೈಲಿ, ಅವನ ಕಾಲದ ಭಾಷೆ, ಅವನು ಅನುಸರಿಸಿರಬಹುದಾದ ಹಿಂದಿನ ಗ್ರಂಥಗಳು. ಹಸ್ತಪ್ರತಿಗಳ ಲಿಪಿ, ಲಿಪಿಕಾರರಿಂದ ಆಗಿರಬಹುದಾದ ತಪ್ಪುಗಳು ಇವನ್ನೆಲ್ಲ ಗಮನದಲ್ಲಿರಿಸಿಕೊಂಡು ಪಾಠಪರಿಷ್ಕರಣವನ್ನು ಮಾಡಬೇಕಾಗುತ್ತದೆ. ಆದುದರಿಂದ ಪಾಠಪರಿಷ್ಕರಣಕ್ಕೆ ಗ್ರಂಥ ರಚನೆಯ ಕಾಲನಿರ್ಣಯ ಆವಶ್ಯಕ.

ಸಾಧಾರಣವಾಗಿ ಗ್ರಂಥಕಾರರು ಗ್ರಂಥರಚನೆಯ ಕಾಲವನ್ನು ಹೇಳಿರುವುದಿಲ್ಲ. ಆದುದರಿಂದ ಆಂತರಿಕ ಮತ್ತು ಬಾಹ್ಯ ಆಧಾರಗಳಿಂದ ಕಾಲವನ್ನು ನಿರ್ಣಯಿಸಬೇಕಾಗುತ್ತದೆ. ಅಂತಹ ಆಧಾರಗಳೆಂದರೆ :

1. ಗ್ರಂಥದಲ್ಲಿ ಉಕ್ತವಾದ ಪೂರ್ವಕವಿಗಳ ಅಥವಾ ಶಾಸ್ತ್ರಕಾರರ ಕಾಲ;
2. ಗ್ರಂಥಕಾರನ ಪೋಷಕರ, ಅವನ ಗುರುಗಳ ಅಥವಾ ಗ್ರಂಥದಲ್ಲಿ ಕಾಣಬರುವ ಇತರ ವ್ಯಕ್ತಿಗಳ ಕಾಲ;
3. ಗ್ರಂಥದಲ್ಲಿ ವರ್ಣಿತವಾದ ಐತಿಹಾಸಿಕ ಸಂಗತಿಗಳು;
4. ಗ್ರಂಥದ ಭಾಷಾಶೈಲಿಯಿಂದ ಸೂಚಿತವಾಗುವ ಕಾಲ;
5. ಈ ಗ್ರಂಥಕಾರನನ್ನು ಹೆಸರಿಸಿರುವ ಈಚಿನ ಗ್ರಂಥಕಾರರ ಕಾಲ; ಇತ್ಯಾದಿ.

ಕೆಲವು ಕವಿಗಳು ತಾವು ಗ್ರಂಥವನ್ನು "ಪೇಳ್ದ", "ಪ್ರಕಟಿಸಿದ", "ಪ್ರತಿಷ್ಠೆ ಮಾಡಿದ" ಕಾಲವನ್ನು ಹೇಳಿರುತ್ತಾರೆ. ಉದಾಹರಣೆಗೆ

(1) ವಿಜಯ ಸಂವತ್ಸರ ಕಾರ್ತಿಕ ನಂದೀಶ್ವರ ದಿನದೊಳ್ ಪ್ರಕಟಿಸಿದುದು — ರನ್ನ;[1]

(2) ಚಿತ್ರಭಾನುಸಮಾಖ್ಯಾಬ್ದಕ ಮಾಶ್ವಯುಗ್ಬಹುಳ...... ಕೂಡೆ ವರ್ತಿಸೆ ಪೇಳ್ದಂ ಕವಿತಾಗುಣೋದಯನಿದಂ — ನಾಗವರ್ಮ;[2]

(3) ಶುಕ್ಲದಾಶ್ವಯುಜ ಕೃಷ್ಣದ ಪಂಚಮಿ ಭೂತಳದೊಳೀಕೃತಿ ಪೆತ್ತುದು ಸುಪ್ರತಿಷ್ಠೆಯಂ — ಜನ್ನ.[3]

ಕೃತಕ ಶಾಸನಗಳಿರುವಂತೆಯೇ, ಅನೇಕ ಗ್ರಂಥಗಳಲ್ಲಿ ಪ್ರಕ್ಷಿಪ್ತ ಭಾಗಗಳೂ ಕಂಡುಬರುವುದರಿಂದ, ಗ್ರಂಥದಲ್ಲಿ ರಚನಾಕಾಲದ ಸೂಚನೆ ಇದ್ದಾಗಲೂ ಸಹ ಆ ಕಾಲವನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ, ಅದು ಇತರ ಆಧಾರಗಳಿಂದ ಊಹಿಸಬಹುದಾದ ಕಾಲಕ್ಕೆ ಹೊಂದುತ್ತದೆಯೇ ಎಂದು ನೋಡಬೇಕು; ಮತ್ತು ಗ್ರಂಥದಲ್ಲಿ ಹೇಳಿರುವ ವರ್ಷ, ತಿಥಿ, ವಾರ, ನಕ್ಷತ್ರಾದಿಗಳಲ್ಲಿ ಸಾಮರಸ್ಯವಿದೆಯೇ ಎಂದು

ಸಾಮರಸ್ಯವಿದೆಯೇ ಎಂದು ಪರೀಕ್ಷಿಸಬೇಕು. ಹಾಗೆ ಪರೀಕ್ಷಿಸಲು ತಜ್ಞರ ಸಹಾಯ ಪಡೆಯಬೇಕಾಗಬಹುದಾದರೂ, ಗ್ರಂಥಸಂಪಾದಕನಿಗೆ ಭಾರತೀಯ ಜ್ಯೋತಿಸ್ಸಿದ್ಧಾಂತದ (Indian Astronomy) ಸ್ಥೂಲ ಪರಿಚಯವಾದರೂ ಇರಬೇಕು.

ಕಾಲಸೂಚಕ ಪದ್ಯಗಳಲ್ಲಿ ಸಾಮಾನ್ಯವಾಗಿ ಶಕವರ್ಷ, ಪ್ರಭವಾದಿ (ಬಾರ್ಹಸ್ಪತ್ಯಮಾನ) ಸಂವತ್ಸರ, ತಿಥಿ, ವಾರ — ಕೆಲವು ವೇಳೆ ನಕ್ಷತ್ರ ಮತ್ತು ಯೋಗಗಳು — ಈ ವಿವರಗಳಿರುತ್ತವೆ. ದಕ್ಷಿಣ ಭಾರತದಲ್ಲಿ ಶಾಲಿವಾಹನ ಶಕ ಬಳಕೆಯಲ್ಲಿದ್ದರೂ, ಅಪೂರ್ವವಾಗಿ ವಿಕ್ರಮಶಕವರ್ಷಗಳನ್ನೂ ಕೊಡುವುದುಂಟು. ಆದುದರಿಂದ ಹೆಸರಿಸಿರುವ ಸಂವತ್ಸರ ಯಾವ ಶಕೆಗೆ ಹೊಂದುವುದೆನ್ನುವುದನ್ನು ಪರೀಕ್ಷಿಸುವುದು ಅಗತ್ಯ. ಈ ಸಂದರ್ಭದಲ್ಲಿ, ಮಹಾವೀರ ವರ್ಧಮಾನ ತೀರ್ಥಂಕರ ನಿರ್ವಾಣ ಶಕೆಯ ಪ್ರಸ್ತಾಪ ಅಪ್ರಸ್ತುತವಾಗದು:

ಶ್ವೇತಾಂಬರ ಸಂಪ್ರದಾಯದಂತೆ ಮಹಾವೀರ ನಿರ್ವಾಣವಾದದ್ದು ವಿಕ್ರಮ ಶಕಪೂರ್ವ 470 ವರ್ಷದಲ್ಲಿ; ಆದರೆ ದಿಗಂಬರ ಸಂಪ್ರದಾಯದಂತೆ ವಿಕ್ರಮ ಶಕಾರಂಭಕ್ಕೆ 605 ವರ್ಷಗಳಿಗೆ ಮುಂಚೆ. ಈ 135 ವರ್ಷಗಳ ವ್ಯತ್ಯಾಸ ವಿಕ್ರಮ ಮತ್ತು ಶಾಲಿವಾಹನ ಶಕಾರಂಭಗಳ ವ್ಯತ್ಯಾಸಕ್ಕೆ ಸಮವಾಗಿರುವುದರಿಂದ ದಿಗಂಬರ ಸಂಪ್ರದಾಯದಂತೆ ನಿರ್ವಾಣ ಕಾಲ ಶಾಲಿವಾಹನಶಕ ಪೂರ್ವ 605 ವರ್ಷಗಳಿದ್ದಿರಬಹುದೆಂದು ಕನಿಂಗ್ ಹ್ಯಾಂ ಊಹಿಸಿದ್ದಾರೆ.[4]

ದಕ್ಷಿಣದೇಶದಲ್ಲಿ 'ಶಾಲಿವಾಹನ' ಪದವನ್ನು ಸೇರಿಸದೆ ಬರಿಯ 'ಶಕವರ್ಷ'ಗಳೆಂದು ವ್ಯವಹರಿಸುವುದರಿಂದ, ಮೊದಲು ಮಹಾವೀರ ನಿರ್ವಾಣ ಕಾಲ ಶಕ 605 ಎಂದಿದ್ದುದು ಉತ್ತರದ ಜೈನ ಗ್ರಂಥಗಳ ಪ್ರಭಾವದಿಂದ - ಇವುಗಳಲ್ಲಿ ವಿಕ್ರಮಶಕವನ್ನು ಉಪಯೋಗಿಸಿದ್ದಾರೆ. (ಉದಾಹರಣೆಗೆ, ಮೇರುತುಂಗಾಚಾರ್ಯನ 'ಪ್ರಬಂಧ ಚಿಂತಾಮಣಿ') — ಮುಂದೆ ವಿಕ್ರಮಪೂರ್ವ 605 ಎಂದು ಮಾರ್ಪಟ್ಟಿರುವುದು ಸಾಧ್ಯ.

ಶಾಲಿವಾಹನ ಶಕದ ಮೊದಲನೆಯ ವರ್ಷ ಬಹುಧಾನ್ಯ ಸಂವತ್ಸರ ಮತ್ತು ಪ್ರಭವಾದಿ ಬಾರ್ಹಸ್ಪತ್ಯಮಾನ ವರ್ಷಗಳ ಸಂಖ್ಯೆ 60 ಆದುದರಿಂದ, ಶಕವರ್ಷ ಮತ್ತು ಸಂವತ್ಸರದ ಹೆಸರು ಗೊತ್ತಿರುವಾಗ ಇವುಗಳು ಹೊಂದುತ್ತವೆಯೇ ಇಲ್ಲವೇ ಎನ್ನುವುದನ್ನು ತಿಳಿಯುವುದು ಸುಲಭ.[5] ಶಕವರ್ಷವನ್ನು ಕೊಡದೆ ಸಂವತ್ಸರದ ಹೆಸರನ್ನು ಮಾತ್ರ ಕೊಟ್ಟಿರುವಾಗಲೂ, ವಾರನಕ್ಷತ್ರಗಳನ್ನು ಕೊಟ್ಟಿದ್ದರೆ ಶಕವರ್ಷವನ್ನು ನಿರ್ಧರಿಸಲು ಸಾಧ್ಯವಾಗಬಹುದು.

ಸಾಧಾರಣವಾಗಿ ಶಕಾರಂಭದಿಂದ ಕಳೆದಿರುವ ಅಂದರೆ ಗತ ಶಕವರ್ಷಗಳನ್ನೇ 'ಗತ' ಶಬ್ದವನ್ನುಪಯೋಗಿಸದೆ ಶಕವರ್ಷಗಳೆಂದು ವ್ಯವಹರಿಸುತ್ತಾರೆ. ಕೆಲವು ವೇಳೆ ವರ್ತಮಾನ ಎಂದರೆ ನಡೆಯುತ್ತಿರುವ ವರ್ಷ ಸಂಖ್ಯೆಯನ್ನು 'ವರ್ತಮಾನ' ಶಬ್ದವನ್ನುಪಯೋಗಿಸದೆ, ಶಕವರ್ಷವೆಂದು ಕೊಟ್ಟಿರುವುದೂ ಉಂಟು. ಸಂವತ್ಸರದ ಹೆಸರಿನಿಂದ, ಕೊಟ್ಟಿರುವ ಶಕಸಂಖ್ಯೆ ಗತವರ್ಷಗಳದ್ದೇ ಅಥವಾ ವರ್ತಮಾನ ವರ್ಷದ್ದೇ ಎಂದು ನಿರ್ಧರಿಸಬಹುದು.

ತಿಥಿ ವಾರ ನಕ್ಷತ್ರಾದಿಗಳು ಪರಸ್ಪರ ಸಮಂಜಸವಾಗಿವೆಯೇ ಎಂದು ತಿಳಿಯಲು ಎಲ್. ಡಿ. ಸ್ವಾಮಿಕಣ್ಣು ಪಿಳ್ಳೆಯವರ Indian Ephemerisನಿಂದ ಬಹಳ ಸಹಾಯ ವಾಗುತ್ತದೆ. ಈ ಗ್ರಂಥ 8 ಸಂಪುಟಗಳಿದ್ದು, ಅವುಗಳ ವ್ಯಾಪ್ತಿ ಇಂತಿದೆ :

Vol. I, Part I 150 ಪುಟಗಳಷ್ಟು ದೀರ್ಘವಾದ ಉಪೋದ್ಘಾತ, ಕೋಷ್ಟಕಗಳು, ಪರಿಶಿಷ್ಟಗಳು (ಒಟ್ಟು 496 ಪುಟಗಳು)

Vol. I, Part II ಕ್ರಿ.ಶ. 700-799 (200 ಪುಟಗಳು) ಈ ಸಂಪುಟದಲ್ಲಿ ಪ್ರತಿವರ್ಷಕ್ಕೂ ಎರಡು ಪುಟಗಳಿದ್ದು ಪುಟಗಳ ಮೇಲ್ಭಾಗದಲ್ಲಿ ಆ ಕ್ರಿಸ್ತ ಶಕವರ್ಷಕ್ಕೆ ಸಂವಾದಿಯಾದ ಶಾಲಿವಾಹನ ಶಕ ವಿಕ್ರಮ ಸಂವತ್ ಬಂಗಾಳೀ ಸರ್ ಕಲಿಯುಗ ಕೊಲ್ಲಂ ಮತ್ತು ಹಿಜಿರಾ ವರ್ಷದ ಸಂಖ್ಯೆಗಳು, ಪ್ರಭವಾದಿ ಬಾರ್ಹಸ್ಪತ್ಯಮಾನ (ದಾಕ್ಷಿಣಾತ್ಯ ಮತ್ತು ಔತ್ತರೇಯ ಸಂಪ್ರದಾಯಗಳಂತೆ) ಸಂವತ್ಸರದ ಹೆಸರು, ಮೇಷ ಸಂಕ್ರಮಣಕಾಲ, ಕೊಲ್ಲಂ ವರ್ಷಾರಂಭ ದಿನ (ದಕ್ಷಿಣ ಮತ್ತು ಉತ್ತರ ಮಲಬಾರ್ ಸಂಪ್ರದಾಯಗಳಂತೆ), ಹಿಜಿರಾ ವರ್ಷದ ಆರಂಭ ದಿನ ಈ ವಿವರಗಳನ್ನು ಕೊಟ್ಟಿದೆ. ಕೆಳಗೆ ಕೋಷ್ಟಕದಲ್ಲಿ ಜನವರಿ 1ರಿಂದ ಡಿಸೆಂಬರ್ 31ರವರೆಗಿನ ಪ್ರತಿದಿನಕ್ಕೂ ಸೌರಮಾಸ ತೇದಿ, ವಾರ, ಚಾಂದ್ರಮಾನ ತಿಥಿ ನಕ್ಷತ್ರಗಳು (ತಿಥಿ ನಕ್ಷತ್ರಗಳ ಪ್ರಮಾಣವನ್ನು ದಿನಮಾನದ ದಶಮಾಂಶ ರೂಪದಲ್ಲಿ), ಮಹಮ್ಮದೀಯ ತಿಂಗಳು ಮತ್ತು ದಿನಗಳನ್ನು ಕೊಟ್ಟಿದೆ.

ಉಳಿದ 6 ಸಂಪುಟಗಳಲ್ಲಿ (ಪ್ರತಿಯೊಂದರಲ್ಲೂ 400 ಪುಟಗಳಿವೆ), ಒಂದು ಸಂಪುಟದಲ್ಲಿ 2 ಶತಮಾನಗಳಂತೆ, ಕ್ರಿ.ಶ. 800ರಿಂದ 2000ವರೆಗಿನ ವರ್ಷಗಳಿಗೆ ವಿವರಗಳಿವೆ.[6]

ಎಫಿಮೆರಿಸ್‌ನಲ್ಲಿರುವ ತಿಥ್ಯಾದಿ ವಿವರಗಳು ಪೂರ್ಣ ಸರಿಯಲ್ಲವೆಂಬ ಮಾತು ಕೇಳಿಬಂದಿದೆ. ಆದರೆ ನಾನು ಅದರಿಂದ ವಿವರಗಳನ್ನು ತೆಗೆದುಕೊಂಡಾಗಲೆಲ್ಲ, ಸೂರ್ಯ ಸಿದ್ಧಾಂತಾನುಯಾಯಿಯಾದ ಕರಣ ಗ್ರಂಥದ ಪ್ರಕಾರ ಸ್ವತಂತ್ರವಾಗಿ ಲೆಕ್ಕ ಮಾಡಿ ನೋಡಿದ್ದೇನೆ; ಎಲ್ಲೂ ತಪ್ಪು ಕಂಡುಬಂದಿಲ್ಲ. ಕರಣ ಗ್ರಂಥಗಳ ಆಧಾರದಿಂದ ಗಣಿತ ಮಾಡಿದಾಗ ತಿಥಿ ನಕ್ಷತ್ರಗಳ ಸೂರ್ಯೋದಯಾದಿ ಘಳಿಗೆಗಳು ಸಿಕ್ಕುತ್ತವೆ. ಎಫಿಮೆರಿಸ್ ನಲ್ಲಿ ಉಜ್ಜಯಿನೀ ಮಧ್ಯಮ ಸೂರ್ಯೋದಯ ಕಾಲ (6 a.m.)ದಿಂದ ತಿಥಿ ಮತ್ತು ನಕ್ಷತ್ರಾಂಶ ಕಾಲವನ್ನು ದಿನದ ದಶಮಾಂಶ ರೂಪದಲ್ಲಿ ಕೊಟ್ಟಿದೆ. ಈ ಕಾರಣದಿಂದಲೂ, ಬೇರೆ ಬೇರೆ ಸ್ಥಳಗಳಿಗೆ ಕಾಲಭೇದವಾಗುವುದರಿಂದಲೂ ತಿಥಿ ನಕ್ಷತ್ರ ಕಾಲಗಳಲ್ಲಿ 1-2 ಘಳಿಗೆಯಷ್ಟು ವ್ಯತ್ಯಾಸವಾಗಬಹುದು.

ಎಫಿಮೆರಿಸ್‌ನಲ್ಲಿ ದಿನದ ಪ್ರಾರಂಭಕಾಲದ (6 a.m.) ತಿಥಿ ನಕ್ಷತ್ರಗಳನ್ನು ಕೊಟ್ಟಿದೆ. ಗ್ರಂಥಗಳಲ್ಲೂ, ನಮ್ಮ ವ್ಯವಹಾರದಲ್ಲೂ, ಸಾಧಾರಣವಾಗಿ ಸೂರ್ಯೋದಯ ಕಾಲದ ತಿಥಿನಕ್ಷತ್ರಯೋಗಾದಿಗಳನ್ನು ಹೇಳುವ ರೂಢಿಯಿದ್ದರೂ, ಗ್ರಂಥ ಸಮಾಪ್ತಿ ಕಾಲವನ್ನಾಗಲೀ ಬೇರೆ ಯಾವುದಾದರೂ ಮುಹೂರ್ತ ಕಾಲವನ್ನಾಗಲೀ ಹೇಳುವಾಗ ತಾತ್ಕಾಲಿಕ ತಿಥಿ ನಕ್ಷತ್ರಾದಿಗಳನ್ನು ಹೇಳುವುದುಂಟು. ಆ ಸಮಯಕ್ಕೆ ಸೂರ್ಯೋದಯ ಕಾಲದ ತಿಥಿ ನಕ್ಷತ್ರಗಳು ಮುಗಿದು ಮುಂದಿನವು ಬಂದಿರಬಹುದು. ಉದಾಹರಣೆಗೆ, 'ವರ್ಧಮಾನ ಪುರಾಣ'ದ ಸಮಾಪ್ತಿಕಾಲ ಚಿತ್ರಭಾನು ಸಂವತ್ಸರ ಆಶ್ವಯುಜ ಬಹುಳ ಷಷ್ಠೀ ಗುರುವಾರ (ಕ್ರಿ.ಶ. 7.10.1042) ಪುನರ್ವಸು ನಕ್ಷತ್ರದಲ್ಲಿ. ಆ ದಿನ ಸೂರ್ಯೋದಯ ಕಾಲದಲ್ಲಿ ಷಷ್ಠೀ ಆರ್ದ್ರಾ ನಕ್ಷತ್ರವಿದ್ದು, ಷಷ್ಠೀ ತಿಥಿ ಮುಗಿಯುವುದಕ್ಕೆ ಮುಂಚೆಯೇ, ಮಧ್ಯಾಹ್ನಕ್ಕೆ ಪುನರ್ವಸು ನಕ್ಷತ್ರ ಬರುತ್ತದೆ.[7]

Ephemeris ಉಪಯೋಗಿಸುವ ಮುಂಚೆ (ಪ್ರತಿ ಸಂಪುಟದ ಆರಂಭದಲ್ಲೂ ಕೊಟ್ಟಿರುವ) Instructions ಭಾಗವನ್ನು ಓದಿಕೊಳ್ಳುವುದು ಅತ್ಯಗತ್ಯ.

ಗ್ರಂಥಸಂಪಾದಕರಿಗೆ ಅತ್ಯುಪಯುಕ್ತವಾದ ಮತ್ತೊಂದು ಗ್ರಂಥ Cunningham-ರವರ Book of Indian Eras (ಸುಮಾರು 150 ವರ್ಷಗಳ ಹಿಂದೆ ರಚಿತವಾದ ಈ ಗ್ರಂಥದ ಪುನರ್ಮುದ್ರಣವಾಗಿದ್ದು, ಪ್ರತಿಗಳು ಸಿಕ್ಕುತ್ತವೆ). ಇದರಲ್ಲಿ ವಿವಿಧ ಶಕೆಗಳ ವಿವೇಚನೆಯೂ, ಕೋಷ್ಟಕಗಳೂ ಇವೆ. ಇದರ xviiನೆಯ ಕೋಷ್ಟಕದಲ್ಲಿ, ಕ್ರಿ.ಪೂ. 60ರಿಂದ ಕ್ರಿ.ಶ. 2000ದವರೆಗಿನ, ಪ್ರತಿವರ್ಷಕ್ಕೂ ಸಂವಾದಿಯಾದ ಕಲಿಯುಗ ವಿಕ್ರಮಶಕ ಶಾಲಿವಾಹನ ಶಕ ಸಪ್ತರ್ಷಿಕಾಲ ಚೇದಿಸಂವತ್ಸರ ಹರ್ಷಕಾಲ ವರ್ಷಗಳು, ಪ್ರಭವಾದಿ ಬಾರ್ಹಸ್ಪತ್ಯಮಾನ ಸಂವತ್ಸರಗಳೂ (ದಾಕ್ಷಿಣಾತ್ಯ ಮತ್ತು ಔತ್ತರೇಯ ಸಂಪ್ರದಾಯ ಗಳಂತೆ),[8] ಸೌರಮಾನ ಮತ್ತು ಚಾಂದ್ರಮಾನ ವರ್ಷಗಳ ಆರಂಭದ ತಾರೀಖು ವಾರಗಳು (ವಾರದಲ್ಲಿ ಕೆಲವು ತಪ್ಪುಗಳು ನನಗೆ ಕಂಡುಬಂದಿವೆ), ಆ ಚಾಂದ್ರಮಾನ ವರ್ಷದಲ್ಲಿನ ಅಧಿಕಕ್ಷಯ ಮಾಸಗಳ ಹೆಸರುಗಳು, ಈ ವಿವರಗಳಿವೆ. xviiiನೇ ಕೋಷ್ಟಕದಲ್ಲಿ ಕ್ರಿ.ಶ. 1-2000ವರೆಗಿನ ಗ್ರಹಣಗಳ ಪಟ್ಟಿ ಮಾಡಿದೆ.

ಕೆಲವು ವೇಳೆ ಗ್ರಂಥಗಳಲ್ಲಿ ಕೊಟ್ಟಿರುವ ಶಕ ವರ್ಷಕ್ಕೂ ಪ್ರಭವಾದಿ ಸಂವತ್ಸರಕ್ಕೂ ತಾಳೆ ಬರುವುದಿಲ್ಲ. ಇಂತಹ ಸಂದರ್ಭಗಳಲ್ಲಿ ತಿಥ್ಯಾದಿ ವಿವರಗಳು ಯಾವುದಕ್ಕೆ ಸರಿಬರುವುವೆಂದು ನೋಡಿ ಕಾಲನಿರ್ಣಯ ಮಾಡಬೇಕಾಗುವುದು. ಉದಾಹರಣೆಗೆ, ನಯಸೇನನ 'ಧರ್ಮಾಮೃತ'ದಲ್ಲಿನ ಕಾಲಸೂಚಕ ಪದ್ಯವನ್ನು ತೆಗೆದುಕೊಳ್ಳಬಹುದು. ಆ ಪದ್ಯ :

ಗಿರಿಶಿಖಿ ವಾಯುಮಾರ್ಗ ಶಶಿಸಂಖ್ಯೆಯೊಳಾವಗಮೊಂದಿ ವರ್ತಿಸು ।
ತ್ತಿರೆ ಶಕಕಾಲ ಮುಸ್ನತಿಯ ನಂದನವತ್ಸರದೊಳ್ ಮಹೋತ್ಸವಂ ॥

ಬೆರಸೆಸೆದಿರ್ದ ಭಾದ್ರಪದಮಾಸದೊಳಗ್ಗದ ಶುಕ್ಲ ಪಕ್ಷದೊಳ್ ।
ನಿರುಪಮಮಪ್ಪ ಪಾಡಿವದೊಳೊಪ್ಪುವ ಹಸ್ತಯುತಾರ್ಕವಾರದೊಳ್ ॥

14-164

ಆರ್. ನರಸಿಂಹಾಚಾರ್ಯರು ಕವಿಚರಿತೆಯಲ್ಲಿ ಈ ಪದ್ಯದ ಎರಡನೆಯ ಪಾದದ 'ನಂದನವತ್ಸರದೊಳ್' ಎನ್ನುವವರೆಗಿನ ಭಾಗವನ್ನು ಮಾತ್ರ ಕೊಟ್ಟು, ಈ ''ಅಸಮಗ್ರ ಪದ್ಯದಿಂದ ಈ ಗ್ರಂಥವನ್ನು ಶಕ 1037ರಲ್ಲಿ ಬರೆದಂತೆ ತಿಳಿಯುತ್ತದೆ. ಆದರೆ ನಂದನ ವರ್ಷವು 1037 ಆಗುವುದಿಲ್ಲ. 1034 ಆಗುತ್ತದೆ. 'ಗಿರಿ' ಎಂಬುದರಿಂದ ಜೈನರು ನಾಲ್ಕು ಎಂಬ ಸಂಖ್ಯೆಯನ್ನು ಸೂಚಿಸುವಂತೆ ತೋರುತ್ತದೆ. ಹಾಗಿದ್ದರೆ 1112ರಲ್ಲಿ ಈ ಗ್ರಂಥವು ಹುಟ್ಟಿರಬೇಕು'' ಎಂದು ಹೇಳಿರುತ್ತಾರೆ.[9] ಅವರು ಪದ್ಯವು ಅಸಮಗ್ರವೆಂದಿರುವುದರಿಂದಲೂ ಮಾಸ ತಿಥ್ಯಾದಿ ವಿವರಗಳಿರುವ ಭಾಗ ಅಲ್ಲಿ ಇಲ್ಲದಿರುವುದರಿಂದಲೂ 1037 ತಪ್ಪು, ನಂದನ ವರ್ಷ ಸರಿಯೆಂದು ಹೇಗೆ ತೀರ್ಮಾನಿಸಿದರೆಂದು ಗೊತ್ತಾಗುವುದಿಲ್ಲ. ಜೈನರು 'ಗಿರಿ' ಶಬ್ದವನ್ನು ನಾಲ್ಕನ್ನು ಸೂಚಿಸಲು ಉಪಯೋಗಿಸುತ್ತಾರೆನ್ನುವುದಕ್ಕೆ ಯಾವ ಆಧಾರವನ್ನೂ ನರಸಿಂಹಾಚಾರ್ಯರು ಹೇಳಿಲ್ಲ.

ಸೂರ್ಯ ಸಿದ್ಧಾಂತಾನುಸಾರಿಯಾದ 'ಜ್ಯೋತಿಸ್ಸಿದ್ಧಾಂತ ಸಂಗ್ರಹ'ದಂತೆ ಗ್ರಹ ಗಣಿತ ಮಾಡಿ ಬಂದ ವಿವರಗಳು ಇಂತಿವೆ :

ಶಾಲಿವಾಹನ ಶಕ ಗತಾಬ್ದ 1034 (ಗತಕಲ್ಯಬ್ದ 4213) ಭಾನುವಾರ (ತಾರೀಖು 25.8.1112) ನಂದನ ಸಂವತ್ಸರ ಭಾದ್ರಪದ ಶುಕ್ಲ ಪಾಡ್ಯ ಸೂರ್ಯೋದಯಾದಿ ಘಳಿಗೆ 16-7 (Ephemeris ಪ್ರಕಾರ 28 = ಘಳಿಗೆ 16-48) ಉತ್ತರಾ ನಕ್ಷತ್ರ 15-37 (Ephemeris ಪ್ರಕಾರ 25 = ಘಳಿಗೆ 15-0)

(ಇನ್ನು ಮುಂದೆ Ephemeris ಪ್ರಕಾರ ವಿವರಗಳನ್ನು Eph. ಎಂದು ತೋರಿಸಿ ದಿನದ ದಶಮಾಂಶ ಭಾಗವನ್ನು ಕೊಡದೆ ಅದಕ್ಕೆ ಸಮಾನವಾದ ಘಳಿಗೆಗಳನ್ನು ಮಾತ್ರ ತೋರಿಸಿದ್ದೇನೆ).

ಉತ್ತರಾ ನಕ್ಷತ್ರ ಕಳೆದ ಮೇಲೆ ಪಾಡ್ಯ ಮತ್ತು ಹಸ್ತ ನಕ್ಷತ್ರಗಳ ಯೋಗವಿದ್ದು, ಪದ್ಯದಲ್ಲಿನ ವಿವರಗಳು ಸರಿ ಹೊಂದುತ್ತವೆ.

ಈಗ ಶಕವರ್ಷ ಮತ್ತು ನಂದನ ಸಂವತ್ಸರಗಳ ಸಮನ್ವಯದ ಪ್ರಶ್ನೆ ಏಳುತ್ತದೆ. ಶ್ರೀ ಬಿ. ಬಿ. ಮಹೀಶವಾಡಿಯವರು ''ಜೈನಶಾಸ್ತ್ರಗಳ ಪ್ರಕಾರ ಭೋಗಭೂಮಿಯ ನಾಭಿಗಿರಿಗಳು ನಾಲ್ಕು'' ಎಂದು ಹೇಳಿ, 'ಗಿರಿ' ಎಂದರೆ ನಾಲ್ಕು ಎಂದು ಅರ್ಥ ಮಾಡಿ ಸಮನ್ವಯ ಮಾಡಲು ಯತ್ನಿಸಿದ್ದಾರೆ.[10] ಬಹುಶಃ ಅವರನ್ನು ಅನುಸರಿಸಿಯೋ ಏನೋ

ಶ್ರೀ ಸುಧಾಕರ ಅವರು 'ಗಿರಿ' ಶಬ್ದಕ್ಕೆ "ನಾಲ್ಕರ ಸಂಖ್ಯಾರ್ಥವನ್ನು ಅನ್ವಯಿಸಿದರೆ, ಆಗನಂದನ ವರ್ಷಕ್ಕೆ ಹೊಂದುತ್ತದೆ" ಎಂದಿದ್ದಾರೆ.[11] ಶ್ರೀ ಮಹೀಶವಾಡಿಯವರಾಗಲೀ ಶ್ರೀ ಸುಧಾಕರರಾಗಲೀ ನಾಲ್ಕು ಎಂಬರ್ಥದಲ್ಲಿ 'ಗಿರಿ' ಶಬ್ದದ ಬೇರಾವ ಪ್ರಯೋಗವನ್ನೂ ಕೊಟ್ಟಿಲ್ಲ. ಜೈನ ಗ್ರಂಥಗಳ ಪ್ರಕಾರವಾಗಿ ಕುಲಪರ್ವತಗಳು ಮೂವತ್ತು.[12] ಹೀಗೆಯೇ ಜೈನಶಾಸ್ತ್ರಗಳಲ್ಲಿ ಅನೇಕ ಬೇರೆ ಬೇರೆ ಪರ್ವತಗಳ ಸಮೂಹದ ಸಂಖ್ಯೆಗಳಿವೆ. (ವಿವರಗಳಿಗೆ, ಭಾರತೀಯ ಜ್ಞಾನಪೀಠ ಪ್ರಕಾಶನವಾದ 'ಜೈನೇಂದ್ರ ಸಿದ್ಧಾಂತಕೋಶ'ವನ್ನು ನೋಡಬಹುದು). ಹೀಗಿರುವಾಗ, ಭೋಗಭೂಮಿಯ ನಾಭಿಗಿರಿಗಳ ಸಂಖ್ಯೆಯ ಆಧಾರದ ಮೇಲೆ 'ಗಿರಿ' ಎಂದರೆ ನಾಲ್ಕು ಎಂದರೆ ಅದು ಅಪ್ರಸಿದ್ಧ ಸಂಕೇತವಾಗುವುದು. 'ಗಿರಿ' ಮತ್ತು ಅದರ ಪರ್ಯಾಯಪದಗಳನ್ನು ಏಳನ್ನು ಸೂಚಿಸಲು ಜ್ಯೋತಿಷ ಗ್ರಂಥಗಳಲ್ಲಿ ಉಪಯೋಗಿಸಿದ್ದಾರೆ. ಈ ಪ್ರಸಿದ್ಧಾರ್ಥವನ್ನು ಬಿಟ್ಟು, ಪ್ರಯೋಗಾಧಾರವಿಲ್ಲದ ಅಪ್ರಸಿದ್ಧಾರ್ಥವನ್ನು ತೆಗೆದುಕೊಳ್ಳುವುದು ಸಲ್ಲದು.[13]

ಕೈಬರಹದಲ್ಲಿ ಅಕ್ಷರಗಳನ್ನು ಸೇರಿಸಿ ಬರೆದಿರುವಾಗ 'ಶರ' ಎಂಬುದನ್ನು 'ಗಿರಿ' ಎಂದು ಓದುವ ಸಾಧ್ಯತೆಯಿದೆ :

ಬಹುಶಃ ಮೂಲಪಾಠ "ಶರಶಿಖಿ ವಾಯುಮಾರ್ಗ ಶಶಿಸಂಖ್ಯೆ" ಎಂದು ಇದ್ದಿರಬಹುದು. ಆಗ ಶರ = 5 ಆದುದರಿಂದ ಶಕವರ್ಷ 1035 ಆಗುವುದು. ಇದು ನಂದನ ಸಂವತ್ಸರದ ವರ್ತಮಾನ ಶಕಸಂಖ್ಯೆ. ಹೀಗೆ ನಯಸೇನನ ಪದ್ಯದ ಶಕವರ್ಷ ಸಂವತ್ಸರಗಳ ಸಮನ್ವಯವಾಗುವುದು.

ಚೈತ್ರ, ವೈಶಾಖಾದಿ ಚಾಂದ್ರಮಾಸಗಳು ಕ್ರಮವಾಗಿ ಮೀನ, ಮೇಷಾದಿ ಸೌರಮಾಸಗಳಲ್ಲಿ ಆರಂಭವಾಗುತ್ತವೆ. ಬೇರೆ ಬೇರೆ ಮಾಸಗಳ ಪೂರ್ಣಿಮೆ ಮತ್ತು ಅಮಾವಾಸ್ಯೆಗಳ ಕಾಲದಲ್ಲಿ, ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿರುವಂತೆ ನಕ್ಷತ್ರಗಳು ಬರುವ ಸಾಧ್ಯತೆ ಇದೆ.

ಪೂರ್ಣಿಮೆ ಅಥವಾ ಅಮಾವಾಸ್ಯೆಯಿಂದ ಎಣಿಸಿ ಇತರ ಕೃಷ್ಣ ಮತ್ತು ಶುಕ್ಲಪಕ್ಷದ ತಿಥಿಗಳ ಕಾಲದಲ್ಲಿ ಬರಬಹುದಾದ ನಕ್ಷತ್ರಗಳನ್ನು ತಿಳಿಯಬಹುದು.

ಈಗ, ಹಿಂದೆ ಉದಾಹರಣೆಯಾಗಿ ಕೊಟ್ಟಿರುವ, ಜನ್ನನ 'ಯಶೋಧರ ಚರಿತೆ'ಯ ಪದ್ಯದಲ್ಲಿನ ಕಾಲವನ್ನು ಪರೀಕ್ಷಿಸಬಹುದು. ಆ ಪದ್ಯದ ಪೂರ್ಣಪಾಠ ಹೀಗಿದೆ :

ಶ್ರೀ ಗಿರಿದುರ್ಗಮಲ್ಲ ನೃಪರಾಜ್ಯದ ವತ್ಸರಮುತ್ತರೋತ್ತರ ।
ಕ್ಕಾಗಿರೆ ಶುಕ್ಲದಾಶ್ವಯುಜ ಕೃಷ್ಣದ ಪಂಚಮಿ ಪುಷ್ಯತಾರೆ ಪೂ ॥

ರ್ಣಾ ಗುರುವಾಗೆ ಭೂತಳಿದೊಳೀಕೃತಿ ಪೆತ್ತುದು ಸುಪ್ರತಿಷ್ಠೆಯಂ ।
ಚಾಗದಭೋಗದಗ್ಗಳಿಕೆಯಂ ಮೆಱೆದಂ ಕವಿಭಾಳಲೋಚನಂ

(ಪಾಠಾಂತರ — ಪೂರ್ಣಪುಷ್ಯತಾರಾ)

ಈ ಪದ್ಯದಲ್ಲಿ ಶಕಪರ್ವವನ್ನು ಹೇಳಿಲ್ಲವಾದರೂ, ಅವನ 'ಅನಂತನಾಥ ಪುರಾಣ'ದ ಕಾಲ (ಗತಶಕ 1152) ಮತ್ತು ತರೀಕೆರೆಯ 45ನೇ ಶಾಸನದ ಕಾಲ (ಗತಶಕ 1119 ಇವುಗಳ ಮಧ್ಯವರ್ತಿಯಾದ ಶುಕ್ಲ ಸಂವತ್ಸರವೇ (ಗತಶಕ 1131) 'ಯಶೋಧರ ಚರಿತೆ'ಯಲ್ಲಿ ಹೇಳಿರುವ ಕಾಲವೆನ್ನಲು ಅಡ್ಡಿಯಿಲ್ಲ. ಈ ವರ್ಷಕ್ಕೆ ಗ್ರಹಗಣಿತದಿಂದ ಬಂದ ತಿಥ್ಯಾದಿ ವಿವರಗಳು :

(1) ಭಾನುವಾರ 20.9.1209 ಶುಕ್ಲ ಸಂವತ್ಸರ ಆಶ್ವಯುಜ ಕೃಷ್ಣ ಪಂಚಮೀ ಸೂರ್ಯೋದಯಾದಿ ಘಳಿಗೆ 8.47 (Eph. 8-24) ರೋಹಿಣೀ ನಕ್ಷತ್ರ 12-49 (Eph. 12-36).

(2) ಗುರುವಾರ 24.9.1209 ಶುಕ್ಲ ಸಂವತ್ಸರ ಆಶ್ವಯುಜ ಕೃಷ್ಣ ನವಮೀ ಸೂರ್ಯೋದಯಾದಿ ಘಳಿಗೆ 15-43 (Eph. 16-12 ಪುಷ್ಯನಕ್ಷತ್ರ 26-11) (Eph. 25-48).

ಪದ್ಯದಲ್ಲಿ ಹೇಳಿರುವ ಪುಷ್ಯ ನಕ್ಷತ್ರ ಗುರುವಾರಗಳು ಕೃಷ್ಣ ಪಂಚಮಿಯಂದು ಬರದೆ, ಕೃಷ್ಣ ನವಮಿ/ದಶಮಿಗೆ ಬರುತ್ತವೆ. ಆದುದರಿಂದ ಜನ್ನನು ಈ ಪದ್ಯವನ್ನು ಗ್ರಂಥಸಮಾಪ್ತಿ ಕಾಲದಲ್ಲೋ 'ಪ್ರತಿಷ್ಠೆ ಮಾಡಿಸಿ'ದಾಗಲೋ ಬರೆಯದೆ, ಎಷ್ಟೋ ಕಾಲದ ಅನಂತರ ಬರೆದು ಸೇರಿಸಿದುದರಿಂದ, ವಿಸ್ಮೃತಿಯಿಂದಾಗಿ ತಪ್ಪು ವಿವರಗಳನ್ನು ಕೊಟ್ಟಿರಬೇಕು; ಅಥವಾ ಶುಭ ತಿಥಿ ವಾರ ನಕ್ಷತ್ರಯುತವಾದ ದಿನದಲ್ಲಿ ಕಾವ್ಯಸಮಾಪ್ತಿ ಪ್ರತಿಷ್ಠೆಯಾಯಿತೆಂದು ಹೇಳಲು — ಇಲ್ಲಿ ಕೊಟ್ಟಿರುವಂತೆ ಅವು ಸೇರಿ ಬರುವುದು ಅಸಾಧ್ಯವೆಂಬುದನ್ನರಿಯದೆ ಜನ್ನನೋ ಬೇರಾರೋ ಈ ಪದ್ಯ ರಚಿಸಿ ಸೇರಿಸಿರಬೇಕು.

ಕೊನೆಯದಾಗಿ, ಅನೇಕ ತೊಡಕುಗಳಿರುವ ಒಂದು ಉದಾಹರಣೆಯನ್ನು ಪರಿಶೀಲಿಸಬಹುದು.

ಡಾ|| ಬಿ. ವ್ಹಿ. ಶಿರೂರರು ತಮ್ಮ 'ಶ್ರವಣ ಬೆಳ್ಗೊಳ'ವೆಂಬ ಗ್ರಂಥದ[14] 165ನೆಯ ಪುಟದಲ್ಲಿ ದೊಡ್ಡಯ್ಯನೆಂಬ ಕವಿ (ಕ್ರಿ.ಶ.ಸು. 1550) 'ಭುಜಬಲಿಚರಿತ', 'ಚಂದ್ರಪ್ರಭ ಚರಿತೆ'ಯೆಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆಂದು ಹೇಳಿ, ಭುಜಬಲಿ ಚರಿತದಿಂದ ನಾಲ್ಕು ಪದ್ಯಗಳನ್ನುದ್ಧರಿಸಿ ಕೊಟ್ಟಿದ್ದಾರೆ. ಅವರು ಆಧಾರ ಗ್ರಂಥವೆಂದು ಅಡಿಟಿಪ್ಪಣಿಯಲ್ಲಿ ಕೊಟ್ಟಿರುವ ಕವಿಚರಿತೆ IIರಲ್ಲಿ ಭುಜಬಲಿ ಚರಿತದ ಉಲ್ಲೇಖವಿಲ್ಲ. ಡಾ|| ಶಿರೂರರು ಈ ಗ್ರಂಥ ಯಾವ ಭಾಷೆಯಲ್ಲಿ ರಚಿತವಾಗಿದೆಯೆಂದು ಸ್ಪಷ್ಟಪಡಿಸದಿದ್ದರೂ ಅವರು

ಉದಾಹರಿಸಿರುವ ಪದ್ಯಗಳು ನಾಲ್ಕೂ ಸಂಸ್ಕೃತದಲ್ಲಿರುವುದರಿಂದಲೂ ಗ್ರಂಥದ ಕೊನೆಯಲ್ಲಿದ್ದೆಯೆಂದು ಹೇಳಲಾದ, ಗ್ರಂಥಕಾರನ ವಂಶ ಮತ್ತು ವಾಸಸ್ಥಳಗಳನ್ನುಲ್ಲೇಖಿಸುವ ಪದ್ಯದ ಸಂಖ್ಯೆ 102 ಆಗಿರುವುದರಿಂದಲೂ ಭುಜಬಲಿ ಚರಿತ ಸಂಸ್ಕೃತ ಭಾಷೆಯ ಶತಕ ಗ್ರಂಥವೆಂದು ತೋರುತ್ತದೆ. ಅವರು ಕೊಟ್ಟಿರುವ ಪದ್ಯಗಳಲ್ಲೊಂದು ಗೋಮಟೇಶ ಪ್ರತಿಷ್ಠೆಯ ಕಾಲವನ್ನು ಹೇಳುತ್ತದೆ. ಆ ಪದ್ಯ :

ಕಲ್ಯಬ್ದೇ ಷಟ್‌ಶತಾಖ್ಯೇ ವಿನುತ ವಿಭವ ಸಂವತ್ಸರೇ ಮಾಸಿ ಚೈತ್ರೇ ।
ಪಂಚಮ್ಯಾಂ ಶುಕ್ಲಪಕ್ಷೇ ದಿನಮಣಿದಿವಸೇ ಕುಂಭಲಗ್ನೇ ಮನೋಜ್ಞೇ ॥
ಸೌಭಾಗ್ಯಾಖ್ಯಾನುಯೋಗೇ ಮೃಗಶಿರ (?) ಭಗಣೋ ಸುಪ್ರಶಸ್ತಾಂ ಚಕಾರ ।
ಶ್ರೀಮಚ್ಚಾಮುಂಡರಾಜೋ ಬೆಲಗುಲನಗರೇ ಗೊಮ್ಮಟೇಶಪ್ರತಿಷ್ಠಾಮ್ ॥55॥

(ಇಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಏಕೆ ಹಾಕಿದ್ದಾರೋ ತಿಳಿಯದು).

ಡಾ॥ ಶಿರೂರರು ಮತ್ತೆ, ಅದೇ ಗ್ರಂಥದ 325ನೆಯ ಪುಟದಲ್ಲಿ "ಕ್ರಿ.ಶ. 1550ರಲ್ಲಿ ಪಿರಿಯಪಟ್ಟಣದ ದೊಡ್ಡಯ್ಯನು ಸಂಸ್ಕೃತದಲ್ಲಿ ಬರೆದ "ಬಾಹುಬಲಿ ಶತಕಂ" ಎಂಬ ಗ್ರಂಥದ್ದೆಂದು

ಕಲ್ಕ್ಯಬ್ದೇ ಷಟ್ಛತಾಖ್ಯೇ ವಿನುತವಿಭವಸಂವತ್ಸರೇ ಮಾಸಿ ಚೈತ್ರೇ ।
ಪಂಚಮ್ಯಾಂ ಶುಕ್ಲ ಪಕ್ಷೇ ದಿನಮಣಿದಿವಸೇ ಕುಂಭಲಗ್ನೇ ಸುಯೋಗೇ ॥
ಸೌಭಾಗ್ಯೇ ಹಸ್ತನಾಮ್ನಿ ಪ್ರಕಟಿತ ಭಗಣೇ ಸುಪ್ರಶಸ್ತಾಂ ಚಕಾರ ।
ಶ್ರೀ ಚಾಮುಂಡರಾಜೋ ಬೆಳಗುಳ ನಗರೇ ಗೋಮಟೇಶ ಪ್ರತಿಷ್ಠಾಮ್ ॥

ಎಂಬ ಪದ್ಯವನ್ನು ಕೊಟ್ಟಿದ್ದಾರೆ. ಈ ಪದ್ಯಗಳಲ್ಲಿ ಕಂಡು ಬರುವ ವ್ಯತ್ಯಾಸಗಳ ವಿಷಯವಾಗಿ ಯಾವ ಟೀಕೆಯನ್ನೂ ಮಾಡದೆ, ಡಾ॥ ಶಿರೂರರು "ಶ್ರೀ ಗೋವಿಂದ ಪೈ ಶ್ರವಣ ಬೆಳ್ಗೊಳದಲ್ಲಿ ಚಾವುಂಡರಾಯನು ಶ್ರೀ ಭುಜಬಲಿಯನ್ನು ಮಾಡಿಸಿ ಪ್ರತಿಷ್ಠಾಪಿಸಿದ್ದು ಕ್ರಿ.ಶ. 981ನೆಯ ಮಾರ್ಚ 13ನೆಯ ದಿನಾಂಕ ಆದಿತ್ಯವಾರವೆಂದು ನಿರ್ಧರಿಸಿದ್ದಾರೆ" ಎಂದು ಮಾತ್ರ ಹೇಳಿದ್ದಾರೆ. (ಪುಟ 326).

ಎರಡು ಪದ್ಯಗಳಂತೆಯೂ 600ನೆಯ ವಿಭವ ಸಂವತ್ಸರದ ಚೈತ್ರ ಶುದ್ಧ ಪಂಚಮೀ ಭಾನುವಾರ ಸೌಭಾಗ್ಯಯೋಗ ಕುಂಭಲಗ್ನದಲ್ಲಿ ಪ್ರತಿಷ್ಠೆ ನಡೆಯಿತು. ಒಂದರ ಪ್ರಕಾರ ಕಲ್ಯಬ್ದ ಮೃಗಶಿರ ನಕ್ಷತ್ರವಾದರೆ, ಇನ್ನೊಂದರ ಪ್ರಕಾರ ಕಲ್ಕ್ಯಬ್ದ ಹಸ್ತ ನಕ್ಷತ್ರ.

ಡಾ॥ ಶಿರೂರರು 'ಭುಜಬಲಿ ಚರಿತ' ಮತ್ತು 'ಬಾಹುಬಲಿ ಶತಕಂ' ಇವು ಬೇರೆ ಬೇರೆ ಗ್ರಂಥಗಳೆಂದು ಭಾವಿಸಿರುವಂತೆ ಕಾಣುತ್ತದೆ. ಆದರೆ ಒಬ್ಬನೇ ಕವಿ ಒಂದೇ ಭಾಷೆಯಲ್ಲಿ ಒಂದೇ ವಿಷಯವನ್ನುಳ್ಳ ಮತ್ತು ಸಮಾನಾರ್ಥಕ ಹೆಸರುಗಳಿರುವ ಎರಡು ಶತಕ ಗ್ರಂಥಗಳನ್ನು ಬರೆದಿರುವುದು ಅಸಂಭಾವ್ಯ. ಆದುದರಿಂದ ಇವು ಬಹುಶಃ

ಭಿನ್ನಪಾಠಗಳನ್ನೊಳಗೊಂಡ ಒಂದೇ ಗ್ರಂಥದ ಬೇರೆ ಬೇರೆ ಹೆಸರಿನಲ್ಲಿರುವ ಪ್ರತಿ (Recensions)ಗಳಿರಬೇಕು. ಗೋವಿಂದ ಪೈಯವರು ಗ್ರಂಥವನ್ನು 'ಬಾಹುಬಲಿ ಚರಿತ್ರ' ಅಥವಾ 'ಭುಜಬಲಿ ಶತಕ'ವೆಂಬ ಹೆಸರಿನ ಸಂಸ್ಕೃತ ಕವಿತೆಯೆಂದು ಉಲ್ಲೇಖಿಸಿ, ಈ ಪದ್ಯದ ಸಂಖ್ಯೆಯನ್ನು 55 ಎಂದೇ ಕೊಟ್ಟಿದ್ದಾರೆ. ಅವರ ಪಾಠ ಡಾ|| ಶಿರೂರರ ಗ್ರಂಥದ 325ನೆಯ ಪುಟದಲ್ಲಿನ ಪಾಠದಂತಿದ್ದು ಮೂರನೆಯ ಸಾಲಿನಲ್ಲಿ "ಹಸ್ತನಾಮ್ನಿ"ಗೆ ಬದಲು "ಮಸ್ತನಾಮ್ನಿ" ಎಂದಿದೆ. ಗೋವಿಂದ ಪೈಯವರು ಅಡಿಟಿಪ್ಪಣಿಯಲ್ಲಿ "ಕುಂಭಲಗ್ನೇ ಮನೋಜ್ಞೇ ಸೌಭಾಗ್ಯಾಖ್ಯಾನುಯೋಗೇ ಮೃಗಶಿರಭಗಣೇ" ಎಂಬ ಪಾಠಾಂತರವನ್ನು ಕೊಟ್ಟಿದ್ದಾರೆ. "ಕಲ್ಯಬ್ದ" ಪಾಠಾಂತರವನ್ನು ಕೊಟ್ಟಿಲ್ಲ. ರಾಚಮಲ್ಲನ ಆಳ್ವಿಕೆಯಲ್ಲಿ (ಕ್ರಿ.ಶ. 973-986) ಚಾವುಂಡರಾಯನು ಜರುಗಿಸಿದ ಗೋಮಟೇಶ್ವರ ಪ್ರತಿಷ್ಠೆಯ ವಿಷಯವನ್ನು ಕ್ರಿ.ಶ. 975ರಲ್ಲಿ ರಚಿಸಿ ಮುಗಿಸಿದ ತನ್ನ 'ಚಾವುಂಡರಾಯ ಪುರಾಣ'ದಲ್ಲಿ ಹೇಳಿಲ್ಲವಾದ ಕಾರಣ, ಪ್ರತಿಷ್ಠೆ 928ರಿಂದ 986ರೊಳಗೆ ನಡೆದಿರಬೇಕೆಂದೂ ಕಲ್ಕಿ ಸಂವತ್ಸರ ಎಂದರೆ ಏನೆಂದು ಖಂಡಿತವಾಗಿ ತಿಳಿಯದೆಂದೂ ಹೇಳಿ, ಗೋವಿಂದ ಪೈಯವರು

"ರಾಚಮಲ್ಲನ ಆಳ್ವಿಕೆಯ ಕ್ರಿ.ಶ. 973ನೆಯ ಶ್ರೀಮುಖದಿಂದ 986ನೆಯ ವ್ಯಯದವರೆಗಣ ದಕ್ಷಿಣ ಸಂಪ್ರದಾಯದ ಸಂವತ್ಸರಗಳಲ್ಲಿ[15] ವಿಭವ ಸಂವತ್ಸರವು ಸರ್ವಥಾ ಬಾರದಾದರೂ, ಸಂವತ್ಸರದ ಹೆಸರನ್ನು ಬಿಟ್ಟು ಮಿಕ್ಕ ಮಟ್ಟಿಗೆ ದೊಡ್ಡಯ್ಯನ ಹೇಳಿಕೆಯನ್ನು ನೆಚ್ಚಬಹುದಾದರೆ, ಮತ್ತು ಹಾಗಾದರೆ ಮಾತ್ರ, ಕ್ರಿ.ಶ. 978ರಿಂದ 986ರೊಳಗಣ ಅವಷ್ಟೂ ವರ್ಷಗಳಲ್ಲಿ ಚೈತ್ರ ಶುಕ್ಲ ಪಂಚಮಿಯ ತಿಥಿ ಕ್ರಿ.ಶ. 981ನೆಯ ವಿಷು (ವೃಷ) ಸಂವತ್ಸರದಲ್ಲಿ ಮಾತ್ರ ಮಾರ್ಚಿ 13ನೆಯ ತಾರೀಕಿನಂದು ಆದಿತ್ಯವಾರ ಬಂದಿದ್ದು ಅಂದು ಮೃಗಶಿರಾ ನಕ್ಷತ್ರವೂ ಸೌಭಾಗ್ಯಯೋಗವೂ ಇದ್ದುದರಿಂದ, ಆ ಪ್ರತಿಷ್ಠೆ ಪ್ರಾಯಶಃ ಆ 981 ಮಾರ್ಚಿ 13ನೆಯ ತಾರೀಕು ರವಿವಾರದಂದು ನೆರವೇರಿರಬೇಕು" ಎಂಬ ನಿಲುವಿಗೆ ಬಂದಿದ್ದಾರೆ.[16]

ಗ್ರಹಗಣಿತದಂತೆ,

(1) ಶನಿವಾರ 7.3.968 ವಿಭವ ಸಂವತ್ಸರ ಚೈತ್ರ ಶುದ್ಧ ಪಂಚಮೀ ಸೂರ್ಯೋದಯಾದಿ ಘಳಿಗೆ 23-36 (Eph. 24-0) ರೋಹಿಣೀ ನಕ್ಷತ್ರ ದಿನಪೂರ್ತಿ (Eph.ನಲ್ಲೂ) ಪ್ರೀತಿಯೋಗ 69-35.

(2) ಭಾನುವಾರ 13.3.981 ವಿಷು ಸಂವತ್ಸರ (ಗತ ಶಾಲಿವಾಹನ ಶಕ 903 ಚೈತ್ರ ಶುದ್ಧ ಪಂಚಮೀ ಸೂರ್ಯೋದಯಾದಿ ಘಳಿಗೆ 29-38 (Eph. 30-36) ರೋಹಿಣೀ ನಕ್ಷತ್ರ 40-9 (Eph. 40-48) ಆಯುಷ್ಮಾನ್ ಯೋಗ 22-59. ಅನಂತರ ಸೌಭಾಗ್ಯಯೋಗ ಬರುತ್ತದೆ.

ವಿಭವ ಸಂವತ್ಸರದಲ್ಲಿ ಚೈತ್ರ ಶುದ್ಧ ಪಂಚಮಿಗೆ ವಾರ ನಕ್ಷತ್ರಯೋಗಗಳೊಂದೂ ಕೂಡುವುದಿಲ್ಲ; ಅಲ್ಲದೆ, ಗೋವಿಂದ ಪೈಯವರು ಹೇಳಿರುವಂತೆ, ಆ ಸಂವತ್ಸರ ರಾಚಮಲ್ಲನ ಆಳ್ವಿಕೆಯ ಅವಧಿಯಲ್ಲೂ ಇಲ್ಲ.

ವಿಷು ಸಂವತ್ಸರದಲ್ಲಿ ಚೈತ್ರ ಶುದ್ಧ ಪಂಚಮಿಗೆ ವಾರ ಯೋಗಗಳು ಹೊಂದುತ್ತವೆ; ಆದರೆ ಮೃಗಶಿರಾ ನಕ್ಷತ್ರವು ಪಂಚಮಿ ಮುಗಿದ ಮೇಲೆ ಬರುತ್ತದೆ. ಸೂರ್ಯೋದಯ ಕಾಲದಲ್ಲಿ ಮೀನಲಗ್ನವಾದುದರಿಂದ, ಕುಂಭಲಗ್ನ ಮಧ್ಯರಾತ್ರಿಯಾದ ಮೇಲೆ ಮರುದಿನ ಬೆಳಗಾಗುವ ಮೊದಲು ಬರುತ್ತದೆ. ಆ ಹೊತ್ತಿಗೆ ನಕ್ಷತ್ರ ಯೋಗಗಳು ಸರಿಬರುತ್ತವೆ; ಆದರೆ ತಿಥಿ ಷಷ್ಠೀ. ರೂಢಿಯಲ್ಲಿ ಹೇಳುವಂತೆ ಉದಯಕಾಲದ ತಿಥಿ ವಾರಗಳನ್ನು ಹೇಳಿ, ಪ್ರತಿಷ್ಠಾ ಕಾಲದ ನಕ್ಷತ್ರ ಯೋಗಲಗ್ನಗಳನ್ನು ಹೇಳಿದ್ದಾನೆಂದು ಭಾವಿಸಿದರೆ, ಗೋವಿಂದ ಪೈಯವರು ಹೇಳಿರುವ 13.3.981ರಂದು ಮಾಸತಿಥ್ಯಾದಿಗಳಿಗೆಲ್ಲ ಸರಿಬರುತ್ತವೆ.

ಈಗ ಕಲ್ಕ್ಯಬ್ದ ಅಥವಾ ಕಲ್ಯಬ್ದದ ಕಗ್ಗಂಟು ಮತ್ತು ವಿಭವ ಸಂವತ್ಸರಗಳ ವಿಷಯ.[17]

ಪಂಚಾಂಗಗಳಲ್ಲಿ "ಗತಕಲಿ" ಎನ್ನುವಂತೆ "ಗತಶಾಲಿ" ಎಂದು ಶಾಲಿವಾಹನ ಶಕ ವರ್ಷಗಳನ್ನು ಸೂಚಿಸುವುದುಂಟು. ಪದ್ಯಗಳ ಶಿಥಿಲ ಬಂಧವನ್ನೂ "ವಿನುತ ವಿಭವ ಸಂವತ್ಸರೇ", "ಸೌಭಾಗ್ಯಾಖ್ಯಾನುಯೋಗೇ ವ್ಯಗಶಿರ ಭಗಣೇ" ಇತ್ಯಾದಿ ಪ್ರಯೋಗಗಳನ್ನೂ ನೋಡಿದರೆ, ಕವಿ ಶಾಲಿವಾಹನ ಶಕವನ್ನು ಸೂಚಿಸಲು "ಶಾಲ್ಯಬ್ದೇ" ಎಂಬ ಪದವನ್ನೂ, ಸಂವತ್ಸರದ ಹೆಸರನ್ನು ಹೇಳುವಾಗ ಛಂದಸ್ಸಿಗೆ ಹೊಂದಿಸಲು, "ವೃಷ"ಕ್ಕೆ ಬದಲು ಪರ್ಯಾಯ ಪದ "ವೃಷಭ"ವನ್ನೋ ಅಥವಾ "ವಿಷು"ಗೆ ಬದಲು "ವಿಷುವ"ವನ್ನೋ ಪ್ರಯೋಗಿಸಿರಬಹುದೆಂದು ತೋರುತ್ತದೆ. ಬಹುಶಃ ಮೂಲಪಾಠ "ಶಾಲ್ಯಬ್ದೇ ಷೋಡಶಾಖ್ಯೇ ವಿನುತ ವೃಷಭ (ವಿಷುವ) ಸಂವತ್ಸರೇ" ಎಂದು ಇದ್ದೀತು.[18] ಈ ಊಹಿತ ಪಾಠಕ್ಕೆ "ಶಾಲಿವಾಹನ ಶಕೆಯಲ್ಲಿ 16ನೆಯ (ವೃಷ) ವಿಷು ಸಂವತ್ಸರ"ವೆಂದು ಅರ್ಥವಾಗುವುದು. ಶಾಲಿವಾಹನ ಶಕದ ಆರಂಭ ವರ್ಷ ಬಹುಧಾನ್ಯ ಸಂವತ್ಸರವಾದ ಕಾರಣ ಈ ಶಕದಲ್ಲಿ ಮೊದಲ ವಿಷು ಸಂವತ್ಸರಕ್ಕೆ ಗತಶಕ ವರ್ಷಗಳು 3. ಆದುದರಿಂದ 16ನೆಯ ವಿಷು ಸಂವತ್ಸರಕ್ಕೆ ಗತಶಕವರ್ಷಗಳು $3 + (15 \times 60) = 903$. ಈಗ ಪದ್ಯದಲ್ಲಿನ ಎಲ್ಲ ವಿವರಗಳೂ ಪರಸ್ಪರ ಹೊಂದುತ್ತವೆ.

ಕನ್ನಡನಾಡಿನ ಗ್ರಂಥಗಳನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವನ್ನು ಬರೆದಿರುವುದರಿಂದ, ಉತ್ತರ ದೇಶದಲ್ಲಿ ರೂಢಿಯಲ್ಲಿರುವ ಪೂರ್ಣಿಮಾಂತ (ಕೃಷ್ಣಾದಿ) ಮಾಸ, ಔತ್ತರೇಯ ಬಾರ್ಹಸ್ಪತ್ಯಮಾನ, ವಿಕ್ರಮ ಶಕೆಯಲ್ಲಿ ವರ್ಷಾರಂಭ ದಿನಗಳಲ್ಲೂ ಸೌರಮಾಸಾರಂಭ ದಿನದಲ್ಲೂ ಕಂಡುಬರುವ ಪ್ರಾಂತೀಯ ವ್ಯತ್ಯಾಸಗಳು ಮೊದಲಾದ ವಿಷಯಗಳನ್ನು ಇಲ್ಲಿ ವಿವರಿಸಹೋಗಿಲ್ಲ.

ಟಿಪ್ಪಣಿಗಳು

1. ಅಜಿತ ತೀರ್ಥಂಕರ ಪುರಾಣ ತಿಲಕಂ (ಜೈನ ಸಾಹಿತ್ಯ ಪ್ರಚಾರ ಸಂಘ ಮತ್ತು ಜೈನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು, 1959) - ದ್ವಾದಶಾಶ್ವಾಸದ 54ನೆಯ ಪದ್ಯ.
2. ಎರಡನೆಯ ನಾಗವರ್ಮ ವಿರಚಿತ ವರ್ಧಮಾನ ಪುರಾಣಂ (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1974) - ಷೋಡಶಾಶ್ವಾಸದ 47ನೆಯ ಪದ್ಯ.
3. ಜನ್ನ ಕವಿಯ ಯಶೋಧರ ಚರಿತೆ (ಕನ್ನಡ ಸಾಹಿತ್ಯ ಪರಿಷತ್ತು, 1977) ನಾಲ್ಕನೆಯ ಅವತಾರದಲ್ಲಿ 86ನೆಯ ಪದ್ಯ.
4. "According to the Swetambara sect this event took place 470 years before Vikrama, or in B.C. 527. The Digambaras, however, make it 605 years before Vikrama, As the difference between the two dates is exactly 135 years, it seems probable that the Digambara date of 605 years before Vikrama should be altered to 605 years before Saka, which would agree with that of the other sect". — Book of Indian Eras (Cunningham); Section VII : Nirvana of Mahavira.
5. ಇಲ್ಲಿ ದಾಕ್ಷಿಣಾತ್ಯ ಬಾರ್ಹಸ್ಪತ್ಯಮಾನ ಪದ್ಧತಿಯನ್ನು ಗಣನೆಗೆ ತೆಗೆದುಕೊಂಡಿದೆ. ಔತ್ತರೇಯ ಪದ್ಧತಿಯ ವಿಷಯವನ್ನು ಮುಂದೆ ಪ್ರಸ್ತಾಪಿಸಿದೆ.
6. ಗ್ರಂಥದ ಕ್ರಿ.ಶ. 1800-2000ದ ಸಂಪುಟ 1915ರಲ್ಲೂ ಉಳಿದ ಸಂಪುಟಗಳು 1922ರಲ್ಲೂ ಅಚ್ಚಾಗಿದ್ದು ಈಗ ದುರ್ಲಭವಾಗಿವೆ. ನನಗೆ ತಿಳಿದ ಮಟ್ಟಿಗೆ, ಬೆಂಗಳೂರಿನಲ್ಲಿ Public Library ಯಲ್ಲಿ ಮಾತ್ರ ಈ ಗ್ರಂಥ ನೋಡಸಿಗುತ್ತದೆ. ಅಲ್ಲೂ 1800-2000ದ ಸಂಪುಟವಿಲ್ಲ. ಭಾರತದ ಕೇಂದ್ರ, ಅಥವಾ ರಾಜ್ಯ ಸರಕಾರಗಳಾಗಲಿ ಯಾವುದಾದರೂ ವಿದ್ವತ್ ಸಂಸ್ಥೆಯಾಗಲಿ ಈ ಗ್ರಂಥವನ್ನು ಪುನಃ ಮುದ್ರಣ ಮಾಡಿಸಿ ಅದಷ್ಟು ಕಡಿಮೆ ಬೆಲೆಗೆ ಸಿಗುವಂತೆ ಮಾಡಿದರೆ ಸಂಶೋಧಕರಿಗೆ ಬಹಳ ಉಪಕಾರವಾಗುತ್ತದೆ. 8 ಸಂಪುಟಗಳನ್ನೂ ಮುದ್ರಿಸಲು ಸಾಧ್ಯವಾಗದಿದ್ದರೂ ಉಪೋದ್ಘಾತ ಸಂಪುಟ (vol. I-Part I)ವನ್ನಾದರೂ ಶೀಘ್ರದಲ್ಲಿ ಮುದ್ರಿಸಿದರೆ ಅದರಲ್ಲಿರುವ ಕೋಷ್ಟಕಗಳ ಸಹಾಯದಿಂದ ಕೆಲವೇ ನಿಮಿಷಗಳಲ್ಲಿ ಬೇಕಾದ ದಿನದ ತಿಥಿ ನಕ್ಷತ್ರಾದಿಗಳನ್ನೇ ಅಲ್ಲದೆ ಸೂರ್ಯಚಂದ್ರಾದಿ ಗ್ರಹಗಳ ಸ್ಥಾನವನ್ನೂ ತಿಳಿಯಬಹುದು. ಅಕ್ಷರ ಜೋಡಣೆಯಲ್ಲಿ ತಪ್ಪುಗಳಾಗದಂತೆ ಇರಲು, Photo-offset ಮುದ್ರಣವಾಗಬೇಕು.
7. ನೋಡಿ : 'ಅಧ್ಯಯನ' (ಶಂ.ಬಾ. ಜೋಶಿ ಅಭಿನಂದನ ಗ್ರಂಥ 1980) ನನ್ನ ಲೇಖನ, "ನಾಗವರ್ಮರು (ಒಂದು ಸಮೀಕ್ಷೆ)", ಪುಟ 537.

8. (1) ದಾಕ್ಷಿಣಾತ್ಯ ಸಂಪ್ರದಾಯದಂತೆ ಪ್ರತಿ ಚಾಂದ್ರಮಾನ/ಸೌರಮಾನ ಸಂವತ್ಸರಕ್ಕೊಂದರಂತೆ ಪ್ರಭವಾದಿ ಸಂವತ್ಸರಗಳು ಬರುತ್ತವೆ. ಆದರೆ ಔತ್ತರೇಯ ಸಂಪ್ರದಾಯದಂತೆ - ಇದೇ ನಿಜವಾದ ಬಾರ್ಹಸ್ಪತ್ಯಮಾನ - ಬೃಹಸ್ಪತಿ ಒಂದು ರಾಶಿಯಲ್ಲಿರುವ ಕಾಲವೇ ಒಂದು ವರ್ಷ. ಇದರ ಸರಾಸರಿ ಮಾನ ಸುಮಾರು 361 ದಿನಗಳು. ಈ ವರ್ಷಗಳಿಗೆ ಪ್ರಭವ, ವಿಭವ ಇತ್ಯಾದಿ ಹೆಸರುಗಳಿದ್ದು, ಈ ಮಾನವನ್ನು ಸೌರಮಾನಕ್ಕೆ ಹೊಂದಿಸಿರುವುದರಿಂದ, 85/86 ವರ್ಷಗಳಿಗೊಮ್ಮೆ ಪ್ರಭವಾದಿ ಸಂವತ್ಸರಗಳಲ್ಲಿ ಒಂದರ ಹೆಸರನ್ನು ಬಿಟ್ಟುಬಿಡುತ್ತಾರೆ. ವಿವರಗಳಿಗೆ Book of Indian Eras ಗ್ರಂಥದ IIನೆಯ ಖಂಡ Barhaspatyamana ನೋಡಿ. ಈ ಗ್ರಂಥ XVIIನೆಯ ಕೋಷ್ಟಕದಲ್ಲಿ, S. Sid.ಎಂಬ ಶಿರೋನಾಮದ (heading) ಕೆಳಗೆ ಔತ್ತರೇಯ ಪದ್ಧತಿಯ ಪ್ರಭವಾದಿ ಸಂವತ್ಸರ 'Tel' ಎಂಬ ಶಿರೋನಾಮದ ಕೆಳಗೆ ದಾಕ್ಷಿಣಾತ್ಯ ಸಂವತ್ಸರ ಸಂಖ್ಯೆಯನ್ನೂ ಕೊಟ್ಟಿದೆ. ಕೋಷ್ಟಕವನ್ನು ನೋಡುವಾಗ ಇದನ್ನು ಗಮನದಲ್ಲಿಡಬೇಕು.

(2) ಜಗಜೀವನ ಗಣೇಶಜಿ ಜೇತಾಭಾಯಿಯವರಿಂದ 1932ರಲ್ಲಿ (ಮೂರನೆಯ ಆವೃತ್ತಿ) ಪ್ರಕಟವಾದ 100 years' Indian Calendar (1845 to 1944 A.D.) ಎಂಬ ಕೋಷ್ಟಕ ಸಂಪುಟಕ್ಕೆ, ಸೆಪ್ಟೆಂಬರ್ 1912ರಲ್ಲಿ, M.P. Khareghat, I.C.S. (Retd.) ಅವರು ಬರೆದ "The Hindu Calendar' ಎಂಬ ಹೆಸರಿನ ಉಪೋದ್ಘಾತದಲ್ಲಿಯೂ ಬಾರ್ಹಸ್ಪತ್ಯಮಾನದ ವಿವರ ಮತ್ತು ಗ್ರಂಥ ಸಂಪಾದಕರಿಗೆ ಉಪಯುಕ್ತವಾದ ಅನೇಕ ವಿಷಯಗಳಿವೆ.

9. ಆರ್. ನರಸಿಂಹಾಚಾರ್ಯ ವಿರಚಿತ 'ಕರ್ಣಾಟಕ ಕವಿಚರಿತೆ', ಪ್ರಥಮ ಸಂಪುಟ (ಪರಿಶೋಧಿತ ಮುದ್ರಣ, ಕನ್ನಡ ಸಾಹಿತ್ಯ ಪರಿಷತ್ತು, 1961) ಪುಟಗಳು 139-40.

10. 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ', ಸಂಪುಟ 2 (ಬೆಂಗಳೂರು ವಿಶ್ವವಿದ್ಯಾಲಯ, 1975), ಪುಟಗಳು 261-2.

11. ಕನ್ನಡ ಅಧ್ಯಯನ ಸಂಸ್ಥೆಯ 'ಕನ್ನಡ ಸಾಹಿತ್ಯ ಚರಿತ್ರೆ', ಮೂರನೆಯ ಸಂಪುಟ (ಮೈಸೂರು ವಿಶ್ವವಿದ್ಯಾನಿಲಯ 1976), ಪುಟ 835. 11

12. 'ಜೈನ ಪರಿಭಾಷಾ ರತ್ನಕೋಶ' (ಕನ್ನಡ ಸಾಹಿತ್ಯ ಪರಿಷತ್ತು 1981) - 'ಕುಲಪರ್ವತ' ನೋಡಿ.

13. "ಅಧ್ಯಯನ"ದ ಪುಟ 534ರಲ್ಲಿ ಈ ವಿಷಯವನ್ನು ಚರ್ಚಿಸಿದ್ದೇನೆ. ಪುಟ 535ರಲ್ಲಿನ (6)ನೆಯ ಉದಾಹರಣೆಯ "ಶಾಕೇಷ್ವಾದ್ರಿ ಮನೂನ್ಮಿತೇ (ಶಕ 1478ರಲ್ಲಿ)" ಎಂಬ ಭಾಗದಲ್ಲಿ, 7ನ್ನು ಸೂಚಿಸಲು 'ಅದ್ರಿ' ಪದದ ಪ್ರಯೋಗವಿದೆ.

14. ಪ್ರಕಾಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (1976)

15. ಉತ್ತರ ಸಂಪ್ರದಾಯದಂತೆಯೂ ಈ ಅವಧಿಯಲ್ಲಿ ವಿಭವ ಸಂವತ್ಸರ ಬರುವುದಿಲ್ಲ. ಈ ಅವಧಿಗೆ ಸಮೀಪದ ವಿಭವ ಸಂವತ್ಸರ ದಕ್ಷಿಣ ಸಂಪ್ರದಾಯದಂತೆ ಕ್ರಿ.ಶ. 968-909; ಉತ್ತರ ಸಂಪ್ರದಾಯದಂತೆ 967-968.

16. 'ಮೂರು ಉಪನ್ಯಾಸಗಳು' (ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಕರ್ನಾಟಕ ಯುನಿವರ್ಸಿಟಿ, ಧಾರವಾಡ-1960) ಪುಟಗಳು 25-26. ಇದರ ಮೊದಲನೆಯ ಮುದ್ರಣ 1940ರಲ್ಲಿ ಆಗಿತ್ತು.

17. ಫಾಲ್ಗುಣದ ಅಮಾವಾಸ್ಯೆಯ ಕಾಲದಲ್ಲಿ ಶತಭಿಷದಿಂದ ರೇವತಿವರೆಗಿನ ನಕ್ಷತ್ರಗಳು ಮಾತ್ರ ಬರಬಹುದಾದ ಕಾರಣ (ಈ ಲೇಖನದಲ್ಲಿನ ಕೋಷ್ಟಕವನ್ನು ನೋಡಿ), ಚೈತ್ರ ಶುದ್ಧ ಪಂಚಮಿಯಂದು ಹಸ್ತ ನಕ್ಷತ್ರ ಬರುವುದು ಅಸಾಧ್ಯ. ಆದುದರಿಂದ "ಹಸ್ತ ನಾಮ್ನಿ" ಎಂಬ ಪಾಠ ಸ್ವೀಕಾರಾರ್ಹವಲ್ಲ. "ಮಸ್ತನಾಮ್ನಿ" ಅರ್ಥಹೀನವಾದ ಅಪಪಾಠ.

18. ಹಸ್ತಪ್ರತಿಯ ಅಥವಾ ಬೇರಾವ ಆಧಾರದ ಮೇಲೆ ನಾನು ಈ ಪಾಠ ಪರಿಷ್ಕರಣ ವನ್ನು ಸೂಚಿಸಿಲ್ಲ. "ಸ್ಥಿತೇರ್ಗತಿಶ್ಚಿಂತನೀಯಾ" ಎಂಬ ನ್ಯಾಯದಂತೆ, ಪದ್ಯದ ಉಳಿದ ಭಾಗಕ್ಕೆ ಹೊಂದುವ ಸಂಭಾವ್ಯವಾದ ಪಾಠವನ್ನು ಊಹಿಸಿದ್ದೇನೆ. ಇದರ ಸರಿತಪ್ಪುಗಳು ಈ ಶತಕ ಗ್ರಂಥದ ಹಸ್ತಪ್ರತಿಗಳ ಪಾಠಸಂಕಲನವಾದರೆ ಗೊತ್ತಾಗಬಹುದು. ಈ ಪದ್ಯಭಾಗವನ್ನು ಅರ್ಥಮಾಡಿಕೊಳ್ಳಲಾರದ ಪ್ರತಿಕಾರರು ಯಾರೋ 'ಶಾಲ್ಯಬ್ದ'ವನ್ನು 'ಕಲ್ಯಬ್ದ/ಕಲ್ಕ್ಯಬ್ದ'ವನ್ನಾಗಿಯೂ, 'ಷೋಡಶ'ವನ್ನು 'ಷಟ್ಛತ'ವನ್ನಾಗಿಯೂ ಸಂವತ್ಸರದ ಹೆಸರನ್ನು ವಿಭವವನ್ನಾಗಿಯೂ ಮಾರ್ಪಡಿಸಿರಬೇಕು.

ಆವಿಷ್ಟ ಲಿಂಗ

ಶಬ್ದ ಮಣಿದರ್ಪಣದ ನಾಮಪ್ರಕರಣದಲ್ಲಿನ

ಯುಗಳಾರ್ಥದ ಬಹುವಚನ
ಕ್ಕೊಗೆತಂದಾವಿಷ್ಟಲಿಂಗದೆಡೆಗೇಕತ್ವಂ ।
ನೆಗೞ್ಗುಂ ಕ್ರಿಯಾವಿಶೇಷಣ
ಮಗಲದೆ ನಿಂದೆಡೆಗಮಱುವರಿಂದೇಕತ್ವಂ ॥

ಎಂಬ ಸೂತ್ರದಲ್ಲಿಯೂ[1] ಅದರ ವೃತ್ತಿಯಲ್ಲಿಯೂ ಬರುವ "ಆವಿಷ್ಟಲಿಂಗ"ವೆಂಬ ಪದ ಆ ಗ್ರಂಥದಲ್ಲಿ ಮತ್ತೆಲ್ಲಿಯೂ ಕಂಡುಬರುವುದಿಲ್ಲ. ಕೇಶಿರಾಜನು ಆ ಪದಕ್ಕೆ ವಿವರಣೆಯನ್ನೂ ಕೊಟ್ಟಿಲ್ಲ. ಆ ವಿಷಯವನ್ನು ವಿದ್ವಾನ್ ಶ್ರೀ ಬಸವರಾಜು ಅವರು "ಶಬ್ದಮಣಿದರ್ಪಣ : ಸಮಸ್ಯೆಗಳು - 1 ಆವಿಷ್ಟಲಿಂಗ" ಎಂಬ ತಮ್ಮ ಲೇಖನದಲ್ಲಿ[2] ಪ್ರಸ್ತಾಪಿಸಿ, "ನಪುಂಸಕಲಿಂಗಾಂತ ಸಾಮೂಹಿಕೈಕವಚನವನ್ನೇ ಸದ್ಯಕ್ಕೆ ಆವಿಷ್ಟಲಿಂಗದ ಲಕ್ಷಣವನ್ನಾಗಿ ಗ್ರಹಿಸೋಣವೇ ?" ಎಂದೂ, "ವಿಶೇಷಣ ವಿಶೇಷ್ಯ ಪದಗಳ ಪೂರ್ವಾಪರ ಸ್ಥಾನವ್ಯತ್ಯಾಸವನ್ನೇ ಅವುಗಳೆರಡರ (ವಾಚ್ಯ ಮತ್ತು ಆವಿಷ್ಟ ಲಿಂಗಗಳ) ಭೇದ-ಲಕ್ಷಣಗಳೆಂಬುದಾಗಿ ಅಭ್ಯುಪಗಮಿಸಬಹುದೆ ?" ಎಂದೂ ಸಹ ಪ್ರಶ್ನಿಸಿದ್ದಾರೆ.

ಶ್ರೀಯುತರು ಲೇಖನದ ಆದಿಭಾಗದಲ್ಲಿಯೇ "ಆವಿಷ್ಟಲಿಂಗ"ಕ್ಕೆ ಕಿಟ್ಟೆಲ್ಲರ ಕೋಶ ದಲ್ಲಿ ಕೊಟ್ಟಿರುವ ಅರ್ಥವನ್ನೂ, "ಶಬ್ದಾನುಶಾಸನ ಪ್ರಕಾಶಿಕೆ"ಯಲ್ಲಿನ ಲಕ್ಷಣ ಮತ್ತು ಉದಾಹರಣೆಗಳನ್ನೂ[3] ಉಲ್ಲೇಖಿಸಿದ್ದರೂ, ಮುಂದೆ ಅವನ್ನು ಗಣನೆಗೆ ತೆಗೆದುಕೊಂಡಿಲ್ಲ. ಭಟ್ಟಾಕಲಂಕನು ಕೇಶಿರಾಜನಿಗಿಂತ ಈಚಿನವನೆಂಬುದೂ, ಭಟ್ಟಾಕಲಂಕನು ಕೊಟ್ಟಿರುವ ಲಕ್ಷಣ ಕೇಶಿರಾಜನು ಕೊಟ್ಟಿರುವ ಪ್ರಯೋಗಗಳಿಗೆ ಹೊಂದದೇ ಇರುವುದೂ ಇದಕ್ಕೆ ಕಾರಣಗಳಿರಬಹುದು. ಆದರೆ ಕೇಶಿರಾಜನು ಕೊಟ್ಟಿರುವ ಎರಡು ಪ್ರಯೋಗಗಳಿಂದಲೇ ಆವಿಷ್ಟ ಲಿಂಗದ ಲಕ್ಷಣವನ್ನು ನಿರ್ಧರಿಸುವುದು ಸಾಧುವೂ ಅಲ್ಲ ಸಾಧ್ಯವೂ ಅಲ್ಲ.

ಶಬ್ದಮಣಿದರ್ಪಣಕ್ಕಿಂತ ಪ್ರಾಚೀನವಾದ ಕನ್ನಡ ಲಕ್ಷಣ ಗ್ರಂಥಗಳಾದ ಕವಿರಾಜಮಾರ್ಗ, ಶಬ್ದಸ್ಮೃತಿ, ಭಾಷಾಭೂಷಣಗಳಲ್ಲಿ "ಆವಿಷ್ಟಲಿಂಗ" ಶಬ್ದ ಎಲ್ಲಿಯೂ ಕಂಡುಬರುವುದಿಲ್ಲ. ಆದುದರಿಂದ ಈ ಪದದ ಲಕ್ಷಣವನ್ನು ಸಂಸ್ಕೃತ ವ್ಯಾಕರಣ ಗ್ರಂಥಗಳ ಆಧಾರದಿಂದಲೇ ನಿರ್ಣಯಿಸಬೇಕಾಗಿದೆ.

ಪಾಣಿನೀಯ ಅಷ್ಟಾಧ್ಯಾಯಿಯಲ್ಲಿ "ಆವಿಷ್ಟಲಿಂಗ" ಶಬ್ದ ಕಂಡುಬರುವುದಿಲ್ಲ. ಆದರೆ ಪತಂಜಲಿಯ ವ್ಯಾಕರಣ ಮಹಾಭಾಷ್ಯದಲ್ಲಿ "ವಿಶೇಷಣಾನಾಂ ಚಾಜಾತೇಃ" (ಪಾಣಿನಿ

1.2.52) ಎಂಬ ಸೂತ್ರದ ಭಾಷ್ಯದಲ್ಲಿ "ಬದರೀ ಸೂಕ್ಷ್ಮಕಂಟಕಾ ಮಧುರಾ ವೃಕ್ಷಃ" ಎಂಬ ಪ್ರಯೋಗವೂ 'ಆವಿಷ್ಟಲಿಂಗಾ ಜಾತಿರ್ಯಲ್ಲಿಂಗ ಮುಪಾದಾಯ ಪ್ರವರ್ತತೇ, ಉತ್ಪತ್ತಿ ಪ್ರಭೃತ್ಯಾ ವಿನಾಶಾನ್ನ ತದ್‌ಲಿಂಗಂ ಜಹಾತಿ" ಎಂಬ ವಿವರಣೆಯೂ ಇದೆ. ಈ ಪ್ರಯೋಗದಲ್ಲಿ ವಿಶೇಷ್ಯವಾದ "ಬದರೀ" ಸ್ತ್ರೀಲಿಂಗ ಶಬ್ದವಾದರೂ ವಿಶೇಷಣವಾದ "ವೃಕ್ಷ" ಪುಲ್ಲಿಂಗ ಶಬ್ದ. ಕೈಯಟನು (ಕಾಲ ಕ್ರಿ.ಶ. 11ನೆಯ ಶತಮಾನ) ತನ್ನ "ಭಾಷ್ಯಪ್ರದೀಪ"ದಲ್ಲಿ ಭಾಷ್ಯದಲ್ಲಿನ ಆವಿಷ್ಟಲಿಂಗ ಪದಕ್ಕೆ "ನಿಯತಲಿಂಗ"ವೆಂಬ ಅರ್ಥವನ್ನು ಹೇಳಿದ್ದಾನೆ.[5]

ಭರ್ತೃಹರಿಯ (ಕಾಲ ಕ್ರಿ.ಶ. 5ನೆಯ ಶತಮಾನ) "ವಾಕ್ಯಪದೀಯ"ದಲ್ಲಿ ಮೂರು ಶ್ಲೋಕಗಳಲ್ಲಿ ಆವಿಷ್ಟಲಿಂಗ ಶಬ್ದವಿದೆ. ಇವುಗಳ ಪೈಕಿ ಮೊದಲ ಶ್ಲೋಕದ ವ್ಯಾಖ್ಯಾನದಲ್ಲಿ ಹೇಲಾರಾಜನು (ಕಾಲ ಕ್ರಿ.ಶ. 10ನೆಯ ಶತಮಾನ) ಆವಿಷ್ಟಲಿಂಗಕ್ಕೆ ನಿಯತಲಿಂಗವೆಂಬ ಅರ್ಥವನ್ನೇ ಕೊಟ್ಟಿದ್ದಾನೆ. ಉಳಿದ ಶ್ಲೋಕಗಳಲ್ಲೂ ಅದೇ ಅರ್ಥ ಸರಿಯಾಗುತ್ತದೆ.

ಸುಮಾರು ಕ್ರಿ.ಶ. 7ನೆಯ ಶತಮಾನದಲ್ಲಿ ರಚಿತವಾದ ಕಾಶಿಕಾವೃತ್ತಿಯಲ್ಲೂ ಆವಿಷ್ಟಲಿಂಗ ಶಬ್ದವು ನಿಯತಲಿಂಗವೆಂಬ ಅರ್ಥದಲ್ಲಿಯೇ ಪ್ರಯೋಗಿಸಲ್ಪಟ್ಟಿದೆ.[7] ಅಲ್ಲಿ ಉದಾಹೃತವಾದ ಗೋ ಪ್ರಕಾಂಡಂ, ಅಶ್ವ ಪ್ರಕಾಂಡಂ ಎಂಬ ಪದಗಳಲ್ಲಿ ವಿಶೇಷ್ಯಗಳಾದ ಗೋ ಮತ್ತು ಅಶ್ವ ಶಬ್ದಗಳು ಪುಲ್ಲಿಂಗ, ವಿಶೇಷಣವಾದ ಪ್ರಕಾಂಡ ಶಬ್ದ ನಪುಂಸಕಲಿಂಗ; ಗೋಮತಲ್ಲಿಕಾ, ಅಶ್ವಮತಲ್ಲಿಕಾ ಎಂಬ ಪದಗಳಲ್ಲಿನ ಮತಲ್ಲಿಕಾ ಸ್ತ್ರೀಲಿಂಗ ಶಬ್ದ.

ಭಟ್ಟಾಕಲಂಕನು ತನ್ನ ವ್ಯಾಖ್ಯಾನದಲ್ಲಿ ಅನೇಕ ಕಡೆ ಉದಾಹರಿಸಿರುವ ಜೈನೇಂದ್ರ ವ್ಯಾಕರಣ ಶಾಕಟಾಯನ ವ್ಯಾಕರಣಗಳಲ್ಲಿ ಆವಿಷ್ಟಲಿಂಗ ಶಬ್ದ ಕಂಡು ಬರುವುದಿಲ್ಲ. ಆದರೆ ಶಾಕಟಾಯನ ವ್ಯಾಕರಣಕಾರನು ತಾನೇ ರಚಿಸಿದ 'ಅಮೋಘ ವೃತ್ತಿ'ಯಲ್ಲಿ ಗೋಮತಲ್ಲಿಕಾ, ಅಶ್ವಮತಲ್ಲಿಕಾ ಎಂಬ ಪದಗಳನ್ನು ಕೊಟ್ಟು ಮತಲ್ಲಿಕಾದಿ ಶಬ್ದಗಳು ಆವಿಷ್ಟಲಿಂಗಗಳೆಂದು ಹೇಳಿದ್ದಾನೆ.[8]

ಮೇಲಿನ ಗ್ರಂಥಗಳಲ್ಲೆಲ್ಲಾ ನಿಯತಲಿಂಗವುಳ್ಳ ಒಂದು ಶಬ್ದವು ಬೇರೆ ಲಿಂಗದ ಶಬ್ದಕ್ಕೆ ವಿಶೇಷಣವಾಗಿ ಬಂದ ಸಂದರ್ಭದಲ್ಲಿಯೇ ಆವಿಷ್ಟಲಿಂಗ ಶಬ್ದವು ಪ್ರಯೋಗಿಸಲ್ಪಟ್ಟಿದೆ. ಬಹುಶಃ ಈ ಕಾರಣದಿಂದ, ಕಾಲಕ್ರಮದಲ್ಲಿ, "ಬೇರೆ ಲಿಂಗದ ಶಬ್ದಕ್ಕ ವಿಶೇಷಣವಾದ ನಿಯತಲಿಂಗ ಶಬ್ದ" ಎಂಬ ವಿಶಿಷ್ಟಾರ್ಥದಲ್ಲಿಯೂ ಆವಿಷ್ಟಲಿಂಗ ಶಬ್ದದ ಪ್ರಯೋಗ ರೂಢವಾದಂತೆ ತೋರುತ್ತದೆ.

ಭೋಜನು (ಕ್ರಿ.ಶ. 10ನೆಯ ಶತಮಾನದ ಅಂತ್ಯ/11ನೆಯ ಶತಮಾನದ ಆದಿ) ತನ್ನ 'ಶೃಂಗಾರ ಪ್ರಕಾಶ'ದಲ್ಲಿ ಸಾಮಾನ್ಯ ವಿಶಿಷ್ಟಾರ್ಥಗಳೆರಡರಲ್ಲೂ ಈ ಶಬ್ದವನ್ನು

ಪ್ರಯೋಗಿಸಿದ್ದಾನೆ. ಪ್ರಥಮ ಪ್ರಕಾಶದಲ್ಲಿ ನಾಮ, ಅವ್ಯಯ, ಅನುಕರಣ, ಕೃತ್, ತದ್ಧಿತ ಮತ್ತು ಸಮಾಸಗಳು ಪ್ರಾತಿಪದಿಕಗಳೆಂದು ಹೇಳಿ, ನಾಮಗಳನ್ನು ಆವಿಷ್ಟಲಿಂಗ ಮತ್ತು ಅನಾವಿಷ್ಟಲಿಂಗಗಳೆಂದು ಎರಡು ತೆರನಾಗಿ ವಿಭಜಿಸಿ, ಜಾತಿದ್ರವ್ಯ ಪರಿಮಾಣ ವಾಚಕಗಳು ಆವಿಷ್ಟಲಿಂಗಗಳು; ಗುಣವಾಚಕ, ಸಂಖ್ಯಾವಾಚಕ ಸರ್ವನಾಮಗಳು ಅನಾವಿಷ್ಟಲಿಂಗಗಳು ಎಂದು ನಿರೂಪಿಸಿದ್ದಾನೆ.[10] ದ್ವಿತೀಯ ಪ್ರಕಾಶದಲ್ಲಿ ಕೆಲವು ಶಬ್ದಗಳನ್ನು ಕೊಟ್ಟು, ಇವು ಆವಿಷ್ಟಲಿಂಗಗಳಾದುದರಿಂದ ಕ್ರಿಯಾವಿಶೇಷಣವಾಗಿ ಉಪಯುಕ್ತವಾದಾಗಲೂ ನಪುಂಸಕಲಿಂಗಗಳಲ್ಲವೆಂದು ಹೇಳಿದ್ದಾನೆ.[11] ಈ ಎರಡು ಕಡೆಗಳಲ್ಲೂ ಆವಿಷ್ಟಲಿಂಗ ಶಬ್ದವು ನಿಯತಲಿಂಗವೆಂಬರ್ಥದಲ್ಲಿ ಪ್ರಯುಕ್ತವಾಗಿದೆ.

ಪಂಚಮ ಪ್ರಕಾಶದಲ್ಲಿ, ಬೇರೆ ಲಿಂಗದ ಪದಕ್ಕೆ ವಿಶೇಷಣವಾದಾಗಲೂ ತನ್ನ ನಿಯತಲಿಂಗವನ್ನು ಬಿಡದಿರುವ ಶಬ್ದವನ್ನು ಆವಿಷ್ಟಲಿಂಗವೆಂದು ಕರೆದಿದ್ದಾನೆ. ಶೃಂಗಾರ ಪ್ರಕಾಶದ ಈ ಭಾಗವನ್ನು ಇದಕ್ಕೆ ಸಂವಾದಿಯಾದ ಭಟ್ಟಾಕಲಂಕನ ಮಂಜರೀ ಮಕರಂದದ ಭಾಗದೊಡನೆ ಹೋಲಿಸಬಹುದು.

ಶೃಂಗಾರ ಪ್ರಕಾಶದಲ್ಲಿ[12]	ಮಂಜರೀಮಕರಂದದಲ್ಲಿ[13]
ಲಿಂಗಂದ್ವಿಧಾ, ಶಬ್ದಲಿಂಗಮರ್ಥಲಿಂಗಂಚ	
ತದೇತಚ್ಛುದ್ಧಮಿಶ್ರಾದಿ ಭೇದಾತ್ ಷೋಢಾವಿಪ್ರಥತೇ ಶುದ್ಧಂ, ಮಿಶ್ರಂ, ಸಂಕೀರ್ಣಂ, ಉಪಸರ್ಜನಂ, ಆವಿಷ್ಟಂ, ಅವ್ಯಕ್ತಂಚ ।	ತದೇತಲ್ಲಿಂಗಂ ಷೋಢಾ-ಶುದ್ಧಂ, ಮಿಶ್ರಂ, ಸಂಕೀರ್ಣಂ, ಉಪಸರ್ಜನಂ, ಆವಿಷ್ಟಂ, ಅವ್ಯಕ್ತಂಚೇತಿ.
ತೇಷ್ವೇಕ ಸಂಸ್ಕಾರ ಹೇತುಶ್ಶುದ್ಧಂ...	ತತ್ರ ನಿಯತ್ಯೆಕ ಸಂಸ್ಕಾರೋಪಗ್ರಾಹಿ ಲಿಂಗಂ ಶುದ್ಧಂ....
ಸಂಸ್ಕಾರ ದ್ವಯೋಪಗ್ರಾಹಿ ಮಿಶ್ರಂ....	ಸಂಸ್ಕಾರದ್ವಯೋಪಗ್ರಾಹಿ ಮಿಶ್ರಂ...
ಸಂಸ್ಕಾರ ತ್ರಯ ಯೋಗಿ ಸಂಕೀರ್ಣಂ...	ಸಂಸ್ಕಾರತ್ರಯೋಪಗ್ರಾಹಿ ಸಂಕೀರ್ಣಂ.....
ವಿಶೇಷ್ಯ ಶಬ್ದನಿಯತ ವಿಶೇಷಣ ರೂಪಮುಪಸರ್ಜನಂ.	ವಿಶೇಷಣಂ ಸತ್ ವಿಶೇಷ್ಯಲಿಂಗಾಯತ್ತ ಸಂಸ್ಕಾರೋಪಗ್ರಾಹಿ ಉಪಸರ್ಜನಂ...
ವಿಶೇಷಣತ್ವೇಪಿ ನಿಯತಶಬ್ದ ಸಂಸ್ಕಾರಾರ್ಹಮಾವಿಷ್ಟಂ; ಪ್ರಕೃತಿಃ, ವಿಷಯಃ, ಪ್ರಧಾನಂ, ಭಾರ್ಯಾ, ದಾರಾಃ ಕಲತ್ರಮಿತಿ ಲಿಂಗ ನಿಮಿತ್ತ ಶಬ್ದಸಂಸ್ಕಾರಾನರ್ಹಮವ್ಯಕ್ತಂ.	ವಿಶೇಷಣಂ ಸದಪಿ ವಿಶೇಷ್ಯ ಲಿಂಗಾನಧೀನಂ ನಿಯತ ಸಂಸ್ಕಾರೋಪಗ್ರಾಹಿ ಆವಿಷ್ಟಂ.... ಲಿಂಗಾಯತ್ತ ಸಂಸ್ಕಾರಾನುಗ್ರಾಹಿ ಅವ್ಯಕ್ತಂ.

ಇವೆರಡರ ಹೋಲಿಕೆಯಿಂದ, ಭಟ್ಟಾಕಲಂಕನು ಭೋಜನಿಗೆ ಅಕ್ಷರಶಃ ಋಣಿ ಎಂದು ಸ್ಪಷ್ಟವಾಗುವುದು. ಭಟ್ಟಾಕಲಂಕನು "ಅನಾವಿಷ್ಟ" ಶಬ್ದವನ್ನೂ, ನಿಯತಲಿಂಗವೆಂಬ

ಸಾಮಾನ್ಯಾರ್ಥದಲ್ಲಿ ''ಆವಿಷ್ಟ ವಿಶೇಷಣ''ವೆಂಬ ಶಬ್ದವನ್ನೂ ತನ್ನ ವ್ಯಾಖ್ಯಾನದಲ್ಲಿ[14] ಪ್ರಯೋಗಿಸಿದ್ದಾನೆ.

ಇದುವರೆಗೆ ಸಂಸ್ಕೃತ ವೈಯಾಕರಣರು ಯಾವ ಅರ್ಥಗಳಲ್ಲಿ ಆವಿಷ್ಟಲಿಂಗ ಶಬ್ದವನ್ನು ಪ್ರಯೋಗ ಮಾಡಿದ್ದಾರೆಂದು ಪರಿಶೀಲಿಸಿಯಾಯಿತು. ಈಗ ಕೇಶಿರಾಜನ ''ಯುಗಳಾರ್ಥದ....'' ಸೂತ್ರವನ್ನೂ ಅದರ ವೃತ್ತಿ ಪ್ರಯೋಗಗಳನ್ನೂ ಪರಿಶೀಲಿಸ ಬಹುದು. ಸೂತ್ರದ ವೃತ್ತಿ ಪ್ರಯೋಗಗಳು[15] ಇಂತಿವೆ :

ವೃತ್ತಿ : ಯುಗಳಾರ್ಥದೊಳ್ ವರ್ತಿಸುವ ಬಹುವಚನಕ್ಕಮಾವಿಷ್ಟಲಿಂಗಕ್ಕಂ ಕ್ರಿಯಾ ವಿಶೇಷಣಕ್ಕಂ ಬಲ್ಲರಿಂದೇಕವಚನಮಕ್ಕುಂ.

ಪ್ರಯೋಗಂ : ಪದಯುಗಳಂಗಳ್ಗೆ - ಪದಯುಗಂ.

ಆವಿಷ್ಟಲಿಂಗಕ್ಕೆ : ವೇದಂಗಳ್ ಪ್ರಮಾಣಂ. ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ.

ಕ್ರಿಯಾವಿಶೇಷಣಕ್ಕೆ : ಏನೆಂಬ ಪೆಂಪೊ ! (ಎಂದರೆ) ಎಂತಹವರ್ಗಳೆಂಬ ಪೆರ್ಮೆಯೊ ! (ಎಂಬಲ್ಲಿ) 'ಎಂಬ' ಎಂಬೀ ಕ್ರಿಯೆಗೆ 'ಏನ್' ಎಂಬ ಕಾರಕಂ ವಿಶೇಷಣವಾಗಿ ಬಹುವಚನವಾಯ್ತು.

ಕಂ॥ ಏನೆಂಬ ಪೆಂಪೊ ಮನುವುಂ
ತಾನುಂ ಸಚ್ಚರಿತರಮರ ಕುಜಮುಂ ತಾನುಂ ।
ದಾನಿಗಳಂಭೋನಿಧಿಯುಂ
ತಾನುಂ ಗಂಭೀರರೆನಿಪನುದಯಾದಿತ್ಯಂ ॥

ತಿಬ್ಬಂ ಮಾಡಿದಂ = ತಿಬ್ಬವೆಹಗಹುದಹಗೆ ಮಾಡಿದಂ.
ದೋಷ ರಹಿತಂ ಪೇಳ್ದಂ = ದೋಷರಹಿತವೆಹಗಹುದಹಗೆ ಪೇಳ್ದಂ.
ಇದೀಗ ಕ್ರಿಯಾ ವಿಶೇಷಣಂ.

ಸೂತ್ರ ವೃತ್ತಿಗಳಲ್ಲಿನ ಆವಿಷ್ಟಲಿಂಗ ಶಬ್ದವನ್ನು ನಿಯತಲಿಂಗವೆಂಬ ಸಾಮಾನ್ಯಾರ್ಥದಲ್ಲಿ ತೆಗೆದುಕೊಂಡರೆ, ನಿಯತಲಿಂಗ ಶಬ್ದಗಳನ್ನೆಲ್ಲ ಏಕವಚನದಲ್ಲಿ ಪ್ರಯೋಗಿಸಬೇಕೆಂದು ಹೇಳಿದಂತಾಗುವುದು. ಇದು ಸರಿಯಲ್ಲವೆಂಬುದು ಸುಸ್ಪಷ್ಟ. ಭಿನ್ನಲಿಂಗದ ಶಬ್ದಗಳಿಗೆ ವಿಶೇಷಣವಾದಾಗಲೂ ತನ್ನ ನಿಯತ ಲಿಂಗವನ್ನು ಬಿಡದಿರುವ ಶಬ್ದವೆಂಬ ವಿಶಿಷ್ಟಾರ್ಥದಲ್ಲಿ ತೆಗೆದುಕೊಂಡರೆ, ''ವೇದಾಃ ಪ್ರಮಾಣಂ'',''ಪ್ರತಿಭಾ ಅಭ್ಯಾಸಃ ವಿದ್ವತ್ಸೇವಾ ಕಾವ್ಯ ಪರಿಚಯಶ್ಚ ಕವಿತಾಯಾಃ ಕಾರಣಂ''ಎಂಬ ಸಂಸ್ಕೃತ ಪ್ರಯೋಗಗಳಲ್ಲಿ ಪ್ರಮಾಣಂ,

ಕಾರಣಂ ಈ ಶಬ್ದಗಳು ಅವಿಷ್ಟಲಿಂಗಗಳೆಂದು ಹೇಳಿದರೆ ಸರಿಯಾಗುವುದು. ಏಕೆಂದರೆ ಮೊದಲನೆಯ ಪ್ರಯೋಗದಲ್ಲಿ ವಿಶೇಷ್ಯವಾದ ವೇದ ಶಬ್ದ ಪುಲ್ಲಿಂಗ, ಪ್ರಮಾಣ ನಪುಂಸಕಲಿಂಗ; ಎರಡನೆಯ ಪ್ರಯೋಗದಲ್ಲಿ ಪ್ರತಿಭಾ ಮತ್ತು ವಿದ್ವತ್ತೆವಾ ಇವು ಸ್ತ್ರೀಲಿಂಗ ಶಬ್ದಗಳು, ಅಭ್ಯಾಸ ಮತ್ತು ಕಾವ್ಯ ಪರಿಚಯ ಇವು ಪುಲ್ಲಿಂಗ ಶಬ್ದಗಳು, ವಿಶೇಷಣವಾದ ಕಾರಣ ಶಬ್ದ ನಪುಂಸಕ ಲಿಂಗ. ಆದರೆ ಕನ್ನಡ ಅನುವಾದ "ವೇದಂಗಳ್ ಪ್ರಮಾಣಂ" ಎಂಬಲ್ಲಿ ವಿಶೇಷ್ಯ ವಿಶೇಷಣಗಳೆರಡೂ ನಪುಂಸಕಲಿಂಗ ಶಬ್ದಗಳೇ: ಹೀಗೆಯೇ, "ಪ್ರತಿಭೆಯುಮಭ್ಯಾಸಮುಂ ವಿದ್ವತ್ತೆವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ" ಎಂಬ ಪ್ರಯೋಗದಲ್ಲಿಯೂ ವಿಶೇಷ್ಯ ವಿಶೇಷಣಗಳಾದ ಎಲ್ಲ ಶಬ್ದಗಳೂ ನಪುಂಸಕಲಿಂಗದಲ್ಲಿಯೇ ಇವೆ. ಆದುದರಿಂದ ಕನ್ನಡದಲ್ಲಿ ಈ ಪ್ರಯೋಗಗಳು ಅವಿಷ್ಟಲಿಂಗಕ್ಕೆ ಉದಾಹರಣೆಗಳಾಗಲಾರವು.

ಪ್ರಮಾಣ ಮತ್ತು ಕಾರಣ ಶಬ್ದಗಳನ್ನು ಏಕವಚನದಲ್ಲಿಯೇ ಉಪಯೋಗಿಸಬೇಕೇ ಎಂಬ ವಿಚಾರವನ್ನು ಈಗ ಪರ್ಯಾಲೋಚಿಸಬಹುದು.

ಶಬ್ದಕಲ್ಪದ್ರುಮಕಾರನು, ಪ್ರಮಾಣ ಶಬ್ದವು ನಿತ್ಯ ನಪುಂಸಕಲಿಂಗೈಕವಚನವೆಂದು ಮೊದಲು ಹೇಳಿದ್ದರೂ, ಬಹುವಚನದಲ್ಲೂ ಪ್ರಯೋಗವಿದೆ ಎಂದು ಅನಂತರ ಹೇಳಿದ್ದಾನೆ.[16] ವಾಚಸ್ಪತ್ಯದಲ್ಲಿ, "ವೇದಾಃ ಪ್ರಮಾಣಂ" ಎಂಬಲ್ಲಿ, ವೇದಗಳೆಲ್ಲ ಒಂದೇ ಜಾತಿಗೆ ಸೇರಿದುದರಿಂದ ಪ್ರಮಾಣ ಶಬ್ದ ಏಕವಚನದಲ್ಲಿದೆಯೆಂದೂ, "ಪ್ರತ್ಯಕ್ಷಾನು ಮಾನೋಪಮಾನಾಗಮಾಃ ಪ್ರಮಾಣಾನಿ" ಎನ್ನುವಾಗ ಪ್ರತ್ಯಕ್ಷ ಅನುಮಾನ ಮೊದಲಾದುವು ಬೇರೆ ಬೇರೆ ಜಾತಿಯಾದುದರಿಂದ ಪ್ರಮಾಣಾನಿ ಎಂದು ಬಹುವಚನ ಪ್ರಯೋಗ ಮಾಡಿದೆಯೆಂದೂ ಹೇಳುವ ಪ್ರಸಿದ್ಧ ನೈಯಾಯಿಕನಾದ ಗದಾಧರನ ಅಭಿಪ್ರಾಯದ ಉಲ್ಲೇಖವಿದೆ.[17] ಇಷ್ಟೇ ಇಲ್ಲದೆ, ಪ್ರಮಾಣ ಶಬ್ದ ಸಾಮಾನ್ಯವಾಗಿ ನಪುಂಸಕ ಲಿಂಗವಾದರೂ ಇದಕ್ಕೆ ಸ್ತ್ರೀಲಿಂಗವೂ ಉಂಟೆಂದು ಹೇಳಿ "ಸಿದ್ಧಾಂತ ಕೌಮುದಿ"ಯ ಭಾಗವನ್ನು[18] ವಾಚಸ್ಪತ್ಯಕಾರನು ಉದಾಹರಿಸಿದ್ದಾನೆ. ಆಪ್ಟೆಯವರ ಸಂಸ್ಕೃತ-ಇಂಗ್ಲಿಷ್ ಕೋಶದಲ್ಲಿ "ವೇದಾಃ ಪ್ರಮಾಣಾಃ" ಎಂದು ಪುಲ್ಲಿಂಗ ಬಹುವಚನ ಪ್ರಯೋಗವೂ ಉದಾಹರಿಸಲ್ಪಟ್ಟಿದೆ.[19] "ಸಿದ್ಧಾಂತ ಕೌಮುದೀ" ಮತ್ತು ಆಪ್ಟೆ ಕೋಶಗಳಲ್ಲಿರುವ ಪ್ರಯೋಗ ಗಳನ್ನು - ಕೇಶಿರಾಜನಿಗಿಂತ ಈಚಿನ ಗ್ರಂಥಗಳಲ್ಲಿವೆ ಯೆಂಬ ಕಾರಣದಿಂದ - ಗಣನೆಗೆ ತೆಗೆದುಕೊಳ್ಳದಿದ್ದರೂ, ಪ್ರಮಾಣ ಶಬ್ದ ನಿತ್ಯೈಕ ವಚನವಲ್ಲವೆಂಬುದು ನಿರ್ವಿವಾದ.

"ಕಾರಣ" ಶಬ್ದಕ್ಕೂ ಬಹುವಚನದಲ್ಲಿ ಪ್ರಯೋಗಗಳಿವೆ.[20]

ನೈಸರ್ಗಿಕೀ ಚ ಪ್ರತಿಭಾ ಶ್ರುತಂ ಚ ಬಹುನಿರ್ಮಲಮ್ ।
ಅಮಂದಶ್ಚಾಭಿಯೋಗೋಸ್ಯಾಃ ಕಾರಣಂ ಕಾವ್ಯ ಸಂಪದಃ ॥

ಎಂಬ ದಂಡಿಯ "ಕಾವ್ಯಾದರ್ಶ" (1-103) ಶ್ಲೋಕದ ವ್ಯಾಖ್ಯಾನದಲ್ಲಿ, ಪ್ರತಿಭಾದಿಗಳು ಒಟ್ಟು ಸೇರಿ ಕಾವ್ಯ ಸಂಪತ್ತಿಗೆ ಕಾರಣ, ಪ್ರತ್ಯೇಕವಾಗಿ ಅಲ್ಲವೆಂದು ಸೂಚಿಸಲು ಏಕವಚನ ಪ್ರಯೋಗ ಮಾಡಿದೆಯೆಂದು, ಜೀವಾನಂದ ವಿದ್ಯಾಸಾಗರರು ಹೇಳಿದ್ದಾರೆ.[21]

ಪ್ರಮಾಣ, ಕಾರಣ ಮೊದಲಾದ ಶಬ್ದಗಳನ್ನು ಏಕವಚನದಲ್ಲಿ ಉಪಯೋಗಿಸುವುದಕ್ಕೂ ಆವಿಷ್ಟ ಲಿಂಗತ್ವಕ್ಕೂ ಯಾವ ಸಂಬಂಧವೂ ಇಲ್ಲವೆಂಬುದೂ, ಯಾವ ಯಾವ ಸಂದರ್ಭಗಳಲ್ಲಿ ಏಕವಚನ ಬಹುವಚನ ಪ್ರಯೋಗ ಮಾಡಬೇಕೆಂಬುದೂ ಮೇಲಿನ ಆಧಾರಗಳಿಂದ ಸ್ಪಷ್ಟವಾಗುತ್ತದೆ.

ಪ್ರಮಾಣ ಮೊದಲಾದ ಶಬ್ದಗಳನ್ನು, ಬಹುವಚನದಲ್ಲಿರುವ ಪದಕ್ಕೆ ವಿಶೇಷಣವಾದಾಗಲೂ ಉಪಯೋಗಿಸಬಹುದೆಂದು ಹೇಳುವುದೇ ಸೂತ್ರಕಾರನ ಉದ್ದೇಶವಾಗಿದ್ದರೆ, ಆದಕ್ಕೆ ಈ ಸೂತ್ರದ ಆವಶ್ಯಕತೆಯಿಲ್ಲ.

ಅಕ್ಕುಂ ಜಾತಿಯೊಳೇಕ
ತ್ವಕೆ ಬಹುತ್ವಂ ಬಹುತ್ವದೆಡೆಗೇಕತ್ವಂ।
ಪೊಕ್ಕು ವಿಶೇಷಣಮಕ್ಕುಂ
ಮೊಕ್ಕಳಮಾ ಜಾತಿಯಲ್ಲದಲ್ಲಿಯುಮೆಂಬರ್ ॥

ಎಂಬ ಸೂತ್ರದ[22] ಉತ್ತರಾರ್ಧದಿಂದಲೂ, "ಭಾವದೇಕತೆ ಬಹುತಾಧೀನಂ" ಎಂಬ ಸೂತ್ರಭಾಗದಿಂದಲೂ[23] ಈ ಉದ್ದೇಶ ನೆರವೇರುವುದು. ಆ ಸೂತ್ರಗಳ ವೃತ್ತಿಯಲ್ಲಿ ಕೊಟ್ಟಿರುವ "ಮಹೇಂದ್ರ ಮಹೈಶ್ವರ್ಯಂಗಳಿವೆಲ್ಲ ಮಧ್ರುವಂ. (ಇವೆಲ್ಲಮಧ್ರುವಂಗಳ್)" ಮತ್ತು "ಕಣ್ಗಳ ಕೂರ್ಪು, ಕಣ್ಗಳ ಕೂರ್ಪುಗಳ್" ಎಂಬ ಪ್ರಯೋಗಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

"ಯುಗ" ಎಂದರೆ "ಜೋಡಿ" ಎಂದು ಅರ್ಥವಾಗುವುದರಿಂದ, "ಪದಯುಗಂ" ಎಂಬುದು ಸಹಜವಾಗಿ ಏಕವಚನವೇ. ಆದುದರಿಂದ "ಯುಗಳಾರ್ಥದ ಬಹುವಚನಕ್ಕೆ ಏಕತ್ವಂ ನೆಗಳ್ಗುಂ" ಎಂಬ ಸೂತ್ರಭಾಗವೂ ಅನಾವಶ್ಯಕ. ಹೀಗೆ ಈ ಸೂತ್ರದ ಪೂರ್ವಾರ್ಧದ ಆವಶ್ಯಕತೆಯಿಲ್ಲ.

ಕ್ರಿಯಾವಿಶೇಷಣಕ್ಕೆ ಏಕತ್ವವನ್ನು ಹೇಳುವ ಭಾಗ ಸರಿಯಾದರೂ, ವೃತ್ತಿಯಲ್ಲಿನ "ಎಂಬ ಎಂಬೀ ಕ್ರಿಯೆಗೆ ಏನ್ ಎಂಬ ಕಾರಕಂ ವಿಶೇಷಣಮಾಗಿ ಬಹುವಚನಮಾಯ್ತು" ಎಂಬ ವಿವರಣೆ ಅಪ್ರಸ್ತುತವಾಗಿ ತೋರುತ್ತದೆ. ಬಹುಶಃ ಇದನ್ನು ಗಮನಿಸಿಯೇ ಲಿಂಗಣಾರಾಧ್ಯನು ಪ್ರಯೋಗಗಳನ್ನು ಕೊಡುವಾಗ ಈ ವಿವರಣೆಯನ್ನು ಬಿಟ್ಟಿರುವಂತೆ ತೋರುತ್ತದೆ.[15]

ಸೂತ್ರವೃತ್ತಿಗಳಲ್ಲಿ ಕಂಡುಬರುವ ಮೇಲಿನ ನ್ಯೂನತೆಗಳನ್ನು ಗಮನಿಸಿದರೆ, ಈ "ಯುಗಳಾರ್ಥದ ಬಹುವಚನ...." ಸೂತ್ರ ಮತ್ತು ಅದರ ವೃತ್ತಿ ಪ್ರಕ್ಷಿಪ್ತಗಳಿರಬಹುದೇ ಎಂಬ ಸಂದೇಹವುಂಟಾಗುತ್ತದೆ. ಆದರೆ ಇದುವರೆಗೆ ಪ್ರಕಟವಾದ ಎಲ್ಲ ಆವೃತ್ತಿಗಳಲ್ಲೂ ಈ ಸೂತ್ರ ಕಂಡುಬರುತ್ತದೆ. ಈ ಸೂತ್ರ ಕೇಶಿರಾಜನದೇ ಆಗಿದ್ದರೆ "ತ್ರಿಭುವನಮಂ ಪೇೞ್ದೊಡಂ ಕನ್ನಡದೊಳ್ ತ್ರಿಭುವನಂಗಳ್ ಎನಲಕ್ಕುಂ" ಎಂದು ಹಿಂದೆ - 137ನೆಯ ಸೂತ್ರದ ಪ್ರಯೋಗ ಭಾಗದ ಕೊನೆಯಲ್ಲಿ - ಹೇಳಿರುವುದರಿಂದ ಆ ಪ್ರಯೋಗವನ್ನು ಹೋಲುವ "ಪದಯುಗಂಗಳ್" "ಪದಯುಗಳಂಗಳ್" ಎನ್ನುವ ಪ್ರಯೋಗಗಳು ಅಸಾಧುವೆಂದು ಹೇಳಲು "ಯುಗಳಾರ್ಥದ ಬಹುವಚನಕ್ಕೆ ಏಕತ್ವಂ ನೆಗೞ್ಗುಂ" ಎಂದು ಹೇಳಿದ್ದಾನೆಂದು ಸಮಾಧಾನ ಹೇಳಬಹುದು. ಆದರೆ, "ಅವಿಷ್ಟಲಿಂಗ- ದೆಡೆಗೇಕತ್ವಂ" ಎನ್ನುವುದಕ್ಕೆ ಯಾವ ಸಮಾಧಾನವೂ ಕಾಣಬರುವುದಿಲ್ಲ. ಸಂಸ್ಕೃತ ವ್ಯಾಕರಣದ ಪ್ರಭಾವಕ್ಕೊಳಗಾಗಿ ಕನ್ನಡ ವ್ಯಾಕರಣಕ್ಕೆ ಅನುಪಯುಕ್ತವಾದ ಮತ್ತು ಮುಂದೆ ತಾನು ಎಲ್ಲಿಯೂ ಉಪಯೋಗಿಸಿಕೊಳ್ಳದ "ನಾಮಿ" ಸಂಜ್ಞೆಯನ್ನು[24] 9ನೆಯ ಸೂತ್ರದಲ್ಲಿ ಹೇಳಿರುವಂತೆ, "ವೇದಾಃ ಪ್ರಮಾಣಂ" ಎಂಬ ಪ್ರಯೋಗದಿಂದಲೂ ದಂಡಿ; ನಾಗವರ್ಮರ ಪ್ರಯೋಗಗಳಿಂದಲೂ[25] ಪ್ರಭಾವಿತನಾಗಿ, ಸಂಸ್ಕೃತ ಪ್ರಯೋಗಕ್ಕೆ ಮಾತ್ರ ಅನ್ವಯಿಸುವ ಅವಿಷ್ಟಲಿಂಗ ಸಂಜ್ಞೆಯನ್ನು, ಅನಾವಶ್ಯಕವಾಗಿ ಈ ಸೂತ್ರದಲ್ಲಿ ಸೇರಿಸಿದ್ದಾನೆಂದು ಹೇಳಲೇಬೇಕಾಗುತ್ತದೆ. ಕೊನೆಯದಾಗಿ ಕೋಶಗಳಲ್ಲಿ "ಅವಿಷ್ಟಲಿಂಗ"ಕ್ಕೆ ಕೊಟ್ಟಿರುವ ಅರ್ಥದ ವಿಚಾರ ಕಿಟ್ಟೆಲ್ಲರು[26] ಈ ಪದಕ್ಕೆ ಕೊಟ್ಟಿರುವ 'a noun which possesses or has the force of all three genders' ಎಂಬ ವಿವರಣೆ ತಪ್ಪು. ಈ ವಿವರಣೆ "ವಾಚ್ಯ ಲಿಂಗಕ್ಕೆ" ಹೊಂದುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಅವಿಷ್ಟಲಿಂಗಕ್ಕೆ "ವಿಶೇಷಣಕ್ಕೆ ಅಧೀನವಾದ ಲಿಂಗ, ವಾಚ್ಯಲಿಂಗ" ಎಂದು ಅರ್ಥಕೊಟ್ಟು ಶಬ್ದಮಣಿದರ್ಪಣದಲ್ಲಿನ ವೃತ್ತಿ ಪ್ರಯೋಗಗಳನ್ನು ಕೊಟ್ಟಿದ್ದಾರೆ.[27] "ವಿಶೇಷಣಕ್ಕೆ ಅಧೀನವಾದ ಲಿಂಗ" ಎಂದರೆ ವಿಶೇಷ್ಯದ ಲಿಂಗ ವಿಶೇಷಣಕ್ಕೆ ಅಧೀನವಾಗಿದೆಯೆಂದು ಹೇಳಿದಂತಾಗುವುದು. ವಾಚ್ಯಲಿಂಗ ಅವಿಷ್ಟಲಿಂಗಕ್ಕೆ ವಿರುದ್ಧವಾದುದು. ಆದುದರಿಂದ ಈ ನಿಘಂಟಿನಲ್ಲಿನ ಅರ್ಥಗಳೂ ತಪ್ಪು. ಬಹುಶಃ ಈ ತಪ್ಪು ಕಿಟ್ಟೆಲ್ಲರ ನಿಘಂಟಿನ ಪ್ರಭಾವದಿಂದ ಆಗಿರಬಹುದು. ಸರಿಯಾದ ಅರ್ಥ, "ನಿಯತಲಿಂಗ; ವಿಶೇಷ್ಯಕ್ಕೆ ಅಧೀನವಲ್ಲದ ಲಿಂಗ" ಎಂದಿದ್ದು, ಶಬ್ದಾನುಶಾಸನದಲ್ಲಿನ ಪ್ರಯೋಗಗಳನ್ನು ಕೊಡಬೇಕಾಗಿತ್ತು.

ಸಂಸ್ಕೃತ - ಇಂಗ್ಲೀಷ್ ನಿಘಂಟುಗಳಲ್ಲಿ "ಅವಿಷ್ಟಲಿಂಗ"ದ ಅರ್ಥವನ್ನು ಸರಿಯಾಗಿ ಕೊಟ್ಟಿರುತ್ತಾರೆ. ವಿವರಗಳು ಹೀಗಿವೆ :

1. ಅವಿಷ್ಟ a (noun) which in every relationship preserves its own gender (ನಿಯತಲಿಂಗ) e.g. ಪ್ರಧಾನಮ್, ಅರ್ಥಃ, ಉಪಸರ್ಜನಮ್

— Apte's the practical Sanskrit-English Dictionary, 1957 Revised Edition (Prasad Prakashan Poona)

2. A - vishta - linga. mfn. 'having a fixed gender', (in Gr.) a word which does not change its gender.
— A Sanskrit-English Dictionary, Monier Monier-Williams (New Edition 1899) Reprint 1963.

3. ಆವಿಷ್ಟಲಿಂಗ. having a fixed gender, as opposed to ಅನಾವಿಷ್ಟ possessed of all genders c.f. ಲಿಂಗ ಆವಿಷ್ಟಲಿಂಗಾ ಜಾತಿಃ । ಯಲ್ಲಿಂಗ ಮುಪಾದಾಯ ಪ್ರವರ್ತತೇ ನ ತಲ್ಲಿಂಗಂ ಜಹಾತಿ, M.Bh. on 1.2.52, e.g. the word ಪ್ರಮಾಣ in ಪ್ರಮಾಣಂ ವೇದಾಃ
— A Dictionary of Sanskrit Grammar, K. V. Abhyankar (Oriential Institute, Baroda, 1961)

ಟಿಪ್ಪಣಿಗಳು

1. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆವೃತ್ತಿ (ಬೆಂಗಳೂರು, 1920)ಯಲ್ಲಿ 144ನೆಯ ಸೂತ್ರ. ಮುಂದೆಯೂ ಸೂತ್ರ ಸಂಖ್ಯೆಗಳನ್ನು ಈ ಆವೃತ್ತಿಯಲ್ಲಿರುವಂತೆ ಕೊಟ್ಟಿದೆ.
2. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ; ಸಂಪುಟ 63, ಸಂಚಿಕೆ 1 (ಜೂನ್ 1978), ಪುಟ 65-69.
3. ಶಬ್ದಾನುಶಾಸನ ಪ್ರಕಾಶಿಕೆಯಿಂದ ಉದ್ಧರಿಸಿಕೊಟ್ಟಿರುವ ಭಾಗದಲ್ಲಿ 'ಅನಧೀನವಾಗಿ' ಎಂಬುದಕ್ಕೆ ಬದಲು 'ಅಧೀನವಾಗಿ' ಎಂದು ತಪ್ಪುಬಿದ್ದಿದೆ. ಸರಿಯಾದ ಪಾಠ "ವಿಶೇಷಣವಾಗಿದ್ದರೂ ವಿಶೇಷ್ಯಲಿಂಗಕ್ಕೆ ಅನಧೀನವಾಗಿ ನಿಯತ ಸಂಸ್ಕಾರೋಪ ಗ್ರಾಹಿಯಾದುದು ಆವಿಷ್ಟಲಿಂಗವೆಂಬುದು" ಎಂದಿರಬೇಕು.

   ಶಬ್ದಾನುಶಾಸನದ ಸ್ವೋಪಜ್ಞ ಮಂಜರೀ ಮಕರಂದ ವ್ಯಾಖ್ಯಾನದಲ್ಲೂ "ವಿಶೇಷ್ಯ ಲಿಂಗಾನಧೀನಂ" ಎಂದಿದೆ. — ಭಟ್ಟಾಕಲಂಕದೇವಕೃತ ಕರ್ಣಾಟಕ ಶಬ್ದಾನುಶಾಸನಂ; ಸಂಪಾದಕ ಆರ್. ನರಸಿಂಹಾಚಾರ್ (ಬೆಂಗಳೂರು, 1923) ಪುಟ 139
4. ವ್ಯಾಕರಣ ಮಹಾಭಾಷ್ಯಂ (ಮೋತೀಲಾಲ್ ಬನಾರಸೀದಾಸ್, 1967) ದ್ವಿತೀಯ ಖಂಡಂ, ಪುಟ 64
5. ಆವಿಷ್ಟಂ ಲಿಂಗಂ ಯಯಾ ಸಾऽವಿಷ್ಟಲಿಂಗಾ ನಿಯತಲಿಂಗೇತ್ಯರ್ಥಃ ।
   ...ಜಾತೇರುತ್ಪತ್ತಿ ವಿನಾಶಾಯೋಗಾತ್ ಶಬ್ದ ವ್ಯವಹಾರಗತಾವುತ್ಪತ್ತಿ
   ವಿನಾಶೌ ಗೃಹ್ಯೇತೇ । ತೇನಾಸಂಸಾರಂ ಯಾವಚ್ಛಬ್ದೋ
   ವ್ಯವಹಾರಸಾವಜ್ಞಾಯತೇರ್ನಿಯತ ಲಿಂಗತ್ವಮಿತ್ಯರ್ಥಃ ।
   — ಮೇಲಿನ ಗ್ರಂಥದಲ್ಲಿ ಅದೇ ಪುಟದಲ್ಲಿ
6. ವೃತ್ತಿ ಸಮುದ್ದೇಶದ 317, 319 ಮತ್ತು 328ನೆಯ ಶ್ಲೋಕಗಳು.
   ಹೇಲಾರಾಜನ ವ್ಯಾಖ್ಯಾನ - ಆವಿಷ್ಟಂ ಲಿಂಗಂ ಯಯಾ ಸಾ ಆವಿಷ್ಟಲಿಂಗಾ
   ನಿಯತಲಿಂಗೇತ್ಯರ್ಥಃ । ..... ಜಾತಿ ಶಬ್ದಾನಾಂ ನಿಯತ ಲಿಂಗತಾ ಸ್ವಭಾವಾತ್ ।
   — Vakyapadiya of Bhartrhari with Prakirnaka Prakasa of Helaraja, Kanda III part ii;
   Editor K. A. Subramania Iyer (Deccan College, Poona; 1973)
7. "ಪ್ರಶಂಸಾವಚನೈಶ್ಚ" (ಪಾಣಿನಿ 2.1.66) ಎಂಬ ಸೂತ್ರದ ವೃತ್ತಿಯಲ್ಲಿ, ರೂಢಿಶಬ್ದಾಃ ಪ್ರಶಂಸಾವಚನಾ ಗೃಹ್ಯಂತೇ ಮತಲ್ಲಿಕಾದಯಃ, ತೇ ಚಾವಿಷ್ಟಲಿಂಗತ್ವಾದನ್ಯ ಲಿಂಗೇಪಿ ಜಾತಿಶಬ್ದೇ ಸ್ವಲಿಂಗೋಪಾದಾನಾ ಏವ ಸಮಾನಾಧಿಕರಣಾ ಭವಂತಿ । ಗೋ ಪ್ರಕಾಂಡಂ । ಅಶ್ವಪ್ರಕಾಂಡಂ । ಗೋಮತಲ್ಲಿಕಾ । ಅಶ್ವಮತಲ್ಲಿಕಾ ।

ಇದರ ಮೇಲೆ ಹರದತ್ತ (ಸು.ಕ್ರಿ.ಶ. 1100) ನ ಪದ ಮಂಜರೀ ವ್ಯಾಖ್ಯಾನದಲ್ಲಿ, ಅವಿಷ್ಟ ಲಿಂಗತ್ವಾದಿತಿ । ನಿಯತಲಿಂಗತ್ವಾದಿತ್ಯರ್ಥಃ । — ಕಾಶಿಕಾವೃತ್ತಿಃ (ವಾಮನ-ಜಯಾದಿತ್ಯ), ಸಂಪಾದಕ : ಸ್ವಾಮೀ ದ್ವಾರಿಕಾದಾಸಶಾಸ್ತ್ರಿ ಮತ್ತು ಕಾಳಿಕಾ ಪ್ರಸಾದ ಶುಕ್ಲ (ಪ್ರಾಚ್ಯ ಭಾರತೀ ಪ್ರಕಾಶನ, ವಾರಾಣಸೀ 1965)

8. ಪೋಟಾಯುವತಿ ಸ್ತೋಕ ಕತಿಪಯ ಗೃಷ್ಟಿಧೇನುವಶಾ ವೇಹದ್ ಬಷ್ಕಯಣೀ ಪ್ರವಕ್ತೃ ಶ್ರೋತ್ರಿಯಾಧ್ಯಾಪಕ ಧೂರ್ತ ಪ್ರಶಂಸಾ ರೂಢ್ಯೈರ್ಜಾತಿಃ । (2.1.73) ಎಂಬ ಸೂತ್ರದ ವೃತ್ತಿಭಾಗದಲ್ಲಿ, ಪ್ರಶಂಸಾರೂಢಾ ಮತಲ್ಲಿಕಾದಯ ಅವಿಷ್ಟಲಿಂಗಾಸ್ಯೈಃ । ಗೌರ್ಮತಲ್ಲಿಕಾ ಗೋಮತಲ್ಲಿಕಾ । ಅಶ್ವಮತಲ್ಲಿಕಾ । — ಶಾಕಟಾಯನ ವ್ಯಾಕರಣಂ (ಅಮೋಘವೃತ್ತಿ ಸಮಲಂಕೃತಂ); ಭಾರತೀಯ ಜ್ಞಾನಪೀಠ ಪ್ರಕಾಶನ, 1971; ಪುಟ 130.

9. ಶೃಂಗಾರ ಪ್ರಕಾಶಃ — ಸಂಪಾದಕ ಜಿ. ಆರ್. ಜೋಸ್ಯರ್ (ಮೈಸೂರು, 1955) ಕಾವ್ಯಮೀಮಾಂಸಾ ವಿಷಯಕವಾದ ಈ ಬೃಹದ್ಗ್ರಂಥದಲ್ಲಿ 36 ಅಧ್ಯಾಯ (ಪ್ರಕಾಶ)ಗಳಿವೆ. ಮೊದಲ 8 ಪ್ರಕಾಶಗಳು ವ್ಯಾಕರಣಮೀಮಾಂಸೆಗೇ ಮೀಸಲಾದಂತಿವೆ.

10. ತತ್ರ ನಾಮಾವ್ಯಯಾನುಕರಣಕೃತ್ತದ್ಧಿತಸಮಾಸಾಃ ಪ್ರಾತಿಪದಿಕಾನಿ ।
.... ತತ್ರಾನಪೇಕ್ಷಿತ ಶಬ್ದವ್ಯುತ್ಪತ್ತೀನಿ ಸತ್ತ್ವಭೂತಾರ್ಥಾಭಿಧಾಯೀನಿ
ಚ ನಾಮಾನಿ ತಾನಿ -ಅವಿಷ್ಟಲಿಂಗಾನಿ, ಅನಾವಿಷ್ಟಲಿಂಗಾನಿದ್ವಿಧಾಚೇತಿ ।
ತೇಷು ಜಾತಿದ್ರವ್ಯ ಪರಿಮಾಣಾಭಿಧಾಯೀನ್ಯಾವಿಷ್ಟ ಲಿಂಗಾನಿ ।
.... ಗುಣ ಸಂಖ್ಯಾವಚನ ಸರ್ವನಾಮಾನ್ಯನಾವಿಷ್ಟಲಿಂಗಾನಿ ।
— ಮೇಲಿನ ಗ್ರಂಥ; ಪುಟ 6, 7.

11. ಉಷ್ಟ್ರಾಸಿಕಾವಾರಾದೀನಾಂ ತು ನಿತ್ಯಮಾವಿಷ್ಟ ಲಿಂಗತ್ವಾ ದ್ವಿಶೇಷಾಂಶ ಪರಿಗ್ರಹಾತ್ ಕ್ರಿಯಾ ವಿಶೇಷಣತ್ವೇಪಿ ನ ನಪುಂಸಕ ಲಿಂಗತಾ । —ಅದೇ ಗ್ರಂಥ, ಪುಟ 41

12. ಅದೇ ಗ್ರಂಥ; ಪುಟ 183-4

13. ಕರ್ಣಾಟಕ ಶಬ್ದಾನುಶಾಸನಂ (ವಿವರಕ್ಕೆ ಟಿಪ್ಪಣಿ 3 ನೋಡಿ), ಪುಟ 138-9

14. ತದುಕ್ತಂ ಬೌದ್ಧ ಕಾರಿಕಾಯಾಂ —
ಯಾ ವಿಶೇಷ್ಯೇಷು ದೃಶ್ಯಂತೇ ಲಿಂಗಸಂಖ್ಯಾ ವಿಭಕ್ತಯಃ ।
ಪ್ರಾಯಸ್ತಾ ಏವ ಕರ್ತವ್ಯಾಃ ಸಮಾನಾರ್ಥೇ ವಿಶೇಷಣೇ ॥ ಇತಿ
ಏತದಪಿ ಅನಾವಿಷ್ಟ ವಿಷಯಕಂ ಬೋದ್ಧವ್ಯಂ. ಯಥಾ ರಕ್ತಃ ಪಟಃ, ಶುಕ್ಲಾಶಾಟೀ
ಇತ್ಯಾದ್ಯುಪಸರ್ಜನರೂಪಂ ಅವಿಷ್ಟ ವಿಶೇಷಣಂತು ಸಮಾನಾಧಿಕರಣಮಪಿ
ನಿಯತಲಿಂಗಮೇವ. ಯಥಾವೇದಾಃ ಪ್ರಮಾಣಂ, ಪ್ರಧಾನಂ ಭಾರ್ಯಾ ಇತ್ಯಾದಿ ಅತ ಏವ
ಕಾರಿಕಾಯಾಂ ಪ್ರಾಯೋಗ್ರಹಣಂ. — ಮೇಲಿನ ಗ್ರಂಥ, ಪುಟ 8.

15. ಇಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆವೃತ್ತಿಯಲ್ಲಿರುವಂತೆ ವೃತ್ತಿ ಪ್ರಯೋಗಗಳನ್ನು ಕೊಟ್ಟಿದೆ. ಪ್ರೊ. ಡಿ.ಕೆ. ಭೀಮಸೇನರಾಯರಿಂದ ಸಂಪಾದಿತವಾದ ಆವೃತ್ತಿ (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ-1977)ಯಲ್ಲಿಯೂ, ಕೆಲವು ಅಕ್ಷರ ಪದಗಳ ವ್ಯತ್ಯಾಸ ಹೊರತಾಗಿ, ವೃತ್ತಿ ಪ್ರಯೋಗಗಳು ಹೀಗೆಯೇ ಇವೆ. ಲಿಂಗಣಾರಾಧ್ಯ ವೃತ್ತಿಯಿಂದ ಕೂಡಿದ ಮದರಾಸು ಆವೃತ್ತಿ (1973ರ ಮುದ್ರಣ)ಯಲ್ಲಿ ಪ್ರಯೋಗಭಾಗದಲ್ಲಿ ಕ್ರಿಯಾವಿಶೇಷಣಕ್ಕೆ "ಏನೆಂಬ ಪಂಪೊ....." ಎಂಬ ಪದ್ಯವನ್ನು ಮಾತ್ರ ಕೊಟ್ಟಿದೆ; ಅದರ ಮೇಲಿನ "ಏನೆಂಬ ಪೆಂಪೊ...., ವಿಶೇಷಣ ವಾಗಿ ಬಹುವಚನ ವಾಯ್ತು" ಎಂಬ ಭಾಗವಿಲ್ಲ. ಪದ್ಯದ ಅನಂತರದ ಭಾಗಕ್ಕೆ ಬದಲು, "ಕಬ್ಬಂ ? ಮಾಡಿದರ್, ದೋಷರಹಿತಂ ಪೇಳ್ದರ್; ಕಬ್ಬ ? ಮೆಂತಪ್ಪುದಂತೆ ಮಾಡಿದರ್, ದೋಷರಹಿತ ಮೆಂತಪ್ಪುದಂತೆ ಪೇಳ್ದರ್ ಎಂಬುದೀಗ ಕ್ರಿಯೆಗೆ ವಿಶೇಷಣಂ" ಎಂದಿದೆ.

16. ಪ್ರಮಾಣಂ — (ಕ್ಲೀ) ನಿತ್ಯಕ್ಲೀಬೈಕತ್ವವಾನಯಂ ಶಬ್ದಃ । ಯಥಾ ವೇದಾಃ ಪ್ರಮಾಣಂ, ಶ್ರುತಯಃ ಪ್ರಮಾಣಮಿತ್ಯಾದಿ । .... ನ್ಯಾಯೇತು ಪ್ರತ್ಯಕ್ಷಾನುಮಾನೋಪಮಾನ ಶಬ್ದಾಃ ಪ್ರಮಾಣಾನಿ । ಇತ್ಯತ್ರ ಬಹುವಚನಾಂತೋಪಿ.

— ಶಬ್ದ ಕಲ್ಪದ್ರುಮಃ, ರಾಧಾಕಾಂತದೇವ (ಚೌಖಂಬಾ ಸಂಸ್ಕೃತ ಸೀರೀಸ್ ಆಫೀಸ್, ವಾರಾಣಸೀ-1961) ತೃತೀಯ ಭಾಗ, ಪುಟ 285.

17. ಪ್ರಮಾಣ—(ನ) ಉದ್ದೇಶ್ಯ ವಿಧೇಯ ಭಾವೇನಾನ್ವಯ ಸ್ಥಲೇ ಪ್ರಮಾಣ ಶಬ್ದಸ್ಯ ಪ್ರಮಾಕರಣ ಪರತ್ವೇ ಕ್ವಚಿದೇಕ ವಚನತಾ ಯಥಾ "ವೇದಾಃ ಪ್ರಮಾಣಂ, ಸ್ಮೃತಯಃ ಪ್ರಮಾಣಂ" ಇತ್ಯಾದೌ। ಕ್ವಚಿತ್ತು ಬಹುವಚನತಾ ಯಥಾ "ಪ್ರತ್ಯಕ್ಷಾನು ಮಾನೋಪಮಾನಾಗಮಾಃ ಪ್ರಮಾಣಾನಿ" (ಗೌತಮಸೂತ್ರ) । ತತ್ರ ಪೂರ್ವತ್ರ ಶಾಬ್ದ ಸ್ವರೂಪ ಪ್ರಮಾತ್ವಜಾತೇರೇಕತ್ವಾತ್ ಏಕವಚನತ್ವಂ। ಉತ್ತರತ್ರ ಪ್ರತ್ಯಕ್ಷತ್ವಾದಿ ಜಾತಿಚತುಷ್ಟಯ ಕರಣಾನಾಂ ಬಹುತ್ವಾತ್ ಬಹುವಚನತಾ ಇತಿ ಪ್ರಥಮಾವೃತ್ತಾದೇ ಗದಾಧರೇಣ ಪ್ರಪಂಚಿತಂ ತತ್ರದೃಶ್ಯಂ। ಸಾಮಾನ್ಯತ್ವಾತ್ ಕ್ಲೀಬತ್ವೈವಾಸ್ಯ। ಕ್ವಚಿತ್ತು ವಿಶೇಷ ಪರತ್ವೇ ಸ್ತ್ರೀತ್ವಪರತಾ ಯಥಾ ಪ್ರಮಾಣೀ। — ವಾಚಸ್ಪತ್ಯಂ, ತಾರಾನಾಥ ತರ್ಕವಾಚಸ್ಪತಿ (ಚೌಖಂಬಾ ಸಂಸ್ಕೃತ ಸೀರೀಸ್ ಆಫೀಸ್, ವಾರಾಣಸೀ, 1970); ಷಷ್ಠೋ ಭಾಗಃ, ಪುಟ 4479.

18. "832 ಅಪೂರಣೀ ಪ್ರಮಾಣ್ಯೋಃ" 5.4.116..... ಸ್ತ್ರೀ ಪ್ರಮಾಣೀಯಸ್ಯ ಸಃ ಸ್ತ್ರೀಪ್ರಮಾಣಃ — ಸಿದ್ಧಾನ್ತಕೌಮುದೀ (ಬಾಲಮನೋರಮಾವ್ಯಾಖ್ಯಾ ಸಹಿತ), (ತಿರುಚಿನಾಪಳ್ಳಿ, 1910), ಪೂರ್ವಾರ್ಧ ಪುಟ 558

19. ಪ್ರಮಾಣಂ....... 6. Authority, warrant; one who judges or decides, one whose word is an authority; ಶ್ರುತ್ವಾ ದೇವಃ ಪ್ರಮಾಣಂ....... Some times in plural;— Apte's Practical Sanskrit English Dictionary (Prasad Prakashan, Poona 1958)

20. (1) ಬಹುಭಿಃ ಕಾರಣೈರ್ದೇವ ವಿಶ್ವಾಮಿತ್ರೋ ಮಹಾಮುನಿಃ ।
ಲೋಭಿತಃ ಕ್ರೋಧಿತಶ್ಚೈವ ತಪಸಾಚಾಭಿ ವರ್ಧತೇ ॥
— ಶ್ರೀಮದ್ವಾಲ್ಮೀಕಿ ರಾಮಾಯಣ, ಬಾಲಕಾಂಡ 65ನೆಯ ಸರ್ಗ ;

10-11 ಶ್ಲೋಕ.
(M.L.J. Press, Madras 1958)

(2) ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧಮೇ । ತದೇತಲ್ಲಿಂಗಂ ಷೋಢಾ-ಶುದ್ಧಂ, ಮಿಶ್ರಂ, ಸಂಕೀರ್ಣಂ, ಉಪಸರ್ಜನಂ, ಆವಿಷ್ಟಂ, ಅವ್ಯಕ್ತಂಚೇತಿ.

- ಭಗವದ್ಗೀತಾ (Gita Press, Gorakhpur, 1975) 18-13

21. ಕಾರಣಮಿತಿ ಏಕವಚನ ನಿರ್ದೇಶೇನ ಸಮಸ್ತಸ್ಯೈವ ಕಾರಣತಾ ನತು ಪ್ರತ್ಯೇಕಸ್ಯ ಇತಿ ಸೂಚಿತಂ ।

(Kavyadarsa, Vavilla Ramaswami Sastrulu & Sons, Madras,1964

ದಂಡಿಯು ಹೇಳಿರುವ ಮೂರು ಕಾರಣಗಳ ಜೊತೆಗೆ ವೃದ್ಧ ಸೇವಾನುರಾಗ ಎಂಬ ನಾಲ್ಕನೆಯ ಕಾರಣವನ್ನು ಸೇರಿಸಿ, ನಾಗವರ್ಮನು

ಪ್ರತಿಭಾನಂ ಕಾವ್ಯವಿದ್ಯಾ ಪ್ರಚಯ ಪರಿಚಯಂ ವೃದ್ಧ ಸೇವಾನುರಾಗಂ
ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇಳ್ದೊಡಂ ತಾ ।

ಪ್ರತಿಭಾನಂ ಶಕ್ತಿ ಲೋಕಾಗಮ ಸಕಲಕಲಾ ವೇದನಂ ವಿದ್ಯೆ ಶಾಸ್ತ್ರಾ
ನ್ವಿತನಪ್ಪಂ ವೃದ್ಧನಾಲಸ್ಯಮನುಳಿದಸಪುದ್ಯೋಗಮಭ್ಯಾಸಕರ್ಮಂ ॥

ಎಂದು ಹೇಳಿದ್ದಾನೆ.

— ಕಾವ್ಯಾವಲೋಕನಂ, ಪದ್ಯ 424 (ಮೈಸೂರು ವಿಶ್ವವಿದ್ಯಾನಿಲಯ, 1967)

ನಾಗವರ್ಮನ ಶಬ್ದಸ್ಮೃತಿಯಲ್ಲಿನ ಸೂತ್ರಗಳ ಆಧಾರದ ಮೇಲೆ ತನ್ನ ಎಷ್ಟೋ ಸೂತ್ರಗಳನ್ನು ರಚಿಸಿರುವುದೇ ಅಲ್ಲದೆ, ಅವನು ಕೊಟ್ಟಿರುವ ಅನೇಕ ಪ್ರಯೋಗಗಳನ್ನು (ಇವುಗಳ ಸಂಖ್ಯೆ ಸುಮಾರು ಇನ್ನೂರಕ್ಕೂ ಹೆಚ್ಚೆಂದು ಶ್ರೀಮಾನ್ ಕೆ. ರಾಘವೇಂದ್ರರಾಯರು, ಮೈಸೂರು ವಿಶ್ವವಿದ್ಯಾನಿಲಯದ ಶಬ್ದಮಣಿದರ್ಪಣದ cxiv ಪುಟದಲ್ಲಿ ಹೇಳಿದ್ದಾರೆ). ತನ್ನ ಗ್ರಂಥದಲ್ಲಿ ಸೇರಿಸಿಕೊಂಡಿರುವ ಕೇಶಿರಾಜನು ಮೇಲಿನ ಕಾವ್ಯಾವಲೋಕನದ ಪದ್ಯದ ಭಾಗವನ್ನು ಮಾರ್ಪಡಿಸಿ "ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ" ಎಂಬ ಪ್ರಯೋಗವನ್ನು ರಚಿಸಿದಂತೆ ತೋರುತ್ತದೆ.

22. ಶಬ್ದಮಣಿದರ್ಪಣಂ, ಸೂತ್ರ 137

23. ಅದೇ, ಸೂತ್ರ 139

24. ವಿದ್ವಾನ್ ಬಸವರಾಜು ಅವರು ತಮ್ಮ ಲೇಖನದ 1ನೆಯ ಅಡಿಟಿಪ್ಪಣಿಯಲ್ಲಿ "ನಾಮಿ" ಸಂಜ್ಞೆಯು ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಬರುವುದಿಲ್ಲ. ಆದರೆ ಅಲ್ಲಿ "ನಾಮಿ" ಎಂಬ ಸೂತ್ರವಿದೆ ಎಂದು ಹೇಳಿದ್ದಾರೆ. ಆದರೆ ಈ ಸೂತ್ರಕ್ಕೂ ನಾಮಿ ಸಂಜ್ಞೆಗೂ ಯಾವ ಸಂಬಂಧವೂ ಇಲ್ಲ. ಈ ಸೂತ್ರದಲ್ಲಿನ 'ನಾಮಿ', 'ನಾಮ್' ಎಂಬುದರ ಸಪ್ತಮೀ ಏಕವಚನ. ಹ್ರಸ್ವಸ್ವರಾಂತ ಶಬ್ದಗಳ ಷಷ್ಠೀ ಬಹುವಚನರೂಪವನ್ನು ಸಾಧಿಸಲು ಪ್ರಕೃತಿಗೆ 'ನಾಮ್' ಸೇರಿಸುವಾಗ ಪ್ರಕೃತಿಯ ಅಂತ್ಯಸ್ವರವು ದೀರ್ಘವಾಗುವುದೆಂದು ಈ ಸೂತ್ರ ಹೇಳುತ್ತದೆ.

ಉದಾ : ಶಿವ + ನಾಂ = ಶಿವಾನಾಂ.

ಋಕ್ಪ್ರಾತಿಶಾಖ್ಯದಂತೆ ಇ, ಈ, ಉ, ಊ, ಋ, ೠ, ಏ, ಐ, ಓ ಮತ್ತು ಔ ಈ ಹತ್ತು ಸ್ವರಗಳು ನಾಮಿಗಳು. ಅ, ಆ ಹೊರತು ಉಳಿದ ಸ್ವರಗಳಿಗೆ ಸಂಸ್ಕೃತ ವ್ಯಾಕರಣದಲ್ಲಿ ನಾಮಿ ಸಂಜ್ಞೆಯಿದೆ. (ಸಕಾರಕ್ಕೆ ಷತ್ವವನ್ನು ವಿಧಿಸುವ ಸಂದರ್ಭದಲ್ಲಿ — ರಾಮೇಷು, ಅನುಷ್ಠಾನ, ಪ್ರತಿಷ್ಠಾ ಮೊದಲಾದ ಪದಗಳ ಪ್ರಕ್ರಿಯೆಯಲ್ಲಿ - ನಾಮಿ ಸಂಜ್ಞೆಯ ಉಪಯೋಗವಾಗುತ್ತದೆ). ಕನ್ನಡ ವ್ಯಾಕರಣದಲ್ಲಿ ನಾಮಿ ಸಂಜ್ಞೆಗೆ ಏನೂ ಪ್ರಯೋಜನವಿಲ್ಲದಿದ್ದರೂ ನಾಗವರ್ಮನು ಮೇಲಿನ ಹತ್ತು ಸ್ವರಗಳ ಜೊತೆಗೆ ಕನ್ನಡದಲ್ಲಿನ ಹ್ರಸ್ವ ಎ ಒ ಸ್ವರಗಳನ್ನೂ ಸೇರಿಸಿ, ಈ ಹನ್ನೆರಡು ಸ್ವರಗಳಿಗೆ ನಾಮಿ ಸಂಜ್ಞೆಯನ್ನು ಶಬ್ದ ಸ್ಮೃತಿಯಲ್ಲಿ ಹೇಳಿದ. ಆದರೆ ಮುಂದೆಲ್ಲಿಯೂ ಅದನ್ನು ಪ್ರಯೋಗಿಸಲಿಲ್ಲ. ಕೇಶಿರಾಜನೂ ಈ ವಿಷಯದಲ್ಲಿ ನಾಗವರ್ಮನನ್ನು ಅನುಸರಿಸಿದ್ದಾನೆ. ಭಾಷಾಭೂಷಣಕಾರನು ಈ ಅನಾವಶ್ಯಕ ಸಂಜ್ಞೆಯನ್ನು ಹೇಳಿಲ್ಲ.

25. ಹಿಂದೆ ಉದಾಹರಿಸಿರುವ "ನೈಸರ್ಗಿಕೀ ಚ ಪ್ರತಿಭಾ...." ಎಂಬ ಶ್ಲೋಕದಲ್ಲಿ ಮತ್ತು ಟಿಪ್ಪಣಿ 21ರಲ್ಲಿನ ನಾಗವರ್ಮನ ಪದ್ಯದಲ್ಲಿ "ಕಾರಣಂ" ಎಂಬ ಪ್ರಯೋಗ.

26. ಕಿಟ್ಟೆಲ್ಲರ ಕನ್ನಡ-ಇಂಗ್ಲಿಷ್ ನಿಘಂಟು, ಸಂಪುಟ 1, ಪುಟ 175. (ಮದರಾಸು ಯೂನಿವರ್ಸಿಟಿ, 1968)

27. ಸಂಪುಟ 1, ಪುಟ 683

ಎರಡು ಶಬ್ದಗಳ ನಿಷ್ಪತ್ತಿ ಮತ್ತು ಅರ್ಥವಿಚಾರ

1. ಅಕ್ಕಪಕ್ಕ

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ 'ಅಕ್ಕಪಕ್ಕ' ಎಂಬ ಶಬ್ದಕ್ಕೆ "ಆ ಕಡೆ ಈ ಕಡೆ; ನೆರೆಹೊರೆ" ಎಂಬ ಅರ್ಥಗಳನ್ನು ಕೊಟ್ಟು, ಅಕ್ಕ + ಪಕ್ಕ ಎಂದು ನಿಷ್ಪತ್ತಿಯನ್ನು ಹೇಳಿದ್ದಾರೆ.ಮೊದಲನೆಯ ಸಂಪುಟದಲ್ಲಿರುವ ಸಂಪಾದಕರ ಪೀಠಿಕೆಯಲ್ಲಿ "ಸಮಾಸದ ಪೂರ್ವಪದಗಳಾಗಿ ಬರುವ ಇಂಥ ಶಬ್ದಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲದ ಪಕ್ಷದಲ್ಲಿ ಅಂತಹ ಶಬ್ದಗಳನ್ನು ಮುಖ್ಯಶಬ್ದಗಳಾಗಿ ಕೊಡುವುದಿಲ್ಲ, ನಿಷ್ಪತ್ತಿಭಾಗದಲ್ಲಿ ಆ ಶಬ್ದಗಳ ಮುಂದೆ ಒಂದು ಬಿಂದುವನ್ನು ಹಾಕಿ ಸೂಚಿಸಲಾಗಿದೆ" ಎಂದು ಹೇಳಿದೆ (ಪುಟ xiv) "ಸಂಕೇತಗಳು"ಎಂಬ ಭಾಗದಲ್ಲಿ "ಈ ಚಿಹ್ನೆ ಒಂದು ಶಬ್ದದ ಕೆಳಪಕ್ಕದಲ್ಲಿ ಇದ್ದರೆ, ಆ ಶಬ್ದವನ್ನು ಈ ನಿಘಂಟಿನಲ್ಲಿ ವಿಶೇಷಕಾರಣಗಳಿಗಾಗಿ ಪ್ರತಿಪಾದಿಸಿಲ್ಲವೆಂದು ಸೂಚಿಸುತ್ತದೆ" ಎಂಬ ವಿವರಣೆಯಿದೆ. (ಪುಟ 55) ಆದುದರಿಂದ "ಅಕ್ಕಪಕ್ಕ"ದ ಮೊದಲ ಭಾಗವಾದ 'ಅಕ್ಕ' ಶಬ್ದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲವೆಂಬ ಅಭಿಪ್ರಾಯವಾಗುತ್ತದೆ.

ಪೀಠಿಕೆಯ ixನೆಯ ಪುಟದಲ್ಲಿ "ಅಕ್ಕಪಕ್ಕ" ಶಬ್ದವು ಯಮಳ ಶಬ್ದ ಅಥವಾ ಕೂಡುನುಡಿಯೆಂದು ಹೇಳಿ, ಅಂಥ ಶಬ್ದಗಳಲ್ಲಿ ಹೆಚ್ಚು ಕಡಿಮೆ ಸಮಾನಾರ್ಥಕವಾದ ಎರಡು ಶಬ್ದಗಳು ಸೇರಿ ಅದೇ ಅರ್ಥವೇ ಕಂಡುಬರುತ್ತದೆ"ಎಂದಿದೆ. ಇದರಿಂದ 'ಅಕ್ಕ' ಮತ್ತು 'ಪಕ್ಕ' ಶಬ್ದಗಳು ಹೆಚ್ಚು ಕಡಿಮೆ ಸಮಾನಾರ್ಥಕಗಳೆಂದು ಹೇಳಿದಂತಾಯಿತು.

ಅದೇ ನಿಘಂಟಿನಲ್ಲಿ 'ಪಕ್ಕ' ಶಬ್ದಕ್ಕೆ "ಬದಿ; ಮಗ್ಗುಲು; ನೆರೆ; ಪಾರ್ಶ್ವ" ಮತ್ತು "ಹತ್ತಿರ; ಸನಿಹ; ಸಾಮೀಪ್ಯ, ಸನ್ನಿಧಾನ" ಎಂಬ ಅರ್ಥಗಳನ್ನು ಕೊಟ್ಟು ಈ ಶಬ್ದ 'ಪಕ್ಷ' ಎಂಬ ಸಂಸ್ಕೃತ ಪದದಿಂದ ನಿಷ್ಪನ್ನವಾಗಿದೆಯೆಂದು ಹೇಳಿದೆ. ಈ ಅರ್ಥಗಳಲ್ಲಿ 'ಅಕ್ಕ' ಎಂಬ ಕನ್ನಡ ಶಬ್ದವಿಲ್ಲ, ಆದುದರಿಂದ ಈ ಅರ್ಥವುಳ್ಳ 'ಅಕ್ಕ' ಅನ್ಯಭಾಷೆಯಿಂದ ಬಂದುದಾಗಿರಬೇಕು.

'ಪಾಇಅಸದ್ದಮಹಣ್ಣವೋ'[1] ಎಂಬ ಪ್ರಾಕೃತ-ಹಿಂದಿ ನಿಘಂಟಿನಲ್ಲಿ 'ಅಕ್ಕ' ಶಬ್ದಕ್ಕೆ ಸೂರ್ಯ, ಎಕ್ಕದ ಗಿಡ, ಚಿನ್ನ, ರಾವಣನ ಒಬ್ಬ ಸುಭಟ ಎಂಬ ಅರ್ಥಗಳನ್ನು ಕೊಟ್ಟು ಈ

1. ಪಾಇಅಸದ್ದಮಹಣ್ಣವೋ (ಪ್ರಾಕೃತ ಶಬ್ದ ಮಹಾರ್ಣವಃ) - ಕರ್ತೃ ಪಂಡಿತ ಹರಗೋವಿಂದದಾಸ ತ್ರಿಕಮಚಂದ ಸೇಠ (1928).ಪುನರ್ಮುದ್ರಣ - ಮೋತೀಲಾಲ್ ಬನಾರಸೀದಾಸ್, ದಿಲ್ಲೀ 1986.

ಶಬ್ದ ಸಂಸ್ಕೃತದ 'ಅರ್ಕ' ಶಬ್ದಕ್ಕೆ ಪ್ರತಿಶಬ್ದವೆಂದು ಹೇಳಿದೆ. ದೇಶ್ಯ 'ಅಕ್ಕ' ಶಬ್ದಕ್ಕೆ ದೂತ, ಸಂದೇಶ ಹಾರಕ ಎಂಬರ್ಥಗಳನ್ನು ಹೇಳಿದೆ.

ಪಾಲಿ-ಇಂಗ್ಲಿಷ್ ನಿಘಂಟಿನಲ್ಲಿ[2], 'ಅಕ್ಕ' ಸಂಸ್ಕೃತದ 'ಅರ್ಕ'ಕ್ಕೆ ಪ್ರತಿಶಬ್ದವೆಂದು ಹೇಳಿ Name of a plant : Colotropts Gigandea, Swallow Wart ಎಂಬ ಅರ್ಥಗಳನ್ನು ಕೊಟ್ಟಿದೆ.

ಹೀಗೆ ಪ್ರಾಕೃತ, ಪಾಲಿ ಭಾಷೆಗಳಲ್ಲಿ ಕೊಟ್ಟಿರುವ ಅರ್ಥಗಳು 'ಅಕ್ಕಪಕ್ಕ'ದ ನಿಷ್ಪತ್ತಿಯಲ್ಲಿ ಸಹಾಯಕವಾಗಿಲ್ಲ.

ಪ್ರಾಚೀನ ಸಂಸ್ಕೃತ ಕೋಶಗಳಲ್ಲಾಗಲೀ, ಶಬ್ದಕಲ್ಪದ್ರುಮ, ವಾಚಸ್ಪತ್ಯ ಮೊದಲಾದ ಅರ್ವಾಚೀನ ಕೋಶಗಳಲ್ಲಾ ಗಲೀ, Monier Monier-Williams Macdonell, Apte ಮೊದಲಾದವರ ಸಂಸ್ಕೃತ-ಇಂಗ್ಲೀಷ್ ನಿಘಂಟುಗಳಲ್ಲಾಗಲೀ 'ಅಕ್ಕ' ಶಬ್ದವಿಲ್ಲ. ಪುಣೆಯ ಡೆಕ್ಕನ್ ಸಂಶೋಧನ ಸಂಸ್ಥೆಯವರು ಪ್ರಕಟಿಸುತ್ತಿರುವ ಸಂಸ್ಕೃತದ ಬೃಹನ್ನಿಘಂಟಿನಲ್ಲಿ[3] ಈ ಪದದ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ ಕೊಟ್ಟಿದ್ದಾರೆ. ಆಪ್ಟೆ ಕೋಶದ ಪರಿಷ್ಕೃತ ಪರಿವರ್ಧಿತ ಆವೃತ್ತಿಯಲ್ಲೂ[4] ಈ ಪದವಿದೆ. ಈ ವಿಷಯವನ್ನು ಮುಂದೆ ಪರಿಶೀಲಿಸಲಾಗಿದೆ.

ಶಬರಸ್ವಾಮಿಯು ತನ್ನ ಮೀಮಾಂಸಾ ಭಾಷ್ಯದಲ್ಲಿ[5] "ಅರ್ಕೇ ಚೇನ್ಮಧು ವಿಂದೇತ ಕಿಮರ್ಥಂ ಪರ್ವತಂ ವ್ರಜೇತ್" ಎಂಬ ಆಭಾಣಕವನ್ನು (ಲೋಕೋಕ್ತಿ ಅಥವಾ ನಾಣ್ಣುಡಿ) ಉದಾಹರಿಸಿ, "ಜೇನುತುಪ್ಪಬೇಕಾದವರು ತಮ್ಮ ದಾರಿಯಲ್ಲಿ ಹುಟ್ಟಿ

2. Pali-English Dictionary- Rhys Davids and William Stede(1921-25). Indian edition published by Motilal Banarasidass, Delhi, 1993.

3. An Encyclopaedic Dictionary of Sanskrit on Historical Principles, VolI- Deccan college Post Graduate and Research Institute, Poona-6.

4. Apte's The Practical Sanskrit- English Dictionary, Revised and enlarged edition; Prasad Prakashan, Poona, 1957.

5. ಶ್ರೀಮಜ್ಜೈಮಿನಿಪ್ರಣೀತಂ ಮೀಮಾಂಸಾದರ್ಶನಂ, ತಂತ್ರವಾರ್ತಿಕಸಹಿತ ಶಾಬರ ಭಾಷ್ಯೋಪೇತಂ-ಸಂಪುಟ 7, ಆನಂದಾಶ್ರಮ ಮುದ್ರಣಾಲಯ, ಪುಣೆ; ತೃತೀಯ ಸಂಸ್ಕರಣ, 1981. ತದ್ಯಥಾ/ಪಥಿಜಾತೇಽರ್ಕೇ/ಮಧೂತ್ಸೃಜ್ಯ ತೇನೈವ ಪಥಾ ಮಧ್ವರ್ಥಿನಃ ಪರ್ವತಂ ನಗಚ್ಛೇಯುಸ್ತಾದೃಶಂ ಹಿ ತತ್ । ಅಪಿಚಾಹುಃ ಅರ್ಕೇಚೇನ್ಮಧು ವಿಂದೇತ ಕಿಮರ್ಥಂ ಪರ್ವತಂ ವ್ರಜೇತ್ । ಇಷ್ಟಸ್ಯಾರ್ಥಸ್ಯ ಸಂಸಿದ್ಧೌ ಕೋ ವಿದ್ವಾನ್ ಯತ್ನಮಾಚರೇತ್ ॥ ಪುಟ 8, (ಅನ್ಯಾನರ್ಥಕ್ಯಾತ್ (1-2-4) ಸೂತ್ರದ ವ್ಯಾಖ್ಯಾನದಲ್ಲಿ) ಶಬರಸ್ವಾಮಿಯ ಕಾಲ ಕ್ರಿ. ಪೂ. 1ನೆಯ ಶತಮಾನ ಮತ್ತು ಕ್ರಿ. ಶ. ಮೂರನೆಯ ಶತಮಾನಗಳ ಮಧ್ಯೆ.

ಕೊಂಡಿರುವ ಎಕ್ಕದ ಗಿಡದಲ್ಲೇ ಜೇನುತುಪ್ಪವಿದ್ದರೆ, ಅದನ್ನು ಬಿಟ್ಟು ಅದಕ್ಕಾಗಿಯೇ ಬೆಟ್ಟಕ್ಕೆ ಹೋಗುವುದಿಲ್ಲ'' ಎಂದು ವಿವರಿಸಿದ್ದಾನೆ. ಈ ಆಭಾಣಕವು ಭಟ್ಟಕುಮಾರಿಲನ ತಂತ್ರವಾರ್ತಿಕದಲ್ಲೂ[6] ಬ್ರಹ್ಮಸೂತ್ರ ಶಾಂಕರಭಾಷ್ಯದಲ್ಲೂ[7] ಕಂಡುಬರುತ್ತದೆ. ಆದರೆ ಅಲ್ಲಿ ವಿವರಣೆಯಿಲ್ಲ.

ಮುಂದೆ, ವಾಚಸ್ಪತಿಮಿಶ್ರನು (ಕ್ರಿ. ಶ. 9ನೆಯ ಶತಮಾನ) ತನ್ನ ಸಾಂಖ್ಯ ತತ್ತ್ವಕೌಮುದೀಯಲ್ಲೂ ಇದನ್ನು ಉದಾಹರಿಸಿದ್ದಾನೆ. ಆದರೆ ಈ ಗ್ರಂಥದ ಕೆಲವು ಆವೃತ್ತಿಗಳಲ್ಲಿ 'ಅರ್ಕೇ' ಶಬ್ದಕ್ಕೆ ಬದಲು 'ಅಕ್ಕೇ' ಎಂದಿರುವುದಾಗಿ ಡಾ. ನೀಲಮಾಧವ ಸೇನರು ಹೇಳಿದ್ದಾರೆ.[8]

ವಾಚಸ್ಪತಿ ಮಿಶ್ರನ ಕಾಲದ ಅನಂತರ ಬಂದ ಗ್ರಂಥಗಳಲ್ಲಿ ''ಅರ್ಕೇ ಚೇನ್ಮಧು ವಿಂದೇತ'' ಎಂಬ ಪಾಠಕ್ಕೆ ಸಮನಾಗಿ ಅಥವಾ ಹೆಚ್ಚಾಗಿಯೇ, ''ಅಕ್ಕೇ ಚೇನ್ಮಧು ವಿಂದೇತ'' ಎಂಬ ಪಾಠ ಕಂಡುಬರುವುದಾಗಿ ಡಾ. ಸೇನರು ಹೇಳುತ್ತಾರೆ. ಅವರ ಲೇಖನದಲ್ಲಿ ಕೆಳಗಿನ ವಿವರಗಳಿವೆ :-

(1) ಬ್ರಹ್ಮಸೂತ್ರ ಶಾಂಕರಭಾಷ್ಯ ಮತ್ತು

(2) ಸಾಂಖ್ಯತತ್ತ್ವಕೌಮುದೀ - ಕೆಲವು ಆವೃತ್ತಿಗಳಲ್ಲಿ ಅರ್ಕೇ, ಇತರ ಆವೃತ್ತಿಗಳಲ್ಲಿ ಅಕ್ಕೇ,

---

6. ಯದಿ ಸ್ವಲ್ಪಾನ್ನಹತಶ್ಚ ಕರ್ಮಣಃ ಸಮಂ ಫಲಂ ಜಾಯೇತ
ತತಃ ಅರ್ಕೇ ಚೇನ್ಮಧು ವಿಂದೇತ ಇತ್ಯನೇನೈವ ನ್ಯಾಯೇನ
ಅಲ್ಪೇನ ಸಿದ್ಧೇ ಮಹತಿ ನ ಕಶ್ಚಿತ್ಪ್ರವರ್ತೇತ ।
(ಸೂತ್ರ 1-2-17ರ ವ್ಯಾಖ್ಯಾನದಲ್ಲಿ) ಮೇಲಿನ ಗ್ರಂಥ ಪುಟ 31-2

7. ಕೇವಲಾಚ್ಚೇತ್ ಜ್ಞಾನಾತ್ಪುರುಷಾರ್ಥಸಿದ್ಧಿಃಸ್ಯಾತ್ ಕಿಮರ್ಥಮನೇಕಾಯಾಸಸಮನ್ವಿತಾನಿ ಕರ್ಮಾಣಿ ತೇ ಕುರ್ಯುಃ । 'ಅರ್ಕೇಚೇನ್ಮಧು ವಿಂದೇತ ಕಿಮರ್ಥಂ ಪರ್ವತಂ ವ್ರಜೇತ್' ಇತಿ ನ್ಯಾಯಾತ್ ।
[ಆಚಾರದರ್ಶನಾತ್ [3-4-1-3] ಸೂತ್ರದ ವ್ಯಾಖ್ಯಾನದಲ್ಲಿ]
ಬ್ರಹ್ಮಸೂತ್ರ ಶಾಂಕರಭಾಷ್ಯಂ (ಗೋವಿಂದಾನಂದನ ಭಾಷ್ಯರತ್ನಪ್ರಭಾ, ವಾಚಸ್ಪತಿಮಿಶ್ರನ ಭಾಮತೀ ಮತ್ತು ಆನಂದಗಿರಿಯ ನ್ಯಾಯ ನಿರ್ಣಯ ವ್ಯಾಖ್ಯಾನಗಳ ಸಹಿತ) Motilal Banarasi Dass, Delhi, 1980 (ನಿರ್ಣಯಸಾಗರ್ ಪ್ರೆಸ್ಸಿನ ಆವೃತ್ತಿಯ ಪುನರ್ಮುದ್ರಣ)

8. A note on Akka- A Ghost word in Sanskrit;by Dr. Nilmadhav Sen.
Sanskrit and Indological Studies, Dr. V. Raghavan Felicitation volume; Motilal Banarasi Dass, Delhi 1975. Pages 341-9
ಡಾ. ಸೇನರ ಲೇಖನದಲ್ಲಿ ಕೊಟ್ಟಿರುವ ಅನೇಕ ವಿವರಗಳಿಗಾಗಿ ನಾನು ಅವರಿಗೆ ಋಣಿಯಾಗಿದ್ದೇನೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

(3) ನ್ಯಾಯವಾರ್ತಿಕ ತಾತ್ಪರ್ಯಟೀಕಾ (ವಾಚಸ್ಪತಿಮಿಶ್ರ) - ಅಕ್ಕೇ,

(4) ಪ್ರಕಟಾರ್ಥವಿವರಣ (ಅನುಭೂತಿಸ್ವರೂಪಕೃತ ಶಾಂಕರಭಾಷ್ಯವ್ಯಾಖ್ಯಾ- ಕಾಲ ಸು. 1100) - ಅಕ್ಕೇ (ಅರ್ಥ 'ಸಮೀಪೇ')

(5) ನ್ಯಾಯನಿರ್ಣಯ (ಆನಂದಗಿರಿಯ ಶಾಂಕರ ಭಾಷ್ಯ ವ್ಯಾಖ್ಯಾ-ಕಾಲ 13-14ನೆಯ ಶತಮಾನ) - ಅರ್ಕೇ[9]

(6) ಭಾಷ್ಯರತ್ನಪ್ರಭಾ(ಗೋವಿಂದಾನಂದಕೃತ-ಕಾಲ ಅನಿಶ್ಚಿತ) - ಅಕ್ಕೇ[10]

(7) ಸಾಂಖ್ಯಸೂತ್ರಭಾಷ್ಯ (ಅನಿರುದ್ಧಕೃತ-ಕಾಲ, 15ನೇ ಶತಮಾನ ಉತ್ತರಾರ್ಧ) - ಅಕ್ಕೇ. ಇದರ ಸಂಪಾದಕರು 'ಅಕ್ಕೇ' ಎಂಬುದೇ ಶುದ್ಧ ಪಾಠವೆಂದು ಹೇಳಿ, ಆ ಶಬ್ದಕ್ಕೆ 'ಗೃಹಕೋಣೇ' (ಮನೆಯ ಮೂಲೆಯಲ್ಲಿ) ಎಂದು ಅರ್ಥಮಾಡಿದ್ದಾರೆ.

'ಅಕ್ಕೇ'ಎಂಬ ಪಾಠವಿರುವ ಇನ್ನೂ ಕೆಲವು ಅನಿಶ್ಚಿತ ಕಾಲದ ಗ್ರಂಥಗಳಿಂದಲೂ ಡಾ. ಸೇನರು ಉದಾಹರಿಸಿದ್ದಾರೆ.

ಡಾ. ಸೇನರ ಪರಿಶೀಲನೆಯ ಸಾರಾಂಶ ಹೀಗಿದೆ[11] :

(i) ವಾಚಸ್ಪತಿ ಮಿಶ್ರನು ಈ ಆಭಾಣಕದ ಅರ್ಥವಿವರಣೆ ನೀಡಿಲ್ಲವಾದುದರಿಂದ ಅವನಿಗೆ ಸಮ್ಮತವಾದ ಪಾಠದಲ್ಲಿ 'ಅರ್ಕೇ'ಶಬ್ದವಿತ್ತೇ ಅಥವಾ 'ಅಕ್ಕೇ' ಶಬ್ದವೇ ಎಂಬುದನ್ನು ನಿಶ್ಚಯಿಸಲಾಗುವುದಿಲ್ಲ. ಆದರೆ ಬಹುತೇಕ, 'ಅಕ್ಕೇ' ಶಬ್ದವಿದ್ದ ಪಾಠವೂ ಅವನಿಗೆ ತಿಳಿದಿತ್ತು.

(ii) 9ನೆಯ ಶತಮಾನದಲ್ಲೋ ಅಥವಾ ಇನ್ನೂ ಮೊದಲೋ 'ಅರ್ಕೇ' ಶಬ್ದಕ್ಕೆ ಬದಲಾಗಿ 'ಅಕ್ಕೇ' ಶಬ್ದವಿರುವ ಆಭಾಣಕ ಕೆಲವುಕಡೆ ರೂಢಿಯಲ್ಲಿತ್ತು. ಸ್ವಲ್ಪಕಾಲಾನಂತರ. ಕೋಶಾಧಾರವಿಲ್ಲದಿದ್ದರೂ, ಬೇರೆಲ್ಲೂ ಈ ಪದದ

---

9. ಲೌಕಿಕನ್ಯಾಯಮಾಹ-ಅರ್ಕೇಚೇದಿತಿ । ಸಮೀಪವಚನೋಽರ್ಕ ಶಬ್ದಃ । (ಈ ಗ್ರಂಥದ ಕೊನೆಯಲ್ಲಿ ಕರ್ತೃವಿನ ಹೆಸರು ಆನಂದಜ್ಞಾನ ಎಂದಿದೆ; ಆನಂದಗಿರಿ ಎಂದಲ್ಲ.)

10. ಅಕ್ಕ ಇತಿ । ಸಮೀಪ ಇತ್ಯರ್ಥಃ । ಅರ್ಕ ಇತಿ ಪಾಠೇಽಪ್ಯಯಮೇವಾರ್ಥಃ ।

11. (i) Like Sankara, Vachaspatimisra too did not himself comment on the proverb; so we are not sure about his own reading; but from the evidences that we have from his two works, it seems likely that he had, in contradiction to Sankara, the reading akke before him.(ಹಿಂದೆ ಹೇಳಿರುವ ಗ್ರಂಥ, ಪುಟ 345)

ಪ್ರಯೋಗವಿಲ್ಲದಿದ್ದರೂ ಸಹ, ವ್ಯಾಖ್ಯಾನಕಾರರು 'ಅಕ್ಕೇ' ಶಬ್ದಕ್ಕೆ 'ಸಮೀಪೇ', 'ಗೃಹಕೋಣೇ' ಎಂದು ಅರ್ಥಹೇಳಿದರು.

(iii) ಈ ನಾಣ್ಣುಡಿ ಜನಸಾಮಾನ್ಯರಲ್ಲಿ ಶುದ್ಧಸಂಸ್ಕೃತರೂಪದಲ್ಲಿರದೆ 'ಅಕ್ಕೇ ಚೇನ್ಮಹು ವಿಂದೇತ ಕಿಮರ್ಥಂ ಪವ್ವತಂ ವಜೇ' ಎಂಬ ಪ್ರಾಕೃತೀಕೃತ ರೂಪದಲ್ಲಿ ಪ್ರಚಲಿತವಾಗಿದ್ದಿರಬೇಕು. ಈ ಗಾದೆಯಲ್ಲಿ ಮೂಲೆಯಲ್ಲಿದ್ದ 'ಅರ್ಕ'ಶಬ್ದವು, ದಿನನಿತ್ಯದ ಬಳಕೆಯಲ್ಲಿದ್ದುದರಿಂದ, ಅದರ ನಿಜವಾದ ಅರ್ಥ 'ಎಕ್ಕದಗಿಡ' ಎಂಬುದನ್ನೂ ಮರೆತೋ ಅಥವಾ ಬಹುಶಃ, 'ಸಮೀಪ', 'ಮನೆಯ ಮೂಲೆ'ಎಂಬ ಸಂದರ್ಭಕ್ಕೆ ಹೊಂದುವ ಅರ್ಥಗಳನ್ನು ಹೇಳಿ ಜನರು ಈ ಗಾದೆಯನ್ನು ವಿವರಿಸುತ್ತಿದ್ದುದರಿಂದಲೋ, ಈ ಗಾದೆಯನ್ನು ಪ್ರಾಕೃತೀಕೃತರೂಪದಲ್ಲಿ ಅರಿತಿದ್ದ ಮಧ್ಯಕಾಲೀನ ವ್ಯಾಖ್ಯಾನಕಾರರೂ ಮತ್ತು ಗ್ರಂಥಕರ್ತರೂ 'ಅಕ್ಕ','ಅರ್ಕ' ಎಂಬ ಎರಡು ಶಬ್ದಗಳಿಗೂ ಈ ಅರ್ಥಗಳನ್ನೇ ಸ್ವೀಕರಿಸಿರಬೇಕು.

(iv) ಒಟ್ಟಿನಲ್ಲಿ, ಸಂಸ್ಕೃತದಲ್ಲಿ 'ಅಕ್ಕ' ಎಂಬುದು ಒಂದು ಮಿಥ್ಯಾ ಶಬ್ದ (ghost word)

ಡಾ. ಸೇನರು ಸಂಸ್ಕೃತದಲ್ಲಿದ್ದ ಈ ಗಾದೆಯು ಪ್ರಾಕೃತೀಕೃತವಾಯಿತೆಂದು ಹೇಳಿದ್ದಾರಷ್ಟೆ ಸಾಮಾನ್ಯವಾಗಿ, ಗಾದೆಗಳು ಜಾನಪದಮೂಲಗಳಿಂದ ಬಂದು ಶಿಷ್ಟಭಾಷೆಗೆ

(ii) Already in the ninth Cen. A.D., if not still earlier, arke was partially replaced by akke which was, a little later on, glossed as samipe, grha kone by the commentators without any lexical authority or any further usage of this vocable in literature. (ಪುಟ 347)

(iii) But it must have existed amongst such people not in its pure Skt. form, but rather in a Prakritised version, something like akke Cen ma(d)hu Vindeta Kimartham Pavvatam V(r)aje(t). But either because the real meaning (Calotropis Gigantea) of the vocable arka in this proverb was lost sight of as it is not a vocable of daily use or, more probably, just because of a popular explanation of this proverb, apparently contextual meanings like 'vicinity, corner of a home' etc. soon became associated with it. Our medieval commentators and authors must have been acquainted with this form of the proverb and the particular 'popular' meaning assigned to the vocable arka which they readily accepted even for the Skt. version of the proverb.(ಪುಟ 348)

ಸೇರುತ್ತವೆ. ಈ ಗಾದೆಯನ್ನು ಉದಾಹರಿಸಿರುವ ಅನೇಕ ಗ್ರಂಥಕಾರರು ಇದನ್ನು 'ಲೌಕಿಕಾನಾಂ ಆಭಾಣಕಃ' ಎಂದು ಕರೆದಿರುವುದರಿಂದ, "ಅಕ್ಕೇ ಚೇ ಮಹು ವಿಂದೇಯ ಕಿಮತ್ಥಂ ಪವ್ವಯಂ ವಜೇ'ಎಂದಿರಬಹುದಾದ ಪ್ರಾಕೃತದ ನಾಣ್ಣುಡಿ, ಮೊದಲು "ಅಕ್ಕೇ ಚೇನ್ಮಧು ವಿಂದೇತ ಕಿಮರ್ಥಂ ಪರ್ವತಂ ವ್ರಜೇತ್" ಎಂಬ ಸಂಸ್ಕೃತ ರೂಪವನ್ನು ತಾಳಿ, ಕಾಲಾಂತರದಲ್ಲಿ 'ಅಕ್ಕ' ಶಬ್ದದ ಅರ್ಥ ತಿಳಿಯದವರು, ಅದು "ಅರ್ಕ"ದ ಪ್ರಾಕೃತರೂಪ ವೆಂಬ ಭಾವನೆಯಿಂದ "ಅರ್ಕೇ ಚೇತ್" ಎಂದು ತಿದ್ದಿರಬಹುದು-ಇದು ಹೇಗೇ ಇರಲಿ, ಗಾದೆಯು ಸುಮಾರು ಸಾವಿರವರ್ಷಗಳ ಹಿಂದೆಯೇ 'ಅಕ್ಕೇ ಚೇನ್ಮಧು ವಿಂದೇತ" ಎಂಬ ರೂಪದಲ್ಲಿ ಬಳಕೆಯಲ್ಲಿದ್ದು ಅನುಭೂತಿ ಸ್ವರೂಪಾಚಾರ್ಯರ ಕಾಲಕ್ಕಾಗಲೇ (ಸು. 1100), "ಅಕ್ಕ" ಶಬ್ದಕ್ಕೆ 'ಸಮೀಪ' ಎಂಬ ಅರ್ಥವಿದ್ದುದು ನಿರ್ವಿವಾದ.

ಕನ್ನಡ ಶಬ್ದ 'ಅಕ್ಕಪಕ್ಕ'ದ ಮೊದಲಭಾಗವಾದ 'ಅಕ್ಕ'ವು ಸಮೀಪವೆಂಬ ಅರ್ಥವುಳ್ಳ ಪ್ರಾಕೃತದ 'ಅಕ್ಕ'ವೇ ಆಗಿರುವುದು ಸಂಭಾವ್ಯ. ಹಾಗಾಗಿದ್ದಲ್ಲಿ, 'ಅಕ್ಕಪಕ್ಕ' ಎಂಬ ಕೂಡುನುಡಿಯ ಅರ್ಥ 'ಅಕ್ಕ ಮತ್ತು ಪಕ್ಕ' ಎಂದರೆ "ಸಮೀಪ ಮತ್ತು ಮಗ್ಗುಲು" ಎಂದಾಗುವುದು.

2. ಹರಿಮೇಖಲೆ.

ಕೇಶಿರಾಜನು (ಕಾಲ, 13ನೆಯ ಶತಮಾನ) ತನ್ನ ಶಬ್ದಮಣಿದರ್ಪಣದ "ಪ್ರಯೋಗಸಾರವೆಂಬ ಶಬ್ದಾರ್ಥನಿರ್ಣಯಂ" ಎಂಬ ಭಾಗದಲ್ಲಿ "ಹರಿಮೇಖಲೆ ಯೆಂದು ಇಂದ್ರಜಾಲಂ" ಎಂದು ಹೇಳಿದ್ದಾನೆ. ಈ ಭಾಗದ ಆರಂಭದಲ್ಲಿರುವ ಪದ್ಯದಲ್ಲಿ "ಪುರಾಣಕವೀಂದ್ರರಖಿಳಕಾವ್ಯಂಗಳ ಗೂಢಪದಪ್ರಯೋಗಮಂ ನೆರಪಿ" ಎಂದು ಹೇಳಿದ್ದರೂ, ಅವನಿಗಿಂತ ಹಿಂದಿನ ಕಾಲದ ಯಾವ ಕಾವ್ಯದಲ್ಲೂ 'ಹರಿಮೇಖಲೆ' ಎಂಬ ಪದ ಸಿಕ್ಕಿದಂತಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಂಪಾದಕರು ಶ್ರೀಮಾನ್ ಎನ್. ಬಸವಾರಾಧ್ಯರು, ದಯೆಯಿಟ್ಟು ನನಗೆ ನೋಡಲು ಕೊಟ್ಟ ನಿಘಂಟಿನ ಕರಡು ಹಸ್ತಪ್ರತಿಯಲ್ಲಿ 'ಹರಿಮೇಖಲೆ' ಶಬ್ದಕ್ಕೆ 'ಕಪಟ, ಮಾಟ, ಮಾಯೆ, ಇಂದ್ರಜಾಲ' ಎಂಬ ಅರ್ಥಗಳೂ, ಕುಮಾರವ್ಯಾಸ ಭಾರತ, ತೊರವೆಯ ರಾಮಾಯಣ ಮತ್ತು ಸೊಬಗಿನ ಸೋನೆಗಳಿಂದ ಆಯ್ದ ಪ್ರಯೋಗಗಳೂ ಇದ್ದುವು. ಈ ಶಬ್ದದ ಮೂಲ, ಸಂಸ್ಕೃತದ ಹರಿಮೇಖಲಾ ಎಂದೂ ಇತ್ತು. 'ಹರಿಮೇಖಲಾ' ಶಬ್ದ ಸಂಸ್ಕೃತಕೋಶಗಳಲ್ಲಾಗಲೀ ನಿಘಂಟುಗಳಲ್ಲಾಗಲೀ ಕಂಡುಬರುವುದಿಲ್ಲ. ಆ ಶಬ್ದದ ಪ್ರಯೋಗವೂ ಎಲ್ಲೂ ಸಿಕ್ಕಿಲ್ಲ. ಆ ಶಬ್ದ 'ಹರಿ' ಮತ್ತು 'ಮೇಖಲಾ'ಗಳ ಸಮಾಸದಿಂದ ಉತ್ಪನ್ನವಾದುದಷ್ಟೆ. ಕರ್ಮಧಾರಯ ಸಮಾಸವಾಗಿದ್ದರೆ, 'ಹರಿರೇವ ಮೇಖಲಾ' (ಹರಿಯೇ ಮೇಖಲೆ), 'ಹರಿರಿವ ಮೇಖಲಾ

(ಹರಿಯಂತಿರುವ ಮೇಖಲೆ), 'ಹರಿಶ್ಚ ಸಾ ಮೇಖಲಾ ಚ' (ಹರಿವರ್ಣದ ಮೇಖಲೆ), 'ಹರಿಯುಕ್ತಾ ಮೇಖಲಾ' (ಹರಿಯಿರುವ ಮೇಖಲೆ) ಹೀಗೆಲ್ಲಾ ಬಿಡಿಸಬಹುದು. ತತ್ಪುರುಷ ಸಮಾಸವಾಗಿದ್ದರೆ 'ಹರೇಃ ಮೇಖಲಾ' (ಹರಿಯ ಮೇಖಲೆ) ಎಂದಾಗಬಹುದು.

'ಹರಿ' ಶಬ್ದಕ್ಕೆ ಅಮರಕೋಶದ ನಾನಾರ್ಥವರ್ಗದಲ್ಲಿ ಯಮ, ವಾಯು, ಇಂದ್ರ, ಚಂದ್ರ, ಸೂರ್ಯ, ವಿಷ್ಣು ಸಿಂಹ, ಕುದುರೆ, ಗಿಣಿ, ಹಾವು, ಕಪಿ, ಕಪ್ಪೆ ಕಿರಣ, ಹಸಿರು, ಹಳದಿ ಮತ್ತು ಕಂದು (ಕಪಿಲ) ಬಣ್ಣಗಳು ಎಂಬರ್ಥಗಳನ್ನು ಹೇಳಿದೆ. 'ಮೇಖಲಾ' ಶಬ್ದಕ್ಕೆ ಸೊಂಟ, ನಡುಕಟ್ಟು, ಹೆಂಗಸರು ಧರಿಸುವ ಒಡ್ಯಾಣ (ಡಾಬು), ದ್ವಿಜರು , ಸೊಂಟಕ್ಕೆ ಕಟ್ಟಿಕೊಳ್ಳುವ ಮೂರೆಳೆಯ ನಾರಿನ ಉಡಿದಾರ (ಮೌಂಜೀ), ಬೆಟ್ಟದ ಇಳಿಜಾರು ಭಾಗ ಇತ್ಯಾದಿ ಅರ್ಥಗಳಿವೆ. 'ಹರಿ' ಮತ್ತು 'ಮೇಖಲಾ'ಗಳಿಗೆ ಯಾವ ಅರ್ಥ ತೆಗೆದುಕೊಂಡರೂ, ಇವುಗಳ ಸಮಾಸದಿಂದಾದ ಪದಕ್ಕೆ 'ಇಂದ್ರಜಾಲ' ಎಂಬ ಅರ್ಥ ಬರುವುದಿಲ್ಲ.

'ಹರಿ'ಶಬ್ದಕ್ಕೆ 'ಶಿವ' ಎಂಬ ಅರ್ಥವನ್ನೂ Apte ಮತ್ತು Monier Monier-Williamsರ ಸಂಸ್ಕೃತ - ಇಂಗ್ಲಿಷ್ ನಿಘಂಟುಗಳಲ್ಲಿ ಕೊಟ್ಟಿದ್ದಾರೆ. ಆದುದರಿಂದ ಮುಂಚೆ 'ಹರಮೇಖಲಾ' ಎಂದಿದ್ದುದು, ಅನಂತರ 'ಹರಿಮೇಖಲಾ' ಆಗಿರುವ ಸಾಧ್ಯತೆಯಿದೆ. ನನಗೆ ನೋಡಲು ಸಿಕ್ಕಿರುವ ಮುಖ್ಯ ಸಂಸ್ಕೃತ - ಇಂಗ್ಲಿಷ್ ನಿಘಂಟುಗಳ ಪೈಕಿ Monier Monier - Williamsರ ನಿಘಂಟಿನಲ್ಲಿ ಮಾತ್ರ 'ಹರಮೇಖಲಾ' ಮತ್ತು 'ಹರಮೇಖಲಿನ್' ಶಬ್ದಗಳಿವೆ. ಅಲ್ಲಿ ಕೊಟ್ಟಿರುವ ಅರ್ಥಗಳು ಇಂತಿವೆ :

ಹರಮೇಖಲಾ Name of works
ಹರಮೇಖಲಿನ್ A particular class of artisans(Goladhyaya).

'ಹರಮೇಖಲಾ' ಎಂಬ ಹೆಸರಿರುವ ಕೆಳಕಂಡ ಗ್ರಂಥಗಳಿವೆಯೆಂದು ತಿಳಿದು ಬಂದಿದೆ :

(i) ಹರಮೇಖಲ ನಿಘಂಟು-ಅಮರಕೋಶದಲ್ಲಿನ ವನೌಷಧಿವರ್ಗದ 102ನೆಯ ಶ್ಲೋಕದ ಕ್ಷೀರಸ್ವಾಮಿಯ ವ್ಯಾಖ್ಯಾನದಲ್ಲಿ ಇದರ ಹೆಸರಿದೆ.

(ii) ಹರಮೇಖಲಂ ಪ್ರಯೋಗಮಾಲಾ (ಮಾಹುಕ, 9th century A.D.) An old work on ತಂತ್ರ[12]

---

12. ಶ್ರೀಮದಮರಸಿಂಹವಿರಚಿತಂ ನಾಮಲಿಂಗಾನುಶಾಸನಮ್, ಭಟ್ಟ- ಕ್ಷೀರಸ್ವಾಮಿ ಪ್ರಣೀತೇನ ಅಮರಕೋಶೋದ್ಘಾಟನೇನ ಸಹಿತಂ. Oriental Book Agency, Poona -1941. (i)ಪುಟ 106 (ii) ಪುಟ 530.

(iii) ಹರಮೇಖಲಾ ಎಂಬ ತಾಂತ್ರಿಕಗ್ರಂಥದ, ಗ್ರಂಥಾಕ್ಷರದಲ್ಲಿ ಬರೆದಿರುವ, ಓಲೆಗರಿ ಹಸ್ತಪ್ರತಿ ತಂಜಾವೂರಿನ ಸರಸ್ವತೀಮಹಲ್ ಪುಸ್ತಕಭಂಡಾರದಲ್ಲಿರುವುದಾಗಿ ಮದರಾಸ್ ವಿಶ್ವವಿದ್ಯಾಲಯದ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಡಾ. ಎನ್. ಗಂಗಾಧರನ್‌ರವರು ತಮ್ಮ ಪತ್ರದಲ್ಲಿ ದಯೆಯಿಟ್ಟು ತಿಳಿಸಿದ್ದಾರೆ.

(iv) ಹರಮೇಖಲಾ ಎಂಬ ಪ್ರಾಕೃತಭಾಷೆಯ ವೈದ್ಯಗ್ರಂಥದ ಸಂಸ್ಕೃತ ವ್ಯಾಖ್ಯಾನ ಸಹಿತವಾದ, ಕನ್ನಡ ಲಿಪಿಯಲ್ಲಿರುವ ಕಾಗದದ ಹಸ್ತಪ್ರತಿ ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನಾಲಯ (Oriental Research Institute) ದಲ್ಲಿದೆ. ಇದರಲ್ಲಿ 7 ಪರಿಚ್ಛೇದಗಳಿವೆ.

(v) ಹರಮೇಖಲಾ ಅಥವಾ ಉಡ್ಡೀಶತಂತ್ರ (ರಾವಣಕೃತ)[13]

ಈ ಮೇಲ್ಕಂಡ ಯಾವ ಗ್ರಂಥಗಳನ್ನೂ ನೋಡಲು ನನಗೆ ಸಾಧ್ಯವಾಗಿಲ್ಲವಾದುದ ರಿಂದ ಇವುಗಳಿಗೆ ಏಕೆ 'ಹರಮೇಖಲಾ' ಎಂಬ ಹೆಸರು ಬಂದಿದೆಯೋ ಹೇಳಲಾರೆ.

'ಹರಮೇಖಲಿನ್' ಶಬ್ದ ಗೋಳಾಧ್ಯಾಯದಲ್ಲಿದೆಯೆಂದು Monier-Williams ರವರು ಹೇಳಿದ್ದಾರಷ್ಟೆ. ಭಾಸ್ಕರಾಚಾರ್ಯನ ಸಿದ್ಧಾಂತಶಿರೋಮಣಿಯ ಭಾಗವಾದ ಗೋಳಾಧ್ಯಾಯದ ಎರಡು ಭಿನ್ನ ಆವೃತ್ತಿಗಳಲ್ಲಿ[14] ಪೂರ್ತಿ ಹುಡುಕಿದರೂ ಈ ಶಬ್ದ ಸಿಗಲಿಲ್ಲ. ನನ್ನ ಬಂಧುಗಳಾದ ಮೈಸೂರಿನ ಪಂಚಾಂಗಕರ್ತರು ಚಿ|| ವಿದ್ವಾನ್ ವಿ. ರಾಮಕೃಷ್ಣ ಶಾಸ್ತ್ರಿಗಳು ತಮ್ಮಲ್ಲಿರುವ ಈ ಗ್ರಂಥದ ಮತ್ತು ಸೂರ್ಯಸಿದ್ಧಾಂತ, ವಟೇಶ್ವರ ಸಿದ್ಧಾಂತ ಇತ್ಯಾದಿ ಏಳು ಇತರ ಸಿದ್ಧಾಂತ ಗ್ರಂಥಗಳ ಗೋಳಾಧ್ಯಾಯಗಳಲ್ಲೆಲ್ಲಿಯೂ ಈ ಶಬ್ದವಾಗಲೀ 'ಹರಮೇಖಲಾ' ಶಬ್ದವಾಗಲೀ ಕಂಡುಬರುವುದಿಲ್ಲವೆಂದು ತಿಳಿಸಿ ಉಪಕಾರ ಮಾಡಿದ್ದಾರೆ.

---

13. Catalogus Catalogorum by Theodor Aufrecht, Part I ಪುಟಗಳು 62 ಮತ್ತು 755.

ಈ ವಿವರವನ್ನೂ ಮತ್ತು ಹಿಂದೆ ಹೇಳಿರುವ ಪ್ರಾಚ್ಯ ವಿದ್ಯಾಸಂಶೋಧನಾಲಯದಲ್ಲಿರುವ 'ಹರಮೇಖಲಾ' ವೈದ್ಯ ಗ್ರಂಥದ ಮಾಹಿತಿಯನ್ನೂ ಶ್ರಮವಹಿಸಿ ಹುಡುಕಿಕೊಟ್ಟ ನನ್ನ ಮಿತ್ರರು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೌಲಗಿ ಶೇಷಾಚಾರ್ಯರಿಗೆ ಕೃತಜ್ಞನಾಗಿದ್ದೇನೆ.

14. (i) ಮುಂಬಯಿಯ Shree Venkateswar steam press ನವರಿಂದ 1905ರಲ್ಲಿ ಪ್ರಕಟಿತವಾದ ಸಿದ್ಧಾಂತಶಿರೋಮಣಿಯ ಭಾಗವಾದ ಗೋಲಾಧ್ಯಾಯ ಮಾತ್ರವಿರುವ ಆವೃತ್ತಿ.

(ii) ವಾರಾಣಸಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಿಂದ 1981ರಲ್ಲಿ ಪ್ರಕಟಿತವಾದ ಸಿದ್ಧಾಂತಶಿರೋಮಣಿ-ಗ್ರಹಗಣಿತಾಧ್ಯಾಯ ಮತ್ತು ಗೋಲಾಧ್ಯಾಯ.

ಈಗ ನನಗೆ ಸಂಭಾವ್ಯವೆಂದು ತೋರಿದಂತೆ ಈ ಶಬ್ದಗಳ ನಿಷ್ಪತ್ತಿಯನ್ನು ನಿರೂಪಿಸುತ್ತೇನೆ. 'ಹರಮೇಖಲಾ' ಶಬ್ದವನ್ನು "ಹರಸ್ಯ ಮೇಖಲಾ" (ಹರನ ನಡುಕಟ್ಟು ಅಥವಾ ಉಡಿದಾರ) ಎಂದು ಬಿಡಿಸಬಹುದು. ಹರನು ಸರ್ಪಭೂಷಣನೆಂದು ಪ್ರಸಿದ್ಧನಷ್ಟೆ ಆದುದರಿಂದ ಹರನ ಉಡಿದಾರವೂ ಹಾವೇ.[15] "ಹರಮೇಖಲಾಃ (ಸರ್ಪಾಃ) ಸಂತಿ ಅಸ್ಯ" (ಇವನು ಹಾವುಗಳನ್ನು ಹೊಂದಿದ್ದಾನೆ ಎಂದರೆ ಹಾವಿನೊಡನಾಡುತ್ತಾನೆ) ಎಂಬ ನಿಷ್ಪತ್ತಿಯಂತೆ[16] 'ಹರಮೇಖಲಿನ್' ಎಂದರೆ ಹಾವುಹಿಡಿಯುವವನು (ವ್ಯಾಳಗ್ರಾಹಿ) ಅಥವಾ ಹಾವಾಡಿಗ. ಹಾವಾಡಿಗರು ಕೆಲವು ವೇಳೆ ವಿಷವೈದ್ಯ ಮಾಡುವುದಲ್ಲದೆ, ಯಕ್ಷಿಣೀಪ್ರದರ್ಶನವನ್ನೂ ಮಾಡುವುದರಿಂದ ಅವರನ್ನು ಗಾರುಡಿಗರೆಂದೂ ಕರೆಯುತ್ತಾರೆ. ಹಾವಾಡಿಗ ಎಂಬರ್ಥವಿದ್ದ 'ಹರಮೇಖಲಿನ್' ಶಬ್ದದ ಅರ್ಥವ್ಯಾಪ್ತಿ ವಿಸ್ತರಿಸಿ (ಲಕ್ಷಣಾರ್ಥದಲ್ಲಿ ?) ಐಂದ್ರ ಜಾಲಿಕನೆಂಬ ಅರ್ಥ ಬಂದಿರಬೇಕು. ಮುಂದೆ, 'ಹರಮೇಖಲಿನ್' ಎಂಬ ಶಬ್ದಕ್ಕೆ ಹಾವಾಡಿಗ ಅಥವಾ ಐಂದ್ರಜಾಲಿಕ ಎಂಬ ಅರ್ಥ ಹೇಗೆ ಬಂತೆಂಬುದು ಅರಿವಿನಿಂದ ಮರೆಯಾಗಿ ಐಂದ್ರಜಾಲಿಕನ ವಿದ್ಯೆಯಾದ ಇಂದ್ರಜಾಲಕ್ಕೆ "ಹರಮೇಖಲಾ" ಎಂಬ ಹೆಸರು, 'ಪರಾವರ್ತನ ವಿಧಾನ'ದಿಂದ (Back-formation) ಬಂದಿತು.

ಈ ನಿಷ್ಪತ್ತಿ ಎಷ್ಟುಮಟ್ಟಿಗೆ ಗ್ರಾಹ್ಯವೆಂಬುದನ್ನು ಅರಿತವರು ನಿರ್ಣಯಿಸಬೇಕು.[17]

---

15. ವಿಷ್ಣುವು ತನ್ನನ್ನು ನೋಡಲು ಬರುತ್ತಿರುವನೆಂದು ಕೇಳಿ, ದಿಗಂಬರನಾದ ಶಂಭುವು ಕೂಡಲೆ ತನ್ನ ಹಾವುಗಳಲ್ಲೊಂದನ್ನು ಉಡಿದಾರವಾಗಿ ಬಿಗಿದು, ಗಜಚರ್ಮವನ್ನೇ ಕೌಪೀನವಾಗಿ ಧರಿಸಿ, ವಿಷ್ಣುವನ್ನು ಎದುರುಗೊಳ್ಳಲು ವೇಗದಿಂದ ಓಡಿದಾಗ, ವಿಷ್ಣುವಿನ ವಾಹನವಾಗಿದ್ದ ಗರುಡನನ್ನು ಕಂಡೊಡನೆ ಎದೆನಡುಗಿದ ಹಾವು ಬಿದ್ದು ಹೋದುದರಿಂದ, ಮತ್ತೇ ದಿಗಂಬರನಾದ. ಹರನು ನಾಚಿ ತಲೆತಗ್ಗಿಸಿದನೆಂದು ಹೇಳುವ ಸಂಸ್ಕೃತದ ಚಾಟು ಶ್ಲೋಕವೊಂದಿದೆ.

ವಿಷ್ಣೋರಾಗಮನಂ ನಿಶಾಮ್ಯ ಸಹಸಾ ಕೃತ್ವಾ ಫಣೀಂದ್ರಂ ಗುಣಂ
ಕೌಪೀನಂ ಪರಿಧಾಯ ಚರ್ಮ ಕರಿಣಃ ಶಂಭೌ ಪುರಾಧಾವತಿ ॥
ದೃಷ್ಟ್ವಾ ವಿಷ್ಣುರಥಂ ಸಕಂಪಹೃದಯಃ ಸರ್ಪೋऽಪತದ್ಭೂತಲೇ
ಕೃತ್ತಿರ್ವಿಸ್ಖಲಿತಾ ಹ್ರಿಯಾನತಮುಖೋ ನಗ್ನೋ ಹರಃ ಪಾತುವಃ ॥

16. ತದಸ್ಯಾಸ್ತ್ಯಸ್ಮಿನ್ನಿತಿ/ಮತುಪ್(5-2-94), ಅತ ಇನಿ ಠನೌ(5-2-115) ಮತ್ತು ವ್ರೀಹ್ಯಾದಿಭ್ಯಶ್ಚ (5-2-116) ಎಂಬ ಪಾಣಿನಿ ಸೂತ್ರಗಳಂತೆ 'ಹರಮೇಖಲಾ' ಶಬ್ದಕ್ಕೆ [ಮತುಪ್ ಪ್ರತ್ಯಯದ ಅರ್ಥಗಳಲ್ಲೊಂದಾದ ಸಂಸರ್ಗ (accompaniment)ದ ಅರ್ಥದಲ್ಲಿ] 'ಇನ್' ಪ್ರತ್ಯಯ ಸೇರಿ 'ಹರಮೇಖಲಿನ್' ಶಬ್ದ ಸಿದ್ಧಿಸುತ್ತದೆ.

17. 'ಹರಿಮೇಖಲಾ' ಶಬ್ದಕ್ಕೆ ಸಂಸ್ಕೃತದಲ್ಲಿ ಪ್ರಯೋಗವಿದೆಯೇ । ಇದ್ದರೆ, ಯಾವ ಅರ್ಥದಲ್ಲಿ? ಎಂದು ಹಿಂದೊಮ್ಮೆ ಪ್ರೊ. ಅ. ರಾ. ಮಿತ್ರ ಅವರು ಕೇಳಿದ್ದರು. ಅವರು ಕೆರಳಿಸಿದ ಕುತೂಹಲದ ಪರಿಣಾಮವೇ ಈ ಲೇಖನ ಆದುದರಿಂದ ಅವರಿಗೆ ಆಭಾರಿಯಾಗಿದ್ದೇನೆ.

ಶಾಸ್ತ್ರಗ್ರಂಥಗಳ ವಿಮರ್ಶೆ

1. ನಾಲ್ವರು ಸಿದ್ಧಾಂತಿಗಳು *

ಪುರಾತನ ಭಾರತದ ಪ್ರಸಿದ್ಧ ಸಿದ್ಧಾಂತಿಗಳಾದ ಆರ್ಯಭಟ, ವರಾಹಮಿಹಿರ, ಬ್ರಹ್ಮಗುಪ್ತ, ಭಾಸ್ಕರವೆಂಬ ನಾಲ್ವರ ಮತ್ತು ಅವರ ಗ್ರಂಥಗಳ ಪರಿಚಯವನ್ನು ಜನಸಾಮಾನ್ಯರಿಗೆ ಉಂಟುಮಾಡಿಸಬೇಕೆಂಬ ಸದುದ್ದೇಶದಿಂದ ಶ್ರೀಮಾನ್ ಎನ್. ಕೆ. ನರಸಿಂಹಮೂರ್ತಿಗಳು ಈ ಗ್ರಂಥವನ್ನು ಬರೆದು ಕನ್ನಡಿಗರನ್ನು ತಮಗೆ ಚಿರಋಣಿಗಳನ್ನಾಗಿ ಮಾಡಿಕೊಂಡಿದ್ದಾರೆ.

ಕನ್ನಡದಲ್ಲಿ ವಿಮರ್ಶಾರೂಪವಾದ ಗ್ರಂಥಗಳೇ ವಿರಳ. ಅದರಲ್ಲೂ ಖಗೋಳ ಶಾಸ್ತ್ರದಂಥ ಗಹನವಾದ ಶಾಸ್ತ್ರದ ವಿಷಯಕವಾದ ಗ್ರಂಥಗಳೇ ಇಲ್ಲವೆನ್ನಬೇಕು. ಈ ಕೊರತೆಯನ್ನು ನರಸಿಂಹಮೂರ್ತಿಗಳು ತಕ್ಕಮಟ್ಟಿಗೆ ನಿವಾರಿಸಿದ್ದಾರೆ.

ಈಗಿನ ವಿದ್ಯಾವಂತರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ನಮ್ಮ ಭಾರತಭೂಮಿಯಲ್ಲೂ ಗಣಿತ ಶಾಸ್ತ್ರವು ಇದ್ದಿತೆಂದು ತಿಳಿದಿರುವವರು ಬಹಳ ಸ್ವಲ್ಪ ಮಂದಿ. ಸಾಮಾನ್ಯವಾಗಿ ಇದು ಪರದೇಶದಿಂದ ಬಂದಿತೆಂದೇ ಅವರ ಅಭಿಪ್ರಾಯ. ಅಂಥವರಿಗೆ ಈ ಗ್ರಂಥವನ್ನೋದುವುದ ರಿಂದ, ಯೂರೋಪಿಯನ್ನರು 14-15ನೇ ಶತಮಾನಗಳಲ್ಲಿ ಕೂಡ ತಿಳಿಯದೇ ಇದ್ದ ವಿಷಯಗಳನ್ನು ನಮ್ಮವರು ಎಷ್ಟೋ ಹಿಂದೆಯೇ ತಿಳಿದಿದ್ದರೆಂಬುದು ಚೆನ್ನಾಗಿ ವ್ಯಕ್ತವಾಗುವುದು. ಉದಾಹರಣೆಗಾಗಿ, ಆರ್ಯಭಟನು ಕ್ರಿ.ಶ. 499ರಲ್ಲೇ ವೃತ್ತದ ಪರಿಧಿ ನ್ಯಾಸಗಳ ಸರಿಯಾದ ಪರಿಣಾಮ (II) ಭೂಮಿಯ ಆಕಾರ, ಗಾತ್ರ, ಆಕರ್ಷಣಾಶಕ್ತಿ (Gravitation) ವಾತಾವರಣದ ಎತ್ತರ ಮೊದಲಾದ ವಿಷಯಗಳನ್ನೆಲ್ಲಾ ಬಹಳ ನಿರುಕಾಗಿ ತಿಳಿಸಿದ್ದಾನೆ. 1150ರಲ್ಲಿ ಭಾಸ್ಕರನು, ಕುಟ್ಟಕ (Indeterminate equation) ಶೂನ್ಯ ಪರಿಕರ್ಮ (operations with zero) ಖಹರ (infinit) ಇವುಗಳ ವಿಷಯವಾದ ಸೂತ್ರಗಳನ್ನು ಕೊಟ್ಟಿರುತ್ತಾನೆ.

ಸಾಮಾನ್ಯವಾಗಿ ನಮ್ಮವರ ವಿಷಯವನ್ನು ಬರೆಯುವಾಗ ನಾವು ಅವರ ಗುಣಗಳನ್ನೇ ಹೇಳಿ ದೋಷಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ. ಶ್ರೀಮಾನ್ ನರಸಿಂಹಮೂರ್ತಿಗಳು ಹಾಗೆ ಮಾಡದೆ ತಮ್ಮ ವಿಮರ್ಶಕತ್ವವನ್ನು ಉಳಿಸಿಕೊಂಡಿದ್ದಾರೆ. ಸೂರ್ಯಚಂದ್ರರ ಗಾತ್ರ,

* **ಎನ್. ಕೆ. ನರಸಿಂಹಮೂರ್ತಿ**, ಎಂ.ಎಸ್.ಸಿ.ಪ್ರಕಾಶಕರು : ಸುಬೋಧ ಪ್ರಕಟನಾಲಯ, ಬೆಂಗಳೂರು ಪುಟ : viii + 150. ಬೆಲೆ ಹನ್ನೆರಡು ಆಣೆ.

ಗ್ರಹಣದ ಕಾರಣ, ಭೂಚಲನೆ ಮೊದಲಾದ ವಿಷಯಗಳಲ್ಲಿ ಕೆಲವರು ಸಿದ್ಧಾಂತಿಗಳಿಗಿದ್ದ ತಪ್ಪು ಭಾವನೆಗಳನ್ನು ಸಹ ತೋರಿಸಿರುತ್ತಾರೆ. ಬ್ರಹ್ಮಗುಪ್ತನು ಎಷ್ಟೇ ಬುದ್ಧಿವಂತನಾದ ಸಿದ್ಧಾಂತಿಯಾಗಿದ್ದರೂ ಆರ್ಯಭಟನನ್ನು ವೃಥಾ ದೂಷಿಸಿ, ತಾನೇ ತಪ್ಪು ಬರೆದಿದ್ದಾನೆಂಬುದನ್ನೂ ತೋರಿಸಿದ್ದಾರೆ.

ಗ್ರಂಥಕರ್ತರೇ ಹೇಳಿರುವಂತೆ ಇಂಥಾ ಗ್ರಂಥಗಳಲ್ಲಿ ಭಾಷೆಯು ಅಲ್ಲಲ್ಲಿ ದುರ್ಬೋಧವಾಗುವುದು ಸಹಜ. ಉದಾಹರಣೆಗಾಗಿ 70ನೆಯ ಪುಟದಲ್ಲಿ 'ಆಧುನಿಕರ ಮತದಂತೆ........ ಎಂದು ಹೇಳಿದ ಹಾಗಾಯಿತು'' ಎಂಬ ವಾಕ್ಯವನ್ನೋದಿದರೆ, ಆಧುನಿಕರ ಮತದಂತೆ ಉಜ್ಜಯಿನಿಯು ಕಟಕ ಸಂಕ್ರಾಂತಿ ವೃತ್ತದ ಮೇಲಿದೆ ಎಂಬರ್ಥ ಬರುತ್ತದೆ. ಆದರೆ ಮುಂದಿನ ವಾಕ್ಯದಲ್ಲಿ ಉಜ್ಜಯಿನಿಯು ಈ ವೃತ್ತದ ದಕ್ಷಿಣಕ್ಕೆ ಸುಮಾರು ½ ಡಿಗ್ರಿಯಷ್ಟು ಕೆಳಗಿದೆ ಎಂದು ಹೇಳಲ್ಪಟ್ಟಿದೆ.

ಶುದ್ಧಾಶುದ್ಧ ಪತ್ರಿಕೆಯಿದ್ದರೂ ತಪ್ಪುಗಳು ಹೆಚ್ಚಾಗಿಯೇ ಉಳಿದಿವೆ. ಇವುಗಳನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸುವರೆಂದು ನಂಬಿದ್ದೇನೆ. ಅಲ್ಲದೆ ಈ ಪುಸ್ತಕ ದಲ್ಲಿರುವ ವಿಷಯಗಳ ಜೊತೆಗೆ ಇನ್ನೂ ಇತರ ಆಚಾರ್ಯರ ವಿಷಯಗಳನ್ನೂ ಸೇರಿಸಿ, ಭಾರತೀಯ ಖಗೋಳ ಶಾಸ್ತ್ರದ ಚರಿತ್ರೆಯನ್ನಾಗಿ ಮಾರ್ಪಡಿಸಿ, ಕನ್ನಡಿಗರಿಗೆ ಇನ್ನೂ ಹೆಚ್ಚಾಗಿ ಉಪಕಾರ ಮಾಡುತ್ತಾರೆಂದು ಆಶಿಸುತ್ತೇನೆ.

ಒಟ್ಟಿನಲ್ಲಿ, ಈ ಗ್ರಂಥವು ಪ್ರತಿಯೊಬ್ಬ ಕನ್ನಡಿಗನೂ, ಅದರಲ್ಲೂ ವಿದ್ಯಾರ್ಥಿಗಳು, ಅವಶ್ಯವಾಗಿ ಓದತಕ್ಕುದಾಗಿದೆ. ಗ್ರಂಥದ ಬೆಲೆಯೂ ಅಷ್ಟೇನೂ ಹೆಚ್ಚಾಗಿಲ್ಲ. ಇಂಥಾ ಗ್ರಂಥವನ್ನು ಬರೆದು, ಕನ್ನಡಿಗರಿಗೆ ಇವರು ಮಾಡಿರುವ ಉಪಕಾರಕ್ಕಾಗಿ ನಾನು ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

2. ಹವ್ಯಕರ ಶೋಭಾನೆಗಳು *

ಕನ್ನಡದಲ್ಲಿ ಜನಪದ ಸಾಹಿತ್ಯದ ಅಭ್ಯಾಸ ಈ ಒಂದೆರಡು ದಶಕಗಳಲ್ಲಿ ಹೆಚ್ಚಾಗುತ್ತಿರುವುದು ಸಂತೋಷದ ಸಂಗತಿ. 1930ರ ದಶಕದಲ್ಲಿ ಜನಪದ ಸಾಹಿತ್ಯದ ಕಡೆಗೆ ವಿದ್ವಾಂಸರ ಗಮನವನ್ನು ಸೆಳೆದು ಅಲ್ಲಿ ಎಂಥ ಸೌಭಾಗ್ಯ ಅಡಗಿದೆಯೆಂಬುದರ ಪರಿಚಯವನ್ನು ಮಾಡಿಕೊಟ್ಟ ಬಿ. ಎಂ. ಶ್ರೀಕಂಠಯ್ಯನವರನ್ನು ನಾವಿಂದು ನೆನೆಯಬೇಕು.

* ಹವ್ಯಕರ ಶೋಭಾನೆಗಳು : ಪ್ರೊ|| ಟಿ.ಕೇಶವ ಭಟ್ಟ; ಪ್ರ : ಚಿರಸಾಹಿತ್ಯ ಪ್ರಕಾಶನ, 754, 15ನೆಯ ಮುಖ್ಯರಸ್ತೆ, ಬನಶಂಕರಿ 2ನೆಯ ಹಂತ, ಬೆಂಗಳೂರು-560 070; ಪುಟಗಳು 740 ಡೆಮ್ಮಿ 1/8; ಬೆಲೆ : ರೂ. 125. (1986).

ಅವರ ಅವಿರತವಾದ ಉತ್ಸಾಹದ ಪರಿಣಾಮವಾಗಿಯೇ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರೂ ಗದ್ದಿಗೆಮಠ ಅವರೂ ಇಂಥ ಇನ್ನೂ ಕೆಲವರೂ ಜಾನಪದ ಗೀತೆಗಳು ಎಂಬ ಹೆಸರಿನಲ್ಲೋ ಹಳ್ಳಿ ಹಾಡುಗಳು ಎಂಬ ಹೆಸರಿನಲ್ಲೋ ಗ್ರಂಥಗಳನ್ನು ಹೊರತಂದರು. ದೇವುಡು ನರಸಿಂಹ ಶಾಸ್ತ್ರಿಗಳೂ ಮಾಸ್ತಿಯವರೂ ಈ ದಿಶೆಯಲ್ಲಿ ಲೇಖನಗಳನ್ನು ಬರೆದರು. ಇದಿಲ್ಲಿ ಈಗ ಚರಿತ್ರೆಯ ಮಾತಾಗಿದೆ.

ಇಂಥ ಸಂದರ್ಭದಲ್ಲಿ ಶ್ರೀ ಟಿ. ಕೇಶವಭಟ್ಟರು ಉಪಾಧ್ಯಾಯವೃತ್ತಿಯಿಂದ ನಿವೃತ್ತಿ ಹೊಂದಿದ ಮೇಲೆ ಯು.ಜಿ.ಸಿ. ನೆರವಿನಿಂದ, ವಿಸ್ತೃತವಾಗಿ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ್ದ ಹವ್ಯಕ ಸಮಾಜದ ಸಾವಿರಾರು ಹಾಡುಗಳಲ್ಲಿ, ಮಹಿಳೆಯರು ಹಾಡುತ್ತಿದ್ದ ಶೋಭಾನೆಗಳನ್ನು ಮಾತ್ರ ಒಂದು ಕಡೆ ಸೇರಿಸಿ, ಅವುಗಳನ್ನು ಶಾಸ್ತ್ರೀಯವಾಗಿ ಸಂಪಾದನೆ ಮಾಡಿ ಅವುಗಳ ಬಗ್ಗೆ ವಿಮರ್ಶೆಯ ವಿವರಗಳನ್ನು ನೀಡುವ ಪರಾಮರ್ಶೆಯನ್ನೂ ಸೇರಿಸಿ, ತುಂಬ ಸುತ್ತ್ಯಕಾರ್ಯವನ್ನು ಮಾಡಿದ್ದಾರೆ. ಇತ್ತೀಚಿನ ಕನ್ನಡ ಪ್ರಕಟಣೆಗಳಲ್ಲಿ ಬಹಳ ಪ್ರಮುಖ ಸ್ಥಾನವನ್ನು ಆಕ್ರಮಿಸುವ ಈ ಗ್ರಂಥದ ಆಳವಾದ ಅಭ್ಯಾಸ ಅಗತ್ಯವಾಗಿ ನಡೆಯಬೇಕು. ಹಾಗೆ ಆದರೆ, ಆಗ ಶ್ರೀ ಕೇಶವ ಭಟ್ಟರು ತೆರೆದಿರುವ ಈ ಹವ್ಯಕ ಪ್ರಪಂಚದ ಎಷ್ಟೋ ಹೊಸ ವಿಷಯಗಳು ಕನ್ನಡ ಸಾಹಿತ್ಯದ ಬೊಕ್ಕಸವನ್ನು ತುಂಬುವುದರಲ್ಲಿ ಅನುಮಾನವಿಲ್ಲ.

ಈ ಬೃಹತ್ ಗ್ರಂಥದಲ್ಲಿ 280 ಹಾಡುಗಳಿವೆ. ಅವುಗಳನ್ನು ಲೇಖಕರು ಐದು ವಿಭಾಗಗಳಾಗಿ ವಿಂಗಡಿಸಿದ್ದಾರೆ. (1) ಮದುವೆಯ ಹಾಡುಗಳು. (2) ಜನ್ಮ ದಿನೋತ್ಸವದ ಹಾಡುಗಳು. (3) ಉಪನಯನದ ಹಾಡುಗಳು. (4) ಪೂಜೆ, ವ್ರತ, ಹಬ್ಬ, ಹೋಮ ಇತ್ಯಾದಿಗಳ ಹಾಡುಗಳು. (5) ಪುಣ್ಯಕಥಾತ್ಮಕವಾದ ದೀರ್ಘ ಹಾಡುಗಳು. ಇವುಗಳಲ್ಲಿ ಮೊದಲನೆಯ ಭಾಗದಲ್ಲಿ ಅನೇಕ ಉಪವಿಭಾಗಗಳು ಸೇರಿವೆ. ಚತುರ್ಥಿಯ ಹಾಡುಗಳು, ಗೃಹಪ್ರವೇಶದ ಹಾಡುಗಳು, ವಿನೋದದ ಹಾಡುಗಳು, ಗೃಹಿಣಿಯ ದಿನಚರಿ ಇತ್ಯಾದಿ. ಆದರೆ, ಇವೆಲ್ಲವೂ ಮದುವೆಯ ಉತ್ಸವಕ್ಕೆ ಸಂಬಂಧಪಟ್ಟವೇ ಆಗಿವೆ.

ಒಂದು ವಿಶಿಷ್ಟ ಸಮಾಜದ ಅಂತರಂಗವನ್ನು ಸೆರೆಹಿಡಿದಿರುವ ಈ ಹಾಡುಗಳು ಸ್ವಾಭಾವಿಕವಾಗಿಯೇ ಆ ಸಮಾಜದ ಮತೀಯ ಮತ್ತು ಸಾಮಾಜಿಕ ಕ್ರಿಯೆಗಳೆಲ್ಲದರ ವಿವರಗಳನ್ನು ಕುರಿತು ಚಿತ್ರವನ್ನು ನೀಡುವುದು ಸಾಧ್ಯವಾಗಿದೆ. ಈ ಎಲ್ಲ ಹಾಡುಗಳನ್ನು ಶ್ರೀ ಭಟ್ಟರು '**ಶಿಷ್ಟಜಾನಪದ**' ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಶಬ್ದ ಬಹಳ ವ್ಯಾಪಕವಾದ ಅರ್ಥವುಳ್ಳದ್ದಾದರೂ ಈ ಸಂದರ್ಭದಲ್ಲಿ ಅರ್ಥವತ್ತಾಗಿದೆ. ಬ್ರಾಹ್ಮಣರ ಮನೆಗಳಲ್ಲಿ ಉಪಯೋಗವಾಗುವ ಭಾಷೆಯಲ್ಲಿ ಶಿಷ್ಟ ಪ್ರಯೋಗ ಹೆಚ್ಚು ಆದರೆ, ಜಾನಪದ ಸತ್ತ್ವಕ್ಕೆ ಅದು

ಹೊರತಾಗಿಲ್ಲ. ಆದುದರಿಂದ ಈ ಶಬ್ದವನ್ನು ಈ ಬಗೆಯ ಹಾಡುಗಳಿಗೆ ಹೊಂದಿಸಿರುವುದು ಸಾರ್ಥಕವಾಗಿದೆ.

'ಹವ್ಯಕ' ಶಬ್ದದ ಬಗ್ಗೆ ಬಹಳ ಹಿಂದಿನಿಂದಲೂ ಚರ್ಚೆಗಳು ನಡೆದಿವೆ. ಈ ಗ್ರಂಥದಲ್ಲಿ ಆ ಎಲ್ಲಾ ಚರ್ಚೆಗಳ ಸಾರವನ್ನೂ ಭಟ್ಟರು ನೀಡಿದ್ದಾರೆ. ಹವ್ಯ-ಹವ್ಯಕ, ಪಾವಿಗ-ಹವ್ಯಕ, ಅಹಿಕ-ಹೈಗ-ಹವ್ಯಕ ಇತ್ಯಾದಿಗಳ ವಿವರಣೆಗಳೂ ಇಲ್ಲಿವೆ.

ಕದಂಬ ಮಯೂರವರ್ಮನ ಚರಿತ್ರೆಯನ್ನು ವಿವರಿಸಿ, ಇಲ್ಲಿ ಬಂದು ನೆಲೆಸಿದ ಬ್ರಾಹ್ಮಣರಿಗೆ - ಸಭಾಹಿತ, ಮಧ್ಯಸ್ಥ, ಯಾಜಿ, ಅವಭೃತ, ಭಟ್ಟ, ತಾಂತ್ರಿಕ, ಪ್ರಭು (ಹೆಗಡೆ) - ಎಂಬ ಸಂಕೇತನಾಮಗಳು ಬಂದ ಕಥೆ ಅತೀವ ಸ್ವಾರಸ್ಯವಾಗಿದೆ. ಇವರೆಲ್ಲ ಸ್ಮಾರ್ತರು. ಶ್ರೀ ಶಂಕರಾಚಾರ್ಯ ಪರಂಪರೆಯ ಶ್ರೀರಾಮಚಂದ್ರಪುರ ಗುರುಪೀಠದ ಶಿಷ್ಯರು. ಇವರು ಹೆಚ್ಚಾಗಿ ಯಜುರ್ವೇದಿಗಳು. ಶ್ರೀ ವಿದ್ಯಾರಣ್ಯರಿಗೂ ಸಂಬಂಧ ಪಟ್ಟವರೆಂದು ಹೇಳುತ್ತಾರೆ. ಹವ್ಯಕರಲ್ಲಿ ಪ್ರಚಲಿತವಿರುವ 'ಮಂತ್ರಬಿನ್ನಹ'ದ ಕಥೆಯೂ ಕೂಡ ವಿಮರ್ಶೆಗೆ ಒಳಗಾಗಬೇಕಾದ ವಿಚಾರ. ಹವ್ಯಕರ ಕನ್ನಡ ಹಳಗನ್ನಡದ ಮತ್ತು ಪೂರ್ವದ ಹಳಗನ್ನಡದ ಸಮೀಪ ಸಂಬಂಧಿಯೂ ಹೌದು. ಈ ವಿಚಾರವಾಗಿ ಭಟ್ಟರ ವಿವರಣೆ ಸ್ಪಷ್ಟವಾದುದು. ಆಧಾರಪೂರ್ವಕವಾದುದೂ ಆಗಿದೆ.

'ಚತ್ತಾಣ' ಎಂಬ ದೇಸಿಗಬ್ಬದ ಬಗ್ಗೆ ಈ ಐವತ್ತು ವರ್ಷಗಳಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಅದೆಲ್ಲವನ್ನೂ ಅಭ್ಯಾಸ ಮಾಡಿ ಶ್ರೀ ಭಟ್ಟರು 'ಚತ್ತಾಣ'ವು 'ಚಿತ್ರಾ-ಆಯತನ' ಎಂಬ ಶಬ್ದದಿಂದ ಉತ್ಪತ್ತಿಯಾಗಿರಬೇಕೆಂಬ ವಾದವನ್ನು ಒಪ್ಪಿದ್ದಾರೆ. 'ಚಿತ್ರಾ' ಎಂಬುದು ತ್ರಿಪದಿಯ ಭೇದ ತಾನೆ ? ಹೆಂಗುಸರ ಶೋಭಾನೆ ಹಾಡುಗಳಿಗೆ ಈ ಬಗೆಯ ತ್ರಿಪದಿಗಳು ಸೀಮಿತವಾದವು. ಆದುದರಿಂದ 'ಚತ್ತಾಣ'ವು ಹೆಂಗುಸರ ಹಾಡುಗಳಿಗೆ ಅನ್ವಯವಾಗುವ ಶಬ್ದ. 'ಬೆದಂಡೆ' ಪುರುಷರ ಹಾಡುಗಳಿಗೆ ಅನ್ವಯವಾಗತಕ್ಕದ್ದು ಎಂಬ ಈ ಹೊಸ ವ್ಯಾಖ್ಯೆಯಲ್ಲಿ ಕೇವಲ ಹೊಸತನ ಒಂದೇ ಅಲ್ಲ. ಇನ್ನೂ ಆಳವಾಗಿ ವಿಮರ್ಶಿಸಿ ತೀರ್ಪೀಯ ಬೇಕಾದ ಒಂದು ನೆಲೆಯನ್ನು ಭಟ್ಟರು ತಲುಪಿದ್ದಾರೆ ಎಂಬ ಬಗ್ಗೆ ಅನುಮಾನವಿಲ್ಲ.

'ಧವಳಾರ' ಎಂಬುದು ಆರತಿಯನ್ನು ಬೆಳಗುವಾಗ ಹೇಳುವ ಹಾಡು ಎಂಬ ತೀರ್ಮಾನಕ್ಕೆ ಅವರು ಬಂದಿರುವುದರಲ್ಲಿಯೂ ಇದೇ ಸನ್ನಿವೇಶವಿದೆ. ಈ ಹಾಡುಗಳಿಗೆ ಸಂಬಂಧಿಸಿದಂತೆ ರಚಿತವಾಗಿರುವ ಛಂದಸ್ಸಿನ ವಿವರಣೆ ಈ ಗ್ರಂಥದ ಬಹುಮುಖ್ಯ ಭಾಗ. ಇದು ಕನ್ನಡ ಛಂದಸ್ಸಿನ ಅನೇಕ ವಿಷಯಗಳನ್ನು ಪುನರ್ವಿಮರ್ಶಿಸಿರುವುದಲ್ಲದೆ, ಹವ್ಯಕರ

ಶೋಭಾನೆಗಳಲ್ಲಿ ಬರುವ ವಿವಿಧ ಛಂದೋರೂಪಗಳ ವಿವರಣೆಯನ್ನು ನೀಡುತ್ತದೆ. ಈ ಅಧ್ಯಾಯವನ್ನು ರಚಿಸುವುದು ಆಳವಾದ ಪಾಂಡಿತ್ಯವುಳ್ಳವರಿಗೆ ಮಾತ್ರ ಸಾಧ್ಯ.

ಶ್ರೀ ಕೇಶವ ಭಟ್ಟರಿಗೆ ಯಕ್ಷಗಾನದಲ್ಲಿ ಪಾತ್ರವಹಿಸುವ; ಅರ್ಥೈಸುವ, ಭಾಗವತಿಕೆ ಮಾಡುವ (ಹಾಡುವ), ಮದ್ದಳೆ ಚಂಡೆ ಬಾಜಿಸುವ ಎಲ್ಲ ಕ್ರಿಯೆಗಳಲ್ಲಿಯೂ ಆಳವಾದ ಅಭ್ಯಾಸವಿರುವುದರಿಂದ ಅವರು ಹೇಳಿರುವ ಮಾತುಗಳು ಹಾರಿಕೆಯ ಮಾತುಗಳಾಗದೆ, ಪರಿಶೀಲಿಸಬೇಕಾದ ಗಟ್ಟಿ ತೀರ್ಮಾನಗಳನ್ನು ಮುಂದಿಡುತ್ತವೆ.

ಹವ್ಯಕರ ಮದುವೆಗಳ ವಿಚಾರವನ್ನೊಳಗೊಂಡ ನಾಲ್ಕನೆ ಅಧ್ಯಾಯವು ಆಧುನಿಕ ಸಮಾಜ ಶಾಸ್ತ್ರದ ಹಿನ್ನಲೆಯಲ್ಲಿ ಆಗಿರುವ ಶಾಸ್ತ್ರೀಯವಾದ ಅಧ್ಯಯನ. ಇಲ್ಲಿನ ವಿವರಣೆ ಸ್ವಸಂಪೂರ್ಣವಾಗಿದ್ದು ಈ ಗ್ರಂಥದಲ್ಲಿರುವ ಎಲ್ಲ ಹಾಡುಗಳನ್ನು ಅರ್ಥ ಮಾಡಿ ಕೊಳ್ಳುವುದಕ್ಕೆ ಬೇಕಾದ ಎಲ್ಲ ಹಿನ್ನಲೆಯನ್ನೂ ನೀಡುತ್ತದೆ.

ಪುಣ್ಯಾತ್ಮಕ ಕಥನಗಳನ್ನುಳ್ಳ ಐದನೆಯ ಅಧ್ಯಾಯದ ಬಗ್ಗೆ ಒಂದೆರಡು ವಿಶೇಷವಾದ ಮಾತನ್ನು ಹೇಳಬೇಕು. ಇಲ್ಲಿ ದಮಯಂತೀ ಕಲ್ಯಾಣದಲ್ಲಿ ಐದು ಸಾಲಿನ 68 ಪದ್ಯಗಳಿವೆ. ಧ್ರುವಚರಿತ್ರೆಯಲ್ಲಿ 9 ಸಾಲಿನ 38 ಪದ್ಯಗಳಿವೆ. ರಾಮಕೃಷ್ಣ ಚರಿತೆಯಲ್ಲಿ 4 ಸಾಲುಗಳ 16 ಪದ್ಯಗಳಿವೆ. ಪಾರಿಜಾತದ ಹಾಡಿನಲ್ಲಿ 4 ಸಾಲುಗಳ 94 ಪದ್ಯಗಳಿವೆ. ರಾವಣ ಮಂಡೋದರೀ ಸಂವಾದದಲ್ಲಿ 4 ಸಾಲುಗಳ 20 ಪದ್ಯಗಳಿವೆ. ಶ್ರೀ ಕೃಷ್ಣ ಬಾಲಲೀಲೆ ಎಂಬ ಭಾಗದಲ್ಲಿ 4 ಸಾಲಿನ 83 ಪದ್ಯಗಳಿವೆ. ಇವುಗಳನ್ನು 'ಪದ್ಯ' ಅನ್ನುವುದಕ್ಕಿಂತ 'ಹಾಡಿನ ನುಡಿ' ಎಂದು ಹೇಳಬಹುದು. ಲೇಖಕರು ಇದನ್ನು 'ಹಾಡಿನ ಸೊಲ್ಲು' ಎಂದಿದ್ದಾರೆ. ಇವುಗಳಲ್ಲಿ ಒಂದೊಂದೂ ಉತ್ತಮ ಕಥನಕವನದಂತೆ ಇವೆ. ಧ್ರುವಚರಿತ್ರೆಯಂತೂ ಉತ್ತಮ ಕಾವ್ಯವಾಗಿದೆ.

ರಾವಣ ಮಂಡೋದರೀ ಸಂವಾದದಲ್ಲಿ ರಾವಣ ತನ್ನ ಹೆಂಡತಿಗೆ — 'ಎನ್ನ ಮನವ ಒಲಿಸುವಂಥ ಕನ್ನಡಿಯ ಮುಖದವಳ, ನಿನ್ನ ಮೇಲೆ ತರುವೆ ನೋಡು' ಎನ್ನುತ್ತಾನೆ. ಮಂಡೋದರಿ ಬೇಡವೆಂದು ಅನೇಕ ಸಲ ಹೇಳುತ್ತಾಳೆ. ಆದರೂ, ರಾವಣನು ಹಟ ಹಿಡಿದಾಗ, ಅವಳು — 'ಇನಿಯನೆ ಇದೆಲ್ಲ ಮಾತ ಮೀರಿದ ಮೇಲೆನ್ನ ಪ್ರಾಣ ಉಳಿಯುವುದುಂಟೆ ಎನ್ನುತ್ತ ಚರಣಕೆರಗುತ' - ಹೇಳುತ್ತಾಳೆ. ಆಗ ರಾವಣನು

'ಚರಣಕೆ ಎರಗಿದ ಸತಿಯ । ಕರವ ಪಿಡಿದಿರಿಸಿಕೊಂಡು
ಪುರಹರನ ಕರುಣ ನಮಗೆ । ಇರಲಿ ಎಂದನು - ಇರಲಿ ಎಂದನು'

ಇಲ್ಲಿಗೆ ಕಥೆ ಪೂರೈಸುತ್ತದೆ. ಹೆಣ್ಣಿನ ಹಾಡು ಇದು. ಇಲ್ಲಿ ಹೆಂಗಸು ಗಂಡನ ಮನಸ್ಸನ್ನು ತನ್ನ ಕಡೆಗೆ ಮಾಡಿಕೊಂಡು ಮುಂದೆ ರಾಮಾಯಣದ ಕಥೆಯೇ ಇಲ್ಲದಂತೆ

ಮಾಡಿಬಿಡುತ್ತಾಳೆ. ಹೆಣ್ಣಿಗೆ ಇದೇ ಸರಿಯಾದ ಕಥೆಯ ಮುಕ್ತಾಯ. ಇಂಥ ಹಾಡುಗಳಲ್ಲಿ ನಮ್ಮ ದೇಶದ ಶಿಷ್ಟ ಮನೆತನದ ಹೆಣ್ಣುಮಕ್ಕಳ ಸಂಸ್ಕೃತಿಯನ್ನು ತಿಳಿಯಬಹುದು. ಇದೊಂದು ಚಿಕ್ಕ ಚೊಕ್ಕ ಹಾಡು.

ಈ ಗ್ರಂಥದ ಕೊನೆಯಲ್ಲಿ ಬರುವ ಕೆಲವು ಶಬ್ದಾರ್ಥಗಳು ಉಪಯುಕ್ತವಾಗುವಂಥ ಒಂದು ಅನುಬಂಧ. ಜೊತೆಗೆ, ಅಚ್ಚಾಗಿರುವ ಶೋಭಾನೆಗಳ ಪುಸ್ತಕಗಳ ಪಟ್ಟಿಯಿದೆ. ಅದರಲ್ಲಿ 98 ಗ್ರಂಥಗಳ ವಿವರಗಳಿವೆ. ಹಾಡುಗಳನ್ನು ಹಾಡಿದ ಸ್ತ್ರೀಯರು 69 ಜನ. ಅವರ ವಯಸ್ಸು ವಿಳಾಸಾದಿಗಳನ್ನು ನೀಡಿದ್ದಾರೆ. ಆಕರ ಸಾಹಿತ್ಯದಲ್ಲಿ 60 ಗ್ರಂಥಗಳ ನಿರೂಪಣೆಯಿದೆ.

ಯು.ಜಿ.ಸಿ. ಧನ ಸಹಾಯದಿಂದ ಸುಮಾರು ನಾಲ್ಕೂವರೆ ವರ್ಷಗಳ ತೀವ್ರ ಗಮನದಿಂದ ಸಿದ್ಧವಾದ ಈ ಗ್ರಂಥವು ಪ್ರಕಟವಾಗಿರುವುದು ಸಂತೋಷದ ವಿಷಯ. 1986ರಲ್ಲಿ ಡಾ|| ಹಾ. ಮಾ. ನಾಯಕರು ಬರೆದ ಒಂದು ಅಂಕಣದಲ್ಲಿ ('ಸಂಪ್ರತಿ' ಪ್ರಜಾವಾಣಿ, 31.8.1986) ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷರಾದ ಶ್ರೀ ಯಶಪಾಲರು ಹೇಳಿದ ಮಾತನ್ನು ಉದಾಹರಿಸಿದ್ದಾರೆ : 'ನೋಡಿ, ಕಳೆದ ಕೆಲವು ವರ್ಷಗಳಲ್ಲಿ ನೂರಾರು ಪುಸ್ತಕ ಬರೆಸಲು ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೇವೆ. ಬರೆದು ಮುಗಿಸಿರುವ ಪುಸ್ತಕಗಳು 32. ಅಚ್ಚಾದುವು ಎರಡೇ ಎರಡು. (ಹಾಗಿದ್ದರೆ ಈ 'ಹವ್ಯಕರ ಶೋಭಾನೆಗಳು' ಮೂರನೆಯದು ಆಗಿರಬಹುದಲ್ಲವೇ ?) ಈ ಮಾತನ್ನು ಮುಂದುವರಿಸಿ 'ಕನ್ನಡಿಗರಲ್ಲಿ ಪುಸ್ತಕ ಸಂಸ್ಕೃತಿ, ಪುಸ್ತಕ ಮನಸ್ಕತೆ - ಇವೆರಡೂ ದ್ರುತಗತಿಯಲ್ಲಿ ಹೆಚ್ಚಬೇಕಾದುದು ಅವಶ್ಯ. ಅದಕ್ಕಾಗಿ ಉತ್ತಮ ಪುಸ್ತಕಗಳು ಉತ್ತಮ ರೀತಿಯಲ್ಲಿ ಮುದ್ರಣವಾಗಿ ಹೊರಬರಬೇಕು' ಎಂದು ಹೇಳಿದ್ದಾರೆ. ಶ್ರೀ ಕೇಶವ ಭಟ್ಟರ ಈ ಮುದ್ರಿತ ಗ್ರಂಥ ಈ ಇಬ್ಬರು ಮಹನೀಯರಿಗೂ ಸಂತೋಷವನ್ನೂ ತೃಪ್ತಿಯನ್ನೂ ತರುತ್ತದೆಂದು ನಾನು ಭಾವಿಸುತ್ತೇನೆ.

ಗ್ರಂಥ ಮುದ್ರಣ, ಗ್ರಂಥಾಂತರಂಗ - ಈ ಎರಡರಲ್ಲೂ ತುಂಬ ಪರಿಷ್ಕಾರವಾಗಿರುವ ಈ ಗ್ರಂಥದ ಬಗ್ಗೆ ನಾನು ಶ್ರೀ ಟಿ. ಕೇಶವ ಭಟ್ಟರನ್ನು ಅಭಿನಂದಿಸುತ್ತೇನೆ.

3. ಮುದ್ದಣ ಪದಪ್ರಯೋಗ ಕೋಶ *

ಸಾಂಪ್ರದಾಯಿಕ ದೃಷ್ಟಿಯ ಪಂಡಿತರು, ಆಧುನಿಕ ದೃಷ್ಟಿಯ ವಿದ್ವಾಂಸರು, ಈ ಎರಡೂ ವರ್ಗಗಳ ಗಮನವನ್ನು ಸೆಳೆದ ಹಳಗನ್ನಡ ಕವಿಗಳು ವಿರಳ. ಇಂತಹ ಕೆಲವೇ ಕವಿಗಳಲ್ಲಿ ಮುದ್ದಣನೊಬ್ಬ. ಹೆಚ್ಚು ಜನ ಓದುಗರಿಗೆ ಪರಿಚಿತವಾದುದು ಇವನ

---

* *ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರಕಾಶಕರು : ಕರ್ನಾಟಕ ಸಂಘ, ಪುತ್ತೂರು-೫೭೪ ೨೦೧, ದಕ್ಷಿಣ ಕನ್ನಡ, ೧೯೯೬ ಪುಟಗಳು :* LX+೧೮೨ +XXV. *ಬೆಲೆ ರೂ. ೧೦೫*

"ರಾಮಾಶ್ವಮೇಧಂ" ಕಾವ್ಯ ಮಾತ್ರ. ಇತರ ಕಾವ್ಯಗಳನ್ನು ಅದರಲ್ಲೂ ಯಕ್ಷಗಾನಗಳನ್ನು ಓದಿರುವವರು ತೀರ ಕಡಮೆ. ಇವನ ಸಮಗ್ರ ಕೃತಿಗಳನ್ನು - ಒಂಬತ್ತು ವರ್ಷಗಳ ಹಿಂದೆ - ಹೊಸಗನ್ನಡ ಗದ್ಯಾನುವಾದ ಸಹಿತವಾಗಿ, ಎರಡು ಸಂಪುಟಗಳಲ್ಲಿ ಸಂಪಾದಿಸಿಕೊಟ್ಟ ಪ್ರೊ. ಗಂಜಾಂ ವೆಂಕಟಸುಬ್ಬಯ್ಯನವರಿಂದಲೂ, ಪ್ರಕಟಿಸಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದಲೂ ಕನ್ನಡಿಗರಿಗೆ ತುಂಬ ಉಪಕಾರವಾಗಿದೆ. ಈ ಎರಡು ಸಂಪುಟಗಳ ಕೊನೆಯಲ್ಲೂ ಕೊಟ್ಟಿರುವ ಶಬ್ದಕೋಶಗಳು ಮತ್ತು ಅನುವಾದಗಳು ಓದುಗರಿಗೆ ಮೂಲಗ್ರಂಥವನ್ನು ಅರ್ಥ ಮಾಡಿಕೊಳ್ಳಲು ತಕ್ಕಷ್ಟು ಸಹಾಯಕವಾಗಿದ್ದರೂ, ಅನೇಕ ಶಬ್ದಗಳ ಅರ್ಥಕ್ಕಾಗಿ ಬೇರೆ ನಿಘಂಟನ್ನು ಪದೇ ಪದೇ ನೋಡಬೇಕಾಗುತ್ತದೆ ಮತ್ತು ಶಬ್ದಕ್ಕೆ ನಿಘಂಟಿನಲ್ಲಿ ಅನೇಕಾರ್ಥಗಳಿದ್ದಾಗ ಪ್ರಕೃತ ಸಂದರ್ಭಕ್ಕೆ ಯಾವ ಅರ್ಥ ಸರಿಯೆಂದು ನಿರ್ಧರಿಸಬೇಕಾಗುತ್ತದೆ. ಸಾಮಾನ್ಯ ಓದುಗನಿಗೆ, ಇದಕ್ಕೆ ಹೆಚ್ಚು ಕಾಲ ಬೇಕಾಗುವುದರಿಂದ, ಕಾವ್ಯ ರಸಸ್ವಾದನೆಗೆ ತೊಡಕಾಗುತ್ತದೆ. ಈಗ ಹೊರ ತಂದಿರುವ "ಮುದ್ದಣ ಪದ ಪ್ರಯೋಗ ಕೋಶ"ವು ಈ ತೊಡಕನ್ನು ತಪ್ಪಿಸುತ್ತದೆ.

ಗ್ರಂಥದ ಆರಂಭದಲ್ಲಿರುವ "ಮುದ್ದಣನ ಶಬ್ದಕಲ್ಪ" ಎಂಬ ಭಾಗವೂ ಮತ್ತು ಎರಡು ಸಂಪುಟಗಳ ಪ್ರಸ್ತಾವನೆಗಳೂ, ಮುದ್ದಣನ ಶಬ್ದ ನಿರ್ಮಾಣದ ಹಿನ್ನೆಲೆಯನ್ನು ತಿಳಿಸುವುದರಿಂದ, ಕೋಶದಲ್ಲಿ ಕೊಟ್ಟಿರುವ ಅರ್ಥಗಳ ಔಚಿತ್ಯವನ್ನರಿಯುವುದರಲ್ಲಿ ಸಹಕಾರಿಯಾಗಿವೆ.

ಕೋಶಕ್ಕಾಗಿ ಶಬ್ದಗಳನ್ನು ಪಟ್ಟಿ ಮಾಡುವಾಗ, ಎಷ್ಟೇ ಎಚ್ಚರಿಕೆ ವಹಿಸಿದ್ದರೂ ಅನೇಕ ಶಬ್ದಗಳು ಬಿಟ್ಟು ಹೋಗುತ್ತವೆ. ಈ ಗ್ರಂಥದ ಶಬ್ದಕಲ್ಪ ಮತ್ತು ಎರಡು ಪ್ರಸ್ತಾವನೆಗಳಲ್ಲಿರುವ, ನೊಸಲರೆದಿಂಗಳ (ಪುಟ xi), ಪರಿವಗೆಯ (xxxviii), ಪರೆಯ (xxxiv), ರಂಟೆ (xxxviii), ಶತ್ರುಗಣ (xii), ಸಿರಿಯ ಕರುಮಾಡ (xi), ಸೋಣೆ (xxxviii) ಈ ಶಬ್ದಗಳು ಕೋಶದಲ್ಲಿಲ್ಲ.

ಕೋಶದಲ್ಲಿ "ಏಱೆರಲ್ಗುಱಗೆ" ಎಂಬ ಶಬ್ದಕ್ಕೆ "ಹದಿನಾಲ್ಕು ನಿಮಿಷ" ಎಂಬ ಅರ್ಥವನ್ನು ಕೊಟ್ಟಿದೆ. ನಿಮಿಷದ ಬದಲು "ಗಳಿಗೆ" ಎಂದಿರಬೇಕು.

"ಉಲೂಪಿ" ಶಬ್ದದ ಅರ್ಥವಿಚಾರ.

ಅರ್ಜುನನ ಪತ್ನಿ "ಉಲೂಪೀ" ಎಂಬವಳು ನಾಗಕನ್ಯೆ ಎಂಬ ಕಾರಣದಿಂದ, "ಉಲೂಪಿ" ಎಂಬ ಪದಕ್ಕೆ "ನಾಗಸರ್ಪ" ಎಂಬ ಅರ್ಥವನ್ನು ಕೋಶದಲ್ಲಿ ಕೊಟ್ಟಿರುವಂತೆ ತೋರುತ್ತದೆ.

"ಉಲೂಪಿನ್" ಎಂಬ ಪದ ಅಮರಕೋಶದಲ್ಲಿದೆ. ಇಂಗ್ಲೀಷ್ ಪ್ರತಿಪದಗಳನ್ನು ಕೊಟ್ಟಿರುವ, ಈ ಕೋಶದ, ಆವೃತ್ತಿಗಳಲ್ಲಿ Porpoise ಎಂಬ ಇಂಗ್ಲೀಷ್ ಪದವನ್ನು ಪ್ರತಿಪದವಾಗಿ ಕೊಟ್ಟಿರುತ್ತಾರೆ. ಆಪ್ಟೆಯವರ ಸಂಸ್ಕೃತ-ಇಂಗ್ಲೀಷ್ ನಿಘಂಟಿನಲ್ಲೂ ಇದೇ ಪ್ರತಿಪದವಿದೆ.

ಕಿಟ್ಟೆಲ್ ನಿಘಂಟಿನಲ್ಲಿ "ಉಲುಪಿ" ಎಂಬ ಶಬ್ದಕ್ಕೆ Porpoise ಎಂಬ ಅರ್ಥವಿದೆ.

Funk & Wagnalls ಇಂಗ್ಲೀಷ್ ಡಿಕ್ಷನರಿಯಲ್ಲಿ Dolphin, Porpoise, Whale ಇವು cetacean ಜಾತಿಯ ಸಸ್ತನಿ ಪ್ರಾಣಿಗಳೆಂದೂ, Ketos ಎಂಬ ಗ್ರೀಕ್ ಶಬ್ದಕ್ಕೆ whale ಎಂದು ಅರ್ಥವೆಂದೂ ಹೇಳಿದೆ. Porpoise ಶಬ್ದಕ್ಕೆ A dolphin-like animal with a blunt rounded snout ಎಂಬ ವಿವರಣೆ ನೀಡಿ, literally "hog-fish" ಎಂದು ಸಹ ಹೇಳಿದೆ.

ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್-ಕನ್ನಡ ನಿಘಂಟಿನಲ್ಲಿ ಶಬ್ದಕ್ಕೆ "ತಿಮಿ ವರ್ಗದ ಒಂದು ಸಸ್ತನಿ ಪ್ರಾಣಿ, ಕಡಲಹಂದಿ" ಎಂಬ ಅರ್ಥಗಳಿವೆ,

ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯರು ತಮ್ಮ "ಶಬ್ದಾರ್ಥ ಕೌಸ್ತುಭ"ವೆಂಬ ಸಂಸ್ಕೃತ-ಕನ್ನಡ ಕೋಶದಲ್ಲಿ 'ಉಲೂಪಿನ್' ಶಬ್ದಕ್ಕೆ "ಸಮುದ್ರದ ಒಂದು ಜಾತಿ ಮೀನು, ತಿಮಿಂಗಿಲ ಜಾತಿಯ ಪ್ರಾಣಿ" ಎಂಬ ಅರ್ಥಗಳನ್ನು ಹೇಳಿದ್ದಾರೆ.

ಆದುದರಿಂದ "ನಾಗಸರ್ಪ" ಎಂಬ ಅರ್ಥ ಸರಿಯಲ್ಲವೆಂದು ತೋರುತ್ತದೆ.

"ಅಚ್ಚರ", "ಅಚ್ಚರಸಿ" ಶಬ್ದಗಳ ಮುಂದೆ "ರ" ಎಂಬ ಚಿಹ್ನೆಗೆ ಬದಲು "ರಾ" ಇರಬೇಕು. ಇವು "ರಾಮಾಶ್ವಮೇಧ"ದಲ್ಲಿ ಬಂದಿರುವ ಶಬ್ದಗಳು. ಪುಟ ಸಂಖ್ಯೆ ಸರಿಯಾಗಿದೆ. 3518ನೇ ಶಬ್ದ "ರಜತ ಪೀಠೇಶ" ಎಂದಿರಬೇಕು.

ಪುಸ್ತಕಕ್ಕೆ ಒಳ್ಳೆಯ ಕಾಗದ ಉಪಯೋಗಿಸಿದೆ; ಮುದ್ರಣ ಚೆನ್ನಾಗಿದೆ. ಆದರೆ ಕೆಲವು ಅಚ್ಚಿನ ತಪ್ಪುಗಳು ಉಳಿದುಕೊಂಡಿವೆ. ಉದಾಹರಣೆಗೆ, ಪುರುಷಾಕ್ಷರ (ಪುಟ ix, 28ನೆಯ ಸಾಲು), ಪ್ರಭಾವಮಂ (xvi, ಕೊನೆಯ ಸಾಲು), ಭಾರತ (xxi, 26), ಪಡಿವೇಲ್ (xxxv, 7), ಇವು ಕ್ರಮವಾಗಿ, ಪರುಷಾಕ್ಷರ, ಭಾವಮಂ, ಭರತ, ಪಡಿಮೇಲ್ ಎಂದಿರಬೇಕು. ಕೋಶದಲ್ಲಿ 716ನೇ ಶಬ್ದದಲ್ಲಿ "ಬಾಯ್ಮ್‌ನೆ"ಗೆ ಬದಲಾಗಿ "ಬಾಯ್ಮನೆ" ಇರಬೇಕು.

"ಶಬ್ದಕಲ್ಪ"ದಲ್ಲಿ ಪ್ರೊ|| ವೆಂಕಟಸುಬ್ಬಯ್ಯನವರು ಮುದ್ರಣದ ಶಬ್ದ ಸೃಷ್ಟಿಯ ವೈವಿಧ್ಯವನ್ನು ಓದುಗರ ಗಮನಕ್ಕೆ ತಂದು (ಪುಟ ixರಿಂದ xii) ಮುಂದಿನ ಸಂಶೋಧನೆಗೆ

ದಾರಿ ತೋರಿದ್ದಾರೆ. "ಮುದ್ದಣನು ಬೇಕೆಂದೇ ತನ್ನ ಕಾಲಕ್ಕಿಂತ ಹಿಂದಿನ ಭಾಷಾ ಸ್ವರೂಪದ ರಚನೆಯಲ್ಲಿ ಆಸಕ್ತಿಯನ್ನು ಹೊಂದಿದ್ದನೆ" ಎಂದು ಪ್ರಶ್ನೆ ಮಾಡಿದ್ದಾರೆ. (ಪುಟ xiii) ಇದಕ್ಕೆ ನನ್ನ ಉತ್ತರ "ಹೌದು" ಎಂದು.

ಮುದ್ದಣನಿಗೆ ತನ್ನ ಕಾವ್ಯಗಳು ಅಚ್ಚಾಗಿ ವಿದ್ವಾಂಸರ ಮುಂದೆ ಬರಬೇಕೆಂಬ ಇಚ್ಛೆ ತೀವ್ರವಾಗಿತ್ತು. ಅವನ ಕಾಲದ ಭಾಷೆಯಲ್ಲಿಯೇ ಕಾವ್ಯ ರಚನೆ ಮಾಡಿದ್ದರೆ ಈ ಉದ್ದೇಶ, ಬಹುಶಃ ಸಫಲವಾಗುತ್ತಿರಲಿಲ್ಲ. ಆ ಕಾಲದಲ್ಲಿ "ಕರ್ಣಾಟಕ ಕಾವ್ಯ ಮಂಜರಿ"ಯಲ್ಲಿ ಪ್ರಾಚೀನ ಹಳಗನ್ನಡ ಗ್ರಂಥಗಳು ಪ್ರಕಟವಾಗುತ್ತಿದ್ದವು. ತನ್ನ ಗ್ರಂಥಗಳು ಪ್ರಾಚೀನ ಗ್ರಂಥಗಳೆಂದು ತೋರಿ ಬಂದರೆ, ಅವು ಆ ಗ್ರಂಥಮಾಲೆಯಲ್ಲಿ ಪ್ರಕಟವಾಗುವ ಸಾಧ್ಯತೆಯಿತ್ತು.

(i) ಕೋಶಗಳಲ್ಲಿ ಮಾತ್ರ ಕಂಡುಬರುವ ಅಪೂರ್ವ ಪದಗಳ ಪ್ರಯೋಗ;

(ii) ಹೊಸ ತದ್ಭವ ಪದಗಳ ಸೃಷ್ಟಿ;

(iii) ಸಂಸ್ಕೃತ ಪದಗಳಿಗೆ ಪರ್ಯಾಯ ಪದಗಳ ಕಲ್ಪನೆ ;

(iv) ತನ್ನ ಕಾಲಕ್ಕಿಂತ ಹಿಂದಿನ ಭಾಷಾಸ್ವರೂಪದಲ್ಲಿ ಕಾವ್ಯರಚನೆ;

(v) "ಶ್ರೀರಾಮ ಪಟ್ಟಾಭಿಷೇಕ"ದ ನಾಂದೀಸಂಧಿಯಲ್ಲಿ ಪ್ರತಿಪದ್ಯದಲ್ಲೂ ಶ್ಲೇಷೆಯಿಂದ ಇಬ್ಬಿಬ್ಬರನ್ನು ಸ್ತುತಿಸಿರುವುದು, ಅರ್ಧಸಮಯಮಕ ಮೊದಲಾದ ಚಮತ್ಕಾರಗಳು.

(vi) ಮೂರು ಕಾವ್ಯಗಳನ್ನೂ ಬೇರೆ ಬೇರೆ ಕವಿಗಳ ಹೆಸರಿನಲ್ಲಿ ರಚಿಸಿರುವುದು ಇವು ಅವನು ತನ್ನ ಉದ್ದೇಶವು ಫಲಿಸಲು ಕೈಗೊಂಡ ಕ್ರಮಗಳು.

ಪರಭಾಷೆಯಿಂದ ಬಂದು, ಸ್ವರೂಪದಲ್ಲಿ ಬದಲಾವಣೆ ಹೊಂದಿದ ಶಬ್ದಗಳನ್ನು ವ್ಯಾಕರಣಕಾರರು ಅಪಭ್ರಂಶಗಳೆಂದು ಕರೆದಿದ್ದಾರಷ್ಟೆ. ಇಂತಹ ಶಬ್ದಗಳನ್ನು ಸ್ಥೂಲವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಸಾಮಾನ್ಯ ಜನರು ಶಬ್ದಗಳನ್ನು ಉಚ್ಚರಿಸುವಾಗ ಉಂಟಾದ ಅಕ್ಷರಗಳ ಬದಲಾವಣೆಯಿಂದ ವಿರೂಪ ಹೊಂದಿದ ಶಬ್ದಗಳದ್ದು ಒಂದು ಗುಂಪು. ಹಂಸ > ಅಂಚೆ ಆಶ್ಚರ್ಯ > ಅಚ್ಚರಿಯ ಅಚ್ಚರಿ, ಕರ್ಪೂರ > ಕರ್ಪುರ, ಕಪ್ಪುರ ಇತ್ಯಾದಿ. ಪ್ರಾಕೃತದಿಂದ ಕನ್ನಡಕ್ಕೆ ಬಂದ ಶಬ್ದಗಳೂ ಇಂತಹವೇ. ಹೀಗೆ ಬದಲಾದ ಪದಗಳಲ್ಲಿ ಉಂಟಾಗಿರುವ ವ್ಯತ್ಯಾಸಗಳನ್ನು ಗಮನಿಸಿ, ಅದೇ ರೀತಿಯಲ್ಲಿ ಕವಿಗಳು ಮಾಡಿಕೊಂಡ ತದ್ಭವಗಳದ್ದು ಎರಡನೆಯ ಗುಂಪು. ಬೇರೆ ಬೇರೆ

ಕವಿಗಳು ತಮ್ಮ ಲಹರಿಯಂತೆ ಬೇರೆ ಬೇರೆ ರೀತಿಯಲ್ಲಿ ತದ್ಭವಗಳನ್ನು ಮಾಡಿಕೊಂಡದ್ದರಿಂದ ಅವುಗಳಲ್ಲಿ ಏಕಸೂತ್ರತೆಯಿಲ್ಲ. ಮುದ್ದಣನೂ ಸಹ ಈ ಮಾರ್ಗವನ್ನು ಅನುಸರಿಸಿದ್ದಾನೆ, ಮುಂದುವರೆದಿದ್ದಾನೆ. ವಾರತೆ, ಶತ್ರುಗಣ, ಬಿಬೀಚಣ ಮೊದಲಾದವು ಹೀಗೆ ಮಾಡಿಕೊಂಡ ತದ್ಭವಗಳು.

ನೀರ್ವೂರ್, ಗಾಳಿದೇರ್, ನೇಸರ್ಬಟ್, ಇರುಳ್ಗಣ್ಣ ಮೊದಲಾದುವು ಸಂಸ್ಕೃತದ ಸಮಸ್ತ ಪದಗಳನ್ನು ಕನ್ನಡಿಸಿ ಮಾಡಿಕೊಂಡ ಶಬ್ದಗಳು. ಇಂತಹ ಶಬ್ದಗಳಿಂದ ಭಾಷೆ ಬೆಳೆಯುತ್ತದೆ.

''ಶತ್ರುಗಣ'' ಶಬ್ದವು ''ಶತ್ರುಘ್ನ''ದ ತದ್ಭವವಾಗಿ ರಚಿತವಾಗಿದೆಯಷ್ಟೆ (ಪುಟ xii) ಇದು ಕೋಶದಲ್ಲಿ ಸೇರಿಲ್ಲವಾದುದರಿಂದ, ಎಲ್ಲಿ ಪ್ರಯುಕ್ತವಾಗಿದೆಯೋ ತಿಳಿಯದು. ಈ ಪದಕ್ಕೆ ಶತ್ರುಗಳ ಗುಂಪು ಎಂದು ಅರ್ಥವಾಗುವುದರಿಂದ, ಶತ್ರುಘ್ನಕ್ಕೆ ಪರ್ಯಾಯ ಪದವಾಗಿ ಇದು ಉಪಯುಕ್ತವಾದಾಗ ಓದುಗನಿಗೆ ಭ್ರಾಂತಿಯನ್ನುಂಟು ಮಾಡುತ್ತದೆ. ಯುವರಾಜ ಎಂಬ ಅರ್ಥದಲ್ಲಿ ''ಉಪನಾಥ'', ''ಉಪಪತಿ'' ಎಂಬ ಪದಗಳನ್ನು ಮುದ್ದಣ ಪ್ರಯೋಗಿಸಿದ್ದಾನೆ. ಆದರೆ ''ಉಪಪತಿ'' ಶಬ್ದಕ್ಕೆ ಪ್ರಸಿದ್ಧಾರ್ಥ ''ಜಾರ'' ಎಂದಿರುವುದರಿಂದ ಆ ಪದದ ಪ್ರಯೋಗ ಸರಿಯಲ್ಲ.

ಇಂತಹ ಕೆಲವು ಕೊರತೆಗಳಿದ್ದರೂ, ಮುದ್ದಣನು ಪ್ರತಿಭಾವಂತ ಕವಿಯೆನ್ನುವ ವಿಷಯದಲ್ಲಿ ಎರಡು ಮಾತಿಲ್ಲ.

ಗ್ರಂಥದಲ್ಲಿ ಸೇರಿಸಿರುವ ಚಿತ್ರಗಳು, ಅದಕ್ಕೆ ಶೋಭೆಯನ್ನು ತಂದಿವೆಯಷ್ಟೇ ಅಲ್ಲದೆ, ಓದುಗರಿಗೆ ಕವಿಯ ಮತ್ತು ಅವನ ಗುರುವಿನ ಮುಖಪರಿಚಯವನ್ನು ಮಾಡಿಕೊಡುತ್ತವೆ. ಮುಖಪುಟಗಳ ಪ್ರತಿಕೃತಿಗಳು ಉಪಯುಕ್ತ ಮಾಹಿತಿಯನ್ನು ಕೊಡುತ್ತವೆ. ಅದ್ಭುತ ರಾಮಾಯಣದ ಮೂಲಪ್ರತಿಯ ಮುಖಪುಟದಿಂದ, ಮುದ್ದಣನು ಎನ್. ಲಕ್ಷ್ಮೀನಾರಾಯಣಯ್ಯ ಎಂದು ಸಹಿ ಮಾಡುತ್ತಿದ್ದುದು ತಿಳಿದು ಬರುತ್ತದೆ. ಅದು ಹೇಗೆ ಲಕ್ಷ್ಮೀನಾರಣಪ್ಪ ಆಯಿತೋ ತಿಳಿಯದು.

ಕೋಶಗಳು ಎಷ್ಟು ಉಪಯುಕ್ತ ಮತ್ತು ಆವಶ್ಯಕವಾದರೂ, ಸಾಮಾನ್ಯವಾಗಿ, ''ನೀರಸ !'' ಈ ಕೋಶಕ್ಕೆ ಅನುಬಂಧವಾಗಿ ಕೊಟ್ಟಿರುವ ''ಮುದ್ದಣ ಮನೋರಮೆ ಯರ ಸಂವಾದದಲ್ಲಿ ಕಾಣುವ ಕಾವ್ಯವಿಮರ್ಶನ ಸಿದ್ಧಾಂತ''ವೆಂಬ ಲೇಖನ ''ಸರಸ''ವಾಗಿರುವುದಷ್ಟೇ ಅಲ್ಲದೆ, ಉಪಯುಕ್ತವೂ ಆಗಿದೆ. ಮಾಸಪತ್ರಿಕೆಯಲ್ಲಿ ಬಂದಿದ್ದ ಲೇಖನವನ್ನು ಇಲ್ಲಿ ಸೇರಿಸಿರುವುದರಿಂದ ಮುಂದೆ ಸುಲಭವಾಗಿ ನೋಡ ಸಿಗುವಂತಾಯಿತು.

ಕೋಶ ನಿರ್ಮಾಣ ಎಷ್ಟು ಶ್ರಮಸಾಧ್ಯವಾದ ಕೆಲಸವೆನ್ನುವುದು ಆ ಕ್ಷೇತ್ರದಲ್ಲಿ ಕೆಲಸ ಮಾಡಿಲ್ಲದವರಿಗೆ ತಿಳಿಯುವದು ಕಷ್ಟ ಪ್ರೊ|| ವೆಂಕಟಸುಬ್ಬಯ್ಯನವರು ಬಹಳ ಶ್ರಮಪಟ್ಟು ಈ ಕೋಶವನ್ನು ರಚಿಸಿದ್ದಾರೆ. ಅದರ ಸಹಾಯವನ್ನು ಪಡೆದು ಮುದ್ದಣನ ಕೃತಿಗಳನ್ನು ಓದಿ, ಕನ್ನಡ ಜನತೆ ಲೇಖಕರ ಶ್ರಮವನ್ನು ಸಾರ್ಥಕ ಗೊಳಿಸುವುದೆಂದೂ, ತರುಣ ವಿದ್ವಾಂಸರು ಮುದ್ದಣನ ಶಬ್ದಕಲ್ಪದ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆಸಿ ವೆಂಕಟಸುಬ್ಬಯ್ಯನವರ ನಿರೀಕ್ಷೆಯನ್ನು ಸಫಲಗೊಳಿಸುವರೆಂದೂ ನಂಬಿದ್ದೇನೆ.

4. ಕನ್ನಡ ನಿಘಂಟುಶಾಸ್ತ್ರ ಪರಿಚಯ *

ಈ ಕೃತಿಯು ಪ್ರೊ|| ಶಿ. ಶಿ. ಬಸವನಾಳರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಲೇಖಕರು ಕೊಟ್ಟ ಉಪನ್ಯಾಸದ ಲಿಖಿತರೂಪ. ಕನ್ನಡದಲ್ಲಿ ಅನೇಕ ನಿಘಂಟುಗಳು ಪ್ರಕಟವಾಗಿದ್ದರೂ, ನಿಘಂಟು ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ ಬರುತ್ತಿರುವುದು ಇದೇ ಮೊದಲು.

''ಲೇಖಕನ ಅರಿಕೆ''ಯಲ್ಲಿ ಪ್ರೊ|| ವೆಂಕಟಸುಬ್ಬಯ್ಯನವರು, ''ವಿಷಯದ ಕಿರುಪರಿಚಯವನ್ನು ಮಾಡಿಸಿ ನಮ್ಮ ಯುವ ವಿದ್ವಾಂಸರ ದೃಷ್ಟಿಯನ್ನು ಈ ಕಡೆಗೆ ಸೆಳೆಯಲು ಪ್ರಯತ್ನ ಪಟ್ಟಿದ್ದೇನೆ'' ಎಂದು ಹೇಳಿದ್ದಾರೆ. ಆದರೆ ಯುವಕರಲ್ಲದ ವಿದ್ವಾಂಸರಲ್ಲೂ ನಿಘಂಟು ಶಾಸ್ತ್ರ ಪರಿಚಯವಿರುವವರು ವಿರಳವಾದುದರಿಂದ ಈ ಗ್ರಂಥ ಎಲ್ಲ ವಿದ್ವಾಂಸರಿಗೂ ಉಪಕಾರಕವಾದುದು.

''ಅರಿಕೆ''ಯಲ್ಲಿ, ಮುಂದೆ, **ಶಬ್ದ ಶಕ್ತಿ ಪ್ರಕಾಶಿಕಾ** ಎಂಬ ಸಂಸ್ಕೃತ ಗ್ರಂಥದ ವ್ಯಾಖ್ಯಾನದಲ್ಲಿ ಉದಾಹರಿಸಿರುವ ಪ್ರಾಚೀನ ಶ್ಲೋಕವೊಂದನ್ನು ಕೊಟ್ಟು ಶಬ್ದಕ್ಕೆ ಅರ್ಥವನ್ನು ಹುಡುಕುವುದು ಹೇಗೆಂಬುದನ್ನು ವಿವರಿಸಿದ್ದಾರೆ.

ಸಂಸ್ಕೃತದ ವೈದಿಕ ನಿಘಂಟು, ನಿರುಕ್ತ ಮತ್ತು ಕೋಶ ಗ್ರಂಥಗಳ ವಿವರದೊಡನೆ ಗ್ರಂಥ ಆರಂಭವಾಗಿದೆ. ಮುಂದೆ ನಿಘಂಟು ಶಾಸ್ತ್ರ ಮತ್ತು ನಿಘಂಟು ರಚನಾ ಶಾಸ್ತ್ರಗಳಿಗಿರುವ ಸಂಬಂಧವನ್ನು ನಿರೂಪಿಸಿ, ನಿಘಂಟುಗಳಲ್ಲಿ ಎಷ್ಟು ಮಾದರಿ ಗಳಿವೆ, ಅವುಗಳಲ್ಲಿರುವ ವಿವರಗಳೇನು ಎಂದು ಉದಾಹರಣೆಗಳೊಡನೆ ವಿವರಿಸಿದ್ದಾರೆ (ಪುಟ 9-14). ಅನಂತರ 'ಕನ್ನಡದಲ್ಲಿ ಶಬ್ದೋತ್ಪತ್ತಿಯಕ್ರಮ' (ಪುಟ 15-19) ಎಂಬ ಭಾಗದಲ್ಲಿ ಈ ಭಾಷೆಯ ಶಬ್ದ ಭಂಡಾರ ಹೇಗೆ ಬೆಳೆದಿದೆ ಮತ್ತು

---

* *ಪ್ರೊ|| ಜಿ. ವೆಂಕಟಸುಬ್ಬಯ್ಯ ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩ ಪುಟಗಳು : vi + ೧೦೩. ಬೆಲೆ : ರೂ. ೨೦/- ೧೯೯೩*

ಬೆಳೆಯುತ್ತಿದೆ ಎಂಬುದನ್ನು ಹೇಳಿದ್ದಾರೆ. ಈ ಭಾಗ ಎಷ್ಟು ಬೋಧಪ್ರದವೋ ಅಷ್ಟೇ ರಂಜಕವೂ ಆಗಿದೆ.

ಮುಂದೆ; ವಿಶಿಷ್ಟವಾದ ಉದ್ದೇಶವುಳ್ಳ, ವೈದ್ಯ, ವಿಜ್ಞಾನ ಮೊದಲಾದ ಶಾಸ್ತ್ರೀಯ ಪದಕೋಶಗಳ ವಿಷಯವನ್ನು ಪ್ರಸ್ತಾಪಿಸಿ, ಅವುಗಳ ಅಗತ್ಯವನ್ನೂ, ಆ ನಿಘಂಟುಗಳ ಮತ್ತು ಸಾಮಾನ್ಯ ನಿಘಂಟುಗಳ ವ್ಯಾಪ್ತಿಯನ್ನೂ ವಿವರಿಸಿದ್ದಾರೆ (ಪುಟ 20-27).

''ನಿಘಂಟು ರಚನೆ - ವಿವಿಧ ಹಂತಗಳು'' ಎಂಬ ಏಳನೆಯ ಭಾಗವು ಈ ಗ್ರಂಥದ ಮುಖ್ಯ ಭಾಗ. ಇಲ್ಲಿ ಶಬ್ದಗಳ ಮತ್ತು ಪ್ರಯೋಗಗಳ ಸಂಗ್ರಹ, ಪಟ್ಟಿಕೆಗಳ ರಚನೆ, ಪರ್ಯಾಯ ರೂಪಗಳ ಜೋಡಣೆ, ಅರ್ಥನಿರ್ಧಾರ; ಪ್ರಯೋಗಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು, ಶಬ್ದಗಳ ವ್ಯುತ್ಪತ್ತಿಯನ್ನು ನಿರ್ಧರಿಸುವುದು, ಈ ಆರು ಹಂತಗಳಲ್ಲಿ ನಡೆಯಬೇಕಾದ ಕೆಲಸಗಳನ್ನು, ಉದಾಹರಣೆಗಳ ಸಮೇತವಾಗಿ, ವರ್ಣಿಸಿದ್ದಾರೆ. (ಪುಟ 28-47) ಇದರಿಂದ ನಿಘಂಟು ರಚನೆ ಎಷ್ಟು ಶ್ರಮ ಸಾಧ್ಯವಾದ ಕೆಲಸವೆಂದು ಮನದಟ್ಟಾಗುತ್ತದೆ. ತಿಂಡಿ ತಿನ್ನುವವರಿಗೆ ತಿನಿಸುಗಳ ತಯಾರಿಕೆಯಲ್ಲಿ ಆಗುವ ಶ್ರಮವು ಹೇಗೆ ಗಮನಕ್ಕೆ ಬರುವುದಿಲ್ಲವೋ, ಹಾಗೆ ನಿಘಂಟನ್ನು ಉಪಯೋಗಿಸುವವರಿಗೆ ನಿಘಂಟುಕಾರನ ಶ್ರಮ ಗಮನಕ್ಕೆ ಬರುವುದಿಲ್ಲ.

ಮುಂದಿನ 21 ಪುಟಗಳಲ್ಲಿ ಕೆಲವು ಇಂಗ್ಲೀಷಿನ ಮತ್ತು ಕನ್ನಡದ ನಿಘಂಟುಗಳಿಂದ ಆಯ್ದ ಪುಟಗಳ ಪ್ರತಿಕೃತಿಗಳು (Reproductions) ಇವೆ.

ಎಂಟನೆಯ ಭಾಗ - ''ಕನ್ನಡ ನಿಘಂಟುಗಳ ಕಿರು ಚರಿತ್ರೆ''. ಇಲ್ಲಿ ಕ್ರಿ.ಶ. ಹತ್ತನೆಯ ಶತಮಾನದ 'ರನ್ನ ಕಂದ'ವೆಂಬ ನಿಘಂಟಿನಿಂದ ಆರಂಭಿಸಿ ಇಂದಿನವರೆಗಿನ ಬಹುತೇಕ ಎಲ್ಲ ಕನ್ನಡ ನಿಘಂಟುಗಳ ಸಂಕ್ಷಿಪ್ತ ವಿವರಗಳೂ, ಈಗ ಮುಗಿಯುವ ಹಂತದಲ್ಲಿರುವ, ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟಿನ ಕೆಲವು ವಿವರಗಳೂ ಇವೆ.

ಕೊನೆಯಲ್ಲಿ ಆರು ಅನುಬಂಧಗಳಿವೆ.

ನಾಗವರ್ಮನು ತನ್ನ 'ಕಾವ್ಯಾವಲೋಕನ'ದಲ್ಲಿ ''ಪ್ರತಿಭಾನಂ, ಕಾವ್ಯ ವಿದ್ಯಾ ಪ್ರಚಯ ಪರಿಚಯಂ, ವೃದ್ಧ ಸೇವಾನುರಾಗಂ, ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ'' ಎಂದು ಹೇಳಿ, ಅದರ ಅರ್ಥವನ್ನೂ ವಿವರಿಸಿದ್ದಾನೆ. ಅಲ್ಲಿ ಕವಿತೆಗೆ ಕಾರಣಗಳೆಂದು ಹೇಳಿರುವ ಪ್ರತಿಭೆ, ಕಾವ್ಯಗಳ, ಲೋಕವ್ಯವಹಾರದ ಮತ್ತು ಅನೇಕ ಶಾಸ್ತ್ರಗಳ ಪರಿಚಯ, ಶಾಸ್ತ್ರಜ್ಞರೊಡನೆ

ವಿಚಾರ ವಿನಿಮಯದಲ್ಲಿ ಆಸಕ್ತಿ ಮತ್ತು ನಿರಂತರವಾದ ಅಭ್ಯಾಸ ಇವು ನಿಘಂಟು ರಚನೆಗೂ ಅತ್ಯಾವಶ್ಯಕ.

"ಶ್ರೇಷ್ಠ ನಿಘಂಟುಕಾರನಾಗಲು ಇರಬೇಕಾದ ಅರ್ಹತೆಗಳು" ಎಂಬ ಮೊದಲನೆಯ ಅನುಬಂಧದಲ್ಲಿ (ಪುಟ 91, 92) ಪ್ರೊ|| ವೆಂಕಟಸುಬ್ಬಯ್ಯನವರು ಇತರ ನಿಘಂಟುಕಾರರೊಡನೆ ಆಗಾಗ ನಡೆಸಿದ ಮಾತುಕತೆಗಳಿಂದಲೂ, ತಮ್ಮ ಸ್ವಂತ ಅನುಭವದಿಂದಲೂ ಮೂಡಿಬಂದಂತೆ, ನಿಘಂಟುಕಾರನಿಗಿರಬೇಕಾದ ಅರ್ಹತೆಗಳನ್ನು ತಿಳಿಸಿದ್ದಾರೆ. ಎಷ್ಟೇ ಅರ್ಹತೆ ಇದ್ದರೂ, ನಿಘಂಟು ರಚನೆ ಮುಂದುವರಿದಂತೆಲ್ಲ, ನಿಘಂಟುಕಾರನೂ ಮಾನಸಿಕವಾಗಿ ಬೆಳೆಯುತ್ತ, ಅವನ ಅರ್ಹತೆಯೂ ಹೆಚ್ಚುತ್ತ ಹೋಗುತ್ತದೆ ಎನ್ನಬಹುದು.

ಎರಡನೆಯ ಅನುಬಂಧ - "ಒಂದು ನಿಘಂಟನ್ನು ಉಪಯೋಗಿಸುವುದು ಹೇಗೆ" ? ಈ ಭಾಗವನ್ನು ನಿಘಂಟನ್ನು ಉಪಯೋಗಿಸುವ ಎಲ್ಲರೂ ಅವಶ್ಯವಾಗಿ ಓದಬೇಕು. ನಿಘಂಟುಗಳ ಪೂರ್ಣಪ್ರಯೋಜನ ಪಡೆಯಲು ಇದು ಸಹಕಾರಿ ಯಾಗುತ್ತದೆ.

ಕರಡಚ್ಚು ತಿದ್ದುವವರ ಕಣ್ತಪ್ಪಿಸಿ ಅನೇಕ ಮುದ್ರಣದ ತಪ್ಪುಗಳು ಉಳಿದು ಕೊಂಡಿವೆ. ಚಾರಿತ್ರಿಕ (ಪುಟ 13, 36, 37 ಇತ್ಯಾದಿ), ಸೌಷ್ಟವ (ಪುಟ 22), ಕಾಯಕ್ಲೇಷ (ಪುಟ 44), ಕ್ರೋಢೀಕರಿಸಿ (ಪುಟ 81) ಇವು ಕೆಲವು. ಇವು ಕ್ರಮವಾಗಿ, ಚಾರಿತ್ರಿಕ, ಸೌಷ್ಠವ, ಕಾಯಕ್ಲೇಶ, ಕ್ರೋಡೀಕರಿಸಿ ಎಂದು ಇರಬೇಕು. 48-68 ಪುಟಗಳಲ್ಲಿರುವ ಪ್ರತಿಕೃತಿಗಳು ಬಹಳ ಮಸಕಾಗಿದ್ದು ಅನೇಕ ಕಡೆ ಸಣ್ಣಕ್ಷರಗಳನ್ನು ಓದುವುದು ಕಷ್ಟಸಾಧ್ಯವಾಗಿದೆ. ಈ ಪ್ರತಿಕೃತಿಗಳನ್ನು, ಸ್ಪಷ್ಟವಾಗಿ ಕಾಣುವಂತೆ, ಇನ್ನಷ್ಟು ದೊಡ್ಡ ಆಕೃತಿಯಲ್ಲಿ ಮುದ್ರಿಸಬೇಕಾಗಿತ್ತು; 3ನೇ ಪುಟದ 13ನೆಯ ಸಾಲಿನಲ್ಲಿ ಮೊದಲಾಗುವ ವಾಕ್ಯ "ಛಂದಸ್ಸು ಆಯಾಮಂತ್ರಗಳ ಅಕ್ಷರ, ಪಾದವ್ಯವಸ್ಥೆ ಮುಂತಾದವುಗಳ ಪರಿಚಯ ಮಾಡಿಕೊಡುತ್ತದೆ" ಎಂದಿರಬೇಕು. 76ನೆಯ ಪುಟದಲ್ಲಿ, ನಾಗವರ್ಮನ ಕಾಲ ಕ್ರಿ.ಶ. 1145ರ ಬದಲು ಕ್ರಿ.ಶ. 1045 ಇರಬೇಕು. ಈ ಸಣ್ಣ ದೋಷಗಳನ್ನು ಮರುಮುದ್ರಣದಲ್ಲಿ ನಿವಾರಿಸುವರೆಂದು ನಂಬಿದ್ದೇನೆ.

ಪ್ರೊ|| ವೆಂಕಟಸುಬ್ಬಯ್ಯನವರ ದೀರ್ಘಕಾಲದ ನಿಘಂಟು ಸಂಪಾದಕತ್ವದ ಅನುಭವ ಈ ಗ್ರಂಥದಲ್ಲಿ ಎದ್ದು ಕಾಣುತ್ತದೆ. ಇಷ್ಟು ಉತ್ತಮವಾದ ಮತ್ತು ಉಪಯುಕ್ತವಾದ ಗ್ರಂಥವನ್ನು ಬರೆದ ಅವರೂ, ಗ್ರಂಥವನ್ನು ಪ್ರಕಾಶ ಪಡಿಸಿದ ಕರ್ನಾಟಕ ವಿಶ್ವವಿದ್ಯಾಲಯದವರೂ ಕನ್ನಡಿಗರಿಗೆ ತುಂಬ ಉಪಕಾರ ಮಾಡಿದ್ದಾರೆ. ಆಸಕ್ತರೆಲ್ಲರೂ ಈ ಗ್ರಂಥವನ್ನು ಓದಿ, ಅದರ ಉಪಯೋಗವನ್ನು ಪಡೆದು ಗ್ರಂಥಕರ್ತರ ಶ್ರಮವನ್ನು ಸಾರ್ಥಕ ಪಡಿಸುವರೆಂದು ನಂಬಿದ್ದೇನೆ.

ಕನ್ನಡ ನಿಘಂಟುಗಳ ಚರಿತ್ರೆಯನ್ನು ರಚಿಸುವ ದೃಷ್ಟಿಯಿಂದ ತಾವು ವಿಷಯ ಸಂಗ್ರಹ ಮಾಡುತ್ತಿರುವುದಾಗಿ ಗ್ರಂಥಕರ್ತರು "ಅರಿಕೆ"ಯಲ್ಲಿ ಹೇಳಿದ್ದಾರೆ. ಆ ಗ್ರಂಥ ಶೀಘ್ರವಾಗಿ ಹೊರಬರುವುದೆಂದು ಆಶಿಸುತ್ತೇನೆ.

5. ವೃತ್ತವಿಲಾಸ ವೈಭವ

'ವೃತ್ತ ವಿಲಾಸ ವೈಭವ'ವು ಛಂದೋವೈಚಿತ್ರ್ಯ, ಕಾವ್ಯವಿಲಾಸ ಮತ್ತು ಆಧ್ಯಾತ್ಮಿಕತೆ ಗಳು ಮುಪ್ಪುರಿಗೊಂಡಿರುವ ಒಂದು ಅಪೂರ್ವ ಕೃತಿ. ಬಹುಶಃ ಇದೇ ಕನ್ನಡದಲ್ಲಿ, ಈ ತೆರೆದ ಮೊದಲನೆಯ ಗ್ರಂಥ. ಈ ಗ್ರಂಥದಲ್ಲಿ ನಾಲ್ಕು ಭಾಗಗಳಿವೆ.

ಮೊದಲನೆಯ ಭಾಗ 'ನಡೆದು ಬಂದ ಛಂದಸ್ಸು'. ಇದರಲ್ಲಿ ಬೇರೆ ಬೇರೆ ಪ್ರಸಿದ್ಧ ವೃತ್ತಗಳಲ್ಲಿ ರಚಿತವಾದ 8 ಶಿವಸ್ತೋತ್ರಗಳಿವೆ - 3 ಅಷ್ಟಕಗಳು, 5 ಪಂಚಕಗಳು. ಇವುಗಳಲ್ಲಿ ಮೊದಲನೆಯದಾದ ಲಿಂಗಾಷ್ಟಕದ ಪ್ರತಿಪದ್ಯವೂ 'ನಾಂ ಮನಸಾ ಶಿವಲಿಂಗಂ' ಎಂದು ಮುಕ್ತಾಯಗೊಳ್ಳುತ್ತದೆ. ದೋಧಕ ವೃತ್ತದಲ್ಲಿರುವ ಈ ಸ್ತೋತ್ರ 'ಬ್ರಹ್ಮಮುರಾರಿ ಸುರಾರ್ಚಿತ ಲಿಂಗಂ' ಎಂದು ಪ್ರಾರಂಭವಾಗುವ ಸಂಸ್ಕೃತದ ಲಿಂಗಾಷ್ಟಕದ ಧಾಟಿಯಲ್ಲಿದೆ. ಎಲ್ಲ ಸ್ತೋತ್ರಗಳೂ ಸರಳವೂ ಲಲಿತವೂ ಆದ ಕನ್ನಡದಲ್ಲಿವೆ.

ಎರಡನೆಯ ಬಾಗ 'ನವೋತ್ಪಾದ್ಯ ಛಂದಸ್ಸು'. ಈಗ ಉಪಲಬ್ಧವಿರುವ ಛಂದಶ್ಶಾಸ್ತ್ರ ಗ್ರಂಥಗಳಲ್ಲಿ ಮೊದಲನೆಯದಾದ ಪಿಂಗಳ ಛಂದಸ್ಸೂತ್ರದಲ್ಲಿ, ಪ್ರತಿಪಾದದಲ್ಲಿ 1ರಿಂದ 26ರವರೆಗೆ ಅಕ್ಷರಗಳುಳ್ಳ ಉಕ್ತಾ, ಅತ್ಯುಕ್ತಾ ಮೊದಲಾದ 26 ಅಕ್ಷರ ಛಂದಸ್ಸುಗಳು ಹೇಳಲ್ಪಟ್ಟಿವೆ. ಒಂದೊಂದು ಮೇಳಕರ್ತರಾಗದಿಂದಲೂ ಹೇಗೆ ಅನೇಕ ಜನ್ಯರಾಗಗಳು ಹುಟ್ಟುವವೋ ಹಾಗೆ ಪ್ರತಿಛಂದಸ್ಸಿನಿಂದಲೂ ಲಘು ಗುರು ವಿನ್ಯಾಸ - ಭೇದದಿಂದ ಅನೇಕ ವೃತ್ತಗಳುಂಟಾಗುತ್ತವೆ. ಕವಿಗಳು ತಮಗೆ ರಂಜಕವೆಂದು ತೋರಿದ ಪ್ರಸ್ತಾರವುಳ್ಳ ವೃತ್ತಗಳಲ್ಲಿ ಪದ್ಯ ರಚನೆ ಮಾಡಿದ್ದಾರೆ. ಇವುಗಳಲ್ಲಿ ಕೆಲವು ಜನಪ್ರಿಯತೆ ಗಳಿಸಿ ಪ್ರಸಿದ್ಧವಾಗಿವೆ.

ಕುಮಾರ ನಿಜಗುಣರು 17, 19, 21, 22 ಮತ್ತು 23 ಅಕ್ಷರಗಳ ಪಾದಗಳುಳ್ಳ 13 ಹೊಸ ವೃತ್ತಗಳಲ್ಲಿ ರಚಿಸಿರುವ ಪಂಚಕಗಳೂ, ಅಷ್ಟಕವೂ ಈ ಭಾಗದಲ್ಲಿವೆ. ವೃತ್ತಗಳ ಹೆಸರುಗಳೂ ಅರ್ಥಗರ್ಭಿತವಾಗಿವೆ. ಉದಾಹರಣೆಗೆ, ಕನಕದೇಹಿ, ನಾದನಾಟ್ಯ,

---

* *ಕುಮಾರ ನಿಜಗುಣ ಪ್ರಕಾಶನ : ನಿಜಗುಣ ನಿಲಯ, ಚಿಲುಕವಾಡಿ, ಕೊಳ್ಳೇಗಾಲ ತಾಲ್ಲೂಕು - ೫೮೦ ೦೦೨ ಪುಟಗಳು :* xxi *+ ೮೯. ಬೆಲೆ : ರೂ. ೩೦/-*

ಖಗರಾಜಗತಿ. ಇವು ರಾಗಗಳ ಹೆಸರನ್ನು ನೆನಪಿಗೆ ತರುತ್ತವೆ. (ಗ್ರಂಥಕರ್ತೃರು ಇವುಗಳಲ್ಲಿ ಕೆಲವನ್ನು ಹಾಡಿ ತೋರಿಸಿರುವುದಾಗಿ ಗ್ರಂಥದ ಆದಿ ಭಾಗದಲ್ಲಿರುವ 'ಉಪಕಾರ ಸ್ಮರಣೆ'ಯಲ್ಲಿ ಹೇಳಿದ್ದಾರೆ). ಒಂದು ವೃತ್ತದ ಹೆಸರು 'ಏಳುಮಲೆ ಮಾದೇವ'. ಈ ಹೊಸ ವೃತ್ತಗಳಲ್ಲಿ ಕೆಲವು ಕಾಲಗತಿಗೆ ಹೊಂದುತ್ತವೆ. ಗ್ರಂಥಕರ್ತರು ಇವನ್ನು 'ಸಕಾಲ ವೃತ್ತ'ಗಳೆಂದು ಕರೆದು 'ತೋಂ ತಕ ತೋಂ' ಇತ್ಯಾದಿ ಲಯವಿನ್ಯಾಸವನ್ನೂ ಸಹ ಪೀಠಿಕೆಯಲ್ಲಿ ಹೇಳಿದ್ದಾರೆ.

ಈ ಭಾಗ್ಗದಲ್ಲಿರುವ ರಚನೆಗಳಲ್ಲಿ ಕೆಲವು ಸ್ತೋತ್ರಗಳು; ಗಿರಿಜಾ ಪಂಚಕ, ಪನ್ನಗ ವೇಣ್ಯಷ್ಟಕ ಮೊದಲಾದುವು ನೀತಿಬೋಧಕ ರಚನೆಗಳು. ಎಲ್ಲ ವೃತ್ತಗಳಿಗೂ ಅದೇ ವೃತ್ತದಲ್ಲಿ ರಚಿತವಾದ ಒಂದು ಪದ್ಯ ಪಾದದಲ್ಲಿ ಲಕ್ಷಣವನ್ನು ಕೊಟ್ಟಿದ್ದಾರೆ.

ಛಂದಶ್ಶಾಸ್ತ್ರದಲ್ಲಿ 1ರಿಂದ 26 ಅಕ್ಷರಗಳ ಛಂದಸ್ಸುಗಳಿಗೆ ಮಾತ್ರ ಹೆಸರುಗಳಿವೆ; 26 ಅಕ್ಷರದ ಛಂದಸ್ಸಿನ ಹೆಸರು 'ಉತ್ಕೃತಿ'. ಕುಮಾರ ನಿಜಗುಣರು 27 ಅಕ್ಷರದ ಛಂದಸ್ಸನ್ನು 'ಸತ್ಕೃತಿ' ಎಂದು ಕರೆದು, ಈ ಛಂದಸ್ಸಿನಲ್ಲಿ 108 ಶಿವಶರಣರ ಹೆಸರಿನಲ್ಲೂ ಒಂದೊಂದು ವೃತ್ತವನ್ನು ರಚಿಸಿದ್ದಾರೆ. ಪ್ರತಿ ವೃತ್ತಕ್ಕೆ ಮುಂಚೆ, ಅದೇ ವೃತ್ತಪಾದದಲ್ಲಿ ಲಕ್ಷಣವನ್ನು ಕೊಟ್ಟಿದ್ದಾರೆ. ಪ್ರತಿ ವೃತ್ತದಲ್ಲೂ ಕೊನೆಯ ಪಾದದಲ್ಲಿ ವೃತ್ತದ ಹೆಸರು ಬರುತ್ತದೆ. ಇದು 'ಶಿವಶರಣತಾರಾವರ್ಣ - ಮಾಲಾವೃತ್ತ ಶತಕ'ವೆಂಬ ಮೂರನೆಯ ಭಾಗ. ಈ ಭಾಗದ ಕೊನೆಯಲ್ಲಿ 'ಮಹತ್ಕೃತಿ' ಎಂದು ಕರೆದಿರುವ 28 ಅಕ್ಷರದ ಛಂದಸ್ಸಿನ 'ನಿಜಗುಣ' ಎಂಬ ಹೆಸರಿನ ವೃತ್ತವಿದೆ.

'ಅತಿಧೃತಿಶತಂ' ಎಂಬ, ಈ ಕೃತಿಯ ನಾಲ್ಕನೆಯ ಭಾಗದಲ್ಲಿ 19 ಅಕ್ಷರದ 'ಅತಿಧೃತಿ' ಛಂದಸ್ಸಿನ 108 ಹೊಸ ವೃತ್ತಗಳಿದ್ದು, ಪುರಾಣ ಕಥನ, ಭಕ್ತಿ ಇತ್ಯಾದಿ ಏಳು ಖಂಡಗಳಿವೆ. ಈ ವೃತ್ತಗಳಿಗೂ ಅದೇ ವೃತ್ತಪಾದದಲ್ಲಿ ಲಕ್ಷಣವನ್ನೂ ಕೊಟ್ಟಿದ್ದಾರೆ.

ಗ್ರಂಥದಲ್ಲಿನ ಎಲ್ಲ ವೃತ್ತಗಳಿಗೂ ಆಯಾ ಛಂದಸ್ಸಿನ ಪ್ರಸ್ತಾರ ಕ್ರಮದಂತೆ ವೃತ್ತ ಸಂಖ್ಯೆಯನ್ನೂ ಆ ಛಂದಸ್ಸಿನ ಒಟ್ಟು ವೃತ್ತಗಳ ಸಂಖ್ಯೆಯನ್ನೂ ಕೊಟ್ಟಿದ್ದಾರೆ.

ಹೊಸಗನ್ನಡದಲ್ಲಿ ಅಕ್ಷರ ವೃತ್ತ ರಚನೆ ಸುಲಭವಲ್ಲ. ಆದರೂ ಈ ಕೃತಿಯಲ್ಲಿನ ಅನೇಕ ವೃತ್ತಗಳು ತಿಳಿಗನ್ನಡದಲ್ಲಿವೆ. ಉದಾಹರಣೆಗೆ,

ನೀಗುತ ಸಂತತ ಸರ್ವರ ಸಂಕಟ ಸಂತಸಗೊಳ್ಳುತಲುಂ
ಭೋಗಕೆ ಬಾಗದೆ ರೋಗದೊಳೀಗದೆ ರಾಗವ ಪಾಡುತಲುಂ
ಯೋಗದ ಸಿದ್ಧಿಯು ತನ್ನನು ತಾನರಿದಾಗಳೆಯೆನ್ನುತಲುಂ
ಬಾಗುತ ದೈವಕೆ ಯೌಗಿಕ ಜೀವನ ಸಾಗಿಸು ಹೇ ಮನುಜಾ

(ಗಿರಿಜಾ ಪಂಚಕ, ಪುಟ 15)

ಮೂರನೆಯ ಮತ್ತು ನಾಲ್ಕನೆಯ ಭಾಗಗಳಲ್ಲಿನ ವೃತ್ತಗಳು ನಡುಗನ್ನಡದ ಚಂಪೂ ಶೈಲಿಯಲ್ಲಿವೆ. ಕೆಲವು ವೃತ್ತಗಳು ಸಂಸ್ಕೃತಪದ ಭೂಯಿಷ್ಠವಾಗಿವೆ. ಉದಾಹರಣೆಗೆ,

ಶ್ರೀ ಗುರು ಜಂಗಮ ಕಿಂಕರೇ ಸತ್ಯಧರ್ಮಸಾಕಾರರೂಪೇ ಸದಾ ಮಂಗಳ ಮಂತ್ರರತೇ
ಸಾಗರಸಾಮ್ಯಗಭೀರಶಾಂತೇ ನಿಜಾನುಸಂಧಾನನಿಷ್ಠಾಗರಿಷ್ಠೇ ಭಗವದ್ರಸಿಕೇ
ತ್ಯಾಗಮಯಾನ್ವಿತನಾದಬಿಂದುಸ್ವರೂಪಸಾಮ್ಯೇ ನಿಜಾನಂದಸಾರಾಮೃತಚಿತ್ಕಲಶೇ
ಭೋಗವಿರಾಗಸಮನ್ವಯಾಚಾರಶೀಲಸಂಪನ್ನಗಂಗಾಂಬಿಕೇ ವಂದಿಪೆ ನಾಂ ಸುಭಗೇ

(ಪುಟ 38)

ಗ್ರಂಥದ ಮೊದಲಲ್ಲಿ, ಪ್ರಸಿದ್ಧ ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರಾದ ಡಾ|| ಕೆ. ಕೃಷ್ಣಮೂರ್ತಿಯವರ ಪಾಂಡಿತ್ಯಪೂರ್ಣವಾದ ಮುನ್ನುಡಿಯಿದೆ. 'ಒಳನೋಟ'ವೆಂಬ ಹೆಸರಿನ ಪೀಠಿಕೆಯಲ್ಲಿ ಗ್ರಂಥಕರ್ತರು ಛಂದಸ್ಸಿನ ವಿಷಯವಾಗಿ ದೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ. ಛಂದೋಬದ್ಧ - ಪದ್ಯರಚನೆಯ ಕಡೆಗೆ ಆಧುನಿಕ ಕವಿಗಳು ತೋರುತ್ತಿರುವ ಅನಾದರವನ್ನೂ ಹಿಂದಿನ ಕಾವ್ಯಗಳ ಬಗೆಗೆ ಅನೇಕ ಕಲಿತವರು ತೋರುವ ತಿರಸ್ಕಾರ ಭಾವವನ್ನೂ ಕಂಡು ನೊಂದಿರುವ ಕುಮಾರ ನಿಜಗುಣರು ಇನ್ನು ಕೆಲವೇ ವರ್ಷಗಳಲ್ಲಿ ಛಂದೋಬದ್ಧ ರಚನೆಗಳು ಮತ್ತೆ ವಿಜೃಂಭಿಸುತ್ತವೆ ಎಂಬ ದೃಢ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಪುಸ್ತಕ ಅಂದವಾಗಿ ಅಚ್ಚಾಗಿದೆ. ಮುದ್ರಣದ ತಪ್ಪುಗಳು ವಿರಳವಾದರೂ, ಅಲ್ಲಲ್ಲಿ ಕೆಲವು ಉಳಿದುಕೊಂಡಿವೆ. 31ನೆಯ ಪುಟದಲ್ಲಿ, 'ಅಲ್ಲಮ' ವೃತ್ತದ ಕೊನೆಯ ಪಾದದಲ್ಲಿ 'ನಿರಂಘುಂ' ಎಂಬ ಪದದ ಹಿಂದೆ 'ನಿರಾಳಂ' ಎಂಬ ಪದವಿರಬೇಕು. 'ಕನಕ ದೇಹಿ' (ಪುಟ 16) ಮತ್ತು 'ತ್ರಿಶೂಲಿ' (ಪುಟ 26) ಎಂಬ ವೃತ್ತಗಳ ಹೆಸರಿನ ಮುಂದೆ ಕೊಟ್ಟಿರುವ ಆ ಛಂದಸ್ಸಿನ ಒಟ್ಟು ವೃತ್ತಗಳ ಸಂಖ್ಯೆಗಳು ತಪ್ಪಾಗಿ ಅಚ್ಚಾಗಿವೆ.

ಸಾಮಾನ್ಯ ಓದುಗರಿಗೂ, ವಿದ್ವಾಂಸರಿಗೂ ಸಹ ಉಪಯುಕ್ತವಾದ ಇಂತಹ ಉತ್ತಮ ಕೃತಿಯನ್ನು ರಚಿಸಿ ಕುಮಾರ ನಿಜಗುಣರು ಕನ್ನಡಿಗರಿಗೆ ಅತ್ಯಂತ ಉಪಕಾರ ಮಾಡಿದ್ದಾರೆ. ಓದುಗರು ಇದರ ಪೂರ್ಣ ಉಪಯೋಗವನ್ನು ಪಡೆಯುವರೆಂದು ನಂಬಿದ್ದೇನೆ.

ನಿಜಗುಣರವರಿಗೆ ಬರೆದ ಪತ್ರ

ಸಂಮಾನ್ಯ ಕುಮಾರ ನಿಜಗುಣರವರಿಗೆ ವಂದನೆಗಳು.

ತಮ್ಮ 30.5.95ರ ಪತ್ರಕ್ಕೆ ಇಷ್ಟು ತಡವಾಗಿ ಉತ್ತರ ಬರೆಯುತ್ತಿರುವುದಕ್ಕಾಗಿ ತಮ್ಮ ಕ್ಷಮೆ ಬೇಡುತ್ತೇನೆ. "ಶ್ರೀ ಶಿವಕುಮಾರ ಚರಿತಂ" ಗ್ರಂಥವನ್ನು ಓದಿಯಾದ ನಂತರ ಉತ್ತರ ಬರೆಯಬೇಕೆಂದಿದ್ದುದೇ ವಿಲಂಬಕ್ಕೆ ಕಾರಣ. ಅನಾರೋಗ್ಯದಿಂದಲೂ ಇತರ ಕಾರಣಗಳಿಂದಲೂ ಇದುವರೆಗೆ ಪೂರ್ತಿಯಾಗಿ ಓದಲಾಗಿರಲಿಲ್ಲ. ಎರಡು ದಿನಗಳ ಹಿಂದೆ ಓದಿ ಮುಗಿಸಿದೆ.

ಸಂಸ್ಕೃತದಲ್ಲಿ ಅನೇಕ ಲಕ್ಷ್ಯಲಕ್ಷಣ ಕಾವ್ಯಗಳಿದ್ದರೂ ವ್ಯಾಕರಣ ಲಕ್ಷಣ ಕಾವ್ಯಗಳಷ್ಟು ಪ್ರಾಚೀನವಾದ ಛಂದೋಲಕ್ಷಣ ಕಾವ್ಯಗಳಿರುವಂತೆ ಕಾಣುವುದಿಲ್ಲ. ನನಗೆ ನೋಡಸಿಕ್ಕಿರುವ ಛಂದೋಲಕ್ಷ್ಯಲಕ್ಷಣ ಕಾವ್ಯಗಳೆಲ್ಲ 16ನೇ ಶತಮಾನದಿಂದೀಚೆಗೆ ರಚಿತವಾದುವು.

(i) ಅಪ್ಪಯ್ಯ ದೀಕ್ಷಿತರ ಅಧಿಕರಣಮಂಜರೀ ಅಥವಾ ನಯಮಂಜರೀ (ಅದ್ವೈತಮತ ಸಂಕ್ಷೇಪಾತ್ಮಕ), 16-17ನೇ ಶತಮಾನ,

(ii) ರಘುವರ್ಯತೀರ್ಥರ ರಘುನಾಥ ವಿಜಯ (ವೃತ್ತರತ್ನಾಕರೋದಾಹರಣ ರೂಪವಾಗಿ ರಾಮಾಯಣ ಕಥಾ), 17-18ನೇ ಶತಮಾನ.

(iii) ಭಾಸ್ಕರ ರಾಯಕೃತ ಶಿವನಾಮ ಕಲ್ಪಲತಾಲವಾಲ (ಶಿವಾಷ್ಟೋತ್ತರ ವ್ಯಾಖ್ಯಾನ), 18ನೇ ಶತಮಾನ.

(iv) ನಂಜುಂಡ ಕವಿಕೃತ ವೃತ್ತರತ್ನಾವಲಿ (ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರಶಂಸೆ), 19ನೇ ಶತಮಾನ.

ಈ ಬಗೆಯ ಕನ್ನಡ ಲಕ್ಷ್ಯಲಕ್ಷಣ ಕಾವ್ಯಗಳಾವುದನ್ನೂ, ನಾನು ನೋಡಿಲ್ಲ; ಅವುಗಳ ವಿಷಯ ಕೇಳಿಯೂ ಇಲ್ಲ. ಬಹುಶಃ ತಮ್ಮ ಶಿವಕುಮಾರ ಚರಿತ ಮತ್ತು ವೃತ್ತ ವಿಲಾಸ ವೈಭವಗಳೇ ಮೊದಲಿನವಿರಬೇಕು. ವೃತ್ತವಿಲಾಸವೈಭವದಲ್ಲಿ ಹಿಂದಿನ ಅಡಿಪಾಯದ ಮೇಲೆ ಹೊಸಕಟ್ಟಡವೆದ್ದಿದ್ದರೆ, ಶಿವಕುಮಾರಚರಿತದಲ್ಲಿ ಅಡಿಪಾಯವನ್ನು ವಿಸ್ತರಿಸಿ ಕಟ್ಟಡವನ್ನು ಕಟ್ಟಿರುವಿರಿ. ಎರಡು ಗ್ರಂಥಗಳನ್ನು ಓದಿ ತುಂಬ ಹರ್ಷವಾಯಿತು.

ತಾವು ಕೊಟ್ಟಿರುವ ಷಟ್ಪದಿಗಳ ಸಂಶೋಧನೆ ಮತ್ತು ಪ್ರಯೋಗಗಳ ಹಿನ್ನೆಲೆ, ಇಂತಹ ಸಂಶೋಧನೆಯಲ್ಲಿ ಅಭಿರುಚಿಯುಳ್ಳವರಿಗೆ ಮಾರ್ಗದರ್ಶಕವಾಗುತ್ತದೆ. ನನಗೆ ಸಂಗೀತ ಶಾಸ್ತ್ರ ಮತ್ತು ಗಮನಕಲೆಗಳಲ್ಲಿ ಪ್ರವೇಶವಿಲ್ಲವಾದಕಾರಣ ಸತಾಲ ವಿತಾಲ ರಚನೆಗಳ ವಿಷಯ ಸಾಧಾರಣವಾಗಿ ಅರ್ಥವಾಯಿತು; ಪೂರ್ತಿ ಮನದಟ್ಟಾಗಲಿಲ್ಲ.

ಷಟ್ಪದಿಗಳಿಗೂ ಇತರ ಮಾತ್ರಾ ಛಂದಸ್ಸು, ಅಕ್ಷರ ಛಂದಸ್ಸು ಮತ್ತು ಹೊಸ ಛಂದಸ್ಸುಗಳಿಗೂ ಇರುವ ಪರಸ್ಪರ ಸಂಬಂಧಗಳನ್ನು ತೋರಿಸಿರುವ ಭಾಗ ಚೆನ್ನಾಗಿದೆ.

ಅಂಶ ಛಂದಸ್ಸೇ ಮಾತ್ರಾಛಂದಸ್ಸಾಗಿ ಪರಿವರ್ತಿತವಾಯಿತೆಂಬ ವಾದ ನನಗೆ ಅರ್ಥವಾಗಿಲ್ಲ. ಕೆಲವು ವಿದ್ವಾಂಸರೊಡನೆ ವಿಚಾರ ವಿನಿಮಯ ಮಾಡಿಯೂ ಅಂಶ ಛಂದಸ್ಸಿನ ವಿಷಯವೂ ನನಗೆ ಸರಿಯಾಗಿ ಅರ್ಥವಾಗಿಲ್ಲ.

ಕಾವ್ಯಭಾಗದ 38, 39ನೇ ಪುಟಗಳಲ್ಲಿ ಕೊಟ್ಟಿರುವ ಕೋಷ್ಟಕಗಳು ಷಟ್ಪದಿಗಳ ವಿಂಗಡನೆಯನ್ನೂ ಹೆಸರುಗಳನ್ನೂ ತಿಳಿಯಲು ಬಹಳ ಸಹಾಯಕವಾಗಿವೆ.

ಪರಂಪರಾಗತವಾದ ಷಟ್ಪದಿಗಳ ಹಿರಿಯಡಿಗಳಲ್ಲಿ, ಕಿರಿಯಡಿಗಳಲ್ಲಿರುವ ಮಾತ್ರೆಗಳ 1½ಯಷ್ಟು ಮಾತ್ರೆಗಳೂ ಒಂದು ಗುರುವೂ ಇರಬೇಕೆಂದು ಮಾತ್ರ ಲಕ್ಷಣ ಗ್ರಂಥಗಳಲ್ಲಿ ಹೇಳಿರುವುದನ್ನೂ, ಈಚಿನ ಅಧ್ಯಾಪಕರು ಷಟ್ಪದಿಯ ಅಡಿಗಳನ್ನು 3, 4, 5 ಮಾತ್ರೆಗಳ ಗಣಗಳಾಗಿ ಬಿಡಿಸುವುದನ್ನೂ ಪ್ರಸ್ತಾಪಿಸಿದ್ದೀರಷ್ಟೆ. ತಾವು ಅಡಿಗಳನ್ನು ಬೇರೆ ರೀತಿಯಲ್ಲಿ ಗಣ ವಿಭಜನೆ ಮಾಡಿ ಷಟ್ಪದಿಗಳನ್ನು ರಚಿಸಿದ್ದೀರಿ. ಯಾವ ರೀತಿ ಗಣ ವಿಭಜನೆ ಮಾಡಿದರೂ, ವೈರಾ/ಗ್ಯನಿಧಿ, ಜಪತ/ಪದಿ, ಮುದ್ದಿ/ಸುತೆ ಕಾ/ಳಾಹಿಕಿಸ/ಲಯ, ಹೀಗೆ ಪದಗಳನ್ನೊಡೆಯಬೇಕಾಗುತ್ತದೆ.

ತಾವು ಹೇಳಿರುವಂತೆ, ಗಮಕ ಸಂಪ್ರದಾಯದಲ್ಲಿ ಅರ್ಥವು ಪ್ರಧಾನವಾದುದ ರಿಂದ ಗಣವಿಭಜನೆಯು, ಕವಿಯು ಪದ್ಯರಚನೆ ಮಾಡುವಾಗ ಮಾತ್ರ ಸಹಾಯಕ ವಾಗುವುದೆಂದು ತೋರುತ್ತದೆ. ನನ್ನ ಈ ಅನಿಸಿಕೆ ಸರಿಯಾದರೆ, ತಾವು ಇಮ್ಮಡಿ ವಿಷಮ ಷಟ್ಪದಿಗಳ ಗುಂಪಿನಲ್ಲಿ ಕೊಟ್ಟಿರುವ ಮರುವಕ, ಮಲ್ಲಿಕಾ, ಮಂದಾರಗಳಲ್ಲೂ ಉದ್ದಂಡ ಷಟ್ಪದಿಯಲ್ಲೂ ಸಹ ಕಿರಿಯಡಿ, ಹಿರಿಯಡಿಗಳಲ್ಲಿ ಕ್ರಮವಾಗಿ 20, 32 ಮಾತ್ರೆ ಗಳಿರುವುದರಿಂದ ಇವು ವಾರ್ಧಕದ ಒಳಭೇದಗಳೆನ್ನಬಹುದು. (ಕಾವ್ಯದ 118ನೇ ಪದ್ಯವಾದ ಮಲ್ಲಿಕಾಷಟ್ಪದಿಯಲ್ಲಿ 3, 4, 3 ಮಾತ್ರೆಗಳ ಗಣಗಳಾಗಿ ವಿಭಜಿಸುವ ಬದಲು ವಾರ್ಧಿಕ ಷಟ್ಪದಿಯ ರೀತಿಯಲ್ಲಿ 5 ಮಾತ್ರೆಗಳ ಗಣಗಳಾಗಿಯೂ ವಿಭಜಿಸಬಹುದು). ಹೀಗೆಯೇ ಶರವರ, ಶರಸಾಮ, ಮಹಾಸಂವರ್ಧಿನಿ, ಮಹಾ ವಿವರ್ಧಿನಿ ಇತ್ಯಾದಿಗಳನ್ನು ಪರಿವರ್ಧಿನಿಯ ಒಳಭೇದಗಳೆಂದೂ, ಬಕುಳ, ಕಾಮಿನಿ, ಜಲಸುಮ ಇತ್ಯಾದಿಗಳನ್ನು ಭಾಮಿನಿಯ ಒಳಭೇದಗಳೆಂದೂ ಹೇಳಬಹುದು.

ಒಮ್ಮಡಿ ಅಸಮಷಟ್ಪದಿಗಳಲ್ಲಿ ಒಂದು ಕಿರಿಯಡಿ, ಕಿರಿಯಡಿಯ ಮೊದಲ ಗಣ ಮತ್ತು ಒಂದು ಗುರು ಸೇರಿದಷ್ಟು ಹಿರಿಯಡಿಯಿದೆ; ಕಿರಿಯಡಿಯ 1½ಯಷ್ಟು 15½ ಮಾತ್ರೆಗಳಾಗುವುದರಿಂದ ½ ಮಾತ್ರೆ ಹೆಚ್ಚಾಗಿಯೋ ಕಡಮೆಯಾಗಿಯೋ ತೆಗೆದುಕೊಳ್ಳ ಬೇಕಾಗುತ್ತದೆ. ಹೀಗೆ ಮಾಡುವುದರಿಂದ ಷಟ್ಪದಿಯ ನಿಯಮವನ್ನು ಸ್ವಲ್ಪ ಸಡಿಲಿಸಿ ದಂತಾಗುತ್ತದೆ. ಹೀಗೆ ½ ಮಾತ್ರೆ ಹೆಚ್ಚು ಕಡಮೆ ಮಾಡುವುದಾದರೆ, ಕಿರಿಯಡಿಯಲ್ಲಿ 15 ಮಾತ್ರೆ (3×5 ಅಥವಾ 5×3), 25 ಮಾತ್ರೆ (5×5)ಗಳಿರುವ ಷಟ್ಪದಿಗಳ ರಚನೆ ಸಾಧ್ಯವಾಗಬಹುದು. ಈ ಪ್ರಯೋಗವನ್ನು ತಾವು ಮಾಡಿನೋಡಿರಬಹುದು.

27ನೆಯ ಪುಟದಲ್ಲಿ ''ಮೂಲತಃ 18 ಷಟ್ಪದಿಗಳ ಜೊತೆಗೆ ಗಣಪರಿವೃತ್ತಿಯಿಂದ ಮತ್ತೆ 127 ಷಟ್ಪದಿಗಳು ರಚಿತವಾಗಿವೆ'ಯೆಂದು ಹೇಳಲಾಗಿದೆ. ಶರ, ಕುಸುಮಾದಿ 6, ಉದ್ದಂಡ, ಜಲ, ವರ, ಅಸಮ, ಸುಮ, ಸಾಮ, ಸೋಮಗಳು ಮತ್ತು ಅವುಗಳ ಇಮ್ಮಡಿಗಳು ಸೇರಿದರೆ ಮೂಲತಃ 19 ಷಟ್ಪದಿಗಳಾಗುತ್ತವೆ. ಕಾವ್ಯದಲ್ಲಿ ಒಟ್ಟು 145 ಷಟ್ಪದಿಗಳಿರುವುದರಿಂದ, ಹೊಸ ರಚನೆಗಳು 126 ಮಾತ್ರ. ಕಾವ್ಯಭಾಗದ ಮುಂದಿನ ಕೋಷ್ಟಕದಲ್ಲಿರುವ 146 ಷಟ್ಪದಿಗಳ ಪೈಕಿ, ''ಶರಪಂಚಕ ಷಟ್ಪದಿ''ಯಲ್ಲಿ ರಚನೆ ಯಾಗಿಲ್ಲ.

ಅಲ್ಲಲ್ಲಿ ಕೆಲವು ವ್ಯಾಕರಣ ರೀತ್ಯಾ ಅಸಾಧುವಾದ ಶಬ್ದಗಳಿವೆ. ಪುನರ್‍ರಚಿಸಿದರೆ, ವೈವಿಧ್ಯತೆ, ವೈಶಾಲ್ಯತೆ, ಕಾಠಿಣ್ಯತೆ ಇವು ಕ್ರಮವಾಗಿ ಪುನಾರಚಿಸಿದರೆ, ವೈವಿಧ್ಯ, ವೈಶಾಲ್ಯ, ಕಾಠಿನ್ಯ ಎಂದಿರಬೇಕು. ಬೋಧನಕಾರರು, ಆವಾಗ ಎಂಬ ಪದಗಳಿಗಿಂತ, ಬೋಧಕರು ಆಗ ಎಂಬ ಪದಗಳನ್ನು ಉಪಯೋಗಿಸುವುದು ಉತ್ತಮ.

ವೃತ್ತವಿಲಾಸ ವೈಭವದಲ್ಲಿ ಪೂಜಿ, ಪೂಜೆ, ಪೂಜಲ್ಕೆ ಎಂಬ ಪದಗಳು ಪ್ರಯೋಗಿಸಲ್ಪಟ್ಟಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಪೂಜಿ ಎಂಬ ಕ್ರಿಯಾಪದಕ್ಕೆ ಪೂಜೆ ಮಾಡು, ಗೌರವಿಸು ಮೊದಲಾದ ಅರ್ಥಗಳನ್ನು ಹೇಳಿ ಹದಿಬದೆಯ ಧರ್ಮ (168-0) ಮತ್ತು ಹರಿಶ್ಚಂದ್ರ ಮಹಾರಾಯನ ಚರಿತ್ರೆ (1884)ಗಳಿಂದ ಪ್ರಯೋಗಗಳನ್ನು ಕೊಟ್ಟಿದ್ದಾರೆ. ಬಹುಶಃ ಈ ಗ್ರಂಥಕಾರರು, ''ಮಾಡು'' ಧಾತುವಿನಿಂದ ''ಮಾಡಿಸು'' ಬಂದಂತೆ, ''ಪೂಜಿ'' ಧಾತುವಿನಿಂದ ''ಪೂಜಿಸು'' ಬಂದಿತೆಂದು ತಿಳಿದೋ ಅಥವಾ ಛಂದಸ್ಸಿಗೆ ಹೊಂದಿಸುವುದಕ್ಕಾಗಿಯೋ ಪೂಜಿ, ಪೂಜುವುದು ಎಂಬ ರೂಪಗಳನ್ನು ಪ್ರಯೋಗಿಸಿರಬಹುದು. ಆ ರೂಪಗಳು ಅಸಾಧುವೆಂದು ನನ್ನ ಅಭಿಪ್ರಾಯ. ಶಬ್ದ ಮಣಿದರ್ಪಣದ ಧಾತುಪಾಠದಲ್ಲಿ ''ಪೂಜಿಸು ಅರ್ಚನ ವಿಧೌ'' ಎಂದಿದೆ. ಪೂಜು ಎಂಬ ಧಾತುವಿಲ್ಲ.

ತಮ್ಮ ಪತ್ರದಂತೆ 'ಬಿಚ್ಚು ಮನಸ್ಸಿನಿಂದ' 'ಮುಚ್ಚುಮರೆಯಿಲ್ಲದೆ' ನನಗೆ ತೋರಿದ್ದನ್ನು ಬರೆದಿದ್ದೇನೆ. ನನ್ನ ಅಭಿಪ್ರಾಯಗಳು ಎಷ್ಟರ ಮಟ್ಟಿಗೆ ಸರಿಯೋ ಕಾಣೆ ! ಅನುಚಿತವಾಗಿ ಏನನ್ನಾದರೂ ಬರೆದಿದ್ದರೆ ದಯೆಯಿಟ್ಟು ಕ್ಷಮಿಸಿ.

ತಮ್ಮ ಈ ಗ್ರಂಥಗಳಂತಹ ಉತ್ತಮ ಕೃತಿಗಳನ್ನು ಓದಿದಾಗ ಮನಸ್ಸಿಗೆ ಸಂತೋಷವಾಗುವುದರ ಜೊತೆಗೇ ಸ್ವಲ್ಪ ವಿಷಾದವೂ ಆಗುತ್ತದೆ — 'ವಿದ್ಯಾವಂತ' ರೆನಿಸಿಕೊಳ್ಳುವ ಜನರಿಗೆ ಇಂತಹ ಗ್ರಂಥಗಳ ವಿಷಯದಲ್ಲಿ ನಿರಾಸಕ್ತಿಯೇ ಹೆಚ್ಚಾಗಿರುವುದನ್ನು ನೋಡಿ. ಆದರೆ ಇದೇನೂ ಹೊಸದಲ್ಲವೇನೋ !

ಯೇ ನಾಮ ಕೇಚಿದಿಹ ನಃ ಪ್ರಥಯಂತ್ಯವಜ್ಞಾಂ
ಜಾನಂತಿ ತೇ ಕಿಮಪಿ ತಾನ್ ಪ್ರತಿ ನೈಷ ಯತ್ನಃ ।
ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನಧರ್ಮಾ
ಕಾಲೋ ಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ ॥ ಎಂದು

ಭವಭೂತಿ ಹೇಳಿದ್ದಾನಷ್ಟೆ! ಯಾರು ಓದಲಿ ಓದದಿರಲಿ, ಮೆಚ್ಚಲಿ ಬಿಡಲಿ ಲೇಖಕನಿಗೆ ಆತ್ಮತೃಪ್ತಿಯಾದರೂ ಆಗುವುದಷ್ಟೆ

ನಾನು ಕಳುಹಿಸಿದ ಕಿರುಹೊತ್ತಗೆ ತಮಗೆ ತಲುಪಲಿಲ್ಲವೆಂದು ಬರೆದಿದ್ದೀರಿ. ಅಂಚೆ ಇಲಾಖೆಯವರ ಕೃಪೆ ! ಮತ್ತೊಂದು ಪ್ರತಿಯನ್ನೂ ಸಂಮಾರ್ಜನೀ ಶತಕವೆಂಬ ಪುಸ್ತಕವನ್ನೂ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿದ್ದೇನೆ.

ವೃತ್ತ ವಿಲಾಸ ವೈಭವದ ಪರಿಚಯಾತ್ಮಕ ಲೇಖನ ಲೋಚನದಲ್ಲಿ ಬಂದ ಮೇಲೆ, ಆ ಸಂಚಿಕೆಯನ್ನು ತಮಗೆ ಕಳುಹಿಸುವಂತೆ ಬಿ. ಎಂ. ಶ್ರೀ ಪ್ರತಿಷ್ಠಾನದ ಕಾರ್ಯದರ್ಶಿ ಗಳಿಗೆ ತಿಳಿಸಿದ್ದೇನೆ.

ಇತಿ ವಂದನೆಗಳು

ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಸಂಸ್ಕೃತ ಸಾಹಿತ್ಯ

ಆಷಾಢಸ್ಯ ಪ್ರಶಮ/ಪ್ರಥಮ ದಿವಸೇ

ಬಿ. ಎಮ್. ಶ್ರೀ. ಸ್ಮಾರಕ ಪ್ರತಿಷ್ಠಾನದ ಆಶ್ರಯದಲ್ಲಿ 1981ರಲ್ಲಿ ನಡೆದ ಹಸ್ತಪ್ರತಿಶಾಸ್ತ್ರ ವಿಚಾರಗೋಷ್ಠಿಯಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಈ ಗ್ರಂಥದಲ್ಲಿನ "ಸಂಸ್ಕೃತದಲ್ಲಿ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನೆ" ಎಂಬ ಪ್ರಬಂಧದಲ್ಲಿ ಡಾ॥ ಕೆ. ಕೃಷ್ಣಮೂರ್ತಿಯವರು ಕೊಟ್ಟಿರುವ ಅನೇಕ ಪಾಠನಿರ್ಣಯದ ಉದಾಹರಣೆಗಳಲ್ಲಿ ಒಂದು ಕಾಳಿದಾಸನ ಮೇಘಸಂದೇಶ ದಿಂದ ಆಯ್ದ ಪದ್ಯಭಾಗ. ಈ ವಿಷಯದಲ್ಲಿ ಡಾ॥ಕೃಷ್ಣಮೂರ್ತಿಗಳ ನಿರೂಪಣೆ ಹೀಗಿದೆ[1]:

"ಯಕ್ಷನು ಮೇಘವನ್ನು ನೋಡಿದ್ದು ಎಂದು? ಯಾವ ತಿಂಗಳಲ್ಲಿ? ಎಂಬುದೇ ಸಮಸ್ಯೆ. ಮೇಘದೂತದ ಎರಡನೆಯ ಪದ್ಯದಲ್ಲಿ -

ಆಷಾಢಸ್ಯ ಪ್ರಥಮ ದಿವಸೇ ಮೇಘಮಾಶ್ಲಿಷ್ಟಸಾನುಂ
ವಪ್ರಕ್ರೀಡಾಪರಿಣತಗಜಪ್ರೇಕ್ಷಣೀಯಂ ದದರ್ಶ

ಎಂಬ ಪಾಠ ಮಲ್ಲಿನಾಥನಿಂದ ಆದೃತವಾಗಿದೆ. ಕಾಶ್ಮೀರದ ವ್ಯಾಖ್ಯಾನಕಾರನಾದ ವಲ್ಲಭದೇವ ಸ್ವೀಕರಿಸಿರುವ ಪಾಠ 'ಆಷಾಡಸ್ಯ ಪ್ರಶಮ ದಿವಸೇ' ಎಂಬುದು[2].

'ಚೈತ್ರ-ವೈಶಾಖ' ವಸಂತಋತು, 'ಜ್ಯೇಷ್ಠ-ಆಷಾಢ' ಗ್ರೀಷ್ಮಋತು ಎಂಬ ನಮ್ಮ ಆರು

---

1 ಹಸ್ತಪ್ರತಿಶಾಸ್ತ್ರ- ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1983. ಪುಟಗಳು 46,47.

2 ಈಗ ಉಪಲಬ್ಧವಿರುವ ಮೇಘದೂತದ ಟೀಕೆಗಳಲ್ಲಿ ಪ್ರಾಚೀನತಮವಾದುದು ವಲ್ಲಭ ದೇವನದು. ಇವನು ಮಲ್ಲಿನಾಥನಿಗಿಂತ ಸುಮಾರು 4 ಶತಮಾನಗಳಷ್ಟು ಹಿಂದಿನವನು. ವಲ್ಲಭದೇವನಿಂದ ಸ್ವೀಕೃತವಾದ ಶ್ಲೋಕಾರ್ಧದ ಪಾಠ ಮತ್ತು ಅದರ ಮೇಲಿನ ವ್ಯಾಖ್ಯಾನ ಇಂತಿವೆ :

ಆಷಾಢಸ್ಯ **ಪ್ರಶಮ ದಿವಸೇ** ಮೇಘಮಾಶ್ಲಿಷ್ಟಸಾನುಂ
ವಪ್ರಕ್ರೀಡಾಪರಿಗಣತಗಜಪ್ರೇಕ್ಷಣೀಯಂ ದದರ್ಶ ॥ (2ನೆಯ ಪದ್ಯದ ಉತ್ತರಾರ್ಧ)
ಆಷಾಢಸ್ಯ ಪ್ರಶಮ ದಿವಸೇ ಸಮಾಪ್ತಿದಿನೇ ಗ್ರೀಷ್ಮಾವಸಾನೇ । ಕೇಚಿತ್ತು
ಶಕಾರ ಥಕಾರಯೋರ್ಲಿಪಿ ಸಾರೂಪ್ಯ ಮೋಹಾತ್ ಪ್ರಥಮ ಇತ್ಯೂಚುಃ
ಕಥಂಕಥಮಪಿಚೈತಮೇವಾರ್ಥಂ ಪ್ರತಿಪನ್ನಾಃ । ವರ್ಷಾಕಾಲಸ್ಯ
ಪ್ರಸ್ತುತತ್ವಾದಾದಿ ದಿನ ಮಿತ್ಯೇತತ್ತ್ವತೀವ ವಿರುದ್ಧಮ್ ।

-Kalidasa's Meghaduta, Ed. E. Hultzsch, Royal Asiatic Society, London 1911.

ಋತುಗಳ ಕಲ್ಪನೆಯಲ್ಲಿ ಆಷಾಢ ಬೇಸಗೆಯಲ್ಲಿ ಬರುವುದೇ ಹೊರತು ಮಳೆಗಾಲದಲ್ಲಿ ಅಲ್ಲವಾದ್ದರಿಂದ ಇದನ್ನು ಪ್ರಶಮ ದಿವಸವೆಂದು ಮಾರ್ಪಡಿಸುವ ಯತ್ನ ನಡೆದಂತೆ ಕಾಣುತ್ತದೆ. ಇದನ್ನು ಒಪ್ಪಿದರೆ

ಶೇಷಾನ್ ಮಾಸಾನ್ ಗಮಯ ಚತುರೋ ಲೋಚನೇ ಮೀಲಯಿತ್ವಾ ಎಂದು[3] ಮುಂದೆ ಕಾಲಿದಾಸ ಹೇಳುವ ದಿನಗಣನೆಯ ಲೆಕ್ಕ ತಪ್ಪುತ್ತದೆ. ಆಷಾಢದ ಆದಿಯಿಂದ ಎಂದರೆ ಏಕಾದಶಿಯಿಂದ ಉತ್ಥಾನದ್ವಾದಶಿಯ ವೇಳೆಗೆ ನಾಲ್ಕು ತಿಂಗಳ ಅವಧಿ ಯಾಗುತ್ತದೆಯೇ ಹೊರತು ಆಷಾಢದ ಅಂತ್ಯದಿಂದ ಅಲ್ಲ. ಘಟಖರ್ಪರ ಕಾವ್ಯದಲ್ಲೂ ವರ್ಷಾಋತುವನ್ನು 'ಆಷಾಢಾದಿ'ಯೆಂದೇ ಹೇಳಿದೆ. ಇದಕ್ಕೆ ಕಾರಣ ಕಾಲಿದಾಸನ ಕಾಲದಲ್ಲಿ ವರ್ಷದಲ್ಲಿ ಚಾತುರ್ಮಾಸಗಳ ಮೂರೇ ಋತುಗಳನ್ನು ಗಣನೆ ಮಾಡು ತ್ತಿದ್ದರು; ವರ್ಷಾಋತು ಆಷಾಢದಿಂದಲೇ ಆರಂಭವಾಗುತ್ತಿತ್ತು, ಜಾಯಸೀಕವಿಯ 'ಪದಮಾವತ್' ಎಂಬ ಹಿಂದೀಕಾವ್ಯದಲ್ಲೂ 'ಚರ್ಹ ಆಸಾಢ ಗಂಗನ್ ಘನ ಸಾಜಾ' ಮುಂತಾಗಿ ಈ ಕವಿಸಮಯ ಉತ್ತರಕಾಲದಲ್ಲೂ ಪ್ರಚಲಿತ ವಿದ್ದುದು ಕಾಣುತ್ತದೆ. ಆದ್ದರಿಂದ 'ಪ್ರಥಮ ದಿವಸೇ' ಎಂದೇ ಇಲ್ಲಿ ಪಾಠನಿರ್ಣಯ ಸರಿ. ಇದಕ್ಕೆ ಮಲ್ಲಿನಾಥನ ವ್ಯಾಖ್ಯಾನದಿಂದಲೂ ಪುಷ್ಟಿ ದೊರೆಯುತ್ತದೆ.''

ಮೇಲಿನ ವಾದಸರಣಿಯನ್ನು ವಿಮರ್ಶಿಸಿ ಮೂಲಪಾಠವನ್ನು ನಿರ್ಣಯಿಸುವುದೇ ಈ ಲೇಖನದ ಉದ್ದೇಶ.

ಋತುಸಂಖ್ಯಾ ವಿಷಯ :

ವೇದಸಂಹಿತೆಗಳಲ್ಲಿ ವರ್ಷವನ್ನು ಮೂರು ಭಾಗಗಳಾಗಿ ವಿಭಜಿಸುವ (ಎಂದರೆ ಮೂರು ಋತುಗಳು) ಕಲ್ಪನೆ ಕಂಡುಬಂದರೂ ಬ್ರಾಹ್ಮಣಗಳ ಕಾಲಕ್ಕೇ ಐದು ಅಥವಾ ಆರು ಋತುಗಳನ್ನಾಗಿ ಭಾಗಮಾಡುವ ರೂಢಿ ಬಂದಿತ್ತು. ತೈತ್ತಿರೀಯ ಬ್ರಾಹ್ಮಣದಲ್ಲಿ ವರ್ಷಕ್ಕೆ

---

3 ಅದೇ ಗ್ರಂಥದಲ್ಲಿ ಕೊಟ್ಟಿರುವಂತೆ ವಲ್ಲಭದೇವನಿಂದ ಸ್ವೀಕೃತವಾದ ಈ ಶ್ಲೋಕಾರ್ಧದ ಪಾಠ ಮತ್ತು ಅದರ ವ್ಯಾಖ್ಯಾನ ಇಂತಿವೆ :

ಶಾಪಾಂತೋಮೇ ಭುಜಗಶಯನಾದುತ್ಥಿತೇ ಶಾರ್ಙ್ಗಪಾಣೌ
ಮಾಸಾನನ್ಯಾನ್ಗಮಯ ಚತುರೋ ಲೋಚನೇ ಮೀಲಯಿತ್ವಾ ।

(107ನೆಯ ಪದ್ಯದ ಪುರ್ವಾರ್ಧ)

ಕಾರ್ತಿಕ ಶುಕ್ಲ ದ್ವಾದಶ್ಯಾಂ ಭುಜಗಶಯನಾಚ್ಛೇಷಕಲ್ಪಾದುತ್ಥಿತೇ ಶಾರ್ಙ್ಗಪಾಣೌ ಹರೌ ಮಮಶಾಪಾಂತೋ ಭವಿಷ್ಯತಿ । ತದೈವ ವರ್ಷಸ್ಯ ಪರಿಪೂರ್ಣತ್ವಾತ್। ಅತಶ್ಚಾದ್ಯಾರಭ್ಯ ಮಾಸ ಚತುಷ್ಟಯಂ ಲೋಚನೇ ಮೀಲಯಿತ್ವಾ ಯಥಾಕಥಂಚಿತ್ ಗಮಯಾತಿವಾಹಯ ।

ಐದು ಋತುಗಳೆಂದು ಹೇಳಿದ್ದರೆ, ಐತರೇಯ ಬ್ರಾಹ್ಮಣದಲ್ಲಿ ಹೇಮನ್ತ ಶಿಶಿರಗಳನ್ನು ಒಂದಾಗಿ ಎಣಿಸಿ ಐದು ಋತುಗಳೆಂದು ಹೇಳಿದೆ. ಶತಪಥ ಬ್ರಾಹ್ಮಣದಲ್ಲಿ ವಸಂತ ಗ್ರೀಷ್ಮ ವರ್ಷ ಋತುಗಳನ್ನು ದೇವಋತುಗಳೆಂದೂ ಶರತ್ ಹೇಮನ್ತ ಶಿಶಿರಗಳನ್ನು ಪಿತೃಋತುಗಳೆಂದೂ ಕರೆದಿದೆ.[4]

ಯಾಜುಷ ವೇದಾಂಗ ಜ್ಯೌತಿಷದಲ್ಲಿ ಸೂರ್ಯನ 4½ ನಕ್ಷತ್ರ ಭೋಗ ಕಾಲವು (ಎಂದರೆ ಸೂರ್ಯನು 2 ರಾಶಿಗಳಲ್ಲಿ ಸಂಚರಿಸುವ ಕಾಲ) ಒಂದು ಋತುವೆಂದೂ, ವರ್ಷಕ್ಕೆ 6 ಋತುಗಳು ಅಥವಾ 2 ಅಯನಗಳೆಂದೂ ಹೇಳಿದೆ.[5] ಕೌಟಿಲೀಯ ಅರ್ಥಶಾಸ್ತ್ರದಂತೆ ಎರಡು ತಿಂಗಳುಗಳಿಗೆ ಒಂದು ಋತು, ಶ್ರಾವಣ ಭಾದ್ರಪದಗಳು ಸೇರಿ ವರ್ಷಋತು ಮತ್ತು ವರ್ಷಋತುವಿನಿಂದ ದಕ್ಷಿಣಾಯನ ಪ್ರಾರಂಭ.[6] ವಾಲ್ಮೀಕಿ ರಾಮಾಯಣದಲ್ಲಿ ಆರು ಋತುಗಳ ಉಲ್ಲೇಖವಿದೆ.[7] ಕಾಲಿದಾಸನ ಋತುಸಂಹಾರದಲ್ಲಿ ಆರು ಋತುಗಳ ವರ್ಣನೆಯಿದೆ.

ಈ ಎಲ್ಲ ಆಧಾರಗಳೂ ಕಾಲಿದಾಸನ ಕಾಲದಲ್ಲಿ ವರ್ಷದಲ್ಲಿ ಆರು ಋತುಗಳ

4 ಪಂಚ ವಾ ಋತವಃ ಸಂವತ್ಸರಃ (ತೈತ್ತಿರೀಯ ಬ್ರಾಹ್ಮಣಂ 2, 7, 10, 2)
-ಆನಂದಾಶ್ರಮ ಮುದ್ರಣಾಲಯ, ಪುಣೆ, 1938

ದ್ವಾದಶ ಮಾಸಾಃ ಪಂಚರ್ತವೋ ಹೇಮಂತಶಿಶಿರಯೋಃ ಸಮಾಸೇನ
(ಐತರೇಯ ಬ್ರಾಹ್ಮಣಂ 1, 1) - ಆನಂದಾಶ್ರಮ ಮುದ್ರಣಾಲಯ, ಪುಣೆ 1930

ವಸನ್ತೋ ಗ್ರೀಷ್ಮೋ ವರ್ಷಾಃ। ತೇ ದೇವಾ ಋತವಃ ಶರದ್ಧೇಮನ್ತಃ ಶಿಶಿರಸ್ತೇ
ಪಿತರೋ ... (ಶತಪಥ ಬ್ರಾಹ್ಮಣಂ 2, 1, 3, 1)

– Ed. A. Weber, Chaukhamba Sanskrit Series Office, Varanasi, 1964.

5 ಅರ್ಧಪಂಚಮ ಭಸ್ತ್ವೃತುಃ (ಯಾ. ಜ್ಯೌ. 10)
ತ್ರಿಶತ್ಯಹ್ನಾಂ ಸ ಷಟ್‌ಷಷ್ಟಿರಬ್ದಃ ಷಟ್ಟರ್ತವೋ*ಽಯನೇ (ಯಾ. ಜ್ಯಾ. 28)

– Vedanga Jyauthisha, Ed. Dr. R. Shamasastry, Mysore 193
(ಸಂಸ್ಕೃತ ಭಾಗದ 8ನೇ ಪುಟ ಮತ್ತು 49ನೇ ಪುಟ)

* (ಷಟ್ಟರ್ತವೋ ಎನ್ನುವುದಕ್ಕೆ ಪಂಚರ್ತವೋ ಎಂಬ ಪಾಠಾಂತರವಿದೆ. ಆದರೆ ಇದು 19ನೆಯ ಶ್ಲೋಕದಲ್ಲಿ ಹೇಳಿರುವ ಋತುಪ್ರಮಾಣಕ್ಕೆ ಹೊಂದುವುದಿಲ್ಲವಾದುದರಿಂದ ಗ್ರಾಹ್ಯವಲ್ಲ.)

6 ದ್ವೌಮಾಸಾವೃತುಃ। ಶ್ರಾವಣಃ ಪ್ರೋಷ್ಠಪದಶ್ಚ ವರ್ಷಾಃ। ವರ್ಷಾದಿ ದಕ್ಷಿಣಾಯನಂ।

-ಕೌಟಲೀಯಾರ್ಥಶಾಸ್ತ್ರಂ, Oriental Research Institute, Mysore. 4th edition. 1960.(ಅಷ್ಟತ್ರಿಂಶಂ ಪ್ರಕರಣಂ, ದೇಶಕಾಲಮಾನಂ, ತ್ರಿಂಶೋಽಧ್ಯಾಯಃ (P. 116)

7 ತತೋ ಯಜ್ಞೇ ಸಮಾಪ್ತೇ ತು ಋತೂನಾಂ ಷಟ್ ಸಮತ್ಯಯುಃ।
ತತಶ್ಚ ದ್ವಾದಶೇ ಮಾಸೇ ಚೈತ್ರೇ ನಾವಮಿಕೇ ತಿಥೌ ॥
(ಬಾಲಕಾಂಡ, ಸರ್ಗ 18, ಶ್ಲೋಕ 8)

-ವಾಲ್ಮೀಕಿ ರಾಮಾಯಣಂ, ಗುಜರಾತೀ ಪ್ರಿಂಟಿಂಗ್ ಪ್ರೆಸ್, ಮುಂಬಯೀ, 1912.

ಗಣನೆಯಿತ್ತೆಂಬುದನ್ನು ಸಮರ್ಥಿಸುತ್ತವೆ. ಡಾ|. ಕೃಷ್ಣಮೂರ್ತಿಯವರು ಯಾವ ಆಧಾರದ ಮೇಲೆ "ಕಾಲಿದಾಸನ ಕಾಲದಲ್ಲಿ ವರ್ಷದಲ್ಲಿ ಚಾತುರ್ಮಾಸಗಳ ಮೂರೇ ಋತುಗಳನ್ನು ಗಣನೆ ಮಾಡುತ್ತಿದ್ದರು" ಎಂದು ಬರೆದಿರುತ್ತಾರೋ ತಿಳಿಯದು.

ಘಟಕರ್ಪರ ಕಾವ್ಯವನ್ನು ನೋಡಲು ನನಗೆ ಸಾಧ್ಯವಾಗಲಿಲ್ಲ. ಅರ್ಥಶಾಸ್ತ್ರದಲ್ಲಿ ಶ್ರಾವಣಭಾದ್ರಪದಗಳು ಸೇರಿ ವರ್ಷಋತುವೆಂಬ ಉಲ್ಲೇಖವಿದ್ದು ಅದೇ ಈಗಲೂ ರೂಢಿಯಲ್ಲಿರುವಾಗ, ಅನಿಶ್ಚಿತಕಾಲದ ಮತ್ತು ಅಜ್ಞಾತನಾಮ ಕವಿಯ ಘಟಕರ್ಪರ ಕಾವ್ಯ ಮತ್ತು ಈವಿನ ಹಿಂದಿ ಕವಿಯ ಪ್ರಯೋಗಗಳ ಆಧಾರದ ಮೇಲೆ ಕಾಲಿದಾಸನ ಕಾಲದಲ್ಲಿ "ವರ್ಷಋತು ಆಷಾಢದಿಂದಲೇ ಆರಂಭವಾಗುತ್ತಿತ್ತು" ಎಂದು ಹೇಳುವುದು ಸಮಂಜಸವಾಗಿ ಕಾಣುವುದಿಲ್ಲ.

ಋತುಧರ್ಮ : ಸೂರ್ಯನ ಸುತ್ತಲೂ ಭೂಮಿಯ ಚಲನೆಯೇ ಋತುಧರ್ಮಗಳಿಗೆ ಕಾರಣವಾದುದರಿಂದ ಸೌರಮಾಸಗಳನ್ನವಲಂಬಿಸಿ ಋತುಗಣನೆ ಮಾಡುವುದೇ ಸರಿಯಾದ ಮಾರ್ಗ. ಪ್ರಾಚೀನ ಭಾರತೀಯ ಖಗೋಳ ವಿಜ್ಞಾನಿಗಳು (astro-nomers) ಇದನ್ನು ಅರಿತಿದ್ದರು. ಪಂಚಸಿದ್ಧಾಂತಿಕಾ ಎಂಬ ಗ್ರಂಥದಲ್ಲಿ ವರಾಹ ಮಿಹಿರಾಚಾರ್ಯನೂ ಬ್ರಾಹ್ಮಸ್ಫುಟ ಸಿದ್ಧಾಂತದಲ್ಲಿ ಬ್ರಹ್ಮಗುಪ್ತನೂ, ಮಕರಮಾಸದಿಂದ ಆರಂಭಿಸಿ ಎರಡೆರಡು ಸೌರಮಾಸಗಳಿಗೊಂದೊಂದರಂತೆ ಶಿಶಿರಾದಿ ಆರು ಋತುಗಳೆಂದು ಹೇಳಿದ್ದಾರೆ.[8] ಸೌರಮಾನ ಚಾಂದ್ರಮಾನಗಳ ಸಮನ್ವಯಕ್ಕಾಗಿ ಅಧಿಕಮಾಸ ಕ್ಷಯಮಾಸಗಳನ್ನು ಕಲ್ಪಿಸಿರುವುದರಿಂದ ಚಾಂದ್ರಮಾಸಗಳ ಆರಂಭಕಾಲ ಅನಿಯತ. ಉದಾಹರಣೆಗೆ, ಆಷಾಢ ಶುದ್ಧ ಪಾಡ್ಯವು ಮಿಥುನ ಮಾಸದಲ್ಲಿ ಯಾವಾಗಲಾದರೂ ಬರಬಹುದು. ಆದುದರಿಂದ ಚೈತ್ರ-ವೈಶಾಖ ವಸಂತಋತು ಇತ್ಯಾದಿ ಋತುಗಣನೆ ಬಹಳ ಸ್ಥೂಲವಾದುದು. ಈ

---

8 (i) ಉದಗಯನಂ ಮಕರಾದಾವೃತವಃ ಶಿಶಿರಾದಯಶ್ಚ ಸೂರ್ಯವಶಾತ್ ।
ದ್ವಿಭವನಕಾಲಸಮಾನಾ ದಕ್ಷಿಣಮಯನಂ ಚ ಕರ್ಕಟಕಾತ್ ॥
(ಪೌಲಿಶ ಸಿದ್ಧಾನ್ತದ 25ನೆಯ ಶ್ಲೋಕ)

(The Panchasiddhantika of Varahamihira, Ed. G. Thibaut & Sudhakara Dwivedi, Lazarus & Co., Benares, 1889
(ಸಂಸ್ಕೃತ ಭಾಗದ 9ನೆಯ ಪುಟ)

ದ್ವೌದ್ವೌ ರಾಶೀ ಮಕರಾದ್ಯತವಃ ಷಟ್ ಸೂರ್ಯಗತಿವಶಾದ್ಜ್ಯೋಜ್ಯಾಃ ।
ಶಿಶಿರವಸಂತಗ್ರೀಷ್ಮವರ್ಷಾ ಶರದಃ ಸ ಹೇಮನ್ತಾಃ ॥ (ಬ್ರಾಹ್ಮಸ್ಫುಟಸಿದ್ಧಾನ್ತ)
ಈ ಎರಡು ಪದ್ಯಗಳೂ ಭಟ್ಟೋತ್ಪಲನಿಂದ ಬೃಹತ್ಸಂಹಿತಾ ಟೀಕೆಯಲ್ಲಿ ಉದಾಹೃತವಾಗಿವೆ.

- ಶ್ರೀವರಾಹ ಮಿಹಿರಾಚಾರ್ಯವಿರಚಿತಾ ಭಟ್ಟೋತ್ಪಲ ವಿವೃತಿಸಹಿತಾ ಬೃಹತ್ಸಂಹಿತಾ (ವಾರಾಣಸೇಯ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸೀ, 1968) ಪುಟ 23.

ಕಾರಣದಿಂದ ಚಾಂದ್ರಮಾಸವನ್ನನುಸರಿಸಿ ವರ್ಷಋತುವಿನ ಆರಂಭದ ಆಧಾರದ ಮೇಲೆ ಪಾಠನಿರ್ಣಯ ಮಾಡುವುದು ಸಮರ್ಪಕವಲ್ಲ.

ಕವಿಯು ಉಳಿದ ನಾಲ್ಕು ತಿಂಗಳುಗಳು (ಶೇಷಾನ್ ಮಾಸಾನ್ ಚತುರಃ) ಎಂದು ಮಾತ್ರ ಹೇಳಿದ್ದಾನೆಯೇ ಹೊರತು ಅವು ಮಳೆಗಾಲದ ತಿಂಗಳುಗಳೆಂದು ಹೇಳಿಲ್ಲವಾದ ಕಾರಣ, ಶ್ರಾವಣ ಭಾದ್ರಪದಗಳು ವರ್ಷಋತುವೇ ಹೊರತು ಆಷಾಢಾದಿ ನಾಲ್ಕು ತಿಂಗಳು ಹೇಗೆ ವರ್ಷಋತುವಾದೀತೆಂಬ ಪ್ರಶ್ನೆಯಾಗಲೀ ಮೂರು ಋತುಗಳನ್ನವಲಂಬಿಸಿದ ಉತ್ತರವಾಗಲೀ ಅಸಂಗತ ಎಂದು ಮಲ್ಲಿನಾಥ ಅಭಿಪ್ರಾಯಪಟ್ಟಿದ್ದಾನೆ.[9]

ನಾಲ್ಕು ತಿಂಗಳುಗಳು :

ಶಾಪಾಂತಕಾಲವು ಉತ್ಥಾನ ದ್ವಾದಶೀ (ಕಾರ್ತಿಕ ಶುಕ್ಲ ದ್ವಾದಶೀ) ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆಷಾಢ ಪ್ರಥಮ ದಿವಸದಿಂದ ಶಾಪಾಂತಕಾಲಕ್ಕೆ ಹೇಗೆ ನಾಲ್ಕು ತಿಂಗಳು ಎಂದು ವಿವರಿಸಲು ವ್ಯಾಖ್ಯಾನಕಾರರು ಬಹಳ ಶ್ರಮಪಟ್ಟಿದ್ದಾರೆ.

ಆಷಾಢ ಶುಕ್ಲ ಪಾಡ್ಯಕ್ಕೂ ಶಾಪಾಂತಕ್ಕೂ ಇರುವ ಅಂತರ ನಾಲ್ಕು ತಿಂಗಳು ಗಳಿಗಿಂತ ಹತ್ತು ದಿನ ಹೆಚ್ಚಾದರೆ, ಆಷಾಢದ ಕೊನೆಯ ದಿನಕ್ಕೂ ಶಾಪಾಂತಕ್ಕೂ ಇರುವ ಅಂತರ 4 ತಿಂಗಳುಗಳಿಗೆ 20 ದಿನ ಕಡಿಮೆಯಾಗುವುದರಿಂದ, (ಹತ್ತು ದಿನಗಳ) ಸ್ವಲ್ಪ ವ್ಯತ್ಯಾಸ

(i) ಸೂರ್ಯನು 12 ರಾಶಿಗಳನ್ನು ಕ್ರಮಿಸುವ ಕಾಲ (ಎಂದರೆ ಭೂಮಿ ಸೂರ್ಯನನ್ನು ಒಂದು ಸಲ ಸುತ್ತುವ ಕಾಲ) ಸೌರವರ್ಷ (Sidereal Year). ಆದರೆ ಅಯನ ಚಲನೆ (Precession of the Equinoxes)ಯ ಕಾರಣದಿಂದ ಎರಡು ಅಯನಗಳು ಸೇರಿ ಆಗುವ ಕಾಲ ಸೌರವರ್ಷಕ್ಕಿಂತ ಸ್ವಲ್ಪ ಕಡಿಮೆ. ಇದನ್ನು ಸಾಯನ ವರ್ಷ (Tropical year) ಎನ್ನುತ್ತಾರೆ. ಋತುಗಳು ಈ ಸಾಯನವರ್ಷವನ್ನವಲಂಬಿಸಿವೆ. ಈಗ ಸಾಯನ ವರ್ಷ ಸೌರವರ್ಷಕ್ಕಿಂತ ಸುಮಾರು 24 ದಿನ ಮುಂಚಿತವಾಗಿ ಪ್ರಾರಂಭವಾಗುತ್ತದೆ. ಈ ವ್ಯತ್ಯಾಸ ಮುಂದಕ್ಕೆ ಹೆಚ್ಚುತ್ತಾ ಹೋಗುತ್ತದೆ. ವರಾಹ ಮಿಹಿರಾಚಾರ್ಯನ ಕಾಲದಲ್ಲಿ ಸೌರವರ್ಷ ಮತ್ತು ಸಾಯನವರ್ಷ ಪ್ರಾರಂಭ ಕಾಲಗಳ ವ್ಯತ್ಯಾಸ ಅತ್ಯಲ್ಪವಾಗಿತ್ತು.

9 ಅತ್ರ ಕೈಶ್ಚಿತ್ 'ನಭೋ ನಭಸ್ಯಯೋರೇವ ವಾರ್ಷಿಕತ್ವಾತ್ಕಥಮಾಷಾಢಾದಿ ಚತುಷ್ಟಯಸ್ಯ ವಾರ್ಷಿಕತ್ವಮುಕ್ತಮಿ'ತಿ ಚೋದಯಿತ್ವಾ 'ಋತುತ್ರಯ ಪಕ್ಷಾಶ್ರಯಣಾದವಿರೋಧಃ' ಇತಿ ಪರ್ಯಹಾರಿ ತತ್ಸರ್ವಮಸಂಗತಮ್ । ಅತ್ರಗತ ಶೇಷಾಶ್ಚತ್ವಾರೋ ಮಾಸಾ ಇತ್ಯುಕ್ತಂ ಕವಿನಾ ನತು ತೇ ವಾರ್ಷಿಕಾ ಇತಿ । ತಸ್ಮಾದನುಕ್ತೋಪಾಲಂಭ ಏವ । (ಸಂಜೀವಿನೀ ಟೀಕಾ)

-ಮಹಾಕವಿ ಕಾಲಿದಾಸ ವಿರಚಿತಂ ಮೇಘದೂತಂ, ಸಂಜೀವಿನೀ ಚಾರಿತ್ರವರ್ಧಿನೀ ಭಾವ ಬೋಧಿನೀ ಸೌದಾಮಿನೀ ವ್ಯಾಖ್ಯಾ ಚತುಷ್ಟಯೋಪೇತಂ (ಚೌಖಂಬಾ ಸಂಸ್ಕೃತ ಸೀರೀಸ್ ಆಫೀಸ್, ವಾರಾಣಸಿ- 1962), ಪುಟ 122

ಲೆಕ್ಕಕ್ಕಿಲ್ಲವೆಂದು ಮಲ್ಲಿನಾಥನ ವಿವರಣೆ.[10]

ಈ ವಿಷಯದಲ್ಲಿ ಚಾರಿತ್ರವರ್ಧನನ ವ್ಯಾಖ್ಯಾನವಂತೂ ವಿಚಿತ್ರವಾಗಿದೆ. ಮೊದಲು 'ಪ್ರಥಮ' ಶಬ್ದಕ್ಕೆ 'ಪ್ರವರ' ಎಂದರೆ ಪ್ರಧಾನ ಎಂಬ ಅರ್ಥವನ್ನು ತೆಗೆದುಕೊಂಡು ಪ್ರಥಮ ದಿವಸವೆಂದರೆ ಅಮಾವಾಸ್ಯೆಯೆಂದು ವಿವರಿಸಿದ್ದಾನೆ. ಅಮಾವಾಸ್ಯೆಯ ದಿನ ಕೃತ್ಯಾ(ಮಾಂತ್ರಿಕ ಕ್ರಿಯೆ) ಮೊದಲಾದುವುಗಳನ್ನು ಆರಂಭಿಸು ವುದೇ ಅದರ ಪ್ರಾಧಾನ್ಯಕ್ಕೆ ಅವನು ಕೊಡುವ ಕಾರಣ ! ಹೀಗೆ ಪ್ರಥಮ ದಿವಸ ಪ್ರಶಮ ದಿವಸಗಳೆರಡಕ್ಕೂ ಅಮಾವಾಸ್ಯೆಯೆಂಬ ಒಂದೇ ಅರ್ಥವನ್ನು ಹೇಳಿದ ಮೇಲೆ ಅದನ್ನು ಅಲ್ಲಿಗೇ ಕೈಬಿಟ್ಟು ಪ್ರಥಮ ದಿವಸವೆಂದರೆ ಪ್ರಸಿದ್ಧ ವಿಷ್ಣು ದಿನವಾದ ಪ್ರಥಮೈಕಾದಶೀ ಎಂದು ಅರ್ಥ ಹೇಳಿದ್ದಾನೆ. ಅಲ್ಲಿಂದ ಉತ್ಥಾನ ದ್ವಾದಶಿಗೆ 4 ತಿಂಗಳಾಗುವುದರಿಂದ ಸಮಸ್ಯೆ ಪರಿಹಾರವಾದಂತಾಯಿತು.[11]

ಡಾ|. ಕೃಷ್ಣಮೂರ್ತಿಯವರೂ ಸಹ ''ಆಷಾಢದ ಆದಿಯಿಂದ ಎಂದರೆ ಏಕಾದಶಿಯಿಂದ ಉತ್ಥಾನ ದ್ವಾದಶಿಯ ವೇಳೆಗೆ ನಾಲ್ಕು ತಿಂಗಳ ಅವಧಿಯಾಗುತ್ತದೆ'' ಎಂದು ಬರೆದಿರುತ್ತಾರೆ. 30 ದಿನ ಪ್ರಮಾಣದ ತಿಂಗಳಿನಲ್ಲಿ 11ನೆಯ ದಿನವನ್ನು ಆದಿಯೆನ್ನುವುದು ಉಚಿತವಲ್ಲ.

ಆಷಾಢಮಾಸ :

ಈಗ ತಮಿಳುನಾಡು ಕೇರಳಗಳನ್ನು ಬಿಟ್ಟು ಉಳಿದ ದಕ್ಷಿಣ ಭಾರತದಲ್ಲಿ ಶುಕ್ಲಾದಿ (ಅಮಾಂತ) ಚಾಂದ್ರಮಾಸವೂ, ಬಂಗಾಳ ಅಸ್ಸಾಂ ಹೊರತಾದ ಉತ್ತರ ಭಾರತದಲ್ಲಿ

---

10 ಕಥಂ ತರ್ಹಿ 'ಶಾಪಾನ್ತೋ ಮೇ ಭುಜಗಶಯನಾದುತ್ಥಿತೇ ಶಾರ್ಙ್ಗಪಾಣೌ' ಇತ್ಯಾದಿನಾ ಭಗವತ್ಪ್ರಬೋಧಾವಧಿಕಸ್ಯ ಶಾಪಸ್ಯ ಮಾಸಚತುಷ್ಟಯಾವಶಿಷ್ಟಸ್ಯೋಕ್ತಿಃ, ದಶದಿವಸಾಧಿಕ್ಯಾದಿತಿ ಚೇತ್ -ಸ್ವಪಕ್ಷೇऽಪಿ ಕಥಂ ಸಾ, ವಿಶಂತಿ ದಿವಸೈರ್ನ್ಯೂನತ್ವಾದಿತಿ ಸಂತೋಷ್ಟವ್ಯಂ । ತಸ್ಮಾದೀಷ ದ್ವೈಷಮ್ಯಮವಿವಕ್ಷಿತಮಿತಿ ಸುಷ್ಠೂಕ್ತಂ ಪ್ರಥಮ ದಿವಸೇ ಇತಿ ॥ (ಸಂಜೀವಿನೀ ಟೀಕಾ) -ಅದೇ ಗ್ರಂಥ ಪುಟ 4

11 ಆಷಾಢಸ್ಯ ಪ್ರಥಮಃ ಪ್ರವರಶ್ಚಾಸೌ ದಿವಸಶ್ಚ । ಯಸ್ಮಿನ್ ವಾಸರೇ ಸ ಮಾಸಃ ಪೂರ್ತಿಮಿಯರ್ತಿ ಸಾ ಆಷಾಢ್ಯಮಾವಾಸ್ಯೇತಿ ಭಾವಃ । ತಸ್ಯ ಪ್ರವರತ್ವಂ ಚ ಕೃತ್ಯಾದಿ ಕಾರ್ಯಾಣಾಂ ತಸ್ಮಿನ್ ಪ್ರಾರಭ್ಯಮಾಣತ್ವಾತ್ । ಆದಿಪ್ರವರೌ ಪ್ರಥಮೌ ಪ್ರಧಾನೇ ಪರಿಕೀರ್ತಿತೌ । ಪ್ರಥಮ ದಿವಸ ಇತಿ ಪಾಠೇ ಮಾಸಸ್ಯಾವಸಾನೋ ದಿವಸಃ ಸಏವ ಪ್ರಶಮ ದಿವಸಃ ಪ್ರಥಮಃ ಪ್ರಖ್ಯಾತೋ ವಿಷ್ಣುದಿವಸಃ ಪ್ರಥಮೈಕಾದಶೀತ್ಯರ್ಥಃ । ತತ್ರಾತ ಏವ 'ಶಾಪಾನ್ತೋ ಮೇ ಭುಜಗಶಯನಾ ದುತ್ಥಿತೇ ಶಾರ್ಙ್ಗಪಾಣೌ' 'ಮಾಸಾನೇತಾನ್ಗಮಯ ಚತುರ' ಇತಿ ವಾಕ್ಯಂ ॥ (ಚಾರಿತ್ರವರ್ಧಿನೀ ಟೀಕಾ) -ಅದೇ ಗ್ರಂಥ, ಪುಟ 5

ಕೃಷ್ಣಾದಿ (ಪೂರ್ಣಮಾನ್ತ) ಚಾಂದ್ರಮಾಸವೂ ಪ್ರಚಾರದಲ್ಲಿವೆ. ಕೃಷ್ಣಾದಿ ಮಾಸವು ಅದೇ ಹೆಸರಿನ ಶುಕ್ಲಾದಿಮಾಸದ ಶುಕ್ಲಪಕ್ಷ ಮತ್ತು ಅದರ ಹಿಂದಿನ ತಿಂಗಳಿನ ಕೃಷ್ಣಪಕ್ಷ ಸೇರಿ ಆಗುತ್ತದೆ. ಆದುದರಿಂದ ಎರಡು ವಿಧದ ಮಾಸಗಳಿಗೂ ಶುಕ್ಲಪಕ್ಷ ಸಮಾನ. ಬಂಗಾಳದಲ್ಲಿ ಮೇಷಾದಿ ಸೌರಮಾಸಗಳಿಗೇ ವೈಶಾಖಾದಿ ಹೆಸರುಗಳನ್ನು ಹೇಳುತ್ತಾರೆ.[12]

ಶುಕ್ಲಾದಿ ಕೃಷ್ಣಾದಿ ಮಾಸಗಳೆರಡೂ ಬಹಳ ಪ್ರಾಚೀನ ಕಾಲದಿಂದಲೂ

---

12 (i) In the ಪೂರ್ಣಮಾನ್ತ system, each month beginning with a full moon is named after the next ಅಮಾಂತ month, but takes in the dark fortnight preceding each new moon.

-[Indian Chronology; L.D. Swamikannupillai, (reprint) Asian Educational Services, New Delhi, 1982] Page (41), Section 109

A dark fortnight in nth ಅಮಾಂತ month is in (n+1)th ಪೂರ್ಣಮಾಂತ month.- Same book, Page (41), Section 110

(ii) The solar months like ವೈಶಾಖ, ಜ್ಯೇಷ್ಠ etc., actually begin from the moment of ಸಂಕ್ರಾಂತಿ or solar transit into ನಿರಯಣರಾಶಿ's like ಮೇಷ, ವೃಷ, etc. The lunar months which have also got the same names begin from the moment of new moon (ಅಮಾವಾಸ್ಯಾ) occurring after the above transit time and before the next transit. The day next to ಅಮಾವಾಸ್ಯಾ is the first day of the month. This is according to the new-moon-ending or ಶುಕ್ಲಾದಿ system or the ಮುಖ್ಯಮಾನ as prevalent in Maharashtra, Gujarat, Andhra Pradesh and Mysore.

– Advance Ephemeris of planets' positions for 100 years from 1951 to 2050 A.D. (N.C. Lahiri, Third edition, 1982); page ix of Introduction.

In North India also (in all states except Bengal and Assam) the lunar calendar is used; but there the months are full-moon-ending, i.e. ಕೃಷ್ಣಾದಿ or ಗೌಣ beginning from the day after full moon (ಪೂರ್ಣಮಾ) about 15 days before the beginning of months of the same name of the

above-mentioned ಶುಕ್ಲಾದಿ system........ The ಕೃಷ್ಣಪಕ್ಷ of the ಮುಖ್ಯಮಾನ and the ವದಿ half of ಗೌಣಮಾನ are related in the following way — ಚೈತ್ರ ಕೃಷ್ಣ is equivalent to ವೈಶಾಖ ವದಿ, then comes ವೈಶಾಖ ಶುಕ್ಲ corresponding to ವೈಶಾಖ ಸುದಿ, followed by ವೈಶಾಖ ಕೃಷ್ಣ corresponding to ಜ್ಯೇಷ್ಠ ವದಿ and so on. The ವಿಕ್ರಮ ಸಂವತ್ is used with this calendar and the year begins in the middle of the month of ಗೌಣ ಚೈತ್ರ, i.e. from ಚೈತ್ರ ಶುಕ್ಲ ಪ್ರತಿಪದ್.

- Same book, page x of Introduction.

(ಮೂಲದಲ್ಲಿ ರೋಮನ್ ಲಿಪಿಯಲ್ಲಿದ್ದ ಕೆಲವು ಪದಗಳನ್ನು ಓದುಗರ ಸೌಕಯರಕ್ಕಾಗಿ ಇಲ್ಲಿ ಕನ್ನಡ ಲಿಪಿಯಲ್ಲಿ ಕೊಟ್ಟಿದೆ.)

ಪ್ರಚಾರದಲ್ಲಿದ್ದುವೆಂದು ತೈತ್ತಿರೀಯ ಸಂಹಿತೆಯಿಂದ ತಿಳಿದುಬರುತ್ತದೆ.[13] ಈಗ ಉಪಲಬ್ಧವಿರುವ ಆರ್ಯಭಟೀಯ ವ್ಯಾಖ್ಯಾನಗಳೆಲ್ಲೆಲ್ಲ ಅತಿಪ್ರಾಚೀನವಾದುದು ಭಾಸ್ಕರನದು. (ಈ ಭಾಸ್ಕರನೂ ಸಿದ್ಧಾಂತ ಶಿರೋಮಣಿಯ ಕರ್ತೃ ಭಾಸ್ಕರಾಚಾರ್ಯನೂ ಭಿನ್ನರು). ಇದರ ರಚನಾಕಾಲ ಕ್ರಿ.ಶ. 629. ಈ ವ್ಯಾಖ್ಯಾನದಲ್ಲಿ ಭಾಸ್ಕರನು, ಸೌರಾಷ್ಟ್ರದಲ್ಲಿ ವರ್ಷವು ಕಾರ್ತಿಕ ಶುಕ್ಲ ಪ್ರತಿಪದೆಯಿಂದ ಆರಂಭವಾಗಿ ಆಶ್ವಯುಜ ಬಹುಳ ಅಮಾವಾಸ್ಯೆಯಂದು ಮುಗಿಯುವುದೆಂದೂ ಮಗಧದಲ್ಲಿ ಆಷಾಢ ಕೃಷ್ಣ ಪ್ರತಿಪದೆಯಿಂದ ಆರಂಭವಾಗಿ ಆಷಾಢ ಶುಕ್ಲಪೂರ್ಣಿಮೆಯಂದು ಮುಗಿಯುವುದೆಂದೂ ಹೇಳಿ, ಆಷಾಢಪೂರ್ಣಿಮೆಯಂದು ವರ್ಷಾಂತವೆನ್ನುವುದಕ್ಕೆ ಅರ್ಥಶಾಸ್ತ್ರದ ವಾಕ್ಯವೊಂದನ್ನು ಉದಾಹರಿಸಿದ್ದಾನೆ.[14]

ಈ ಎಲ್ಲ ಆಧಾರಗಳನ್ನನುಸರಿಸಿ, ಔತ್ತರೇಯನಾದ ಕಾಳಿದಾಸನು ಹೇಳಿರುವ

---

13 ಅಮಾವಾಸ್ಯಯಾ ಮಾಸಾನ್ ಸಂಪಾದ್ಯಾಹರುತ್ಸೃಜಂತ್ಯಮಾವಾಸ್ಯಯಾ ಹಿ ಮಾಸಾನ್ ಸಂಪಶ್ಯನ್ತಿ ಪೌರ್ಣಮಾಸ್ಯಾ ಮಾಸಾನ್ ಸಂಪಾದ್ಯಾಹರುತ್ಸೃಜನ್ತಿ ಪೌರ್ಣಮಾಸ್ಯಾ ಹಿ ಮಾಸಾನ್ ಸಂಪಶ್ಯನ್ತಿ ।

— ತೈತ್ತಿರೀಯ ಸಂಹಿತಾ 7, 5, 6, 1
(ಆನಂದಾಶ್ರಮ ಮುದ್ರಣಾಲಯ, ಪುಣೆ 1905)

ಅತ್ರ ಸ್ಪಷ್ಟಮಿದಂ ಕಥಿತ ಮವಲೋಕ್ಯತೇ ಯತ್ಕೇಚಿದಮಾವಾಸ್ಯಯಾ ಮಾಸಪೂರ್ತಿಂ ಸಂಪಶ್ಯನ್ತಿ ಕೇಚಿಚ್ಚ ಪೌರ್ಣಮಾಸ್ಯಾ ತತ್ಪೂರ್ತಿಂ ಸಮಾಮನನ್ತೀತಿ । ಸಂಪ್ರತಿ ದಕ್ಷಿಣಭಾರತೇ ಪೂರ್ವನಿಯಮಃ ಉತ್ತರಭಾರತೇ ಚೋತ್ತರ ನಿಯಮೋ ಮನ್ಯತೇ ।

-ಜ್ಯೌತಿಷ ಶಾಸ್ತ್ರೀಯ ಭಗಣ ಸಮೀಕ್ಷಾ (ಡಾ॥ ದಾಮೋದರ ಝಾ, ಕೋ ಆರೀಮದನ, ಸೀತಾಮಡೀ ಡಿಸ್ಟ್ರಿಕ್ಟ್ ಬಿಹಾರ. 1975), ಪುಟ 14

ಈ ಸಂಸ್ಕೃತ ಗ್ರಂಥದಲ್ಲಿ ಮೇಲಿನ ಮತ್ತು 4, 5ನೇ ಅಡಿಟಿಪ್ಪಣಿಗಳಲ್ಲಿ ಕೊಟ್ಟಿರುವ ವೇದ ಸಂಹಿತಾ ಬ್ರಾಹ್ಮಣಭಾಗಗಳೂ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದ ಉದ್ಧೃತವಾದ ವಾಕ್ಯಗಳೂ ಉದಾಹೃತವಾಗಿವೆ. ಪ್ರಾಚೀನ ಭಾರತೀಯ ಖಗೋಳಶಾಸ್ತ್ರ ವಿಚಾರವಾಗಿ ಹೆಚ್ಚು ತಿಳಿಯಲಪೇಕ್ಷಿಸುವವರು ಅವಶ್ಯವಾಗಿ ನೋಡಬೇಕಾದ ಗ್ರಂಥವಿದು.

14 ಸುರಾಷ್ಟ್ರಾಸು ಕಾರ್ತಿಕಶುಕ್ಲಪ್ರತಿಪದಃ ಪ್ರವೃತ್ತಿರ್ವರ್ಷಮಾಸ ದಿವಸಾನಾಂ । ಅಶ್ವಯುಜಃ [ಕೃಷ್ಣ] ಪಂಚದಶ್ಯಾಃ ನಿವೃತ್ತಿಃ . ತಥಾ ಚ ಮಗಧಾಸು ಆಷಾಢೇ ಕೃಷ್ಣಪ್ರತಿಪದಃ ಸಮಾಮಾಸದಿವಸಾನಾಂ ಪ್ರವೃತ್ತಿಃ, ಆಷಾಡ ಸಿತ ಪಂಚದಶ್ಯಾಂ ನಿವೃತ್ತಿಃ । ತಥಾ ಚ ಅರ್ಥ ಶಾಸ್ತ್ರೇಽಪ್ಯಭಿಹಿತಂ- ''ತ್ರಿಶತಂ ಸಚತುಷ್ಪಂಚಾಶತಮಹೋರಾತ್ರಾಣಾಂ ಕರ್ಮಸಂವತ್ಸರಃ ತಮಾಷಾಢೀ ಪರ್ಯವಸಾನಮೂನಂ ಪೂರ್ಣಂ ವಾ ದದ್ಯಾದಿತಿ ।

— Aryabhatiya of Aryabhata, with the Commentary of Bhaskara I and Someswara. (Indian National Science Academy, New Delhi, 1976).

ಕಾಲಕ್ರಿಯಾಪಾದದ 11ನೆಯ ಪದ್ಯವ್ಯಾಖ್ಯಾನ ಭಾಗ, ಪುಟ 206.

ಆಷಾಢಮಾಸವು ಕೃಷ್ಣಾದಿ ಎಂದರೆ ಪೂರ್ಣಮಾನ್ತಮಾಸವೆಂದು ನಿಸ್ಸಂದೇಹವಾಗಿ ಹೇಳಬಹುದು.

ಮೂಲಪಾಠ ನಿರ್ಣಯ :

ಕೃಷ್ಣಾದಿ ಆಷಾಢದ ಪ್ರಥಮ ದಿವಸ ದಕ್ಷಿಣದ ಅಮಾಂತ ಚಾಂದ್ರಮಾಸ ಜ್ಯೇಷ್ಠದ ಬಹುಳ ಪ್ರತಿಪದೆ. ಇಲ್ಲಿಂದ ಉತ್ಥಾನ ದ್ವಾದಶಿಗೆ ಸುಮಾರು 4 ತಿಂಗಳು ಮತ್ತು 26 ದಿನಗಳಾಗುತ್ತವೆ. ಆಷಾಢ ಪ್ರಶಮ ದಿವಸ ಎಂದರೆ ಕೊನೆಯ ದಿನವಾದ ಪೂರ್ಣಮೆಯಿಂದ 4 ತಿಂಗಳಿಗೆ 3 ದಿನ ಮಾತ್ರ ಕಡಿಮೆ. ಆದುದರಿಂದ **ಮೂಲಪಾಠ "ಆಷಾಢಸ್ಯ ಪ್ರಶಮದಿವಸೇ"** ಎಂದೇ ಇರಬೇಕು.

ಔತ್ತರೇಯನಾದ ವಲ್ಲಭದೇವನು ಸಹಜವಾಗಿಯೇ ಆಷಾಢ ಪೂರ್ಣಮಾನ್ತ ಮಾಸವೆಂದು ಗ್ರಹಿಸಿರುವುದರಿಂದ, ಆಷಾಢ ಪ್ರಶಮದಿವಸಕ್ಕೂ ಉತ್ಥಾನದ್ವಾದಶಿಗೂ ಅಂತರ ಹೇಗೆ ನಾಲ್ಕು ತಿಂಗಳು ಎಂಬ ಸಮಸ್ಯೆ ಅವನಿಗೆ ಉದ್ಭವಿಸಲಿಲ್ಲ.

ಯಕ್ಷನು ಮೋಡವನ್ನು ನೋಡಿದ ದಿನ ಆಷಾಢ ಶುಕ್ಲಪಾಡ್ಯವಲ್ಲವೆನ್ನುವುದಕ್ಕೆ ಆಂತರಿಕ ಪ್ರಮಾಣವೂ ಇದೆ. "ಶಾಪಾಂತೋ ಮೇ ಭುಜಗ ಶಯನಾದುತ್ಥಿತೇ ಶಾರ್ಙ್ಗಪಾಣೌ"(ಶಾರ್ಙ್ಗಪಾಣಿಯು ಭುಜಗಶಯನದಿಂದ ಎದ್ದಾಗ ನನ್ನ ಶಾಪದ ಕೊನೆ) ಎನ್ನಬೇಕಾದರೆ, ಹಾಗೆ ಹೇಳಿದಾಗ ಶಾರ್ಙ್ಗಪಾಣಿಯು ಭುಜಗ ಶಯನ ದಲ್ಲಿಯೇ ಇರಬೇಕು. ಆದುದರಿಂದ ಶಯನೈಕಾದಶಿ (ಆಷಾಢಶುದ್ಧ ಏಕಾದಶಿ)ಯ ಅನಂತರವೇ ಈ ಮಾತನ್ನಾಡಿರಬೇಕು.

ವಲ್ಲಭದೇವನು ಹೇಳಿರುವಂತೆ (ನೋಡಿ, ಅಡಿಟಿಪ್ಪಣಿ 2) ಶಕಾರ ಥಕಾರಗಳ ಲಿಪಿದೃಶ್ಯದಿಂದ [15] 'ಪ್ರಥಮದಿವಸೇ' ಎಂಬ ಅಪಪಾಠ ಹುಟ್ಟಿರಬೇಕು ಮತ್ತು ದಕ್ಷಿಣ ದೇಶದಲ್ಲಿ ಅಮಾಂತ ಚಾಂದ್ರಮಾಸ ರೂಢಿಯಲ್ಲಿದ್ದುದರಿಂದ ಮಲ್ಲಿನಾಥ, ಚಾರಿತ್ರ ವರ್ಧನ ಮೊದಲಾದ ಟೀಕಾಕರರಿಂದ ಈ ಪಾಠ ಆದೃತವಾಗಿರಬೇಕು.

★ ★ ★

ಅರ್ಥಶಾಸ್ತ್ರದಿಂದ ಉದ್ಧೃತವಾಗಿರುವ ಭಾಗವು ಮೈಸೂರಿನಲ್ಲಿ ಪ್ರಕಟತವಾದ (ನೋಡಿ, ಟಿಪ್ಪಣಿ 6) ಕೌಟಲೀಯಾರ್ಥಶಾಸ್ತ್ರದ ಪಂಚವಿಂಶ ಪ್ರಕರಣ, ಸಪ್ತಮಾಧ್ಯಾಯದಲ್ಲಿದೆ. (ಪುಟ 72)

15 ಈಗಿನ ದೇವನಾಗರೀ ಲಿಪಿಯಲ್ಲೂ ಶ ಕಾರ ಥ ಕಾರಗಳಿಗೆ ಸಾದೃಶ್ಯವಿದೆ. ಕೈಬರಹದಲ್ಲಿರುವ ಒಂದನ್ನು ಮತ್ತೊಂದೆಂದು ತಪ್ಪಾಗಿ ಓದುವುದು ಸಾಧ್ಯ.

ಮಹಾಕವಿರ್ಮಹಾವಿದ್ವಾನೇಕೋ ಭರ್ತೃಹರಿಃ

ಮಹಾಂತಃ ಕವಯಃ ಸಂತು ಮಹಾಂತಃ ಪಂಡಿತಾಸ್ತಥಾ ।
ಮಹಾಕವಿರ್ಮಹಾವಿದ್ವಾನೇಕೋ ಭರ್ತೃಹರಿರ್ಮತಃ ।

ಮಹಾಕವಿಗಳು ಅನೇಕರು; ಹಾಗೆಯೇ ಮಹಾಪಂಡಿತರೂ ಸಹ. ಆದರೆ ಮಹಾಕವಿಯೂ ಮಹಾವಿದ್ವಾಂಸನೂ ಭರ್ತೃಹರಿಯೊಬ್ಬನೇ. ಇದು ವಿದ್ವನ್ಮಂಡಲಿ ಯಲ್ಲಿ ಕೇಳಿ ಬರುವ ಒಂದು ಲೋಕೋಕ್ತಿ.

ಕಾಳಿದಾಸ, ಭವಭೂತಿ ಮೊದಲಾದ ಮಹಾಕವಿಗಳೂ ಸಹ ವಿದ್ವಾಂಸರೇ. ಆದುದರಿಂದ ಮೇಲಿನ ಶ್ಲೋಕದಲ್ಲಿ 'ಮಹಾವಿದ್ವಾನ್' ಪದವನ್ನು ದೊಡ್ಡ ಶಾಸ್ತ್ರಕಾರ ನೆಂಬರ್ಥದಲ್ಲಿ ಪ್ರಯೋಗಿಸಿರುವಂತಿದೆ. ಆದರೆ ಮಹಾಕವಿಯೂ ಮಹಾಶಾಸ್ತ್ರಕಾರನೂ ಆದ ಭರ್ತೃಹರಿ ಯಾರು, ಅವನ ಕೃತಿಗಳು ಯಾವುವು ಎಂಬುದು ಚರ್ಚಾಸ್ಪದ ವಾಗಿಯೇ ಇದೆ.

ಭರ್ತೃಹರಿ ವಿರಚಿತವೆಂದು ಹೇಳಲಾದ ಗ್ರಂಥಗಳು : (1) ಸುಭಾಷಿತ ಶತಕತ್ರಯ; (2) ವಾಕ್ಯಪದೀಯ (ಸ್ವೋಪಜ್ಞವೃತ್ತಿ ಸಹಿತ); (3) ಮಹಾಭಾಷ್ಯ ದೀಪಿಕಾ; (4) ಭಾಗವೃತ್ತಿ; ಮತ್ತು (5) ರಾವಣವಧ ಅಥವಾ ಭಟ್ಟಿಕಾವ್ಯ.

ಸುಭಾಷಿತ ಶತಕತ್ರಯ

ಮುಂಬಯಿಯ ಟಾಟಾ ಮೂಲತತ್ತ್ವ ಸಂಶೋಧನ ಸಂಸ್ಥೆಯಲ್ಲಿ ಗಣಿತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಿ.ಡಿ. ಕೋಸಂಬೀಯವರು ಶತಕತ್ರಯದ 377 ಹಸ್ತಪ್ರತಿಗಳನ್ನು - ಇವುಗಳಲ್ಲಿ ಅಪೂರ್ಣ ಪ್ರತಿಗಳೂ ಸೇರಿವೆ - ಸ್ವದೇಶ ವಿದೇಶಗಳಿಂದ ಸಂಗ್ರಹಿಸಿ ದರು. ಈ ಪ್ರತಿಗಳಲ್ಲಿ ಒಟ್ಟು 300ಕ್ಕೆ ಬದಲು 852 ಪದ್ಯಗಳು ದೊರೆತುವು. ಮೌಖಿಕವಾಗಿ ಒಬ್ಬರು ಇನ್ನೊಬ್ಬರಿಗೆ ಹೇಳಿದಾಗ, ಮರೆವಿನಿಂದಾಗಿ ಬೇರೆ ಪದ್ಯಗಳನ್ನು ಹೇಳುವುದು. ಹಸ್ತಪ್ರತಿಗಳಲ್ಲಿ ಕೆಲವು ಪತ್ರಗಳು ಕಳೆದುಹೋದಾಗ ಶತಕದಲ್ಲಿ 100 ಪದ್ಯವಾಗುವಂತೆ ಇತರರ ಪದ್ಯಗಳನ್ನು ಭರ್ತೃಹರಿಯದೆಂದು ತಿಳಿದು ಅವುಗಳನ್ನೋ ಅಥವಾ ಸ್ವಕಪೋಲಕಲ್ಪಿತವಾದ ಪದ್ಯಗಳನ್ನೋ ಸೇರಿಸುವುದು - ಇತ್ಯಾದಿ ಕಾರಣಗಳಿಂದ 500ಕ್ಕೂ ಹೆಚ್ಚು ಪದ್ಯಗಳು ಪ್ರಕ್ಷಿಪ್ತವಾಗಿವೆ.

ಕೋಸಂಬೀಯವರು ಹಸ್ತಪ್ರತಿಗಳ ಸಾದೃಶ್ಯವೈದೃಶ್ಯಗಳ ಆಧಾರದ ಮೇಲೆ ಅವುಗಳನ್ನು ದಾಕ್ಷಿಣಾತ್ಯ ಮತ್ತು ಔತ್ತರೇಯ ಪಾಠಸಂಪ್ರದಾಯಗಳಾಗಿ ವಿಂಗಡಿಸಿ ಮತ್ತೆ ಪ್ರತಿಸಂಪ್ರದಾಯಕ್ಕೆ ಸೇರಿದ ಹಸ್ತಪ್ರತಿಗಳನ್ನು ವರ್ಗೀಕರಿಸಿ ಶಾಖಾಪಾಠಗಳನ್ನು ಗುರ್ತಿಸಿದರು. ಅನಂತರ ಈ ಶಾಖಾಪಾಠಗಳ ಅನುಸಾರವಾಗಿ ಪದ್ಯಗಳನ್ನು ಮೂರು ಗುಂಪಾಗಿ ಮಾಡಿದರು : (1) ಮೊದಲನೆಯ ಗುಂಪು : ಎಲ್ಲ ಪಾಠಶಾಖೆಗಳಲ್ಲಿ ಕಂಡುಬರುವ ಶ್ಲೋಕಗಳು (ಸಂಖ್ಯೆ 200) (2) ಎರಡನೆಯ ಗುಂಪು : ಎಲ್ಲಕ್ಕೂ ಸಮಾನವಲ್ಲದಿದ್ದು ಎರಡು ಅಥವಾ ಹೆಚ್ಚು ಪಾಠಶಾಖೆಗಳಲ್ಲಿರುವ "ಸಂಶಯಿತ ಶ್ಲೋಕಗಳು" (152) (3) ಮೂರನೆಯ ಗುಂಪು : ಉಳಿದ 500 ಶ್ಲೋಕಗಳು.

ಭರ್ತೃಹರಿಯದೆಂದು ಹೇಳಲಾದ, 84 ಪದ್ಯಗಳಿರುವ ವಿಟವೃತ್ತ ಮತ್ತು 103 ಪದ್ಯಗಳಿರುವ ವಿಜ್ಞಾನ ಶತಕಗಳ ಪದ್ಯಗಳನ್ನು ನಾಲ್ಕನೆಯ ಗುಂಪಾಗಿ ಕೊಟ್ಟು, ಈ ಶ್ಲೋಕಗಳನ್ನು ಮೊದಲನೆಯ ಮತ್ತು ಎರಡನೆಯ ಗುಂಪಿನ ಶ್ಲೋಕಗಳೊಡನೆ ಹೋಲಿಸಿ ನೋಡಿದರೆ ಅವು ಶತಕತ್ರಯಕಾರನದಲ್ಲವೆಂದು ದೃಢವಾಗುವುದೆಂದು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ.

ಈ ಎಲ್ಲ ಪದ್ಯಗಳನ್ನು, ತಮ್ಮ ಉಪೋದ್ಘಾತದೊಂದಿಗೆ, 'ಭರ್ತೃಹರಿವಿರಚಿತಃ ಶತಕತ್ರಯಾದಿ ಸುಭಾಷಿತ ಸಂಗ್ರಹಃ'[1] ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಅತಿ ಹೆಚ್ಚಿನ ಸಂಖ್ಯೆಯಲ್ಲಿ, ವಿವಿಧ ಪ್ರಕಾರದ ಹಸ್ತಪ್ರತಿಗಳು ರಾಜಸ್ಥಾನದಲ್ಲಿ ಸಿಕ್ಕಿರುವುದರಿಂದ, ಹಸ್ತಪ್ರತಿ ಸಂಪ್ರದಾಯ ಅಲ್ಲಿಂದ ಮೊದಲಾಗಿರಬಹುದು. ಅನೇಕ ಶ್ಲೋಕಗಳು ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಬೇರೆ ಬೇರೆ ಶತಕಗಳಲ್ಲಿರುವುದರಿಂದಲೂ, ಶ್ಲೋಕಗಳ ಕ್ರಮದಲ್ಲಿ ಬಹಳ ವ್ಯತ್ಯಾಸವಿರುವುದರಿಂದಲೂ ದಾಕ್ಷಿಣಾತ್ಯ ಸಂಪ್ರದಾಯ ದಲ್ಲಿ ಮಾತ್ರ ಶತಕದ ಪದ್ಯಗಳನ್ನು ಪದ್ಧತಿಗಳಾಗಿ ವಿಂಗಡಿಸಿರುವುದರಿಂದಲೂ ಮೊದಲು ಸಂಗ್ರಹಕಾರನು ಭರ್ತೃಹರಿಯದೆಂದು ನಂಬಿದ್ದ ಸುಭಾಷಿತಗಳ ಸಂಗ್ರಹವಾಗಿದ್ದುದು, ಅನಂತರ ಶತಕಗಳ ರೂಪ ಪಡೆದಿರಬಹುದು. ಇದು ಕೋಸಂಬೀಯವರ ಅಭಿಪ್ರಾಯ (ಪ್ರಸ್ತಾವನೆ; ಪುಟಗಳು 57, 32 ಮತ್ತು 78).

ಶತಕತ್ರಯದ ಪದ್ಯಗಳು ಏಕಕರ್ತೃಕಗಳಾಗಿದ್ದರೆ, ಗ್ರಂಥಕಾರ ಕ್ರಿಸ್ತಶಕದ ಮೊದಲಿನ ಶತಕಗಳವನಿರಬೇಕೆಂದೂ[2] ಮತ್ತು ಅವನು ವಾಕ್ಯಪದೀಯಕಾರ ಭರ್ತೃಹರಿಗಿಂತ ಭಿನ್ನನೆಂದೂ ಕೋಸಂಬೀಯವರ ಮತ. ಈ ವಿಷಯವನ್ನು ಮುಂದೆ ಪರಿಶೀಲಿಸಲಾಗುತ್ತದೆ.

'ವಾಕ್ಯಪದೀಯ' ಮತ್ತು 'ಮಹಾಭಾಷ್ಯ ದೀಪಿಕಾ'

ಪುಣೆ ವಿಶ್ವವಿದ್ಯಾಲಯದಿಂದ ಪ್ರಕಟಿತವಾದ ವಾಕ್ಯಪದೀಯದ ಸಂಪಾದಕರು. ತಮ್ಮ ಉಪೋದ್ಘಾತದಲ್ಲಿ[3] "ಭರ್ತೃಹರಿಃ ವಾಕ್ಯಪದೀಯಪ್ರಕೀರ್ಣಕಯೋಃ ಕರ್ತಾ ಮಹಾಭಾಷ್ಯತ್ರಿಪಾದ್ಯಾಃ ವ್ಯಾಖ್ಯಾತಾ ಚ" ಎಂಬ ವರ್ಧಮಾನನ 'ಗಣರತ್ನ ಮಹೋದಧಿ'ಯ ವಾಕ್ಯವನ್ನು ಉದಾಹರಿಸಿದ್ದಾರೆ.

ಯುಧಿಷ್ಠಿರ ಮೀಮಾಂಸಕರೂ ತಮ್ಮ ಸಂಸ್ಕೃತ ವ್ಯಾಕರಣ ಶಾಸ್ತ್ರದ ಇತಿಹಾಸದಲ್ಲಿ ಇದನ್ನು ಉದಾಹರಿಸಿದ್ದಾರೆ.[4] ಗಣರತ್ನ ಮಹೋದಧಿಕಾರನು ಭರ್ತೃಹರಿಯ ಮಹಾಭಾಷ್ಯಟೀಕೆಯ ಭಾಗವೊಂದನ್ನು ಉದಾಹರಿಸುತ್ತಾ, "ಯಸ್ತ್ವಯಂ ವೇದವಿದಾಮಲಂಕಾರ ಭೂತೋ ವೇದಾಂಗತ್ವಾತ್ ಪ್ರಮಾಣತ ಶಬ್ದಶಾಸ್ತ್ರ" ಎಂದು ಬರೆದಿದ್ದಾನೆಂದು ಹೇಳಿ, 'ವಾಕ್ಯಪದೀಯ' ಮತ್ತು 'ಮಹಾಭಾಷ್ಯದೀಪಿಕೆ'ಗಳನ್ನು ತುಲನೆ ಮಾಡಿ ನೋಡಿದರೆ ಅವೆರಡೂ ಏಕಕರ್ತೃಕಗಳೆಂದು ವಿದಿತವಾಗುವುದೆಂದು ಸೋದಾಹರಣವಾಗಿ ನಿರೂಪಿಸಿದ್ದಾರೆ.[5] ಈ ಭರ್ತೃಹರಿಯು ವೈದಿಕ ಪಂಥಕ್ಕೆ ಸೇರಿದವನೆಂದೂ, ವಿಕ್ರಮಸಂವತ್ 400ಕ್ಕಿಂತ ಅರ್ವಾಚೀನನಲ್ಲವೆಂದೂ ಇವರ ಮತ.

ಕೈಯಟನು ತನ್ನ 'ಮಹಾಭಾಷ್ಯಪ್ರದೀಪ'ದ ಆದಿಯಲ್ಲಿ ಭರ್ತೃಹರಿಗೆ ತನ್ನ ಗೌರವ ಪೂರ್ವಕವಾದ ಕೃತಜ್ಞತೆಯನ್ನು ಹೀಗೆ ಸಲ್ಲಿಸಿದ್ದಾನೆ :

ಭಾಷ್ಯಾಬ್ಧಿಃ ಕ್ವಾತಿ ಗಂಭೀರಃ ಕ್ವಾಹಂ ಮಂದಮತಿಸ್ತವ ।
ಛಾತ್ರಾಣಾಮುಪಹಾಸ್ಯತ್ವಂ ಯಾಸ್ಯಾಮಿ ಪಿಶುನಾತ್ಮನಾಮ್ ॥
ತಥಾಪಿ ಹರಿಬದ್ಧೇನ ಸಾರೇಣ ಗ್ರಂಥಸೇತುನಾ ।
ಕ್ರಮಮಾಣಃ ಶನೈಃ ಪಾರಂ ತಸ್ಯ ಪ್ರಾಪ್ತಾಸ್ಮಿ ಪಂಗುವತ್ ॥

ಅಗಾಧವಾದ ಭಾಷ್ಯ ಸಮುದ್ರವೆಲ್ಲಿ; ಮಂದಮತಿಯಾದ ನಾನೆಲ್ಲಿ! ಆದುದರಿಂದ (ಆ ಸಮುದ್ರ ಪ್ರವೇಶ ಮಾಡಹೊರಟಿರುವ) ನಾನು ದುಷ್ಟ ವಿದ್ಯಾರ್ಥಿ ಗಳ ಅಪಹಾಸ್ಯಕ್ಕೀಡಾಗುತ್ತೇನೆ. ಆದರೂ ಭರ್ತೃಹರಿರಚಿತವಾದ ಸುದೃಢವಾದ ಗ್ರಂಥಸೇತುವಿನ ಸಹಾಯದಿಂದ, ಹೆಳವನಂತೆ ಮೆಲ್ಲನೆ ಮುಂದುವರಿಯುತ್ತಾ, ಅದರ ಆಚೆಯ ದಡವನ್ನು ಸೇರುತ್ತೇನೆ.

ಕೈಯಟನೇ ಮೊದಲಾದ ವೈಯಾಕರಣರೇ ಅಲ್ಲದೆ ಅನೇಕ ವೈದಿಕ, ಬೌದ್ಧ ಜೈನ ದಾರ್ಶನಿಕರೂ ಇತರ ಶಾಸ್ತ್ರಕಾರರೂ ವಾಕ್ಯಪದೀಯದ ಕಾರಿಕೆಗಳನ್ನು ತಮ್ಮ ಗ್ರಂಥಗಳಲ್ಲಿ

ಪ್ರಮಾಣಗಳಾಗಿಯೋ ಖಂಡನಾರ್ಥವಾಗಿಯೋ ಉದಾಹರಿಸಿದ್ದಾರೆ. ಇವುಗಳನ್ನು 'ವಾಕ್ಯಪದೀಯ'ದ ಪುಣೆಯ ಆವೃತ್ತಿಯ ಸಂಪಾದಕರು ಸಂಗ್ರಹಿಸಿ, 160 ಪುಟಗಳಷ್ಟು ದೊಡ್ಡದಾದ 3ನೆಯ ಅನುಬಂಧವಾಗಿ ಕೊಟ್ಟಿದ್ದಾರೆ. ದಿಙ್ನಾಗನು (ಸುಮಾರು ಕ್ರಿ.ಶ. 480-540) ತನ್ನ 'ತ್ರೈಕಾಲ್ಯಪರೀಕ್ಷಾ' ಎಂಬ ಗ್ರಂಥದಲ್ಲಿ 'ವಾಕ್ಯಪದೀಯ'ದ ಕಾರಿಕೆಗಳನ್ನು ಉದಾಹರಿಸಿರುವುದರಿಂದ ಭರ್ತೃಹರಿಯ ಕಾಲ ಕ್ರಿ.ಶ. 450 ಮತ್ತು 500ರ ಮಧ್ಯವರ್ತಿ ಇರಬಹುದೆಂದೂ ಇವರು ಹೇಳಿದ್ದಾರೆ.[6]

ಯುಧಿಷ್ಠಿರ ಮೀಮಾಂಸಕರು ವಾಕ್ಯಪದೀಯಕಾರನು ಈ ಕೆಳಗಿನ ಮೂರು ಗ್ರಂಥಗಳನ್ನೂ ರಚಿಸಿರಬಹುದೆಂದು ಹೇಳಿದ್ದಾರೆ.[7]

(1) 'ಮೀಮಾಂಸಾಸೂತ್ರವೃತ್ತಿ' : ವಾಕ್ಯಪದೀಯಕಾರ ಭರ್ತೃಹರಿಕೃತ ಜೈಮಿನಿ ಮೀಮಾಂಸಾವೃತ್ತಿಯು ಶಬರಸ್ವಾಮಿಗಿಂತಲೂ ಪ್ರಾಚೀನವೆಂದು ಪಂಡಿತ ರಾಮಕೃಷ್ಣ ಕವಿ ಹೇಳಿದ್ದಾರೆ; (2) 'ವೇದಾಂತ ಸೂತ್ರವೃತ್ತಿ' : ಇದು ಅನುಪಲಬ್ಧ. ಯಾಮುನಾ-ಚಾರ್ಯರು ಸಿದ್ಧಿತ್ರಯವೆಂಬ ಗ್ರಂಥದಲ್ಲಿ ಹೇಳಿರುವ ವೇದಾಂತಸೂತ್ರ ವ್ಯಾಖ್ಯಾನಕಾರರ ಹೆಸರುಗಳಲ್ಲಿ ಭರ್ತೃಹರಿಯದೂ ಸಹ ಸೇರಿದೆ; (3) 'ಶಬ್ದಧಾತು ಸಮೀಕ್ಷಾ' : ಪಂಡಿತ ಮಾಧವ ಕೃಷ್ಣಶರ್ಮರು ತಮ್ಮ ಲೇಖನವೊಂದರಲ್ಲಿ ಈ ಗ್ರಂಥ ಭರ್ತೃಹರಿಕೃತವೆಂದು ಹೇಳಿದ್ದಾರೆ.

'ಭಾಗವೃತ್ತಿ'

ಪುರುಷೋತ್ತಮದೇವನು (ಕ್ರಿ.ಶ. 12ನೆಯ ಶತಮಾನ) ತನ್ನ ಭಾಷಾವೃತ್ತಿಯ ಕೊನೆಯಲ್ಲಿ, "ಕಾಶಿಕಾಭಾಗವೃತ್ತಿಗಳ ಸಿದ್ಧಾಂತವನ್ನು ತಿಳಿಯಬೇಕೆಂಬ ಮನಸ್ಸಿದ್ದರೆ ನನ್ನ ಭಾಷಾವೃತ್ತಿಯ ಚಿಂತನೆ ನಡೆಯಲಿ" ಎಂದು ಹೇಳಿದಾಗ 'ಕಾಶಿಕಾವೃತ್ತಿ' ಮತ್ತು 'ಭಾಗವೃತ್ತಿ'ಗಳಿಗೆ ಸಮಾನಸ್ಥಾನವನ್ನು ಕೊಟ್ಟಿದ್ದಾನೆ.8 ಇವನಿಗಿಂತ ಪ್ರಾಚೀನನಾದ ಕೈಯಟ, ಪದಮಂಜರೀಕಾರ ಹರದತ್ತ, ಭಟ್ಟೋಜಿ ದೀಕ್ಷಿತ, ನಾಗೇಶಭಟ್ಟ ಮತ್ತು ಇನ್ನೂ ಅನೇಕ ವೈಯಾಕರಣರೂ ಕೋಶಕಾರರೂ ಸಹ 'ಭಾಗವೃತ್ತಿ'ಯ ಉಲ್ಲೇಖ ಮಾಡಿದ್ದರೂ ಆ ಗ್ರಂಥ ಉಪಲಬ್ಧವಿಲ್ಲ. ಇತರ ವೈಯಾಕರಣರೂ ಕೋಶಕಾರರೂ ಈ ಗ್ರಂಥದಿಂದ ಉದ್ಧರಿಸಿರುವ 198 ಉದ್ಧರಣಗಳನ್ನು, ಯುಧಿಷ್ಠಿರ ಮೀಮಾಂಸಕರು ಸಂಗ್ರಹಿಸಿ 'ಭಾಗವೃತ್ತಿಸಂಕಲನಂ' ಎಂಬ ಹೆಸರಿನಲ್ಲಿ ಪುಸ್ತಕರೂಪವಾಗಿ ಪ್ರಕಟಿಸಿದ್ದಾರೆ.[9]

"ಸಂಬುದ್ಧೌ ಶಾಕಲ್ಯಸ್ಯೇತಾವನಾರ್ಷೇ" (1.1.16) ಎಂಬ ಪಾಣಿನಿಸೂತ್ರದ

ವೃತ್ತಿಯಲ್ಲಿ, ಪುರುಷೋತ್ತಮದೇವನು "ಅನಾರ್ಷೇ ಇತ್ಯೇಕವೃತ್ತಾವುಪಯುಕ್ತಂ" ಎಂದ ಹೇಳಿದ್ದಾನೆ. ಇದಕ್ಕೆ ವ್ಯಾಖ್ಯಾನ ಮಾಡುತ್ತಾ ಸೃಷ್ಟಿಧರಚಕ್ರವರ್ತಿಯು ತನ್ನ ಭಾಷ ವೃತ್ತ್ಯರ್ಥವಿವೃತ್ತಿಯಲ್ಲಿ "ಏಕವೃತ್ತಿ ಎಂದರೆ ಕಾಶಿಕಾವೃತ್ತಿ" ಎಂದು ವಿವರಿಸಿದ್ದಾನೆ. ಯುಧಿಷ್ಠಿರ ಮೀಮಾಂಸಕರು ಇದನ್ನುಲ್ಲೇಖಿಸಿ, ಇದಕ್ಕೆ ಹಿಂದಿನ ಅಷ್ಟಾಧ್ಯಾಯೀವೃ ಗಳಲ್ಲೆಲ್ಲ ಎಲ್ಲ ಸೂತ್ರಗಳಿಗೂ ಪಾಣಿನಿಯ ಕ್ರಮದಲ್ಲೇ ವ್ಯಾಖ್ಯಾನವಿದ್ದಿತೆಂದು 'ಭಾಗವೃತ್ತಿ'ಯಲ್ಲಿ ಮೊದಲ ಬಾರಿಗೆ ಲೌಕಿಕ ವೈದಿಕಸೂತ್ರಗಳನ್ನು ವಿಭಜಿಸಿ ವ್ಯಾಖ್ಯಾ ಮಾಡಿದುದರಿಂದ ಇದಕ್ಕೆ ಭಾಗವೃತ್ತಿಯೆಂದೂ ಇದಕ್ಕೆ ಪ್ರತಿಪಕ್ಷದಂತಿದ್ದ ಕಾಶಿಕಾ ವೃತ್ತಿ ಏಕವೃತ್ತಿಯೆಂದೂ ಹೆಸರಾಯಿತೆಂದು ನಿರೂಪಿಸಿದ್ದಾರೆ.[11]

ಗ್ರಂಥಕಾರನ ವಿಷಯವಾಗಿ ಯುಧಿಷ್ಠಿರ ಮೀಮಾಂಸಕರು ಹೀಗೆ ಬರೆದಿದ್ದಾರೆ ಭಾಷಾವೃತ್ತಿವ್ಯಾಖ್ಯಾನಕಾರನಾದ ಸೃಷ್ಟಿಧರಾಚಾರ್ಯನು, "ವಲಭೀನಗರಸ್ಯ ರಾಜ್ಞ ಶ್ರೀಧರಸೇನಸ್ಯಾಜ್ಞಯಾ ಭರ್ತೃಹರಿಣಾ ಭಾಗವೃತ್ತಿರ್ವಿರಚಿತಾ" ಎಂದು ಹೇಳಿದ್ದಾನ ಕಾತಂತ್ರಪರಿಶಿಷ್ಟಕಾರ ಶ್ರೀಪತಿದತ್ತನು "ವಿಮಲಮತಿನಾಮಕೇನ ಕೇನಚಿದ್ವಿದುಷೇಯ ಭಾಗವೃತ್ತಿರ್ವಿರಚಿತಾ" ಎಂದಿದ್ದಾನೆ. ಆದರೆ ಇವುಗಳಲ್ಲಿ ಪರಸ್ಪರ ವಿರೋಧವಿಲ ಭಾಗವೃತ್ತಿಕಾರನ ಹೆಸರು ವಿಮಲಮತಿ. ವಾಕ್ಯಪದೀಯಕಾರನಾದ ಭರ್ತೃಹರಿಯಂ ಇವನೂ ವ್ಯಾಕರಣಪಾಂಡಿತ್ಯವನ್ನು ಪ್ರದರ್ಶಿಸುವ 'ಭಾಗವೃತ್ತಿ'ಯನ್ನು ರಚಿಸಿದುದರಿಂದ ಮುಂದೆ ಭರ್ತೃಹರಿಯೆಂಬ ಹೆಸರಿನಿಂದ ಪ್ರಸಿದ್ಧನಾದನು.

ವಲಭಿಯಲ್ಲಿ ಶ್ರೀಧರಸೇನನೆಂಬ ಹೆಸರಿನ ನಾಲ್ವರು ರಾಜರು ಆಳಿದರೆಂದು (ಇವರ ಕಾಲದ ವ್ಯಾಪ್ತಿ ವಿಕ್ರಮ ಸಂವತ್ 557ರಿಂದ 705ರವರೆಗೆ), ನಾಲ್ಕನೆಯ ಶ್ರೀಧ ಸೇನನ ಕಾಲ (ವಿ.ಸಂ.. 702ರಿಂದ 705)ದಲ್ಲಿ ಭಾಗವೃತ್ತಿ ರಚಿತವಾಯಿತೆಂದೂ ಯುಧಿ ಷ್ಠಿರ ಮೀಮಾಂಸಕರ ಅಭಿಪ್ರಾಯ.[12]

ಇವನು ಬೇರೆ ಯಾವ ಗ್ರಂಥವನ್ನೂ ಬರೆದಂತೆ ಕಾಣುವುದಿಲ್ಲ.

'ರಾವಣವಧಕಾವ್ಯ'

ಈ ಕಾವ್ಯವು 'ಭಟ್ಟಿಕಾವ್ಯ'ವೆಂದು ಪ್ರಸಿದ್ಧವಾಗಿದೆ. ವಿದ್ವಜ್ಜನರ ರಂಜನೆಗಾಗಿ ಬರೆ ಕಾವ್ಯವಿದು. ರಸಿಕರಂಜನೆಗಿಂತ ವ್ಯಾಕರಣಶಾಸ್ತ್ರದ ಶಬ್ದ ವೈಚಿತ್ರ್ಯ ಪ್ರದರ್ಶನವೇ ಕವಿಯ ಮುಖ್ಯ ಉದ್ದೇಶವಾಗಿದೆ. ಕವಿಯೇ, ಗ್ರಂಥದ ಕೊನೆಯಲ್ಲಿ, ತನ್ನ ಉದ್ದೇಶವನ್ನು ಹೀ ಹೇಳಿಕೊಂಡಿದ್ದಾನೆ :

ದೀಪತುಲ್ಯಃ ಪ್ರಬಂಧೋಽಯಂ ಶಬ್ದಲಕ್ಷಣಚಕ್ಷುಷಾಮ್ ।
ಹಸ್ತಾಮರ್ಷ ಇವಾಂಧಾನಾಂ ಭವೇದ್ವ್ಯಾಕರಣಾದೃತೇ ॥
ವ್ಯಾಖ್ಯಾಗಮ್ಯಮಿದಂ ಕಾವ್ಯಮುತ್ಸವಃ ಸುಧಿಯಾಮಲಮ್ ।
ಹತಾ ದುರ್ಮೇಧಸಶ್ಚಾಸ್ಮಿನ್ವಿದ್ವತ್ಪ್ರಿಯಚಿಕೀರ್ಷಯಾ ॥ (22.33, 34)

(ವ್ಯಾಕರಣಶಾಸ್ತ್ರವನ್ನು ಬಲ್ಲವರಿಗೆ ಈ ಪ್ರಬಂಧವು ದೀಪವಿದ್ದಂತೆ. ವ್ಯಾಕರಣ ಜ್ಞಾನವಿಲ್ಲದಿದ್ದರೆ ಕುರುಡರಂತೆ ತಡವರಿಸಬೇಕಾದೀತು. ವ್ಯಾಖ್ಯಾನದ ಸಹಾಯದಿಂದ ಅರ್ಥಮಾಡಿಕೊಳ್ಳಬೇಕಾದ ಈ ಕಾವ್ಯವು ಬುದ್ಧಿವಂತರಿಗೆ ತುಂಬ ಸಂತೋಷವನ್ನುಂಟು ಮಾಡುತ್ತದೆ. ವಿದ್ವಾಂಸರಿಗೆ ಪ್ರಿಯವಾಗಲೆಂದು ರಚಿತವಾದ ಈ ಕಾವ್ಯದಲ್ಲಿ ಮಂದಮತಿ ಗಳಿಗೆ ನಿರಾಶೆಯಾಗುತ್ತದೆ).

ಈ ಕವಿ ಮಹಾವೈಯಾಕರಣ. ಈ ಕಾವ್ಯಕ್ಕೆ ಅನೇಕ ವ್ಯಾಖ್ಯಾನಗಳಿವೆ. ವ್ಯಾಖ್ಯಾನಕಾರರು ಕವಿಯ ಹೆಸರನ್ನು ಭರ್ತೃಸ್ವಾಮಿ, ಭರ್ತೃಹರಿ, ಭಟ್ಟಿ ಹೀಗೆ ಬೇರೆ ಬೇರೆ ವಿಧದಲ್ಲಿ ಹೇಳಿದ್ದಾರೆ. ತನ್ನ ಕಾವ್ಯವು ವಲಭಿಯಲ್ಲಿ ಶ್ರೀಧರಸೇನನು ಆಳುತ್ತಿದ್ದಾಗ ರಚಿತವಾಯಿತೆಂದು ಕವಿ ಕೊನೆಯ ಶ್ಲೋಕದಲ್ಲಿ ಹೇಳಿಕೊಂಡಿದ್ದಾನೆ. ("ಕಾವ್ಯಮಿದಂ ವಿಹಿತಂ ಮಯಾ ವಲಭ್ಯಾಂ ಶ್ರೀಧರಸೇನನರೇಂದ್ರಪಾಲಿತಾಯಾಂ") ವಲಭಿಯಲ್ಲಿ ರಾಜ್ಯವಾಳಿದ ನಾಲ್ವರು ಶ್ರೀಧರಸೇನರ ಪೈಕಿ ಯಾವ ಶ್ರೀಧರಸೇನನ ಕಾಲದಲ್ಲಿ ಭಟ್ಟಿಯಿದ್ದನೆಂದು ಹೇಳಲು ಆಧಾರ ದೊರಕಿಲ್ಲ ವೆಂದೂ, 6ನೆಯ ಶತಮಾನದಲ್ಲಿದ್ದ ಭಾಮಹನ ಗ್ರಂಥವನ್ನು ಭಟ್ಟಿಯು ಪರಿಶೀಲಿಸಿರ ಬೇಕೆಂದೂ ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆಯಲ್ಲಿ ಹೇಳಲಾಗಿದೆ.[13]

ಯುಧಿಷ್ಠಿರ ಮೀಮಾಂಸಕರು, ಭಟ್ಟಿ ಮತ್ತು ಭಾಮಹರ ಪೂರ್ವಾಪರತ್ವ ವಿಷಯದಲ್ಲಿರುವ ಭಿನ್ನಾಭಿಪ್ರಾಯಗಳನ್ನು ವಿವರಿಸಿ ಭಟ್ಟಿಯು ವಲಭಿಯ ಮೂರನೆಯ ಶ್ರೀಧರಸೇನನ ಕಾಲದಲ್ಲಿ (ವಿಕ್ರಮ ಸಂವತ್ 660-677) ಈ ಕಾವ್ಯವನ್ನು ರಚಿಸಿರಬಹುದೆಂದು ಹೇಳಿದ್ದಾರೆ.[14] ಭಟ್ಟಿಯ ಬೇರೆ ಯಾವ ಕೃತಿಯ ಉಲ್ಲೇಖವೂ ದೊರೆತಿಲ್ಲ.

ವಾಕ್ಯಪದೀಯಕಾರ, ಭಾಗವೃತ್ತಿಕಾರ ಮತ್ತು ಭಟ್ಟಿ

ಈ ಮೂವರು ವೈಯಾಕರಣರೂ ಪರಸ್ಪರ ಭಿನ್ನರೆಂದು ಹಿಂದೆ ಕೊಟ್ಟಿರುವ ಅವರ ಕಾಲಮಾನಗಳಿಂದಲೇ ತಿಳಿಯಬಂದರೂ, ಅವರ ಭಿನ್ನತ್ವಕ್ಕೆ ಇತರ ಕಾರಣಗಳನ್ನೂ

ಯುಧಿಷ್ಠಿರ ಮೀಮಾಂಸಕರು ತಮ್ಮ ವ್ಯಾಕರಣದ ಇತಿಹಾಸ ಗ್ರಂಥದಲ್ಲಿ ಕೊಟ್ಟಿದ್ದಾರೆ. ಅವು ಇಂತಿವೆ :

1. (ಅ) ಪುರುಷೋತ್ತಮ ದೇವನು ತನ್ನ ಭಾಷಾವೃತ್ತಿಯಲ್ಲಿ (ಸೂತ್ರ 2.4.24) ಭಾಗವೃತ್ತಿಕಾರನ ಮತವನ್ನು ಖಂಡಿಸಿ, ತನ್ನ ಮತದ ಮಂಡನೆಗಾಗಿ ಭಟ್ಟಿಕಾವ್ಯದ ಪ್ರಯೋಗವನ್ನು ಉದಾಹರಿಸಿದ್ದಾನೆ. (ಆ) ಭಾಷಾವೃತ್ತಿಯ ಅವಲೋಕನದಿಂದ (ಸೂತ್ರ 5-2-112) ಭಾಗವೃತ್ತಿಕಾರ ಭಟ್ಟಿಗಿಂತ ಈಚಿನವನೆಂದು ವಿದಿತವಾಗುತ್ತದೆ. (ಇ) ಭಾಗವೃತ್ತಿಯ ಎಲ್ಲ ಉಪಲಬ್ಧ ಉದ್ಧರಣಗಳನ್ನು ನೋಡಿದರೆ, ಆ ಗ್ರಂಥಕಾರ ಮಹಾಭಾಷ್ಯದ ನಿಯಮಗಳನ್ನು ಎಲ್ಲಿಯೂ ಸ್ವಲ್ಪವೂ ಮೀರಿರುವುದು ಕಂಡು ಬರುವುದಿಲ್ಲ. ಆದರೆ ಭಟ್ಟಿಕಾವ್ಯದಲ್ಲಿ ಭಾಷ್ಯವಿರುದ್ಧವಾದ ಪ್ರಯೋಗಗಳಿವೆ.[15] (2) (ಅ) ಪುರುಷೋತ್ತಮದೇವ, ಸೀರದೇವ, ದುರ್ಘಟವೃತ್ತಿಕಾರ ಶರಣದೇವ ಮುಂತಾದವರು ಅನೇಕ ಕಡೆ ಭರ್ತೃಹರಿಯ ಮತ್ತು ಭಾಗವೃತ್ತಿಕಾರನ ಮತಗಳೆರಡನ್ನೂ ಕೊಟ್ಟಿದ್ದಾರೆ. ಕೆಲವು ಕಡೆ ಮತಭೇದ ಕಂಡುಬರುತ್ತದೆ. ಬೇರೆ ಕಡೆ ಭಾಗವೃತ್ತಿಕಾರ ಭರ್ತೃಹರಿಯ ಮತವನ್ನು ಖಂಡಿಸಿರುವುದೂ ಉಂಟು.[15] (ಆ) ಕಾಶಿಕಾವೃತ್ತಿಯ ರಚನೆಯಾದ ಮೇಲೆ ಭಾಗವೃತ್ತಿ ರಚಿತವಾಯಿತೆಂಬುದು ನಿರ್ವಿವಾದ. ಕಾಶಿಕಾವೃತ್ತಿ ಯಲ್ಲಿ 'ವಾಕ್ಯಪದೀಯ'ದ ಉಲ್ಲೇಖವಿರುವುದರಿಂದ 'ವಾಕ್ಯಪದೀಯ' ಅದಕ್ಕಿಂತ ಪ್ರಾಚೀನವಾದ ಗ್ರಂಥ[16-17]

ಹಿಂದೆಯೇ ಹೇಳಿರುವಂತೆ ಭಾಗವೃತ್ತಿಕಾರನು ಯಾವ ಕಾವ್ಯವನ್ನೂ ಬರೆದಂತೆ ತಿಳಿದು ಬಂದಿಲ್ಲವಾದುದರಿಂದಲೂ ಭಟ್ಟಿಯು ವೈಯಾಕರಣನಾದ ಕವಿಯಾದರೂ ಅವನು ಯಾವ ಶಾಸ್ತ್ರಗ್ರಂಥವನ್ನೂ ಬರೆದಂತಿಲ್ಲವಾದುದರಿಂದಲೂ "ಮಹಾಕವಿರ್ಮಹಾ ವಿದ್ವಾನ್" ಎಂಬುದು ಇವರಿಬ್ಬರಲ್ಲಿ ಯಾರಿಗೂ ಅನ್ವಯಿಸಲಾರದು.

ವಾಕ್ಯಪದೀಯಕಾರ ಮತ್ತು ಶತಕತ್ರಯಕಾರ

ಒಬ್ಬನೇ ಭರ್ತೃಹರಿ ವಾಕ್ಯಪದೀಯವನ್ನೂ ಶತಕತ್ರಯವನ್ನೂ ರಚಿಸಿದನೆಂದು ಕನಿಷ್ಠಪಕ್ಷ ಮೂರು ಶತಮಾನಗಳಿಂದಲಾದರೂ, ವಿದ್ವದ್ವೃಂದದಲ್ಲಿ ಪ್ರಚಾರದಲ್ಲಿದೆ. ರಾಮಭದ್ರ ದೀಕ್ಷಿತನು (ಕ್ರಿ.ಶ. 17ನೆಯ ಶತಮಾನ) ತನ್ನ ಪತಂಜಲಿಚರಿತವೆಂಬ ಕಾವ್ಯದಲ್ಲಿ ಭರ್ತೃಹರಿಯು ಶತಕತ್ರಯವನ್ನೂ 'ವಾಕ್ಯಪದೀಯ'ವನ್ನೂ ರಚಿಸಿದನೆಂದೂ 'ವಾಕ್ಯಪದೀಯ'ಕ್ಕೆ ಹೇಲಾರಾಜನು ವ್ಯಾಖ್ಯಾನವನ್ನು ಬರೆದನೆಂದೂ ಹೇಳಿದ್ದಾನೆ.[18]

ದೀಕ್ಷಿತನು ಪರಿಭಾಷಾವೃತ್ತಿ ವ್ಯಾಖ್ಯಾನವನ್ನೂ ಬರೆದಿರುವುದರಿಂದ ಇವನು ವೈಯಾಕರಣನೂ ಹೌದು. ಇವನ ಮೇಲಿನ ಹೇಳಿಕೆಗೆ ಏನಾದರೂ ಆಧಾರವಿದ್ದಿತೋ ಅಥವಾ ಇದೇ ಕಾವ್ಯದ 7ನೇ ಸರ್ಗದಲ್ಲಿ ಹೇಳಿರುವ, ವರರುಚಿ, ವಿಕ್ರಮಾರ್ಕ, ಭಟ್ಟಿ ಮತ್ತು ಭರ್ತೃಹರಿ ಇವರು ನಾಲ್ವರೂ ಚಂದ್ರಗುಪ್ತನೆಂಬ ಬ್ರಾಹ್ಮಣನ ಪುತ್ರರೆಂಬ ಕಥೆಯಂತೆ ಇದೂ ದಂತಕಥೆಯೋ ತಿಳಿಯದು.

ಆಧುನಿಕ ವಿದ್ವಾಂಸರು ಈ ಇಬ್ಬರು ಗ್ರಂಥಕಾರರ ಏಕತ್ವ ಭಿನ್ನತ್ವ ವಿಷಯದಲ್ಲಿ ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆಯಲ್ಲಿ ವಾಕ್ಯಪದೀಯಕಾರನೂ ಶತಕತ್ರಯವನ್ನು ಬರೆದ ಭರ್ತೃಹರಿಯೂ ಒಬ್ಬನೋ ಅಲ್ಲವೋ ನಿರ್ಣಯವಾಗಿಲ್ಲ ವೆಂದು ಹೇಳಲಾಗಿದೆ. ಯುಧಿಷ್ಠಿರ ಮೀಮಾಂಸಕರು ಶತಕತ್ರಯಕಾರ ಯಾವ ಭರ್ತೃಹರಿಯೆಂಬುದು ಅಜ್ಞಾತವೆಂದಿದ್ದಾರೆ. 'ವಾಕ್ಯಪದೀಯ'ದ ಪುಣೆ ಆವೃತ್ತಿಯ ಸಂಪಾದಕರು, ವಾಕ್ಯಪದೀಯದ ಕರ್ತೃವೂ ಶತಕತ್ರಯಕಾರನೂ ಒಬ್ಬನೇ ಅಲ್ಲವೆಂದು ನಮಗೆ ತೋರುತ್ತದೆಯೆಂದು ಹೇಳಿದ್ದಾರೆ; ಆದರೆ ಈ ಅಭಿಪ್ರಾಯಕ್ಕೆ ಕಾರಣವೇನನ್ನೂ ಹೇಳಿಲ್ಲ.

ಕೋಸಂಬೀಯವರು ಈ ಇಬ್ಬರು ಗ್ರಂಥಕಾರರೂ ಭಿನ್ನರೆಂದು ಹೇಳಲು ಈ ಕಾರಣಗಳನ್ನು ಕೊಟ್ಟಿದ್ದಾರೆ :

(1) ಇತ್ಸಿಂಗನ ಪ್ರಕಾರ, 'ವಾಕ್ಯಪದೀಯ'ದ ಕರ್ತೃ ಭರ್ತೃಹರಿಯು ಕ್ರಿ.ಶ. 652ರಲ್ಲಿ ಮೃತನಾದನು ಮತ್ತು ಅವನು ಧರ್ಮನಿಷ್ಠನಾದ ಬೌದ್ಧ. ಶತಕತ್ರಯದಲ್ಲಿನ ಕೆಲವು ಸುಭಾಷಿತಗಳು ಮೂಲ ಪಂಚತಂತ್ರದಲ್ಲೂ ಶಾಕುಂತಲನಾಟಕದಲ್ಲೂ ಕಂಡುಬರುತ್ತವೆಯಾದುದರಿಂದ ಶತಕತ್ರಯಕಾರ ಈ ಗ್ರಂಥಗಳ ಕಾಲಕ್ಕಿಂತ ಹಿಂದಿನವನು; ಕ್ರಿ.ಶ. 7ನೆಯ ಶತಮಾನದಷ್ಟು ಅರ್ವಾಚೀನ ಕಾಲದವನಲ್ಲ. ಶತಕತ್ರಯ ದಲ್ಲಿ ಬೌದ್ಧಧರ್ಮಿಯು ಬರೆದಿರಬಹುದಾದ ಪದ್ಯಗಳಾವುವೂ ಕಂಡುಬರುವುದಿಲ್ಲ.

(2) ಶತಕತ್ರಯದಲ್ಲಿ ಪಾಣಿನಿವ್ಯಾಕರಣ ಸಮ್ಮತವಲ್ಲದ ಪ್ರಯೋಗಗಳಿವೆ. ಪಾಣಿನಿ ವ್ಯಾಕರಣ ಸಂಪ್ರದಾಯದ ಮಹಾವೈಯಾಕರಣನಾದ ವಾಕ್ಯಪದೀಯಕಾರ ಭರ್ತೃಹರಿಯು ಬರೆದ ಕೃತಿಯಲ್ಲಿ ಇಂತಹ ಅಪಪ್ರಯೋಗಗಳಿರಲಾರವು.[19]

ಭರ್ತೃಹರಿಯ ಮಹಾಭಾಷ್ಯದ ಟೀಕೆಯಲ್ಲಿ ಮನುಷ್ಯ ಜೀವನದ ಮತ್ತು ವ್ಯಾಕರಣ ಶಾಸ್ತ್ರದ ಮೂಲ ತತ್ತ್ವಗಳ ಪೂರ್ಣಪ್ರತಿಪಾದನೆಯೂ ಅನೇಕ ಕುಟುಂಬಗಳ ಏಳುಬೀಳುಗಳಿಗೆ ಕಾರಣಗಳ ನಿರೂಪಣೆಯೂ ಇವೆಯೆಂದು ಇತ್ಸಿಂಗನು ಹೇಳಿದ್ದಾನೆ ! ಕಾಶಿಕಾ ವೃತ್ತಿಯು ವಿಶ್ವದ ನಿಯಮಗಳನ್ನೂ ದೇವತೆಗಳ ಮತ್ತು ಮನುಷ್ಯರ ನಿಬಂಧನೆಗಳನ್ನೂ ಸ್ಪಷ್ಟೀಕರಿಸುತ್ತದೆಯೆಂದೂ ಅವನ ಹೇಳಿಕೆ !

ಇಂತಹ ವಿಲಕ್ಷಣವಾದ ವಿವರಣೆಗಳನ್ನು ನೋಡಿದರೆ, ಇತ್ಸಿಂಗನು ಆ ಗ್ರಂಥ ಗಳನ್ನು ಸ್ವತಃ ಪರಿಶೀಲಿಸಿರಲಿಲ್ಲವೆಂದೂ ಶತಕತ್ರಯ. 'ವಾಕ್ಯಪದೀಯ' ಮೊದಲಾದ ಗ್ರಂಥಗಳ ವಿಷಯವಾಗಿ ಇತರರಿಂದ ಕೇಳಿದುದನ್ನು ತಾನು ಅರ್ಥಮಾಡಿಕೊಂಡಂತೆ ಬರೆದಿದ್ದಾನೆಂದೂ ಅವನು ಕೇಳಿದ್ದಾಗಲೇ ವಿಷಯಗಳು ಅಸ್ತವ್ಯಸ್ತವಾಗಿದ್ದಿರ ಬಹುದೆಂದೂ ಸಹ ವ್ಯಕ್ತ ಪಡುತ್ತದೆ.[20] ಆದುದರಿಂದ ಇತರ ಮೂಲಗಳಿಂದ ಸಮರ್ಥನೆ ದೊರೆತ ಹೊರತು, ಭರ್ತೃಹರಿಯ ವಿಷಯುಕವಾದ ಇತ್ಸಿಂಗನ ಹೇಳಿಕೆಗಳು ಸ್ವೀಕಾರಾರ್ಹವಾಗಲಾರವು.

ಭರ್ತೃಹರಿಯು ವಾಕ್ಯಪದೀಯದ ಪ್ರಾರಂಭದ ಕಾರಿಕೆಗಳಲ್ಲಿ ಬ್ರಹ್ಮದ ಸ್ವರೂಪ ಮತ್ತು ಆಗಮ ಪ್ರಾಮಾಣ್ಯಗಳ ವಿಷಯವಾಗಿ ಹೀಗೆ ಹೇಳಿದ್ದಾನೆ :

ಯಾವುದು ಅಕ್ಷರಗಳಿಗೆ ನಿಮಿತ್ತವೋ, ಯಾವುದರಿಂದ ಜಗತ್ತು ಉತ್ಪನ್ನವಾಯಿತೋ ಆ ಉತ್ಪತ್ತಿವಿನಾಶರಹಿತವಾದ ಶಬ್ದಾತ್ಮಕವಾದ ಬ್ರಹ್ಮವು ಅರ್ಥರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಬ್ರಹ್ಮ ಒಂದೇ ಎಂದು ವೇದಗಳಲ್ಲಿ ಹೇಳಲ್ಪಟ್ಟಿದ್ದು, ಅದು ತನ್ನ ಶಕ್ತಿಗಳಿಂದ ಅಭಿನ್ನವಾದರೂ, ಅನೇಕ ಶಕ್ತಿಗಳಿಗೆ ಆಶ್ರಯವಾಗಿರುವುದರಿಂದ ಬೇರೆ ಬೇರೆಯಾಗಿರುವಂತೆ ಭಾಸವಾಗುತ್ತದೆ. ಸರ್ವಕ್ಕೂ ಕಾರಣವಾದ ಈ ಒಂದೇ ಬ್ರಹ್ಮವು ಭೋಕ್ತೃ (ಅನುಭವಿಸುವವನು), ಭೋಕ್ತವ್ಯ (ಅನುಭವಿಸಬೇಕಾದುದು) ಮತ್ತು ಭೋಗ (ಅನುಭವ) ರೂಪದಲ್ಲಿ ಅನೇಕವಾಗಿ ಕಾಣಿಸಿಕೊಳ್ಳುತ್ತದೆ. ಬ್ರಹ್ಮಪ್ರಾಪ್ತಿಗೆ ಉಪಾಯವೂ ಬ್ರಹ್ಮಪ್ರತಿಬಿಂಬವೂ ಆದ ವೇದವು ಒಂದೇ ಆದರೂ, ಋಷಿಗಳು ಅದಕ್ಕೆ ಶಾಖೆಗಳಿವೆಯೋ ಎಂಬಂತೆ ಬೋಧಿಸಿದ್ದಾರೆ.[21]

ಅದೇ ಕಾಂಡದಲ್ಲಿ ಮುಂದೆ, ವೇದಾಂಗಗಳಲ್ಲಿ ವ್ಯಾಕರಣವು ಮುಖ್ಯವಾದು ದೆಂದೂ ವೇದವನ್ನು ಬಿಟ್ಟು ಬರಿಯ ತರ್ಕದಿಂದ ಧರ್ಮವನ್ನು ನಿಶ್ಚಯಿಸಲಾಗುವುದಿಲ್ಲ. ಋಷಿಗಳ ಜ್ಞಾನವೂ ಸಹ ವೇದಮೂಲವಾದದ್ದು, ವೇದಶಾಸ್ತ್ರಗಳಿಗೆ ವಿರುದ್ಧವಲ್ಲದ ತರ್ಕವು ತಿಳಿಯದವರಿಗೆ ಕಣ್ಣಿನಂತೆ ಜ್ಞಾನದಾಯಕವಾದುದೆಂದೂ ಹೇಳಿದ್ದಾನೆ.[22]

ಈ ಭರ್ತೃಹರಿಯ ವಿಷಯದಲ್ಲಿ "ವೇದವಿದಾಮಲಂಕಾರಭೂತಃ ವೇದಾಂಗತ್ವಾತ್ ಪ್ರಮಾಣಿತ ಶಬ್ದಶಾಸ್ತ್ರ" ಎಂಬ ವಿಶೇಷಣಗಳನ್ನು ವರ್ಧಮಾನನು ಉಪಯೋಗಿಸಿದ್ದಾನೆಂದು ಹಿಂದೆಯೇ ಹೇಳಿದೆ.

ಹೀಗೆ, ಅಂತರಂಗ ಬಹಿರಂಗ ಸಾಕ್ಷ್ಯಗಳೆರಡರಿಂದಲೂ, ವಾಕ್ಯಪದೀಯಕಾರನು ಶಬ್ದಾದ್ವೈತಿಯಾದ ವೈದಿಕಧರ್ಮಿ ಎಂದು ಸಿದ್ಧವಾಗುತ್ತದೆ.

ವಿಕ್ರಮ ಸಂವತ್ 702ರಿಂದ 705ರ ಮಧ್ಯವರ್ತಿ ಕಾಲದಲ್ಲಿ ಭಾಗವೃತ್ತಿಯನ್ನು ರಚಿಸಿದ ವಿಮಲಮತಿಯು ವಲಭೀನಿವಾಸಿ. ಭರ್ತೃಹರಿಯೆಂಬ ಉಪನಾಮ ಹೊಂದಿದ್ದ ಇವನು ಬೌದ್ಧಧರ್ಮಿ. ಕ್ರಿ.ಶ. 652ರಲ್ಲಿ ಮೃತನಾದನೆಂದು ಇತ್ಸಿಂಗನು ಹೇಳಿರುವ ಭರ್ತೃಹರಿ ಇವನಿರಬೇಕು. ಮೃತನಾದವನು ವಾಕ್ಯಪದೀಯಕಾರ ಭರ್ತೃಹರಿಯೆಂಬ ಭ್ರಾಂತಿಯಿಂದ ಇತ್ಸಿಂಗನು ಹಾಗೆ ಬರೆದಿರಬಹುದು. ಇದು ಯುಧಿಷ್ಠಿರ ಮೀಮಾಂಸಕರ ಅಭಿಪ್ರಾಯ.[23]

ಮಹಾವೈಯಾಕರಣನಾದ ಭಟ್ಟಿಯು 4ನೆಯ ಶ್ರೀಧರಸೇನನ ಕಾಲದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿ ಮೃತನಾದನೆಂದೂ ಇತ್ಸಿಂಗನು ಬರೆದಿರುವುದು ಇವನ ಮರಣದ ವಿಷಯವೆಂದೂ ಭಾಗೀರಥ ಪ್ರಸಾದ ತ್ರಿಪಾಠಿಗಳ ಮತ. ಭಟ್ಟಿಯು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದನೆಂದು ಹೇಳಲು ಆಧಾರವೇನೆಂದು ತ್ರಿಪಾಠಿಗಳು ಹೇಳಿಲ್ಲ.[24]

ಕೋಸಂಬೀಯವರು ಶತಕತ್ರಯದ ಕೆಲವು ಶ್ಲೋಕಗಳಲ್ಲಿ ಅಪಪ್ರಯೋಗಗಳಿವೆಯೆಂದೂ ಕೆಲವು ಶ್ಲೋಕಗಳು ಪಂಚತಂತ್ರ ಶಾಕುಂತಲಗಳಲ್ಲಿ ಕಂಡುಬರುತ್ತವೆಯೆಂದೂ ಹೇಳಿದ್ದಾರಷ್ಟೆ ಈ ಶ್ಲೋಕಗಳು ಪ್ರಕ್ಷಿಪ್ತಗಳಿರಬಹುದಾದುದರಿಂದ ಇಬ್ಬರು ಗ್ರಂಥಕಾರರ ಏಕತ್ವ ಭಿನ್ನತ್ವದ ಅಥವಾ ಶತಕಕಾರನ ಕಾಲದ ನಿರ್ಣಯಕ್ಕೆ ಇವು ಸಾಧಕಗಳಾಗ ಲಾರವು. ಕೋಸಂಬೀಯವರಿಗೆ ಸಿಕ್ಕಿದ ಶತಕಗಳ ಅತಿಪ್ರಾಚೀನ ಹಸ್ತಪ್ರತಿ ಕ್ರಿ.ಶ. 15ನೆಯ ಶತಮಾನದ್ದೆಂದು ಅವರೇ ಹೇಳಿದ್ದಾರೆ. ಆ ಕಾಲಕ್ಕಾಗಲೇ ಗ್ರಂಥರಚನೆಯಾಗಿ ಸಾವಿರ ವರ್ಷಗಳಷ್ಟು ಕಾಲ ಕಳೆದಿತ್ತು. ಈ ಗ್ರಂಥದ ಔತ್ತರೇಯ ಮತ್ತು ದಾಕ್ಷಿಣಾತ್ಯ ಪಾಠಸಂಪ್ರದಾಯಗಳು ಹುಟ್ಟುವುದಕ್ಕೆ ಎಷ್ಟೋ ಮೊದಲೇ ಈ ಪ್ರಕ್ಷಿಪ್ತಗಳು ಸೇರಿ, ಆ ಪದ್ಯಗಳು ಮೊದಲ ಗುಂಪಿನ 200 ಪದ್ಯಗಳಲ್ಲೂ ಕಂಡುಬರಬಹುದು. ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಈ ಎಲ್ಲ ಕಾರಣಗಳಿಂದ ವಾಕ್ಯಪದೀಯ ಮತ್ತು ಶತಕಗಳ ಕರ್ತೃಗಳು ಭಿನ್ನರೆಂಬ ಕೋಸಂಬೀಯವರ ನಿರ್ಣಯ ನಿರಾಧಾರವಾಗುತ್ತದೆ.

'ವಾಕ್ಯಪದೀಯ' ಮತ್ತು ಶತಕತ್ರಯಗಳು ಏಕಕರ್ತೃಕಗಳೆಂಬುದಕ್ಕೆ ಒಂದು ಆಧಾರವೂ ದೊರೆತಿದೆ :

ಭರ್ತೃಹರಿಯ 'ಶಬ್ದಧಾತು ಸಮೀಕ್ಷಾ' ಎಂಬ ಗ್ರಂಥದ ವಿಷಯವನ್ನು ಹಿಂದೆಯೇ ಪ್ರಸ್ತಾಪಿಸಿದೆ. ಆ ಗ್ರಂಥ ಇನ್ನೂ ದೊರಕಿಲ್ಲ. ಆದರೆ ಸೋಮಾನಂದನು (ಕ್ರಿ.ಶ. 9ನೆಯ ಶತಮಾನದವನು) ತನ್ನ ಶಿವದೃಷ್ಟಿ ಎಂಬ ಗ್ರಂಥದಲ್ಲಿ ವೈಯಾಕರಣರ ಶಬ್ದಾದ್ವೈತ ವಾದವನ್ನು ಖಂಡಿಸುವ ಸಂದರ್ಭದಲ್ಲಿ, ಭರ್ತೃಹರಿಯ ಮತವನ್ನು ಹೇಳುವಾಗ, ಅವನ ವಾಕ್ಯಪದೀಯ ಮತ್ತು ಶಬ್ದಧಾತು ಸಮೀಕ್ಷೆಗಳೆರಡರಿಂದಲೂ ಉದ್ಧರಣಗಳನ್ನು ಕೊಟ್ಟಿದ್ದಾನೆ. ಸೋಮಾನಂದನ ಶಿಷ್ಯ ಉತ್ಪಲಾಚಾರ್ಯನು ತನ್ನ ಗುರುವಿನ ಗ್ರಂಥದ ಮೇಲಿನ ವ್ಯಾಖ್ಯಾನದಲ್ಲಿ ಶಬ್ದಧಾತು ಸಮೀಕ್ಷೆಯದೆಂದು ಎರಡು ಪದ್ಯಗಳನ್ನು ಕೊಟ್ಟಿದ್ದಾನೆ. ನೀತಿಶತಕದಲ್ಲೂ ಇರುವ "ದಿಕ್ಕಾಲಾದ್ಯನವಚ್ಛಿನ್ನಾನಂತ" ಎಂದು ಆರಂಭವಾಗುವ ಪದ್ಯವು ಅವುಗಳಲ್ಲೊಂದು.25 ಈ ಪದ್ಯವನ್ನು ಕೋಸಂಬೀಯವರು ಸಂಶಯಿತ ಶ್ಲೋಕಗಳೆಂಬ ಎರಡನೆಯ ಗುಂಪಿಗೆ ಸೇರಿಸಿದ್ದಾರೆ. ಆದರೆ ಅವರ ಮೊದಲನೆಯ ಗುಂಪಿನಲ್ಲಿ 200 ಪದ್ಯಗಳು ಮಾತ್ರ ಇರುವುದರಿಂದ, 152 ಸಂಶಯಿತ ಶ್ಲೋಕಗಳಲ್ಲಿ ಬಹು ಭಾಗ ಭರ್ತೃಹರಿಯವೇ ಆಗಿರಬೇಕು.

ಭರ್ತೃಹರಿಯ ಮಹಾಭಾಷ್ಯದ ಟೀಕೆಯಲ್ಲಿ ಮನುಷ್ಯ ಜೀವನದ ಮೂಲತತ್ತ್ವಗಳ ಪ್ರತಿಪಾದನೆಯಿದೆಯೆಂದು ಇತ್ಸಿಂಗನು ಹೇಳಿದ್ದಾನಷ್ಟೆ. ಅಂತಹ ಪ್ರತಿಪಾದನೆ ಶತಕತ್ರಯದಲ್ಲಿರುವುದರಿಂದ, ಅವನು ತಪ್ಪು ತಿಳಿವಳಿಕೆಯಿಂದ ಅದೂ ಮಹಾಭಾಷ್ಯದ ಟೀಕೆಯದೆಂದು ಹೇಳಿರಬೇಕು. ಇಂತಹ ಅಚಾತುರ್ಯ ಇಬ್ಬರು ಭರ್ತೃಹರಿಗಳ ಗ್ರಂಥಗಳ ವಿಷಯದಲ್ಲಿ ನಡೆದಿರುವುದಕ್ಕಿಂತ ಒಬ್ಬನೇ ಗ್ರಂಥಕಾರನ ಎರಡು ಗ್ರಂಥಗಳ ವಿಷಯದಲ್ಲಿ ನಡೆದಿರುವುದು ಹೆಚ್ಚು ಸಂಭಾವ್ಯ. ಹಾಗಾಗಿದ್ದರೆ, ಇತ್ಸಿಂಗನ ಕಾಲದಲ್ಲಿಯೇ 'ವಾಕ್ಯಪದೀಯ' ಮತ್ತು ಶತಕತ್ರಯಗಳು ಏಕಕರ್ತೃಕಗಳೆಂಬ ಭಾವನೆ ಇದ್ದಿತೆಂದಾಗುತ್ತದೆ; ಆ ಭಾವನೆಯು ಸತ್ಯವಾಗಿರಲೂಬಹುದು.

"ದಿಕ್ಕಾಲಾದಿ" ಶ್ಲೋಕವು ಶತಕತ್ರಯದ್ದೇ ಅಲ್ಲವೇ ಎಂಬ ಸಂಶಯ ನಿವಾರಣೆ ಯಾಗುವವರೆಗೆ, 'ವಾಕ್ಯಪದೀಯ' ಮತ್ತು ಶತಕತ್ರಯ ಏಕಕರ್ತೃಕಗಳೇ ಎಂದು ಖಚಿತ

ವಾಗಿ ಹೇಳಲಾಗುವುದಿಲ್ಲವಾದರೂ, ಮೇಲಿನ ಎಲ್ಲ ವಿಷಯಗಳನ್ನೂ ಪರಿಶೀಲಿಸಿದರೆ, ಸದ್ಯಕ್ಕೆ ಅವುಗಳು ಏಕಕರ್ತೃಕಗಳೆಂದು ಒಪ್ಪಬಹುದೆಂದೂ "ಮಹಾಕವಿರ್ಮಹಾ ವಿದ್ವಾನೇಕೋ ಭರ್ತೃಹರಿಃ" ಎಂಬ ಉಕ್ತಿಯು ಈ ಗ್ರಂಥಗಳ ಕರ್ತೃ ಭರ್ತೃಹರಿಗೆ ಅನ್ವಯಿಸುತ್ತದೆಯೆಂದೂ ಹೇಳಬಹುದು.

ಟಿಪ್ಪಣಿಗಳು

1. ಪ್ರಕಾಶಕರು : Bharatiya Vidya Bhavan, Bombay (Singhi Jain Series Number 23); 1948
2. If, therefore, one man wrote these verses, he must belong to the opening centuries of the Christian era, Introduction p.78
3. ಭರ್ತೃಹರಿ ವಿರಚಿತಂ ವಾಕ್ಯಪದೀಯಂ (Vakyapadiya of Bhartṛhari) Ed. K. V. Abhyankar & V.P. Limaye, Poona University; 1965; Introduction Page V.
4. ಸಂಸ್ಕೃತ ವ್ಯಾಕರಣ ಶಾಸ್ತ್ರಾ ಇತಿಹಾಸ್, ಪ್ರಕಾಶಕರು, ರಾಮಲಾಲ ಕಪೂರ ಟ್ರಸ್ಟ್, ಬಹಾಲಗಡ, ಜಿಲಾ ಸೋನೀಪತ, ಹರಯಾಣಾ, ದ್ವಿತೀಯ ಭಾಗ, ದ್ವಿತೀಯ ಸಂಸ್ಕರಣ; 1974 (ವಿ.ಸಂ. 2030), ಪು. 399
5. ಮೇಲಿನ ಗ್ರಂಥ; ಪ್ರಥಮ ಭಾಗ (ತೃತೀಯ ಸಂಸ್ಕರಣ) - ವಿ.ಸಂ. 2030, ಪು. 360, 369-70 ಮತ್ತು 366.
6. ಪೂರ್ವೋಕ್ತ ಗ್ರಂಥ : Introduction ಪುಟಗಳು XII, XIII
7. ಪೂರ್ವೋಕ್ತ ಗ್ರಂಥ, ಪ್ರಥಮ ಭಾಗ, ಪುಟಗಳು 366, 374
8. ಕಾಶಿಕಾ ಭಾಗವೃತ್ತ್ಯೋಶ್ಚೇತ್ ಸಿದ್ಧಾಂತಂ ಬೋದ್ಧುಮಸ್ತಿ ಧೀಃ।
ತದಾ ವಿಚಿಂತ್ಯತಾಂ ಭ್ರಾತರ್ಭಾಷಾವೃತ್ತಿರಿಯಂ ಮಮ ॥
ಶ್ರೀಮತ್ಪುರುಷೋತ್ತಮ ದೇವ ವಿರಚಿತಾ ಭಾಷಾವೃತ್ತಿಃ, ತಾರಾ ಪಬ್ಲಿಕೇಷನ್ಸ್, ವಾರಾಣಸೀ 1971, ಪುಟ 522
9. ಪ್ರಕಾಶಕರು, ಭಾರತೀಯ ಪ್ರಾಚ್ಯ ವಿದ್ಯಾ ಪ್ರತಿಷ್ಠಾನ, ಅಜಮೇರ್; ವಿ.ಸಂ. 2021 (ಕ್ರಿ.ಶ. 1965)
10. ಏಕವೃತ್ತೌ = ಸಾಧಾರಣವೃತ್ತೌ, ವೈದಿಕೇ ಲೌಕಿಕೇ ಚ ವಿವರಣೇ ಇತ್ಯರ್ಥಃ। "ಏಕವೃತ್ತೌ" ಇತಿ ಕಾಶಿಕಾಯಾಂ ವೃತ್ತಾವಿತ್ಯರ್ಥಃ। 'ಭಾಷಾವೃತ್ತಿ', ಪುಟ 4ರಲ್ಲಿ ಅಡಿಟಿಪ್ಪಣಿ.
11. ಅಸ್ಯಾವೃತ್ತೇಃ ಪ್ರಾಗಷ್ಟಾಧ್ಯಾಯಾಃ ಯಾವತ್ಯೋ ವೃತ್ತಯಃ ನಿಷ್ಪನ್ನಾಃ ತಾಸು ಅಷ್ಟಾಧ್ಯಾಯಾಃ ಸರ್ವಾಣಿ ಸೂತ್ರಾಣಿ ತತ್ಕ್ರಮಮನುರುಧ್ಯೈವ ಯಥಾಸ್ಥಾನಂ ವ್ಯಾಖ್ಯಾತಾ ನ್ಯಾಸನ್। ಅಸ್ಯಾಮೇವ ವೃತ್ತೌ ಸರ್ವಪ್ರಥಮಂ ಲೌಕಿಕವೈದಿಕಸೂತ್ರಾಣಿ ದ್ವಿಧಾ ವಿಭಜ್ಯ ಗ್ರಂಥಕರ್ತುಃ ಕ್ರಮಮುಲ್ಲಂಘ್ಯ ಪೃಥಕ್ ಪೃಥಕ್ ವ್ಯಾಖ್ಯಾತಾನಿ। ಅತ ಏವಾಸ್ಯಾಃ 'ಭಾಗವೃತ್ತಿ' ಇತ್ಯನ್ವರ್ಥಾ ಸಂಜ್ಞಾಭೂತ್; ತತ್ಪ್ರತಿಪಕ್ಷ ಭೂತಾಯಾಃ

ಕಾಶಿಕಾಯಾಶ್ಚ ಏಕವೃತ್ತಿರಿತಿ । ಭಾಗವೃತ್ತಿಸಂಕಲನಂ, ಪ್ರಾಸ್ತಾವಿಕ ಪುಟ 3.

12. ಭಾಗವೃತ್ತಿ ಸಂಕಲನಂ, ಪ್ರಾಸ್ತಾವಿಕ, ಪುಟ 1, 2 ಮತ್ತು ಸಂಸ್ಕೃತ ವ್ಯಾಕರಣಶಾಸ್ತ್ರಕಾ ಇತಿಹಾಸ್, ಪ್ರಥಮ ಭಾಗ ಪುಟ 471.

13. ಡಾ॥ ಕೆ. ಕೃಷ್ಣಮೂರ್ತಿ, ವಿದ್ವಾನ್ ಎನ್. ರಂಗನಾಥಶರ್ಮಾ, ವಿದ್ವಾನ್ ಎಚ್. ಕೆ. ಸಿದ್ಧಗಂಗಯ್ಯ; ಪ್ರಕಾಶನ — ಕರ್ನಾಟಕ ಸರ್ಕಾರ ಪಠ್ಯಪುಸ್ತಕಗಳ ಇಲಾಖೆ, 1976, ಪುಟ 335

14. 'ಸಂಸ್ಕೃತ ವ್ಯಾಕರಣ ಶಾಸ್ತ್ರಕಾ ಇತಿಹಾಸ್', ದ್ವಿತೀಯ ಭಾಗ ಪುಟಗಳು 446-47

15. ಅದೇ, ಪ್ರಥಮ ಭಾಗ, ಪುಟ 371-373

16. ಅದೇ, ಪುಟಗಳು 371 ಮತತು 361

17. "ಶಿಶುಕ್ರಂದಯಮಸಭ ದ್ವಂದ್ವೇದ್ರ ಜನನಾದಿಭ್ಯಶ್ಛಃ" (4-3-88) ಸೂತ್ರದ ವೃತ್ತಿಯಲ್ಲಿ ಶಿಶುಕ್ರಂದಾದಿಭ್ಯೋ ದ್ವಿತೀಯಾ ಸಮರ್ಥೇಭ್ಯಶ್ಛಃ ಪ್ರತ್ಯಯೋಭವತಿ ಅಧಿಕೃತ್ಯ ಕೃತೇ ಗ್ರಂಥೇ...... ದ್ವಂದ್ವಾತ್, ಅಗ್ನಿಕಾಶ್ಯಪೀಯಃ । ಶ್ಯೇನಕಪೋತೀಯಃ । ಶಬ್ದಾರ್ಥ ಸಂಬಂಧೀಯಂ ಪ್ರಕರಣಂ । ವಾಕ್ಯಪದೀಯಂ (ಕಾಶಿಕಾವೃತ್ತಿಃ - ತಾರಾ ಪಬ್ಲಿಕೇಷನ್ಸ್, ವಾರಾಣಸೀ 1966)

18. ಸಂದರ್ಭಣೇನ ಚ ಸ ಭರ್ತೃಹರಿಃ ಪದಾನಾಂ
ಕಂದರ್ಪ ಕಾರ್ಮುಕ ರಸಾರ್ಪಣ ಕರ್ಮಠೇನ ।
ಶೃಂಗಾರನೀತಿ ವಿಗತ ಸ್ಪೃಹತಾನುಬಂಧ
ಮನ್ವಟ್ಟ ಪದ್ಯಶತಕತ್ರಯಮಾತತಾನ ॥
ಗ್ರಂಥೋऽಧಿಕೃತ್ಯ ಕಿಲ ವಾಕ್ಯ ಪದೇ ಬುಧಾನಾಂ
ಚಕ್ರೇऽಥ ತೇನ ನಿಖಿಲಾರ್ಥವಿಬೋಧಹೇತುಃ ।
ಯಸ್ಯಾತನೋದ್ವಿವರಣ ಪ್ರಣಯೇನ ಹೇಲಾ
ರಾಜಃ ಶಶೀವ ಕಿರಣೇನ ವಿವೃದ್ಧಿಮಬ್ಧೇಃ ॥ (8-10, 11)

19. ಕೋಸಂಬೀಯವರ ಪೂರ್ವೋಕ್ತ ಗ್ರಂಥದ ಪ್ರಸ್ತಾವನೆ, ಪುಟಗಳು 78-79.

20. When he says about Bhartrhari's Commentary on the Mahabhashya that "it fully treats of the principles of human life as well as of the grammatical science and also relates the reasons of the rise and decline of many families", one feels that such a remark about this grammatical work is as strange as what he says about the Kasika Vritti, namely, that "it exposes the laws of the universe and the regulations of gods and men" One feels that Itsing is not speaking from first-hand Knowledge, but only recording what he understood of

what he had heard and what he had heard seems to have mixed up the three Satakas and the Vakyapadiya.

Bhartrhari by K. A. Subramania Iyer. Pub. — Deccan College Post Graduate and Research Institute, Poona 1969. Page 11.

21. ವಾಕ್ಯಪದೀಯದ, ಆಗಮ ಸಮುಚ್ಚಯವೆಂದೂ ಹೆಸರುಳ್ಳ, ಬ್ರಹ್ಮಕಾಂಡದಲ್ಲಿನ ಕಾರಿಕೆಗಳು :

ಅನಾದಿನಿಧನಂ ಬ್ರಹ್ಮ ಶಬ್ದತತ್ತ್ವಂ ಯದಕ್ಷರಮ್ ।
ವಿವರ್ತತೇಽರ್ಥಭಾವೇನ ಪ್ರಕ್ರಿಯಾ ಜಗತೋ ಯತಃ ॥1॥
ಏಕಮೇವ ಯದಾಮ್ನಾತಂ ಭಿನ್ನಂ ಶಕ್ತಿವ್ಯಪಾಶ್ರಯಾತ್ ।
ಅಪೃಥಕ್ತ್ವೇಽಪಿ ಶಕ್ತಿಭ್ಯಃ ಪೃಥಕ್ತ್ವೇನೇವ ವರ್ತತೇ ॥2॥
ಏಕಸ್ಯ ಸರ್ವಬೀಜಸ್ಯ ಯಸ್ಯ ಚೇಯಮನೇಕಧಾ ।
ಭೋಕ್ತೃ ಭೋಕ್ತವ್ಯರೂಪೇಣ ಭೋಗರೂಪೇಣ ಚ ಸ್ಥಿತಿಃ ॥4॥
ಪ್ರಾಪ್ತ್ಯುಪಾಯೋಽನುಕಾರಶ್ಚ ತಸ್ಯ ವೇದೋ ಮಹರ್ಷಿಭಿಃ ।
ಏಕೋಽಪ್ಯನೇಕ ವರ್ತ್ಮೇವ ಸಮಾಮ್ನಾತಃ ಪೃಥಕ್ ಪೃಥಕ್ ॥5॥

— ವಾಕ್ಯಪದೀಯಂ (ಬ್ರಹ್ಮಕಾಂಡಂ) ಅಂಬಾಕರ್ತ್ರೀ ವ್ಯಾಖ್ಯಯಾ ಸಹಿತಂ,
ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ, ವಾರಾಣಸೀ 1976.

22. ಪ್ರಥಮಂ ಛಂದಸಾಮಂಗಮಾಹುರ್ವ್ಯಾಕರಣಂ ಬುಧಾಃ 11ರ ಉತ್ತರಾರ್ಧ
ನ ಚಾಗಮಾದೃತೇ ಧರ್ಮಸ್ತರ್ಕೇಣ ವ್ಯವತಿಷ್ಠತೇ ।
ಋಷೀಣಾಮಪಿ ಯಜ್ಜ್ಞಾನಂ ತದಪ್ಯಾಗಮ ಪೂರ್ವಕಮ್ ॥30॥
ವೇದಶಾಸ್ತ್ರಾವಿರೋಧೀ ಚ ತರ್ಕಶ್ಚಕ್ಷುರಪಶ್ಯತಾಮ್ । 135ರ ಪೂರ್ವಾರ್ಧ

23. ಪೂರ್ವೋಕ್ತ ಗ್ರಂಥ, ಪ್ರಥಮ ಭಾಗ ಪುಟಗಳು 374, 375

24. ಪರಮಭಟ್ಟಾರಕಸ್ಯ ಶ್ರೀಧರಸೇನಚತುರ್ಥಸ್ಯ ಶಾಸನಕಾಲೇ ಮಹಾವೈಯಾಕರಣೋ ಭಟ್ಟಿರಯಂ ಬೌದ್ಧಧರ್ಮಂ ಗೃಹೀತ್ವಾ ನಿಧನಂ ಗತ ಇತ್ಸಿಂಗೇನ ಭರ್ತೃಹರಿ ಪದೇನ ಸ್ಮೃತಃ । ವಲಭ್ಯಾಂ ತದಾನೀಂ ಪ್ರಾಕೃತಭಾಷಾ ಪ್ರಾಧಾನ್ಯಾತ್ ಭರ್ತೃಹರಿ ಶಬ್ದಗತಂ ಭರ್ತೃಪದಂ ಭಟ್ಟಿಪದೇನ ವ್ಯಪದಿಷ್ಟಮ್ । ತಚ್ಚ ಸ್ವಾಮಿವಾಚಕತ್ವಾತ್ ಸಮಾದರಾಸ್ಪದಂ ಮನ್ಯತೇ ಸ್ಮ । ಇತ್ಥಂ, ಇತ್ಸಿಂಗಸ್ಮೃತೋ ಮಹಾವೈಯಾಕರಣೋ ಬೌದ್ಧೋ ಭರ್ತೃಹರಿರ್ಭಟ್ಟಿಪದವಾಚ್ಯಃ, ನ ತು ವಾಕ್ಯಪದೀಯಕಾರ ಇತಿ ಸಿದ್ಧಮ್ ।

'ವಾಕ್ಯಪದೀಯಂ' ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಕಟನೆ,

ಪ್ರಾಸ್ತಾವಿಕಂ, ಪುಟ 13

25. ಉಕ್ತೋ ಯಾವಚ್ಛಬ್ದಧಾತು ಸಮೀಕ್ಷಾಯಾಮಪಿ ವಿದ್ವದ್ಭರ್ತೃಹರಿಣಾ,
ದಿಕ್ಕಾಲಾದಿಲಕ್ಷಣೇನ ವ್ಯಾಪಕತ್ವಂ ವಿಹನ್ಯತೇ ।
ಅವಶ್ಯಂ ವ್ಯಾಪಕೋ ಯೋ ಹಿ ಸರ್ವದಿಕ್ಷು ಸ ವರ್ತತೇ ॥
ದಿಕ್ಕಾಲಾದ್ಯನವಚ್ಛಿನ್ನಾನಂತಚಿನ್ಮಾತ್ರಮೂರ್ತಯೇ ।
ಸ್ವಾನುಭೂತ್ಯೇಕಮಾನಾಯ ನಮಶ್ಶಾಂತಾಯ ತೇಜಸೇ ॥

Bhartrhari by K. A. Subramania Iyer, ಪುಟಗಳು 9, 13 21 ಮತ್ತು 407.

'ಕುಂಭಿನೀ' ಶಬ್ದಾರ್ಥ ವಿಚಾರ

ಶ್ರೀ ಟಿ. ಕೇಶವಭಟ್ಟರ "ಶ್ರೀ ಗುರುಚರಿತಾಮೃತ"ವೆಂಬ ಗ್ರಂಥದ ವಿಮರ್ಶೆಯಲ್ಲಿ, ವಿದ್ವಾನ್ ರಂಗನಾಥಶರ್ಮರು,

"ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಎಂಬ ಪದವನ್ನು (4-26) ಕನ್ನಡ ಕಾವ್ಯಗಳಲ್ಲಿ ಪ್ರಯೋಗಿಸಿದ್ದುಂಟು. ಇದರ ಬಗೆಯೇನೆಂಬುದು ವಿಚಾರಣೀಯ. ಸಂಸ್ಕೃತ ಸಾಹಿತ್ಯದಲ್ಲಾಗಲೀ ಕೋಶದಲ್ಲಾಗಲಿ ಈ ಪದವನ್ನು ಇದುವರೆಗೆ ನಾನು ಕಂಡಿಲ್ಲ" - ಎಂದು ಹೇಳಿದ್ದಾರೆ[1].

"ಕುಂಭಿನಿ - ಒಂದು ಟಿಪ್ಪಣಿ" ಎಂಬ ಲೇಖನದಲ್ಲಿ ಶ್ರೀ ಯ. ಕೃಷ್ಣಶರ್ಮರು - "ಅಮರ ಕೋಶದಲ್ಲಾಗಲಿ ಶಬ್ದಾರ್ಥ ಕೌಸ್ತುಭದಲ್ಲಾಗಲಿ ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ[2] ಶಬ್ದ ಕಂಡು ಬರುವುದಿಲ್ಲ" — ಎಂದು ಹೇಳಿ, ಈ ಶಬ್ದ ಪ್ರಯೋಗವಿರುವ 'ಹೃದಯಾಮೃತ'ದ ಶ್ಲೋಕವೊಂದನ್ನು ಕೊಟ್ಟಿದ್ದಾರೆ.[3]

ಶ್ರೀ ಕೃಷ್ಣಶರ್ಮರ ಲೇಖನವನ್ನು ಗಮನಿಸಿದ ಶ್ರೀ ಸೀತಾರಾಮ ಜಾಗೀರ್‌ದಾರರು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಉದಾಹೃತವಾದ ಕ್ರಿ.ಶ. 1044ರ ಶಾಸನದಲ್ಲಿನ 'ಕುಂಭಿನಿ' ಪದಪ್ರಯೋಗದತ್ತ ಗಮನ ಸೆಳೆದು, ಅಮರ ಕೋಶದ (ಲೂಯಿರೈಸ್ ಆವೃತ್ತಿ) ಭೂಮಿವರ್ಗದಲ್ಲಿನ ಮೂರು ಶ್ಲೋಕಗಳನ್ನು ಕೊಟ್ಟು, ಅಲ್ಲಿ 'ಕುಂಭಿನೀ' ಶಬ್ದವಿದೆಯೆಂದಿದ್ದಾರೆ.[4] ಆ ಶ್ಲೋಕಗಳಲ್ಲಿ ಮೂರನೆಯದು :

ವಿಪುಲಾ ಗಹ್ವರೀ ಧಾತ್ರೀ ಗೌರಿಲಾ ಕುಂಭಿನೀ ಕ್ಷಮಾ ।
ಜಗತೀ ರತ್ನಗರ್ಭಾ ಚ ಭೂತ ಧಾತ್ರ್ಯಬ್ಧಿ ಮೇಖಲಾ ॥

ನನ್ನ ಬಾಲ್ಯದಲ್ಲಿ - ಸುಮಾರು 75 ವರ್ಷಗಳ ಹಿಂದೆ - ನಮ್ಮ ತಂದೆಯವರು ಬಾಯಿಪಾಠ ಮಾಡಿಸಿದ್ದ ಭೂಮಿ ವರ್ಗದಲ್ಲಿ ಈ ಶ್ಲೋಕವಿತ್ತು. ಆದರೆ ಅಮರಕೋಶದ ಕೆಲವು ಆವೃತ್ತಿಗಳಲ್ಲಿ ಈ ಶ್ಲೋಕವಿದ್ದರೂ, ಇತರ ಆವೃತ್ತಿಗಳಲ್ಲಿಲ್ಲ.

1. ಕರ್ನಾಟಕ ಲೋಚನ; ಸಂಪುಟ 3; ಸಂಚಿಕೆ 2 - ಡಿಸೆಂಬರ್ 1990, ಪುಟ 128
2. ಅಚ್ಚಾಗುವಾಗ 'ನೀ' ಎಂಬ ಅಕ್ಷರ ಬಿಟ್ಟು ಹೋಗಿದೆ.
3. ಕರ್ನಾಟಕ ಲೋಚನ; ಸಂಪುಟ 4; ಸಂಚಿಕೆ 2 - ಡಿಸೆಂಬರ್ 1991, ಪುಟ 57-59
4. ಕರ್ನಾಟಕ ಲೋಚನ; ಸಂಪುಟ 5; ಸಂಚಿಕೆ 1 - ಜೂನ್ 1992, ಪುಟ 55-57

ಅಮರಕೋಶ ವ್ಯಾಖ್ಯಾನಗಳು

1) ಈಗ ಉಪಲಬ್ಧವಿರುವ ಅಮರಕೋಶ ವ್ಯಾಖ್ಯಾನಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು ಭಟ್ಟಕ್ಷೀರಸ್ವಾಮಿಯ (ಇವನ ಕಾಲ ಕ್ರಿ.ಶ. 11ನೆಯ ಶತಮಾನದ ಉತ್ತರಾರ್ಧ) "ಅಮರಕೋಶೋದ್ಘಾಟನ". ಈ ವ್ಯಾಖ್ಯಾನಸಹಿತವಾಗಿ ಮುದ್ರಿತವಾದ ಅಮರಕೋಶದಲ್ಲಿ ಮೇಲಿನ ಶ್ಲೋಕ, ಸ್ವಲ್ಪ ವ್ಯತ್ಯಾಸದೊಡನೆ, ಪ್ರಕ್ಷಿಪ್ತ ಶ್ಲೋಕವಾಗಿ ಅಚ್ಚಾಗಿದೆ. ಇದಕ್ಕೆ ಕ್ಷೀರಸ್ವಾಮಿಯ ವ್ಯಾಖ್ಯಾನವಿಲ್ಲ. ಹಿಂದಿನ ಶ್ಲೋಕದ ವ್ಯಾಖ್ಯಾನದ ಕೊನೆಯಲ್ಲಿ "ಕ್ಷಮಾ ಇಲಾ ಚ ನಾನಾರ್ಥೇ" ಎಂದು ನಾನಾರ್ಥ ವರ್ಗವನ್ನು ನಿರ್ದೇಶಿಸಿದ್ದಾನೆ. ಆದುದರಿಂದ ಈ ಶ್ಲೋಕ ಕ್ಷೀರಸ್ವಾಮಿಯ ಮುಂದಿದ್ದ ಅಮರಕೋಶ ದಲ್ಲಿರಲಿಲ್ಲವೆಂಬುದು ಸ್ಪಷ್ಟ

2) ಮಹೇಶ್ವರ ಕೃತ "ಅಮರ ವಿವೇಕ" ವ್ಯಾಖ್ಯಾನ ಸಹಿತವಾಗಿ ಮುದ್ರಿತವಾದ[6] ಅಮರಕೋಶದಲ್ಲಿಯೂ Poona Oriental Agency ಮುದ್ರಣದಲ್ಲಿರುವಂತೆಯೇ ಈ ಶ್ಲೋಕವಿದ್ದು ಅದು ಕ್ಷೇಪಕಶ್ಲೋಕವಾಗಿ ಮುದ್ರಿತವಾಗಿದೆ. ಅಡಿಟಿಪ್ಪಣಿಯಲ್ಲಿ "ಇದಂ ಪದ್ಯಂ ತಾಲಪತ್ರ ಪುಸ್ತಕೇಽಪಿ ನಾಸ್ತಿ" ಎಂದಿದೆ. ಗ್ರಂಥದ ಸೂಚನೆಯಲ್ಲಿ ತಾಲಪತ್ರ ಪುಸ್ತಕದ ಲೇಖನಕಾಲ ಕ್ರಿ.ಶ. 1297 ಎಂದು ಹೇಳಿದೆ. ವ್ಯಾಖ್ಯಾನ ಭಾಗದಲ್ಲಿ "ವಿಪುಲೇತ್ಯೇಕಾದಶ ಭೂಮೇಶ್ಚ" ಎಂಬ ವಾಕ್ಯವಿದೆ. ಆದರೆ ಈ ವಾಕ್ಯವನ್ನು ಅವತರಣ ಚಿಹ್ನೆಗಳ ಮಧ್ಯೆಕೊಟ್ಟು, ಅದರ ಮುಂದೆ ಕ್ಷೇಪಕ ಶ್ಲೋಕ ಸಂಖ್ಯೆಯಾದ 1ನ್ನು ಮುದ್ರಿಸಿರುವುದರಿಂದಲೂ, ಈ ವಿಪುಲಾ xx" ಇತ್ಯಾದಿ ಶ್ಲೋಕದ ಯಾವ ಪದಕ್ಕೂ ವ್ಯಾಖ್ಯಾನದಲ್ಲಿ ವಿವರಣೆಯಿಲ್ಲದ್ದರಿಂದಲೂ, ಈ ವಾಕ್ಯ ಮೂಲ ವ್ಯಾಖ್ಯಾನದ ಭಾಗವಲ್ಲವೆನ್ನುವುದು ಸ್ಪಷ್ಟ

3) ಅಡಯಾರ್ ಲೈಬ್ರರಿಯವರು ಮುದ್ರಿಸಿರುವ ಅಮರಕೋಶದಲ್ಲಿ[7] ಲಿಂಗಯ ಸೂರಿಯ "ಅಮರಪದ ವಿವೃತಿ" - ಇದಕ್ಕೆ ಲಿಂಗಾಭಟ್ಟೀಯವೆಂಬ ಹೆಸರು ರೂಢಿ ಯಲ್ಲಿದೆ — ಮತ್ತು ಮಲ್ಲಿನಾಥನ (ಇವನು ಪಂಚಮಹಾಕಾವ್ಯಗಳ ವ್ಯಾಖ್ಯಾತೃ ಕೋಲಾಚಲ ಮಲ್ಲಿನಾಥನಿಗಿಂತ ಭಿನ್ನ) "ಅಮರಪದ ಪಾರಿಜಾತ"ವೆಂಬ ಎರಡು ವ್ಯಾಖ್ಯಾನಗಳಿವೆ.

---

5 Poona Oriental Book Agency ಯ 1941ರ ಮುದ್ರಣ. ಅಲ್ಲಿ ಅಚ್ಚಾಗಿರುವಂತೆ, ಶ್ಲೋಕದ ಉತ್ತರಾರ್ಧ : ಭೂತಧಾತ್ರೀ ರತ್ನಗರ್ಭಾ ಜಗತೀ ಸಾಗರಾಂಬರಾ.

6. Amarakosa with the commentary of Maheswara; Bombay - Government Central Book Depot, 1886.

ಮೂಲದಲ್ಲಿ ಮೇಲಿನ ಎರಡು ಮುದ್ರಣಗಳಲ್ಲಿರುವಂತೆ, ಈ ಶ್ಲೋಕ ಕ್ಷೇಪಕವಾಗಿ ಮುದ್ರಿತವಾಗಿದೆ. ಈ ಶ್ಲೋಕಕ್ಕೆ ವ್ಯಾಖ್ಯಾನಗಳಿಲ್ಲ. ಅಮರ ಪದ ಪಾರಿಜಾತ ವ್ಯಾಖ್ಯಾನದಲ್ಲಿ,

"ಅನುಕ್ತಂ — ರತ್ನಗರ್ಭಾ ಘನಶ್ರೋಣಿರುರ್ವರಾ ಸಾಗರಾಂಬರಾ ।
ದುರ್ದರಾ ಗಹ್ವರೀ ಧಾತ್ರೀ ಭೂತಧಾತ್ರ್ಯಬ್ಧಿ ಮೇಖಲಾ ॥
ರತ್ನಸೂಃ ಕುಂಭಿನೀ ವಿಶ್ವಾ ಧಾರಿಣೀ ಗೌರ್ಗಿರಿಸ್ತನೀ ।"

ಎಂದಿದೆ.

4) ರಾಯಮುಕುಟನ 'ಪದಚಂದ್ರಿಕಾ' ವ್ಯಾಖ್ಯಾನ ಸಹಿತವಾಗಿ ಮುದ್ರಿತವಾದ[8] ಅಮರ ಕೋಶದಲ್ಲಿ ಮೂಲ ಮತ್ತು ವ್ಯಾಖ್ಯಾನಗಳೆರಡರಲ್ಲೂ ಕುಂಭಿನೀ ಶಬ್ದವಿರುವ ಶ್ಲೋಕವಿಲ್ಲ.

ಭೂಮಿಯ ಪರ್ಯಾಯಪದಗಳನ್ನು ಕೊಡುವ 2 ಶ್ಲೋಕಗಳನ್ನು ವ್ಯಾಖ್ಯಾನಿಸಿದ ಮೇಲೆ, ವ್ಯಾಖ್ಯಾಕಾರನು,

"ರತ್ನಗರ್ಭಾ ಸಾಗರಾಂಬರಾಽಬ್ಧಿ ಮೇಖಲಾ ರತ್ನವತೀ ವಿಪುಲಾ
ಮಧ್ಯಮಲೋಕ ಮರ್ತ್ಯಾದಯೋಽಪ್ಯತ್ರ"

ಎಂದು ಹೇಳಿದ್ದಾನೆ. ಇಲ್ಲಿಯೂ ಕುಂಭಿನೀ ಪದವಿಲ್ಲ.

ಭಾನುಜೀದೀಕ್ಷಿತನ "ರಾಮಾಶ್ರಮೀ" ವ್ಯಾಖ್ಯಾನದಲ್ಲಾಗಲೀ[9] ಆಚಾರ್ಯ ಕೃಷ್ಣ ಮಿತ್ರನ ವ್ಯಾಖ್ಯಾನದಲ್ಲಾಗಲೀ[10], ಇವುಗಳೊಡನೆ ಅಚ್ಚಾಗಿರುವ ಅಮರಕೋಶದ ಮೂಲಪಾಠಗಳಲ್ಲಿಯೇ ಆಗಲೀ 'ಕುಂಭಿನೀ' ಪದವಿಲ್ಲ.

ಅಮರಕೋಶದ ಬೇರೆ ವ್ಯಾಖ್ಯಾನಗಳಾವುವೂ ನನಗೆ ದೊರಕಲಿಲ್ಲ. ವೈಜಯಂತೀ,

---

7. ಅಮರಕೋಶಃ ದಾಕ್ಷಿಣಾತ್ಯವ್ಯಾಖ್ಯೋಪೇತಃ (Vol. 1) The Adyar Library and Research centre. 1971.
8. ಪದಚಂದ್ರಿಕಾ. Sanskrit College, Calcutta, 1973. Vol. II
9. Namalinganusasana of Amarasimha with the commentary Vyakhva Sudha or Ramasrami of Bhanuji Dikshit. Nirnayasagar Press, Bombay. 1915.
10. Amarakosa of Amarasimha with the commentary of Acharya Krishnamitra, Published by Dr. Satyadeva Misra, Lecturer, University of Malaya, Kualalumpur, 1972.

ಮೇದಿನೀ, ಹಲಾಯುಧ, ಶಾಶ್ವತ ಕೋಶಗಳಲ್ಲಿ ಕುಂಭಿನೀ ಪದ ಸಿಕ್ಕುವುದಿಲ್ಲ.

ಆಪ್ಟೆಯವರ ಸಂಸ್ಕೃತ - ಇಂಗ್ಲಿಷ್ ನಿಘಂಟು ಮತ್ತು ಮೋನಿಯರ್ - ವಿಲಿಯಂಸ್‌ರ ಸಂಸ್ಕೃತ - ಇಂಗ್ಲೀಷ್ ನಿಘಂಟುಗಳಲ್ಲಿ ಕುಂಭಿನೀ ಶಬ್ದಕ್ಕೆ (ಭೂಮಿ) ಎಂಬ ಅರ್ಥವನ್ನು ಹೇಳಿದ್ದರೂ ಎರಡರಲ್ಲಿಯೂ ಯಾವ ಪ್ರಯೋಗಗಳನ್ನೂ ಕೊಟ್ಟಿಲ್ಲ.

ವಾಚಸ್ಪತ್ಯ ಕೋಶದಲ್ಲಿ[11] ಈ ವಿವರಗಳಿವೆ :

ಕುಂಭಿನ್ — ಪುಂ, ಸ್ತ್ರೀ, ಕುಂಭೋಽಸ್ತ್ಯಸ್ಯ ಇನಿ । xxx
ಕಲಶಧಾರಿಣಿ — ತ್ರಿ. ಸ್ತ್ರಿಯಾಂ ಙೀಪ್. "ಉದಕಂ ಕುಂಭಿನೀರಿವ",
ಋಗ್ವೇದ 1 —.191 — 14 xx
ಪೃಥಿವ್ಯಾಂ, 'ಗೌರಿಲಾ ಕುಂಭಿನೀ ಕ್ಷಮೇತಿ', ಮಾಘ - 20, 54 ಶ್ಲೋಕ
ವ್ಯಾಖ್ಯಾನೇ ಮಲ್ಲಿನಾಥ ಧೃತ ಕೋಷಾತ್ ।

ಮಾಘನ ಶಿಶುಪಾಲವಧ ಕಾವ್ಯದ[12] ಶ್ಲೋಕದಲ್ಲಿ ಬಂದಿರುವ 'ಇಲಾಧರಾಣಾಂ' ಎಂಬ ಶಬ್ದಕ್ಕೆ 'ಭೂಧರಾಣಾಂ' ಎಂಬ ಅರ್ಥವನ್ನು ಹೇಳಿ ಮಲ್ಲಿನಾಥನು, 'ಗೌರಿಲಾ ಕುಂಭಿನೀ ಕ್ಷಮಾ ಇತಿ ಕೋಷಃ' ಎಂದು ಆಧಾರವನ್ನು ಕೊಟ್ಟಿದ್ದಾನೆ.

ಮಲ್ಲಿನಾಥನು ಕೋಶಗಳ ಆಧಾರವನ್ನು ಹೇಳುವಾಗ "ಇತ್ಯಮರಃ", "ಇತಿಮೇದಿನೀ" — ಹೀಗೆ ಕೋಶಗಳ ಹೆಸರನ್ನು ಹೇಳಿರುತ್ತಾನೆ. ಇಲ್ಲಿ "ಇತ್ಯಮರಃ" ಎಂದು ಹೇಳದೆ "ಇತಿ ಕೋಷಃ" ಎಂದಿರುವುದರಿಂದ, "ಗೌರಿಲಾ ಕುಂಭಿನೀಕ್ಷಮಾ" ಎಂಬ ಶ್ಲೋಕವಾದ ಮಲ್ಲಿನಾಥನಿಗೆ ಉಪಲಬ್ಧವಾಗಿದ್ದ ಅಮರಕೋಶದ್ದಲ್ಲ, ಬೇರಾವುದೋ ಅಜ್ಞಾತ ಕರ್ತೃಕ ಪ್ರಾಚೀನ ಕೋಶದ್ದಿರಬೇಕು ಎಂದು ವ್ಯಕ್ತವಾಗುತ್ತದೆ.

ಆದುದರಿಂದ "ವಿಪುಲಾ ಗಹ್ವರೀ ಧಾತ್ರೀ —" ಶ್ಲೋಕ ಅಮರಕೋಶದಲ್ಲಿ ಪ್ರಕ್ಷಿಪ್ತವೆಂದೂ, ಆದರೂ 'ಕುಂಭಿನೀ' ಪದಕ್ಕೆ ಭೂಮಿ ಎಂಬರ್ಥವಿರುವುದಕ್ಕೆ

11. ತೃತೀಯ ಸಂಸ್ಕರಣ, 1970, ಚೌಖಂಬಾ ಮುದ್ರಣ,

12. ಶಿಶುಪಾಲವಧಂ; ನಿರ್ಣಯ ಸಾಗರ ಪ್ರೆಸ್, 1927.
ಪೂರ್ಣಶ್ಲೋಕ ಇಂತಿದೆ :
ಉಪಮಾನಮಲಾಭಿ ಲೋಲ ಪಕ್ಷ ಕ್ಷಣ ವಿಕ್ಷಿಪ್ತ ಮಹಾಂಬುವಾಹಮತ್ಸ್ಯೈಃ ।
ಗಗನಾರ್ಣವ ಮಂತರಾ ಸುಮೇರೋಃ ಕುಲಜಾನಾಂ ಗರುಡೈರಿಲಾಧರಾಣಾಂ ॥

ಕೋಶಾಧಾರವಿದೆಯೆಂದೂ ತಿಳಿದು ಬರುತ್ತದೆ.

ಪ್ರಯೋಗಗಳು

1) ಕುಂಭಿನೀ ಶಬ್ದದ ಅತಿ ಪ್ರಾಚೀನ ಪ್ರಯೋಗವಿರುವುದು (ವಾಚಸ್ಪತ್ಯದಲ್ಲಿ ಉದ್ಧೃತವಾಗಿರುವ) ಋಗ್ವೇದದ ಪ್ರಥಮ ಮಂಡಲದ, ವಿಷಘ್ನೋಪನಿಷತ್ ಎಂದು ಪ್ರಸಿದ್ಧವಾದ, 191ನೆಯ ಸೂಕ್ತದಲ್ಲಿ. ಈ ಸೂಕ್ತದ 14ನೇ ಋಕ್ :

ತ್ರಿಃಸಪ್ತಮಯೂರ್ಯಃ ಸಪ್ತಸ್ವಸಾರೋ ಅಗ್ರುವಃ ।
ತಾಸ್ತೇ ವಿಷಂ ವಿ ಜಭ್ರಿರ ಉದಕಂ ಕುಂಭಿನೀರಿವ ॥

ಇದಕ್ಕೆ ವೇಂಕಟಮಾಧವವ್ಯಾಖ್ಯಾ[13]

ಏಕ ವಿಂಶತಿಃ ಮಯೂರ್ಯಃ, ಸಪ್ತ ಚ ಸ್ವಯಂ ಸರಂತ್ಯಃ ಗಂಗಾದ್ಯಾ ನದ್ಯಃ, ತಾಃ ತೇ ಸರ್ಪ ! ವಿಷಂ ವಿವಿಧಂ ಹರಂತಿ, ಯಥಾ ಉದಕಂ ಕುಂಭವತ್ಯಃ ಸ್ತ್ರಿಯಃ ।

(ಎಲೈ ಸರ್ಪವೇ !) ಇಪ್ಪತ್ತೊಂದು ಹೆಣ್ಣು ನವಿಲುಗಳೂ, ಸ್ವಯಂ ಹರಿಯುವ ಆ (ಗಂಗಾದಿ) ಸಪ್ತನದಿಗಳೂ, ಕುಂಭಗಳನ್ನು ಹೊತ್ತ ಸ್ತ್ರೀಯರು ನೀರನ್ನು ತೆಗೆದು ಕೊಂಡು ಹೋಗುವಂತೆ, ನಿನ್ನ ವಿವಿಧ ವಿಷವನ್ನು ತೆಗೆದುಕೊಂಡು ಹೋಗುತ್ತವೆ.

ವೇಂಕಟಮಾಧವ ವ್ಯಾಖ್ಯಾನ ಸಾಯಣಭಾಷ್ಯಕ್ಕಿಂತ ಪ್ರಾಚೀನ.

ಸಾಯಣಭಾಷ್ಯ[14] ಭಾಗಃ

ತತ್ರ ದೃಷ್ಟಾಂತಃ । ಉದಕಂ ಕುಂಭಿನೀಃ ಕುಂಭಿನ್ಯಃ ಕುಂಭವತ್ಯಃ
ಕುಂಭೇನ ಜಲಹಾರಿಣ್ಯಃ ಇವ । ತಾ ಯಥಾ ತದ್ಧರಂತಿ ತದ್ವತ್ ನದ್ಯೋ
ಮಯೂರ್ಯಶ್ಚ ಅತಿ ಪ್ರಭೂತಂ ಹರಂತು ।

ಹೀಗೆ ಇಬ್ಬರು ಭಾಷ್ಯಕಾರರಂತೆಯೂ ಇಲ್ಲಿ ಕುಂಭಿನೀ ಶಬ್ದಕ್ಕೆ ಕುಂಭದಲ್ಲಿ ನೀರು ಹೊರುವ ಸ್ತ್ರೀಯರು ಎಂದರ್ಥ.

2) ಮತ್ತೊಂದು ಪ್ರಯೋಗ ತಾಂಡ್ಯ ಮಹಾಬ್ರಾಹ್ಮಣದಲ್ಲಿ[5] ದೊರೆಯುತ್ತದೆ.

ಪರಿ ಕುಂಭಿನ್ಯೋ ಮಾರ್ಜಾಲೀಯಂ ಯಂತೀದಂ ಮಧ್ವಿದಂ ಮಧ್ವಿತಿ ಸಘೋಷಾ

---

13. ಪ್ರಕಾಶಕರು : Vishveswaranand Vedic Research Institute, Hoshiarpur. 1963.

14. ಸಾಯಣಾಚಾರ್ಯ ವಿರಚಿತ ಮಾಧವೀಯ ವೇದಾರ್ಥಪ್ರಕಾಶ - ವೈದಿಕ ಸಂಶೋಧನ ಮಂಡಲ, ಪುಣೆ; 1933

ಏವ ತದ್ವಯೋ ಭೂತ್ವಾ ಸಹ ಸ್ವರ್ಗಂ ಲೋಕಂ ಯಂತಿ । (5-6-15)

[ಇದಂ ಮಧು ಇದಂ ಮಧು ಎಂಬ ಮಂತ್ರವನ್ನು ಹಾಡುತ್ತ ದಾಸಿಯರು ಮಾರ್ಜ್ಜಾಲೀಯವೆಂಬ ಉಪವೇದಿಯ ಸುತ್ತ ನರ್ತಿಸುತ್ತಾರೆ. (ದೇಹಾವಸಾನದ ನಂತರ) ಇವರು ಪಕ್ಷಿಗಳಂತೆ (ಆಕಾಶಗಾಮಿಗಳಾಗಿ) ಸ್ವರ್ಗಲೋಕವನ್ನು ಸೇರುತ್ತಾರೆ].

ಇದರ ಸಾಯಣಭಾಷ್ಯ ಭಾಗ

ಇದಂ ಮಧ್ವಿದಂ ಮಧ್ವಿತಿ ಮಂತ್ರಂ ಶಂಸತ್ಯಃ ಪುನಃ ಪುನರ್ಗಾಯಂತ್ಯಃ ಕುಂಭಿನ್ಯೋ ದಾಸ್ಯಃ ಮಾರ್ಜ್ಜಾಲೀಯಂ ಧಿಷ್ಣ್ಯಂ ಪರಿಯಂತಿ ಪರಿತೋ ನೃತ್ಯಂತೀತ್ಯರ್ಥಃ

ಇಲ್ಲಿಯೂ ಕುಂಭಿನೀ ಶಬ್ದಕ್ಕೆ ದಾಸಿ (ಕುಂಭದಾಸಿ) ಎಂದು ಅರ್ಥ ಮಾಡಿದ್ದಾರೆ.

ಲೌಕಿಕ ಸಾಹಿತ್ಯದಲ್ಲಿ ಕುಂಭಿನೀ ಪದದ ಪ್ರಯೋಗ ನನಗೆ ದೊರಕಿಲ್ಲ.

ಶ್ರೀ ಕೃಷ್ಣ ಶರ್ಮರು ಉದಾಹರಿಸಿರುವ 'ಹೃದಯಾಮೃತ',[16] ಕ್ರಿ.ಶ. 1742ರಲ್ಲಿ ರಚಿತವಾಯಿತೆಂದು (ವರ್ಷಕಲ್ಯಬ್ದದಲ್ಲಿದೆ) ಗ್ರಂಥಕರ್ತೃ ಜಗನ್ನಾಥ ಪಂಡಿತನೇ ಗ್ರಂಥಾಂತ್ಯದಲ್ಲಿ ಹೇಳಿದ್ದಾನೆ. ಅವನು ಭೂಮಿ ಎಂಬ ಅರ್ಥದಲ್ಲಿ ಕುಂಭಿನೀ ಪದ ಪ್ರಯೋಗವನ್ನು ಬೇರೆಲ್ಲಾದರೂ ಕಂಡಿದ್ದನೋ ಅಥವಾ ಕೋಶಾಧಾರ ಬಲದಿಂದ ಪ್ರಯೋಗಿಸಿದನೋ ತಿಳಿಯದು. ಜಗನ್ನಾಥ ಪಂಡಿತನು ತಂಜಾವೂರು ರಾಜರಿಂದ ಪರಿಪೋಷಿತನಾಗಿದ್ದುದರಿಂದ, ಅಲ್ಲಿ ಬಹು ಹಿಂದಿನಿಂದಲೂ ಇದ್ದ ಕನ್ನಡಿಗ ವಿದ್ವಾಂಸರ ಸಾಹಚರ್ಯದಿಂದ ಕನ್ನಡ ಗ್ರಂಥಗಳಲ್ಲಿ ಈ ಪದಪ್ರಯೋಗವನ್ನು ನೋಡಿರಲೂ ಬಹುದು.

ಕುಂಭಿನೀ ಶಬ್ದದ ನಿಷ್ಪತ್ತಿ

ಕುಂಭ ಶಬ್ದಕ್ಕೆ 'ಇನಿ' ಪ್ರತ್ಯಯ ಸೇರಿದ ಸ್ತ್ರೀಲಿಂಗರೂಪ ಕುಂಭಿನೀ ಎಂದು ವಾಚಸ್ಪತ್ಯದಲ್ಲಿ ಹೇಳಿದೆಯಷ್ಟೆ "ಅತ ಇನಿ ಠನೌ" (ಪಾ. 5.2.115) ಎಂಬ ಸೂತ್ರವನ್ನು ವಿವರಿಸುತ್ತಾ ಸಿದ್ಧಾಂತ ಕೌಮುದಿಯ ವ್ಯಾಖ್ಯಾನದಲ್ಲಿ ಬಾಲ ಮನೋರಮಾಕಾರನು "ಮತುಬಪಿ ಭವತಿ" ಎಂದು ಹೇಳಿದ್ದಾನೆ. "ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್" (ಪಾ. 5-2-94) ಎಂಬ ಸೂತ್ರದಂತೆ ಕುಂಭೋಽಸ್ಯಸ್ಯಾಃ ಎಂದಾಗಲೀ ಕುಂಭೋಽಸ್ಯಸ್ಯಾಂ ಎಂದಾಗಲೀ ಕುಂಭಿನೀರೂಪ ಸಿದ್ಧಿಯಾಗುತ್ತದೆ. ಕುಂಭಿನೀ ಶಬ್ದಕ್ಕೆ ಭೂಮಿ ಎಂಬ

15. ತಾಂಡ್ಯ ಮಹಾ ಬ್ರಾಹ್ಮಣ, ಸಾಯಣಭಾಷ್ಯ ಸಹಿತ, ಚೌಖಂಬಾ ಆವೃತ್ತಿ.

16. ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರಕಟಣೆ, 1980.

ಅರ್ಥವಾಗಬೇಕಾದರೆ ಮೇಲಿನ ನಿರ್ವಚನದಲ್ಲಿ ಕುಂಭ ಎಂದರೆ ಏನೆಂಬ ಪ್ರಶ್ನೆ ಏಳುತ್ತದೆ.

ಈ ವಿಷಯದಲ್ಲಿ ನನಗೆ ತೋರಿದ ಕೆಲವು ವಿವರಣೆಗಳು :

1) ಶ್ರೀ ಗೋಪೀನಾಥರಾಯರು ತಮ್ಮ ಮೂರ್ತಿಲಕ್ಷಣ ವಿಷಯಕ ಗ್ರಂಥದಲ್ಲಿ ಭೂದೇವಿಯು ವಿಷ್ಣುವಿನ ಪಾರ್ಶ್ವದಲ್ಲಿದ್ದಾಗ ದ್ವಿಭುಜಳಾಗಿರುವಂತೆಯೂ, ಸ್ವಯಂಪ್ರಧಾನ ದೇವತೆಯಾಗಿದ್ದಾಗ ಚತುರ್ಭುಜಳಾಗಿರುವಂತೆಯೂ ಪ್ರದರ್ಶಿತ ಳಾಗುತ್ತಾಳೆಂದು ಹೇಳಿ, ಚತುರ್ಭುಜಳಾದ ದೇವಿಯ ಲಕ್ಷಣವನ್ನು ಕೊಡುವ, ವಿಷ್ಣು ಧರ್ಮೋತ್ತರ ಪುರಾಣದ ಈ ಶ್ಲೋಕಗಳನ್ನು ಕೊಟ್ಟಿದ್ದಾರೆ.[17]

ಶುಕ್ಲವರ್ಣಾ ಮಹೀ ಕಾರ್ಯಾ ದಿವ್ಯಾಭರಣಭೂಷಿತಾ ।
ಚತುರ್ಭುಜಾ ಸೌಮ್ಯವಪುಶ್ಚಂದ್ರಾಂಶು ಸದೃಶಾಂಬರಾ ॥
ರತ್ನಪಾತ್ರಂ ಸಸ್ಯಪಾತ್ರಂ ಪಾತ್ರಮೋಷಧಿ ಸಂಯುತಮ್ ।
ಪದ್ಮಂ ಕರೇ ಚ ಕರ್ತವ್ಯಂ ಭುವೋ ಯಾದವ ನಂದನ ॥
ದಿಗ್ಗಜಾನಾಂ ಚತುರ್ಣಾಂ ಚ ಕಾರ್ಯಾ ಪೃಷ್ಠಗತಾ ತಥಾ ।
ಸರ್ವೌಷಧಿಯುತಾ ದೇವೀ ಶುಕ್ಲವರ್ಣಾ ತತಃ ಸ್ಮೃತಾ ॥

(ಶ್ವೇತವರ್ಣ ಮತ್ತು ಸೌಮ್ಯ ರೂಪವನ್ನು ಹೊಂದಿ ಬೆಳದಿಂಗಳಿನಂತಿರುವ ವಸ್ತ್ರಗಳನ್ನು ಧರಿಸಿ, ದಿವ್ಯಾಭರಣ ಭೂಷಿತಳಾಗಿ ನಾಲ್ಕು ದಿಗ್ಗಜಗಳ ಬೆನ್ನಮೇಲೆ ಕುಳಿತಿರುವಂತೆ ಭೂದೇವಿಯ ಪ್ರತಿಮೆಯಿರಬೇಕು. ನಾಲ್ಕು ಕೈಗಳಲ್ಲಿ ರತ್ನಪಾತ್ರ, ಸಸ್ಯಪಾತ್ರ, ಓಷಧಿಪಾತ್ರ ಮತ್ತು ಪದ್ಮಗಳಿರಬೇಕು).

ಮೇಲಿನ ಶ್ಲೋಕಗಳು ವಿಷ್ಣು ಧರ್ಮೋತ್ತರದ ತೃತೀಯಖಂಡದ ಭೂಮಿ ನಿರೂಪಣವೆಂಬ 61ನೆಯ ಅಧ್ಯಾಯದಲ್ಲಿವೆ.

ಶ್ರೀ ಎಸ್. ಕೆ. ರಾಮಚಂದ್ರರಾಯರು ತಮ್ಮ ಪ್ರತಿಮಾ ಕೋಷದಲ್ಲಿ[18] ಮೇಲಿನ ಶ್ಲೋಕಗಳನ್ನು ಅನುವಾದ ಮಾಡುವಾಗ "ರತ್ನಪಾತ್ರ"ವನ್ನು (ಎಂದರೆ ರತ್ನಕುಂಭ) ಎಂದು ಅನುವಾದ ಮಾಡಿದ್ದಾರೆ.

---

17. Elements of Hindu Iconography - T. A. Gopinatha Rao, Reprint of 1914 Madras Edition by Motilal Banarasidass, Delhi 1985. Vol I ಪುಟಗಳು 375-6 ಮತ್ತು Appendix C ಪುಟ 139.

ಶಾರ್ಙ್ಗಧರನಾದ ವಿಷ್ಣುವಿಗೆ ಶಾರ್ಙ್ಗೀ ಮತ್ತು ಪಿನಾಕಧರನಾದ ಶಿವನಿಗೆ ಪಿನಾಕೀ ಎಂಬ ಹೆಸರುಗಳು ಬಂದಂತೆ, ಕುಂಭಧಾರಿಣಿಯಾದ ಭೂದೇವಿಗೆ ಕುಂಭಿನೀ ಎಂಬ ಹೆಸರಾಯಿತು.

2) ಭೂದೇವಿ ವಿಷ್ಣುವಿನ ಪತ್ನಿಯೆಂಬುದು ಪ್ರಸಿದ್ಧ. ವಿಷ್ಣು ಪತ್ನಿಯ ಸ್ಥಾವರರೂಪ ಭೂದೇವಿಯೆಂದೂ ಜಂಗಮರೂಪ ಶ್ರೀದೇವಿಯೆಂದೂ, ಶ್ರೀ ಭೂದೇವಿಯರೊಡನೆ ಇರುವ ವಿಷ್ಣುಮೂರ್ತಿಯನ್ನೇ ನಿತ್ಯಪೂಜೆಯಲ್ಲಿಟ್ಟುಕೊಳ್ಳಬೇಕೆಂದೂ ಹಿರಿಯರು ಹೇಳಿದ್ದನ್ನು ಕೇಳಿದ್ದೇನೆ.

"ಅರ್ಚಿಷ್ಮಾನರ್ಚಿತಃ ಕುಂಭೋ ವಿಶುದ್ಧಾತ್ಮಾ ವಿಶೋಧನಃ" ಎಂದು ವಿಷ್ಣು ಸಹಸ್ರನಾಮ ಸ್ತೋತ್ರದಲ್ಲಿ ಹೇಳಿರುವಂತೆ, 'ಕುಂಭ' ವಿಷ್ಣುವಿನ ಹೆಸರುಗಳಲ್ಲೊಂದು. ಕುಂಭನನ್ನು (ಪತಿಯಾಗಿ) ಉಳ್ಳವಳು ಕುಂಭಿನೀ.

3) ಹಿಂದಿನ ಕಾಲದಲ್ಲಿ ಧನಕನಕಾದಿಗಳನ್ನು ಕುಂಭದಲ್ಲಿಟ್ಟು ಭೂಮಿಯಲ್ಲಿ ನಿಕ್ಷೇಪಮಾಡುವುದೂ, ಅಂತಹ ಕುಂಭಗಳು ಮುಂದೆ ಭೂಮಿಯನ್ನು ಅಗೆದವರಿಗೆ ಸಿಗುವುದೂ ಅಸಾಮಾನ್ಯವಾಗಿರಲಿಲ್ಲ.

ಕುಂಭಗಳನ್ನು ತನ್ನಲ್ಲಿ ಹೊಂದಿರುವವಳು ಕುಂಭಿನೀ.

ಮೇಲಿನ ವಿವರಣೆಗಳು ಎಷ್ಟು ಮಟ್ಟಿಗೆ ಗ್ರಾಹ್ಯವೆಂಬುದನ್ನು ವಿದ್ವಾಂಸರು ನಿರ್ಣಯಿಸಬೇಕು.[19]

---

18. Pratima Kosha by S. K. Ramachandra Rao, Kalpataru Research Academy, Bangalore, Vol. IV, 1991, ಪುಟ 199

19. ಈ ಹಿಂದೆ ಗಮನಿಸಿರುವ ಲೇಖನದಲ್ಲಿ ಶ್ರೀ ಸೀತಾರಾಮ ಜಾಗೀರ್‌ದಾರರು, "ಸರ್ಪಕ್ಕೆ 'ಕುಂಭೀನಸಃ' ಎಂದು ಹೇಳಲಾಗುತ್ತದೆ. xx ಕುಂಭೀನಸವು ಹೊತ್ತದ್ದು ಕುಂಭಿನೀ" ಎಂದು ಹೇಳಿದ್ದಾರೆ. ಕುಂಭಿನೀ, ಕುಂಭೀನಸ ಈ ಎರಡು ಶಬ್ದಗಳೂ ಕುಂಭ ಶಬ್ದದಿಂದ ಹುಟ್ಟಿದವುಗಳೇ ಹೊರತು, ಕುಂಭೀನಸದಿಂದ ಕುಂಭಿನೀ ಶಬ್ದ ಉತ್ಪನ್ನವಾಗುವುದು ಸಾಧ್ಯವಿಲ್ಲ.

ದೃಶ್ಯ ಕಾವ್ಯ

ಮನಸ್ಸಿಗೆ ಉಲ್ಲಾಸಕರವಾಗಿದ್ದು, ಕಲೆಗಳಲ್ಲಿ ನಿಪುಣತೆಯನ್ನುಂಟುಮಾಡಿ, ತನ್ಮೂಲಕ ಧರ್ಮಾರ್ಥಕಾಮಮೋಕ್ಷಗಳ ಸಾಧನೆಗೆ ಸಹಾಯಕವಾಗುವ ಶಬ್ದ ಸಮೂಹವೇ ಕಾವ್ಯ. ಓದುವುದಕ್ಕೆ ಮತ್ತು ಓದಿಸಿ ಕೇಳುವುದಕ್ಕೆ ಮಾತ್ರ ಸಾಧ್ಯವಾಗುವ ಕಾವ್ಯಕ್ಕೆ ಶ್ರವ್ಯಕಾವ್ಯವೆಂದು ಹೆಸರು. ರಂಗಸ್ಥಳದಲ್ಲಿ ಅಭಿನಯಾರ್ಹವಾಗಿ ರಚಿಸ ಲ್ಪಟ್ಟಿರುವ ಕಾವ್ಯಕ್ಕೆ ದೃಶ್ಯಕಾವ್ಯವೆಂದು ಹೆಸರು. ಇದನ್ನೇ ರೂಪಕ ಅಥವಾ ನಾಟಕ ವೆಂದೂ ಕರೆಯುವುದುಂಟು. ದೃಶ್ಯಕಾವ್ಯಗಳು ಮಾತುಗಳಿಂದ ಮಾತ್ರವೇ ಅಲ್ಲದೆ ನಟರ ವೇಷಭೂಷಣಾದಿಗಳಿಂದಲೂ, ಅಭಿನಯದಿಂದಲೂ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡುವುದರಿಂದ, ತಮ್ಮ ಉದ್ದೇಶವನ್ನು ಶ್ರವ್ಯಕಾವ್ಯಗಳಿಗಿಂತಲೂ ಚೆನ್ನಾಗಿ ಸಾಧಿಸುತ್ತವೆ. ಆದುದರಿಂದ ದೃಶ್ಯಕಾವ್ಯಗಳಿಗೇ ಹೆಚ್ಚಿನ ಪ್ರಾಶಸ್ತ್ಯವಿದೆ.

ದೃಶ್ಯಕಾವ್ಯದ ಕಥಾವಸ್ತುವುದು ಪುರಾಣಪ್ರಸಿದ್ಧವಾಗಿರಬಹುದು. ಅಥವಾ ಕವಿಯಿಂದ ಕಲ್ಪಿಸಲ್ಪಟ್ಟಿರಬಹುದು. ಅನೇಕ ವೇಳೆ ಕವಿಯು ಯಾವನಾದರೂ ಪೌರಾಣಿಕ ಅಥವಾ ಐತಿಹಾಸಿಕ ವ್ಯಕ್ತಿಯನ್ನು ಕಥಾನಾಯಕನನ್ನಾಗಿ ಮಾಡಿಕೊಂಡು, ಕಥೆಯನ್ನು ಕಲ್ಪಿಸುವುದುಂಟು. ಇಂತಹ ಕಥಾವಸ್ತುವನ್ನು ಮಿಶ್ರವೃತ್ತವೆನ್ನುತ್ತೇವೆ.

ಕಥಾನಾಯಕನು ಶ್ರೀರಾಮ, ದುಷ್ಯಂತ ಮೊದಲಾದವರಂತೆ, ದಯಾಳು ವಾಗಿಯೂ, ನಿಗರ್ವಿಯಾಗಿಯೂ, ಶೂರನಾಗಿಯೂ ಇದ್ದರೆ ಅವನನ್ನು ಧೀರೋದಾತ್ತ ನೆಂದೂ; ಭೀಮ, ಪರಶುರಾಮ ಮೊದಲಾದವರಂತೆ ಸಾಹಸಿಯಾಗಿಯೂ ಕೋಪಿಷ್ಠ ನಾಗಿಯೂ ಇದ್ದರೆ ಧೀರೋದ್ಧತನೆಂದೂ; ರತ್ನಾವಳಿಯ ಕಥಾನಾಯಕನಾದ ವತ್ಸರಾಜ ನಂತೆ ಕಲಾವಿದ (artist)ನಾಗಿಯೂ, ಸುಖಾಸಕ್ತನಾಗಿಯೂ ಇದ್ದರೆ ಧೀರಲಲಿತ ನೆಂದೂ; ಯುದಿಷ್ಠಿರನಂತೆ ಶೂರನಾದರೂ, ಶಾಂತಸ್ವಭಾವವುಳ್ಳವನಾದರೆ ಧೀರಶಾಂತ ನೆಂದೂ ಕರೆಯುತ್ತೇವೆ. ಕಥಾನಾಯಕಿಯು ಸಾಮಾನ್ಯವಾಗಿ ನಾಯಕನಿಗೆ ಸಮಾನವಾದ ಗುಣಗಳುಳ್ಳವಳಾಗಿಯೂ, ಸಮಾನ ಕುಲದವಳಾಗಿಯೂ ಇರುತ್ತಾಳೆ. ಕೆಲವು ದೃಶ್ಯಕಾವ್ಯಗಳಲ್ಲಿ ಕಥಾನಾಯಕನಿಗೆ ಸಹಾಯಕನಾಗಿ ಅವನಿಗಿಂತ ಕಡಮೆಯ ಗುಣಗಳುಳ್ಳ (ರಾಮಾಯಣದಲ್ಲಿ ಸುಗ್ರೀವನಂತೆ) ಉಪನಾಯಕನಿರುವುದುಂಟು. ಅವನಿಗೆ ಪೀಠಮರ್ದನೆಂದು ಹೆಸರು. ಇನ್ನೂ ಕಥಾಸಂದರ್ಭಕ್ಕೆ ತಕ್ಕಂತೆ ವಿದೂಷಕನೇ ಮೊದಲಾದ ಇತರ ಪಾತ್ರಗಳನ್ನು ಕವಿಯು ನಿರ್ಮಿಸಿಕೊಳ್ಳುತ್ತಾನೆ.

ದೃಶ್ಯಕಾವ್ಯದಲ್ಲಿ ಶೃಂಗಾರ, ವೀರ, ಕರುಣ, ಹಾಸ್ಯ ಮತ್ತು ಅದ್ಭುತರಸ ಗಳಲ್ಲೊಂದು ಪ್ರಧಾನರಸವಾಗಿರುತ್ತದೆ. ಕೆಲವು ವೇಳೆ ರೌದ್ರ, ಶಾಂತರಸಗಳೂ ಪ್ರಧಾನರಸಗಳಾಗಿರುವುದುಂಟು. ಭಯಾನಕ, ಬೀಭತ್ಸರಸಗಳು ಪ್ರಧಾನರಸಗಳಾಗಿರುವುದಿಲ್ಲ. ಪ್ರಧಾನ ರಸಕ್ಕೆ ಉಳಿದ ರಸಗಳು ಪೋಷಕಗಳಾಗಿರುತ್ತವೆ.

ಕಥಾವಸ್ತು, ನಾಯಕ ಮತ್ತು ಪ್ರಧಾನರಸಗಳ ಭೇದದಿಂದ ದೃಶ್ಯಕಾವ್ಯಗಳಲ್ಲಿ, ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥೀ, ಅಂಕ, ಈಹಾಮೃಗ ಎಂಬ ಹತ್ತು ಭೇದಗಳುಂಟಾಗಿವೆ. ಇವುಗಳನ್ನು ದಶರೂಪಕಗಳೆನ್ನುತ್ತಾರೆ. ಇವುಗಳಲ್ಲದೆ ನಾಟಿಕಾ, ಪ್ರಕರಣಿಕಾ, ಭಾಣಿಕಾ, ತ್ರೋಟಕ, ಗೋಷ್ಠೀ, ಸಟ್ಟಕ, ನಾಟ್ಯರಾಸಕ, ಪ್ರಸ್ಥಾನಕ, ಉಲ್ಲಾಪ್ಯ, ಕಾವ್ಯ, ಪ್ರೇಂಖಣ, ರಾಸಕ, ಸಂಲಾಪಕ, ಶ್ರೀಗದಿತ, ಶಿಲ್ಪಕ, ವಿಲಾಸಿಕಾ, ಹಲ್ಲೀಶ, ದುರ್ಮಲ್ಲಿಕಾ ಎಂಬ ಹದಿನೆಂಟು ಉಪರೂಪಕಗಳೂ ಇವೆ.

ಹೀಗೆ ದೃಶ್ಯಕಾವ್ಯಗಳಲ್ಲಿ ಇಪ್ಪತ್ತೆಂಟು ಭೇದಗಳಿದ್ದರೂ, ಇವುಗಳಿಗೆಲ್ಲಾ ಕೆಲವು ಲಕ್ಷಣಗಳು ಸಾಮಾನ್ಯವಾಗಿವೆ. ಕಥಾರಂಭಕ್ಕೆ ಮುಂಚೆ ಮಂಗಳಾರ್ಥವಾಗಿ ನಾಂದೀಶ್ಲೋಕವನ್ನು ಹಾಡಿ, ಸಭಾ ಪೂಜಾದಿಗಳನ್ನು ಮಾಡಿ, ಪ್ರೇಕ್ಷಕ ವರ್ಗವನ್ನು ಸಂತೋಷಪಡಿಸಬೇಕು. ಅನಂತರ ಸೂತ್ರಧಾರನು ರಂಗಸ್ಥಳವನ್ನು ಪ್ರವೇಶಿಸಿ, ಪ್ರೇಕ್ಷಕರಿಗೆ ಕವಿಯ ಮತ್ತು ಕಾವ್ಯದ ಪರಿಚಯವನ್ನು ಮಾಡಿಕೊಡಬೇಕು. ಹೀಗೆ ಪರಿಚಯ ಮಾಡಿಕೊಡುವಾಗ ಸಾಧ್ಯವಾದ ಮಟ್ಟಿಗೆ ಕಥೆಯನ್ನು ಸೂಚಿಸಬೇಕು. ಈ ಭಾಗಕ್ಕೆ ಆಮುಖವೆಂದು ಹೆಸರು. ಇದೆಲ್ಲಾ ಮುಗಿದ ಮೇಲೆ, ದೃಶ್ಯಕಾವ್ಯದ ಪ್ರದರ್ಶನವು ಆರಂಭವಾಗುತ್ತದೆ.

ದೃಶ್ಯಕಾವ್ಯವನ್ನು ಅಂಕಗಳಾಗಿ ವಿಭಜಿಸಬೇಕು. ಒಂದು ಅಂಕದಲ್ಲಿ ಒಂದು ದಿನದಲ್ಲಿ ನಡೆದ ಕಥೆಗಿಂತ ಹೆಚ್ಚು ಕಥೆಯನ್ನು ಹೇಳಬಾರದು. ಅಂಕದಲ್ಲಿ ನಾಯಕನು ಒಂದಾವೃತ್ತಿಯಾದರೂ ಪ್ರವೇಶಿಸಬೇಕು. ಅಂಕದ ಕೊನೆಯಲ್ಲಿ ಪಾತ್ರಗಳೆಲ್ಲರೂ ರಂಗಸ್ಥಳದಿಂದ ಹೊರಟು ಹೋಗಬೇಕು. ಕಥಾಸಂದರ್ಭಕ್ಕೆ ತಕ್ಕಂತೆ ಒಂದರಿಂದ ಹತ್ತು ಅಂಕಗಳವರೆಗೂ ಇರಬಹುದು. ದೂರಪ್ರಯಾಣ, ಯುದ್ಧ, ವಧೆ ಮೊದಲಾದ ವಿಷಯಗಳನ್ನು ಸ್ವಾಭಾವಿಕವಾದ ರೀತಿಯಲ್ಲಿ ಪ್ರದರ್ಶಿಸುವುದಕ್ಕೆ ಸಾಧ್ಯವಿಲ್ಲವಾದುದ ರಿಂದ ಅವುಗಳನ್ನೂ, ಭೋಜನ, ಸ್ನಾನ, ವಪನ, ಚುಂಬನ, ಮೊದಲಾದ ಲಜ್ಜಾಸ್ಪದ ವಿಷಯಗಳನ್ನೂ ರಂಗಸ್ಥಳದಲ್ಲಿ ಪ್ರದರ್ಶಿಸಬಾರದೆಂದು ನಿರ್ಣಯಿಸಿದ್ದಾರೆ.

ದೂರಾಧ್ವಾನಂ ವಧೋ ಯುದ್ಧಂ ರಾಜ್ಯದೇಶಾದಿವಿಪ್ಲವಃ ।
ವಿವಾಹೋ ಭೋಜನಂ ಶಾಪೋತ್ಸರ್ಗೌ ಮೃತ್ಯೂರತಂ ತಥಾ ॥
ದಂತಚ್ಛೇದ್ಯಂ ನಖಚ್ಛೇದ್ಯಮನದ್ವ್ರೀಡಾಕರಂ ಚ ಯತ್ ।
ಶಯನಾಧರಪಾನಾದಿ ನಗರಾದ್ಯವರೋಧನಮ್ ॥
ಸ್ನಾನಾನುಲೇಪನೇ ಚೈಭಿರ್ವರ್ಜಿತಃ ।

- ಸಾಹಿತ್ಯದರ್ಪಣ

ಇವುಗಳನ್ನು ಪ್ರದರ್ಶಿಸದೆ ಇರುವುದರಿಂದ ಕಥೆಗೆ ಅಡ್ಡಿ ಬರದಿರುವುದಕ್ಕಾಗಿ ಅಂಕಗಳ ಮಧ್ಯದಲ್ಲಿ ಸಣ್ಣದೃಶ್ಯಗಳನ್ನು ಏರ್ಪಡಿಸಿ, ಅಲ್ಲಿ ಪಾತ್ರಗಳ ಸಂಭಾಷಣೆಯ ಮೂಲಕ ಇವುಗಳನ್ನು ಸೂಚಿಸಬಹುದು. ಇಂತಹ ದೃಶ್ಯದಲ್ಲಿ ಮುಖ್ಯ ಪಾತ್ರ ಅಥವಾ ಮಧ್ಯಮ ಪಾತ್ರಗಳಿದ್ದರೆ ಅದಕ್ಕೆ **ವಿಷ್ಕಂಭಕ**ವೆಂದು ಹೆಸರು. ಚೇಟಿ, ಸೇವಕರೇ ಮೊದಲಾದ ನೀಚಪಾತ್ರಗಳು* ಮಾತ್ರ ಇದ್ದರೆ **ಪ್ರವೇಶಕ**ವೆಂದು ಹೆಸರು. ಕೆಲವು ವೇಳೆ ಪರದೆಯ ಹಿಂದಿನಿಂದ ಹೇಳುವುದೂ ಉಂಟು. ಇದಕ್ಕೆ **ಚೂಲಿಕಾ** ಎಂದು ಹೆಸರು.

ಹೀಗೆ ಪ್ರವೇಶಿಕಾದಿಗಳಲ್ಲಿ ಸೂಚಿಸಬೇಕಾದ ವಿಷಯಗಳನ್ನೆಲ್ಲಾ ಸೂಚಿಸಿ, ಅಂಕಗಳಲ್ಲಿ ದರ್ಶನೀಯವಾದ ವಿಷಯಗಳನ್ನು ತೋರಿಸಿ ಕ್ರಮವಾಗಿ ಕಥೆಯನ್ನು ಬೆಳೆಸಬೇಕು. ಕಥೆಯು ಮುಗಿದ ಮೇಲೆ ಕೊನೆಯಲ್ಲಿ ಮುಖ್ಯಪಾತ್ರಗಳಲ್ಲೊಬ್ಬನು ದೇಶಕ್ಕೆ ಮತ್ತು ರಾಜನಿಗೆ ಮಂಗಳವನ್ನು ಕೋರಬೇಕು. ಈ ಭಾಗಕ್ಕೆ ಪ್ರಶಸ್ತಿಯೆಂದು ಹೆಸರು.

ಸಂಸ್ಕೃತ ನಾಟಕಗಳಲ್ಲಿ ಪಾತ್ರಗಳೆಲ್ಲರೂ ಸಂಸ್ಕೃತವನ್ನುಪಯೋಗಿಸುವುದಿಲ್ಲ. ರಾಜರು, ತಪಸ್ವಿಗಳು, ದೇವತೆಗಳೇ ಮೊದಲಾದ ಪುರುಷರೂ, ಸನ್ಯಾಸಿನಿಯೇ ಮೊದಲಾದ ಸ್ತ್ರೀಯರೂ ಸಂಸ್ಕೃತವನ್ನುಪಯೋಗಿಸುತ್ತಾರೆ. ಅಂತಃಪುರ ಸ್ತ್ರೀಯರೂ, ಮಂತ್ರಿ ಪುತ್ರಿಯೇ ಮೊದಲಾದವರೂ ಸಂಸ್ಕೃತವನ್ನಾಗಲೀ, ಪ್ರಾಕೃತವನ್ನಾಗಲೀ ಉಪಯೋಗಿಸುತ್ತಾರೆ. ಉಳಿದ ಪಾತ್ರಗಳು ತಾವು ಯಾವ ದೇಶೀಯರೋ ಆ ದೇಶದ ಭಾಷೆಯನ್ನು ಉಪಯೋಗಿಸಬೇಕು.

ರೂಪಕ ಭೇದಗಳು ಮತ್ತು ಅವುಗಳ ಲಕ್ಷಣಗಳು

1. ನಾಟಕ - ನಾಟಕದ ಕಥೆಯು ಪ್ರಖ್ಯಾತವಾದುದಾಗಿರಬೇಕು. ನಾಯಕನು ದೇವತೆಯಾಗಲೀ ಅಥವಾ ಮಹಾತ್ಮನಾದ ರಾಜಋಷಿಯಾಗಿಯಾಗಲೀ ಇರಬೇಕು. ಪ್ರಧಾನರಸವು ಶೃಂಗಾರ ಅಥವಾ ವೀರರಸ.

* ನೀಚಪಾತ್ರವೆಂದರೆ ಮುಖ್ಯವಲ್ಲದಿರುವ ಪಾತ್ರ.

ವೀರಶೃಂಗಾರಯೋರೇಕಃ ಪ್ರಧಾನಂ ಯತ್ರವರ್ಣ್ಯತೇ। - ಪ್ರತಾಪರುದ್ರೀಯಂ
ಏಕಏವ ಭವೇದಂಗೀ ಶೃಂಗಾರೋ ವೀರ ಏವ ವಾ।
ಅಂಗಮನ್ಯೇಚತೇಸರ್ವೇ - ಪ್ರತಾಪರುದ್ರೀಯಂ

ಕೆಲವರು ಉತ್ತರರಾಮಚರಿತ್ರೆಯಲ್ಲಿ ಕರುಣರಸವೂ, ಪ್ರಬೋಧಚಂದ್ರೋದಯದಲ್ಲಿ ಶಾಂತರಸವೂ ಪ್ರಧಾನರಸಗಳಾದುದರಿಂದ, ಇವುಗಳೂ ಪ್ರಧಾನರಸಗಳಾಗಿರಬಹುದೆಂದು ಅಭಿಪ್ರಾಯ ಪಡುತ್ತಾರೆ.

ಕಥೆಯು ಪ್ರಖ್ಯಾತವಾದುದಾದರೂ ಕವಿಯು ತನಗೆ ಅನುಚಿತವೆಂದು ತೋರಿದ ಭಾಗಗಳನ್ನು ಮಾರ್ಪಡಿಸಬಹುದು.

ಯತ್ತತ್ರಾನುಚಿತಂ ಕಿಂಚಿನ್ನಾಯಕಸ್ಯ ರಸಸ್ಯ ವಾ।
ವಿರುದ್ಧಂ ತತ್ಪರಿತ್ಯಾಜ್ಯಮನ್ಯಥಾ ವಾ ಪ್ರಕಲ್ಪಯೇತ್ ॥ - ದಶರೂಪಕ

ನಾಟಕದಲ್ಲಿ ಐದರಿಂದ ಹತ್ತರವರೆಗೆ ಅಂಕಗಳಿರಬಹುದು.

2. ಪ್ರಕರಣ - ಪ್ರಕರಣದಲ್ಲಿ ನಾಯಕನು ಬ್ರಾಹ್ಮಣ, ವೈಶ್ಯ ಅಥವಾ ಮಂತ್ರಿಯಾಗಿಯೂ, ಧೀರಶಾಂತನಾಗಿಯೂ ಇರಬೇಕು. ಕಥೆಯು ಕವಿಕಲ್ಪಿತವಾಗಿಯೂ ಶೃಂಗಾರರಸಪ್ರಧಾನವಾಗಿಯೂ ಇರಬೇಕು. ನಾಯಿಕೆಯು ಮಾಲತೀ ಮಾಧವದಲ್ಲಿರುವಂತೆ ಕುಲಸ್ತ್ರೀಯಾಗಿರಬಹುದು ಅಥವಾ ಮೃಚ್ಛಕಟಿಕದಲ್ಲಿರುವಂತೆ ವೇಶ್ಯೆಯಾಗಿರಬಹುದು. ನಾಯಿಕಾನುಸಾರವಾಗಿ ಪ್ರಕರಣವನ್ನು ಶುದ್ಧ, ಮಿಶ್ರ ಅಥವಾ ಧೂರ್ತ ವೆಂದು ಕರೆಯಬಹುದು.

ಶುದ್ಧಂ ಧೂರ್ತಂ ಮಿಶ್ರಮಿತಿ ಭೇದಾತ್ತ್ರಿವಿಧಂ ಪುನಃ।
ಕುಲಸ್ತ್ರೀನಾಯಿಕಂ ಶುದ್ಧಂ ಗಣಿಕಾನಾಯಿಕಂ ಪರಂ ॥
ಪ್ರಾಧಾನ್ಯಮುಭಯಂ ಯತ್ರ ಮಿಶ್ರಂ ಪ್ರಕರಣಂ ವಿದುಃ। - ಕಾವ್ಯೇಂದುಪ್ರಕಾಶ

ಉಳಿದ ಲಕ್ಷಣಗಳು ನಾಟಕದಲ್ಲಿರುವಂತೆಯೇ ಇರುತ್ತವೆ.

3. ಸಮವಕಾರ — ಕಥೆಯು ದೇವಾಸುರರಿಗೆ ಸಂಬಂಧಪಟ್ಟ ಪ್ರಖ್ಯಾತ ಕಥೆಯಾಗಿರಬೇಕು. ಒಂದೇ ಕಾರ್ಯದಿಂದ ಪ್ರತಿಯೊಬ್ಬನಿಗೂ ಬೇರೆ ಬೇರೆ ಫಲವುಂಟಾಗುವಂತೆ ಅನೇಕ ಮಂದಿ ನಾಯಕರಿರಬೇಕು. ಪ್ರಧಾನರಸವು ವೀರರಸ ವಾದರೂ ಪ್ರತಿಯೊಂದು ಅಂಕದಲ್ಲಿಯೂ ಶೃಂಗಾರರಸವೂ ಇರಬೇಕು. ಇದರಲ್ಲಿ ಮೂರು ಅಂಕಗಳಿರಬೇಕು. ಮೊದಲನೆಯ ಅಂಕದ ಕಥೆಯು 8 ಘಳಿಗೆಗಳಲ್ಲೂ ಮೂರನೆಯ

ಅಂಕದ ಕಥೆಯು 4 ಘಳಿಗೆಗಳಲ್ಲಿಯೂ ನಡೆದುದಾಗಿರಬೇಕು.

> ಕಥಾಮಪಿ ನಿಬಧ್ನೀಯಾತ್ತಥಾದ್ವಾದಶನಾಲಿಕಾಮ್ ।
> ದ್ವಿತೀಯೇಂಕೇಪಿ ಚ ಚತುರ್ನಾಲಿಕಾವಧಿಕಾಂ ಕಥಾಮ್ ॥
> ತೃತೀಯೇಂಕೇ ನಿಬದ್ಧವ್ಯಾ ಕಥಾ ಚಾಪಿ ದ್ವಿನಾಲಿಕಾ ॥ -ಮಂದಾರಮರಂದ

(ನಾಲಿಕಾಘಟಿಕಾದ್ವಯಂ)

4. ಡಿಮ — ಕಥಾವಸ್ತುವು ರೌದ್ರರಸ ಪ್ರಧಾನವಾಗಿಯೂ, ಶಾಂತ, ಹಾಸ್ಯ, ಶೃಂಗಾರರಸರಹಿತವಾಗಿಯೂ ಇರುವ ಪ್ರಖ್ಯಾತವಸ್ತುವಾಗಿರಬೇಕು. ಇದರಲ್ಲಿ ಮಾಯೆ, ಇಂದ್ರಜಾಲ, ಯುದ್ಧ ಜಗಳ ಇವುಗಳು ಹೆಚ್ಚಾಗಿರಬೇಕು. ದೇವ ಗಂಧರ್ವ ರಾಕ್ಷಸ ಭೂತಪ್ರೇತಾದಿಗಳೇ ಇದರ ನಾಯಕರು. ಇದರಲ್ಲಿ ನಾಲ್ಕು ಅಂಕಗಳಿರಬೇಕು. ಪ್ರವೇಶಕ ವಿಷ್ಕಂಭಕಗಳಿರಬಾರದು.

5. ಈಹಾಮೃಗ — ಇದರ ಕಥೆಯು ಮಿಶ್ರವೃತ್ತ. ಇಬ್ಬರು ಒಬ್ಬ ದಿವ್ಯಸ್ತ್ರೀ ನಿಮಿತ್ತವಾಗಿ ಕೋಪದಿಂದ ಜಗಳವಾಡಿದರೂ, ಯುದ್ಧವಾಗುವುದಿಲ್ಲ. ಪ್ರತಿನಾಯಕನು (ಅಂದರೆ ನಾಯಕನ ವಿರುದ್ಧವಾಗಿರುವವನು) ಸಾಯುವಂತೆ ಕಥೆಯಿರಬಾರದು. ಇದರಲ್ಲಿ ನಾಲ್ಕು ಅಂಕಗಳಿರಬಹುದು. ಕೆಲವರ ಮತದಂತೆ ಇದು ಏಕಾಂಕನಾಟಕ; ಮತ್ತು ಕಥಾನಾಯಕನು ದೇವತೆಯಾಗಿರಬೇಕು. ಶೃಂಗಾರಾಭಾಸವನ್ನೂ ಸ್ವಲ್ಪ ಮಟ್ಟಿಗೆ ಪ್ರದರ್ಶಿಸಬಹುದು.

6-8. ನಾಟಿಕಾ, ಪ್ರಕರಣಿಕಾ, ಸಟ್ಟಕ — ನಾಟಿಕೆಯಲ್ಲಿ ಧೀರಲಲಿತನೂ, ಪ್ರಖ್ಯಾತನೂ ಆದ ರಾಜನೇ ನಾಯಕ. ನವಾನುರಾಗವುಳ್ಳ ರಾಜಪುತ್ರಿಯೇ ನಾಯಿಕೆ. ಇವರ ಅನುರಾಗವೇ ಕಥಾವಸ್ತು ನಾಯಕನು ಪ್ರಖ್ಯಾತನಾದರೂ ಕಥೆಯು ಕಲ್ಪಿತ. ನಾಲ್ಕು ಅಂಕಗಳಿರಬೇಕು. ಪ್ರಕರಣಿಕೆಯಲ್ಲಿ ಪುರೋಹಿತ, ಅಮಾತ್ಯ ಅಥವಾ ವೈಶ್ಯನು ಕಥಾನಾಯಕ. ನಾಯಕನೂ, ನಾಯಿಕೆಯೂ ಸಮಾನವಂಶಜರು. ಸಟ್ಟಕದಲ್ಲಿ ಅದ್ಭುತರಸವು ಪ್ರಧಾನರಸ. ಉಳಿದ ಭಾಗಗಳಲ್ಲೆಲ್ಲಾ ಸಟ್ಟಕ, ಪ್ರಕರಣಿಕೆಗಳು ನಾಟಿಕೆಯ ಲಕ್ಷಣವನ್ನುಳ್ಳವುಗಳಾಗಿರಬೇಕು.

9. ತ್ರೋಟಕ — ದೇವ ಮತ್ತು ಮನುಷ್ಯರಿಬ್ಬರಿಗೂ ಸಂಬಂಧಪಟ್ಟ ಶೃಂಗಾರರಸ ಪ್ರಧಾನವಾದ ವೃತ್ತವೇ ಇದರ ಕಥಾವಸ್ತು ಪ್ರತ್ಯಂಕದಲ್ಲಿಯೂ ವಿದೂಷಕನಿರಬೇಕು. 5, 7, 8 ಅಥವಾ 9 ಅಂಕಗಳಿರಬೇಕು. ಉಳಿದ ಲಕ್ಷಣಗಳೆಲ್ಲಾ ನಾಟಕದಂತೆಯೇ.

10-12. ಪ್ರಸ್ಥಾನಕ, ನಾಟ್ಯರಾಸಕ, ಹಲ್ಲೀಶ — ಇವು ಮೂರು ಸಂಗೀತ ಪ್ರಧಾನವಾದ ದೃಶ್ಯಕಾವ್ಯಗಳು. ಇವುಗಳಲ್ಲಿ ಪ್ರಸ್ಥಾನಕದಲ್ಲಿ ಎರಡು ಅಂಕಗಳಿರಬೇಕು. ಉಳಿದವೆರಡೂ ಏಕಾಂಕರೂಪಕಗಳು. ನಾಟ್ಯರಾಸಕದಲ್ಲಿ ಉದಾತ್ತನಾದ ಒಬ್ಬ ನಾಯಕನೂ, ಒಬ್ಬ ಉಪನಾಯಕನೂ (ಪೀಠಮರ್ದ) ಇರುತ್ತಾರೆ. ಶೃಂಗಾರ ಸಹಿತವಾದ ಹಾಸ್ಯವು ಪ್ರಧಾನರಸ. ಹಲ್ಲೀಶದಲ್ಲಿ ಎಂಟು ಹತ್ತು ಮಂದಿ ಸ್ತ್ರೀಪಾತ್ರಗಳೂ ಒಬ್ಬನೇ ನಾಯಕನೂ ಇರಬೇಕು. ಪ್ರಸ್ಥಾನಕದಲ್ಲಿ ಒಬ್ಬ ಸೇವಕನು ನಾಯಕನಾಗಿಯೂ ಅವನಿಗಿಂತ ಕಡಮೆಯಾದವನೊಬ್ಬನು ಉಪನಾಯಕನಾಗಿಯೂ ಇರಬೇಕು. ಒಬ್ಬ ಸೇವಕಿಯೇ ನಾಯಕಿ.

13. ಸಂಲಾಪಕ — ಇದರಲ್ಲಿ ಮೂರು ಅಥವಾ ನಾಲ್ಕು ಅಂಕಗಳಿರಬೇಕು. ಪಾಷಂಡನು ನಾಯಕ. ಶೃಂಗಾರ ಕರುಣಗಳಲ್ಲದ ಯಾವುದಾದರೂ ಒಂದು ಪ್ರಧಾನರಸ. ಯುದ್ಧ, ಕಪಟಾದಿಗಳೇ ಕಥಾವಸ್ತುಗಳು.

14. ಶಿಲ್ಪಕ — ಇದರಲ್ಲಿ ನಾಲ್ಕು ಅಂಕಗಳು. ಬ್ರಾಹ್ಮಣನು ನಾಯಕ ಅವನಿಗಿಂತ ಕಡಮೆಯಾದವನು ಉಪನಾಯಕ. ಕೋಪದ ಮಾತುಗಳಿಂದಲೂ, ಶ್ಮಶಾನಾದಿಗಳ ವರ್ಣನದಿಂದಲೂ ಕೂಡಿದ, ಶಾಂತಹಾಸ್ಯರಸಗಳಿಂದ ರಹಿತವಾದ ಕಥಾವಸ್ತುವಾಗ ಬೇಕು.

15. ಉಲ್ಲಾಪ್ಯ — ಹಾಸ್ಯ, ಶೃಂಗಾರ, ಕರುಣರಸಗಳಲ್ಲೊಂದನ್ನು ಪ್ರಧಾನ ವಾಗುಳ್ಳ ದೇವತೆಗಳ ಸಂಬಂಧವಾದ ಕಥೆಯೇ ಇದರ ವಸ್ತು. ನಾಯಕನು ಉದಾತ್ತನಾಗಿರಬೇಕು. ನಾಲ್ವರು ನಾಯಿಕೆಯರಿರಬೇಕು. ಶಿಲ್ಪಕದಂತೆಯೇ ಇದರಲ್ಲಿಯೂ ಶ್ಮಶಾನಾದಿಗಳ ವರ್ಣನೆಯಿರಬಹುದು. ಯುದ್ಧವೂ ಬರಬಹುದು. ಪರದೆಯ ಹಿಂದಿನಿಂದ ತ್ರಿಪದಿಗಳನ್ನು ಹಾಡಬೇಕು. ಇದರಲ್ಲಿ ಒಂದು ಅಥವಾ ಮೂರು ಅಂಕಗಳಿರಬಹುದು.

16. ದುರ್ಮಲ್ಲಿಕಾ — ಹೀನಕುಲದಲ್ಲಿ ಹುಟ್ಟಿದವನೇ ಇದರ ನಾಯಕ. ಇದರಲ್ಲಿ ನಾಲ್ಕು ಅಂಕಗಳಿರಬೇಕು. ಅವುಗಳು ಕ್ರಮವಾಗಿ, ವಿಟ, ವಿದೂಷಕ, ಪೀಠಮರ್ದ ಮತ್ತು ನಾಯಕರ ವಿಲಾಸಗಳನ್ನು ವಸ್ತುವನ್ನಾಗಿ ಹೊಂದಿರಬೇಕು. ಈ ಅಂಕಗಳ ಕಥೆಯು 6, 10, 12 ಮತ್ತು 20 ಘಳಿಗೆಗಳಲ್ಲಿ ನಡೆದುದಾಗಿರಬೇಕು.

17-18. ಕಾವ್ಯ, ಪ್ರಹಸನ — ಇವೆರಡರಲ್ಲಿಯೂ ಹಾಸ್ಯವೇ ಪ್ರಧಾನ ರಸ. ಮೊದಲನೆಯದು ಉದಾತ್ತ ನಾಯಿಕಾನಾಯಕರಿಂದ ಕೂಡಿದ ಏಕಾಂಕ ರೂಪಕ. ಇದರಲ್ಲಿ

ಸಂಗೀತಕ್ಕೂ , ಶೃಂಗಾರಭಾಷಿತಗಳಿಗೂ ಪ್ರಾಶಸ್ತ್ಯ ಹೆಚ್ಚು. ಎರಡನೆಯದರಲ್ಲಿ ತಪಸ್ವಿ, ದೇವತೆಗಳೇ ಆಗಲೀ ಅಥವಾ ನೀಚರೇ ಆಗಲೀ ನಾಯಕರಾಗಿರಬಹುದು. ನಾಯಕನು ಮೊದಲನೆಯ ಗುಂಪಿಗೆ ಸೇರಿದವನಾಗಿ ಒಬ್ಬನೇ ಇದ್ದರೆ ಶುದ್ಧ ಪ್ರಹಸನ ವಾಗುವುದು. ಅನೇಕ ಧೂರ್ತರಿಂದ ಕೂಡಿದ್ದರೆ ಸಂಕೀರ್ಣ ಪ್ರಹಸನವಾಗುವುದು. ಒಂದು ಅಥವಾ ಎರಡು ಅಂಕಗಳಿರಬಹುದು.

19-20. ಭಾಣ, ಭಾಣಿಕಾ — ಇವೆರಡೂ ಏಕಾಂಕರೂಪಕಗಳು. ಭಾಣದಲ್ಲಿ ಒಬ್ಬ ಧೂರ್ತನೇ ನಾಯಕ. ವೀರಶೃಂಗಾರಗಳಿಂದ ಕೂಡಿದ ಒಂದು ಕಲ್ಪಿತ ಕಥೆಯೇ ವಸ್ತು. ನಾಯಕನು ಬೇರೆ ಪಾತ್ರಗಳ ಸಹಾಯವಿಲ್ಲದೆ, ಆಕಾಶಭಾಷಿತ ಗಳಿಂದಲೂ, ಶೌರ್ಯ ಶೃಂಗಾರಗಳ ವರ್ಣನೆಯಿಂದಲೂ ವೀರ ಮತ್ತು ಶೃಂಗಾರರಸಗಳನ್ನು ಸೂಚಿಸಬೇಕು. (ಆಕಾಶಭಾಷಿತವೆಂದರೆ "ನೀನು ಏನು ಹೇಳಿದೆ" "ಹೀಗೆ ಹೇಳಿದೆಯಾ" ಎಂದು ಪ್ರಶ್ನೆ ಉತ್ತರಗಳೆರಡನ್ನೂ ತಾನೇ ಹೇಳುತ್ತಾ ಮಾತನಾಡು ವುದು). ಭಾಣಿಕೆಯು ಉದಾತ್ತ ನಾಯಿಕೆಯಿಂದಲೂ, ಹೀನನಾಯಕ ನಿಂದಲೂ ಕೂಡಿರಬೇಕು. ಆಕ್ಷೇಪಣೆ, ನಿಷ್ಠುರವಾದ ಮಾತುಗಳು ಬಹಳ ಹೆಚ್ಚು ಆದರೂ ವೇಷಭೂಷಣಾದಿಗಳು ಬಹಳ ರಮ್ಯವಾಗಿರಬೇಕು.

21. ವ್ಯಾಯೋಗ — ಇದರ ಕಥೆಯು ಸ್ತ್ರೀನಿಮಿತ್ತವಲ್ಲದ ಯುದ್ಧ ಬಹು ಪುರುಷಪಾತ್ರಗಳಿಂದಲೂ ಸ್ವಲ್ಪ ಸ್ತ್ರೀಪಾತ್ರಗಳಿಂದಲೂ ಕೂಡಿ ಶಾಂತ, ಶೃಂಗಾರ, ಹಾಸ್ಯರಸರಹಿತವಾಗಿ ರೌದ್ರರಸಪ್ರಧಾನವಾದ ಪ್ರಖ್ಯಾತ ವೃತ್ತವಾಗಿರಬೇಕು. ನಾಯಕನು ಧೀರೋದ್ಧತನಾದ ಪ್ರಖ್ಯಾತರಾಜರ್ಷಿಯಾಗಿಯಾಗಲೀ ದೇವತೆಯಾಗಿಯಾಗಲೀ ಇರಬೇಕು. ಇದೂ ಏಕಾಂಕರೂಪಕ.

22. ಅಂಕ ಅಥವಾ ಉತ್ಸೃಷ್ಟಿಕಾಂಕ — ಇದರಲ್ಲಿ ದೇವತೆಗಳಿರಬಾರದು. ಸಾಧಾರಣ ಮನುಷ್ಯರೇ ನಾಯಕರು. ಪ್ರಖ್ಯಾತವೃತ್ತವನ್ನು ತೆಗೆದುಕೊಂಡು ಕವಿಯು ಅದನ್ನು ತನಗೆ ಬೇಕಾದ ರೀತಿಯಲ್ಲಿ ಬದಲಾಯಿಸಿಕೊಳ್ಳಬಹುದು. ಕೆಲವು ವೇಳೆ ಕಲ್ಪಿತ ವಸ್ತುವನ್ನೂ ತೆಗೆದುಕೊಳ್ಳುವುದುಂಟು.

ಪ್ರಖ್ಯಾತವಸ್ತುವಿಷಯಸ್ತ್ವ ಪ್ರಖ್ಯಾತಃ ಕದಾಚಿದೇವ ಸ್ಯಾತ್ ।
ದಿವ್ಯಪುರುಷೈರ್ವಿಯುಕ್ತಃ ಶೇಷೈರನ್ಯೈರ್ಭವೇತ್ಪುಂಭಿಃ ॥ - ನಾಟ್ಯಶಾಸ್ತ್ರ

ಇದು ಅನೇಕ ಸ್ತ್ರೀಯರ ವ್ಯಸನಕರವಾದ ಮಾತುಗಳಿಂದಲೂ, ವಾಗ್ಯುದ್ಧ ಗಳಿಂದಲೂ ಕೂಡಿದ ಕರುಣಾರಸಪ್ರಧಾನವಾದ ಏಕಾಂಕರೂಪಕ.

23-25. ವೀಥೀ, ಗೋಷ್ಠೀ, ವಿಲಾಸಿಕಾ — ಇವು ಮೂರೂ ಶೃಂಗಾರ ರಸಪ್ರಧಾನಗಳಾದ ಏಕಾಂಕರೂಪಕಗಳು. ವೀಥಿಯಲ್ಲಿ ಒಬ್ಬನೇ ನಾಯಕನು ಆಕಾಶಭಾಷಿತಗಳಿಂದ ಶೃಂಗಾರವನ್ನು ಸೂಚಿಸುತ್ತಾನೆ. ಕಥೆಯೂ, ನಾಯಕನೂ ಸಹ ಕವಿಕಲ್ಪಿತ. ಗೋಷ್ಠಿಯು ಐದಾರು ಸ್ತ್ರೀಪಾತ್ರಗಳಿಂದಲೂ ಎಂಟು ಹತ್ತು ಪುರುಷಪಾತ್ರ ಗಳಿಂದಲೂ ಕೂಡಿದ ಕಾಮಶೃಂಗಾರ ಪ್ರಧಾನವಾದ ಕವಿಕಲ್ಪಿತರೂಪಕ. ಒಳ್ಳೆಯ ವೇಷಭೂಷಣಾದಿಗಳಿಂದಲಂಕೃತರಾದ ವಿಟ, ವಿದೂಷಕ, ಪೀಠಮರ್ದರಿಂದ ಕೂಡಿದ ಹೀನನಾಯಕನು ವಿಲಾಸಿಕೆಯ ಕಥಾನಾಯಕ. ಇದರ ಕಥೆಯು ಚಿಕ್ಕದು ಮತ್ತು ಇದರಲ್ಲಿ ಶ್ಲೋಕಗಳು ಬಹಳ ಕಡಮೆ.

26-27. ಪ್ರೇಂಖಣ, ರಾಸಕ — ಇವೆರಡೂ ಸೂತ್ರಧಾರನಿಲ್ಲದ ಏಕಾಂಕ ರೂಪಕಗಳು. ನಾಂದಿಯನ್ನು ಯಾವನಾದರೊಬ್ಬ ನಟನು ಪರದೆಯ ಹಿಂದಿನಿಂದಲೇ ಹಾಡುತ್ತಾನೆ. ಆಮುಖವನ್ನೂ ಪರದೆಯ ಹಿಂದೆಯೇ ಹೇಳಬೇಕು. ಪ್ರೇಂಖಣವು ಹೀನನಾಯಕನ ರೋಷವಾಕ್ಕುಗಳಿಂದಲೂ, ಯುದ್ಧಾದಿಗಳಿಂದಲೂ ಸಹಿತವಾದ ರೂಪಕ. ರಾಸಕವು ಶೃಂಗಾರರಸ ಪ್ರಧಾನವಾದುದು. ಪ್ರಖ್ಯಾತನಾಯಿಕೆ, ಮೂರ್ಖನಾಯಕರೂ ಸೇರಿ ಇದರಲ್ಲಿ ಐದು ಪಾತ್ರಗಳು.

28. ಶ್ರೀಗದಿತ — ಇದು ಪ್ರಖ್ಯಾತ ಮತ್ತು ಉದಾತ್ತನಾದ ನಾಯಕನಿಂದಲೂ, ಪ್ರಸಿದ್ಧ ನಾಯಿಕೆಯಿಂದಲೂ ಕೂಡಿದ ಪ್ರಸಿದ್ಧ ವೃತ್ತವನ್ನು ಕಥಾವಸ್ತುವಾಗುಳ್ಳ ರೂಪಕ. ಇದರಲ್ಲಿ ನಟಿಯು ಲಕ್ಷ್ಮೀವೇಷಧಾರಿಣಿಯಾಗಿ, ಶ್ರೀಶಬ್ದದಿಂದ ಕೂಡಿದ ಶ್ಲೋಕಗಳನ್ನು ಹಾಡುತ್ತಾಳೆ. ಇದೂ ಏಕಾಂಕ ರೂಪಕವೇ.

ಸಂಸ್ಕೃತ ನಾಟಕ

ಸಾಮಾನ್ಯವಾಗಿ ಎಲ್ಲಾ ಸಾಹಿತ್ಯಗಳಲ್ಲೂ ನಾಟಕಕ್ಕೆ ಒಂದು ಉನ್ನತ ಸ್ಥಾನವಿದೆ. ಇತರ ಕಾವ್ಯಭೇದಗಳು ಓದುವುದರಿಂದ ಅಥವಾ ಓದಿ ಕೇಳುವುದರಿಂದ ಮಾತ್ರ ಸಂತೋಷವನ್ನುಂಟುಮಾಡಬಲ್ಲವು. ಆದರೆ ನಾಟಕವು ನೃತ್ತಗೀತಾದಿಗಳಿಂದಲೂ ವೇಷಭೂಷಣಾದಿಗಳಿಂದಲೂ ಕೂಡಿರುವುದರಿಂದ ಸರ್ವರಿಗೂ ಆನಂದವನ್ನುಂಟು ಮಾಡಬಲ್ಲದು. ಆದುದರಿಂದಲೇ "ಕಾವ್ಯೇಷು ನಾಟಕಂ ರಮ್ಯಂ" ಎಂಬ ಉಕ್ತಿಯುಂಟಾಗಿದೆ. ಸಂಸ್ಕೃತ ಸಾಹಿತ್ಯದಲ್ಲಂತೂ "ನಾಟಕಾಂತ ಸಾಹಿತ್ಯ"ವೆಂಬ ನುಡಿಯು ತಿಳಿಸುವಂತೆ ಕಾವ್ಯಗಳಲ್ಲೆಲ್ಲಾ ನಾಟಕವೇ ಶ್ರೇಷ್ಠವೆಂದು ಪಂಡಿತರ ಅಭಿಪ್ರಾಯ.

ಸಂಸ್ಕೃತ ಸಾಹಿತ್ಯವು ಪ್ರಾಚೀನ ಸಾಹಿತ್ಯಗಳಲ್ಲಿ ಬಹು ಮುಖ್ಯವಾದ ಸ್ಥಾನವನ್ನು ಹೊಂದಿದೆ. ಆದುದರಿಂದ ಸಂಸ್ಕೃತದಲ್ಲಿ ನಾಟಕವು ಹೇಗೆ ಹುಟ್ಟಿತು, ಹೇಗೆ ಬೆಳೆಯಿತು ಎಂಬುದನ್ನು ತಿಳಿಯುವುದು ಅವಶ್ಯಕ. ಸಂಸ್ಕೃತ ನಾಟಕದ ಚರಿತ್ರವೇ ಭಾರತೀಯ ನಾಟಕದ ಚರಿತ್ರೆಯಾಗಿರುವುದರಿಂದ ಅದನ್ನು ತಿಳಿಯುವುದು ಭಾರತೀಯರಿಗಂತೂ ಅತ್ಯವಶ್ಯಕ. ಆದರೆ ನಮಗೆ ಇದುವರೆಗೆ ಸಿಕ್ಕಿರುವ ಸಂಸ್ಕೃತ ನಾಟಕಗಳೆಲ್ಲಾ ಸಂಸ್ಕೃತ ಭಾಷೆಯ ಮತ್ತು ನಾಟಕದ ಉತ್ಕರ್ಷ ಮತ್ತು ಅವನತಿ ಕಾಲದವುಗಳಾದುದರಿಂದ ಸಂಸ್ಕೃತ ನಾಟಕದ ಚರಿತ್ರೆಯು ಸುಲಭವಾಗಿ ತಿಳಿಯುವಂತಿಲ್ಲ.

ಸಂಸ್ಕೃತ ನಾಟಕವು ಹೇಗೆ ಹುಟ್ಟಿತೆಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗು ವುದಿಲ್ಲ. ವೇದಕಾಲದಿಂದಲೂ ಸಂವಾದ, ನೃತ್ತ, ಗಾನಗಳು ರೂಢಿಯಲ್ಲಿದ್ದುವು. ಉತ್ಸವವೇ ಮೊದಲಾದ ಕಾಲಗಳಲ್ಲಿ ದೇವತೆಗಳಿಗೆ ಸಂಬಂಧಿಸಿದ ಕಥೆಗಳನ್ನು ನಟರು ವೇಷಗಳನ್ನು ಧರಿಸಿ ಅಭಿನಯ ಸಹಿತವಾಗಿ ಮೊದಮೊದಲು ಪ್ರದರ್ಶಿಸಿರಬಹುದು. ಕ್ರಮಕ್ರಮವಾಗಿ ಕಥಾವಸ್ತುವು ಪೌರಾಣಿಕ ವ್ಯಕ್ತಿಗಳ, ರಾಜರ, ಕಥೆಗಳಿಗೂ ಇಳಿದಿರಬಹುದು. ಹೀಗೆಯೇ ಬದಲಾವಣೆ ಹೊಂದುತ್ತಾ ನಾಟಕಗಳು ಉತ್ಪತ್ತಿಯಾಗಿರ ಬಹುದೆಂದು ತೋರುತ್ತದೆ. ದ್ರಾವಿಡ ಭಾಷೆಗಳಲ್ಲಿ ನಾಟಕಗಳು ಸಿಕ್ಕಿಲ್ಲವಾದರೂ, ಬಯಲಾಟ, ಸೂತ್ರದ ಗೊಂಬೆಯಾಟ ಮೊದಲಾದವು ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದವು. ಆದುದರಿಂದ ಇವುಗಳ ಪ್ರಭಾವವೂ ಸಂಸ್ಕೃತ ನಾಟಕದ ಮೇಲೆ ಬಿದ್ದಿರಬಹುದು. ಹಿಂದೆ ಭರತ ಖಂಡಕ್ಕೂ ಗ್ರೀಸ್ ದೇಶಕ್ಕೂ ಬಹಳ ಸಂಬಂಧವಿದ್ದಿತು. ಆದುದರಿಂದ ಗ್ರೀಕ್ ನಾಟಕಗಳೂ ಸಂಸ್ಕೃತ ನಾಟಕದ ಮೇಲೆ ಪರಿಣಾಮವನ್ನುಂಟು ಮಾಡಿರಬಹುದು.

ಕೆಲವರು ಸಂಸ್ಕೃತ ನಾಟಕವು ಗ್ರೀಕ್ ನಾಟಕದಿಂದ ಹುಟ್ಟಿತೆಂದು ಅಭಿಪ್ರಾಯ ಪಡುತ್ತಾರೆ. ಕ್ರಿ.ಪೂ. 5ನೆಯ ಶತಮಾನದಲ್ಲಿಯೇ ಗ್ರೀಕ್ ನಾಟಕವು ಅಭಿವೃದ್ಧಿ ಸ್ಥಿತಿಯಲ್ಲಿದ್ದು, ಅಲೆಗ್ಸಾಂಡರನು ಇಂಡಿಯಾಕ್ಕೆ ದಂಡೆತ್ತಿ ಬಂದ ಮೇಲೆ ಆದರ ಪ್ರಭಾವದಿಂದ ಇಂಡಿಯಾದಲ್ಲಿ ಸುಮಾರು ಕ್ರಿ.ಶಕದ ಆರಂಬದ ಹೊತ್ತಿಗೆ ಸಂಸ್ಕೃತ ನಾಟಕದ ಉತ್ಪತ್ತಿಯಾಯಿತೆಂದು ಇವರ ಅಭಿಪ್ರಾಯ. ಆದರೆ ಇದನ್ನು ಒಪ್ಪುವುದಕ್ಕಾಗುವುದಿಲ್ಲ. ನಾಟಕ ಕರ್ತೃವಾದ ಕಾಳಿದಾಸನು ಕ್ರಿ.ಪೂ. ಸುಮಾರು 150ರಲ್ಲಿದ್ದನೆಂದು ಹೇಳಲು ಅನೇಕ ಪ್ರಮಾಣಗಳಿವೆ. ಇವನಿಗಿಂತ ಹಿಂದೆಯೇ ಭಾಸ, ಸೌಮಿಲ್ಲ ಮೊದಲಾದವರಿದ್ದರೆಂದು ಕಾಳಿದಾಸನೇ ಹೇಳಿರುತ್ತಾನೆ. ಪಾಶ್ಚಾತ್ಯ ವಿದ್ವಾಂಸರಲ್ಲನೇಕರ ಮತದಂತೆ ಭಾಸನು ಕ್ರಿ.ಶ. 200ರ ಸುಮಾರಿನಲ್ಲೂ, ಅಶ್ವಘೋಷನು ಕ್ರಿ.ಶ. 100ರ ಸುಮಾರಿನಲ್ಲೂ ಇದ್ದರೆಂದು ಒಪ್ಪಿದರೂ, ಸಂಸ್ಕೃತ ನಾಟಕವು ಕ್ರಿಸ್ತಶಕಾರಂಭದಲ್ಲಿ ಹುಟ್ಟಿದ್ದ ಪಕ್ಷದಲ್ಲಿ ಇಷ್ಟು ಬೇಗ ಇಷ್ಟು ಅಭಿವೃದ್ಧಿ ಸ್ಥಿತಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಕ್ರಿ.ಪೂ. 4ನೆಯ ಶತಮಾನಕ್ಕಿಂತ ಈಚಿನವನಲ್ಲದ ಪಾಣಿನಿಯ ಕೃಶಾಶ್ವ, ಶಿಲಾಲಿಗಳ ನಟಸೂತ್ರಗಳಿದ್ದುವೆಂದು ಹೇಳುತ್ತಾನೆ. ಇವೆಲ್ಲ ಕಾರಣಗಳಿಂದ ಸಂಸ್ಕೃತ ನಾಟಕವು ಸ್ವತಂತ್ರವಾಗಿಯೇ ಹುಟ್ಟಿತೆಂದು ಹೇಳಲು ತಕ್ಕಷ್ಟು ಅವಕಾಶವಿದೆ.

ಮತ್ತೆ ಕೆಲವರು ಸಂಸ್ಕೃತ ನಾಟಕಗಳು ಓದಲು ಮಾತ್ರ ಬರೆಯಲ್ಪಟ್ಟವುಗಳೆಂದೂ, ಬಯಲಾಟ, ಕಥಕಳಿ ಮೊದಲಾದವುಗಳಿಗಿಂತ ಹೆಚ್ಚಿನ ದರ್ಜೆಯ ಪ್ರದರ್ಶನಗಳು ಭರತ ಖಂಡದಲ್ಲಿರಲಿಲ್ಲವೆಂದೂ ಅಭಿಪ್ರಾಯ ಪಡುತ್ತಾರೆ. ಮಹಾಶಿಲ್ಪಿಗಳೂ, ಗಾಯಕರೂ, ಕುಶಲ ಕೆಲಸಗಳನ್ನು ಮಾಡಬಲ್ಲವರೂ ಇದ್ದ ಈ ದೇಶದಲ್ಲಿ ಬಯಲಾಟ ಕ್ಕಿಂತ ಹೆಚ್ಚಿನ ದರ್ಜೆಯ ಪ್ರದರ್ಶನಗಳನ್ನು ಅಭಿನಯಿಸಬಲ್ಲ ನಟರಿರಲಿಲ್ಲವೆಂದು ಹೇಳುವುದು ತೀರ ಹಾಸ್ಯಾಸ್ಪದ. ಅಲ್ಲದೆ ಭರತನ ನಾಟ್ಯಶಾಸ್ತ್ರ (ಕ್ರಿ.ಶ. ಆರಂಭದಲ್ಲಿ ಹುಟ್ಟಿದ ಗ್ರಂಥ)ದಲ್ಲಿ ನಾಟಕ ಮಂಟಪ (Stage)ದ ಭೇದಗಳೂ ಅವುಗಳ ಲಕ್ಷಣ ಮತ್ತು ನಿರ್ಮಾಣ ಕ್ರಮಗಳೂ ವಿಸ್ತಾರವಾಗಿ ಹೇಳಲ್ಪಟ್ಟಿವೆ. ಈ ಗ್ರಂಥದಲ್ಲಿಯೂ, ಇತರ ಲಕ್ಷಣ ಗ್ರಂಥಗಳಲ್ಲಿಯೂ, ನಾಟಕದ ಪೂರ್ವದಲ್ಲಿ (ಪೂರ್ವರಂಗ) ಮಾಡಬೇಕಾದ ಕೆಲಸಗಳು ವಿವರವಾಗಿ ಕೊಡಲ್ಪಟ್ಟಿವೆ. ನಾಟಕಗಳಲ್ಲಿಯೂ ಪ್ರವೇಶ, ನಿಷ್ಕ್ರಮಾದಿಗಳೂ ಅಪವಾರಿತ (ಮರೆಯಲ್ಲಿ ಹೇಳುವುದು) ಜನಾಂತಿಕ (ಗುಂಪಿನ ಮಧ್ಯೆ ಹೇಳುವುದು) ಮೊದಲಾದ ಭಾಷಣ ವಿವರಗಳೂ, ಪಟಾಕ್ಷೇಪೇಣ ಪ್ರವಿಶ್ಯ (ಥರದೆಯನ್ನು ಹಾರಿಸಿ ಬರುವಿಕೆ) ಮೊದಲಾದ ಸೂಚನೆಗಳೂ ಹೇರಳವಾಗಿವೆ. ಪಾತ್ರಗಳಿಗನುಸಾರವಾಗಿ ಬೇರೆ ಬೇರೆ ಭಾಷೆಗಳು ಉಪಯೋಗಿಸಲ್ಪಟ್ಟಿವೆ. ಸಂಗೀತ, ಕಥಾ ಪ್ರಭೇದಗಳಿಗನುಸಾರವಾಗಿ ಅನೇಕ

ರೂಪಕ, ಉಪರೂಪಕಗಳು *ಹುಟ್ಟಿವೆ. ಇವೆಲ್ಲ ಕಾರಣಗಳಿಂದಲೂ ಸಂಸ್ಕೃತ ನಾಟಕಗಳು ಓದಲು ಮಾತ್ರ ಬರೆಯಲ್ಪಟ್ಟ ಕಾವ್ಯಗಳಲ್ಲವೆಂದೂ, ಇವುಗಳನ್ನೂ ಅಭಿನಯಿಸುತ್ತಿದ್ದರೆಂದೂ ನಿರ್ವಿವಾದವಾಗಿ ಹೇಳಬಹುದು.

ಹೀಗೆ ಧಾರ್ಮಿಕ ಉತ್ಸವಾದಿಗಳಿಂದ ಹುಟ್ಟಿದ ನಾಟಕವು ಕ್ರಮಕ್ರಮವಾಗಿ ಬೆಳೆದು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿತು. ಅನೇಕನೇಕ ಪ್ರಭೇದಗಳಿದ್ದರೂ ಸಂಸ್ಕೃತದಲ್ಲಿ ಹರ್ಷಾಂತ ನಾಟಕಗಳು (Comedies) ಅದರಲ್ಲೂ ಪೌರಾಣಿಕ ನಾಟಕಗಳು ಬಹಳ ಹೆಚ್ಚು. ಇಷ್ಟರಿಂದಲೇ ವಿಷಾದಾಂತನಾಟಕಗಳೂ (Tragedies) ಸಾಮಾಜಿಕ ನಾಟಕಗಳೂ (Social Dramas) ಇರಲಿಲ್ಲವೆಂದು ತಿಳಿಯಬಾರದು. ಊರು ಭಂಗವೆಂಬ ಒಂದು ವಿಷಾದಾಂತ ನಾಟಕವೂ ಮೃಚ್ಛಕಟಿಕ, ಚಾರುದತ್ತ ಮೊದಲಾದ ಕೆಲವು ಸಾಮಾಜಿಕ ನಾಟಕಗಳೂ ಸಿಕ್ಕಿವೆ. ಆದರೆ ಇವುಗಳೆಲ್ಲ ಬಹಳ ಹಿಂದಿನವು. ಇದರಿಂದ ಈ ಜಾತಿಯ ನಾಟಕಗಳು ಹಿಂದೆ ಇದ್ದುವೆಂದೂ ಕ್ರಮಕ್ರಮವಾಗಿ ಜನರಿಗೆ ಇವುಗಳಲ್ಲಿ ಅಭಿರುಚಿಯು ಕಡಿಮೆ ಯಾದುದರಿಂದ ಇಂತಹ ನಾಟಕಗಳು ಈಚೆಗೆ ಬರೆಯಲ್ಪಡದೆ ಇದ್ದಿರಬಹುದೆಂದೂ ಊಹಿಸಲವಕಾಶವಿದೆ.

ನಾಟಕ ಅಥವಾ ಸಾಧಾರಣವಾಗಿ ಕಾವ್ಯವು ಉಂಟುಮಾಡುವ ಫಲಗಳನ್ನು ಕುರಿತು "ಕಾವ್ಯಪ್ರಕಾಶ"ವೆಂಬ ಗ್ರಂಥದಲ್ಲಿ,

"ಕಾವ್ಯಂ ಯಶಸೇರ್ಥಕೃತೇ* ವ್ಯವಹಾರವಿದೇಶಿವೇತರಕ್ಷತಯೇ।
ಸದ್ಯಃಪರನಿರ್ವೃತಯೇ ಕಾಂತಾಸಮ್ಮಿತತಯೋಪದೇಶಯುಜೇ ॥"

ಎಂಬ ಶ್ಲೋಕವಿದೆ. ಇವುಗಳಲ್ಲಿ ವ್ಯವಹಾರವನ್ನು ತಿಳಿಸುವುದು, ಇಹಪರಸುಖಗಳನ್ನುಂಟುಮಾಡುವುದು ಮತ್ತು ಬಹಳ ಲಲಿತವಾಗಿ ಉಪದೇಶಿಸುವುದು ಇವುಗಳು ಬಹಳ ಮುಖ್ಯವಾದ ಉದ್ದೇಶಗಳು. ಇವುಗಳಲ್ಲದೇ ನಾಟಕವು ಇನ್ನೂ ಒಂದು ಕೆಲಸವನ್ನೂ ಮಾಡಬಲ್ಲದು. ನಮ್ಮ ಜೀವನದಲ್ಲಿ ನಮ್ಮ ಅನೇಕ ಆಶೆಗಳನ್ನು ಸಫಲ ಮಾಡಿಕೊಳ್ಳುವುದು ಅಸಾಧ್ಯ. ಇವುಗಳನ್ನು ಭಾವನಾ ಪ್ರಪಂಚದಲ್ಲಾದರೂಸಫಲಗೊಳಿಸ ದಿದ್ದರೆ ಬಹಳ ತೊಂದರೆಯಾಗುವುದೆಂದು ಮನಶ್ಶಾಸ್ತ್ರಜ್ಞರ (Psychologists) ಮತ. ಇಂತಹ ಆಶೆಗಳನ್ನು ಭಾವನಾ ಪ್ರಪಂಚದಲ್ಲಿ ಪೂರಯಿಸುವುದು ನಾಟಕದ ಒಂದು ಮುಖ್ಯೋದ್ದೇಶ. ಯಾವ ನಾಟಕವು ಈ ಉದ್ದೇಶವನ್ನು ಚೆನ್ನಾಗಿ ಸಾಧಿಸಬಲ್ಲುದೋ ಅದೇ ಹೆಚ್ಚು ಜನಪ್ರಿಯವಾಗುವುದು.

---

* ಇವುಗಳ ವಿಷಯವಾಗಿ, ಇದೇ ಮಾಸಪತ್ರಿಕೆಯ 2ನೇ ಸಂಪುಟ 4ನೇ ಸಂಚಿಕೆಯ 131 ಪುಟದಲ್ಲಿ 'ದೃಶ್ಯಕಾವ್ಯ'ವೆಂಬ ಲೇಖನದಲ್ಲಿ ವಿವರಗಳಿವೆ.

ಸಾಮಾನ್ಯವಾಗಿ ಜನರಿಗೆ ಸುಖ ಪಡಬೇಕು. ಅಭಿವೃದ್ಧಿ ಹೊಂದಬೇಕೆಂಬ ಆಶೆ ಹೆಚ್ಚೇ ಹೊರತು ವ್ಯಥೆ ಪಡಬೇಕೆಂಬ ಆಶೆಯಿರುವುದಿಲ್ಲ. ಇಂತಹ ಆಶೆಗಳನ್ನು ಹರ್ಷಾಂತ ನಾಟಕಗಳು ಮತ್ತು ಉಚ್ಚ ತರಗತಿಯ ಜೀವನವನ್ನು ಚಿತ್ರಿಸುವ ನಾಟಕಗಳು ಮಾತ್ರ ಸಫಲಗೊಳಿಸುವುವು. ಆದುದರಿಂದ ಇಂತಹ ನಾಟಕಗಳು ಜನಪ್ರಿಯವಾಗುಷ್ಟು ವಿಷಾದಾಂತ ನಾಟಕಗಳಾಗಲಾರವು. ಆದುದರಿಂದಲೇ ವಿಷಾದಾಂತ ನಾಟಕಕ್ಕೆ ತಕ್ಕಷ್ಟು ಉತ್ತೇಜನ ಸಿಕ್ಕಿರಲಾರದು. ಅಲ್ಲದೇ ಯುದ್ಧ ಮರಣಾದಿಗಳನ್ನು ರಂಗದಲ್ಲಿ ಸರಿಯಾಗಿ ತೋರಿಸಲು ಸಾಧ್ಯವಿಲ್ಲವೆಂಬ ಕಾರಣದಿಂದ ಇವುಗಳನ್ನು ತೋರಿಸಬಾರದೆಂಬ ನಿಯಮವುಂಟಾಗಿ, ಆ ಕಾರಣದಿಂದಲೂ ವಿಷಾದಾಂತ ನಾಟಕ ಪ್ರದರ್ಶನಕ್ಕೆ ಅನಾನುಕೂಲವುಂಟಾಗಿರಬಹುದು.

ಉಚ್ಚ ತರಗತಿಯ ಹರ್ಷಾಂತ ನಾಟಕಗಳಲ್ಲೆಲ್ಲಾ ವಿಷಾದಾಂತ ನಾಟಕದಲ್ಲಿರ ಬೇಕಾದ ಸನ್ನಿವೇಶಗಳಿದ್ದೇ ಇವೆ. ಶಾಕುಂತಲ, ವಿಕ್ರಮೋರ್ವಶೀಯ, ನಾಗಾನಂದ ಮೊದಲಾದ ನಾಟಕಗಳಲ್ಲಿ ಕೊನೆಯ ಒಂದೆರಡು ಅಂಕಗಳನ್ನು ಬಿಟ್ಟರೆ ಅವು ವಿಷಾದಾಂತ ನಾಟಕಗಳಾಗುತ್ತಿದ್ದವು. ಆದುದರಿಂದ ವಿಷಾದಾಂತ ನಾಟಕಗಳು ಹೆಚ್ಚಾಗಿಲ್ಲದಿರುವುದು ಮೇಲಿನ ಕಾರಣಗಳಿಂದಲೇ ಹೊರತು, ಆ ವಿಧವಾದ ನಾಟಕಗಳನ್ನು ಬರೆಯಲು ಶಕ್ತಿಯುಳ್ಳ ಕವಿಗಳ ಅಭಾವದಿಂದಲ್ಲ.

ಸಂಸ್ಕೃತ ನಾಟಕದ ಬೆಳವಣಿಗೆಯ ವಿಷಯವಾಗಿ ನಮಗೇನೂ ತಿಳಿದಿಲ್ಲ. ನಮಗೆ ಇದುವರೆಗೆ ಸಿಕ್ಕಿರುವ ಅತಿ ಪ್ರಾಚೀನ ನಾಟಕಗಳೆಂದರೆ ಭಾಸಕಾಳಿದಾಸಾದಿಗಳವು. ಇವು, ನಾಟಕವು ಪರಿಪೂರ್ಣಸ್ಥಿತಿಯನ್ನು ಹೊಂದಿದ ಕಾಲದವು. ಇಷ್ಟು ಹೊತ್ತಿಗಾಗಲೇ ನಾಟಕ ಲಕ್ಷಣಗಳು ಒಟ್ಟುಗೂಡಿಸಲ್ಪಟ್ಟು ಲಕ್ಷಣ ಗ್ರಂಥಗಳು ಹುಟ್ಟುವುದಕ್ಕೆ ಮೊದಲಾಗಿದ್ದಿರಬಹುದು. ಮೃಚ್ಛಕಟಿಕನಾಟಕವು ಈ ಲಕ್ಷಣ ಸಂಪ್ರದಾಯವನ್ನು ವಿರೋಧಿಸಿ ಹುಟ್ಟಿದ ನಾಟಕವೆಂದು ಕೆಲವು ಪಂಡಿತರ ಅಭಿಪ್ರಾಯ. ಇಲ್ಲಿಂದ ಮುಂದಿನ ನಾಟಕಗಳೆಲ್ಲಾ ಸಂಪ್ರದಾಯ ಬದ್ಧನಾಟಕಗಳು. ವೇದಾಂತತತ್ವಗಳೂ ಸಹ ಪ್ರಬೋಧ ಚಂದ್ರೋದಯಾದಿ ನಾಟಕಗಳಲ್ಲಿ ನಾಟಕರೂಪದಲ್ಲಿ ಬರೆಯಲ್ಪಟ್ಟಿವೆ ಯೆಂದ ಮೇಲೆ ಆ ಕಾಲದಲ್ಲಿ ನಾಟಕಗಳು ಎಷ್ಟು ಜನಪ್ರಿಯವಾಗಿದ್ದವೆಂದು ಹೇಳಲಗತ್ಯವಿಲ್ಲ.

ಸುಮಾರು ಕ್ರಿ.ಶಕ 6, 7ನೆಯ ಶತಮಾನಗಳವರೆಗೂ ಸಂಸ್ಕೃತ ಸಾಹಿತ್ಯವೂ, ಆದುದರಿಂದ ನಾಟಕಗಳೂ ಅಭಿವೃದ್ಧಿ ಸ್ಥಿತಿಯಲ್ಲಿದ್ದುವು. ಅಲ್ಲಿಂದಾಚೆಗೆ ಕ್ರಮೇಣ ಸಂಸ್ಕೃತದ ಅವನತಿಗಾರಂಭವಾಯಿತು. ಇಷ್ಟು ಹೊತ್ತಿಗಾಗಲೇ ಸಂಸ್ಕೃತ ಭಾಷೆಯನ್ನು

ಮಾತನಾಡುವುದು ತಪ್ಪಿ ಬಹಳ ಕಾಲವಾಗಿತ್ತು. ದೇಶ ಭಾಷೆಗಳ ಕಡೆಗೆ ಗಮನವು ಹೆಚ್ಚಾಗಿತ್ತು. ಆದರೂ ಇನ್ನೂ 4-5 ಶತಮಾನಗಳು ಮುಂದಿನವರೆಗೂ ಇಲ್ಲೊಂದು, ಅಲ್ಲೊಂದು ಉತ್ತಮ ವರ್ಗದ ನಾಟಕಗಳು ಕಾಣ ಬರುತ್ತಿದ್ದವು.

ಹತ್ತನೆಯ ಶತಮಾನದಿಂದಾಚೆಗೆ ವಿಧರ್ಮಿಗಳ ಪೆಟ್ಟು ಬಲವಾದುದರಿಂದ, ಸಂಸ್ಕೃತ ಭಾಷೆಗೆ ಆಶ್ರಯ ಕಡಿಮೆಯಾಯಿತು. ಆದುದರಿಂದ ಗ್ರಂಥಗಳು ಹುಟ್ಟು ವುದೂ ಕಡಿಮೆಯಾಯಿತು. ಅಲ್ಲಿಂದೀಚೆಗೆ ಹುಟ್ಟಿದ ನಾಟಕಗಳೆಲ್ಲಾ ಪ್ರಾಯಶಃ ಶ್ರೀರಾಮನ ಅಥವಾ ಕೃಷ್ಣನ ಕಥೆಗೆ ಸಂಬಂಧಿಸಿವೆ. ಪಾತ್ರ ರಚನೆಗೆ ಹೆಚ್ಚು ಗಮನ ಕೊಡದೆ ಪಾಂಡಿತ್ಯ ಪ್ರದರ್ಶನವನ್ನೇ ಮುಖ್ಯವಾಗಿಟ್ಟುಕೊಂಡು ಬರೆಯಲ್ಪಟ್ಟ ಈ ನಾಟಕಗಳು ಓದುವುದಕ್ಕಾಗಿ ಬರೆಯಲ್ಪಟ್ಟ ನಾಟಕಗಳೇ ಹೊರತು ಅಭಿನಯಿಸು ವುದಕ್ಕಾಗಿ ಬರೆಯಲ್ಪಟ್ಟವುಗಳಲ್ಲವೆಂದು ತೋರುತ್ತದೆ. ಹೀಗೆ ಅತ್ಯುನ್ನತ ಸ್ಥಿತಿಯಲ್ಲಿದ್ದ ಸಂಸ್ಕೃತ ನಾಟಕಗಳು ಕಾಲಕ್ರಮದಲ್ಲಿ ಹೀನಸ್ಥಿತಿಯನ್ನು ಹೊಂದಿ ಲುಪ್ತವಾಗುವ ಹೊತ್ತಿಗೆ ಬಯಲಾಟ ಮೊದಲಾದುವುಗಳು ಮಾತ್ರ ಉಳಿದು ಇವೇ ಭಾರತೀಯ ನಾಟಕಗಳೆಂದು ಪರಕೀಯರು ಹೇಳುವಂತಾಯಿತು. ಆದರೆ ಅನೇಕ ಶತಮಾನಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಇತರ ಸಾಹಿತ್ಯಗಳ ಪ್ರಭಾವಕ್ಕೆ ಸಿಕ್ಕಿದರೂ ತನ್ನದೇ ಒಂದು ವೈಶಿಷ್ಟ್ಯ ವನ್ನುಳಿಸಿಕೊಂಡ ಸಂಸ್ಕೃತ ನಾಟಕಗಳನ್ನು ಹೀನಸ್ಥಿತಿಗೆ ಬಂತೆಂದು ಅಲಕ್ಷ್ಯ ಮಾಡದೆ ಓದಿ, ಆಡಿ, ನೋಡಿ, ಆನಂದಪಟ್ಟು ಅದರಿಂದ ಆದಷ್ಟೂ ಉಪಯೋಗವನ್ನು ಹೊಂದಿ, ಅವುಗಳನ್ನು ನಮಗೆ ಕೊಟ್ಟ ಕವಿಗಳ ವಿಷಯದಲ್ಲಿ ಕೃತಜ್ಞತೆಯನ್ನು ತೋರಿಸಬೇಕಾದುದು ನಮ್ಮ ಕರ್ತವ್ಯವೆಂದು ಹೇಳಬೇಕಾಗಿಲ್ಲ.

ಕೆಲವು ಸಂಸ್ಕೃತ ಹಾಸ್ಯಕಾವ್ಯಗಳು

ಬೇರೆ ಬೇರೆ ಸಂಸ್ಕೃತ ಅಲಂಕಾರ ಗ್ರಂಥಕಾರರು ಕಾವ್ಯದ ಲಕ್ಷಣವನ್ನು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದಾರೆ. ಸಾಹಿತ್ಯದರ್ಪಣಕಾರ ವಿಶ್ವನಾಥ ಕವಿರಾಜನು "ವಾಕ್ಯಂ ರಸಾತ್ಮಕಂ ಕಾವ್ಯಂ" (ರಸವತ್ತಾದ ವಾಕ್ಯವೇ ಕಾವ್ಯ) ಎಂಬ ಲಕ್ಷಣವನ್ನು ಕೊಟ್ಟಿದ್ದಾನೆ.[1] ಇದು ಬಹಳ ಉಚಿತವಾಗಿದೆ. ಸಿಹಿ, ಹುಳಿ, ಕಾರ, ಉಪ್ಪು ಮೊದಲಾದ ಷಡ್ರಸಗಳಾವುವೂ ಇಲ್ಲದ ಸಪ್ಪೆ ಊಟ ಹೇಗೆ ರುಚಿಸುವುದಿಲ್ಲವೋ ಹಾಗೆ ನೀರಸವಾದ ಕಾವ್ಯವೂ ಸೊಗಯಿಸುವುದಿಲ್ಲ.

ನಾಟ್ಯಶಾಸ್ತ್ರದಲ್ಲಿ ಭರತಮುನಿಯು ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ ಎಂಬ ಎಂಟು ರಸಗಳನ್ನುಲ್ಲೇಖಿಸಿದ್ದಾನೆ. ಬಹುಶಃ ಅಭಿನಯಕ್ಕೆ ಹೊಂದುವುದಿಲ್ಲವೆಂಬ ಕಾರಣದಿಂದ ಶಾಂತರಸವನ್ನು ಬಿಟ್ಟಂತೆ ತೋರುತ್ತದೆ. ರಸಾಧ್ಯಾಯದ ಕೊನೆಯಲ್ಲಿ, ಕೆಲವು ಪ್ರತಿಗಳಲ್ಲಿ, ಶಾಂತರಸವನ್ನೂ ಸೇರಿಸಿ ನವರಸ ಗಳೆಂದೂ ಹೇಳಿದೆ. ಮುಂದಿನ ಲಾಕ್ಷಣಿಕರೆಲ್ಲ ಶಾಂತರಸವನ್ನೂ ಸೇರಿಸಿ ನವರಸಗಳನ್ನು ಹೇಳಿದ್ದಾರೆ. ಶೃಂಗಾರ ಅಥವಾ ವೀರರಸ ಪ್ರಧಾನವಾದ ಕಾವ್ಯನಾಟಕಗಳೇ ಹೆಚ್ಚಾಗಿವೆ. ಉತ್ತರ ರಾಮಚರಿತ ಕರುಣರಸಪ್ರಧಾನವಾದುದು. ಅದ್ಭುತ, ಶಾಂತರಸಗಳು ಪ್ರಧಾನ ವಾದ ಕಾವ್ಯಗಳು ವಿರಳ. ಭಯಾನಕ, ಬೀಭತ್ಸ, ರೌದ್ರರಸಗಳು ಪ್ರಧಾನವಾದರೆ ಕಾವ್ಯ ಮನೋಹರವಾಗುವುದಿಲ್ಲ. ಇತರ ರಸಗಳು ಕೆಲವರಿಗೆ ಮಾತ್ರ ರುಚಿಸಿದರೆ, ಹಾಸ್ಯರಸ ಸರ್ವರನ್ನೂ ರಂಜಿಸುತ್ತದೆ. ಆದರೆ ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯರಸಪ್ರಧಾನ ವಾದ ಕಾವ್ಯಗಳು ಕಂಡುಬರುವುದಿಲ್ಲ. ಹಾಸ್ಯ ಪೋಷಕರಸವಾಗಿ ಮಾತ್ರ ಕಂಡುಬರುತ್ತದೆ.

ಹಾಸ್ಯರಸ ನಗುವನ್ನು ತರಿಸುತ್ತದೆಯಷ್ಟೆ. ನಗುವಿನಲ್ಲಿ ಮುಗುಳುನಗೆ, ಕಿರುನಗೆ, ಹುಸಿನಗೆ, ಅಟ್ಟಹಾಸ ಮೊದಲಾದ ನಾನಾ ಪ್ರಕಾರಗಳಿರುವಂತೆ, ಹಾಸ್ಯದಲ್ಲಿಯೂ ಲಘುಹಾಸ್ಯ, ಕಟುಹಾಸ್ಯ, ವಿಡಂಬನ ಇತ್ಯಾದಿ ಅನೇಕ ಭೇದಗಳಿವೆ.

ಪೀಯೂಷವರ್ಷ ಜಯದೇವನು ತನ್ನ ಪ್ರಸನ್ನ ರಾಘವ ನಾಟಕದಲ್ಲಿ[2] "ಭಾಸೋ

---

1. ವಾಕ್ಯಂ ರಸಾತ್ಮಕಂ ಕಾವ್ಯಂ ದೋಷಾಸ್ತಸ್ಯಾಪಕರ್ಷಕಾಃ ।
ಉತ್ಕರ್ಷಹೇತವಃ ಪ್ರೋಕ್ತಾ ಗುಣಾಲಂಕಾರರೀತಯಃ ॥
ಸಾಹಿತ್ಯದರ್ಪಣ - ಪ್ರಥಮ ಪರಿಚ್ಛೇದದ ಕೊನೆಯ ಶ್ಲೋಕ

2. ಯಸ್ಯಾಶ್ಚೋರಶ್ಚಿಕುರನಿಕರಃ ಕರ್ಣಪೂರೋ ಮಯೂರೋ
ಭಾಸೋ ಹಾಸಃ ಕವಿಕುಲಗುರುಃ ಕಾಲಿದಾಸೋ ವಿಲಾಸಃ ।
ಹರ್ಷೋ ಹರ್ಷೋ ಹೃದಯವಸತಿಃ ಪಂಚಬಾಣಸ್ತು ಬಾಣಃ
ಕೇಷಾಂ ನೈಷಾ ಕಥಯ ಕವಿತಾಕಾಮಿನೀಕೌತುಕಾಯ ॥

ಹಾಸಃ' (ಕವಿತಾ ಕಾಮಿನಿಯ ನಗುವೇ ಭಾಸ) ಎಂದು ಭಾಸನನ್ನು ಹೊಗಳಿದ್ದಾನೆ. ಭಾಸಕವಿಯದು ಲಘುಹಾಸ್ಯ.

ಭಾಸನ ನಾಟಕಗಳಲ್ಲಿ ಅತಿ ಪ್ರಸಿದ್ಧವಾದುದು ಸ್ವಪ್ನವಾಸವದತ್ತ. ಇದರ ನಾಯಕ ಕೌಶಾಂಬಿಯ ವತ್ಸರಾಜ ಉದಯನ. ಅವನ ಪತ್ನಿ ಅವಂತೀ ರಾಜಪುತ್ರಿ ವಾಸವದತ್ತೆ. ಆರುಣಿಯೆಂಬ ಶತ್ರುರಾಜ ಉದಯನನ ರಾಜ್ಯದ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದ. ಮಗಧ ರಾಜಪುತ್ರಿ ಪದ್ಮಾವತಿ ಉದಯನನ ಪತ್ನಿಯಾಗುವಳೆಂದೂ, ಉದಯನನು ಚಕ್ರವರ್ತಿಯಾಗುವನೆಂದೂ ಸಿದ್ಧರ ಭವಿಷ್ಯವನ್ನು ಕೇಳಿದ್ದ ಮಂತ್ರಿ ಯೌಗಂಧರಾಯಣ ಈ ಮದುವೆಯನ್ನು ಆಗಮಾಡಿಸುವುದು ಹೇಗೆಂದು ಚಿಂತಾಪರನಾಗಿದ್ದ. ಕಾರಣ, ವಾಸವದತ್ತೆಯಲ್ಲಿ ಅತ್ಯನುರಕ್ತನಾಗಿದ್ದ ವತ್ಸರಾಜನು ಪದ್ಮಾವತಿಯನ್ನು ವರಿಸುವುದೂ, ಪದ್ಮಾವತಿಯ ಅಣ್ಣ ದರ್ಶಕರಾಜ ವಾಸವದತ್ತೆ ಜೀವಂತಳಾಗಿರುವಾಗ ಪದ್ಮಾವತಿಯನ್ನು ವತ್ಸರಾಜನಿಗೆ ಮದುವೆಮಾಡಿ ಕೊಡುವುದೂ ಊಹಾತೀತ. ಮತ್ತೊಬ್ಬ ಮಂತ್ರಿಯೂ ಸೇನಾಪತಿಯೂ ಆದ ರುಮಣ್ವಂತನೊಡನೆ ಚರ್ಚಿಸಿ, ಒಂದು ಹಂಚಿಕೆಯನ್ನು ಹೂಡಿ, ಯೌಗಂಧರಾಯಣನು ಅದಕ್ಕೆ ವಾಸವದತ್ತೆಯ ಅಂಗೀಕಾರವನ್ನು ಪಡೆಯುತ್ತಾನೆ. ಇದನ್ನು ಕಾರ್ಯರೂಪಕ್ಕೆ ತರಲು, ಪತ್ನಿಯೊಡನೆ ಲಾವಾಣಕಕ್ಕೆ ಹೊರಟ ಉದಯನ ಬೇಟೆಯಲ್ಲಿ ನಿರತನಾಗಿರುವಾಗ ವಾಸವದತ್ತೆಯ ಬಿಡಾರಕ್ಕೆ ಬೆಂಕಿ ಹಚ್ಚಿ, ಅವಳೂ ಮಂತ್ರಿಯೂ ಸಹ ಸುಟ್ಟು ಹೋದರೆಂದು ಜನರು ನಂಬುವಂತೆ ಸುದ್ದಿ ಹುಟ್ಟಿಸಿ, ಪರಿವ್ರಾಜಕ ವೇಷಧರಿಸಿ ಆವಂತಿಕೆಯ ವೇಷದಲ್ಲಿರುವ ವಾಸವದತ್ತೆಯೊಡನೆ ಮಗಧರಾಜ್ಯಕ್ಕೆ ಹೋಗುತ್ತಾನೆ ಯೌಗಂಧರಾಯಣ. ಅಲ್ಲಿ ಆವಂತಿಕೆಯು ತನ್ನ ತಂಗಿಯೆಂದೂ, ಅವಳ ಗಂಡ ದೇಶಾಂತರ ಹೋಗಿರುವುದರಿಂದ ತಾನು ಅವನನ್ನು ಹುಡುಕಬೇಕಾದ ಕಾರಣ ತನ್ನ ತಂಗಿಯನ್ನು ಕೆಲಕಾಲ ಜೋಪಾನವಾಗಿ ಕಾಪಾಡಬೇಕೆಂದೂ ಹೇಳಿ, ಅದಕ್ಕೆ ಪದ್ಮಾವತಿಯನ್ನು ಒಪ್ಪಿಸಿ, ವಾಸವದತ್ತೆಯನ್ನು ಅಲ್ಲಿ ಬಿಟ್ಟು ಹೋಗುತ್ತಾನೆ. ಪದ್ಮಾವತಿಯ ಅಣ್ಣ ದರ್ಶಕರಾಜ, ವಾಸವದತ್ತೆ ಮೃತಳಾದಳೆಂಬ ಸುದ್ದಿಯನ್ನು ನಿಜವೆಂದು ನಂಬಿ, ಉದಯನನ ಗುಣಗಳಿಂದ ಆಕರ್ಷಿತನಾಗಿ, ತಾನಾಗಿಯೇ ತನ್ನ ತಂಗಿಯನ್ನು ವತ್ಸರಾಜನಿಗೆ ಮದುವೆ ಮಾಡಿಕೊಡಲು ಉದ್ಯುಕ್ತನಾಗುತ್ತಾನೆ. ಉದಯನ ಪದ್ಮಾವತಿಯನ್ನು ಮದುವೆಯಾಗಿ, ರುಮಣ್ವಂತನಿಂದ ಕೂಡಿಸಲ್ಪಟ್ಟ ತನ್ನ ಸೈನ್ಯಕ್ಕೆ ದರ್ಶಕನ ಸೈನ್ಯದ ಬೆಂಬಲ ಪಡೆದು ಯುದ್ಧದಲ್ಲಿ ಆರುಣಿಯನ್ನು ಸೋಲಿಸಿ, ಮತ್ತೆ ತನ್ನ ಕಳೆದುಹೋಗಿದ್ದ ರಾಜ್ಯವನ್ನೂ ವಾಸವದತ್ತೆಯನ್ನೂ ಪಡೆಯುವುದೇ ಈ ನಾಟಕದ ಕಥಾವಸ್ತು.

ನಾಟಕಗಳಲ್ಲಿ ವಿನೋದವನ್ನುಂಟುಮಾಡಲು ಸೇರಿಸಿರುವ ವಿದೂಷಕನ ಪಾತ್ರ ಸಾಧಾರಣವಾಗಿ, ಹೊಟ್ಟೆಬಾಕನಾದ ಕೋಡಂಗಿಯಂತಿರುತ್ತದೆ. ಭಾಸನ ನಾಟಕಗಳಲ್ಲಿನ ವಿದೂಷಕ ಇದಕ್ಕೆ ಅಪವಾದ. ಸ್ವಪ್ನವಾಸವದತ್ತದಲ್ಲಿನ ವಿದೂಷಕ ವಸಂತಕ ವತ್ಸರಾಜನ ಹಿತಚಿಂತಕ. ಉದಯನನು ಸುಶೀಲಳೂ ರೂಪವತಿಯೂ ತನ್ನಲ್ಲಿ ಅನುರಕ್ತಳೂ ಆದ ಪದ್ಮಾವತಿಯನ್ನು ಮದುವೆಯಾದಮೇಲೂ, ಕಳೆದುಕೊಂಡ ವಾಸವದತ್ತೆಯನ್ನೇ ನೆನೆಯುತ್ತ ಹಲುಬುತ್ತಿರುವಾಗ, ವಸಂತಕನು, ಹೇಗಾದರೂ ಮಾಡಿ, ರಾಜನು ವಾಸವದತ್ತೆಯನ್ನು ಮರೆಯುವಂತೆ ಮಾಡಲು ತನಗೆ ಸಾಧ್ಯವಾದಷ್ಟೂ ಪ್ರಯತ್ನಿಸುತ್ತಾನೆ.

ಇವನ ಪ್ರಥಮ ಪ್ರವೇಶ ನಾಲ್ಕನೆಯ ಅಂಕದಲ್ಲಿ. ವಾಸವದತ್ತೆ ಬೆಂಕಿಯಲ್ಲಿ ದಗ್ಧಳಾದಳೆಂದು ನಂಬಿದ ಉದಯನ ದುಃಖಾರ್ತನಾಗಿದ್ದಾಗ ಅವನ ವ್ಯಸನದಲ್ಲಿ ಸಮಭಾಗಿಯಾಗಿದ್ದ ವಿದೂಷಕನಿಗೆ, ಉದಯನನು ಪದ್ಮಾವತಿಯನ್ನು ಮದುವೆಯಾದ ಮೇಲೆ ನೆಮ್ಮದಿ ಸಿಕ್ಕಿದೆ. ಅವನು ಉದ್ಯಾನದಲ್ಲಿ ಕುಳಿತು ''ದುಃಖಸಮುದ್ರದಲ್ಲಿ ಮುಳುಗಿದ್ದ ನಾವು ಮತ್ತೆ ಈಚೆ ಬರುವೆವೆಂದು ಯಾರು ತಾನೆ ನಂಬಿದ್ದರು ? ಈಗ ಅರಮನೆಯಲ್ಲಿ ವಾಸ; ಅಂತಃಪುರದ ಕಲ್ಯಾಣಿಯಲ್ಲಿ ಸ್ನಾನ; ಮೃದುಮಧುರವಾದ ಸಿಹಿತಿಂಡಿಗಳು; ಸ್ವರ್ಗಸುಖ. ಆದರೆ ಒಂದೇ ಒಂದು ತೊಂದರೆಯೆಂದರೆ, ನನಗೆ ತಿಂದದ್ದು ಜೀರ್ಣವಾಗುವುದಿಲ್ಲ; ಸುಪ್ಪತ್ತಿಗೆಯಲ್ಲಿ ಮಲಗಿದರೂ ನಿದ್ದೆ ಬರುವುದಿಲ್ಲ; ರಕ್ತವಾತದೋಷವಿರಬಹುದು. ಈ ವ್ಯಾಧಿಯಿಂದ, ಸುಖವಾಗಿರಲಸಾಧ್ಯವಾಗಿದೆ'' ಎಂದು ತನ್ನಲ್ಲೇ ಆಲೋಚಿಸುತ್ತಿರುತ್ತಾನೆ. ಆಗ ಒಬ್ಬ ಚೇಟಿ ಬಂದು, ''ಅಳಿಯಂದಿರಿಗೆ (ಉದಯನ) ಸ್ನಾನ ಮುಗಿದಿದ್ದರೆ, ಪುಷ್ಪ ಸುಗಂಧ ದ್ರವ್ಯಾದಿಗಳನ್ನು ತರುತ್ತೇನೆ'' ಎಂದು ಹೇಳಿದಾಗ ''ಸ್ನಾನವಾಯಿತು; ನೀನು ಭೋಜನದ ಹೊರತು ಉಳಿದೆಲ್ಲವನ್ನೂ ತರಬಹುದು'' ಎನ್ನುತ್ತಾನೆ. ಅವಳು ಕಾರಣ ಕೇಳಿದಾಗ ಅಧನ್ಯಸ್ಯ ಮಮ ಕೋಕಿಲಾನಾಮಕ್ಷಿಪರಿವರ್ತ ಇವ ಕುಕ್ಷಿ ಪರಿವರ್ತಸ್ಸಂವೃತ್ತಃ ''ನನ್ನ ದುರದೃಷ್ಟ; ಕೋಗಿಲೆಗಳ ಕಣ್ಣು ಸುತ್ತುತ್ತಿರುವಂತೆ, ನನ್ನ ಹೊಟ್ಟೆ ತೊಳಸುತ್ತಿದೆ'' ಎನ್ನುತ್ತಾನೆ. ಅವಳು ''ನಿಮಗೆ ಯಾವಾಗಲೂ ಹೀಗೇ ಇರಲಿ'' ಎಂದು ಹಾರೈಸಿ ಹೋಗುತ್ತಾಳೆ.

ಮುಂದೆ ಪದ್ಮಾವತಿ ಅಸ್ವಸ್ಥಳೆಂದು ಕೇಳಿ, ಉದಯನ ಸಮುದ್ರಗೃಹದಲ್ಲಿ ಅವಳಿಗಾಗಿ ಕಾಯುತ್ತಿರುವಾಗ, ''ನನಗೆ ತೂಕಡಿಕೆ ಬರುತ್ತಿದೆ, ಯಾವುದಾದರೂ ಕತೆ ಹೇಳು'' ಎನ್ನುತ್ತಾನೆ. ವಿದೂಷಕ ''ಉಜ್ಜಯಿನಿಯೆಂಬ ಒಂದು ಪಟ್ಟಣವಿದೆ'' ಎಂದು ಕತೆಯನ್ನು ಆರಂಭಿಸುತ್ತಾನೆ. ಉಜ್ಜಯಿನಿ ವಾಸವದತ್ತೆಯ ತವರೂರು. ಅದರ ಹೆಸರು ಕೇಳಿದೊಡನೆ, ವಾಸವದತ್ತೆಯ ನೆನಪು ಮರುಕಳಿಸಿ, ಉದಯನ ದುಃಖಾರ್ತನಾಗುತ್ತಾನೆ. ತನ್ನ ತಪ್ಪಿನ ಮನವರಿಕೆಯಾಗಿ, ವಸಂತಕ ಬೆಪ್ಪನಂತೆ ನಟಿಸುತ್ತ, ''ಬ್ರಹ್ಮದತ್ತವೆಂಬ ನಗರದಲ್ಲಿ ಕಾಂಪಿಲ್ಯನೆಂಬ ರಾಜನಿದ್ದ''

ಎಂದು ಬೇರೆ ಕತೆ ಆರಂಭಿಸುತ್ತಾನೆ. ರಾಜ "ಅಯ್ಯೋ ! ದಡ್ಡ ! ಬ್ರಹ್ಮದತ್ತನು ರಾಜ, ಕಾಂಪಿಲ್ಯ ಊರು" ಎಂದು ತಿದ್ದುತ್ತಾನೆ. ವಿದೂಷಕ "ಹಾಗೋ ? ನಾನು ಅದನ್ನು ಗಟ್ಟಿಮಾಡುತ್ತೇನೆ ತಾಳು" ಎಂದು ಹೇಳಿ "ರಾಜಾ ಬ್ರಹ್ಮದತ್ತಃ, ನಗರಂ ಕಾಂಪಿಲ್ಯಂ" ಎಂದು ಉರುಹಚ್ಚಲು ಆರಂಭಿಸುತ್ತಾನೆ. ಆಗ ರಾಜನಿಗೆ ನಿದ್ದೆ ಹತ್ತುತ್ತದೆ.

ಹೀಗೆ ವಿದೂಷಕನದು ಲಘುಹಾಸ್ಯ.

ಭಾಸನ ಚಾರುದತ್ತ ನಾಟಕದ ಸ್ಥಾಪನೆ (ಪ್ರಸ್ತಾವನೆ)ಯೇ ಲಘುಹಾಸ್ಯಯುಕ್ತವಾಗಿದೆ. ಬೆಳಗಿನಿಂದ ಹೊರಗೆ ಅಲೆದಾಡಿ ಮನೆಗೆ ಬಂದ ಸೂತ್ರಧಾರ, ನಟಿಯನ್ನು "ತಿನ್ನಲು ಏನಾದರೂ ನಮ್ಮ ಮನೆಯಲ್ಲಿದೆಯೇ ?" ಎಂದು ಕೇಳಿದಾಗ "ತುಪ್ಪ, ಬೆಲ್ಲ ಮೊಸರು, ಅಕ್ಕಿ ಎಲ್ಲವೂ ಇದೆ"ಯೆಂದು ಅವಳು ಹೇಳುತ್ತಾಳೆ. ಇದನ್ನು ಕೇಳಿ ಆಶ್ಚರ್ಯಪಟ್ಟು, ಅವನು "ಇದೆಲ್ಲ ನಮ್ಮ ಮನೆಯಲ್ಲಿದೆಯೇ ?" ಎಂದು ಮತ್ತೆ ಕೇಳಿದಾಗ "ಇಲ್ಲ, ಅಂಗಡಿಯಲ್ಲಿದೆ" ಎಂದು ಉತ್ತರ ಕೊಡುತ್ತಾಳೆ. ಸೂತ್ರಧಾರ ಕೋಪದಿಂದ "ಅನಾರ್ಯೆ ! ನಿನ್ನ ಆಶೆಗಳೆಲ್ಲ ಹೀಗೆಯೇ ಹಾಳಾಗಲಿ. ನನ್ನನ್ನು ಬೆಟ್ಟಕ್ಕೇರಿಸಿ, ಕೆಳಕ್ಕೆ ಉರುಳಿಸಿದೆ" ಎನ್ನುತ್ತಾನೆ. ನಟಿ "ಹೆದರಬೇಡ ! ಶೀಘ್ರವಾಗಿ ಎಲ್ಲ ಸಿದ್ಧವಾಗುತ್ತದೆ. ಇವತ್ತು ವ್ರತೋಪವಾಸ. ಬ್ರಾಹ್ಮಣನಿಗೆ ದಾನ ಮಾಡಿ ಮುಂದಿನದು" ಎನ್ನುತ್ತಾಳೆ. ವ್ರತದ ಹೆಸರು ಕೇಳಿದಾಗ "ಅಭಿರೂಪಪತಿ" ಎಂದು ಹೆಸರು ಹೇಳುತ್ತಾಳೆ.

ಈ ನಾಟಕದಲ್ಲಿ ವಿನೋದವನ್ನುಂಟುಮಾಡುವ ಪಾತ್ರ ರಾಜನ ಶ್ಯಾಲ (ಭಾವ ಮೈದುನ)ನಾದ ಸಂಸ್ಥಾನಕನದು. ಇವನು ಸದಾ ಸಕಾರಕ್ಕೆ ಬದಲು ಶಕಾರವನ್ನೆ ಉಚ್ಚರಿಸುವುದರಿಂದ ಇವನಿಗೆ ಶಕಾರನೆಂಬ ಹೆಸರು ಬಂದಿದೆ. ಇವನ ಅಸಂಬದ್ಧ ಪ್ರಲಾಪ ಪ್ರೇಕ್ಷಕರಲ್ಲಿ ನಗೆ ತರಿಸುತ್ತದೆ.

ಈ ನಾಟಕದ ನಾಯಕ ವರ್ತಕವೃತ್ತಿಯನ್ನವಲಂಬಿಸಿ ಧನಿಕನಾಗಿದ್ದ ಒಬ್ಬ ಬ್ರಾಹ್ಮಣನ ಮಗ ಚಾರುದತ್ತ. ಇವನು ಉದಾರವಾಗಿ ದಾನಮಾಡಿ ಈಗ ದರಿದ್ರನಾಗಿದ್ದರೂ ಇವನಲ್ಲಿ ಅನುರಕ್ತಳಾಗಿ ತನ್ನ ಕುಲವೃತ್ತಿಯನ್ನವಲಂಬಿಸಲು ನಿರಾಕರಿಸುತ್ತಿರುವ ವಸಂತಸೇನೆಯೆಂಬ ಗಣಿಕಾಸ್ತ್ರೀ ಇದರ ನಾಯಿಕೆ. ಒಂದು ಸಂಜೆ ಶಕಾರನು, ವಿಟನ ಜೊತೆಗೂಡಿ ಅವಳನ್ನು ಹಿಂಬಾಲಿಸಿ, ದಾರಿಯಲ್ಲಿ ತಡೆಯುತ್ತಾನೆ. ಅವಳು ತನ್ನ ಪರಿಜನರನ್ನು ಕರೆಯುತ್ತಾಳೆ. ಆದರೆ ಮಬ್ಬುಗತ್ತಲೆಯಲ್ಲಿ ದಾರಿತಪ್ಪಿ ಅವರು ಬೇರೆಯಾಗಿದ್ದಾರೆ. ಆಗ ಶಕಾರನು —

"ಕಿಂ ವಾಸುದೇವಃ ಶವಪತ್ತನೇಶಃ ಕುಂತಿಸುತೋ ವಾ ಜನಮೇಜಯೋ ವಾ ।

ಅಹಂ ತ್ವಾಂ ಗೃಹೀತ್ವಾಕೇಶಹಸ್ತೇ ದುಃಶಾಸನಃ ಸೀತಾಮಿವಾಹರಾಮಿ ॥

(ಶವಗಳ ಪಟ್ಟಣದ ರಾಜ ವಾಸುದೇವನಾಗಲೀ ಕುಂತಿಯ ಮಗ ಜನಮೇಜಯನೇ ಆಗಲೀ ನಿನ್ನನ್ನು ಕಾಪಾಡಲಾರರು. ದುಶ್ಯಾಸನನು ಸೀತೆಯನ್ನು ಅಪಹರಿಸಿದಂತೆ, ನಾನು ನಿನ್ನ ಮುಡಿಯನ್ನು ಹಿಡಿದು ಅಪಹರಿಸುತ್ತೇನೆ). ಎನ್ನುತ್ತಾನೆ. ಆಗ ಅವರು ಚಾರುದತ್ತನ ಮನೆಯ ಸಮೀಪದಲ್ಲಿದ್ದುದರಿಂದ ಶಕಾರನು ''ಭಾವ, ಇವಳು ಆ ಕಾಮದೇವನ ಉತ್ಸವಕಾಲದಿಂದಲೂ ಆ ದರಿದ್ರ ಚಾರುದತ್ತನಲ್ಲಿ ಅನುರಕ್ತಳಾಗಿದ್ದಾಳೆ. ಇದೇ ಅವನ ಮನೆಯ ಪಕ್ಕದ ಬಾಗಿಲು. ಇವಳು ಕತ್ತಲೆಯಲ್ಲಿ ತಪ್ಪಿಸಿಕೊಳ್ಳದಂತೆ ನೋಡಿಕೋ' ಎಂದು ವಿಟನಿಗೆ ಹೇಳುತ್ತಾನೆ. ಉದಾರಚರಿತನಾದ ಚಾರುದತ್ತನಲ್ಲಿ ವಸಂತಸೇನೆ ಅನುರಕ್ತಳಾಗಿರುವಳೆಂದು ಆಗ ತಿಳಿದ ವಿಟ, ಅವಳಿಗೆ ಪರೋಕ್ಷ ಸಹಾಯ ಮಾಡುವ ಉದ್ದೇಶದಿಂದ ''ವಸಂತಸೇನೆ; ಗಾಳಿಯಲ್ಲಿ ತೇಲಿಬರು ತ್ತಿರುವ ಸುಗಂಧವೂ, ನಿನ್ನ ಆಭರಣಗಳ ಸದ್ದೂ ನೀನಿರುವ ಸ್ಥಳವನ್ನು ಸೂಚಿಸುತ್ತಿವೆ. ನೀನು ಸಿಕ್ಕಿಬಿದ್ದೆ'' ಎನ್ನುತ್ತಾನೆ. ಕೂಡಲೇ ವಸಂತಸೇನೆ ತಾನು ಮುಡಿದಿದ್ದ ಹೂಮಾಲೆಯನ್ನು ದೂರ ಎಸೆದು ಆಭರಣಗಳನ್ನು ಕಳಚಿ, ಬಾಗಿಲ ಪಕ್ಕದಲ್ಲಿ ಕವಿದಿದ್ದ ಕತ್ತಲೆಯಲ್ಲಿ ಅವಿತುಕೊಳ್ಳುತ್ತಾಳೆ.

ಮನೆಯ ಮುಂದಿನ ಚೌಕದಲ್ಲಿ, ಭೂತಬಲಿ ಅರ್ಪಿಸಲು, ದೀಪಸಮೇತ ಬಂದ ವಿದೂಷಕನ ಅಪ್ಪಣೆಯಂತೆ ರದನಿಕೆ ಎಂಬ ಚೇಟಿ ಬಾಗಿಲು ತೆಗೆದೊಡನೆ, ವಸಂತಸೇನೆ ಸೆರಗುಬೀಸಿ ದೀಪ ಆರಿಸುತ್ತಾಳೆ. ಬೀದಿಯ ಗಾಳಿಗೆ ದೀಪ ಆರಿಹೋಯಿ ತೆಂದು ಭಾವಿಸಿದ ವಿದೂಷಕ, ಚೇಟಿಗೆ ''ನೀನು ಚೌಕದ ಹತ್ತಿರ ಕಾದಿರು, ನಾನು ಬೇರೆ ದೀಪ ತರುತ್ತೇನೆಂದು'' ಹೇಳಿ ಹಿಂದಕ್ಕೆ ಹೋಗುತ್ತಾನೆ. ಆಗ ತೆರೆದಿದ್ದ ಬಾಗಿಲಿನಿಂದ ವಸಂತಸೇನೆ ಒಳಗೆ ಪ್ರವೇಶಿಸುತ್ತಾಳೆ.

ಹೊರಬಂದ ದಾಸಿಯನ್ನು ನೋಡಿ, ಶಕಾರನಿಗೆ ಮೋಸ ಮಾಡುತ್ತೇನೆಂದು ತನ್ನಲ್ಲೇ ಹೇಳಿಕೊಂಡು, ವಿಟನು ''ಸುವಾಸನೆ ಬರುತ್ತಿದೆ''ಯೆಂದು ಹೇಳಿದಾಗ, ಶಕಾರ ''ಭಾವ, ಹೌದು. ನನ್ನ ಕಿವಿಗಳಿಗೆ ವಾಸನೆ ಕೇಳಿಸುತ್ತಿದೆ. ಕತ್ತಲೆ ತುಂಬಿದ ಮೂಗಿನ ಹೊಳ್ಳೆಗಳಿಗೆ ಚೆನ್ನಾಗಿ ಕಾಣಿಸುತ್ತಿಲ್ಲ'. (ಶೃಣೋಮಿ ಗಂಧಂ ಶ್ರವಣಾಭ್ಯಾಂ, ಅಂಧಕಾರ ಪೂರಿತಾಭ್ಯಾಂ ನಾಸಾಪುಟಾಭ್ಯಾಂ ಸುಷ್ಠು ನ ಪಶ್ಯಾಮಿ) ಎಂದು ಉತ್ತರ ಕೊಡುತ್ತಾನೆ.

ಮುಂದೆ, ವಸಂತಸೇನೆ, ಚಾರುದತ್ತನಿಗೆ ''ಆರ್ಯ, ನೀನು ದಯಮಾಡಿ ಒಪ್ಪಿದರೆ, ನನ್ನ ಒಡವೆಗಳು ಇಲ್ಲೇ ಇರಲಿ. ಪಾಪಿಗಳು ಅವಕ್ಕಾಗಿ ನನ್ನ ಬೆನ್ನಟ್ಟುತ್ತಾರೆ. ನಿನ್ನ ರಕ್ಷಣೆ ಪಡೆದು ಮನೆಗೆ ಹೋಗಲು ಇಚ್ಛಿಸುತ್ತೇನೆ'' ಎಂದು ಹೇಳಿದಾಗ, ಚಾರುದತ್ತನ

ಆಜ್ಞೆಯಂತೆ ವಿದೂಷಕ ಮೈತ್ರೇಯ ಒಡವೆಗಳನ್ನು ತೆಗೆದುಕೊಳ್ಳುತ್ತಾನೆ. ಮತ್ತೆ ಅವುಗಳನ್ನು ರದನಿಕೆಗೆ ಕೊಡುತ್ತಾ, ''ರದನಿಕೇ, ಗೃಹಾಣೇದಂ ಸುವರ್ಣಾ- ಲಂಕಾರಂ, ತ್ವಂ ಷಷ್ಠ್ಯಾಂ ಸಪ್ತಮ್ಯಾಂಚ ಧಾರಯ. ಅಹಮಷ್ಟಮ್ಯಾಮನಧ್ಯಾಯೇ ಧಾರಯಿಷ್ಯಾಮಿ''. (ನೀನು ಈ ಚಿನ್ನದ ಒಡವೆಗಳನ್ನು ಷಷ್ಠೀ ಸಪ್ತಮಿಗಳಂದು ಇಟ್ಟುಕೊ. ನಾನು ಅನಧ್ಯಾಯವಾದ ಅಷ್ಟಮಿಯ ದಿನ ಇಟ್ಟುಕೊಳ್ಳುತ್ತೇನೆ) ಎನ್ನುತ್ತಾನೆ. ಚೇಟಿಯು ನಗುತ್ತ ''ಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿರುವ ಆರ್ಯನಿಗೆ ಆಗ ಒಡವೆಗಳನ್ನಿಟ್ಟುಕೊಳ್ಳಲು ವೇಳೆ ಸಿಕ್ಕುತ್ತದೆ !'' ಎನ್ನುತ್ತ ಒಡವೆಗಳನ್ನು ತೆಗೆದುಕೊಳ್ಳುತ್ತಾಳೆ.

ಮರುರಾತ್ರಿ, ಚಾರುದತ್ತನ ಮನೆಗೆ ಕನ್ನ ಕೊರೆದು ಒಳಗೆ ಬಂದ ಕಳ್ಳ ಮನೆಯ ಸ್ಥಿತಿಯನ್ನು ಕಂಡು ಇಲ್ಲಿ ಏನೂ ಇಲ್ಲವೆಂದು ಹೊರ ಹೊರಡಲಿದ್ದಾನೆ. ಅಷ್ಟರಲ್ಲಿ ''ನನಗೆ ನಿದ್ದೆ ಬರುತ್ತಿಲ್ಲ; ಎಡಗಣ್ಣು ಹಾರುತ್ತಿದೆ; ಕಳ್ಳ ಕನ್ನ ಕೊರೆಯುವಂತೆ ಕಾಣಿಸುತ್ತಿದೆ. ಹಣದ ಸಹವಾಸದಿಂದಲೇ ಹೀಗಾದರೆ, ಹುಟ್ಟು ದರಿದ್ರನಾಗಿರುವುದೇ ಲೇಸು'' ಎಂದು ಚಾರುದತ್ತನಿಗೆ, ಮಲಗುವುದಕ್ಕೆ ಮುಂದೆ ಹೇಳಿದ್ದ ಮೈತ್ರೇಯ ಅರನಿದ್ದೆಯಲ್ಲಿ ಚಾರುದತ್ತ ನನ್ನುದ್ದೇಶಿಸಿ ''ಭೋ, ಈ ಸುವರ್ಣಾಲಂಕಾರವನ್ನು ತೆಗೆದುಕೊ'' ಎನ್ನುತ್ತಾನೆ. ಚಕಿತನಾಗಿ ಆ ಕಡೆ ನೋಡಿದ ಕಳ್ಳ, ವಿದೂಷಕನ ಹಳೆಯ ಹೊದಿಕೆಯ ಒಂದು ತುದಿಯಲ್ಲಿ ಕಟ್ಟಿದ್ದ ಆಭರಣದ ಭಾಗವನ್ನು ದೀಪದ ಬೆಳಕಿನಲ್ಲಿ ಕಂಡು, ತನ್ನಲ್ಲಿದ್ದ ಡಬ್ಬಿಯಿಂದ ಒಂದು ಚಿಟ್ಟೆಯನ್ನು ತೆಗೆದು ಬಿಡುತ್ತಾನೆ. ಅದು ದೀಪವನ್ನು ಆರಿಸುತ್ತದೆ. ಮತ್ತೆ ಮೈತ್ರೇಯ, ''ಅಯ್ಯೋ ! ದೀಪ ಆರಿಹೋಯಿತು. ಚಾರುದತ್ತ, ನನಗೆ ಹೆದರಿಕೆಯಿಂದ ಸರಿಯಾಗಿ ನಿದ್ದೆ ಬರುತ್ತಿಲ್ಲ; ಈ ಒಡವೆಗಳನ್ನು ತೆಗೆದುಕೊ. ಇಲ್ಲದಿದ್ದರೆ ನನ್ನ ಬ್ರಾಹ್ಮಣ್ಯದ ಮೇಲೆ ಆಣೆ'', ಎಂದು ಗಂಟನ್ನು ನೀಡುತ್ತಾನೆ. ಕಳ್ಳ ಒಡನೆ ತೆಗೆದುಕೊಳ್ಳುತ್ತಾನೆ. ಬೆಳಕಾದಾಗ ಕನ್ನವನ್ನು ನೋಡಿ ಗಾಬರಿಗೊಂಡ ಚೇಟಿ, ವಿದೂಷಕನನ್ನು ಎಬ್ಬಿಸುತ್ತಾ, ''ಆರ್ಯ, ಸಂಧಿಂ ಛಿತ್ವಾ ಚೋರಃ ಪ್ರವಿಷ್ಟಃ'' (ಕಳ್ಳ ಕನ್ನ ಹಾಕಿ ಒಳ ಬಂದಿದ್ದ) ಎಂದು ಹೇಳುತ್ತಾಳೆ. ವಿದೂಷಕ ಏಳುತ್ತಾ ''ಚೋರಂ ಛಿತ್ವಾ ಸಂಧಿಃ ಪ್ರವಿಷ್ಟಃ'' (ಕಳ್ಳನನ್ನು ಕೊರೆದು ಕನ್ನ ಒಳಬಂದಿತ್ತೆ?'' ಎನ್ನುತ್ತಾನೆ.

ಹೀಗೆ ಈ ನಾಟಕದಲ್ಲೂ ವಿದೂಷಕನದು ನವಿರುಹಾಸ್ಯ.

ಪಂಚರಾತ್ರ ನಾಟಕದಲ್ಲಿ, ದುರ್ಯೋಧನ, ಯಜ್ಞ ಮುಗಿಸಿದ ಮೇಲೆ, ಆಚಾರ್ಯ ದ್ರೋಣರಿಗೆ ಯಜ್ಞಾಂಗ ದಕ್ಷಿಣೆಯಾಗಿ ಏನನ್ನು ಕೇಳಿದರೂ ಕೊಡುತ್ತೇನೆಂದು ಮಾತುಕೊಡುತ್ತಾನೆ. ಆಗ ದ್ರೋಣರು ಕೌರವರು ಪಾಂಡವರೊಡನೆ ರಾಜ್ಯವನ್ನು ಹಂಚಿಕೊಳ್ಳುವುದೇ ನಾನು ಅಪೇಕ್ಷಿಸುವ ದಕ್ಷಿಣೆ ಎನ್ನುತ್ತಾರೆ. ಶಕುನಿಯ ಸಲಹೆಯಂತೆ,

ದುರ್ಯೋಧನ ''ಅಜ್ಞಾತ ವಾಸದಲ್ಲಿರುವ ಪಾಂಡವರನ್ನು ಐದುರಾತ್ರಿ ಕಳೆಯುವುದರೊಳಗೆ ಪತ್ತೆ ಹಚ್ಚಿದರೆ ಅರ್ಧ ರಾಜ್ಯವನ್ನು ಖಂಡಿತ ಕೊಡುತ್ತೇನೆ'' ಎಂದು ಹೇಳು ತ್ತಾನೆ. ಇದನ್ನು ಕೇಳಿ ದ್ರೋಣರು ಚಿಂತಾಕ್ರಾಂತರಾಗಿರುವಾಗ, ವಿರಾಟನಗರದಲ್ಲಿದ್ದ ದುರ್ಯೋಧನನ ಬೇಹುಗಾರ ಬಂದು, ಕೀಚಕರು ನೂರುಮಂದಿಯೂ ಒಂದು ರಾತ್ರಿ, ಯಾರಿಗೂ ತಿಳಿಯದ ರೀತಿಯಲ್ಲಿ ಕೊಲೆಯಾದರೆಂದೂ, ಮೈಮೇಲೆ ಗಾಯಗಳೇನೂ ಇರಲಿಲ್ಲವೆಂದೂ ತಿಳಿಸುತ್ತಾನೆ. ಇದು ಭೀಮಸೇನನ ಕೆಲಸವೇ ಎಂದು ನಿಶ್ಚಯಿಸಿದ ಭೀಷ್ಮನ ಗುಟ್ಟಾದ ಸಲಹೆಯಂತೆ, ದ್ರೋಣರು ದುರ್ಯೋಧನನ ಕರಾರಿಗೆ ಒಪ್ಪುತ್ತಾರೆ.

ಭೀಷ್ಮನು ''ನಿನ್ನ ಯಜ್ಞಕ್ಕೆ ಬರದೆ, ವಿರಾಟ ನಿನಗೆ ಅವಮಾನ ಮಾಡಿದ್ದಾನೆ. ಅವನ ಗೋಗ್ರಹಣವೇ ಇದಕ್ಕೆ ತಕ್ಕ ಶಿಕ್ಷೆ'' ಎಂದು ದುರ್ಯೋಧನನಿಗೆ ಸಲಹೆ ಕೊಡುತ್ತಾನೆ. ಎಲ್ಲರೂ ವಿರಾಟನಗರಿಗೆ ಹೊರಟಾಗ, ಕೃಷ್ಣನ ಪ್ರತಿನಿಧಿಯಾಗಿ ಯಜ್ಞಕ್ಕೆ ಬಂದಿದ್ದ ಅಭಿಮನ್ಯುವೂ ಅವರೊಡನೆ ಸೇರಿ ಹೋಗುತ್ತಾನೆ. ಗೋಗ್ರಹಣಾನಂತರ, ಉತ್ತರನ ಸಾರಥಿಯಾಗಿ ಯುದ್ಧಕ್ಕೆ ಬಂದ ಬೃಹನ್ನಳೆಯ ರೂಪದಲ್ಲಿದ್ದ ಅರ್ಜುನನ ಗಾಂಡೀವದ ಝೇಂಕಾರದಿಂದಲೇ ಗುರುತಿಸಿದ ದ್ರೋಣರೂ, ಧ್ವಜಕ್ಕೆ ತಾಗಿದ ಬಾಣವನ್ನು ನೋಡಿ ಭೀಷ್ಮನೂ ಯುದ್ಧ ಮಾಡುವುದನ್ನು ನಿಲ್ಲಿಸುತ್ತಾರೆ. ಕರ್ಣ ದುರ್ಯೋಧನಾದಿಗಳು ಸೋತು ಓಡುತ್ತಾರೆ. ಅಭಿಮನ್ಯುವನ್ನು ಭೀಮನು ಬರಿಗೈಯಲ್ಲಿ ಹಿಡಿದು ತರುತ್ತಾನೆ. ಇದನ್ನು ತಿಳಿದು ವಿರಾಟರಾಜನು, ಅಭಿಮನ್ಯುವನ್ನು ಮರ್ಯಾದೆಯಿಂದ ಕರೆತರಲು, ಬೃಹನ್ನಳೆಯನ್ನು, ಬ್ರಾಹ್ಮಣ ವೇಷದಲ್ಲಿದ್ದ ಧರ್ಮಜನ ಸಲಹೆಯಂತೆ, ಕಳುಹಿಸುತ್ತಾನೆ. ಅವನನ್ನು ನೋಡಿದ ಅಭಿಮನ್ಯು ''ಹೆಣ್ಣಾನೆಯ ಭೂಷಣಗಳನ್ನು ಧರಿಸಿದ ಗಂಡಾನೆಯಂತೆಯೂ ಪಾರ್ವತೀ ವೇಷವನ್ನು ಧರಿಸಿದ ಶಿವನಂತೆಯೂ ಕಾಣುವ ಇವನಾರು ?'' (ವಿಭಾತ್ಯುಮಾವೇಷಮಿವಾಶ್ರಿತೋ ಹರಃ) ಎಂದು ಆಶ್ಚರ್ಯಪಡುತ್ತಾನೆ.

ಅರ್ಜುನನಿಗೆ ಮಗನ ಮಾತನ್ನು ಕೇಳಲು ಆಸೆಯಾಗಿ, ಅವನನ್ನು ಮಾತಾಡಿಸುವಂತೆ, ಅಡಿಗೆಯವನ ವೇಷದಲ್ಲಿದ್ದ ಭೀಮನಿಗೆ ಹೇಳುತ್ತಾನೆ. ಭೀಮನು 'ಅಭಿಮನ್ಯೋ' ಎನ್ನುತ್ತಿದ್ದಂತೆ ಕುಮಾರನು ಕುಪಿತನಾಗಿ, 'ಅಭಿಮನ್ಯುವಂತೆ, ಅಭಿಮನ್ಯು' ಎಂದು ರೇಗುತ್ತಾನೆ. ಭೀಮನು ''ಇವನಿಗೆ ಕೋಪ ಬಂತು. ನೀನೇ ಮಾತಾಡಿಸು'' ಎಂದು ಅರ್ಜುನನಿಗೆ ಹೇಳಿದಾಗ, ಅವನೂ ''ಅಭಿಮನ್ಯೋ'' ಎಂದು ಆರಂಭಿಸುತ್ತಾನೆ. ಆಗ ಅಭಿಮನ್ಯುವು ''ಪರಿಜನರೂ ಕ್ಷತ್ರಿಯರನ್ನು ಹೆಸರಿನಿಂದ ಕರೆಯುವುದೇ ಇಲ್ಲಿನ ಸದಾಚಾರವೇನೋ ! ಅಥವಾ ಇದು ಸೋಲಿನ ಫಲ'' ಎನ್ನುತ್ತಾನೆ. ಸಂಭಾಷಣೆ ಹೀಗೆ ಮುಂದುವರೆಯುತ್ತದೆ :—

ಅರ್ಜುನ — ಅಭಿಮನ್ಯೋ, ಸುಖಮಾಸ್ತೇ ತೇ ಜನನೀ ? (ನಿನ್ನ ತಾಯಿ ಕ್ಷೇಮವೇ ?)

ಅಭಿಮನ್ಯು — ಸ್ತ್ರೀ ಜನರ ಕುಶಲವನ್ನು ಹಿರಿಯರಂತೆ ಕೇಳಲು ನೀನೇನು ಧರ್ಮಜನೋ, ವೃಕೋದರನೋ, ಧನಂಜಯನೋ ? ಈ ಪ್ರಶ್ನೆ ಕೇಳಲು ನೀನಾರು ?

ಅರ್ಜುನ — ಅಪಿ ಕುಶಲೀ ದೇವಕೀಪುತ್ರಃ ಕೇಶವಃ ? (ದೇವಕೀಪುತ್ರ ಕೃಷ್ಣ ಕುಶಲಿಯೇ ?)

ಏನು ! ಆ ಪೂಜ್ಯನನ್ನೂ ಹೆಸರು ಹಿಡಿದು ಕರೆಯುತ್ತೀಯಾ ? ಎಂದು ಅಭಿಮನ್ಯು ಮತ್ತೂ ಕ್ರುದ್ಧನಾದ. ಆಗ ಭೀಮಾರ್ಜುನರು ನಗುಮುಖದಿಂದ ಪರಸ್ಪರರ ಕಡೆ ನೋಡುತ್ತಾರೆ. ಇದನ್ನು ಕಂಡು ಅಭಿಮನ್ಯು ''ನನ್ನನ್ನು ಅಲಕ್ಷ್ಯದಿಂದ ಅಪಹಾಸ್ಯ ಮಾಡುತ್ತೀರಾ ?'' ಎಂದು ಕೇಳುತ್ತಾನೆ.

ಅರ್ಜುನ — ಮತ್ತೇನಿಲ್ಲ. ಪಾರ್ಥ ತಂದೆ; ಜನಾರ್ದನ ಸೋದರ ಮಾವ; ಅಸ್ತ್ರಗಳೆಲ್ಲ ಬಲ್ಲ ತರುಣ ! ಆದುದರಿಂದ ಯುದ್ಧದಲ್ಲಿ ಸೋಲುವುದು ಯುಕ್ತವೇ ಸರಿ !

ಅಭಿಮನ್ಯು — ನಮ್ಮ ಕುಲದವರಿಗೆ ಆತ್ಮ ಶ್ಲಾಘನೆ ಉಚಿತವಲ್ಲ. ಸತ್ತವರ ದೇಹಗಳಲ್ಲಿ ಚುಚ್ಚಿರುವ ಬಾಣಗಳನ್ನು ನೋಡು. ಅಲ್ಲಿ ಬೇರೆ ಯಾರ ಹೆಸರೂ ಇಲ್ಲ.

ಅರ್ಜುನ — ಇದು ಮಾತಿನ ಬಡಾಯಿ. ಹಾಗಿದ್ದರೆ, ಒಬ್ಬ ಕಾಲಾಳಿಗೆ ಏಕೆ ಸಿಕ್ಕಿಬಿದ್ದೆ ?

ಅಭಿಮನ್ಯು — ಅವನು ನಿರಾಯುಧನಾಗಿ ನನ್ನನ್ನು ಹಿಡಿದ. ಶಸ್ತ್ರ ಹಿಡಿದಿಲ್ಲದವನನ್ನು ಅರ್ಜುನನ ಮಗ ಕೊಂದಾನೆ ?

ಅನಂತರ ರಾಜಾಸ್ಥಾನವನ್ನು ಪ್ರವೇಶಿಸಿದ ಅಭಿಮನ್ಯು, ಬ್ರಾಹ್ಮಣ ರೂಪದಲ್ಲಿದ್ದ ಧರ್ಮಜನಿಗೆ ಮಾತ್ರ ನಮಸ್ಕರಿಸಿ ನಿಲ್ಲುತ್ತಾನೆ. ವಿರಾಟನು ''ಮಗೂ, ಬಾ. ನನಗೆ ನಮಸ್ಕರಿಸುವುದಿಲ್ಲವೆ ? ಓ ! ಕ್ಷತ್ರಿಯ ಬಾಲಕ ಗರ್ವಿತನಾಗಿದ್ದಾನೆ. ಇವನ ಗರ್ವವನ್ನು ಇಳಿಸುತ್ತೇನೆ'' ಎನ್ನುತ್ತಾ ''ಇವರನ್ನು ಹಿಡಿದುತಂದವರು ಯಾರು'' ಎಂದು ಕೇಳುತ್ತಾನೆ.

ಭೀಮಸೇನ — ಮಹಾರಾಜ, ನಾನು.

ಅಭಿಮನ್ಯು — ನಿರಾಯುಧನಾಗಿದ್ದೆಯೆಂದು ಹೇಳು.

ಭೀಮಸೇನ — ಶಾಂತಂ ಪಾಪಂ. ನನ್ನ ತೋಳುಗಳೇ ನನ್ನ ಆಯುಧ. ಇವು

ಗಳಿಂದಲೇ ಯುದ್ಧ ಮಾಡುತ್ತೇನೆ. ದುರ್ಬಲರಿಗೆ ಧನುರ್ಬಾಣಗಳು ಬೇಕು.

ಅಭಿಮನ್ಯು — ನೀನೇನು ನಮ್ಮ ಮಧ್ಯಮತಾತ (ದೊಡ್ಡಪ್ಪ)ನೇ ? ಈ ಮಾತನ್ನು ಅವನು ಮಾತ್ರ ಹೇಳಬಲ್ಲ.

ಧರ್ಮಜ — ಮಗು, ಆ ಮಧ್ಯಮ ಯಾರು ?

ಅಭಿಮನ್ಯು — ನಾವು ಬ್ರಾಹ್ಮಣರಿಗೆ ಬದಲು ಮಾತು ಹೇಳುವವರಲ್ಲ. ಬೇರೆ ಯಾರಾದರೂ ಕೇಳಲಿ.

ವಿರಾಟ — ಆಗಲಿ, ಮಗೂ ! ನಾನು ಕೇಳುತ್ತೇನೆ, ಹೇಳು.

ಅಭಿಮನ್ಯು — ಜರಾಸಂಧನನ್ನು ಕತ್ತು ಹಿಡಿದು ಮೇಲೆತ್ತಿ ಸೀಳಿಹಾಕಿದನಲ್ಲ, ಅವನು.

ವಿರಾಟ — ಮಗು, ನಿನ್ನ ಬಿರುಸು ಮಾತುಗಳಿಂದ ನನಗೆ ಕೋಪವಿಲ್ಲ, ಸಂತೋಷವೇ. ನಿನ್ನನ್ನು ಹೇಗೆ ನಡೆಸಿಕೊಳ್ಳಲಿ ?

ಅಭಿಮನ್ಯು — ಸೋತವನಿಗೆ ಉಚಿತವಾದಂತೆ ನನ್ನ ಕಾಲುಗಳಿಗೆ ಸಂಕೋಲೆ ಹಾಕಿಸುವ ಅನುಗ್ರಹವಾಗಲಿ ! ಇವನು ಬರಿಗೈಯಲ್ಲಿ ನನ್ನನ್ನು ಹಿಡಿದು ತಂದಂತೆ, ಭೀಮನೂ ಬರಿಗೈಯಿಂದಲೇ ನನ್ನನ್ನು ಬಿಡಿಸಿಕೊಂಡು ಹೋಗುತ್ತಾನೆ.

ಆಗ ಉತ್ತರಕುಮಾರ ಆಸ್ಥಾನವನ್ನು ಪ್ರವೇಶಿಸಿ ನಿಜಸ್ಥಿತಿಯನ್ನು ತಿಳಿಸಿದಾಗ, ಧರ್ಮಜನು ಈಗ ''ನಮ್ಮ ಅಜ್ಞಾತವಾಸ ಕಳೆದಿದೆ'' ಎಂದು ಹೇಳುತ್ತಾನೆ. ಆಗ ಅಭಿಮನ್ಯು ಭೀಮಾರ್ಜುನರಿಗೆ ನಮಸ್ಕರಿಸಿ, ತನ್ನ ಅವಿನಯಕ್ಕಾಗಿ ಕ್ಷಮೆ ಬೇಡುತ್ತಾನೆ.

ಹೀಗೆ, ಹಾಸ್ಯಕ್ಕಾಗಿ ಬೇರೆ ಪಾತ್ರವನ್ನು ತರದೆ, ಸನ್ನಿವೇಶ ಬಲದಿಂದಲೇ ಹಾಸ್ಯ ವೀರ ರಸಗಳೆರಡೂ ಏಕಕಾಲದಲ್ಲಿ ಉದ್ಭವಿಸುವಂತೆ ಮಾಡಿದ ಭಾಸನ ಕೌಶಲ ಅನ್ಯಾದೃಶವಾದುದು.

ಭಾಸನ ಕಾಲದ ಅನಂತರ ರಚಿತವಾದ ನಾಟಕಗಳಲ್ಲಿ ವಿದೂಷಕ ಪಾತ್ರದ ನೈತಿಕ ಮಟ್ಟ ಕ್ರಮವಾಗಿ ಇಳಿಯುತ್ತ ಹೋಗಿ, ಶ್ರೀ ಹರ್ಷನ ರತ್ನಾವಳಿಯಲ್ಲಿನ ವಿದೂಷಕ ಕಾಮುಕನಾದ ವತ್ಸರಾಜನಿಗೂ ಸಾಗರಿಕೆಗೂ ಮಧ್ಯಸ್ಥಗಾರನಂತೆ ರಾಜನ ಮೋಸದ ನಡವಳಿಕೆಯಲ್ಲಿ ಭಾಗಿಯಾಗುತ್ತಾನೆ. ಭಾಸನಿಂದ ಚಿತ್ರಿತನಾದ ಉದಯನ ಧೀರೋದಾತ್ತ ನಾಯಕ. ಇವನು ವಾಸವದತ್ತೆ ಮೃತಳಾದಳೆಂದು ನಂಬಿ ಅನುರೂಪ ಳಾದ ಪದ್ಮಾವತಿಯ ಕೈ ಹಿಡಿದಿದ್ದರೂ ವಾಸವದತ್ತೆಯನ್ನೇ ನೆನೆಯುತ್ತಾ ದುಃಖಿಸುತ್ತಿದ್ದರೆ, ರತ್ನಾವಳಿಯ ಉದಯನ ಪ್ರಿಯಪತ್ನಿ ವಾಸವದತ್ತೆಗೆ ಮೋಸ ಮಾಡಿ, ಅವಳಿಗೆ ಎಲ್ಲಿ

ಗೊತ್ತಾದೀತೋ ಎಂದು ಹೆದರುತ್ತಾ, ಸಾಗರಿಕೆಯನ್ನು ಸೇರುತ್ತಾನೆ. ಈಚಿನ ಆಲಂಕಾರಿಕರು ಇವನನ್ನು ಧೀರಲಲಿತ ನಾಯಕನೆಂದು ಕರೆದಿದ್ದಾರೆ. ಇವನದು ಏನು ಧೈರ್ಯವೋ, ಏನು ಲಾಲಿತ್ಯವೋ ಕಾಣೆ.

ಹಾಸ್ಯರಸ ಪ್ರಧಾನವಾದ ಪ್ರಹಸನವೆಂಬ ನಾಟಕ ಭೇದವಿದೆ. ಆದರೆ, ನನಗೆ ತಿಳಿದ ಮಟ್ಟಿಗೆ, ಇವುಗಳಲ್ಲಿನ ಹಾಸ್ಯ ಅಶ್ಲೀಲ ಶೃಂಗಾರದೊಡನೆ ಕೂಡಿದ ಕೀಳು ದರ್ಜೆಯ ಹಾಸ್ಯ. ಕೆಲಮಟ್ಟಿಗೆ ಇದಕ್ಕೆ ಅಪವಾದ ರೂಪವಾದುದು ಭಗವದಜ್ಜುಕ.

ಭಗವದಜ್ಜುಕದ ಕರ್ತೃ ತನ್ನ ಹೆಸರನ್ನು ಹೇಳಿಕೊಂಡಿಲ್ಲ. ಆದರೆ ಇದರ ವ್ಯಾಖ್ಯಾನಕಾರನೊಬ್ಬ ಇದರ ಕರ್ತೃ ಬೋಧಾಯನನೆಂದು ಹೇಳಿರುವಂತೆ ತಿಳಿದು ಬರುತ್ತದೆ. ಇವನು ಕಲ್ಪಸೂತ್ರಕಾರ ಬೋಧಾಯನನಲ್ಲ. ಪ್ರಹಸನವು "ತ್ವಾಂ ಪಾತು...... ರುದ್ರಸ್ಯ ಸದರ್ಚಿತಃ ಪಾದಃ" ಎಂಬ ಪದ್ಯದಿಂದ ಆರಂಭವಾಗುವುದ ರಿಂದ, ಇವನು, ವೈಷ್ಣವರಾದ ರಾಮಾನುಜಾಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯಕ್ಕೆ ಮೂಲಭೂತವಾದ ವೃತ್ತಿಯನ್ನು ರಚಿಸಿದನೆಂದು ಹೇಳಿರುವ ಬೋಧಾಯನನೂ ಆಗಿರಲಾರ.[3] ಕ್ರಿಸ್ತಶಕ ಏಳನೆಯ ಶತಮಾನದ ಆದಿಯಲ್ಲಿದ್ದ, ಕಂಚಿಯ ಪಲ್ಲವರಾಜ ಮಹೇಂದ್ರ ವಿಕ್ರಮವರ್ಮನ ಮಾಮಂದೂರು ಶಿಲಾಶಾಸನದಲ್ಲಿ[4] ಭಗವದಜ್ಜುಕದ ಹೆಸರೂ ಮಹೇಂದ್ರವಿಕ್ರಮ ವರ್ಮನಿಂದಲೇ ರಚಿತವಾದ ಮತ್ತವಿಲಾಸ ಪ್ರಹಸನದ ಹೆಸರೂ ಇವೆ. ಎರಡರಲ್ಲೂ ರಚನಾ ಸಾಮ್ಯವಿರುವುದರಿಂದಲೂ, ಬೌದ್ಧ ಮತದ ಪರಿಹಾಸ ಕಂಡುಬರುವುದರಿಂದಲೂ ಇವುಗಳು ಏಕಕರ್ತೃಕಗಳೆಂದೂಹಿಸಲು ಅವಕಾಶವಿದೆಯೆಂದು ಪ್ರಭಾಕರ ಶಾಸ್ತ್ರಿಗಳು ಹೇಳಿದ್ದಾರೆ. ಮಹೇಂದ್ರ ವಿಕ್ರಮವರ್ಮ ಎರಡನ್ನೂ ಬರೆದಿದ್ದಾನೆಂದು ಪ್ರೊ. ನೀಲಕಂಠ ಶಾಸ್ತ್ರಿಗಳು ಹೇಳಿದ್ದಾರೆ. ಆಧಾರ ವೇನೆಂದು ಹೇಳಿಲ್ಲ.[5]

ಭಗವದಜ್ಜುಕದಲ್ಲಿ ಪ್ರಧಾನ ಪಾತ್ರಗಳು ಒಬ್ಬ ಪರಿವ್ರಾಜಕ (ಸಂನ್ಯಾಸಿ), ಅವನ ಶಿಷ್ಯ ಶಾಂಡಿಲ್ಯ ಮತ್ತು ಗಣಿಕಾ ಸ್ತ್ರೀ ವಸಂತಸೇನೆ.

ಪರಿವ್ರಾಜಕನು ತತ್ತ್ವೋಪದೇಶ ಮಾಡುವ ಉದ್ದೇಶದಿಂದ ಶಾಂಡಿಲ್ಯನನ್ನು ಕರೆದಾಗ, ಅವನು "ನಾನು ಕೊರಳಲ್ಲಿ ಯಜ್ಞೋಪವೀತವಿರುವಷ್ಟು ಮಟ್ಟಿನ ಬ್ರಾಹ್ಮಣ; ನಿರಕ್ಷರ ಕುಕ್ಷಿ,

3. ಭಗವದಜ್ಜುಕಂ, ಬೋಧಾಯನ ಪ್ರಣೀತಂ - Vavilla Ramaswamy Sastri & Sons, Madras, 1925. ಸಂಪಾದಕ ವೇಟೂರಿ ಪ್ರಭಾಕರ ಶಾಸ್ತ್ರಿಗಳ ಉಪೋದ್ಘಾತ.

4. ಸಂಸ್ಕೃತ ಕವಿಚರಿತ್ರೆ - ಎಂ. ಎನ್. ಶ್ರೀನಿವಾಸ ಅಯ್ಯಂಗಾರ್, ಸಂಪುಟ 1, 1976ರ ಆವೃತ್ತಿ, ಪುಟ 406, ಮತ್ತು ಭಗವದಜ್ಜುಕದ ಉಪೋದ್ಘಾತ.

5. A History of South India — Prof. K. A. Nilakanta Sastri, Oxford University Press, 1955. Page 332.

ಹೊಟ್ಟೆಗೆ ಗತಿಯಿಲ್ಲದೆ ಬೌದ್ಧ ಭಿಕ್ಷುವಿನ ಶಿಷ್ಯನಾದೆ. ಅಲ್ಲಿಯೂ ಆ ದರಿದ್ರ ಜನರಿಂದ ಸಿಕ್ಕುತ್ತಿದ್ದ ಒಪ್ಪೊತ್ತಿನ ಊಟಕ್ಕೆ ಬೇಸತ್ತು ಈ ದುಷ್ಟಾಚಾರ್ಯನ ಸಾಮಾನು ಹೊರುವ ಕತ್ತೆಯಾಗಿದ್ದೇನೆ'' (ಭಾಂಡಭಾರ ಗರ್ದಭಸ್ಸಂವೃತ್ತಃ) ಎಂದು ಹೇಳಿಕೊಳ್ಳುತ್ತಾ ರಂಗಸ್ಥಳವನ್ನು ಪ್ರವೇಶಿಸುತ್ತಾನೆ. ಗುರು ಅಂತರಾತ್ಮ ಕರ್ಮಾತ್ಮ ಗಳೇನೆಂದು ವಿವರಿಸಿ, ''ತಿಳಿಯಿತೇ ?'' ಎಂದು ಕೇಳಿದಾಗ, ಶಾಂಡಿಲ್ಯ, ''ಆತ್ಮ ಅಜರ (ಮುಪ್ಪಿಲ್ಲದ್ದು), ಅಮರ (ಮರಣವಿಲ್ಲದ್ದು), ಅಚ್ಛೇದ್ಯ (ಕತ್ತರಿಸಲು ಅಸಾಧ್ಯ ವಾದದ್ದು), ಅಭೇದ್ಯ (ಒಡೆಯಲು ಅಸಾಧ್ಯವಾದದ್ದು). ನಾಶ ಹೊಂದುವುದು ಕರ್ಮಾತ್ಮ'' ಎಂದು ಉತ್ತರ ಹೇಳುತ್ತಾನೆ. ಗುರು ''ನೀನು ಸರಿಯಾಗಿ ಗ್ರಹಿಸಿರುವೆ'' ಎನ್ನುತ್ತಾನೆ. ಆಗ ಶಿಷ್ಯ ''ನ ಶರೀರಂ ವಿನಾಸ್ತಿ ಕಿಮಪಿ'' (ಶರೀರವನ್ನು ಬಿಟ್ಟು ಬೇರೇನೂ ಇಲ್ಲ) ಎಂದು ಹೇಳುತ್ತಾನೆ. ಅವರು ಒಂದು ಉದ್ಯಾನವನ್ನು ಪ್ರವೇಶಿಸಿ ಅಲ್ಲಿ ಕುಳಿತುಕೊಳ್ಳುತ್ತಾರೆ. ಗುರು ಯೋಗಮಹಿಮೆಯನ್ನು ವಿವರಿಸುತ್ತಿರುವಾಗ, ಶಿಷ್ಯ ''ನೀನು ಯೋಗದ ವಿಷಯವನ್ನು ಚಿಂತಿಸು, ನಾನು ಆಹಾರದ ವಿಷಯವನ್ನು ಚಿಂತಿಸುತ್ತೇನೆ. ಆಹಾರ ಪ್ರಮಾದವೇ ಸರ್ವಪ್ರಮಾದವೆಂದು ಹೇಳುವ ಭಗವಾನ್ ಬುದ್ಧನಿಗೆ ನಮಸ್ಕಾರ'' ಎನ್ನುತ್ತಾನೆ.

ಆಗ ವಸಂತಸೇನೆಯೂ ಚೇಟಿಯೂ ಅದೇ ಉದ್ಯಾನಕ್ಕೆ ಬಂದು ಹಾಡಲು ಆರಂಭಿಸುತ್ತಾರೆ. ಶಿಷ್ಯನ ಗಮನವೆಲ್ಲ ಆ ಕಡೆಗೇ. ವಸಂತಸೇನೆ ಅಶೋಕವೃಕ್ಷದ ಚಿಗುರು ಬಿಡಿಸಲು ಹೋದಾಗ, ಯಮದೂತ ಸರ್ಪರೂಪ ಹೊಂದಿ ಅವಳನ್ನು ಕಚ್ಚಿ ಪ್ರಾಣಾಪಹಾರ ಮಾಡುತ್ತಾನೆ. ಅವಳು ಕೆಳಗೆ ಬಿದ್ದುದನ್ನು ನೋಡಿ, ಶಾಂಡಿಲ್ಯ ಅವಳ ಕಡೆ ಹೊರಟಾಗ, ಗುರು ''ಅವಳ ಕರ್ಮಕ್ಷೀಣವಾಯಿತು; ಸತ್ತಳು. ನೀನು ಹೋಗ ಬೇಡ'' ಎಂದು ತಡೆದರೂ ಕೇಳದೆ ಅಲ್ಲಿ ಹೋಗಿ ಗಣಿಕೆಯ ಪಾದಗಳನ್ನು ಮುಟ್ಟುತ್ತಾ ದುಃಖಿಸುತ್ತಾನೆ. ಇದನ್ನು ನೋಡಿ, ಚೇಟಿ ''ಈ ಬ್ರಾಹ್ಮಣ ಕರುಣಾಳು''ವೆಂದು ಚಿಂತಿಸಿ, ''ಆರ್ಯ, ಸ್ವಲ್ಪ ಕಾಲ ಇವಳನ್ನು ನೋಡಿಕೊ. ನಾನು ಇವಳ ತಾಯಿಯನ್ನು ಕರೆತರುತ್ತೇನೆ'' ಎಂದು ಹೇಳಿ ಹೋಗುತ್ತಾಳೆ. ಶಾಂಡಿಲ್ಯ ಅಳುತ್ತಾ ಕೂಡುತ್ತಾನೆ.

ಆಗ, ಪರಿವ್ರಾಜಕನು ಯೋಗಶಾಸ್ತ್ರದ ಮಹಾತ್ಮೆಯನ್ನು ತೋರಿಸಿ ಇವನಿಗೆ ಬುದ್ಧಿ ಬರುವಂತೆ ಮಾಡಬೇಕೆಂಬ ಉದ್ದೇಶದಿಂದ, ಯೋಗಬಲದಿಂದ ಗಣಿಕೆಯ ದೇಹವನ್ನು ಪ್ರವೇಶಿಸುತ್ತಾನೆ. ಗಣಿಕೆ ಎದ್ದು ''ಶಾಂಡಿಲ್ಯ'' ಎಂದು ಕೂಗಿದಾಗ, ''ಅಬ್ಬ ಇವಳಿಗೆ ಜೀವ ಬಂತು'' ಎಂದು ಮುಟ್ಟಲು ಹೋಗುತ್ತಾನೆ ಶಿಷ್ಯ. ಆಗ ಗಣಿಕೆ, ''ಕೈ ತೊಳೆಯದೆ ನನ್ನನ್ನು ಮುಟ್ಟಬೇಡ'' ಎಂದು ಹೇಳಿ, ''ವತ್ಸ, ಬಾ. ಅಧ್ಯಯನ ಮಾಡು'' ಎನ್ನುತ್ತಾಳೆ. ''ಇಲ್ಲೂ ಅಧ್ಯಯನವೇ ? ಗುರುವಿನ ಬಳಿಗೆ ಹೋಗುತ್ತೇನೆ'' ಎನ್ನುತ್ತಾ ಅಲ್ಲಿ ಹೋಗಿ ಗುರುವಿನ ಮೃತದೇಹವನ್ನು ನೋಡಿ, ''ಅಯ್ಯೋ ಅವನೂ ಮೃತನಾದನೆ ?'' ಎಂದುಕೊಳ್ಳುತ್ತಾನೆ.

ವಸಂತಸೇನೆಯ ತಾಯಿ ಬಂದು, ಮಗಳು ಜೀವಂತಳಾಗಿರುವುದನ್ನು ನೋಡಿ, "ಮಗು, ವಸಂತಸೇನೆ, ಇದೇನು ?" ಎನ್ನುತ್ತಾ ಅವಳನ್ನು ಮುಟ್ಟಲು ಹೋದಾಗ, ಗಣಿಕೆಯು, ಸಂಸ್ಕೃತದಲ್ಲಿ ಮಾತಾಡುತ್ತಾ, "ವೃಷಲ ವೃದ್ಧೇ, ಮಾ ಸ್ಪ್ರಾಕ್ಷೀಃ" (ಕೀಳು ಮುದುಕಿ, ಮುಟ್ಟಬೇಡ) ಎನ್ನುತ್ತಾಳೆ. ಅವಳ ಪ್ರಿಯಕರನಾದ ರಾಮಿಲಕ ಬಂದಾಗ, ಮುಖ ತಿರುಗಿಸಿಕೊಳ್ಳುತ್ತಾಳೆ. ಅವನು ಅವಳ ಸೆರಗಿನ ತುದಿಯನ್ನು ಮುಟ್ಟಿದಾಗ, "ಓ, ನೀಚ ! ನನ್ನ ಸೆರಗು ಹಿಡಿಯಬೇಡ" ಎಂದು ಧಿಕ್ಕರಿಸುತ್ತಾಳೆ. "ಇವಳ ಪ್ರಾಣ ಹೋದ ಮೇಲೆ, ಯಾವುದೋ ಸತ್ತ್ವಯುಕ್ತವಾದ ಆತ್ಮ ಇವಳ ದೇಹವನ್ನು ಪ್ರವೇಶಿಸಿರಬಹುದೆ"ಂದು ರಾಮಿಲಕ ಊಹಿಸುತ್ತಾನೆ.

ಚೇಟಿಯೊಡನೆ ಬಂದ ವೈದ್ಯ, ತನಗೆ ತಿಳಿದ ವಿಷನಿವಾರಕ ಮಂತ್ರಗಳನ್ನು ಹೇಳಹೊರಟಾಗ, ಗಣಿಕೆ "ಮೂರ್ಖವೈದ್ಯ ನಿಲ್ಲಿಸು" ಎನ್ನುತ್ತಾಳೆ. ವೈದ್ಯ "ಇದು ಪಿತ್ತದೋಷ. ನಾನು ನಿನ್ನ ವಾತ, ಪಿತ್ತ ಶ್ಲೇಷ್ಮಗಳೆಲ್ಲವನ್ನೂ ನಾಶಮಾಡುತ್ತಾನೆ" (ಅಹಂ ತೇ ಪಿತ್ತಂ ವಾತಂ ಶ್ಲೇಷ್ಮಂ ಚ ನಾಶಯಾಮಿ) — ಇವೆಲ್ಲ ನಾಶವಾದರೆ ಪ್ರಾಣವೇ ಉಳಿಯುವುದಿಲ್ಲವೆಂದು ಸಹ ಈ ದಡ್ಡನಿಗೆ ತಿಳಿಯದು — ಎಂದು ಹೇಳಿ ವಿಷವೈದ್ಯನನ್ನು ಕರೆತರಲು ಹೋಗುತ್ತಾನೆ.

"ಬೇರೊಬ್ಬ ವಸಂತಸೇನೆಯ ಜೀವಹರಣ ಮಾಡುವ ಬದಲು, ನೀನು ಇವಳ ಜೀವ ತಂದು ತಪ್ಪು ಮಾಡಿದ್ದೀ' ಎಂದು ಯಮನಿಂದ ಗದರಿಸಲ್ಪಟ್ಟ ಯಮದೂತ, ಮತ್ತೆ ಬಂದು ಇವಳು ಬದುಕಿರುವುದನ್ನು ನೋಡಿ ಆಶ್ಚರ್ಯಪಟ್ಟು, ಯೋಗಿಯು ಇವಳ ದೇಹದಲ್ಲಿರುವುದನ್ನರಿತು, ಅವನ ಕಾರ್ಯ ಮುಗಿದ ಮೇಲೆ ಸರಿಪಡಿಸೋಣ ವೆಂದು ಆಲೋಚಿಸಿ, ಇವಳ ಜೀವವನ್ನು ಪರಿವ್ರಾಜಕನ ದೇಹಕ್ಕೆ ಸೇರಿಸಿ ಹೋಗುತ್ತಾನೆ. ಪರಿವ್ರಾಜಕನು ಎದ್ದು, ಪ್ರಾಕೃತದಲ್ಲಿ ಮಾತನಾಡುತ್ತ, "ರಾಮಿಲಕ, ನನ್ನನ್ನು ಆಲಿಂಗಿಸು" ಎನ್ನುತ್ತಾನೆ. ಶಿಷ್ಯ "ಮುಳ್ಳು ಮುತ್ತುಗವನ್ನು ಆಲಿಂಗಿಸು" ಎನ್ನುತ್ತಾನೆ. ಗುರು "ನಾನು ಮತ್ತನಾಗಿದ್ದೇನೆ" ಎಂದರೆ, ಶಿಷ್ಯ "ನೀನು ಮತ್ತನಲ್ಲ ಉನ್ಮತ್ತ" (ಹುಚ್ಚ) ಎನ್ನುತ್ತಾನೆ; ಗುರು ತನಗೆ ಕುಡಿಯಲು ಮದ್ಯಬೇಕೆಂದರೆ, ಶಿಷ್ಯ, "ವಿಷ ಕುಡಿ" ಎನ್ನುತ್ತಾನೆ.

ಆಗ ವಿಷವೈದ್ಯ ಬಂದು ಔಷಧ ಸಿದ್ಧಪಡಿಸುತ್ತೇನೆಂದು ಹೊರಟಾಗ ಈ ರೀತಿ ಸಂಭಾಷಣೆ ನಡೆಯುತ್ತದೆ :—

ಗಣಿಕೆ — ಮೂರ್ಖ ವೈದ್ಯ, ಪ್ರಾಣಗಳ ಅಂತಕನಾದ ಯಮನನ್ನೂ ನೀನರಿಯೆ. ಯಾವ ಸರ್ಪದಿಂದ ಮರಣ ಸಂಭವಿಸಿತೆಂದು ಹೇಳು. ನೀನು ವೈದ್ಯಶಾಸ್ತ್ರವನ್ನೇನಾದರೂ ಬಲ್ಲೆಯಾ ?

ವೈದ್ಯ — "ವಾತಿಕಾಃ ಪೈತ್ತಿಕಾಃ" ಎಂದು ಮೊದಲು ಮಾಡಿ, ತಡವರಿಸಿ, ಪುಸ್ತಕವನ್ನು ನೋಡಿ "ತ್ರೀಣಿ ಸರ್ಪಾಃ ಭವಂತಿ" (ಮೂರು ಬಗೆಯ ಹಾವುಗಳಿವೆ) ಎನ್ನುತ್ತಾನೆ.

ಗಣಿಕೆ — ನೀನು ಅಪಶಬ್ದ ಹೇಳಿದ್ದೀಯೆ. ತ್ರೀಣಿ ನಪುಂಸಕ ಲಿಂಗ; "ತ್ರಯಃ ಸರ್ಪಾಃ" ಎಂದು ಹೇಳು.

ವೈದ್ಯ — ಇವಳನ್ನು ವೈಯಾಕರಣ ಸರ್ಪ (ವ್ಯಾಕರಣ ತಿಳಿದ ಹಾವು) ಕಚ್ಚಿರಬೇಕು.

ಗಣಿಕೆ — ವಿಷವೇಗಗಳೆಷ್ಟು ?

ವೈದ್ಯ — ನೂರು.

ಗಣಿಕೆ — ಅಲ್ಲ.

ರೋಮಾಂಚೋ ಮುಖಶೋಷಶ್ಚ ವೈವರ್ಣ್ಯಂ ಚೈವ ವೇಪಥುಃ।
ಹಿಕ್ಕಾ ಶ್ವಾಸಶ್ಚ ಸಂಮೋಹಃ ಸಪ್ತೈತಾ ವಿಷ ವಿಕ್ರಿಯಾಃ॥

(ರೋಮಾಂಚ, ಬಾಯಿ ಒಣಗುವುದು, ಶರೀರ ಬಣ್ಣ ಗೆಡುವುದು, ನಡುಕ, ಬಿಕ್ಕಳಿಕೆ, ಮೇಲುಸಿರು, ಮೂರ್ಛೆ ಇವು ಏಳು ವಿಷದಿಂದುಂಟಾಗುವ ಪರಿಣಾಮ ಗಳು). ಈ ಏಳು ಹಂತಗಳನ್ನು ದಾಟಿದ ಮೇಲೆ ಅಶ್ವಿನೀ ದೇವತೆಗಳೂ ಚಿಕಿತ್ಸೆ ಮಾಡಲಾರರು. ಅಥವಾ ಇನ್ನೇನಾದರೂ ಹೇಳುವುದಿದೆಯೋ ?

ವೈದ್ಯ — ನ ಖಲ್ವಸ್ಮಾಕಂ ವಿಷಯಃ ನಮೋ ಭಗವತ್ಯೈ ಗಚ್ಛಾಮಿ ತಾವದಹಂ.

(ಇದು ನಮಗೆ ಅಸಾಧ್ಯವಾದ ವಿಷಯ. ಭಗವತಿಗೆ ನಮಸ್ಕಾರ. ನಾನು ಹೋಗುತ್ತೇನೆ.)

ಆಗ ಯಮದೂತನು ಬಂದು, "ಭಗವನ್, ಈ ಹೀನಶರೀರವನ್ನು ಬಿಡೋಣ ವಾಗಲಿ" ಎಂದು ಹೇಳಿದಾಗ ಪರಿವ್ರಾಜಕನ ಪ್ರಾಣ ಹೊರಬರುತ್ತದೆ. ಯಮದೂತ ಗಣಿಕೆಯ ದೇಹದಲ್ಲಿ ಅವಳ ಪ್ರಾಣವನ್ನು ಸೇರಿಸಿ ಹೋಗುತ್ತಾನೆ. ಪರಿವ್ರಾಜಕನ ಪ್ರಾಣ ಅವನ ಶರೀರಕ್ಕೆ ಮರಳುತ್ತದೆ.

ಮಹಿಷ ಶತಕ

ದಿನಾಂಕ 15.3.91ರಂದು ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಸಭಾಂಗಣದಲ್ಲಿ ಸಂಸ್ಕೃತ ಪರಿಷತ್ತಿನ ಆಶ್ರಯದಲ್ಲಿ ಏರ್ಪಟ್ಟಿದ್ದ ಉಪನ್ಯಾಸದ ಲಿಖಿತ ರೂಪವಿದು. ಸಂಸ್ಕೃತ ವಿಡಂಬನ ಕಾವ್ಯಗಳಲ್ಲಿ ಉತ್ಕೃಷ್ಟವಾಗಿರುವ ವಾಂಛೇಶ್ವರ ಅಥವಾ ಕುಟ್ಟಿಕವಿಯ ಈ ಶತಕವನ್ನು ಕುರಿತಂತೆ ಅತ್ಯುತ್ಕೃಷ್ಟ ಮಾಹಿತಿಯನ್ನು ಸಂಶೋಧಿಸಿ ಸಂಗ್ರಹಿಸಿರುವುದನ್ನು ಈ ಲೇಖನದಲ್ಲಿ ಸಾಕ್ಷಾತ್ಕರಿಸಿಕೊಳ್ಳಬಹುದು.

ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಶತಕಕಾವ್ಯಗಳ ಬೆಳೆ ಹುಲುಸಾಗಿದೆ. ಈಗ ಉಪಲಬ್ಧವಾಗಿರುವ ಶತಕಕಾವ್ಯಗಳಲ್ಲಿ ಭರ್ತೃಹರಿಯ (ಕ್ರಿ.ಶ. 6ನೆಯ ಶತಮಾನಕ್ಕೆ ಹಿಂದೆ) ಸುಭಾಷಿತ ತ್ರಿಶತೀ ಎಂದು ಪ್ರಸಿದ್ಧವಾಗಿರುವ ನೀತಿ, ಶೃಂಗಾರ, ವೈರಾಗ್ಯ ಶತಕಗಳೇ ಅತಿ ಪುರಾತನವಾದವು. ವಿವಿಧ ಶೃಂಗಾರ ಸನ್ನಿವೇಶಗಳನ್ನು ಚಿತ್ರಿಸುವ ಅಮರು ಶತಕ (ಸು. ಕ್ರಿ.ಶ. 650), ಬಾಣನ ಚಂಡೀಶತಕ ಮತ್ತು ಮಯೂರನ ಸೂರ್ಯ ಶತಕ (7ನೇ ಶತಮಾನ), ನೀತಿ ಬೋಧಕವಾದ ಭಲ್ಲಟ ಶತಕ ಮತ್ತು ಬೋಧಿಸತ್ವ ಲೋಕೇಶ್ವರನ ಲೋಕೇಶ್ವರ ಶತಕ (9ನೇ ಶತಮಾನ)[1], ದೃಷ್ಟಾಂತ ಶತಕ (ಸು. ಕ್ರಿ.ಶ. 1100), ವೇದಾಂತ ದೇಶಿಕರ (1268-1369) ದಯಾಶತಕ ಇವು ಇತರ ಕೆಲವು ಪ್ರಸಿದ್ಧವಾದ ಶತಕಗಳು. ಆಧುನಿಕ ಕಾಲದಲ್ಲಿ ಎಂದರೆ 17ನೇ ಶತಮಾನದಿಂದ ಈಚೆಗೆ ಶತಕಕಾವ್ಯಗಳ ಸುರಿಮಳೆಯೇ ಆಗಿದೆ.

ಪ್ರಾಧ್ಯಾಪಕ ಶ್ರೀಧರ ಭಾಸ್ಕರ ವರ್ಣೇಕರ್ ಅವರು ತಮ್ಮ 'ಅರ್ವಾಚೀನ ಸಂಸ್ಕೃತ ಸಾಹಿತ್ಯ'[2] ಎಂಬ ಮರಾಠೀ ಗ್ರಂಥದಲ್ಲಿ 60ಕ್ಕೂ ಹೆಚ್ಚು ಕವಿಗಳ ನೂರಕ್ಕೂ ಅಧಿಕವಾದ ಶತಕಕಾವ್ಯಗಳನ್ನು ಹೆಸರಿಸಿ, ನೂರಾರು ಕವಿಗಳು ಶತಕಗಳನ್ನು ಬರೆದಿರುತ್ತಾರೆಂದೂ, ತಾವು ಅವುಗಳಲ್ಲಿ ಕೆಲವನ್ನು ಮಾತ್ರ ಕೊಟ್ಟಿರುವುದಾಗಿಯೂ ಹೇಳಿದ್ದಾರೆ.

ಪಲಾಂಡು (ಈರುಳ್ಳಿ) ಶತಕ, ಕಾಕಶತಕ, ಮಹಿಷಶತಕ, ವಕ್ಷೋಜಶತಕ, ರೋಮಾವಲೀ ಶತಕ, ಕುಚಶತಕ, ಕಚಶತಕ, ಅಧರಶತಕ, ರೋಮಶತಕ, ಜಾರಜಾತಶತಕ, ಕಾನನಶತಕ, ವಿಧವಾಶತಕ, ಹೋಲಿಕಾಶತಕ, ಸಮ್ಮಾರ್ಜನೀ (ಕಸುಡಿಗೆ)

---

1. ಸಂಸ್ಕೃತಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ — ಡಾ|| ಕೆ. ಕೃಷ್ಣಮೂರ್ತಿ, ವಿದ್ವಾನ್ ಎನ್. ರಂಗನಾಥಶರ್ಮ, ವಿದ್ವಾನ್ ಎಚ್. ಕೆ. ಸಿದ್ಧಗಂಗಯ್ಯ, ಕರ್ನಾಟಕ ಸರ್ಕಾರ ಪಠ್ಯಪುಸ್ತಕಗಳ ಇಲಾಖೆ 1976.
2. ಪ್ರಕಾಶಕರು : ಮಾಡರ್ನ್ ಬುಕ್ ಸ್ಟೋರ್ಸ್, ಅಕೋಲ. ನಾಗಪುರ 1963.

ಶತಕ, ಕಲಿವಿಡಂಬನಶತಕ, ಯಮಪ್ರಣಾಮಶತಕ[3] (ಕಂಸನ-ಬಾಧೆಯನ್ನು ತಾಳಲಾರದೆ ಪ್ರಜೆಗಳು ಯಮನನ್ನು ಪ್ರಾರ್ಥಿಸುವುದು ಇದರ ವಸ್ತು), ಕಾಫೀಶತಕ — ಈ ಹೆಸರುಗಳು ಈ ಕಾಲದ ಶತಕಗಳ ವಸ್ತು ವೈವಿಧ್ಯವನ್ನು ತೋರಿಸುತ್ತವೆ.

ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ ।
ತಾನಿ ಸರ್ವಾಣಿ ನಶ್ಯನ್ತಿ ಕಾಫೀಪಾನಾತ್ಪದೇ ಪದೇ ॥

ಇದು ಕಾಫೀಶತಕದ ಒಂದು ಶ್ಲೋಕ[4]

ಮಹಿಷಶತಕವು ವಿಡಂಬನಾತ್ಮಕವಾದ ಹಾಸ್ಯರಸಪ್ರಧಾನ ಕಾವ್ಯ. ಅರ್ವಾಚೀನ ಕಾಲಖಂಡದಲ್ಲಿ ಹಾಸ್ಯರಸ ಪ್ರಧಾನವಾದ ಕಾವ್ಯಗಳಲ್ಲಿ ಇದನ್ನೇ ಮೊದಲನೆಯದೆನ್ನಬಹುದೆಂದು ವರ್ಣೀಕರರು ಹೇಳಿದ್ದಾರೆ.[5] ಈ ಕಾವ್ಯಕ್ಕೆ ಶ್ಲೇಷಾರ್ಥ ಚಂದ್ರಿಕಾ ಎಂಬ ವ್ಯಾಖ್ಯಾನವಿದೆ.

ತಂಜಾವೂರಿನ ಮೂರು ಜನ ನಾಯಕ ರಾಜರ ಕಾಲದಲ್ಲಿ ಸುಮಾರು 60 ವರ್ಷಗಳ ಕಾಲ ಪ್ರಧಾನ ಮಂತ್ರಿಯಾಗಿದ್ದ ಪ್ರಸಿದ್ಧ ವಿದ್ವಾಂಸರೂ ಮಹಾಕವಿಯೂ ಆದ 'ಅದ್ವೈತ ವಿದ್ಯಾಚಾರ್ಯ' ಗೋವಿಂದ ದೀಕ್ಷಿತರ (ಸುಪ್ರಸಿದ್ಧ ಸಂಗೀತ ಶಾಸ್ತ್ರಗ್ರಂಥ ಚತುರ್ದಂಡಿ ಪ್ರಕಾಶಿಕಾದ ಕರ್ತೃ ವೆಂಕಟೇಶ್ವರ ಮಖಿಯು ಇವರ ಮಗ) ಮರಿಮಗ-ಮಗಳ ಮಗಳ ಮಗನಾದ ವಾಂಛೇಶ್ವರಕವಿಯು ಮಹಿಷ ಶತಕದ ಕರ್ತೃ. ಈತ ಶಹಾಜಿರಾಜಪುರ ಅಗ್ರಹಾರದ (ಕುಂಭಕೋಣದಿಂದ 7-8 ಕಿ.ಮೀ. ದೂರದಲ್ಲಿರುವ ಈಗಿನ ತಿರುವಿಶನಲ್ಲೂರ್) ಕಾಮಕಾಯನ ವಿಶ್ವಾಮಿತ್ರಗೋತ್ರ ಆಶ್ವಲಾಯನ ಸೂತ್ರದ ಹೊಯ್ಸಳ ಕರ್ನಾಟಕ ಬ್ರಾಹ್ಮಣ. ತಂಜಾವೂರಿನ ಶಹಾಜೀರಾಜ 1691ರಲ್ಲಿ ಕಾವೇರಿ ತೀರದಲ್ಲಿ ಅಗ್ರಹಾರವನ್ನು ಕಟ್ಟಿಸಿ, ಅಲ್ಲಿ 47 ಸರ್ವಮಾನ್ಯ ವೃತ್ತಿಗಳನ್ನು ಕಲ್ಪಿಸಿ ವಾಂಛೇಶ್ವರ

---

3. ಸಾಧವೋಽಧರ್ಮಕೃತ್ಕಂಸಬಾಧಿತಾ ಮಥುರಾ ಜನಾಃ ।
ಯಮಪ್ರಣಾಮಶತಕಂ ಕಿಮಪ್ಯೇತದ್ವಿತೇನಿರೇ ॥
ಸಂಸ್ಕೃತ ಕವಿಚರಿತ್ರೆ — ಎಂ. ಎಸ್. ಶ್ರೀನಿವಾಸಯ್ಯಂಗಾರ್, ಸಂಪುಟ 2, 1978 ಪುಟ 645.

4. ಅರ್ವಾಚೀನ ಸಂಸ್ಕೃತ ಸಾಹಿತ್ಯ, ಪುಟ 325.

5. ಅದೇ ಪುಟ 319.

6. ಈ ಕವಿಯ ಪ್ರಪೌತ್ರ ವಾಂಛೇಶ್ವರಯಜ್ವರಿಂದ ರಚಿತವಾದ ಭಾಟ್ಟಚಿಂತಾಮಣಿಯ ಪಾದಾಂತ್ಯಪುಷ್ಪಿಕೆಗಳಲ್ಲಿದೆ : Bhatta Chintamani, First Edition, Editor Mahamahopadhyaya T. Venkatasubba Sastrigal, Madras - 1928.

ಕವಿಯ ತಂದೆಗೂ ಒಂದು ವೃತ್ತಿಯನ್ನು ಕೊಟ್ಟನು.[7] ವಾಂಛೇಶ್ವರನ ತಂದೆಯು ಶಹಾಜಿಯ (1687-1711) ಕಾಲದಲ್ಲಿಯೂ, ವಾಂಛೇಶ್ವರನು ತುಲಜಿ ಅಥವಾ ತುಕೋಜಿಯ (1728-35) ಕಾಲದಲ್ಲಿಯೂ ಮಂತ್ರಿಗಳಾಗಿದ್ದರು.[8]

ವಾಂಛೇಶ್ವರನಿಗೆ ಕುಟ್ಟಿಕವಿ ಎಂಬ ನಾಮಾಂಕಿತವಿದೆ[9]. ಒಮ್ಮೆ ಶಹಾಜಿಯು ಮೀನಾಕ್ಷೀ ದೇವಿಯ ದರ್ಶನಕ್ಕೆ ಹೋಗಿದ್ದಾಗ ವಾಂಛೇಶ್ವರನೂ ತನ್ನ ತಂದೆಯೊಡನೆ ಅಲ್ಲಿಗೆ ಹೋಗಿದ್ದನೆಂದೂ, ರಾಜನು ದೇವಿಯನ್ನು ನೋಡಿ,

ಪುರಿಮಧುರಂ ಗಿರಿಮಧುರಂ ಗರಿಮಧುರಂಧರ ನಿತಂಬ ಭಾರಾಢ್ಯಮ್ ।
ಸ್ಥೂಲಕುಚಂ ನೀಲಕಚಂ ಬಾಲಕಚಂದ್ರಾಂಕಿತಂ ತೇಜಃ ॥

ಎಂಬ ಪ್ರಾರ್ಥನಾಪದ್ಯವನ್ನು ಹೇಳಿದೊಡನೆ ಇನ್ನೂ ಬಾಲಕನಾಗಿದ್ದ ವಾಂಛೇಶ್ವರನು

ಹೃದಿ ತರಸಾ ವಿದಿತರಸಾ ತದಿತರಸಾಹಿತ್ಯ ವಾಙ್ಮಮೇ ಲಗತಿ ।
ಕವಿಲೋಕೇ ನವಿಲೋಕೇ ಭುವಿ ಲೋಕೇಶಸ್ಯ ಶಾಹಜೇರುಪಮಾಮ್॥

ಎಂಬ ಪದ್ಯವನ್ನು ರಚಿಸಿ ಹೇಳಿದ್ದರಿಂದ, ವಿಸ್ಮಿತನಾದ ರಾಜನು ಈ ಆಶುಕವಿಯನ್ನು (ಬಾಲಕವಿ) ಎಂದು ಕರೆದನೆಂದೂ ಪ್ರತೀತಿಯಿದೆ. ಈ ಕವಿಗೆ 'ಶ್ಲೇಷಕವಿ ಸಾರ್ವಭೌಮ'ನೆಂಬ ಬಿರುದಿತ್ತೆಂದು ಕಾಣುತ್ತದೆ. ಆಶೀರ್ವಾದ ಶತಕ ಮತ್ತು ಧಾಟೀಶತಕ ಅಥವಾ ತುರಗ ಶತಕ ಇವನ ಇತರ ಕಾವ್ಯಗಳು.[10]

ಶಾಹಜಿಯ ಕನಿಷ್ಠ ಸೋದರ ತುಕೋಜಿಯ ಮರಣಾನಂತರ ತುಕೋಜಿಯ

---

7. Mahisha Satakam, Sri Sankara Gurukulam, Srirangam — 1946. ಸಂಸ್ಕೃತ ಪ್ರಸ್ತಾವನೆ.

8. ತದಮಾತ್ಯ ಕುಲೋತ್ಪನ್ನಃ ಶ್ರೀಮಾನ್ ವಾಂಛೇಶ್ವರಸ್ಸುಧೀಃ ।
ಮಹಿಷಸ್ತುತಿತೋ ರಾಜಬುದ್ಧಿಂ ಚಕ್ರೇ ಸುನಿರ್ಮಲಾಂ ॥ — ಮಹಿಷ ಶತಕ ವ್ಯಾಖ್ಯಾನದಲ್ಲಿ 4-7 ಶ್ಲೋಕಗಳು

9. ಖ್ಯಾತಃ ಕುಟ್ಟಿಕವಿಸ್ತು ದುರ್ಧನಿಗೃಹದ್ವಾರೇಷು ನಿದ್ರಾಯತೇ । — ಮಹಿಷಶತಕ ಪದ್ಯ 7

10. ಚಕ್ರೇ ಮಾಹಿಷಶತಕಂ ಧಾಟೀಶತಕಂ ತಥಾಶಿಷಾಂ ಶತಕಮ್ ।
ಶ್ಲೇಷಕವಿ ಸಾರ್ವಭೌಮಃ ಶ್ರೀಮಾನ್ ವಾಂಛೇಶ್ವರಃ ಸ್ವತಂತ್ರೋಽಸೌ ॥
— ಭಾಟ್ಟಚಿಂತಾಮಣಿಯ ಪ್ರಾರಂಭದಲ್ಲಿ 4ನೆಯ ಪದ್ಯ

ಆಶೀರ್ವಾದ ಶತಕದ ಪ್ರತಿಯೊಂದು ಪದ್ಯದಲ್ಲಿಯೂ ದೇವತೆಗಳು, ಭಕ್ತರು, ಋಷಿಗಳು, ಪವಿತ್ರ ತೀರ್ಥಕ್ಷೇತ್ರ, ಪರ್ವತಗಳು, ವೇದೇತಿಹಾಸ ಶಾಸ್ತ್ರಾದಿಗಳು ಇವುಗಳಲ್ಲೊಂದನ್ನು ವರ್ಣಿಸಿ, ಅವು ಶ್ರೋತೃಗಳಿಗೆ ಮಂಗಳವನ್ನುಂಟುಮಾಡಲಿ ಎಂಬ ಆಶೀರ್ವಾದವಿದೆ. ಈ ಶತಕ ಶ್ರೀರಂಗದ ವಾಣೀವಿಲಾಸ ಮುದ್ರಣಾಲಯದಲ್ಲಿ ಅಚ್ಚಾಗಿತ್ತು. ಧಾಟೀಶತಕದ ವಿಷಯ ತಿಳಿಯದು.

ಮಕ್ಕಳಲ್ಲಿ ಉತ್ತರಾಧಿಕಾರಕ್ಕಾಗಿ ಒಳಜಗಳಗಳಾಗಿ ನಾಲ್ಕು ವರ್ಷಕಾಲ ಅನೇಕರು ಸ್ವಲ್ಪಸ್ವಲ್ಪ ಕಾಲ ರಾಜ್ಯವಾಳಿದರೆಂದೂ ಕೊನೆಗೆ 1739ರಲ್ಲಿ ತುಕೋಜಿಯ (ಉಪಪತ್ನಿಯ ?) ಮಗನಾದ ಪ್ರತಾಪಸಿಂಹನು ರಾಜನಾದನೆಂದೂ ತಂಜಾವೂರು ಗೆಜೆಟಿಯರ್‌ನಲ್ಲಿದೆ.[11] ಈ ಪ್ರತಾಪಸಿಂಹನು ಚಿಕ್ಕವಯಸ್ಸಿನವನೂ ಅವಿಚಾರಿಯೂ ಆಗಿದ್ದುದರಿಂದ ದುಷ್ಟರು ಇವನ ಸ್ನೇಹಿತರಾಗಿ ಉನ್ನತಾಧಿಕಾರವನ್ನು ಪಡೆದು ಹಳೆಯ ಮಂತ್ರಿಗಳನ್ನೂ ವಿದ್ವಾಂಸರನ್ನೂ ಓಡಿಸಿ ಅವರ ಸ್ವತ್ತನ್ನೆಲ್ಲ ದೋಚಿದರು. ರಾಜದರ್ಶನವನ್ನು ಪಡೆದು ಅವನಿಗೆ ಸದ್ಬೋಧೆ ಮಾಡಲು ಸಾಧ್ಯವಾಗದಿದ್ದುದರಿಂದ, ಕಾಲಾನುಕಾಲದಲ್ಲಿ ತನ್ನ ಕಾವ್ಯ ರಾಜನನ್ನು ತಲುಪಿ ಅವನಿಗೆ ಒಳ್ಳೆಯ ಬುದ್ಧಿ ಬಂದೀತೆಂದು ಆಶಿಸಿ ಕುಟ್ಟಿಕವಿಯು ಶ್ಲೇಷಗರ್ಭವಾದ ಮತ್ತು ಕೋಣನ ಸ್ತುತಿಯ ವ್ಯಾಜದಿಂದ ರಾಜಪರಿವಾರನಿಂದಾರೂಪವಾದ ಈ ಕಾವ್ಯವನ್ನು ರಚಿಸಿದನು. ಆದರೆ ರಾಜನ ವಿಷಯದಲ್ಲಿ ಅನುಗ್ರಹಬುದ್ಧಿಯನ್ನೇ ತೋರಿಸಿ ಎರಡನೆಯ ಶ್ಲೋಕದಲ್ಲಿ

ಯೇ ಜಾತಾ ವಿಮಲೇऽತ್ರ ಭೋಸಲಕುಲೇ
ಸೂರ್ಯೇಂದುವಂಶೋಪಮೇ
ರಾಜಾನಶ್ಚಿರ ಜೀವಿನಶ್ಚ ಸುಖಿನಸ್ತೇ, ಸಂತು ಸಂತಾನಿನಃ ॥

(ಭೋಸಲೆ ಕುಲದ ರಾಜರು ದೀರ್ಘಾಯುಗಳೂ ಸಂತಾನಯುಕ್ತರೂ ಆಗಿ ಸುಖವಾಗಿರಲಿ) ಎಂದು ಹರಸಿದ್ದಾನೆ.

ಮುಂದಿನ ಒಂಬತ್ತು ಶ್ಲೋಕಗಳಲ್ಲಿ ಆಗಿನ ಸ್ಥಿತಿಯನ್ನು ವರ್ಣಿಸಿ, ಕೋಣನನ್ನು ಆಶ್ರಯಿಸಿ ಕೃಷಿಯಲ್ಲಿ ತೊಡಗುವುದೇ ಸರಿಯಾದ ಮಾರ್ಗವೆನ್ನುತ್ತಾನೆ.

ಶಾಹಜಿಯಂತಹ ರಾಜರೂ ಆನಂದರಾಯಮಖಿಯಂತಹ ವಿದ್ವನ್ಮಂತ್ರಿಗಳೂ ಗತಿಸಿ ವಿದ್ಯೆಯಲ್ಲಿ ವಿಷಬುದ್ಧಿಯುಳ್ಳ ದುಷ್ಟರು ರಾಜಸಭಾಸದರಾಗಿದ್ದಾರೆ. ಆದುದರಿಂದ ಪ್ರಪಂಚವನ್ನು ಕಾಪಾಡುವ ಕೃಷಿಯನ್ನು ಶರಣು ಹೊಂದುತ್ತೇನೆ. (ಕಿಂ ಕುರ್ವೇಂಬ ಕೃಷೇ ವ್ರಜಾಮಿ ಶರಣಂ ತ್ವಾಮೇವ ವಿಶ್ವಾವನೀಂ) "ಅಕ್ಷೈರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ" ಎಂಬ ವೇದವಾಕ್ಯವಿದೆ[12]. 'ದುರ್ಭಿಕ್ಷಂ ಕೃಷಿತೋ ನಹಿ' ಎಂಬ ಲೋಕೋಕ್ತಿಯಿದೆ.

---

11. Madras District Gazetteers - Tanjore by F. R. Hemingway, 1915.

12. ಅಕ್ಷೈರ್ಮಾ ದೀವ್ಯಃ ಕೃಷಿಮಿತ್ಕೃಷಸ್ವ ವಿತ್ತೇ ರಮಸ್ವ ಬಹುಮನ್ಯಮಾನಃ ।
ತತ್ರ ಗಾವಃ ಕಿತವ ತತ್ರ ಜಾಯಾ ತನ್ಮೇ ವಿಚಷ್ಟೇ ಸವಿತಾಯಮರ್ಯಃ ॥
— ಋಗ್ವೇದ 10ನೇ ಮಂಡಲ, 34ನೇ ಸೂಕ್ತ (ಅಕ್ಷಸೂಕ್ತ)ದಲ್ಲಿ 13ನೇ ಮಂತ್ರ
ಮಂತ್ರಾರ್ಥ : ಪಗಡೆ ಜೂಜಾಟ ಬೇಡ; ಕೃಷಿಯನ್ನೇ ಮಾಡು. ಸಮಾಜದಲ್ಲಿ ಮರ್ಯಾದೆ ಪಡೆದು, ಧನದಿಂದ ಸುಖಿಯಾಗಿರು. ಕೃಷಿಯಿಂದ ಗೋವುಗಳನ್ನೂ, ಪತ್ನಿಯನ್ನೂ ಪಡೆಯುವೆ ಎಂದು ಸರ್ವೇಶ್ವರನಾದ ಸೂರ್ಯನು ನನಗೆ ಹೇಳಿದ. ಈ ಮಂತ್ರದ ದ್ರಷ್ಟಾರ ಕವಷ ಐಲೂಷನೆಂಬ ಋಷಿ.

ಶ್ರೀಧರಾರ್ಯ (ಶ್ರೀಧರವೆಂಕಟೇಶ)ನಂತಹ ಮಹಾಪಂಡಿತ ವಿದ್ಯಾವಿಕ್ರಯ ಮಾಡುವ ವ್ಯಾಪಾರಿಯಾದ. ಷಡ್ದರ್ಶನೀ ವಲ್ಲಭನೆಂದು ಖ್ಯಾತನಾದ ಅಂಬು ದೀಕ್ಷಿತನಿಗೆ ಅನ್ನ ಚಿನ್ನದಂತಾಗಿದೆ. ಕುಟ್ಟಕವಿಯು (ತಾನೇ) ದುಷ್ಟ ಶ್ರೀಮಂತರ ಮನೆಯ ಬಾಗಿಲಲ್ಲಿ ತೂಕಡಿಸುತ್ತಿದ್ದಾನೆ. ಇದೆಲ್ಲವೂ ಕೋಣರಾಜನನ್ನು ಸೇವಿಸದೆ ಇದ್ದುದರ ಫಲ (ಮಹಿಷೇಶ್ವರಾನನುಸೃತೇಃ ದೌರ್ಭಾಗ್ಯ ಧಾಮ್ನಃ ಫಲಂ) ಎಲೈ ಮಿತ್ರನೇ ! ವಿದ್ಯೆಗೆ ಇಲ್ಲಿ ಗೌರವವಿಲ್ಲದಿದ್ದರೆ ಗೌರವವಿರುವೆಡೆಗೆ ಹೋಗುವೆನೆಂದು ಜ್ವರದ ಬೀಡಾದ ಶ್ರೀರಂಗಪಟ್ಟಣಕ್ಕೆ ಹೋಗಬೇಡ[15]. (ಶ್ರೀರಂಗಾಭಿಧಪತ್ತನಂ ಪ್ರತಿ ಸಖೇ ಮಾಗಾಜ್ವರಸ್ಯಾಲಯಂ). ಅಕಾರಣ ಬಂಧುವಾದ ಈ ಕೋಣರಾಜನನ್ನು ಬಿಟ್ಟು ಹೋಗುವ ಸಾಹಸ ಮಾಡಿದರೆ — (ದೂರೇ ಶ್ರೀರ್ನಿಕಟೇ ಕೃತಾಂತಮಹಿಷಗ್ರೈವೇಯ ಘಂಟಾರವಃ) — ಲಕ್ಷ್ಮಿಯು ಇನ್ನೂ ದೂರದಲ್ಲಿರುವಾಗಲೇ ಯಮನ ಕೋಣನ ಕತ್ತಿಯ ಘಂಟೆಯ ಸದ್ದು ಸಮೀಪಿಸಿರುತ್ತದೆ.

ಅನಂತರ, "ನನ್ನನ್ನು ಕಾಪಾಡುವುದರಿಂದ ನನ್ನ ಪ್ರಭುವಾದ ರಾಜಶ್ರೀ ಮಹಿಷರನ್ನು ಸ್ತುತಿಸುತ್ತೇನೆ. ಪಶುವಾದ ಕೋಣನ ಗುಣಮಾಹಾತ್ಮ್ಯಕ್ಕಾಗಿ ಅದರ ವರ್ಣನೆ ಮಾಡುತ್ತಿಲ್ಲ.

---

13. ರಾಮಕವಿಯು ಗೀತಗೋವಿಂದದ ಮಾದರಿಯಲ್ಲಿ ರಾಮಾಷ್ಟಪದೀ ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದರ ಪ್ರತಿ ಅಷ್ಟಪದಿಯ ಮೊದಲಲ್ಲೂ ಅದನ್ನು ಗೀತಗೋವಿಂದದ ಯಾವ ಅಷ್ಟಪದಿಯ ಧಾಟಿಯಲ್ಲಿ ಹಾಡಬೇಕೆಂದು ತಿಳಿಸಿ ರಾಗಕಾಲಗಳನ್ನು ಸೂಚಿಸಿದೆ. ವಾಲ್ಮೀಕಿ ರಾಮಾಯಣದಲ್ಲಿನ ಮುಖ್ಯ ಸನ್ನಿವೇಶಗಳನ್ನೊಳಗೊಂಡ ಸಂಕ್ಷಿಪ್ತ ರಾಮಕಥೆಯೇ ಇದರ ವಸ್ತು. ಕಾಂಚೀಕಾಮಕೋಟಿ ಪೀಠದ ಜಗದ್ಗುರು ಚಂದ್ರಶೇಖರೇಂದ್ರ ಸರಸ್ವತಿಯವರ 76ನೇ ಜನ್ಮದಿನದ ಕಾಣಿಕೆಯಾಗಿ ಒಪ್ಪಿಸಲು ಇದನ್ನೂ ಮತ್ತು 1783ರಿಂದ 1814ರವರೆಗೆ ಅದೇ ಪೀಠಾಧಿಪರಾಗಿದ್ದ ಮತ್ತೋರ್ವರು ಚಂದ್ರಶೇಖರೇಂದ್ರ ಸರಸ್ವತಿಗಳಿಂದ ವಿರಚಿತವಾದ ಶಿವಾಷ್ಟಪದಿಯನ್ನೂ ಪರಿಶೋಧಿಸಿ ಡಾ॥ ವಿ. ರಾಘವನ್‌ರವರು 1969ರಲ್ಲಿ ಪುನರ್ಮುದ್ರಣ ಮಾಡಿಸಿದರು. ಗ್ರಂಥಾಂತ ಪದ್ಯಗಳಲ್ಲಿ ರಾಮಕವಿಯು, ತನ್ನ ಗ್ರಂಥವನ್ನು ಶ್ರೀರಂಗಪಟ್ಟಣದ 'ವಿದ್ವನ್ಮಂಡಲಮಂಡನ'ನಾದ 'ಕರ್ನಾಟಕಕ್ಷ್ಮಾಪತಿ'ಯ ಪ್ರಾರ್ಥನೆಯಂತೆ ಬರೆದೆನೆಂದು ಹೇಳಿದ್ದಾನೆ. ಆದರೆ ರಾಜನ ಹೆಸರನ್ನು ಹೇಳಿಲ್ಲ.

ಬಹುಶಃ ರಾಮಕವಿ ಶ್ರೀರಂಗಪಟ್ಟಣದಲ್ಲಿ ಜ್ವರದಿಂದ ಬಹಳ ನರಳಿರಬಹುದು. ಇದನ್ನು ಮನಸ್ಸಿನಲ್ಲಿರಿಸಿಕೊಂಡು ವಾಂಛೇಶ್ವರನು ಮೇಲಿನ ಪದ್ಯವನ್ನು ಬರೆದಿರಬಹುದು.

ರಾಘವನ್‌ರವರು ತಮ್ಮ ಪೀಠಿಕೆಯಲ್ಲಿ ರಾಮಕವಿಯು ವಾಂಛೇಶ್ವರನ ಸೋದರನೆಂದು ಹೇಳಿದ್ದಾರೆ. ಇಬ್ಬರ ಊರು, ಜಾತಿ ಮತ್ತು ಗೋತ್ರಾದಿಗಳು ಸಮಾನವಾಗಿರುವುದಲ್ಲದೆ ಮತ್ತೆ ಯಾವ ಆಧಾರವಿದೆಯೆಂದು ಅವರು ಅಲ್ಲಿ ಹೇಳಿಲ್ಲ. ಎನ್. ಕೆ. ವೆಂಕಟೇಶಂ ಪಂತುಲು ಅವರು ತಮ್ಮ Govinda Deekshita and his literary success (Journal of the Andhra Historical Research Society - Vol. IX, July 1934) ಎಂಬ ಲೇಖನದಲ್ಲಿ ರಾಮಶಾಸ್ತ್ರಿ ಅಥವಾ ಕುಟ್ಟರಾಮಕವಿಯು ವಾಂಛೇಶ್ವರಕವಿಯ ಅಣ್ಣನೆಂದು ಹೇಳಿದ್ದಾರೆ.

ನನಗೆ ದ್ರೋಹ ಮಾಡಿದ ಅಧಿಕಾರಿ ಹತಕರ ಮೇಲಿನ ಕೋಪದಿಂದ ಅವರ ನಿಂದಾರೂಪವಾದ ಈ ವಾಗ್ದಂಡವನ್ನು ಅವರ ಪ್ರಭುಗಳ ಮೇಲೂ ಪ್ರಯೋಗಿಸುತ್ತಿದ್ದೇನೆ. ಈ ಮಹಿಷ ಪ್ರಬಂಧವನ್ನು ಕೇಳಿ ಗುಣಗ್ರಾಹಿಗಳಾದ ರಾಜರು ಧರ್ಮದಿಂದ ಪ್ರಜಾಪಾಲನೆ ಮಾಡಲಿ'' ಎಂದು ಹೇಳಿ, ಕವಿಯು ಮುಂದಿನ 14 ಶ್ಲೋಕಗಳನ್ನು, ಕೋಣನನ್ನು ಸಂಬೋಧಿಸಿ ಹೇಳುತ್ತಾನೆ.

ರಾಜನ ಸ್ವಭಾವ ಒಳ್ಳೆಯದೇ. ಆದರೆ ಅವನ ಮಂತ್ರಿಗಳಿಗೆ ಬುದ್ಧಿ ಸಾಲದು. ಅವರನ್ನು ವಂಚಿಸಿ ದುಷ್ಟರು ಎಲ್ಲರನ್ನೂ ದೋಚುತ್ತಿದ್ದಾರೆ; ಆದುದರಿಂದ ನೀನು ಇನ್ನು ಮುಂದೆ ಚೋಲ ದೇಶದ ಕೃಷಿಯಲ್ಲಿ ಆಸೆಯನ್ನು ಬಿಡು. ಅವರು ದೋಚಿದ ಮೇಲೆ — ಶಿಷ್ಟಂ ಮೇ ತ್ವಲಮಲ್ಲಕಂ, ತದಪಿ ನ ಭ್ರಾತಸ್ತವಾತ್ಯಂತತಃ — ನನಗೆ ಕೌಪೀನ ಮಾತ್ರ ಉಳಿದಿದೆ; ನಿನಗೆ ಅದೂ ಇಲ್ಲ. ರಾಜನ ಆಪ್ತರಿಗೆ ಲಂಚಕೊಟ್ಟು ಪ್ರಜೆಗಳನ್ನು ದೋಚುವ ದುಷ್ಟರು ಯಮಲೋಕಕ್ಕೆ ಹೋಗಲಿ! ನೀನು ದುಡಿದುಕೊಟ್ಟ ಧನಧಾನ್ಯಗಳನ್ನು ಈ ಸುಭೇದಾರರು ತಮ್ಮದಾಗಿ ಮಾಡಿಕೊಂಡಿದ್ದಾರೆ. ತಂದೆ ದುಡಿದ ಧನವನ್ನು ಮಕ್ಕಳೇ ತೆಗೆದುಕೊಳ್ಳುವುದು ಸಹಜವಷ್ಟೆ!

ಎಲೈ ಮಹಿಷರಾಜ ! ಹುಲ್ಲು ತಿನ್ನಿಸಿ, ನೀರಿನಲ್ಲಿ ಮುಳುಗಿಸಿ, ಮೈಯುಜ್ಜಿ, ನಿನ್ನ ಸೇವೆ ಮಾಡಿದ್ದೇನೆ. ನಾನು ಬೇಡುವುದಿಷ್ಟೆ, ನಿನ್ನನ್ನು ವಾಹನವಾಗಿ ಮಾಡಿಕೊಂಡಿರುವ ಯಮನನ್ನು ಬೇಗ ಈ ದ್ರೋಹಿ ಸುಭೇದಾರರ ಸಮೀಪಕ್ಕೆ ಕರೆದುಕೊಂಡು ಹೋಗು. ಈ ಸುಭೇದಾರರನ್ನು ನಾನು ತೃಣೀಕರಿಸಿದ್ದೇನೆ (ಹುಲ್ಲಾಗಿ ಮಾಡಿದ್ದೇನೆ). ನಿನಗೆ ಹಸಿವಾದಾಗ ನೀರಸವಾದ ಒಣಹುಲ್ಲನ್ನು ತಿನ್ನುವ ಬದಲು ಇವರನ್ನು ತಿಂದು ಲೋಕೋಪಕಾರ ಮಾಡು. ಈಗಿನ ರಾಜಸಭಾಸದರಿಗೆ ಹೋಲಿಸಿದರೆ ನೀನೇ ಬೃಹಸ್ಪತಿ. ಕಷ್ಟಪಟ್ಟು ನೆಲವನ್ನು ಉಳುವ ಬದಲು, ನೀನೂ ಅವರೊಡನೆ ರಾಜಸಭೆಯಲ್ಲಿ ಸುಖವಾಗಿರಬಹುದು.

ನಾನು ದುಷ್ಟರನ್ನು ಜೇನು ಸುರಿಸುವ ಮಾತುಗಳಿಂದ ಹೊಗಳಿ, ವಿಫಲನಾಗಿ, ಅಳಿದುಳಿದ ಪದಾರ್ಥಗಳನ್ನು ಮಾರಿ ಬಂದ ನೂರು ನಾಣ್ಯಗಳನ್ನು ಕೊಟ್ಟು ಮಹಿಷಪ್ರಭುವಾದ ನಿನ್ನನ್ನು ಪಡೆದೆ. ನಾವು ಒಬ್ಬರನ್ನೊಬ್ಬರು ಪಾಲಿಸುತ್ತಿದ್ದೇವೆ. ಇದರಿಂದ ಸಂತೋಷವಾಗಿ ನಾವು ಚಿರಕಾಲ ಬಾಳೋಣ.ನಮ್ಮ ಈ ಶತ್ರುಗಳು ಬೇಗನೆ ನಾಶವಾಗಲಿ! ಮುಂದಿನ 26 ಶ್ಲೋಕಗಳಿಂದ ಕವಿಯು ಮಹಿಷವನ್ನು ಅನೇಕ ವಿಧವಾಗಿ ಸ್ತುತಿಸುತ್ತಾನೆ.

ಮಹಿಷರಾಜ ! ನೀನು ನಿಜವಾಗಿಯೂ ಸ್ತೋತ್ರಾರ್ಹ. ಧನವಂತರಾದ ದುರ್ಗುಣರಾಜರ ಸ್ತುತಿಯಿಂದಾಗಿ ಹಳಸಿಹೋಗಿರುವ ಮಾತುಗಳಿಂದಲೇ ನಿನ್ನನ್ನು ಸ್ತುತಿಸುತ್ತಿದ್ದೇನೆ. ದಯಮಾಡಿ ನನ್ನನ್ನು ಕ್ಷಮಿಸು.

ನಿನ್ನನ್ನು ಆಶ್ರಯಿಸಿದವರಿಗೆ ಸ್ವಪ್ನದಲ್ಲಿಯೂ ದಾರಿದ್ರ್ಯ ಬಾಧೆಯಿಲ್ಲ. ಅವರ ಉಗ್ರಾಣದಲ್ಲಿ ಧನಧಾನ್ಯಗಳು ತುಂಬಿರುತ್ತವೆ. ಸರ್ವಜನರನ್ನು ರಕ್ಷಿಸುವ ದೀನಬಂಧುವಾದ ಮಹಿಷಾಧಿರಾಜ ! ನಿನಗೆ ನನ್ನ ಅನೇಕಾಶೀರ್ವಾದಗಳು.

ದುರಾಶಾಯುಕ್ತರಾದ ವಿದ್ವಾಂಸರು ಕ್ರೂರಿಗಳಾದ ನೃಪಾಧಮರ ರಾಜಾಂಗಣದಲ್ಲಿ ವ್ಯರ್ಥವಾಗಿ ಕಾಯುತ್ತಿರುತ್ತಾರೆ. ಅನೇಕ ಧಾನ್ಯಗಳನ್ನು ಬೆಳೆಸಿಕೊಟ್ಟು ಕಷ್ಟಪಡದಂತೆ ನಮ್ಮನ್ನು ರಕ್ಷಿಸುವ ಸೌಮ್ಯವಾದ ನಮ್ಮ ಈ ಕೋಣ ರಾಜರನ್ನು ಆಶ್ರಯಿಸುವುದಿಲ್ಲ.

ನಿನ್ನ ಕೊಟ್ಟಿಗೆಯೇ ಅರಮನೆ; ಸಗಣಿಯೇ ಕಸ್ತೂರಿ. ನೀನು ಎಬ್ಬಿಸಿದ ನಿನ್ನ ಮೈಯ ಧೂಳೇ ಬಟ್ಟೆಗಳಿಗೆ ಸುವಾಸನೆ ನೀಡುವ ಪುಡಿ. ಜನರಿಗೆ ನಿಷ್ಕಾರಣವಾಗಿ ಉಪಕಾರ ಮಾಡುವುದರಿಂದ ಅತ್ಯಂತ ಶ್ರೇಷ್ಠನಾದ ನಿನಗೆ ಸಂಬಂಧಪಟ್ಟವುಗಳೆಲ್ಲ ಭೂಷಣಗಳೇ !

ದಡ್ಡರ ವಿಷಯವನ್ನು ಪ್ರಸ್ತಾಪಿಸುವಾಗ, ಜನರು ಮೊದಲು ನಿನ್ನ ಹೆಸರೆತ್ತುತ್ತಾರೆ. ಆ ದಡ್ಡರಿಗೆ ನಿನ್ನ ಮಹಿಮೆ ತಿಳಿಯದು. ಆದರೂ ನಾನು ಇದನ್ನು ಸಹಿಸಲಾರೆ. ನೀನೇ ಧಾನ್ಯೋತ್ಪತ್ತಿಗೆ ಮೂಲ ಕಾರಣನಾಗಿರುವೆ. ದೇವತೆಗಳ ಹವಿಸ್ಸಿಗೂ ಸಹ ನೀನೇ ಮೂಲ. ಹೀಗೆ ನೀನು ಸಕಲ ಜಗತ್ತಿಗೂ ಆಧಾರನಾಗಿರುವೆ.

ನಿತ್ಯವೂ ಜಲಾಹಾರ ಪರ್ಣಾಹಾರಗಳಿಂದಲೇ ನೀನು ಜೀವಿಸುತ್ತಿರುವೆ. ತಪಸ್ಸಿನಲ್ಲಿ (ಮಾಘಮಾಸ ಅಂದರೆ ಆ ಕಾಲದ ಚಳಿಯಲ್ಲಿ) ಅಲ್ಲಾಡದೆ ನಿಂತಿರುವೆ. ನಿನ್ನ ವಾಸ ಪರ್ಣಶಾಲೆಯಲ್ಲಿ (ಗುಡಿಸಲಿನಲ್ಲಿ); ನೀನು ಮಲಗುವುದು ಭೂಮಿಯ ಮೇಲೆ. ದಿನವೂ ಎರಡು ಮೂರು ಬಾರಿ ಸ್ನಾನ ಮಾಡುವೆ. ಹೀಗೆ ಋಷಿ ವೃತ್ತಿಯನ್ನಾರಂಭಿಸಿ ಏನನ್ನು ಪ್ರಾರ್ಥಿಸುತ್ತಿರುವೆ ?

ಎರಡಾನೆಯ ಪ್ರಮಾಣದ ಶರೀರವನ್ನು ಹೊಂದಿ ಅಸಮಾನಬಲನಾದ ನೀನು ಎಂತಹ ಕಠಿಣವಾದ ಭೂಮಿಯನ್ನೂ ನೇಗಿಲಿನಿಂದ ಚೆನ್ನಾಗಿ ಭೇದಿಸುವುದರಲ್ಲಿ ಅಗ್ರಗಣ್ಯ. ಇದು ನನ್ನ ಪೂರ್ವ ಪುಣ್ಯಪರಿಪಾಕ. ನಿನ್ನನ್ನು ನೋಡುವವರು ಇದು ಭೂಮಿಯಲ್ಲಿ ಚಲಿಸುತ್ತಿರುವ ನೀಲಪರ್ವತವೋ ! ಕಾಲುಗಳುಳ್ಳ ಮೋಡವೋ ! ಎಂದು ಆಶ್ಚರ್ಯಪಡುತ್ತಾರೆ.

ಕೋಣರಾಜ ! ಪೂರ್ಣಾಯುಗಳಾಗಿರಬೇಕಾದ ಯಾವ ಪ್ರಾಣಿಗಳು ಅಪಮೃತ್ಯು ವಿನಿಂದ ಬೇಗ ಸಾಯುತ್ತವೆಯೋ, ಅವೆಲ್ಲವುಗಳ ಉಳಿದ ಆಯುಸ್ಸನ್ನೂ ನೀನು ಸೇರಿಸಿಕೊಂಡು, ದೀರ್ಘಾಯುವಾಗಿ, ದೇಹಪುಷ್ಟಿ ಪಡೆದು ನಮ್ಮನ್ನು ಕಾಪಾಡು. ನಿನ್ನ ಮಾಹಾತ್ಮ್ಯವನ್ನು ವರ್ಣಿಸಹೊರಟರೆ, ಶಬ್ದಗಳು ನಾಮುಂದು ನಾಮುಂದೆಂದು ಹೊಳೆಯುತ್ತವೆ. ಯಾವುದನ್ನು ಸ್ವೀಕರಿಸಲಿ. ಯಾವುದನ್ನು ಬಿಡಲಿ !

ಮುಂದೆ ಶ್ಲೇಷಾತ್ಮಕವಾದ 49 ಪದ್ಯಗಳಿಂದ ಕೋಣನನ್ನು ಸ್ತುತಿಸುತ್ತಾ, ಕೆಲವು ಪದ್ಯಗಳಲ್ಲಿ ಕೋಣನನ್ನು ಮಗು, ವೇದಾವಧಾನೀ, ಮಾಧ್ವಗುರು, ಯೋಗಿ, ಯಜ್ಞದೀಕ್ಷಿತ, ಇಂದ್ರ, ಮನ್ಮಥ, ಸಾಲಗ್ರಾಮ ಮೊದಲಾದವುಗಳಿಗೆ ಹೋಲಿಸಿದರೆ, ಇತರ ಪದ್ಯಗಳಲ್ಲಿ ಅಭೇದಭಾವದಿಂದ ನೀನೇ ಶ್ರೀ ವೈಷ್ಣವಾಗ್ರೇಸರ. ಪರಬ್ರಹ್ಮ, ಸಮುದ್ರ, ಹನೂಮಾನ್, ಕಾರ್ತವೀರ್ಯಾರ್ಜುನ, ಭರತಾಚಾರ್ಯ, ಮತ್ಸ್ಯಾದಿ ದಶಾವತಾರಗಳು, ವಿರೂಪಾಕ್ಷ, ಅರ್ಜುನ, ದ್ರೋಣ ಇತ್ಯಾದಿ ಸ್ವರೂಪನೆಂದು ಕೋಣನನ್ನು ಕವಿಯು ಪ್ರಶಂಸಿಸುತ್ತಾನೆ.

ಧಾತ್ರ್ಯುತ್ಸಂಗತಲೇ ವಿಮುಂಚಸಿ ಮುಹುರ್ವಿಣ್ಮೂತ್ರಮಸತ್ರಪಂ
ಧತ್ಸೇ ನಾಪ್ಯಪಲಾಲಮಾಸ್ಯಮನಿಶಂ ಸ್ನೇಹೇನ ಸಂವರ್ಧ್ಯಸೇ ।
ಶಂಖವ್ಯಾಪಿ ಪಯಃಪಿಬಸ್ಯನುದಿನಂ ತಸ್ಮಾದದಂತಂ ಮುಖೇ
ವತ್ಸ ಶ್ರೀಮಹಿಷೇಂದ್ರ ಬಾಲಕಮಿವ ತ್ವಾಂ ವೀಕ್ಷ್ಯ ನಂದಾಮ್ಯಹಂ ॥53॥

ಮಗುವು (ಧಾತ್ರೀ) ತಾಯಿಯ ಅಥವಾ ದಾದಿಯ ಮೇಲೆ ನಿರಾತಂಕವಾಗಿ ಪುನಃ ಪುನಃ ಮಲಮೂತ್ರ ವಿಸರ್ಜನೆ ಮಾಡುವಂತೆ, ನೀನು (ಧಾತ್ರೀ) ಭೂಮಿಯ ತೊಡೆಯ ಮೇಲೆ ಎಂದರೆ ಕೊಟ್ಟಿಗೆಯ ಮಧ್ಯದಲ್ಲಿಯೇ ವಿಸರ್ಜನೆ ಮಾಡುತ್ತೀಯೆ. ಮಗುವಿನ ಬಾಯಿ ಯಾವಾಗಲೂ (ಅಪಲಾಲ = ಅಪ + ಲಾಲ) ಜೊಲ್ಲಿಲ್ಲದೆ ಇರುವುದಿಲ್ಲ. ನಿನ್ನ ಬಾಯಿ ಯಾವಾಗಲೂ (ಅ + ಪಲಾಲ) ಒಣಹುಲ್ಲು ಕಡ್ಡಿ ಇಲ್ಲದೇ ಇರುವುದಿಲ್ಲ. ದಿನವೂ ಮಗು ಶಂಖದಲ್ಲಿ ತುಂಬಿರುವ (ಪಯಃ) ಹಾಲು ಕುಡಿಯುವಂತೆ ನೀನು (ಶಂಖ) ಹಣೆಯ ಮೂಲೆಯವರೆಗೂ ವ್ಯಾಪಿಸುವಂತೆ (ಪಯಃ) ನೀರು ಕುಡಿಯುವೆ. ಮಗು (ಸ್ನೇಹ) ಎಣ್ಣೆಯಿಂದ ಎಂದರೆ ಎಣ್ಣೆ ನೀರು ಹಾಕುವುದರಿಂದ ಬೆಳೆಯುವಂತೆ ನೀನು (ಸ್ನೇಹ) ಪ್ರೀತಿಯಿಂದ ಬೆಳೆಯುತ್ತೀಯೆ. ಮಗುವಿನ ಬಾಯಿಯಲ್ಲಿ (ಅದಂತ) ಹಲ್ಲಿಲ್ಲದೆ ಇರುವಂತೆ, ಬಾಯಲ್ಲಿ ಸದಾ ಅಗಿಯುತ್ತಿರುವ (ಅಂದಂತಂ ಶಬ್ದವು ತಿನ್ನು ಎಂಬ ಅರ್ಥವುಳ್ಳ ಅದ್ ಧಾತುವಿನಿಂದ ಉತ್ಪನ್ನವಾದ ಅದತ್ ಶಬ್ದದ ದ್ವಿತೀಯಾ ಏಕವಚನದ ರೂಪ) ನಿನ್ನನ್ನು ನೋಡಿ, ವತ್ಸ! ಶ್ರೀ ಮಹಿಷೇಂದ್ರ ! ಮಗುವನ್ನು ನೋಡಿದಂತೆ ನಾನು ಸಂತೋಷಪಡುತ್ತೇನೆ.

ಬ್ರೂಷೇ ತ್ವಂ ವಿವಿಧಸ್ವರಾನ್ ಬಹುವಿಧಾನ್ಕಾಂಡಾಂಶ್ಚ ಧತ್ಸೇ ಮುಖೇ
ಪ್ರಾಪ್ತಶ್ಚಾಧ್ಯಯನಂ ಪದಕ್ರಮನಿಧಿಂ ಕಿಂ ಚೋಚ್ಚರನ್ ಗಚ್ಛಸಿ ।
ಅಂಗೇಷು ಶ್ರಮಮಾದಧಾಸಿ ಬಹುಧಾ ವೃತ್ತಿಂ ಕರೋಷ್ಯನ್ವಹಂ
ತತ್ತಸ್ತ್ವಂ ಮಹಿಷಾಧಿರಾಜ ಸತತಂ ವೇದಾವಧಾನೀವ ನಃ ॥54॥

ವೇದದ ಅವಧಾನಿಯು ಉದಾತ್ತಾದಿ ವಿವಿಧ ಸ್ವರಗಳನ್ನು ಉಚ್ಚರಿಸುವಂತೆ, ನೀನು ಅನೇಕ ವಿಧವಾದ ಸ್ವರಗಳಲ್ಲಿ ಕೂಗುತ್ತೀಯೆ. ಆತ ನಾನಾ ವಿಧವಾದ (ಕಾಂಡ) ವೇದ ಭಾಗಗಳನ್ನು ಬಾಯಿಪಾಠ ಮಾಡಿರುವಂತೆ ನೀನು ಬಗೆ ಬಗೆಯ (ಕಾಂಡ) ಕಡ್ಡಿಗಳನ್ನು ಬಾಯಲ್ಲಿಟ್ಟುಕೊಂಡಿರುತ್ತೀಯೆ. ಅವಧಾನಿಯು ಅಧ್ಯಯನ ಕಾಲದಲ್ಲಿ ಪದಕ್ರಮ ಪಾಠಗಳನ್ನು ಉಚ್ಚರಿಸುವಂತೆ ನೀನು (ಅಧ್ಯಯನ = ಅಧಿ + ಅಯನ) ಮಾರ್ಗದಲ್ಲಿ (ಪದಕ್ರಮವಿಧಿಂ) ಹೆಜ್ಜೆ ಹಾಕುತ್ತಿರುವಾಗ (ಉಚ್ಚರನ್) ಮೂತ್ರಿಸುತ್ತಾ ಹೋಗುತ್ತೀಯೆ. ಅವನು ಪ್ರತಿದಿನವೂ (ಅಂಗ) ವೇದಾಂಗಗಳಾದ ಶಿಕ್ಷಾ, ವ್ಯಾಕರಣಾದಿಗಳಲ್ಲಿ ಶ್ರಮವಹಿಸಿದಂತೆ, ನೀನು (ಅಂಗ) ದೇಹದ ಅವಯವಗಳಲ್ಲಿ ಆಯಾಸ ಮಾಡಿಕೊಳ್ಳುತ್ತೀಯೆ. ಅವಧಾನಿಯು ಪ್ರತಿದಿನವೂ (ಬಹುಧಾ + ಆವೃತ್ತಿಂ) ಪುನಃ ಪುನಃ ವೇದಗಳ ಆವೃತ್ತಿ ಮಾಡುತ್ತಾನೆ. ನೀನೂ (ಬಹುಧಾ + ವೃತ್ತಿಂ) ಅನೇಕ ಬಗೆಯ ಜೀವನ ನಡೆಸುತ್ತೀಯೆ. ಆದುದರಿಂದ, ಮಹಿಷಾಧಿರಾಜ ! ನೀನು ನನಗೆ ನಿಜವಾಗಿಯೂ ಯಾವಾಗಲೂ ವೇದಾವಧಾನಿಯಂತೆ ಕಾಣಿಸುತ್ತೀಯೆ.

ತ್ವಂ ವಾಚಂಯಮತಾಂ ದಧಾಸಿ ಸಹಸೇ ಶೀತಾತಪೌ ನಿಶ್ಚಲಂ
ಕಿಂಚಿನ್ನೈವ ಚ ಯಾಚಸೇ ಭುವಿ ಯಥಾಜಾತಾತ್ಮನಾ ತಿಷ್ಠಸಿ ।
ಪ್ರಾಣಾಕರ್ಷಕೃತಾ ಯಮೇನ ನಿಯಮೇನಾರೂಢ ಏವಾಸಿ ಚ
ಪ್ರಾಯಃ ಕಾಸರಸಾರ್ವಭೌಮ ನಿತರಾಂ ಯೋಗೀವ ಸಂದೃಶ್ಯಸೇ ॥56॥

ನೀನು ಯೋಗಿಯಂತೆ ಮೌನವಾಗಿರುತ್ತೀಯೆ. ನಿಶ್ಚಲನಾಗಿ ಎಂದರೆ ಅಲುಗಾಡದೆ ಚಳಿಬಿಸಿಲುಗಳನ್ನು ಸಹಿಸುತ್ತೀಯೆ. ಏನನ್ನೂ ಬೇಡುವುದಿಲ್ಲ. ಭೂಮಿಯಲ್ಲಿ ಇದ್ದಂತೆಯೇ ಎಂದರೆ ದಿಗಂಬರನಾಗಿ ಇರುತ್ತೀಯೆ. (ಇವು ಅವಧೂತ ಲಕ್ಷಣಗಳು). ಯೋಗಿಯು (ಪ್ರಾಣಾಕರ್ಷ) ಪ್ರಾಣಾಯಾಮ ಮಾಡಿ ಯಮ (ಅಹಿಂಸಾದಿ) ನಿಯಮ (ಶೌಚಾದಿ)ಗಳಲ್ಲಿ (ಆರೂಢ) ನಿರತನಾಗಿರುವಂತೆ, ನೀನು (ಪ್ರಾಣಾಕರ್ಷಕೃತಾ) ಪ್ರಾಣಗಳನ್ನು ಎಳೆದುಕೊಂಡು ಹೋಗುವ ಯಮನಿಂದ (ನಿಯಮೇನ) ನಿಯತವಾಗಿ ಆರೂಢನಾಗಿಯೇ ಇರುತ್ತೀಯೆ. ಮಹಿಷ ಚಕ್ರವರ್ತಿಯೇ ! ಹೀಗೆ ನೀನು ಬಹುವಿಧವಾಗಿ ಯೋಗಿಯಂತೆ ಕಾಣಿಸುತ್ತೀಯೆ.

ಮೂರ್ತಿಂ ಹಂತ ಬಿಭರ್ಷಿ ನೀಲಮಸೃಣಾಂ ನಿತ್ಯಾಭಿಷಿಕ್ತಾಂ ನರೈಃ
ಗ್ರಾಹ್ಯಃ ಪಂಚಷಚಕ್ರತಃ ಕಲಯಸಿ ತ್ವಂ ಬಂಧ ಮೋಕ್ಷಾವಪಿ ।
ಸುಕ್ಷೇತ್ರ ಶ್ರಿಯಮಾದಧಾಸಿ ಮಹತಾಜ್ಞಾನೇನ ಪೂಜ್ಯೋಽಸಿ ತತ್
ಸಾಲಗ್ರಾಮ ಇವಾವಭಾಸಿ ನಿಯತಂ ಶ್ರೀ ಕಾಸರಾಧೀಶ್ವರ ॥62॥

ಸಾಲಗ್ರಾಮವು ನೀಲವರ್ಣದ (ಮಸೃಣ) ನುಣುಪಾದ ಗಟ್ಟಿಯಾದ ಮೂರ್ತಿಯನ್ನು, ಹೊಂದಿರುವಂತೆ ನೀನು ನೀಲವರ್ಣದ ಗಟ್ಟಿಯಾದ (ಮೂರ್ತಿ) ಶರೀರವನ್ನು ಹೊಂದಿರುತ್ತೀಯೆ. ಜನರು ನಿತ್ಯವೂ ಸಾಲಗ್ರಾಮಕ್ಕೆ ಅಭಿಷೇಕ ಮಾಡುವಂತೆ ನಿನ್ನನ್ನು ತೊಳೆಯುತ್ತಾರೆ. ಐದು ಅಥವಾ ಆರು ಚಕ್ರಗಳುಳ್ಳ ಸಾಲಗ್ರಾಮವು ಗ್ರಾಹ್ಯವಾಗಿರುವಂತೆ, ನೀನು ಐದಾರು ಚಕ್ರ (ನಾಣ್ಯ)ಗಳಿಂದ (ಗ್ರಾಹ್ಯ) ಕೊಳ್ಳಲ್ಪಡುತ್ತೀಯೆ. ಸಾಲಗ್ರಾಮವು (ಬಂಧ, ಮೋಕ್ಷ) ಸಂಸಾರಮೋಕ್ಷಗಳೆರಡನ್ನೂ ಉಂಟುಮಾಡುವಂತೆ ನೀನು (ಬಂಧ) ನೇಗಿಲಿಗೆ ಕಟ್ಟುವುದು (ಮೋಕ್ಷ) ಬಿಚ್ಚುವುದು ಎರಡನ್ನೂ ಹೊಂದುತ್ತೀಯೆ. ಅದು (ಸುಕ್ಷೇತ್ರ) ಅನೇಕ ದೇವತಾ ಮೂರ್ತಿರೂಪದಿಂದ ಸಂಪತ್ತನ್ನು ಕೊಡುವಂತೆ ನೀನು (ಸುಕ್ಷೇತ್ರ) ಒಳ್ಳೆಯ ಗದ್ದೆಯಲ್ಲಿ ಸಸ್ಯಶೋಭೆಯನ್ನುಂಟುಮಾಡುತ್ತೀಯೆ. ಸಾಲಗ್ರಾಮವು (ಮಹತಾ + ಜ್ಞಾನೇನ) ಉತ್ತಮಶ್ರದ್ಧೆಯಿಂದ ಪೂಜಿಸಲ್ಪಡುವಂತೆ, ನೀನು (ಮಹತಾ + ಅಜ್ಞಾನೇನ) ಬಹಳ ಮೂಢನಾಗಿರುವುದರಿಂದ (ಪೂಜ್ಯ) ಎಚ್ಚರಿಕೆಯಿಂದ ಗಮನಿಸಲ್ಪಡುತ್ತೀಯೆ. ಆದುದರಿಂದ, ಮಹಿಷರಾಜನೇ ! ನೀನು ನಿಜವಾಗಿಯೂ ಸಾಲಗ್ರಾಮದಂತೆ ಕಾಣಿಸುತ್ತೀಯೆ.

ಲೋಕಖ್ಯಾತ ಸಹಸ್ರದೋಷಮಖಿಲದ್ವೀಪೇಷು ಸಂಚಾರಿಣಂ
ಕ್ರೀಡಂತಂ ಕಿಲ ನರ್ಮದಾಂಬುನಿ ಮುದಾ ಕೀರ್ತ್ಯಾ ಸಮಾಲಿಂಗಿತಮ್ ।
ಸಮ್ಯಗ್ಭೂಷಿತ ಮಾದರಾತ್ಸದಸಿಸಂಮರ್ದೇಷ್ವಪಾಸ್ತತ್ರಸಂ
ಪ್ರಾಯಃ ಸೈರಿಭ ಮನ್ಯತೇ ಭುವಿ ಜನಸ್ತ್ವಾಂ ಕಾರ್ತವೀರ್ಯಾರ್ಜುನಮ್
॥65॥

ಲೋಕದಲ್ಲಿ ಖ್ಯಾತಿವೆತ್ತಂತೆ ಸಹಸ್ರ ಭುಜವುಳ್ಳವನು (ಭುಜ ಎಂಬರ್ಥದ ದೋಸ್ ಶಬ್ದದ ದ್ವಿತೀಯಾ ಏಕವಚನ ರೂಪ ದೋಷಂ) ಕಾರ್ತವೀರ್ಯಾರ್ಜುನ: ನೀನು ಸಹಸ್ರ ದೋಷವುಳ್ಳವನೆಂದು ಜನರಲ್ಲಿ ಪ್ರಸಿದ್ಧಿ ಪಡೆದವನು. ಅವನು ಯಜ್ಞಾರ್ಥವಾಗಿ ಸಕಲ ದ್ವೀಪಗಳಲ್ಲೂ ಸಂಚರಿಸಿದವನು. ನೀನು ನದಿಯ ಎಲ್ಲ ನಡುಗಡ್ಡೆಗಳಲ್ಲಿ ಓಡಾಡುವವನು. ಕಾರ್ತವೀರ್ಯನು ಸಂತೋಷದಿಂದ ನರ್ಮದಾನದಿಯಲ್ಲಿ ಜಲಕ್ರೀಡೆಯಾಡಿದವನು ಮತ್ತು ಕೀರ್ತಿಯಿಂದ ಕೂಡಿದವನು; ನೀನು (ನರ್ಮದ) ಸುಖ ಕೊಡುವ ನೀರಿನಲ್ಲಿ

ಪ್ರೀತಿಯಿಂದ ಹೊರಳಾಡುತ್ತಾ (ಕೀರ್ತಿ) ಕೆಸರು ಮೆತ್ತಿ ಕೊಂಡಿರುವವನು. ಅವನು (ಸಮ್ಯಕ್) ಚೆನ್ನಾಗಿ ಭೂಷಿತನಾದವನು; ನೀನು (ಸಮ್ಯಕ್, ಆದರಾತ್) ಬಹು ಆದರದಿಂದ (ಭೂ + ಉಷಿತಂ) ಭೂಮಿಯ ಮೇಲೆ ಮಲಗಿರುವವನು. ಕಾರ್ತವೀರ್ಯನು ಆದರಾತ್ ಸಂತೋಷದಿಂದ (ಸತ್ + ಅಸಿ + ಸಂಮರ್ದೇಷು) ಒಳ್ಳೆಯ ಖಡ್ಗ ಯುದ್ಧಗಳಲ್ಲಿ ನಿರ್ಭಯನಾಗಿರುವಂತೆ, ನೀನು (ಸದಸಿ) ಜನರ ಗುಂಪಿನಲ್ಲೂ (ಸಂಮರ್ದೇಷು) ಒಳ್ಳೆಯ ಖಡ್ಗ ಯುದ್ಧಗಳಲ್ಲಿ ನಿರ್ಭಯನಾಗಿರುವಂತೆ, ನೀನು (ಸದಸಿ) ಜನರ ಗುಂಪಿನಲ್ಲೂ (ಸಂಮರ್ದೇಷು) ಜಗಳವಾಡುವುದರಲ್ಲೂ ನಿರ್ಭಯನಾಗಿರುತ್ತೀಯೆ. ಆದುದರಿಂದ ಜನರು ಪ್ರಾಯಶಃ ನಿನ್ನನ್ನು ಕಾರ್ತವೀರ್ಯಾರ್ಜುನನೆಂದು ಭಾವಿಸುತ್ತಾರೆ.

ಉಲ್ಲೇಖಾನ್ ವಿವಿಧಾನ್ ಕರೋಷಿ ಚ ಪದನ್ಯಾಸಸ್ತವಾನ್ಯಾದೃಶಃ
ಪದ್ಯಾಲೋಕನ ದತ್ತದೃಷ್ಟಿರಸಿ ಚ ಪ್ರಾಯಃ ಪ್ರಬಂಧೇ ಸ್ಥಿತಃ ।
ಕೋಶಾಧಾರತಯಾ ಸ್ಥಿತಶ್ಚರಸಿ ಕಪ್ರಾಯಸ್ಥಲೇ ಸಾದರಃ
ತೇನ ಶ್ರೀಮಹಿಷಾಧಿರಾಜ ಸುಕವಿಂ ತ್ವಾಮೇವ ಮನ್ಯಾಮಹೇ ॥66॥

ಒಳ್ಳೆಯ ಕವಿಯು (ಉಲ್ಲೇಖ) ಉಲ್ಲೇಖಾಲಂಕಾರಯುಕ್ತವಾದ ಬಗೆ ಬಗೆಯ ಕಾವ್ಯಗಳನ್ನು ರಚಿಸುತ್ತಾನೆ. ನೀನು ಭೂಮಿಯಲ್ಲಿ ನೇಗಿಲಿನಿಂದ ಬಹುವಿಧವಾದ (ಉಲ್ಲೇಖ) ಸಾಲುಗಳನ್ನು ಮಾಡುತ್ತೀಯೆ. ಅವನ (ಪದನ್ಯಾಸ) ಶಬ್ದಗಳ ಜೋಡಣೆ - ವೈದರ್ಭೀ ಮೊದಲಾದ ರೀತಿ ವಿಶೇಷ - ಅಪೂರ್ವವಾದದ್ದು. ನೀನು (ಪದನ್ಯಾಸ) ಹೆಜ್ಜೆ ಇಡುವ ಬಗೆ ವಿಜಾತೀಯ. ಕವಿಯು (ಪದ್ಯ + ಆಲೋಕನ) ಪದ್ಯವನ್ನು ಆಲೋಚಿಸುವುದರಲ್ಲಿ ಗಮನವಿಡುತ್ತಾನೆ. ನೀನು (ಪದ್ಯ + ಆಲೋಕನ) ನಡೆಯುವಾಗ, ದಾರಿಯನ್ನು, ತಿನ್ನುವ ಪದಾರ್ಥಕ್ಕಾಗಿ ನೋಡುತ್ತಲೇ ಹೋಗುತ್ತೀಯೆ. ಕವಿಯು ಬಹಳ ಕಾಲ (ಪ್ರಬಂಧೇ) ಗ್ರಂಥ ರಚನೆಯಲ್ಲಿ ಮಗ್ನನಾಗಿರುತ್ತಾನೆ. ನೀನು ಸಾಮಾನ್ಯವಾಗಿ (ಪ್ರಬಂಧೇ) ಬಂಧನದಲ್ಲಿ ಎಂದರೆ ಕಟ್ಟಿಸಿಕೊಂಡೇ ಇರುತ್ತೀಯೆ. ಅವನ ಕೋಶಗಳನ್ನು ಆಧಾರವಾಗಿ ಇಟ್ಟುಕೊಂಡಿರುತ್ತಾನೆ. ಮತ್ತು (ಚ + ರಸಿಕಪ್ರಾಯಸ್ಥಲೇ) ರಸಿಕರಿಂದ ತುಂಬಿದ ಸ್ಥಳದಲ್ಲಿ ಅವನಿಗೆ ಆದರ; ನೀನು (ಕೋಶ) ಉಗ್ರಾಣಕ್ಕೆ ಮೂಲಕಾರಣನಾಗಿ (ಸ್ಥಿತಃ + ಚರಸಿ) ಇದ್ದು ಆಹಾರವನ್ನು ತಿನ್ನುತ್ತೀಯೆ ಮತ್ತು (ಕಪ್ರಾಯಸ್ಥಲೇ) ನೀರು ಹೆಚ್ಚಾಗಿರುವ ಸ್ಥಳದಲ್ಲಿ ನಿನಗೆ ಆದರ. ಆದುದರಿಂದ ಶ್ರೀ ಮಹಿಷಾಧಿರಾಜ ! ನೀನೇ ಸತ್ಕವಿಯೆಂದು ಭಾವಿಸುತ್ತೇನೆ.

ನಿರ್ಧೂನೋಷಿ ಲಸತ್ತಮಂ ಗುರುಮುದೇ ಸ್ವೀಯಾಂ ಮಹಾರೇಣುಕಾಂ
ರೂಢಂ ರೂಢ ಮಶೇಷ ಮರ್ಜುನಕುಲಂ ಚಾ ಮೂಲ ಮುನ್ಮೂಲಯನ್ ।

ಕೀಲಾಲೈರ್ಭರಿತೇಷು ವಿಸ್ತೃತಸರಸ್ಸ್ವಮಜ್ಜ ಸಂತುಷ್ಟಧೀಃ
ಧತ್ಸೇ ಭಾರ್ಗವರಾಮಸಾಮ್ಯಮಧುನಾ ಶ್ರೀ ಮನ್ಮಹಾ ಸೈರಿಭ ॥74॥

(ಗುರುಮುದೇ) ತಂದೆಯ ಸಂತೋಷಕ್ಕಾಗಿ (ಲಸತ್ತನುಂ) ದೇಹಕಾಂತಿಯುತಳಾದ ತನ್ನ ತಾಯಿ ರೇಣುಕಾ ದೇವಿಯನ್ನು (ನಿರ್ಧೂನನ = ನಾಶ) ಕೊಂದವನು ಪರಶುರಾಮ. ನೀನು (ಮಹಾರೇಣುಕಾ ಲಸತ್ತನುಂ) ತುಂಬ ಧೂಳಿನ ಕಣಗಳಿಂದ ಶೋಭಿಸುತ್ತಿರುವ ನಿನ್ನ ದೇಹವನ್ನು (ಗುರುಮುದೇ) ಅತಿ ಸಂತೋಷ ಹೊಂದಲು (ನಿರ್ಧೂನೋಷಿ) ಕೊಡಹುವೆ. ಪರಶುರಾಮನು (ಅರ್ಜುನಕುಲಂ) ಕಾರ್ತವೀರ್ಯಾರ್ಜುನನ ವಂಶವನ್ನು ಹುಟ್ಟು ಹುಟ್ಟುತ್ತಿದ್ದಂತೆಯೇ ನಿರ್ಮೂಲ ಮಾಡಿದನು. ನೀನು (ಅರ್ಜುನಕುಲಂ) ಹುಲ್ಲನ್ನೆಲ್ಲ, ಅದು ಬೆಳೆಯುತ್ತಿದ್ದಂತೆಯೇ ಬುಡಸಹಿತ ಕೀಳುತ್ತೀಯೆ. ಪರಶುರಾಮನು (ಕೀಲಾಲ) ರಕ್ತದಿಂದ ತುಂಬಿದ ಮಹಾಸರೋವರದಲ್ಲಿ ಮಿಂದು ಮನಸ್ಸಿಗೆ ತೃಪ್ತಿ ಹೊಂದಿದನು. ನೀನು (ಕೀಲಾಲ) ನೀರಿನಿಂದ ತುಂಬಿದ ದೊಡ್ಡ ಕೆರೆಗಳಲ್ಲಿ ಮುಳುಗಿ ತೃಪ್ತಿ ಪಡುತ್ತೀಯೆ. ಶ್ರೀ ಮಹಾಸೈರಿಭ ! ಹೀಗೆ ನೀನು ಪರಶುರಾಮನಿಗೆ ಸಮಸಾಗಿರುವೆ.

ವೇಗಾದರ್ಜುನಮೇವ, ಧಾವತಿ ದೃಢಂ ತ್ವಂ ಕಾಲಪೃಷ್ಠಂ ವಹನ್
ಭೀಮಂ ಮುಂಚಸಿ ಕಿಂ ಚ ಭೂರಿನಿನದಂ ಧತ್ಸೇಽಙ್ಗಲಕ್ಷ್ಮೀಂ ಸ್ಥಿರಾಮ್ ।
ವಾಹಿನ್ಯಾಂ ಪ್ರಸಭಂ ಪ್ರವಿಶ್ಯ ಕುರುಷೇ ಕ್ಷೋಭಂ ಪ್ರತಾಪಾನ್ವಿತಃ
ತಸ್ಮಾತ್ಕರ್ಣ ಇವಾಂಗಸೈರಿಭಪತೇ ಕಾಮಾನವಸ್ಯರ್ಥಿನಾಮ್ ॥84॥

ಕರ್ಣನು ದೃಢವಾದ ಕಾಲಪೃಷ್ಠವೆಂಬ ತನ್ನ ಧನುಸ್ಸನ್ನು ಹಿಡಿದು ವೇಗದಿಂದ, ಅರ್ಜುನನ ಕಡೆಗೇ ಓಡಿದನು; ಆದರೆ (ಭೂರಿನಿನದಂ) ಬಹುಗರ್ಜಿಸುತ್ತಿದ್ದ ಭೀಮನನ್ನು ಬಿಟ್ಟನು. ನೀನು (ಅರ್ಜುನ ಮೇವ) ಹುಲ್ಲಿನ ಕಡೆಗೇ ಬೇಗ ಓಡುತ್ತೀಯೆ. (ಕಾಲ) ಯಮನನ್ನು (ಪೃಷ್ಠ) ಬೆನ್ನಿನ ಮೇಲೆ ದೃಢವಾಗಿ ಕುಳ್ಳಿರಿಸಿಕೊಂಡು (ಭೀಮಂ) ಭಯಂಕರವಾದ [ಭೂರಿನಿನದಂ ಮುಂಚಸಿ] ಮಹಾಶಬ್ದವನ್ನು ಮಾಡುತ್ತೀಯೆ. ಅವನು ಸ್ಥಿರವಾದ ಅಂಗರಾಜ್ಯ ಲಕ್ಷ್ಮಿಯನ್ನು ಹೊಂದಿದ್ದರೆ, ನೀನು ಅಂಗಶೋಭೆಯನ್ನು ಹೊಂದಿರುವೆ. ಪ್ರತಾಪಶಾಲಿಯಾದ ಕರ್ಣನು [ವಾಹಿನ್ಯಾಂ] ಸೇನೆಯಲ್ಲಿ ಹಠಾತ್ತನೆ ಪ್ರವೇಶಿಸಿ ಕಳವಳವನ್ನುಂಟು ಮಾಡಿದನು. ನೀನು [ಪ್ರತಾಪಾನ್ವಿತಃ] ಸೂರ್ಯನ ತಾಪದಿಂದ ಬಹುಕಂದಿ [ವಾಹಿನ್ಯಾಂ] ನದಿಯಲ್ಲಿ ವೇಗದಿಂದ ನುಗ್ಗಿ [ಕ್ಷೋಭಂ ಕುರುಷೇ] ಬಗ್ಗಡವನ್ನು ಉಂಟು ಮಾಡುತ್ತೀಯೆ. [ಅಂಗ] ಎಲೈ ! ಮಹಿಷರಾಜ ! ಹೀಗೆ ಕರ್ಣನಂತಿರುವ ನೀನು, ಅವನು ತನ್ನನ್ನು ಯಾಚಿಸಿದವರ ಕೋರಿಕೆಗಳನ್ನು ಈಡೇರಿಸಿದಂತೆ, ಧನಾರ್ಥಿಗಳಾದ ಕೃಷಿಕರ ಆಶೆಗಳನ್ನು ಪೂರೈಸುವೆ.

ಸೂತ್ರಾಣಿ ಪ್ರಸಭಂ ಮಹಾಪ್ರತಿಭಯೋತ್ಸಾಹೇನ ಯತ್ ಖಂಡಯನ್
ಧಾಟ್ಯಾವಾಙ್ಮುಖ ಏವ ಚಾಧಿಕರಣ ಪ್ರೌಢಿಂ ಪರಾಂ ದರ್ಶಯನ್ ।
ಸಂಘರ್ಷೇ ಸತಿ ಬಾಡವೈರ್ವಿಜಯಿತಾಂ ಸಿದ್ಧಾಂತತೋ ಗಾಹಸೇ
ತೇನ ತ್ವಂ ಮಹಿಷಕ್ಷಿತೀಶ್ವರ ಮಹಾಮೀಮಾಂಸಕಾಗ್ರೇಸರಃ ॥92॥

ಮೀಮಾಂಸಾ ಶಾಸ್ತ್ರಜ್ಞನು (ಸೂತ್ರಾಣಿ) ಕಲ್ಪಸೂತ್ರಗಳನ್ನು (ಮಹಾಪ್ರತಿಭಯಾ + ಉತ್ಸಾಹೇನ), ಮಹಾ ಪ್ರತಿಭೆಯಿಂದಲೂ ಉತ್ಸಾಹದಿಂದಲೂ ಬಲವಾಗಿ ಖಂಡಿಸುತ್ತಾನೆ. ನೀನು (ಸೂತ್ರಾಣಿ) ಕಟ್ಟಿದ ಹಗ್ಗಗಳನ್ನು ಬಲಾತ್ಕಾರವಾಗಿ (ಮಹಾ + ಅಪ್ರತಿಭಯಃ + ಉತ್ಸಾಹೇನ) ಅತಿ ನಿರ್ಭಯವಾಗಿ ಉತ್ಸಾಹದಿಂದ ಕೀಳುತ್ತೀಯೆ. ಆ ಶಾಸ್ತ್ರಜ್ಞನು (ಧಾಟ್ಯಾ) ಶಬ್ದೋಚ್ಚಾರಣೆಯ ವೇಗದಿಂದ (ವಾಙ್ಮುಖ ಏವ) ಬಾಯಿ ಮಾತಿನಿಂದಲೇ — ಎಂದರೆ ಪುಸ್ತಕವನ್ನು ಬಿಚ್ಚಿ ನೋಡುವ ಅವಶ್ಯಕತೆ ಇಲ್ಲದೆ — ಆ ಶಾಸ್ತ್ರದ ಅಧಿಕರಣಗಳನ್ನು ಅರ್ಥೈಸುವುದರಲ್ಲಿ ಅವನ ಅತಿಶಯವಾದ ವಿದ್ವತ್ತೆಯನ್ನು ಪ್ರದರ್ಶಿಸುತ್ತಾನೆ; ನೀನು (ಧಾಟ್ಯಾ) ವೇಗದಿಂದ (ಅವಾಙ್ಮುಖ ಏವ) ಮುಖವನ್ನು ತಗ್ಗಿಸಿಕೊಂಡೇ (ಅಧಿಕ + ರಣ) ದೊಡ್ಡ ಜಗಳದಲ್ಲಿ ನಿನ್ನ ಹೆಚ್ಚಳವನ್ನು ತೋರಿಸುತ್ತೀಯೆ. ಅವನು (ಬಾಡವೈಃ) ಬ್ರಾಹ್ಮಣರೊಡನೆ (ಸಂಘರ್ಷೇ ಸತಿ) ವಾದಮಾಡಬೇಕಾದಾಗ ತನ್ನ ಸಿದ್ಧಾಂತವನ್ನು ಸ್ಥಾಪಿಸಿ ಜಯಹೊಂದುತ್ತಾನೆ. ನೀನು (ವಾಡವೈಃ) ಕುದುರೆಗಳೊಡನೆ (ಸಂಘರ್ಷೇ ಸತಿ) ಹೋರಾಡಬೇಕಾದಾಗ ಅವರ (ಸಿದ್ಧ + ಅಂತ) ನಾಶವನ್ನು ಸಾಧಿಸಿಯೇ ಗೆಲ್ಲುತ್ತೀಯೆ. ಆದುದರಿಂದ ಮಹಿಷಭೂಪತಿಯೆ ! ನೀನು ಮಹಾಮೀಮಾಂಸಕರಲ್ಲಿ ಅಗ್ರಗಣ್ಯನಾಗಿರುವೆ.

ಸುಗ್ರೀವೋಽಸಿ ಮಹಾನ್ ಗಜೋಽಸಿ ವಪುಷಾ ನೀಲಃ ಪ್ರಮಾಥೀ ತಥಾ
ಧೂಮ್ರಶ್ಚಾಸಿ ಮಹಾನುಭಾವ ಮಹಿಷ ತ್ವಂ ದುರ್ಮುಖಃ ಕೇಸರೀ ।
ಇತ್ಥಂ ತೇ ಸತತಂ ಮಹಾಕಪಿಶತಾಕಾರಸ್ಯ ಸಾಹಾಯ್ಯತಃ
ಸೀತಾಂ ಪ್ರಾಪ್ಯ ವಿಲಂಘ್ಯ ದುಃಖ ಜಲಧಿಂ ನಂದಾಮಿ ರಾಮಸ್ತ್ವಯಮ್ ॥100॥

ಮಹಾನುಭಾವನಾದ ಕೋಣನೇ ! ನೀನು (ಸುಗ್ರೀವ) — ಚೆನ್ನಾದ ಬಲವಾದ ತಾಕತ್ತುಳ್ಳವನು. (ವಪುಷಾ) ದೇಹಪ್ರಮಾಣದಲ್ಲಿ, (ಮಹಾನ್ ಗಜಃ) — ದೊಡ್ಡ ಆನೆಯಂತಿರುತ್ತೀಯೆ; (ನೀಲ) — ನಿನ್ನದು ಕೃಷ್ಣ ವರ್ಣ; ನೀನು (ಪ್ರಮಾಥೀ) — ಮೇಲೆ ಬೀಳುವ ಸ್ವಭಾವದವನು; (ಧೂಮ್ರ) — ಕೆಸರು ಮೆತ್ತಿಕೊಂಡಿರುವಾಗ ನಿನ್ನದು ಧೂಮ್ರವರ್ಣ. ನೀನು (ದುರ್ಮುಖ) — ವಿಕಾರವಾದ ಮುಖವುಳ್ಳವನು; (ಕೇಸರೀ) — ತುಂಬ ಕೂದಲುಳ್ಳವನು. ಹೀಗೆ ಅನೇಕ ಕಪಿ ನಾಯಕ ಸ್ವರೂಪಿಯಾದ ನಿನ್ನ ಸತತವಾದ ಸಹಾಯದಿಂದ, ನಾನು (ಸೀತಾಂ) ಉತ್ತು ಹದ ಮಾಡಿದ ಭೂಮಿಯನ್ನು

ಹೊಂದಿ, ದುಃಖ ಸಮುದ್ರವನ್ನು ದಾಟಿ (ಸ್ವಯಂ ರಾಮಃ) ಆನಂದಶೀಲನಾಗಿ ತೃಪ್ತನಾಗುತ್ತೇನೆ.

ಇದು ನೂರನೆಯ ಪದ್ಯ. ಮುಂದಿನ ಎರಡು ಪದ್ಯಗಳಲ್ಲಿ ಕವಿಯು, ಪ್ರತಾಪವೇ ಮೂರ್ತಿವೆತ್ತಂತಿರುವ ಪ್ರತಾಪಸಿಂಹರಾಜನು ಶತ್ರುಗಳನ್ನು ಜಯಿಸಿ, ಪ್ರಜಾನುರಾಗಿಯೂ, ಅರೋಗ ದೃಢಕಾಯನೂ ದೀರ್ಘಾಯುವೂ ಆಗಲೆಂದು ಹರಸಿ, ರಾಜನೂ ಆತನ ಸನ್ಮಂತ್ರಿಗಳೂ ಪ್ರಜೆಗಳೂ ಪಶುಗಳೂ ಸುಖವಾಗಿರಲೆಂಬ ಮಂಗಳಾಶಾಸನದಿಂದ ಕಾವ್ಯವನ್ನು ಮುಗಿಸಿರುತ್ತಾನೆ.

ವ್ಯಾಖ್ಯಾನಕಾರನ ಪರಿಚಯ : ಶ್ಲೇಷಾರ್ಥಚಂದ್ರಿಕಾ ವ್ಯಾಖ್ಯಾನಕಾರನು, ವ್ಯಾಖ್ಯಾನದ ಆರಂಭದಲ್ಲಿ ತಾನು ಗ್ರಂಥಕಾರನ ಮರಿಮಗ (ಪ್ರಪೌತ್ರ)ನೆಂದೂ ಮಾಧವಾರ್ಯನ ಪೌತ್ರನೆಂದೂ ನರಸಿಂಹನ ಪುತ್ರನೆಂದೂ ಹೇಳಿಕೊಂಡಿದ್ದಾನೆ. ಇವನ ಹೆಸರೂ ವಾಂಛೇಶ್ವರ. ಈತನು ತನ್ನ ತಂದೆಯ ಬಳಿಯಲ್ಲಿಯೇ ವೇದ, ಸಾಹಿತ್ಯ, ವ್ಯಾಕರಣಾದಿಗಳನ್ನು ಕಲಿತು, ಬಹುಶಃ ತನ್ನ ಊರಾದ ತಿರುವಿಶಲೂರಿನ ನಿವಾಸಿಗಳೇ ಆದ ಈಶ್ವರ ಶಾಸ್ತ್ರಿಗಳಿಂದ ಮೀಮಾಂಸಾ ಶಾಸ್ತ್ರವನ್ನೂ, ಬಂಗಾಳದ ನವದ್ವೀಪಕ್ಕೆ ಹೋಗಿ ತತ್ತ್ವಚಿಂತಾಮಣಿ, ಗದಾಧರೀಯಾದಿ ಗ್ರಂಥಗಳಲ್ಲಿ ಪಾಂಡಿತ್ಯವನ್ನೂ ಪಡೆದು ಸ್ವಗ್ರಾಮಕ್ಕೆ ಹಿಂದಿರುಗಿದ್ದ ಮಣಲೂರ್ ಶ್ರೀನಿವಾಸಾಚಾರ್ಯರಿಂದ ನವ್ಯನ್ಯಾಯವನ್ನೂ ಅಧ್ಯಯನ ಮಾಡಿದನು. ಆ ಸಮಯದಲ್ಲಿ ತಂಜಾವೂರಿನ ಅಮರಸಿಂಹರಾಜನು ತಿರುವಿಶಲೂರಿನ ಸಮೀಪದಲ್ಲಿರುವ ಮಧ್ಯಾರ್ಜುನ ಕ್ಷೇತ್ರದಲ್ಲಿ (ಈಗಿನ ತಿರುವಿಡಮರುದೂರ್) ಕೆಲಕಾಲದಿಂದ ವಾಸಿಸುತ್ತಿದ್ದನು. ರಾಜನ ಆಸ್ಥಾನಕ್ಕೆ ವಂಗದೇಶದ ಒಬ್ಬ ನ್ಯಾಯಶಾಸ್ತ್ರ ಪಂಡಿತನು ಬಂದು, ತತ್ತ್ವಚಿಂತಾಮಣಿ, ಗದಾಧರೀಯಗಳನ್ನನುಸರಿಸಿ ಪೂರ್ವಪಕ್ಷವನ್ನು ಮಂಡಿಸಿ ಆಸ್ಥಾನ ಪಂಡಿತರನ್ನು ವಾದಕ್ಕೆ ಕರೆದನು. ಆದರೆ ಆಗ ನವ್ಯನ್ಯಾಯವು ದಕ್ಷಿಣದಲ್ಲಿ ಪ್ರಚಾರ ಪಡೆದಿರಲಿಲ್ಲವಾದುದರಿಂದ ಪಂಡಿತರು ವಾದ ಮಾಡಲು ಹಿಂಜರಿದರು. ಇದರಿಂದ ರಾಜನು ಖಿನ್ನನಾಗಿರುವಾಗ, ತರುಣ ವಾಂಛೇಶ್ವರನು ಮುಂದೆ ಬಂದು ವಂಗಪಂಡಿತನೊಡನೆ ವಾದ ಮಾಡಿ ಗೆದ್ದನು. ಸಂತೋಷಪಟ್ಟ ರಾಜನು ಈ ವಾಂಛೇಶ್ವರನನ್ನು 'ಚಿಂತಾಮಣಿಕುಟ್ಟಿ' ಎಂದು ಶ್ಲಾಘಿಸಿ ಅವನಿಗೆ ಸನ್ಮಾನ ಮಾಡಿದನು.

1798ರಲ್ಲಿ ಅಮರಸಿಂಹನ ಅಣ್ಣನ ದತ್ತಪುತ್ರನಾದ ಎರಡನೆಯ ಶರಭೋಜ ರಾಜನಾದನು. ಅವನ ಕಾಲದಲ್ಲಿ ವಾಂಛೇಶ್ವರನು ಕುಟ್ಟಿಶಾಸ್ತ್ರಿಗಳೆಂದು ಪ್ರಸಿದ್ಧಿ ಪಡೆದು ತಂಜಾವೂರಿನ ಸಮೀಪದಲ್ಲಿನ ಮುಕ್ತಾಂಬಾ ಅಗ್ರಹಾರ ಅಥವಾ ಓರತ್ತನಾಡು ಗ್ರಾಮದಲ್ಲಿದ್ದ ಪಾಠಶಾಲೆಯಲ್ಲಿ ಅಧ್ಯಾಪಕನಾದನು.

ಪತ್ನೀವಿಯೋಗದಿಂದ ನಿರ್ವಿಣ್ಣರಾಗಿದ್ದ ಶಾಸ್ತ್ರಿಗಳು, ಒಮ್ಮೆ ರಾಜನ ನಡವಳಿಕೆಯಿಂದ ಬೇಸರಗೊಂಡು, ಇನ್ನು ಈ ರಾಜಾಶ್ರಯ ಸಾಕೆಂದು — ಅವರ 'ಕತೀಂದ್ರಯಾಮಃ ಕತಿಚಂದ್ರಯಾಮಃ ಚಂಡಂ ಪುನಃ ಪೂರಯಿತುಂ ಪಿಚಂಡಂ' (ಎಷ್ಟು ಜನರನ್ನು, ಈ ಪ್ರಚಂಡನಾದ ಹೊಟ್ಟೆಗಾಗಿ, ಇಂದ್ರಚಂದ್ರರ ಪಟ್ಟಕ್ಕೇರಿಸಲಿ) ಎಂಬ ಶ್ಲೋಕಖಂಡ ಉಳಿದು ಬಂದಿದೆ — ಕಾಶಿಗೆ ಹೊರಟರು.

ಹೈದರನ ಕಾಲದಲ್ಲಿ ಬಹು ಗೌರವ ಪಡೆದು ಶ್ರೀ ರಂಗಪಟ್ಟಣದಲ್ಲಿದ್ದ ಅಹೋಬಲ ಪಂಡಿತರೆಂಬ ವಿದ್ವದ್ವರೇಣ್ಯರು, ಟೀಪುಸುಲ್ತಾನನ ಕಾಲದಲ್ಲಿ ಆ ಊರನ್ನು ತ್ಯಜಿಸಿ, ಕಾಶಿಯಲ್ಲಿ ನೆಲೆಸಿದ್ದರು. ಕುಟ್ಟಿಶಾಸ್ತ್ರಿಗಳು ಅವರಲ್ಲಿ ವೇದಾಂತದ ಪ್ರೌಢ ವ್ಯಾಸಂಗ ಮಾಡಿ, ಶಿಷ್ಯರಿಗೆ ಪಾಠ ಹೇಳುತ್ತಾ, ಕೆಲಕಾಲ ಕಾಶಿಯಲ್ಲಿದ್ದರು. ತಮ್ಮ 20ನೆಯ ವಯಸ್ಸಿನಲ್ಲಿ ಸಂನ್ಯಾಸ ಸ್ವೀಕಾರ ಮಾಡಿ 1817ರಿಂದ 1879ರವರೆಗೆ ಶೃಂಗೇರಿಯ ಪೀಠಾಧಿಪತಿಗಳಾಗಿದ್ದ ಜಗದ್ಗುರು ನೃಸಿಂಹ ಭಾರತಿ ಸ್ವಾಮಿಗಳು, ತಮ್ಮ ಪೂರ್ವಾಶ್ರಮದಲ್ಲಿ ಕಾಶಿಯಲ್ಲಿ ಕುಟ್ಟಿಶಾಸ್ತ್ರಿಗಳ ಶಿಷ್ಯರಾಗಿದ್ದರು. ಈ ವಿವರಗಳು ಶಾಸ್ತ್ರಿಗಳ ವಂಶಜರಿಂದ ತಿಳಿದು ಬಂದಿವೆ.

ಕೆಲವು ಕಾಲದ ನಂತರ ಕಾಶಿಯಿಂದ ಹಿಂದಿರುಗುವಾಗ ಶಾಸ್ತ್ರಿಗಳು ಪುಣೆಯಲ್ಲಿ 1818ರವರೆಗೆ ಇದ್ದರು. ಅಲ್ಲಿನ ಪಟ್ವರ್ಧನ ಸರ್ದಾರರ ಅಪೇಕ್ಷೆಯಂತೆ ಹಿರಣ್ಯಕೇಶೀ ಸೂತ್ರವ್ಯಾಖ್ಯಾನವನ್ನು ಬರೆಯಲು ಹಿಂದೆಯೇ ಆರಂಭಿಸಿದ್ದರು. ಅದರ ಪ್ರಾರಂಭಶ್ಲೋಕಗಳಲ್ಲೊಂದರಲ್ಲಿ ಶಾಲಿವಾಹನಶಕ 1738ರಲ್ಲಿ (ಕ್ರಿ.ಶ. 1816) ವ್ಯಾಖ್ಯಾನಾರಂಭ ಮಾಡಿದಂತೆ ಹೇಳಿದ್ದಾರೆ. ಈ ಗ್ರಂಥದ ಮೂಲ ಹಸ್ತಪ್ರತಿ ಪುಣೆಯ ಭಂಡಾರಕರ ಸಂಸ್ಥೆಯ ಗ್ರಂಥಾಲಯದಲ್ಲಿದೆ. ಲಿಪಿಕಾರ ಪೀತಾಂಬರ ಎಂಬಾತ. ಸಾಕ್ಷಾತ್ ವ್ಯಾಸಸ್ವರೂಪರಾದ ವಾಂಛೇಶ್ವರ ಶಾಸ್ತ್ರಿಗಳ ಮುಖದಿಂದ ಗ್ರಂಥ ಹೊರಹೊಮ್ಮುತ್ತಿದ್ದಂತೆಯೇ ತಾನು ಬರೆದು ಕೊಂಡಂತೆಯೂ, ಗ್ರಂಥ ಶಕೆ 1750 (ಕ್ರಿ.ಶ. 1828)ರಲ್ಲಿ ಪೂರ್ಣವಾಯಿತೆಂದೂ ಹೇಳಿದ್ದಾನೆ.[14]

ಶ್ಲೇಷಾರ್ಥಚಂದ್ರಿಕಾವ್ಯಾಖ್ಯಾನ, ಹಿರಣ್ಯಕೇಶೀ ಸೂತ್ರವ್ಯಾಖ್ಯಾನಗಳನ್ನಲ್ಲದೆ, ಶಾಸ್ತ್ರಿಗಳು ದತ್ತಚಿಂತಾಮಣಿ, ಮಲಮಾಸನಿರ್ಣಯ, ಶ್ರಾದ್ಧಚಿಂತಾಮಣಿ ಎಂಬ ಮೂರು

14. Annals of the Bhandarkar Oriental Research Institute (ABORI) — Vol. XX (1938-39) Pages 9-20. Vancheswara alias Kuttikavi and his contact with the Patwardhan Sardars of the Southern Maratha Country ಎಂಬ P. K. Gode ಯವರ ಲೇಖನ.

ಧರ್ಮಶಾಸ್ತ್ರ ಗ್ರಂಥಗಳನ್ನು ಕಾಕತಾಲೀಯವಾದಾರ್ಥ, ತರ್ಕಸಂಗ್ರಹ ವ್ಯಾಖ್ಯಾ ಎಂಬ ಎರಡು ನ್ಯಾಯಶಾಸ್ತ್ರ ಗ್ರಂಥಗಳನ್ನೂ ಧೂರ್ಗಾನ ಚಂದ್ರಿಕಾ, ಬ್ರಹ್ಮಸೂತ್ರಾರ್ಥ ಚಿಂತಾಮಣಿ, ಭಾಟ್ಟ ಚಿಂತಾಮಣಿ (ಪೂರ್ವ ಮೀಮಾಂಸಾಗ್ರಂಥ) ಮಹಾಲಿಂಗ ಶತಕಗಳನ್ನೂ ಬರೆದಿದ್ದಾರೆ.

ಪುಣೆಯಿಂದ ಹಿಂದಿರುಗಿದ ಮೇಲೆ ಶಾಸ್ತ್ರಿಗಳು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ ಅಪೇಕ್ಷೆಯಂತೆ, ಅವರ ಆಸ್ಥಾನದಲ್ಲಿ ಧರ್ಮಾಧಿಕಾರಿಗಳಾಗಿದ್ದರು. ಶಾಸ್ತ್ರಿಗಳ ದ್ವಿತೀಯ ಪತ್ನಿಯಲ್ಲಿ ಸ್ವಾಮಿ ಶಾಸ್ತ್ರಿ, ನರಸಿಂಹ ಶಾಸ್ತ್ರಿ ಮತ್ತು ಕಾಮಾಕ್ಷೀ ಎಂಬ ಮೂವರು ಮಕ್ಕಳಾದರು. ಸ್ವಾಮಿ ಶಾಸ್ತ್ರಿಗಳು ತಮ್ಮ ತಂದೆ ರಚಿಸಿದ ಭಾಟ್ಟ ಚಿಂತಾಮಣಿಯಲ್ಲಿ ಅಲ್ಲಲ್ಲಿ ಕೆಲವು ಭಾಗಗಳನ್ನು ವಿಸ್ತರಿಸಿದ್ದಾರೆ. ನರಸಿಂಹ ಶಾಸ್ತ್ರಿಗಳು ಮುಮ್ಮಡಿ ಕೃಷ್ಣರಾಜ, ಚಾಮರಾಜ ಮತ್ತು ನಾಲ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಗಳಲ್ಲಿ 1913ರವರೆಗೆ ಧರ್ಮಾಧಿಕಾರಿಗಳಾಗಿದ್ದರು.

ಕುಟ್ಟಿಶಾಸ್ತ್ರಿಗಳ ದೌಹಿತ್ರ [ಮಗಳ ಮಗ] ಮಹಾಮಹೋಪಾಧ್ಯಾಯ ತಿರುವಿಶಲೂರ್ ವೆಂಕಟಸುಬ್ಬ ಶಾಸ್ತ್ರಿಗಳು [1864-1928] ಮದರಾಸು ಸಂಸ್ಕೃತ ಮಹಾಪಾಠ ಶಾಲೆಯಲ್ಲಿ ಅಧ್ಯಾಪಕರೂ ಅನಂತರ ಅಧ್ಯಕ್ಷರೂ ಆಗಿದ್ದರು.[15] ಇವರು ತಮ್ಮ ಮಾತಾಮಹರ ಭಾಟ್ಟ ಚಿಂತಾಮಣಿಯನ್ನು ಸಂಪಾದಿಸಿ ಮುದ್ರಣಕ್ಕೆ ಸಿದ್ಧಪಡಿಸಿದರು. ಇವರು ದಿವಂಗತರಾದ ಕೆಲವು ತಿಂಗಳ ನಂತರ ಇದರ ಮೊದಲನೆಯ ಸಂಸ್ಕರಣವಾಗಿ, ಮೊದಲನೆಯ ಅಧ್ಯಾಯ ಮಾತ್ರ 1928ರಲ್ಲಿ ಪ್ರಕಟವಾಯಿತು. 1934ರಲ್ಲಿ ಮೂರನೆಯ ಅಧ್ಯಾಯದ ಮೂರನೆಯ ಪಾದಪರ್ಯಂತವಾದ ದ್ವಿತೀಯ ಸಂಸ್ಕರಣ ಹೊರಬಂತು. ಇದನ್ನು ವಿಮರ್ಶಿಸುತ್ತಾ ಪಿ. ಕೆ. ಗೋಡೆ ಎಂಬ ವಿದ್ವಾಂಸರು, ಭಾಟ್ಟ ದೀಪಿಕೆಯ ಮತ್ತೊಂದು ವ್ಯಾಖ್ಯಾನವಾದ ಭಾಸ್ಕರರಾಯನ ಭಾಟ್ಟ ಚಂದ್ರಿಕೆಯನ್ನು ಈ ವ್ಯಾಖ್ಯಾನ ಅನುಸರಿಸಿದ್ದರೂ, ಇದರಲ್ಲಿ ಅನೇಕ ವಿಶೇಷ ವಿಷಯಗಳಿವೆಯೆಂದೂ ಇದರ ಶೈಲಿ ಪ್ರಸನ್ನವಾಗಿದ್ದು ಭಾಷೆ ಸಾಧ್ಯವಾದಷ್ಟು ಮಟ್ಟಿಗೂ ಸುಲಭವಾಗಿದೆಯೆಂದೂ ಹೇಳಿದ್ದಾರೆ.

ಗೋಡೆಯವರು ಈ ವ್ಯಾಖ್ಯಾನದ ಮುದ್ರಿತ ಭಾಗದಲ್ಲಿ — 12 ಅಧ್ಯಾಯಗಳ ವ್ಯಾಖ್ಯಾನದಲ್ಲಿ ಮುದ್ರಿತವಾಗಿರುವುದು ಸುಮಾರು ಕಾಲುಭಾಗ ಮಾತ್ರವಿರಬಹುದು — ಉದಾಹೃತವಾದ ಗ್ರಂಥ ಮತ್ತು ಗ್ರಂಥಕಾರರ ಹೆಸರುಗಳನ್ನು ಪಟ್ಟಿ ಮಾಡಿದ್ದಾರೆ. ಈ

15. Bhattachintamani, a commentary on Khandadeva's Bhatta Deepika (Madras 1928) ಎಂಬ ಗ್ರಂಥದ ಪೀಠಿಕೆಗಳಲ್ಲಿ ಅದುವರೆಗೆ ದೊರೆತಿದ್ದ ಭಾಟ್ಟದೀಪಿಕಾ ವ್ಯಾಖ್ಯಾನಗಳಲ್ಲಿ ಇದೊಂದೇ ಪೂರ್ಣವಾದ ವ್ಯಾಖ್ಯಾನವೆಂದು ಪ್ರಕಾಶಕರು ಹೇಳಿದ್ದಾರೆ.

ಪಟ್ಟಿಯಲ್ಲಿ 150 ಹೆಸರುಗಳಿವೆ. (ಇದರಿಂದ ಕುಟ್ಟಿಶಾಸ್ತ್ರಿಗಳ ವಿಶಾಲವಿದ್ವತ್ತೆಯ ಅರಿವು ಸ್ವಲ್ಪ ಮಟ್ಟಿಗೆ ಆಗುತ್ತದೆ).[16]

ಈ ದ್ವಿತೀಯ ಮುದ್ರಣದಲ್ಲಿ ವ್ಯಾಖ್ಯಾನವು 482 ಪುಟಗಳಿದೆ. ಪರಿಶಿಷ್ಟಗಳಲ್ಲಿ ಕುಟ್ಟಿಶಾಸ್ತ್ರಿಗಳಿಗೆ 1816-24ರವರೆಗೆ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿಗಳಿಂದ ಮತ್ತು ಮೈಸೂರು ಅರಸರಿಂದ ದೊರೆತ ರಹದಾರೀ ಪತ್ರಗಳೂ 1828ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಶಾಸ್ತ್ರಿಗಳಿಗೆ ಬರೆದ ಪತ್ರವೂ ಅಚ್ಚಾಗಿದೆ. ವ್ಯಾಖ್ಯಾನದ ಉಳಿದ ಭಾಗ ಅಚ್ಚಾದಂತೆ ಕಂಡುಬರುವುದಿಲ್ಲ.

ಭಾಟ್ಟ ಚಿಂತಾಮಣಿಯ ದ್ವಿತೀಯಾವೃತ್ತಿಯಲ್ಲಿ ವಾಂಛೇಶ್ವರರ ವಂಶ-ವೃಕ್ಷವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ

ಗೋವಿಂದ ದೀಕ್ಷಿತರ ಕಾಲ ಸು.ಕ್ರಿ.ಶ.	1515-1605
ವಾಂಛೇಶ್ವರ ಕವಿಯ ಕಾಲ ಸು.	1690-1760 ಮತ್ತು
ಕುಟ್ಟಿಶಾಸ್ತ್ರಿಗಳ ಕಾಲ	1780-1860

ಇವುಗಳ ಪೈಕಿ ಕುಟ್ಟಿಶಾಸ್ತ್ರಿಗಳ ಕಾಲವೂ, ಸುಮಾರಾಗಿ ವಾಂಛೇಶ್ವರ ಕವಿಯ ಕಾಲವೂ, ಹಿಂದೆ ಕೊಟ್ಟಿರುವ ವಿವರಗಳಿಗೆ ಸರಿಹೊಂದುತ್ತದೆ. ಆದರೆ ಇಲ್ಲಿ ಕೊಟ್ಟಿರುವ ಗೋವಿಂದ ದೀಕ್ಷಿತರ ಕಾಲದ ಪ್ರಕಾರ,[17] ದೀಕ್ಷಿತರು 1634ರವರೆಗೂ ಬದುಕಿದ್ದುದಕ್ಕೆ ಶಾಸನಾಧಾರಗಳಿವೆ.[18] ಆದುದರಿಂದ ಗೋವಿಂದ ದೀಕ್ಷಿತರ ಕಾಲ ಸು.ಕ್ರಿ.ಶ. 1550-1634 ಎಂದು ಹೇಳಬಹುದು. ಬಹುಶಃ ವಾಂಛೇಶ್ವರ ಕವಿಯ ಕಾಲವೂ ಸುಮಾರು 1680-1760 ಇರಬಹುದು.

ಇಬ್ಬರು ವಾಂಛೇಶ್ವರರಿಗೂ ಇಷ್ಟದೈವವಾದ ಮಹಾಲಿಂಗೇಶ್ವರನ ಸ್ಥಾನವಾದ ಮಧ್ಯಾರ್ಜುನ ಕ್ಷೇತ್ರದ ಸ್ತುತಿರೂಪವಾದುದು ವಾಂಛೇಶ್ವರ ಕವಿಯ ಆಶೀರ್ವಾದ ಶತಕದ ಕೊನೆಯ ಪದ್ಯ. ಇದನ್ನುಲ್ಲೇಖಿಸಿ ಈ ಲೇಖನವನ್ನು ಮುಗಿಸುತ್ತೇನೆ.

---

16. ABORI — Vol. XVII 1935-36. Review of Bhattachintamani of Vancheswara Yajwan. Ed. M. M. Venkatasubramanya Sastry - 1934, by P. K. Gode. Pages 400-3.

17. ಕ್ರಿ.ಶ. 1631ರ ಕುಂಭಕೋಣದ ಶಾಸನ ಮತ್ತು 1634 ಪಟ್ಟೀಶ್ವರದ ಶಾಸನ : The Nayakas of Tanjore by Vriddhagirisan — Annamalai University Historical series No. 3; 1942. Appendix - 1.

18. ದೀಕ್ಷಿತರ ವಯಸ್ಸಿಗೂ ವಾಂಛೇಶ್ವರ ಕವಿಯ ವಯಸ್ಸಿಗೂ 175 ವರ್ಷಗಳ ಅಂತರವಾಗುತ್ತದೆ. ಇದು ಬಹಳ ಹೆಚ್ಚು.

ಪಾಯಾನ್ಮಧ್ಯಾರ್ಜುನಂ ನಃ ಸಕೃದಪಿ ಭಜತಾಂ ಮೋಕ್ಷದಂ ಶ್ರೀ ನಟೇಶ
ತ್ಯಾಗೇಶಸ್ವಾಮಿನಾಥಸ್ಥಲ ಮತಿಮಹಿತಂ ಯಸ್ಯ ಶೇಷಂ ವದಂತಿ ।
ಮಾಂಧಾತುರ್ಯತ್ರ ತಿಷ್ಠನ್ ಶ್ರಿಯಮತಿವಿಪುಲಾಂ ಕ್ಷೇತ್ರವರ್ಯೇ ಕವೇಃ ಶ್ರೀ
ವಾಂಛಾನಾಥಸ್ಯ ಚಾದಾತ್ಫಲಮಪಿ ಸಕಲಂ ಶ್ರೀ ಮಹಾಲಿಂಗಮೂರ್ತಿಃ ॥

ಶ್ರೀ ಮಹಾಲಿಂಗಮೂರ್ತಿಯು ಶ್ರೇಷ್ಠವಾದ ಯಾವ ಕ್ಷೇತ್ರದಲ್ಲಿ ನೆಲೆಸಿ ವಾಂಛಾನಾಥ ಕವಿಗೆ ಎಲ್ಲ ಫಲಗಳನ್ನೂ ಕೊಟ್ಟನೋ, ಆ ಮೋಕ್ಷಪ್ರದವಾದ ಮಧ್ಯಾರ್ಜುನ ಕ್ಷೇತ್ರವು ನಮ್ಮನ್ನು ಕಾಪಾಡಲಿ.

ಶ್ರೀ ಶಂಕರಾಚಾರ್ಯರ ಸ್ತೋತ್ರಗಳು

ನಾಸ್ತಿಕ್ಯಾಂಧತಮೋರವಿಃ ಕಲಿಹರಾದ್ವೈತಾಬ್ಧಿಜೈವಾತೃಕಃ
ನಿತ್ಯಾನಂದಗವೇಷಣಾರ್ತಸುರಭೂಜಸ್ಸರ್ವವಿದ್ಯಾಬುಧಃ।
ದೃಷ್ಟಾದೃಷ್ಟಜಗದ್ಗುರು ದ್ರುಹಿಣ ಸೂತ್ರಾಭೀಷ್ಟದರ್ಶೀ ಕವಿಃ
ದುರ್ವಾದಾಷ್ಟಮಗಾರ್ಕಜೋ ವಿಜಯತೇ ಜ್ಞಾನಾಕರಶ್ಶಂಕರಃ॥

೧

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಎಂಬ ಗೀತಾವಾಕ್ಯದಂತೆ, ಧರ್ಮದ ಅವನತಿಯುಂಟಾಗಿ ಅಧರ್ಮವು ಹೆಚ್ಚಿದಾಗಲೆಲ್ಲ ಮಹಾವಿಭೂತಿಗಳು ಪ್ರಪಂಚದಲ್ಲಿ ಅವತರಿಸುತ್ತಾರೆ. ಇಂತಹ ಮಹಾನುಭಾವರಲ್ಲಿ ಶಂಕರಾಚಾರ್ಯರೂ ಒಬ್ಬರು.

ಆಚಾರ್ಯರು ಜನ್ಮತಾಳಿದ ಕಾಲದಲ್ಲಿ, ಭರತ ಖಂಡದಲ್ಲಿ ಸನಾತನ ವೈದಿಕ ಧರ್ಮವು, ವೇದದ ಪ್ರಾಮಾಣ್ಯವನ್ನೊಪ್ಪದ ಜೈನ ಮತ್ತು ಬೌದ್ಧ ಧರ್ಮಗಳ ಧಾಳಿಯಿಂದ ಖಿಲವಾಗುತ್ತಿತ್ತು. ಇಷ್ಟೇ ಅಲ್ಲದೆ, ವೈದಿಕ ಧರ್ಮದ ಅನುಯಾಯಿಗಳೇ ಆದ ಕರ್ಮಮೀಮಾಂಸಕರು ಕರ್ಮಗಳಿಗೇ ಪ್ರಾಧಾನ್ಯವನ್ನು ಕೊಟ್ಟು, ದೇವರನ್ನೇ ಮರೆಯುವ ಸ್ಥಿತಿಗೆ ಬರುತ್ತಿದ್ದರು. ಮದ್ಯಮಾಂಸಾದಿ ಪಂಚಮಕಾರಗಳಿಗೆ, ಪೂಜಾಂಗ ವಾಗಿ ಪ್ರಾಧಾನ್ಯವನ್ನೂ ಕೊಟ್ಟಿದ್ದ ವಾಮಾಚಾರಪರರಾದ ಶಾಕ್ತರ ಮತ್ತು ನರಬಲಿ ಕೊಡುತ್ತಿದ್ದ ಕಾಪಾಲಿಕರ ಪ್ರಭಾವ ಸಾಮಾನ್ಯ ಜನರ ಮೇಲೆ ಹೆಚ್ಚಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯನ್ನೆದುರಿಸಿ ವೈದಿಕ ಧರ್ಮವನ್ನು ಜೀರ್ಣೋದ್ಧಾರ ಮಾಡಿದ ಮಹಾತ್ಮರು ಶಂಕರ ಭಗವತ್ಪಾದರು.

ಶಂಕರಾಚಾರ್ಯರು ಪುರಾತನವಾದ ಅದ್ವೈತ ತತ್ತ್ವಗಳನ್ನು ಕ್ರೋಢೀಕರಿಸಿ ಸಿದ್ಧಾಂತ ರೂಪಕ್ಕೆ ತಂದ ಅದ್ವೈತ ಪುನಃಪ್ರತಿಷ್ಠಾಪಕರಾದ ಜ್ಞಾನಮಾರ್ಗಿಗಳಷ್ಟೇ ಅಲ್ಲ; ವೈದಿಕ ಮತದಲ್ಲಿ ಬಂದು ಸೇರಿಕೊಂಡಿದ್ದ ದುರಾಚಾರಗಳನ್ನು ತಪ್ಪಿಸಿ, ಗಾಣಾಪತ್ಯ, ಕೌಮಾರ,

ಸೌರ, ಶಾಕ್ತ, ಶೈವ ಮತ್ತು ವೈಷ್ಣವ ಮತಗಳನ್ನು ಭಕ್ತಿ ಪ್ರಧಾನವಾದ ಸಾತ್ವಿಕ ಮಾರ್ಗಕ್ಕೆ ಹಿಂದಿರುಗಿಸಿದ ಷಣ್ಮತ ಪ್ರತಿಷ್ಠಾಪಕರೂ ಹೌದು.

ಆಚಾರ್ಯರೂ ಶ್ರೀರಂಗ, ತಿರುಪತಿ ಮತ್ತು ಚಿದಂಬರ ಕ್ಷೇತ್ರಗಳಲ್ಲಿ ಜನಾಕರ್ಷಣ, ಧನಾಕರ್ಷಣ ಮತ್ತು ಅನ್ನಾಕರ್ಷಣ ಯಂತ್ರಗಳನ್ನು ಸ್ಥಾಪಿಸಿ, ಜಂಬುಕೇಶ್ವರ, ಕಾಂಚೀ ಮತ್ತು ಮೂಕಾಂಬಿಕಾ ಕ್ಷೇತ್ರಗಳಲ್ಲಿ ದೇವಿಯ ಉಗ್ರಕಳೆಯನ್ನು ನಿವಾರಿಸಲು ಶ್ರೀ ಚಕ್ರ ಪ್ರತಿಷ್ಠಾಪನೆಯನ್ನು ಮಾಡಿದರೆಂದು ಪರಂಪರಾಗತವಾಗಿ ತಿಳಿದು ಬಂದಿದೆ.

ತಾವು ಮಾಡಿದ ಧರ್ಮಸ್ಥಾಪನಾ ಕಾರ್ಯವನ್ನು ಮುಂದುವರೆಸಲು, ಆಚಾರ್ಯರು ಭರತ ಖಂಡದಲ್ಲೆಲ್ಲ ಸಂಚರಿಸಿ, ಬದರೀ, ದ್ವಾರಕಾ, ಜಗನ್ನಾಥಪುರೀ, ಶೃಂಗೇರಿ ಕಾಂಚೀ ಕ್ಷೇತ್ರಗಳಲ್ಲಿ ಆಮ್ನಾಯ ಪೀಠ (ಮಠ)ಗಳನ್ನು ಸ್ಥಾಪಿಸಿದ್ದಲ್ಲದೆ, ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ಭಗವದ್ಗೀತೆ, ವಿಷ್ಣುಸಹಸ್ರನಾಮ, ಲಲಿತಾತ್ರಿಶತೀ ಇತ್ಯಾದಿ ಗ್ರಂಥ ಗಳಿಗೆ ಭಾಷ್ಯಗಳನ್ನೂ, ವಿವೇಕ ಚೂಡಾಮಣಿ, ಉಪದೇಶ ಸಾಹಸ್ರೀ, ಪ್ರಪಂಚ ಸಾರ ಮೊದಲಾದ ಸ್ವತಂತ್ರ ಗ್ರಂಥಗಳನ್ನೂ ರಚಿಸಿದರು. ಪ್ರಸ್ಥಾನತ್ರಯ (ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ)ಗಳಿಗೆ ಒಬ್ಬರಿಂದಲೇ ರಚಿತವಾಗಿ ಉಪಲಬ್ಧವಾಗಿರುವ ಭಾಷ್ಯಗಳಲ್ಲಿ ಶಂಕರಾಚಾರ್ಯರ ಭಾಷ್ಯಗಳೇ ಅತಿ ಪ್ರಾಚೀನವಾದವು.

೨

ಭಕ್ತಿ ಮಾರ್ಗದಲ್ಲಿ ಸ್ತೋತ್ರಗಳಿಗೆ ಬಹಳ ಮಹತ್ತ್ವವಿದೆ. ಆಚಾರ್ಯ ಶಂಕರರು ಲಲಿತಾ ಪಂಚರತ್ನ, ಮೀನಾಕ್ಷೀ ಪಂಚರತ್ನ, ಕಾಲಭೈರವಾಷ್ಟಕ, ಕೃಷ್ಣಾಷ್ಟಕಗಳಂತಹ ಅನೇಕ ಚಿಕ್ಕ ಸ್ತೋತ್ರಗಳನ್ನೂ ಅನೇಕ ಶ್ಲೋಕಗಳುಳ್ಳ ಸಣ್ಣ ಕಾವ್ಯಗಳೇ ಆಗಿರುವ ಸೌಂದರ್ಯ ಲಹರೀ, ಶಿವಾನಂದ ಲಹರೀಗಳಂತಹ ಬೃಹತ್ ಸ್ತೋತ್ರಗಳನ್ನೂ ರಚಿಸಿದ್ದಾರೆ.

ಶಿವನ ಲೀಲಾರೂಪರಾದ ಮೃತ್ಯುಂಜಯ, ದಕ್ಷಿಣಾಮೂರ್ತಿ, ಕಾಲಭೈರವ ಮತ್ತು ವಿಷ್ಣುವಿನ ಅವತಾರಗಳಾದ ರಾಮ, ಕೃಷ್ಣ, ನೃಸಿಂಹಾದಿಗಳ ಪರವಾಗಿಯೂ ಗಣೇಶ, ಸುಬ್ರಹ್ಮಣ್ಯ, ಲಕ್ಷ್ಮೀ, ಶಾರದಾ, ಅನ್ನಪೂರ್ಣಾದಿ ದೇವತೆಗಳ ಮತ್ತು ಗಂಗಾ ನರ್ಮದಾದಿ ನದಿಗಳ ಪರವಾಗಿಯೂ ಆಚಾರ್ಯರು ಸ್ತೋತ್ರಗಳನ್ನು ರಚಿಸಿದ್ದಾರೆ. ಆದರೆ ಅವರು ಬಹುದೇವತಾವಾದಿಗಳಲ್ಲ. ರಾಮಭುಜಂಗ ಪ್ರಯಾತ ಸ್ತೋತ್ರದ "ತದೇಕಂ ಪರಂ ತಾರಕ ಬ್ರಹ್ಮರೂಪಂ ಭಜೇಹಂ" ಮತ್ತು ಶಿವಭುಜಂಗಸ್ತೋತ್ರದ "ಪರಬ್ರಹ್ಮರೂಪಂ ಮನೋವಾಗತೀತಂ ಮಹಶ್ಶೈವಮೀಡೇ' ಮೊದಲಾದ ವಾಕ್ಯಗಳಿಂದ ಎಲ್ಲ ದೇವತೆಗಳೂ

ಒಂದೇ ಪರತತ್ತ್ವದ ರೂಪಗಳೆಂಬ ಶಂಕರರ ಮತ ಸ್ಪಷ್ಟವಾಗುತ್ತದೆ.

ಆಚಾರ್ಯರು ಬೇರೆ ಬೇರೆ ವಯಸ್ಸಿನ ಮತ್ತು ಬೌದ್ಧಿಕ ಮಟ್ಟದವರಿಗೆ ಸರಿಹೋಗುವಂತೆ ಸ್ತೋತ್ರ ರಚನೆ ಮಾಡಿದ್ದಾರೆ. "ಹೇ ಚಂದ್ರಚೂಡ ಮದನಾಂತಕ ಶೂಲಪಾಣೇ" ಎಂದು ಆರಂಭವಾಗುವ ಶಿವನಾಮಾವಲ್ಯಷ್ಟಕ, "ಅಚ್ಯುತಂ ಕೇಶವಂ ರಾಮನಾರಾಯಣಂ" ಎಂದು ಮೊದಲಾಗುವ ಅಚ್ಯುತಾಷ್ಟಕಗಳಂತಹ ನಾಮಾವಲೀ ರೂಪವಾದ ಸ್ತೋತ್ರಗಳನ್ನು ಮಕ್ಕಳೂ ಸಹ ಸುಲಭವಾಗಿ ಹೇಳಬಹುದು. ಲಲಿತಾಪಂಚರತ್ನ, ಅನ್ನಪೂರ್ಣಾಸ್ತುತಿ, ಗಣೇಶಪಂಚರತ್ನ ಮೊದಲಾದ ಸ್ತೋತ್ರಗಳು ಸರಳವಾದ ಭಾಷೆಯಲ್ಲಿ ಆಯಾ ದೇವತೆಗಳ ರೂಪ ಮತ್ತು ಗುಣವರ್ಣನೆಯ ರೂಪದಲ್ಲಿವೆ. ಶಿವಾನಂದ ಲಹರೀ ಮೊದಲಾದ ದೊಡ್ಡ ಸ್ತೋತ್ರಗಳಲ್ಲಿ ಸೊಗಸಾದ ವರ್ಣನೆಗಳಿವೆ; ಅಲಂಕಾರಾದಿ ಕಾವ್ಯಗುಣಗಳಿವೆ. ವಿಷ್ಣು ಪಾದಾದಿ ಕೇಶಾಂತ ವರ್ಣನ ಸ್ತೋತ್ರದ ಮೊದಲನೆಯ ಪದ್ಯದಲ್ಲಿ,

"ಲಕ್ಷ್ಮೀಭರ್ತುರ್ಭುಜಾಗ್ರೇ ಕೃತವಸತಿ ಸಿತಂ ಯಸ್ಯ ರೂಪಂ ವಿಶಾಲಂ
ನೀಲಾದ್ರೇಸ್ತುಂಗಶೃಂಗಸ್ಥಿತಮಿವ ರಜನೀನಾಥಬಿಂಬಂ ವಿಭಾತಿ ॥

(ಲಕ್ಷ್ಮೀಪತಿಯ ತೋಳಿನ ತುದಿಯಲ್ಲಿ ಸ್ಥಾನ ಹೊಂದಿರುವ, ದೊಡ್ಡದಾದ ಶುಭ್ರ ವರ್ಣದ ಪಾಂಚಜನ್ಯ ಚಕ್ರವು, ನೀಲವರ್ಣದ ಮಹಾಪರ್ವತದ ಉನ್ನತ ಶಿಖರದ ಮೇಲೆ ಕಾಣುತ್ತಿರುವ ಪೂರ್ಣಚಂದ್ರಬಿಂಬದಂತಿದೆ) ಎಂಬ ವರ್ಣನೆಯಿದೆ. ಭಜಗೋವಿಂದ ಸ್ತೋತ್ರದಲ್ಲಿ ಸದುಪದೇಶಗಳಿವೆ. ಸೌಂದರ್ಯ ಲಹರೀ ಸ್ತೋತ್ರ ಶ್ರೀ ವಿದ್ಯೋಪಾಸಕರಿಗೆ ಪರಮಪ್ರಿಯವಾಗಿ ಮಂತ್ರಶಾಸ್ತ್ರ, ತಂತ್ರಗಳ ತತ್ತ್ವಗಳನ್ನು ಪ್ರತಿಪಾದಿಸುತ್ತದೆ. ವೇದಾಂತಗರ್ಭಿತವಾದ ಮತ್ತು ಅದ್ವೈತ ತತ್ತ್ವ ಪ್ರತಿಪಾದಕವಾದ ಯತಿ ಪಂಚಕ, ನಿರ್ಗುಣ ಮಾನಸಪೂಜಾ ಮೊದಲಾದ ಅನೇಕ ಸ್ತೋತ್ರಗಳಿವೆ.

೩

ಆಚಾರ್ಯರ ಸ್ತೋತ್ರಗಳಲ್ಲಿ ಛಂದೋವೈವಿಧ್ಯವಿದೆ. ಸ್ರಗ್ಧರಾ, ಶಾರ್ದೂಲ ವಿಕ್ರೀಡಿತ, ಮಾಲಿನೀ, ವಸಂತ ತಿಲಕ ಮೊದಲಾದ ಅನೇಕ ವೃತ್ತಗಳಲ್ಲಿ ರಚಿತವಾದ ಸ್ತೋತ್ರಗಳಿವೆ. ಭುಜಂಗ ಪ್ರಯಾತ ವೃತ್ತ ಆಚಾರ್ಯರಿಗೆ ಪ್ರಿಯವಾಗಿತ್ತೆಂದು ತೋರುತ್ತದೆ. ಈ ವೃತ್ತದಲ್ಲಿ ಅವರು ಅನೇಕ ದೇವತೆಗಳ ಸ್ತೋತ್ರಗಳನ್ನು ರಚಿಸಿದ್ದಾರೆ. ಇವಲ್ಲದೆ ಅಪೂರ್ವವಾದ

ಮಾತ್ರಾ ವೃತ್ತಗಳಲ್ಲಿ ನವರತ್ನಮಾಲಿಕಾ, ಲಕ್ಷ್ಮೀನೃಸಿಂಹ ಪಂಚರತ್ನ, ಚಂದ್ರಶೇಖರಾಷ್ಟಕ ಮೊದಲಾದ ಅನೇಕ ಸ್ತೋತ್ರಗಳು ರಚಿತವಾಗಿವೆ. ಈ ಸ್ತೋತ್ರಗಳನ್ನು ನಿರ್ದಿಷ್ಟ ಮಾತ್ರೆಗಳಿಗೆ ತಾಳ ಹಾಕುತ್ತಾ ಸೊಗಸಾಗಿ ಹಾಡಬಹುದು.

ಅನೇಕ ಸ್ತೋತ್ರಗಳಲ್ಲಿ ಆಕರ್ಷಕವಾದ ಅಕ್ಷರ ಪ್ರಯೋಗಗಳಲ್ಲಿ ಪ್ರಾಸಗಳೂ ಇವೆ. ''ಗಾಯತ್ರೀಂ ಗರುಡಧ್ವಜಾಂ ಗಗನಗಾಂ ಗಂಧರ್ವಗಾನ ಪ್ರಿಯಾಂ'' ಎಂದು ಆರಂಭವಾಗುವ ಭ್ರಮರಾಂಬಾಷ್ಟಕದಲ್ಲಿನ ಶ್ಲೋಕದ ಮೊದಲ ಮೂರು ಪಾದಗಳಲ್ಲಿ ಪ್ರತಿಪದವೂ ಗಕಾರಾದಿಯಾಗಿದೆ. ಅನೇಕ ಪದಗಳ ಮಧ್ಯದಲ್ಲಿಯೂ ಗಕಾರವಿದೆ. ದೇವೀಭುಜಂಗ ಸ್ತೋತ್ರದ

ಸುಧಾಸಿಂಧು ಸಾ**ರೇ** ಚಿದಾನಂದ ನೀ**ರೇ** ।
ಸಮುತ್ಫುಲ್ಲ ನೀ**ಪೇ** ಸುರತ್ನಾಂತ ರೀ**ಪೇ** ॥
ಮಣಿವ್ಯೂಹ ಸಾ**ಲೇ** ಸ್ಥಿತೇ ಹೈಮಶಾ**ಲೇ** ।
ಮನೋಜಾರಿ ವಾ**ಮೇ** ನಿಷಣ್ಣಾಂ ಮನೋ **ಮೇ** ॥

ಎಂಬ ಪ್ರತಿಪಾದದಲ್ಲೂ ಪಾದಾರ್ಧದ ಕೊನೆಯ ಅಕ್ಷರಕ್ಕೂ ಪಾದದ ಕೊನೆಯ ಅಕ್ಷರಕ್ಕೂ ಪ್ರಾಸವಿದೆ. ಹೀಗೆಯೇ ಶಾರದಾಭುಜಂಗಾಷ್ಟಕದ 'ಸುವಕ್ಷೋಜ ಕುಂಭಾಂ ಸುಧಾಪೂರ್ಣಕುಂಭಾಂ'' ಎಂದು ಮೊದಲಾಗುವ ಶ್ಲೋಕದಲ್ಲಿ ಪ್ರತಿಪದಾರ್ಧದ ಮತ್ತು ಪಾದದ ಕೊನೆಯಲ್ಲಿ ಎರಡಕ್ಷರಗಳ ಪ್ರಾಸವಿದೆ. ಗಣೇಶ ಪಂಚರತ್ನದ ''ನಿತಾಂತಕಾಂತ ದಂತಕಾಂತಿ ಮಂತಕಾಂತಕಾತ್ಮಜಂ'' ಎಂಬ ಶ್ಲೋಕವು ತಕಾರ ಪ್ರಯೋಗದಿಂದಲೂ ಪಂಚಚಾಮರ ವೃತ್ತದಲ್ಲಿ ರಚಿತವಾಗಿರುವುದರಿಂದಲೂ ಸುಶ್ರಾವ್ಯವಾಗಿದೆ.

ಗಂಗಾಷ್ಟಕದ ಮೊದಲನೆಯ ಶ್ಲೋಕದಲ್ಲಿನ ''ಭವಲೀಲಾ ಮೌಲಿಮಾಲೇ'', ''ಕಣಮಣು ಪರಿಮಾಣಂ'', ''ಕಲಿಕಲಂಕಾತಂಕಮಂಕೇ'' ಎಂಬ ಪದ ಪ್ರಯೋಗಗಳು ಗುಳುಗುಳು ಸದ್ದು ಮಾಡುತ್ತಾ ಹರಿಯುವ ಸಣ್ಣ ಹಳ್ಳದ ನೆನಪನ್ನೂ, ಎರಡನೆಯ ಶ್ಲೋಕದ ''ಬ್ರಹ್ಮಾಂಡಂ ಖಂಡಯಂತೀ'', ''ಗಂಡಶೈಲಾತ್ ಸ್ಖಲಂತೀ'', ''ಕ್ಷೋಣೀಪೃಷ್ಠೇಲುಠಂತೀ'' ಮೊದಲಾದ ಪ್ರಯೋಗಗಳು ಸಣ್ಣ ಕಲ್ಲು ಬಂಡೆಗಳನ್ನುರುಳಿಸುತ್ತ ಎತ್ತರದಿಂದ ತಗ್ಗಿಗೆ ರಭಸವಾಗಿ ಹರಿಯುವ ಗಿರಿನದಿಯ ನೆನಪನ್ನೂ ತರುತ್ತವೆ. ಸ್ರಗ್ಧರಾ ವೃತ್ತದ ಸಂಯುಕ್ತಾಕ್ಷರ ಬಾಹುಳ್ಯವುಳ್ಳ ಮೂರನೆಯ ಶ್ಲೋಕ ಹಾಗೂ ಶಾರ್ದೂಲ ವಿಕ್ರೀಡಿತ ವೃತ್ತದ ಹೆಚ್ಚು ಒತ್ತಕ್ಷರಗಳಿಲ್ಲದ ನಾಲ್ಕನೆಯ ಶ್ಲೋಕಗಳು ಗತಿಯಲ್ಲಿ

ಮರಗಿಡಗಳನ್ನು ಕೊಚ್ಚಿಸುತ್ತ ಹರಿಯುವ ಮಹಾನದಿಗಳನ್ನು ಅನುಸರಿಸುತ್ತವೆ. ಈ ನಾಲ್ಕು ಶ್ಲೋಕಗಳ ರಚನೆಯು ಹಿಮಾಲಯ ಶಿಖರದಲ್ಲಿ ಹುಟ್ಟಿ, ಬೆಟ್ಟ ಗುಡ್ಡಗಳ ಮಧ್ಯದಲ್ಲಿ ಹರಿದು, ಕ್ರಮವಾಗಿ ದೊಡ್ಡ ನದಿಯಾಗಿ ಬಯಲು ಪ್ರದೇಶವನ್ನು ಸೇರಿ ವಿಸ್ತಾರವಾದ ಪಾತ್ರದಲ್ಲಿ ಪ್ರವಹಿಸುವ ಗಂಗಾನದಿಯ ಗತಿಗೆ ಚೆನ್ನಾಗಿ ಹೊಂದುತ್ತದೆ.

ಆಚಾರ್ಯ ರಚಿತ ಸ್ತೋತ್ರಗಳಲ್ಲಿ, ಅದರಲ್ಲೂ ಸೌಂದರ್ಯ ಲಹರೀಯಂತಹ ದೊಡ್ಡ ಸ್ತೋತ್ರಗಳಲ್ಲಿ, ಶ್ಲೇಷಯುಕ್ತವಾದ ಮತ್ತು ಅನೇಕ ವಿಧದ ಅರ್ಥಾಲಂಕಾರ ಯುಕ್ತವಾದ ಪದ್ಯಗಳು ಬಹಳವಾಗಿವೆ. ಶಿವಾನಂದ ಲಹರೀಯಲ್ಲಿ ಶ್ರೀ ಶೈಲ ಕ್ಷೇತ್ರದ ಭ್ರಮರಾಂಬಾನಾಥನಾದ ಮಲ್ಲಿಕಾರ್ಜುನ ಸ್ವಾಮಿಯನ್ನು ಆಚಾರ್ಯರು ಹೀಗೆ ಪ್ರಾರ್ಥಿಸುತ್ತಾರೆ.

ಭೃಂಗೀಚ್ಛಾನಟನೋತ್ಕಟಃ ಕರಿಮದಗ್ರಾಹೀ ಸ್ಫುರನ್ಮಾಧವಾ ।
ಹ್ಲಾದೋ ನಾದಯುತೋ ಮಹಾಸಿತವಪುಃ ಪಂಚೇಷುಣಾ ಚಾದೃತಃ ॥
ಸತ್ಪಕ್ಷಸ್ಸುಮನೋವನೇಷು ಸಪುನಸ್ಸಾಕ್ಷಾನ್ಮದೀಯೇ ಮನೋ
ರಾಜೀವೇ ಭ್ರಮರಾಧಿಪೋ ವಿಹರತಾಂ ಶ್ರೀಶೈಲವಾಸೀ ವಿಭುಃ ॥

ಭೃಂಗಿ (ಶಿವಗಣಗಳಲ್ಲೊಬ್ಬ ಪ್ರಮುಖ) ಯ ಪ್ರಾರ್ಥನೆಯಂತೆ (ಅಥವಾ ಭ್ರಮರಾಂಬೆಯ ಅಪೇಕ್ಷೆಯಂತೆ) ನೃತ್ತಮಗ್ನನಾಗಿರುವ, ಗಜಾಸುರನ ಗರ್ವನಾಶಕನಾದ, ತೇಜಸ್ವಿಯಾದ ವಿಷ್ಣುವನ್ನು ಸಂತೋಷ ಪಡಿಸುವ, ನಾದಯುಕ್ತನಾದ, ದೊಡ್ಡ ಶುಭ್ರವರ್ಣದ ಶರೀರವುಳ್ಳ, ಮನ್ಮಥನಿಂದಲೂ ಮರ್ಯಾದಿಸಲ್ಪಟ್ಟ, ಸಜ್ಜನ ಪಕ್ಷಪಾತಿಯಾದ ಮತ್ತು ಅವರ ಮನಸ್ಸೆಂಬ ಉದ್ಯಾನದಲ್ಲಿ ವಿಹರಿಸುವ, ಭ್ರಮರಾಂಬಾಪತಿಯಾದ ಶ್ರೀಶೈಲವಾಸಿಯು ನನ್ನ ಮನಸ್ಸೆಂಬ ಕಮಲದಲ್ಲಿ ವಿಹರಿಸಲಿ.

ಭ್ರಮರಾಧಿಪನೆಂದರೆ ದುಂಬಿಗಳ ರಾಜನೆಂದೂ ಅರ್ಥವಾಗುತ್ತದೆ. ಅದಕ್ಕೆ ಸರಿಯಾಗಿ,

ಭೃಂಗೀಚ್ಛಾನಟನೋತ್ಕಟಃ = ಹೆಣ್ಣುದುಂಬಿಯ ಇಚ್ಛೆಯಂತೆ ಚಿತ್ರಗತಿಯಲ್ಲಿ ಹಾರಾಡುವ,

ಕರಿಮದಗ್ರಾಹೀ = ಆನೆಯ ಮದೋದಕವನ್ನು ಸಂಗ್ರಹಿಸುವ,

ಸ್ಫುರನ್ಮಾಧವಾಹ್ಲಾದಃ = ಪ್ರಕಾಶಯುತವಾದ ವೈಶಾಖದಲ್ಲಿ ಸಂತೋಷ ಪಡುವ,

ನಾದಯುತಃ = ಸದಾ ಝೇಂಕರಿಸುವ,

ಮಹಾ + ಅಸಿತವಪುಃ = ಅಚ್ಚಕಪ್ಪಾದ ದೇಹವುಳ್ಳ

ಪಂಚೇಷುಣಾ ಆದೃತಃ = ಮನ್ಮಥನಿಂದ ಸ್ವೀಕರಿಸಲ್ಪಡುವ (ದುಂಬಿಗಳ ಸಾಲೇ ಮನ್ಮಥನ ಬಿಲ್ಲಿನ ಹೆದೆಯೆಂದು ಪ್ರಸಿದ್ಧ),

ಸತ್ಪಕ್ಷಃ = ಒಳ್ಳೆಯ ರೆಕ್ಕೆಗಳುಳ್ಳ,

ಸುಮನೋ ವನೇಷು ಸಾಕ್ಷಾತ್ = ಹೂವಿನ ತೋಟಗಳಲ್ಲಿ ಕಾಣುವ

ಭ್ರಮರಾಧಿಪಃ = ದುಂಬಿಗಳ ರಾಜನು,

ಹೀಗೆ ಮಲ್ಲಿಕಾರ್ಜುನನಿಗೆ ಅನ್ವಯಿಸುವ ವಿಶೇಷಣಗಳೆಲ್ಲ, ಬೇರೆ ಅರ್ಥದಲ್ಲಿ ದುಂಬಿಗೂ ಅನ್ವಯಿಸುವಂತೆ, ಈ ಪದ್ಯದಲ್ಲಿ ಶ್ಲೇಷಾರ್ಥವಿದೆ.

ಇದೇ ಸ್ತೋತ್ರದ ಮತ್ತೊಂದು ಪದ್ಯದಲ್ಲಿ "ಒಬ್ಬ ಸೂರ್ಯನೇ ಉದಯಿಸಿದೊಡನೆ ಭೂಮ್ಯಾಕಾಶಗಳ ಕತ್ತಲೆಯನ್ನೆಲ್ಲ ಹೋಗಲಾಡಿಸಿ ಕಣ್ಣಿಗೆ ಗೋಚರನಾಗು ತ್ತಾನೆ; ಆದರೆ ನೀನು ಕೋಟಿ ಸೂರ್ಯರಷ್ಟು ಪ್ರಕಾಶಮಾನನಾದರೂ ನನಗೆ ಕಾಣಿಸುತ್ತಿಲ್ಲ. ನನ್ನ ಅಂಧಕಾರವೆಷ್ಟು ಮಹತ್ತರವಾಗಿರಬೇಕು ! ಪಶುಪತಿಯೇ, ಅದನ್ನೆಲ್ಲ ನಾಶಪಡಿಸಿ ಪ್ರಸನ್ನನಾಗಿ ನನಗೆ ಗೋಚರನಾಗು" ಎಂದು ಶಂಕರಾಚಾರ್ಯರು ಪ್ರಾರ್ಥಿಸುತ್ತಾರೆ.

ಶಿವಪಾದಾದಿಕೇಶಾಂತವರ್ಣನ ಸ್ತೋತ್ರದಲ್ಲಿ,

"ಸ್ವಾಮಿನ್ ಗಂಗಾಮಿವಾಂಗೀಕುರು ತವ ಶಿರಸಾ ಮಾಮಪೀತ್ಯರ್ಥಯನ್ತೀಂ
ಧನ್ಯಾಂ ಕನ್ಯಾಂ ಖರಾಂಶೋಶ್ಶಿರಸಿ ವಹತಿ ಕಿಂ ನ್ವೇಷಕಾರುಣ್ಯಶಾಲೀ।
ಇತ್ಥಂ ಶಂಕಾಂ ಜನಾನಾಂ ಜನಯದತಿಘನಂ ಕೈಶಿಕಂ ಕಾಲಮೇಘಚ್ಛಾಯಂ...

"ಸ್ವಾಮಿಯೇ ! ಗಂಗೆಯನ್ನು ನಿನ್ನ ತಲೆಯಲ್ಲಿ ಧರಿಸಿರುವಂತೆ, ನನ್ನನ್ನೂ ಧರಿಸು ಎಂದು ಸೂರ್ಯ ಪುತ್ರಿಯಾದ ಯಮುನೆಯು ಪ್ರಾರ್ಥಿಸಲು, ಈ ಕರುಣಾಶಾಲಿಯು ಆ ನದಿಯನ್ನೂ ತಲೆಯಲ್ಲಿ ಧರಿಸಿರುವನೋ ಎಂದು ಜನರು ಭ್ರಾಂತರಾಗುವಂತೆ ಶಿವನ ತಲೆಯ ಕಪ್ಪು ಕೂದಲುಗಳು ಬಿಚ್ಚಿ ಹರಡಿವೆ" ಎಂದು ಆಚಾರ್ಯರು ವರ್ಣಿಸಿದ್ದಾರೆ. (ಯಮುನಾ ನದಿಯ ನೀರು ಕಪ್ಪು ಛಾಯೆ ಹೊಂದಿರುವಂತೆ ಕಾಣಿಸುತ್ತದೆ. ಪ್ರಯಾಗದಲ್ಲಿ ಎರಡೂ ನದಿಗಳು ಸೇರುವಲ್ಲಿ ಗಂಗೆ ಮತ್ತು ಯಮುನೆಯ ನೀರುಗಳ ಬಣ್ಣದ ವ್ಯತ್ಯಾಸ ಕಾಣಿಸುತ್ತದೆ).

೪

ಹೀಗೆ ರಸಭರಿತವಾದ ಸ್ತೋತ್ರಗಳಲ್ಲಿ ಭಕ್ತಿರಸವಂತೂ ತುಂಬಿ ತುಳುಕುತ್ತಿದೆ. ''ಸಂಸಾರ ದುಃಖಗಹನಾಜ್ಜಗದೀಶ ರಕ್ಷ'' (ಜಗದೀಶನೇ, ಸಂಸಾರವೆಂಬ ದುಃಖಮಯವಾದ ಕಾಡಿನಿಂದ ನನ್ನನ್ನು ಕಾಪಾಡು), ''ಭಿಕ್ಷಾಂ ದೇಹಿ ಕೃಪಾವಲಂಬನಕರೀ'' (ಕರುಣೆಯೆಂಬ ಅವಲಂಬನೆಯನ್ನು ಕೊಡುವ ತಾಯೇ, ಭಿಕ್ಷೆಯನ್ನು — ಅನ್ನ ಭಿಕ್ಷೆಯಷ್ಟೇ ಅಲ್ಲ, ಜ್ಞಾನ ಭಿಕ್ಷೆಯೂ ಸಹ — ಕೊಡು), ''ಮಮ ದೇಹಿ ಕರಾವಲಂಬಂ'' (ನನಗೆ ನಿನ್ನ ಕೈ ಆಸರೆಯನ್ನು ಕೊಡು). ಹೀಗೆ ಆಚಾರ್ಯರು ಇಷ್ಟದೈವವನ್ನು ಅನೇಕ ಬಗೆಯಾಗಿ ಬೇಡಿಕೊಳ್ಳುತ್ತಾರೆ.

ಭಕ್ತರಿಗೆ ಭಗವಂತನಲ್ಲಿ ಸಲಿಗೆ ಹೆಚ್ಚು; ಮಕ್ಕಳಿಗೆ ತಾಯಲ್ಲಿ ಇರುವಂತೆ. ಈ ಭಾವವನ್ನು ಆಚಾರ್ಯರ ಸ್ತೋತ್ರಗಳಲ್ಲಿ ಅನೇಕ ಕಡೆಗಳಲ್ಲಿ ಕಾಣಬಹುದು. ''ನೀನು ದೀನರ ಪರಮ ಬಂಧು; ನಾನು ದೀನರಲ್ಲಿ ಪ್ರಮುಖ. ಆದುದರಿಂದ ನನ್ನನ್ನು ರಕ್ಷಿಸುವುದು ನಿನ್ನ ಬಂಧುಕರ್ತವ್ಯ. (ಕರ್ತವ್ಯಂ ಮದವನಮಿಯಂ ಬಂಧುಸರಣಿಃ)'' ''ಎಲೈ, ಆದಿಕಿರಾತ, ಅಲ್ಲಿಲ್ಲಿ ಓಡಾಡದೆ ನನ್ನಲ್ಲಿ ವಾಸ ಮಾಡು. ನನ್ನ ಮನಸ್ಸೆಂಬ ಕಾಡಿನಲ್ಲಿ ಮದಮಾತ್ಸರ್ಯಾದಿ ಮಹಾಮೃಗಗಳಿವೆ. ಅವುಗಳನ್ನು ಬೇಟೆಯಾಡಿ ಸಂತೋಷ ಪಡುವ ಅವಕಾಶ ನಿನಗೆ ಲಭಿಸುತ್ತದೆ. ''ಮೃಗಯಾವಿನೋದ - ರುಚಿತಾಲಾಭಂ ಚ ಸಂಪ್ರಾಪ್ಸ್ಯಸಿ)''.

ನಿನ್ನ ಕೈಯಲ್ಲೇ ಮೇರುಪರ್ವತವಿದೆ; ನಿನ್ನ ಸಮೀಪದಲ್ಲಿಯೇ ಕುಬೇರನಿದ್ದಾನೆ; ನಿನ್ನ ತಲೆಯಲ್ಲಿ ಅಮೃತಮಯವಾದ ಚಂದ್ರ ! ನಿನಗೆ ನಾನು ಏನನ್ನು ತಾನೇ ಕೊಡಲಿ ? ನನ್ನ ಮನಸ್ಸನ್ನೇ ಅರ್ಪಿಸುತ್ತೇನೆ'' ಎಂದು ಒಮ್ಮೆ ಹೇಳಿದರೆ, ಮತ್ತೊಮ್ಮೆ ''ನಿನ್ನ ಆಹಾರ ವಿಷ; ಆಭರಣ ಹಾವು; ತೊಡಿಗೆ ತೊಗಲು; ವಾಹನ ದೊಡ್ಡ ಮುದಿಗೂಳಿ. ನನಗೇನು ಕೊಟ್ಟೀಯೆ ? ಕೊಡಲು ನಿನ್ನಲ್ಲೇನಿದೆ ? ನಿನ್ನ ಪಾದಭಕ್ತಿಯನ್ನೇ ಕೊಡು'' (ಮಮ ದಾಸ್ಯಸಿ ಕಿಂ ಕಿಮಸ್ತಿ ಶಂಭೋ । ತವ ಪಾದಾಂಬುಜ ಭಕ್ತಿಮೇವ ದೇಹಿ) ಎಂದು ಕೇಳುತ್ತಾರೆ ಆಚಾರ್ಯರು.

೫

ಆಚಾರ್ಯರ ಭಾಷ್ಯಗಳನ್ನಾಗಲೀ, ಪ್ರಕರಣ ಗ್ರಂಥಗಳನ್ನಾಗಲೀ ಪಠಿಸಿ ಅದ್ವೈತ ತತ್ತ್ವಗಳನ್ನರಿತು ಅದರಂತೆ ನಡೆಯುವುದು ಸಾಮಾನ್ಯ ಜನರಿಗೆ ಸಾಧ್ಯವಲ್ಲ. ಆದರೆ ಈ ಸ್ತೋತ್ರಗಳನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಕಷ್ಟವಲ್ಲ. ಅವುಗಳನ್ನು ಪಠಿಸಿ, ಮನನ

ಮಾಡಿ ಭಕ್ತಿ ಮಾರ್ಗವನ್ನನುಸರಿಸಿದರೆ ಮುಂದಿನ ಶ್ರೇಯಸ್ಸಿಗೆ ದಾರಿಯಾಗುತ್ತದೆ. ಹಾಗೆ ಮಾಡಿ ಉದ್ಧಾರವಾಗುವ ಸದ್ಬುದ್ಧಿಯನ್ನು ಆಚಾರ್ಯರು ನಮಗೆ ಅನುಗ್ರಹಿಸಲಿ.

ಶ್ರುತಿಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಮ್ ।
ನಮಾಮಿ ಭಗವತ್ಪಾದಶಂಕರಂ ಲೋಕ ಶಂಕರಮ್ ॥

ಇತರ ಲೇಖನಗಳು

ಆಸ್ಥಾನ ಮಹಾವಿದ್ವಾನ್ ಕವಿತಿಲಕ ಅಯ್ಯಾಶಾಸ್ತ್ರಿಗಳ ಪೂರ್ವಜರು ಮತ್ತು ಶಾಸ್ತ್ರಿಗಳ ಸಾಂಸಾರಿಕ ಜೀವನ

-1-

ಮಹಾವಿದ್ವಾನ್ ಕವಿತಿಲಕಸೋಸಲೆ ಅಯ್ಯಾಶಾಸ್ತ್ರಿಗಳ ಪೂರ್ವಜರು ವಿಜಯ ನಗರದ ರಾಜ್ಯದಲ್ಲಿ ವಂಶಪಾರಂಪರ್ಯವಾಗಿ ಪ್ರದಾನಿಗಳಾಗಿದ್ದರು. ಇವರು ಹೊಯ್ಸಳ ಕರ್ನಾಟಕ ಬ್ರಾಹ್ಮಣ ಪಂಗಡದವರು. ತಾಳೀಕೋಟೆ (ರಕ್ಕಸ ತಂಗಡಿ) ಯುದ್ಧದ ನಂತರ ವಿಜಯನಗರ ಸೂರೆಗೊಂಡ ಮೇಲೆ, ಆಗ ಪ್ರಧಾನಿಗಳೂ ಮಹಾ ವಿದ್ವಾಂಸರೂ ಆಗಿದ್ದ ತಮ್ಮಣ್ಣಶಾಸ್ತ್ರಿಗಳು ಎಲ್ಲವನ್ನು ಕಳೆದುಕೊಂಡರೂ, ತಮ್ಮ ಓಲೆಗರಿ ಪುಸ್ತಕಗಳನ್ನು ಶತ್ರು ಸೈನಿಕರು ಉಪಯೋಗಕ್ಕೆಬಾರದ ವಸ್ತುಗಳೆಂದು ಬಿಟ್ಟುಹೋಗಿದ್ದು ದನ್ನು ಕಂಡು ಸಂತೋಷ ಪಟ್ಟು, ಅವುಗಳನ್ನು ಕೋಣಗಳ ಮೇಲೆ ಹೇರಿಸಿಕೊಂಡು ಸಂಸಾರ ಸಮೇತರಾಗಿ ದಕ್ಷಿಣಕ್ಕೆ ವಲಸೆ ಹೊರಟರು. ಈ ಪರಿವಾರವನ್ನು ನೋಡಿದ ಆನೇಕಲ್ಲು ಪಾಳೇಗಾರನು, ಶಾಸ್ತ್ರಿಗಳನ್ನು ಮರ್ಯಾದೆಯಿಂದ ಕಂಡು, ಅಲ್ಲಿಯೇ ಉಳಿಸಿಕೊಂಡನು.

ತಮ್ಮಣ್ಣಶಾಸ್ತ್ರಿಗಳ ಮೊಮ್ಮಗ ವೆಂಕಟರಾಮಾಭಟ್ಟರು ತಿರುಮಕೂಡಲು ನರಸೀಪುರದ ತಾಲ್ಲೂಕು ಸೋಸಲೆ ಗ್ರಾಮಕ್ಕೆ ಬಂದು ನೆಲಸಿದರು. ಇವರ ಮೊಮ್ಮಗ ಸೋಸಲೆ ಅಣ್ಣಯ್ಯಶಾಸ್ತ್ರಿಗಳು ವೈದಿಕ ಲೌಕಿಕ ವೃತ್ತಿಗಳೆರಡರಲ್ಲಿಯೂ ನಿಷ್ಣಾತರಾಗಿದ್ದರು. ಅಣ್ಣಯ್ಯಶಾಸ್ತ್ರಿಗಳ ಮೂರನೆಯ ಮಗ ಸುಪ್ರಸಿದ್ಧ ವಿದ್ವಾಂಸರೂ ಕವಿಗಳೂ ಆದ ಗರಳಪುರೀಶ ಶಾಸ್ತ್ರಿಗಳು ಕ್ರಿ. ಶ. 1822ರಲ್ಲಿ ಜನಿಸಿದರು. ಹೆಸರು ಸ್ವಲ್ಪ ಮೊಟಕಾಗಿ, ಮುಂದೆ, ಗರಳಪುರಿ ಶಾಸ್ತ್ರಿಗಳೆಂದಾಯಿತು. ಇವರ ಎರಡನೆಯ ಮಗನೇ ಅಯ್ಯಾ ಶಾಸ್ತ್ರಿಗಳು.

ಗರಳಪುರಿಶಾಸ್ತ್ರಿಗಳು ಸಂಸ್ಕೃತ ಕಾವ್ಯ, ನಾಟಕ, ಅಲಂಕಾರ, ವ್ಯಾಕರಣಶಾಸ್ತ್ರಗಳಲ್ಲಿ ಪಾಂಡಿತ್ಯ ಸಂಪಾದಿಸಿದ ಮೇಲೆ, ಸೋಸಲೆ ವ್ಯಾಸರಾಯಮಠದಲ್ಲಿ ದೊಡ್ಡವಿದ್ವಾಂಸ ರಾಗಿದ್ದ ತಮ್ಮಯ್ಯಾಚಾರ್ಯರಲ್ಲಿ ತರ್ಕಶಾಸ್ತ್ರವನ್ನು ಅಧ್ಯಯನ ಮಾಡಿ ಅದರಲ್ಲೂ ಪಾಂಡಿತ್ಯ ಗಳಿಸಿದರು. ಒಮ್ಮೆ ಸಾಧಾರಣ ಸಾಹಿತ್ಯಜ್ಞಾನವಿದ್ದ ಪಂಡಿತರೊಬ್ಬರು, ಕವಿತಾ ಸಾಮರ್ಥ್ಯ ವಿಲ್ಲದಿದ್ದರೂ, ಒಂದು ಶ್ಲೋಕವನ್ನು ರಚಿಸಿ, ಧನಾಶೆಯಿಂದ, ಅದನ್ನು ವ್ಯಾಸರಾಯ ಸ್ವಾಮಿಗಳ ಮುಂದೆ ಓದಿದರು. ಕವಿತೆ ನೀರಸವಾಗಿದ್ದರೂ ವಿದ್ವನ್ಮಾತ್ರ ಪಕ್ಷಪಾತದಿಂದ,

ಸ್ವಾಮಿಗಳು ಅವರಿಗೆ ಒಳ್ಳೆಯ ಮರ್ಯಾದೆ ಮಾಡಿ ಕಳುಹಿಸಿಕೊಟ್ಟರು. ಒಂದು ನಿಕೃಷ್ಟವೂ ನೀರಸವೂ ಆದ ಕವಿತೆಗೆ ಹೀಗೆ ಬಹುಮಾನ ಮಾಡಿದ್ದನ್ನು ನೋಡಿ ಎಲ್ಲ ವಿದ್ವಾಂಸರು ಸುಮ್ಮನಿದ್ದರಲ್ಲಾ ಎಂದು ಇಪ್ಪತ್ತು ವರ್ಷದ ಬಿಸಿ ರಕ್ತದ ತರುಣನಾಗಿದ್ದ ಶಾಸ್ತ್ರಿಗಳಿಗೆ ವ್ಯಥೆಯಾಯಿತು. ಆದರೆ ಹಿರಿಯರೆದುರಿಗೆ ಇದನ್ನು ತೋರಿಸಲೂ ಆಗದೆ, ಸುಮ್ಮನಿರಲೂ ಆಗದೆ, ಒಂದು ಶ್ಲೋಕವನ್ನು ರಚಿಸಿ, ಸ್ವಾಮಿಗಳು ನಿತ್ಯವೂ ನದೀತೀರ ದಲ್ಲಿ ಜಪಕ್ಕೆ ಕೂರುತ್ತಿದ್ದ ಮಂಟಪದ ಗೋಡೆಯ ಮೇಲೆ ಬರೆದರು. ಆ ಶ್ಲೋಕವಿದು :

ಅನಾಘ್ರಾತವ್ಯಂಗ್ಯೈಃ ಅಪರಿಚಿತ ಶಬ್ದಾರ್ಥ ರಚನೈಃ
ಅಬುದ್ಧಾಲಂಕಾರೈಃ ಅನವಗತ ಭಾವೋಜ್ಜ್ವಲ ರಸೈಃ ॥
ಯಶೋಮಾತ್ರಾಂಕೂರನ್ನವನವ ದುರಾಶೈಃ ಕುಕವಿಭಿಃ
ದುರಧ್ವೇ ವ್ಯಾಕೃಷ್ಟಾಭಗವತಿ ವಿಪನ್ನಾಸಿ ಕವಿತೇ ॥

ವ್ಯಂಗ್ಯದ ವಾಸನೆಯೇ ಇಲ್ಲದ, ಶಬ್ದ ಮತ್ತು ಅರ್ಥಗಳ ಜ್ಞಾನವಿಲ್ಲದೆ ಪದ್ಯ ಗಳನ್ನು ಕಟ್ಟುವ, ಅಲಂಕಾರಗಳೆಂದರೇನೆಂದೇ ತಿಳಿಯದ, ಭಾವ ಮತ್ತು ರಸಪುಷ್ಟಿಗಳನ್ನರಿಯದ, ಹೆಸರು ಗಳಿಸಬೇಕೆಂಬ ಅಪೇಕ್ಷೆಯಿಂದ ಚಿಗುರುತ್ತಿರುವ ಹೊಸ ಹೊಸ ದುರಾಶೆಯುಳ್ಳ ಕುಕವಿಗಳು ನಿನ್ನನ್ನು ಒರಟು ದಾರಿಯಲ್ಲಿ ಎಳೆದಾಡುತ್ತಿದ್ದಾರೆ. ಭಗವತಿ, ಕವಿತಾ ದೇವಿಯೇ ನಿನಗೆ ಎಂತಹ ದುರ್ದೆಶೆಯಾಗಿದೆ !

ಸ್ವಾಮಿಗಳು ಇದನ್ನು ನೋಡಿ, ವಿಚಾರಿಸಿ, ಶ್ಲೋಕವನ್ನು ರಚಿಸಿದವರು ಯಾರೆಂದು ಕೇಳಿದ ಮೇಲೆ ಸಂತೋಷಪಟ್ಟು ಶಾಸ್ತ್ರಿಗಳನ್ನು ಶ್ಲಾಘಿಸಿ ಹರಸಿದರು. ಒಳ್ಳೆಯ ಕವಿತೆ ಹೇಗಿರಬೇಕೆಂದು ಸೂಚಿಸುವ ಈ ಶ್ಲೋಕ ಮುಂದೆ, ಅಯ್ಯಾಶಾಸ್ತ್ರಿಗಳಿಗೆ ಮಾರ್ಗದರ್ಶಕವಾಯಿತು.

ಸ್ವಲ್ಪ ಕಾಲಾನಂತರ, ಗರಳಪುರಿ ಶಾಸ್ತ್ರಿಗಳು ಮೈಸೂರು ಪಟ್ಟಣವನ್ನು ಸೇರಿ, ಅನೇಕ ವಿದ್ಯಾರ್ಥಿಗಳಿಗೆ ಸಂಸ್ಕೃತ ಪಾಠ ಹೇಳತೊಡಗಿದರು; ಮತ್ತು - ಶ್ರೀಕೃಷ್ಣ ಭೂಪಾಲೀಯಂ - ಎಂಬ ಅಲಂಕಾರ ಶಾಸ್ತ್ರ ಗ್ರಂಥವನ್ನು ರಚಿಸಿದರು. ಇದರಲ್ಲಿರುವ ಉದಾಹರಣ ಪದ್ಯಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರಶಂಸಾತ್ಮಕವಾಗಿವೆ. ಶಾಸ್ತ್ರಿಗಳಿಂದ ನಡೆಯುತ್ತಿದ್ದ ವಿದ್ಯಾದಾನ ಮತ್ತು ಅವರ ಕವಿತಾ ಶಕ್ತಿಗಳು ಕ್ರಮೇಣ ಮಹಾರಾಜರಿಗೆ ತಿಳಿದು ಬಂದು, ಅವರು ಶಾಸ್ತ್ರಿಗಳನ್ನು ಆಸ್ಥಾನ ವಿದ್ವನ್ಮಂಡಲದಲ್ಲಿ ಒಬ್ಬರನ್ನಾಗಿ ಮಾಡಿದರು.

ಮಹಾರಾಜರ ಅಳಿಯಂದಿರು ಲಿಂಗರಾಜೇ ಅರಸಿನವರು, ಮುಂದೆ ಸದ್ವಿದ್ಯಾ ಶಾಲೆಯ ಅಧ್ಯಕ್ಷರಾದ ಪೆರಿಯ ಸ್ವಾಮಿ ತಿರುಮಲಾಚಾರ್ಯರು, ಬಸವಪ್ಪ ಶಾಸ್ತ್ರಿಗಳು, ಇವರು ಗರಳಪುರಿ ಶಾಸ್ತ್ರಿಗಳ ಪ್ರಮುಖ ಶಿಷ್ಯರಲ್ಲಿ ಕೆಲವರು.

ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರನ್ನು ದತ್ತಪುತ್ರರಾಗಿ ಸ್ವೀಕರಿಸಿದ ಮೇಲೆ, ರಾಜಪುತ್ರರಿಗೆ ಸಂಸ್ಕೃತ ಪಾಠ ಹೇಳಲು ಗರಳಪುರಿ ಶಾಸ್ತ್ರಿಗಳನ್ನು ನೇಮಿಸಿದರು.

ಶಾಸ್ತ್ರಿಗಳು ವಿಷ್ಣುಪರವಾಗಿಯೂ, ಶಿವಪರವಾಗಿಯೂ ಎರಡರ್ಥ ಕೊಡುವ ಹರಿಹರಾಷ್ಟೋತ್ತರವನ್ನು ಶ್ಲೋಕರೂಪದಲ್ಲಿ ರಚಿಸಿದ್ದಾರೆ. ಭೋಜರಾಜಕೃತ ಚಂಪೂರಾಮಾಯಣದ ಐದು ಕಾಂಡಗಳ ಸರಣಿಯನ್ನನುಸರಿಸಿ ಅದರಂತೆಯೇ ಲಲಿತವಾದ ಶೈಲಿಯಲ್ಲಿ ಯುದ್ಧಕಾಂಡವನ್ನು ರಚಿಸಿದ್ದಾರೆ. ವಾಗ್ಭಟ (ಬಾಹಟ)ನ "ಅಷ್ಟಾಂಗ ಹೃದಯ"ವೆಂಬ ವೈದ್ಯ ಗ್ರಂಥವನ್ನು, ನಲ್ಲಾಂ ಗೋಪಾಲಕೃಷ್ಣಾಚಾರ್ಯ ರೊಡನೆ ಪರಿಶೋಧಿಸಿದ್ದು, ಅದು ಅರಮನೆಯ ಶಿಲಾಯಂತ್ರ ಮುದ್ರಾಶಾಲೆಯಲ್ಲಿ 1869ರಲ್ಲಿ ಅಚ್ಚಾಗಿದೆ. ಈ ಗ್ರಂಥವನ್ನು ತಮ್ಮ ಸೋದರಳಿಯನೂ, ಅಳಿಯನೂ ಆದ ಮುಂದೆ ಆಯುರ್ವೇದ ಕಾಲೇಜು ಅಧ್ಯಕ್ಷರಾದ ಕೆಂಪುರಾಮಾ ಪಂಡಿತರಿಗೂ, ಇತರ ಅನೇಕರಿಗೂ ಪಾಠ ಹೇಳಿದರು.

ಶಾಸ್ತ್ರಿಗಳು ಪಾಠ ಹೇಳುತ್ತಿದ್ದ ಗ್ರಂಥಗಳೆಲ್ಲ ಅವರಿಗೆ ವಾಚೋವಿಧೇಯವಾಗಿರು ತ್ತಿದ್ದವು. "ಕನಿಷ್ಠ ಪಕ್ಷ ಹತ್ತು ಸಾವಿರ ಶ್ಲೋಕಗಳನ್ನಾದರೂ ಕಂಠಪಾಠ ಮಾಡದ ಹೊರತು ಕವಿತ್ವಕ್ಕೆ ಕೈಹಾಕಬಾರದೆಂದು ಗರಳಪುರಿ ಶಾಸ್ತ್ರಿಗಳು ಮಗನಿಗೆ ಬುದ್ಧಿವಾದ ಹೇಳಿ ಬಸವಪ್ಪ ಶಾಸ್ತ್ರಿಗಳನ್ನು ಉದಾಹರಣೆಯಾಗಿ ತೋರುತ್ತಿದ್ದರು" ಎಂದು ಅಯ್ಯ ಶಾಸ್ತ್ರಿಗಳ ಮಗ ಎಸ್. ಜಿ. ಶಾಸ್ತ್ರಿಗಳು ಬಸವಪ್ಪ ಶಾಸ್ತ್ರಿಗಳ ಶತಮಾನೋತ್ಸವ ಭಾಷಣ ದಲ್ಲಿ ಹೇಳಿದ್ದಾರೆ.

ಶಾಸ್ತ್ರಿಗಳು ತಮ್ಮ ಮಗ ಅಯ್ಯಾಶಾಸ್ತ್ರಿಗಳಿಗೆ ಪ್ರಸಿದ್ಧ ವ್ಯಾಕರಣ ವಿದ್ವಾಂಸರಾದ ಆಸ್ಥಾನ ವಿದ್ವಾನ್ ಮತ್ತು ಆಸ್ಥಾನ ಧರ್ಮಾಧಿಕಾರಿ ಚಾಮರಾಜನಗರದ ಶ್ರೀಕಂಠ ಶಾಸ್ತ್ರಿಗಳ (1833-1917) ಮಗಳು ಲಕ್ಷ್ಮೀದೇವಮ್ಮನವರನ್ನು ತಂದುಕೊಂಡು ಮದುವೆ ಮಾಡಿದ್ದರು. ಬೀಗರು ಶ್ರೀಕಂಠಶಾಸ್ತ್ರಿಗಳೂ ಅವರ ತಮ್ಮಂದಿರು ಆಸ್ಥಾನ ವಿದ್ವಾನ್ ಚಾಮರಾಜನಗರ ರಾಮಶಾಸ್ತ್ರಿಗಳೂ (1843-1911) ಆಗಾಗ ಗರಳಪುರಿ ಶಾಸ್ತ್ರಿಗಳ ಮನೆಗೆ ಬರುತ್ತಿದ್ದರು. ಆಗ ಗರಳಪುರಿ ಶಾಸ್ತ್ರಿಗಳೂ, ರಾಮಶಾಸ್ತ್ರಿಗಳೂ, ಸ್ಪರ್ಧೆ

ಯೆಂದೆಂಬಂತೆ, ಯಮಕ, ಅನುಲೋಮ ಪ್ರತಿಲೋಮಾದಿಗಳನ್ನೊಳಗೊಂಡಂತೆ ಚಿತ್ರಕವಿತೆಗಳನ್ನು ಮಾಡುತ್ತಿದ್ದರು. ಇಬ್ಬರೂ ಒಂದೊಂದು ಪಾದದಂತೆ ರಚಿಸಿದ ಶ್ಲೋಕಗಳೂ ಅನೇಕ. ಅವುಗಳಲ್ಲೊಂದು ಲಲಿತವಾದ ಶ್ಲೋಕ :

(ಗರಳಪುರಿ ಶಾಸ್ತ್ರಿಗಳು)	ಬಧ್ನೀಮೋ ವಯಮಂಜಲಿ
(ರಾಮಶಾಸ್ತ್ರಿಗಳು)	ಸಂಪುಟ ಮವನಮ್ರಿತೇ ಮೂರ್ಧ್ನಿ ।
(ಗ)	ದಧ್ನಾಸಿಕ್ತಕಲೇವರ
(ರಾ)	ಮರ್ಭಕಮೇಕಂ ಪುರಾಣಮುದ್ದಿಶ್ಯ ॥

(ಮೊಸರಿನಿಂದ ಕೊಯ್ದ ದೇಹವುಳ್ಳ ಓರ್ವಪುರಾಣ ಬಾಲಕನನ್ನುದ್ದೇಶಿಸಿ, ನಾವು ತಗ್ಗಿಸಿದ ತಲೆಯ ಮೇಲೆ ಕೈ ಜೋಡಿಸುತ್ತೇವೆ). ಒಂದನೆಯ, ಮತ್ತು ಮೂರನೆಯ ಪಾದಗಳಲ್ಲಿ, ''ಅಂಜಲಿ'' ''ಕಲೇವರ'' ಎಂದು ಪದಮಧ್ಯದಲ್ಲಿ ಸವಾಲಾಗಿ ನಿಲ್ಲಿಸಿರುವುದೂ ಅರ್ಥಕ್ಕೆ ಹೊಂದುವಂತೆ ಮುಂದಿನ ಸಾಲುಗಳನ್ನು ಪೂರಯಿಸಿರುವುದೂ ಶಾಸ್ತ್ರಿಗಳಿಬ್ಬರ ಚಾತುರ್ಯದ್ಯೋತಕವಾಗಿದೆ.

ಆಗ ತರುಣರಾಗಿದ್ದ (20-22 ವರ್ಷ ವಯಸ್ಸು) ಅಯ್ಯಾ ಶಾಸ್ತ್ರಿಗಳು ಕೇಳಿದ್ದ ಕೆಲವು ಶ್ಲೋಕಗಳನ್ನು ಅವರಿಂದ ಸಂಗ್ರಹಿಸಿ, ಚಾಮರಾಜನಗರದ ವೆಂಕಟರಮಣ ಶಾಸ್ತ್ರಿಗಳು[1] ತಮ್ಮ ''ಸೋಸಲೆ ಗರಳಪುರಿ ಶಾಸ್ತ್ರಿಗಳ ಚರಿತ್ರೆ''ಯಲ್ಲಿ ಸೇರಿಸಿದ್ದಾರೆ. ಗರಳಪುರಿ ಶಾಸ್ತ್ರಿಗಳು ನೀಲಕಂಠ ವಿಜಯಕ್ಕೆ ವ್ಯಾಖ್ಯಾನ ರಚಿಸುತ್ತಿರುವಾಗಲೇ 1877ರಲ್ಲಿ ದೇಹತ್ಯಾಗ ಮಾಡಿದರು.

-2-

ಗರಳಪುರಿ ಶಾಸ್ತ್ರಿಗಳ ಎರಡನೆಯ ಮಗ ವೆಂಕಟಸುಬ್ಬ ಶಾಸ್ತ್ರಿಗಳು 1854ರಲ್ಲಿ

---

1. ಮೇಲೆ ಕೊಟ್ಟಿರುವ ವಿವರಗಳಿಗೆ ನಾನು ಈ ಗ್ರಂಥಕ್ಕೆ ಋಣಿಯಾಗಿದ್ದೇನೆ. ವೆಂಕಟರಮಣ ಶಾಸ್ತ್ರಿಗಳು ಚಾಮರಾಜನಗರ ಶ್ರೀಕಂಠ ಶಾಸ್ತ್ರಿಗಳ ಮೊಮ್ಮಗ (ಮಗನ ಮಗ). ಇವರು ಕಾದಂಬರೀ ಸಂಗ್ರಹವೆಂಬ ಪತ್ರಿಕೆಯನ್ನು ಅನೇಕ ವರ್ಷ ನಡೆಸುತ್ತಿದ್ದರು. ಶಾಸ್ತ್ರಿಗಳು ''ಚಾಮರಾಜ ನಗರದ ಶ್ರೀಕಂಠಶಾಸ್ತ್ರಿಗಳ ಚರಿತ್ರೆ'' ''ಕರ್ಣಾಟಕ ರತ್ನದರ್ಪಣ'' (ಚಾಮರಾಜನಗರ ರಾಮಶಾಸ್ತ್ರಿಗಳ ಚರಿತ್ರೆ) ''ಅತ್ತಿಗುಪ್ಪೆ ಕೃಷ್ಣಶಾಸ್ತ್ರಿಗಳ ಚರಿತ್ರೆ'' ಮೊದಲಾದವನ್ನು ರಚಿಸಿದ್ದಾರೆ. ಇವುಗಳಲ್ಲಿರುವ ವಿವರಗಳು ಸ್ವತಃ ಕಂಡಿದ್ದವೋ ಅಥವಾ ಕಂಡಿದ್ದ ಆಪ್ತಬಂಧುಗಳಿಂದ ಸಂಗ್ರಹಿಸಿದ್ದುವೋ ಆದುದರಿಂದ ನಂಬಲರ್ಹವಾಗಿವೆ. ಈ ಚರಿತ್ರೆಗಳು ಸಾಹಿತ್ಯಕಾರರಿಗೆ ಆಕರ ಗ್ರಂಥಗಳಾಗಿವೆ.

ಜನಿಸಿದರು. ಇವರ ತಾಯಿ (ವೆಂಕಟ) ಸುಬ್ಬಮ್ಮನವರು. ಮನೆಯಲ್ಲಿ ಮಗುವನ್ನು ''ಅಯ್ಯಾ'' ಎಂದು ಕರೆಯುತ್ತಿದ್ದುದರಿಂದ ಇವರಿಗೆ ಅಯ್ಯಾಶಾಸ್ತ್ರಿಗಳೆಂದೇ ಹೆಸರಾಯಿತು. ಇವರು ತಮ್ಮ ತಂದೆಯ ಶಿಷ್ಯರಾದ ಪೆರಿಯ ಸ್ವಾಮಿ ತಿರುಮಲಾಚಾರ್ಯರಲ್ಲಿ ಸಂಸ್ಕೃತ ವ್ಯಾಸಂಗ ನಡೆಸಿ ತಮ್ಮ ತಂದೆಯಿಂದಲೇ ಪ್ರೌಢಶಿಕ್ಷಣ ಪಡೆದರು. ತಮ್ಮ ತಂದೆಯ ಮತ್ತೊಬ್ಬ ಶಿಷ್ಯರೇ ಆದ ಬಸವಪ್ಪ ಶಾಸ್ತ್ರಿಗಳಲ್ಲಿ ಕನ್ನಡ ಸಾಹಿತ್ಯಾಭ್ಯಾಸ ಮಾಡಿ, ಕನ್ನಡದಲ್ಲೂ ಪಾಂಡಿತ್ಯಗಳಿಸಿದರು. ಲಿಂಗರಾಜೇ ಅರಸರ ಮತ್ತು ಬಸವಪ್ಪ ಶಾಸ್ತ್ರಿಗಳ ಸಾಹಚರ್ಯದಿಂದ ಗರಳಪುರಿ ಶಾಸ್ತ್ರಿಗಳಿಗೂ ಕನ್ನಡದಲ್ಲಿ ಸಾಕಷ್ಟು ಪಾಂಡಿತ್ಯ ಉಂಟಾಗಿದ್ದರೂ ಅವರು ಕನ್ನಡದಲ್ಲಿ ಗ್ರಂಥರಚನೆ ಮಾಡಲಿಲ್ಲ. ಆದರೆ ಅಯ್ಯಾ ಶಾಸ್ತ್ರಿಗಳ ಮನಸ್ಸು ಕನ್ನಡದ ಕಡೆಗೆ ಒಲಿದು, ಅವರು ಕನ್ನಡದಲ್ಲಿ ಅನೇಕ ಕಾವ್ಯ ನಾಟಕಗಳನ್ನು ರಚಿಸಿದರು. ಅವರು ಸಂಸ್ಕೃತದಲ್ಲಿ ಚಾಮರಾಜೇಂದ್ರ ಪಟ್ಟಾಭಿಷೇಕ ಚಂಪೂ ಮತ್ತು ಕೃಷ್ಣಾಂಬಾ ಪರಿಣಯ ಚಂಪೂ ಎಂಬ ಎರಡು ಗ್ರಂಥಗಳನ್ನು ರಚಿಸಿರು ವುದಾಗಿ ತಿಳಿದು ಬಂದಿದೆ.

ಗರಳಪುರಿ ಶಾಸ್ತ್ರಿಗಳು ತಮ್ಮ ಮಗನಿಗೆ ಕವಿತ್ವಕ್ಕೆ ಬೇಕಾದ ಪೂರ್ವಸಿದ್ಧತೆಯ ವಿಷಯದಲ್ಲಿ ಹೇಳಿದ ಬುದ್ಧಿವಾದವನ್ನು ಒಳ್ಳೆಯ ಕವಿತ್ವದ ಲಕ್ಷಣಗಳನ್ನು ಸೂಚಿಸುವ ಅವರ ಶ್ಲೋಕವನ್ನು ಹಿಂದೆ ಹೇಳಿದೆಯಷ್ಟೆ. ಅವು ಅಯ್ಯಾಶಾಸ್ತ್ರಿಗಳಿಗೆ ದಾರಿದೀಪ ಗಳಾದವು. ತಮ್ಮ ಮನೆಗೆ ಆಗಾಗ ಬರುತ್ತಿದ್ದ ತಮ್ಮ ಚಿಕ್ಕಮಾವನವರಾದ ಚಾಮರಾಜ ನಗರ ರಾಮಶಾಸ್ತ್ರಿಗಳ ವ್ಯಕ್ತಿತ್ವವೂ ಅಯ್ಯಾಶಾಸ್ತ್ರಿಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು.

ರಾಮಶಾಸ್ತ್ರಿಗಳು-ಸೀತಾರಾವಣ ಸಂವಾದಝುರೀಯಂಥ ಕ್ಲಿಷ್ಟವಾದ ಚಿತ್ರ ಕಾವ್ಯವನ್ನು, ಅನೇಕ ಸುಲಲಿತವಾದ ಸ್ತೋತ್ರಗಳನ್ನು, ಸಂಸ್ಕೃತದಲ್ಲಿ ಅನೇಕ ಕೀರ್ತನೆ ಗಳನ್ನು ರಚಿಸಿದ್ದರೂ, ನಿಗರ್ವಿಗಳಾಗಿದ್ದರು. ''ಕೃತಸುಧಾವರ್ಷಂಮನಃಕರ್ಷತಿ'' ಎಂಬ ಸಮಸ್ಯೆಯನ್ನು ಅವರು ಪೂರಣ ಮಾಡಿರುವ ಈ ಶ್ಲೋಕ ಅವರು ಉತ್ತಮ ಕವಿತೆಯ ವಿಷಯದಲ್ಲಿ ಹೊಂದಿದ್ದ ಮನೋಭಾವವನ್ನು ತೋರಿಸುತ್ತದೆ.

ಕೃಷ್ಟೈರ್ಹಂತ ಬಲಾತ್ಪದ್ಯೈಃ ಕತಿಪಯ್ಯೈಃಪದ್ಯಾತ್ಮನಾ ಸಾಹಸಾತ್
ಅಸ್ಮಾಕಂ ಮುಖಕೋಪ್ಯುದಂಚತಿ ನ ಕಿಂ ಯಾ ಕಾಪಿ ವಾಕಿಂತಯಾ ॥
ಸೂಕ್ತಿಃಕಸ್ಯಚಿದೇವ ಸಾ ವಿಜಯತೇ ಯಾ ದ್ವೇಷ ದುಷ್ಪಾತ್ಮನಾಂ
ಶತ್ರೂಣಾಮಪಿ ಕರ್ಣಯೋಃಕೃತಸುಧಾವರ್ಷಂ ಮನಃಕರ್ಷತಿ ॥

(ಎಲ್ಲೆಲ್ಲಿಂದಲೋ) ಎಳೆದು ತಂದ ಕೆಲವು ಪದಗಳನ್ನು ಜೋಡಿಸಿದ ಪದ್ಯರೂಪವಾದ ಯಾವುದೋ ಒಂದು ರಚನೆ ನಮ್ಮ ಮುಖದಿಂದಲೂ, ಹುಚ್ಚು ಧೈರ್ಯದ ಕಾರಣ, ಹೊರಹೊಮ್ಮುವುದಿಲ್ಲವೇ ? ಅದರಿಂದೇನಾಯಿತು ? ದ್ವೇಷದಿಂದ ದೂಷಿತರಾಗಿ ಕೊಲ್ಲಬಂದವರ ಕಿವಿಗಳಲ್ಲೂ ಸಹ ಅಮೃತವನ್ನು ಸುರಿಸಿ ಅವರ ಮನಸ್ಸನ್ನು ಯಾರೋ ಮಹಾತ್ಮನ ಉತ್ತಮ ವಾಣಿಯೇ ಸರ್ವೋತ್ಕೃಷ್ಟವಾಗಿ ಮೆರೆಯುತ್ತದೆ.

ಅಯ್ಯಾ ಶಾಸ್ತ್ರಿಗಳು ತಮ್ಮ ಅನೇಕ ಗ್ರಂಥಗಳ ಪೀಠಿಕೆಗಳಲ್ಲಿ, ಆ ಗ್ರಂಥಗಳನ್ನು ಚಾಮರಾಜನಗರ ರಾಮಶಾಸ್ತ್ರಿಗಳೂ, ಬಿ. ಮಲ್ಲಪ್ಪನವರೂ ಪರಿಶೋಧಿಸಿಕೊಟ್ಟರೆಂದು ಅವರನ್ನು, ನಾಟಕಗಳಲ್ಲಿನ ಹಾಡುಗಳನ್ನು ಪರಿಷ್ಕರಿಸಿದ್ದಕ್ಕಾಗಿ ಬಿಡಾರಂ ಕೃಷ್ಣಪ್ಪನವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದ್ದಾರೆ.

ಗರಳಪುರಿ ಶಾಸ್ತ್ರಿಗಳ ಅನಂತರ ಅಯ್ಯಾಶಾಸ್ತ್ರಿಗಳು ಅರಮನೆಯ ವಿದ್ವಾಂಸರಾದರು; ಕಾಲಕ್ರಮೇಣ ಮಹಾವಿದ್ವಾಂಸರೂ ಆದರು. ಅವರಿಗೆ ''ಕವಿತಿಲಕ'' ಎಂಬ ಪ್ರಶಸ್ತಿಯೂ ದೊರಕಿತು.

-3-

ಅಯ್ಯಾಶಾಸ್ತ್ರಿಗಳು ನಾಲ್ವಡಿ ಕೃಷ್ಣರಾಜ ಒಡೆಯರಿಗೆ, ಅವರ ಚಿಕ್ಕ ವಯಸ್ಸಿನಲ್ಲಿ, ಕನ್ನಡ ಮತ್ತು ಸಂಸ್ಕೃತಗಳನ್ನು ಹೇಳಿಕೊಡುತ್ತಿದ್ದರು. ಮುಂದೆ ಅವರ ಪತ್ನಿಯರಿಗೂ ಪಾಠ ಹೇಳುತ್ತಿದ್ದರು. ಆದುದರಿಂದ ರಾಜಮನೆತನದವರು ಅವರಲ್ಲಿ ಆದರಾಭಿಮಾನಗಳನ್ನಿಟ್ಟಿದ್ದರು; ತುಂಬಾ ಗೌರವ ತೋರಿಸುತ್ತಿದ್ದರು. ಆದರೆ ಶಾಸ್ತ್ರಿಗಳು ಎಂದೂ ಇದರ ದುರುಪಯೋಗ ಮಾಡಿಕೊಂಡವರಲ್ಲ. ಸಾಧ್ಯವಾದ ಮಟ್ಟಿಗೂ ಅರಮನೆಯ ಉಪಕಾರಭಾರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದ್ದರು. ಇಂತಹ ಒಂದೆರಡು ಪ್ರಸಂಗಗಳನ್ನು ಹೇಳುವುದು ಅಪ್ರಸ್ತುತವಾಗಲಾರದು.

ಶಾಸ್ತ್ರಿಗಳ ಕೊನೆಯ ಮಗಳು ವಿವಾಹವಾದ ಸ್ವಲ್ಪ ಕಾಲಕ್ಕೆ ಪತಿಯನ್ನು ಕಳೆದುಕೊಂಡು, ತಂದೆಯ ಮನೆಯಲ್ಲಿದ್ದರು. ಮಹಾರಾಣಿಯವರು ತಮ್ಮ ಗುರುಗಳನ್ನು ನೋಡಲು ಆಗಾಗ ಅವರ ಮನೆಗೇ ಬರುತ್ತಿದ್ದರು. ಅದರಿಂದಾಗಿ ಅವರಿಗೆ ಶಾಸ್ತ್ರಿಗಳ ಮಗಳೊಡನೆ ವಿಶ್ವಾಸ ಬೆಳೆಯಿತು. ಒಮ್ಮೆ ಶಾಸ್ತ್ರಿಗಳು ಅರಮನೆಗೆ ಹೋಗಿದ್ದಾಗ, ರಾಣಿಯವರು ''ಶಾಸ್ತ್ರಿಗಳೇ, ನಿಮ್ಮ ಮಗಳು ಅರಮನೆಯಲ್ಲಿ ಸಂಗೀತ ಕಲಿಯಲಿ. ಅವಳಿಗೆ ಬೇಸರ ಕಳೆಯುತ್ತದೆ'' ಎಂದು ಹೇಳಿದರು. ಶಾಸ್ತ್ರಿಗಳಿಗೆ ತಮ್ಮ ಮಗಳು ಸಂಗೀತ ಕಲಿಯುವುದು ಆಕ್ಷೇಪಣೀಯವಲ್ಲವಾಗಿದ್ದರೂ, ಅರಮನೆಯ ಹಂಗಿಗೆ ಒಳಗಾಗಲು

ಇಷ್ಟವಿರಲಿಲ್ಲ. ಮಗಳನ್ನು ರಾಣಿಯವರ ಬಳಿಗೆ ಕರೆದೊಯ್ಯುವ ಮುಂಚೆ, ರಾಣಿಯವರು ಕೇಳಿದಾಗ, ತನಗೆ ಸಂಗೀತ ಕಲಿಯಲು ಇಚ್ಛೆಯಿಲ್ಲವೆಂದು ಹೇಳುವಂತೆ ಮಗಳಿಗೆ ಹೇಳಿದರು. ಮುಂದೆ, ತಾವೇ ಒಬ್ಬ ಪ್ರಸಿದ್ಧ ಸಂಗೀತ ವಿದ್ವಾಂಸರನ್ನು ಕೇಳಿಕೊಂಡು, ಅವರು ಶಾಸ್ತ್ರಿಗಳ ಮನೆಗೆ ಬಂದು ಸಂಗೀತಪಾಠ ಹೇಳುವ ಏರ್ಪಾಡು ಮಾಡಿದರು.

ಮತ್ತೊಮ್ಮೆ, ಕೃಷ್ಣರಾಜ ಒಡೆಯರವರು, ಪ್ರಸನ್ನಚಿತ್ತರಾಗಿದ್ದಾಗ "ಶಾಸ್ತ್ರಿಗಳೇ, ನಿಮಗೆ ನಾನು ಏನಾದರೂ ಸಹಾಯ ಮಾಡಬಯಸುತ್ತೇನೆ. ನಿಮ್ಮ ಅಪೇಕ್ಷೆ ಏನು ಹೇಳಿ" ಎಂದು ಕೇಳಿದರು. ಆಗ ತಾನೇ ಶಾಸ್ತ್ರಿಗಳ ಮಗಳ ಮಗ ಶ್ರೀ ಎಂ. ಎನ್. ರಾಮಸ್ವಾಮಿಯವರು ರಸಾಯನ ಶಾಸ್ತ್ರದಲ್ಲಿ ಎಂ.ಎಸ್.ಸಿ. ಪದವಿ ಗಳಿಸಿದ್ದರು. ಶಾಸ್ತ್ರಿಗಳು ಮಹಾರಾಜರನ್ನು ಕೇಳಿಕೊಂಡಿದ್ದರೆ, ಮೊಮ್ಮಗನಿಗೆ ಉತ್ತಮವಾದ ಉದ್ಯೋಗ ದೊರಕುತ್ತಿತ್ತು. ಆದರೆ ಶಾಸ್ತ್ರಿಗಳು ಹಾಗೆ ಮಾಡಲಿಲ್ಲ. ಅವರು ಕೇಳಿದ್ದೇ ಬೇರೆ; ತಮ್ಮ ತಂದೆ ಗರಳಪುರಿ ಶಾಸ್ತ್ರಿಗಳು ರಚಿಸಿ, ಅದುವರೆಗೆ ಅಮುದ್ರಿತವಾಗಿದ್ದ "ಶ್ರೀಕೃಷ್ಣಭೂಪಾಲೀಯಂ" ಗ್ರಂಥವನ್ನು ಅಚ್ಚುಮಾಡಿಸಬೇಕೆಂದು ![2]

---

2. ಹಿಂದೆ, ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮೊದಲೆರಡು ಸ್ಥಾನ ಪಡೆದವರನ್ನು ಪ್ರೊಬೆಷನರಿ ಅಸಿಸ್ಟೆಂಟ್ ಕಮೀಷನರ್ ಆಗಿಯೂ, ಮುಂದಿನ ಸ್ಥಾನ ಪಡೆದ ಇಬ್ಬರು ಮೂವರನ್ನು ರೆವಿನ್ಯೂ ಪ್ರೊಬೇಷನರ್ ಆಗಿಯೂ ನೇಮಕ ಮಾಡುತ್ತಿದ್ದರು. ಹಾಗೆ ನೇಮಿಸಲ್ಪಟ್ಟವರು ಮುಂದೆ ಮೈಸೂರು ಸರ್ಕಾರದಲ್ಲಿ ಉನ್ನತಾಧಿಕಾರಕ್ಕೆ ಬರುತ್ತಿದ್ದರು. 1928ರಲ್ಲಿ ನಡೆದ ಪರೀಕ್ಷೆಯಲ್ಲಿ ಮೂರು ನಾಲ್ಕನೆಯ ಸ್ಥಾನಗಳನ್ನು ಗಳಿಸಿದ ರಾಮಸ್ವಾಮಿಯವರೂ, ತೀ. ನಂ. ಶ್ರೀಕಂಠಯ್ಯನವರೂ ರೆವಿನ್ಯೂ ಪ್ರೊಬೇಷನರಾಗಿ ಆಯ್ಕೆಯಾದರು.

   ಆದರೆ, ರಸಾಯನ ಶಾಸ್ತ್ರವನ್ನು ಓದಿದ್ದರ ಸದುಪಯೋಗ ಮಾಡದೆ, ರೆವಿನ್ಯೂ ಇಲಾಖೆಗೆ ಸೇರುವುದು ಸರಿಯಲ್ಲವೆಂಬ ತಮ್ಮ ಹಿರಿಯರ ಸಲಹೆಯನ್ನು ಮನ್ನಿಸಿ, ರಾಮಸ್ವಾಮಿಯವರು ರೆವಿನ್ಯೂ ಪ್ರೊಬೇಷನರಾಗಲಿಲ್ಲ. ಬೆಂಗಳೂರಿನ ತಾತಾ ವಿಜ್ಞಾನ ಸಂಸ್ಥೆಯಲ್ಲೂ, ಜರ್ಮನಿಯಲ್ಲೂ ಉನ್ನತ ವ್ಯಾಸಂಗ ನಡೆಸಿ, ಮೈಸೂರು ಸರ್ಕಾರದ ಅರಣ್ಯ ಇಲಾಖೆಗೆ ಸೇರಿ, ಮುಂದೆ ಬೆಂಗಳೂರಿನ ಅರಣ್ಯ ಸಂಶೋಧನಾ ಸಂಸ್ಥೆಯ ಮುಖ್ಯಸ್ಥರಾದರು.

   ತೀ. ನಂ. ಶ್ರೀಕಂಠಯ್ಯನವರು ರೆವಿನ್ಯೂ ಪ್ರೊಬೇಷನರ್ ಕೆಲಸವನ್ನು ಒಪ್ಪಿಕೊಂಡರೂ, ತಮ್ಮ ಗುರುಗಳಾದ ಪ್ರೊ॥ ಬಿ. ಎಂ. ಶ್ರೀಕಂಠಯ್ಯನವರ ಕರೆಗೆ ಓಗೊಟ್ಟು ಎರಡೇ ತಿಂಗಳಿಗೆ ತಮ್ಮ ಕೆಲಸಕ್ಕೆ ವಿದಾಯ ಹೇಳಿ, ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿ, ಮುಂದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲೂ ಅನಂತರ ಮೈಸೂರು ವಿಶ್ವವಿದ್ಯಾಲಯದಲ್ಲೂ ಕನ್ನಡ ವಿಭಾಗದ ಮುಖ್ಯಸ್ಥರಾದರು.

   ದುರ್ದೈವದಿಂದ, ಇವರಿಬ್ಬರೂ ತಮ್ಮ ಉದ್ಯೋಗಗಳಿಂದ ವಿಶ್ರಾಂತಿ ಪಡೆದ ನಂತರ ಸ್ವಲ್ಪ ಕಾಲದಲ್ಲಿಯೇ ಒಂದೇ ವರ್ಷದಲ್ಲಿ ತಮ್ಮ 61ನೆಯ ವಯಸ್ಸಿನಲ್ಲಿಯೇ ಕಾಲವಶರಾದರು.

ಶಾಸ್ತ್ರಿಗಳದು ಶಿಸ್ತಿನ ಜೀವನ. ದಿನವೂ ರಾತ್ರಿ ಮಲಗುವಾಗ, ತಲೆ ದಿಂಬಿನ ಹತ್ತಿರ ಒಂದು ಕಾಲುಮಣೆಯ ಮೇಲೆ ಬರವಣಿಗೆ ಸಾಮಗ್ರಿಗಳನ್ನು ಇಟ್ಟುಕೊಂಡಿದ್ದು, ರಾತ್ರಿಯಲ್ಲಿ ಎಚ್ಚರವಾದಾಗ ಏನಾದರೂ ವಿಷಯ ಹೊಳೆದರೆ, ಆಗಲೇ ಎದ್ದು ಗುರುತು ಮಾಡಿಕೊಳ್ಳುತ್ತಿದ್ದರು. ವ್ಯವಹಾರದಲ್ಲಿ ಕ್ರಮಬದ್ಧ ರೀತಿಯಲ್ಲಿಯೇ ನಡೆಯುತ್ತಿದ್ದರೂ, ಎಂದೂ ಸ್ನೇಹ ಸೌಜನ್ಯಗಳಿಗೆ ಎರವಾಗುತ್ತಿರಲಿಲ್ಲ. ಈ ನಡತೆ ಎದುರಾಳಿಗಳ ಮೇಲೂ ತನ್ನ ಪ್ರಭಾವವನ್ನು ಬೀರುತ್ತಿತ್ತು. ಒಮ್ಮೆ ಬಂಧುಗಳೊಬ್ಬರೊಡನೆ ಹಣಕಾಸಿನ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು ನ್ಯಾಯಾಲಯಕ್ಕೆ ಹೋಗಬೇಕಾಯಿತು. ಪ್ರತಿವಾದಿಯು ದೂರದಲ್ಲಿದ್ದ ತಮ್ಮ ಗ್ರಾಮದಿಂದ ವಿಚಾರಣಾ ದಿನಗಳಲ್ಲಿ (Date of hearing) ಮೈಸೂರಿಗೆ ಬರಬೇಕಾಗುತ್ತಿತ್ತು. ಹಾಗೆ ಬಂದಾಗ ಅವರು ಶಾಸ್ತ್ರಿಗಳ ಮನೆಯಲ್ಲಿಯೇ ತಂಗಿದ್ದು, ಸ್ನಾನ ಭೋಜನಾದಿಗಳನ್ನು ತೀರಿಸಿಕೊಂಡು, ಇಬ್ಬರೂ ಒಟ್ಟಿಗೆ ನ್ಯಾಯಾಲಯಕ್ಕೆ ಹೋಗುತ್ತಿದ್ದರು. ನ್ಯಾಯಾಧೀಶರು ತೀರ್ಪುಕೊಟ್ಟ ಮೇಲೆ, ಮತ್ತೆ ಉಚ್ಚ ನ್ಯಾಯಾಲಯಕ್ಕೆ ಪುನರ್ವಿಮರ್ಶೆಗಾಗಿ ಹೋಗದೆ, ಇಬ್ಬರೂ ತೀರ್ಪಿನಂತೆ ನಡೆದುಕೊಂಡರು.

ಗ್ರಂಥರಚನೆಯಲ್ಲಿಯೂ ಪಾಠಪ್ರವಚನಗಳಲ್ಲಿಯೂ ನಿರತರಾಗಿ ತುಂಬು ಜೀವನ ನಡೆಸಿ, ಶಾಸ್ತ್ರಿಗಳು 1934ರಲ್ಲಿ ಇಹಲೋಕವನ್ನು ಬಿಟ್ಟರು. ಅಯ್ಯಾಶಾಸ್ತ್ರಿಗಳ ಹಿರಿಯ ಮಗ ಎಸ್.ಜಿ. ಶಾಸ್ತ್ರಿಗಳು ರಸಾಯನ ಶಾಸ್ತ್ರವನ್ನೋದಿ, ಕೈಗಾರಿಕಾ ಖಾತೆಯಲ್ಲಿ ಅಧಿಕಾರಿಗಳಾಗಿದ್ದರೂ, 1920ರ ದಶಕದಲ್ಲೇ ಕನ್ನಡ ಸಣ್ಣಕತೆಗಳನ್ನು ಕಾದಂಬರಿಗಳನ್ನೂ ಬರೆದರು. ಮುಂದೆ ಇಬ್ಸನ್‌ನ ಕೆಲವು ಸಾಮಾಜಿಕ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಅಯ್ಯಾಶಾಸ್ತ್ರಿಗಳ ಮತ್ತೊಬ್ಬ ಮಗ ಕೃಷ್ಣಸ್ವಾಮಿ ಶಾಸ್ತ್ರಿಗಳು ಮೈಸೂರಿನ ಪ್ರಾಚ್ಯ ವಿದ್ಯಾಸಂಶೋಧನಾಲಯ (Oriental Research Institute)ದಲ್ಲಿ ಪಂಡಿತರಾಗಿದ್ದು, ಅನೇಕ ಗ್ರಂಥಗಳನ್ನು ಸಂಪಾದಿಸಿದರು. ಹೀಗೆ, ಶಾಸ್ತ್ರಿಗಳ ಮಕ್ಕಳೂ, ಶಾಸ್ತ್ರಿಗಳ ಸಾಹಿತ್ಯ ಸೇವೆಯನ್ನು ಮುಂದುವರೆಸಿಕೊಂಡು ಬಂದರು.

ನಾ ಕಂಡ ನ್ಯಾಯಮೂರ್ತಿ
ನಿಟ್ಟೂರು ಶ್ರೀನಿವಾಸರಾಯರು

ನನ್ನ ಮಾನಸಾಶ್ವ 65 ವರ್ಷಗಳಿಗೂ ಹಿಂದಿನ ಮೈಸೂರು ನಗರಕ್ಕೆ ಓಡುತ್ತಿದೆ. 1935ರಲ್ಲಿ ನಾನು ಅಲ್ಲಿನ ಶಾರದಾವಿಲಾಸ ಪ್ರೌಢಶಾಲೆ (High school)ನಲ್ಲಿ 40 ರೂ.ಸಂಬಳದ ಮೇಲೆ ಗಣಿತದ ಉಪಾಧ್ಯಾಯನಾಗಿ ಸೇರಿದೆ. ಕೈಗೆ ಬೀಳುತ್ತಿದ್ದುದು 35ರೂ. ಮಾತ್ರ; ಬಾಕಿ ಶಾಲೆಯ ನಿಧಿಗೆ ಹೋಗುತ್ತಿತ್ತಂತೆ. ಆಗ ಕನ್ನಡ ಉಪಾಧ್ಯಾಯರಾಗಿದ್ದ ಶ್ರೀ T.N.ಶ್ಯಾಮರಾಯರು-ಅವರ ಸಂಬಳ 20 ರೂಪಾಯಿ ಇತ್ತೆಂದು ಜ್ಞಾಪಕ-ಉತ್ತಮ ಶಿಕ್ಷಕರೂ ವಿದ್ಯಾರ್ಥಿಗಳ ಗೌರವಾದರ ಪ್ರೀತಿಗಳನ್ನು ಗಳಿಸಿದ್ದವರೂ ಆಗಿದ್ದರು. ಅವರಿಗೂ ನನಗೂ ಸ್ನೇಹ ಕುದುರಿ ಚೆನ್ನಾಗಿ ಬೆಳೆಯಿತು.

ಲಂಡನ್ನಿನ Institute of Actuaries ಸಂಸ್ಥೆಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ, 1940ರಲ್ಲಿ ಶಾಲೆಯನ್ನು ಬಿಟ್ಟು ಪುಣೆಗೆ ಹೋಗಿ, ಮೊದಲು, ಅಲ್ಲಿದ್ದ ವಯೋವೃದ್ಧರಾದ G.S.ಮರಾಠೆಯೆಂಬ Actuaryಗೆ ಸಹಾಯಕನಾಗಿ ಉದ್ಯೋಗ ದಲ್ಲಿದ್ದು 4 ವರ್ಷಗಳ ನಂತರ ಅವರು ಸ್ವಂತ ಉದ್ಯೋಗವನ್ನು ನಿಲ್ಲಿಸಿದ ಮೇಲೆ ನನ್ನ ಸ್ವಂತ Actuary ಉದ್ಯೋಗವನ್ನು ನಾನು ಪ್ರಾರಂಭಿಸಿದೆ. 1945ರಿಂದ 1956ರವರೆಗೆ ಪುಣೆಯಲ್ಲಿ ಆಗ ತಾನೇ ಸ್ಥಾಪಿತವಾಗಿದ್ದ Brihan Maharashtra College of Commerce ಎಂಬ ವಿದ್ಯಾಲಯದಲ್ಲಿಯೂ, ಕೆಲವು ಕಾಲ ಪುಣೆ ವಿಶ್ವವಿದ್ಯಾನಿಲಯದಲ್ಲಿಯೂ Actuarial Science ಮತ್ತು Statisticsಗಳ ಪ್ರಾಧ್ಯಾಪಕನಾಗಿದ್ದೆ. 1956ರಲ್ಲಿ Life Insurance Corporation of India ಸಂಸ್ಥೆಯನ್ನು Assistant Divisional Manager ಆಗಿ ಸೇರಿ 1969ರಲ್ಲಿ ಆ ಉದ್ಯೋಗದಿಂದ ವಿಶ್ರಾಂತಿ ಪಡೆದು 1970ರಲ್ಲಿ ಬೆಂಗಳೂರಿನಲ್ಲಿ ನೆಲೆಸಿದ ಮೇಲೆಯೇ ಮತ್ತೆ ಶ್ಯಾಮರಾಯರೊಡನೆ ಒಡನಾಟ, ಅವರೂ ಬೆಂಗಳೂರಿನಲ್ಲಿಯೇ ನೆಲೆಸಿದ್ದುದರಿಂದ, ಮತ್ತೆ ಲಭಿಸಿತು.

ನಾನು ಶಾರದಾವಿಲಾಸ ಹೈಸ್ಕೂಲನ್ನು ಬಿಟ್ಟು ಹೋದ ಮೇಲೆ ಕೆಲವು ವರ್ಷಗಳ ನಂತರ ಶ್ಯಾಮರಾಯರೂ ಬಿಟ್ಟರಂತೆ. ಅವರ ಕೈಗೆ ಬೀಳುತ್ತಿದ್ದ ಸಂಬಳಕ್ಕೆ ಮಾತ್ರವೇ ರುಜುಮಾಡಲು ಪಟ್ಟುಹಿಡಿದಿದ್ದುದರಿಂದ, ಶಾಲೆಯ ಅಧಿಕಾರವರ್ಗಕ್ಕೆ ಅವರ ಮೇಲೆ ಕೋಪವಿತ್ತು. ಮುಂದೆ ಏನೋ ನೆವ ತೆಗೆದು, ರಜದ ಸಂಬಳ ಕೊಡದೆ ಶಾಲೆಯವರು

ತೊಂದರೆ ಕೊಟ್ಟಿದ್ದರಿಂದ, ವಿಷಯ ನ್ಯಾಯಾಲಯಕ್ಕೆ ಹೋಯಿತು. ಕೆಳಗಿನ ಕೋರ್ಟಿನಲ್ಲಿ ಸ್ಕೂಲಿನ ಪರವಾಗಿ ತೀರ್ಪಾದರೂ ಅಪೀಲ್ ಹೋದ ಮೇಲೆ ಶ್ಯಾಮರಾಯರು ಗೆದ್ದರು. ಅವರ ಪರವಾಗಿ ವಕಾಲತ್ತು ವಹಿಸಿ ಗೆಲಿಸಿದವರು, ಮುಂದೆ ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ, ನಿಟ್ಟೂರು ಶ್ರೀನಿವಾಸರಾಯರು. ಆಗ ನಿಟ್ಟೂರರ ಸಹಾಯಕ (Junior)ಆಗಿದ್ದು ಮುಂದೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶಪದವಿಗೇರಿದ, ಗೋಪೀವಲ್ಲಭಯ್ಯಂಗಾರ್ಯರು ಶ್ಯಾಮರಾಯರ ಸಹಾಧ್ಯಾಯಿ (classmate) ಮತ್ತು ಆಪ್ತಗೆಳೆಯರಾಗಿದ್ದರು.

ನಾನೂ ಶ್ಯಾಮರಾಯರೂ ಬೆಂಗಳೂರಿನಲ್ಲಿ ನೆಲೆಸಿದ ಕೆಲವು ವರ್ಷಗಳ ನಂತರ ಪುರಭವನ (Town Hall)ದಲ್ಲಿ, ಡಾ। ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಡಾ। ಮಾಸ್ತಿ ವೆಂಕಟೇಶಯ್ಯಂಗಾರ್ಯರಿಗೆ ಪುರಸ್ಕಾರ ನಡೆಯಿತು. ನಾವು ಅಲ್ಲಿಗೆ ಹೋಗಿದ್ದಾಗ ಶ್ಯಾಮರಾಯರು ನಿಟ್ಟೂರು ಶ್ರೀನಿವಾಸರಾಯರ ಪರಿಚಯ ಮಾಡಿಕೊಟ್ಟರು. ನಿಟ್ಟೂರವರು ಅವರ ಸಹಜವಾದ ನಗುಮೊಗದಿಂದ ಮಾತನಾಡಿಸಿ ನನಗೆ ಗೌರವ ತೋರಿಸಿದರು. ಮುಖ್ಯನ್ಯಾಯಾಧೀಶರಾಗಿದ್ದವರೂ ಎಲ್ಲರೊಡನೆಯೂ ಸಮಾನತೆಯಿಂದ ನಡೆದು ಕೊಳ್ಳುತ್ತಿದ್ದುದನ್ನು ನೋಡಿ ನನಗೆ ಪರಮಾಶ್ಚರ್ಯವಾಯಿತು. ಹೀಗೆ ಆರಂಭವಾದ ನಮ್ಮ ಪರಿಚಯ ಕ್ರಮೇಣ ಗಾಢ ಸ್ನೇಹವಾಗಿ ತಿರುಗಿದುದು ನನ್ನ ಭಾಗ್ಯ. Gokhale Institute of Public Affairs (ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ)ಯ ಸ್ಥಾಪಕ ಕಾರ್ಯದರ್ಶಿಗಳಾಗಿದ್ದ ಡಿ.ವಿ.ಜಿ.ಯವರಿಗೆ ಸಾರ್ವಜನಿಕ ಕಾರ್ಯಗಳಲ್ಲಿ ಸಹಾಯಮಾಡುತ್ತಿದ್ದ ಶ್ರೀನಿವಾಸರಾಯರು, ಗುಂಡಪ್ಪನವರು ಕೀರ್ತಿಶೇಷರಾದ ಮೇಲೆ, ತಾವೇ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು ಈಗ ತಾನೇ ಆ ಕೆಲಸವನ್ನು ಬೇರೆಯವರಿಗೆ ವಹಿಸಿದ್ದಾರೆ.

ನಿಟ್ಟೂರು ಶ್ರೀನಿವಾಸರಾಯರು 1922ರಲ್ಲಿ B.A.ಪರೀಕ್ಷೆಯಲ್ಲೂ ಅನಂತರ B.L.ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿದರು. ಸ್ವಲ್ಪ ಕಾಲ ಬೆಂಗಳೂರಿನ National High Schoolನಲ್ಲಿ ಉಪಾಧ್ಯಾಯರಾಗಿದ್ದರು. ಅವರೂ ಅವರ ಪತ್ನಿಯವರೂ ಗಾಂಧೀಜಿಯವರ ಆತ್ಮಕಥೆಯನ್ನು ಕನ್ನಡಿಸಿ "ಸತ್ಯಶೋಧನೆ"ಎಂಬ ಹೆಸರಿನಿಂದ ಪ್ರಕಟಿಸಿದರು. ಅವರು ಸತ್ಯಶೋಧನ ಪುಸ್ತಕ ಭಂಡಾರವನ್ನು ಸ್ಥಾಪಿಸಿ, ತಾವು ಬರೆದ ಪುಸ್ತಕಗಳನ್ನೂ ಇತರ ಪುಸ್ತಕಗಳನ್ನೂ ಊರೂರುಗಳಿಗೆ ಕೊಂಡೊಯ್ದು ಮಾರಾಟಮಾಡಿ ಜನಜಾಗೃತಿಯನ್ನುಂಟು ಮಾಡಿದರು.

ವಕೀಲವೃತ್ತಿಯನ್ನಾರಂಭಿಸಿದ ಮೇಲೆ ಬೆಂಗಳೂರಿನ ಪ್ರಸಿದ್ಧ ವಕೀಲರಲ್ಲೊಬ್ಬ ರಾದರು. ಮುಂದೆ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾಗಿ 1963ರಲ್ಲಿ ನಿವೃತ್ತ ರಾದರು. ಅನಂತರ ದೆಹಲಿಯಲ್ಲಿ ಭಾರತದ Vigilance Commissioner (ಈಗಿನ ಲೋಕ ಆಯುಕ್ತ) ಆಗಿದ್ದು 1968ರಲ್ಲಿ ನಿವೃತ್ತಿಹೊಂದಿ, ಅನಂತರ ಸಾರ್ವಜನಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ವೃದ್ಧಾಪ್ಯದಲ್ಲೂ, ಕಾಲುನೋವಿನಿಂದ ಶ್ರಮ ಪಡುತ್ತಿದ್ದರೂ ಲೋಕಸೇವೆಯನ್ನು ಮಾಡುತ್ತಿದ್ದಾರೆ.

ಹಿಂದೆ ಮೈಸೂರು ಮಹಾರಾಜಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ಭಾರತೀಯ ತತ್ತ್ವಶಾಸ್ತ್ರದಲ್ಲಿ 'ಇದಮಿತ್ಥಂ' ಎಂದು ನಿರ್ಣಾಯಕವಾಗಿ ಹೇಳಬಲ್ಲವರಾಗಿದ್ದ ಪೂಜ್ಯ M.ಹಿರಿಯಣ್ಣನವರು ನಿಟ್ಟೂರು ಶ್ರೀನಿವಾಸರಾಯರ ಸೋದರಮಾವ. ಡಾ। ಸರ್ವೇಪಲ್ಲಿ ರಾಧಾಕೃಷ್ಣನ್‌ರವರು ಇವರನ್ನು ಗುರುಸ್ಥಾನೀಯರಾಗಿ ಭಾವಿಸಿದ್ದರು. ಅವರ ತಮ್ಮ ಮೈಸೂರು ಸಂಸ್ಥಾನದ ಮಾಜಿ ದಿವಾನ್ M.N.ಕೃಷ್ಣರಾಯರು ರಾಯರ ಮಾವಂದಿರೂ ಸಹ, ಶ್ರೀನಿವಾಸರಾಯರ ಚಿಕ್ಕಮ್ಮನಮಗ T.N.ರಾಮಸ್ವಾಮಿಯವರು ವಾರಾಣಸಿಯ ಹಿಂದೂ ವಿಶ್ವವಿದ್ಯಾಲಯದಲ್ಲಿ ಕೀರ್ತಿವೆತ್ತ ಪ್ರಾಧ್ಯಾಪಕರಾಗಿದ್ದರು. (ಇವರೂ ನಾನೂ ಸಹಾಧ್ಯಾಯಿಗಳಾಗಿದ್ದೆವು ಮಹಾರಾಜ ಕಾಲೇಜಿನಲ್ಲಿ) ಬೆಂಗಳೂರಿನ ಸುಪ್ರಸಿದ್ಧ ನ್ಯಾಯವಾದಿ N.S.ಚಂದ್ರಶೇಖರ ಮತ್ತು N.S.ಸುಬ್ಬಣ್ಣ ಇವರು ಶ್ರೀನಿವಾಸರಾಯರ ಮಕ್ಕಳು.

ಶ್ರೀನಿವಾಸರಾಯರ ಜ್ಞಾಪಕಶಕ್ತಿ ಅಪಾರ. ಕಳೆದ 80-85 ವರ್ಷಗಳಲ್ಲಿ ನಡೆದ ಎಲ್ಲವನ್ನೂ ನೆನಪಲ್ಲಿಟ್ಟಿದ್ದಾರೆ. ಅವರ ಪರಿಚಯದ ವಲಯವೂ ದೊಡ್ಡದು. ಬೆಂಗಳೂರಿನಲ್ಲಿ ನಿಟ್ಟೂರವರಿಲ್ಲದ ಸಮಾರಂಭಗಳು ವಿರಳ. ಯಾರು ಆಹ್ವಾನಿಸಿದರೂ ಕರೆದವರ ಅಂತಸ್ತನ್ನು ನೋಡದೆ, ಅಲ್ಲಿಗೆ ಹೋಗಿ ಕರೆದವರ ಮನಸ್ಸಿಗೆ ಸಂತಸವೀಯು ತ್ತಾರೆ. ಹೀಗಾಗಿ ಹಿಂದಿನ ಯಾವವಿಷಯವನ್ನು ತಿಳಿಯಬೇಕಾದರೂ ಅವರನ್ನು ಕೇಳಿದರೆ ನಿಖರವಾದ ಮಾಹಿತಿ ದೊರಕುತ್ತದೆ. ಆದರೆ ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆಯಂತೆ ತಮ್ಮ ನೆನಪುಗಳನ್ನು ಬರೆಯಲೊಲ್ಲರು. ತಮ್ಮಲ್ಲಿ ಹೇಳಿಕೊಳ್ಳುವಂತಹದೇನಿದೆ? ಎಂಬ ನಿರ್ಲಿಪ್ತಮನೋಭಾವ ಅವರದು.

ತುಂಬು ಜೀವನವನ್ನು ನಡೆಸುತ್ತಾ ಶತಾಯುಷಿಗಳಾದ ಶ್ರೀನಿವಾಸರಾಯರು ತಮ್ಮ ಚಟುವಟಿಕೆಗಳಲ್ಲಿ ಚಿಕ್ಕವರನ್ನೂ ನಾಚಿಸುತ್ತಾರೆ. ಭಾರತದ ಸುಪ್ರಸಿದ್ಧ ಜ್ಯೋತಿಶಾಸ್ತ್ರಜ್ಞ

ನಾಗಿದ್ದ ವರಾಹಮಿಹಿರಾಚಾರ್ಯನು ತನ್ನ ''ಬೃಹಜ್ಜಾತಕ''ವೆಂಬ ಗ್ರಂಥದಲ್ಲಿ ''ಸಮಾಷ್ಷಷ್ಟಿ ರ್ದ್ವಿಘ್ನಾಮನುಜ ಕರಿಣಾಂ ಪಂಚ ಚ ನಿಶಾಃ'' (ಮನುಷ್ಯರಿಗೂ ಆನೆಗಳಿಗೂ 120 ವರ್ಷಗಳು 5 ದಿನಗಳು ಪರಮಾಯುಸ್ಸು) ಎಂದು ಹೇಳಿದ್ದಾನೆ. ಶ್ರೀನಿವಾಸರಾಯರು ಈ ಪರಮಾಯುಸ್ಸನ್ನು ಪಡೆದುಕೊಂಡು ಮುಂದೆಯೂ ದೀರ್ಘಕಾಲವಿದ್ದು ನಮಗೆ ಮಾರ್ಗದರ್ಶನ ಮಾಡುತ್ತಿರುವಂತೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸಿ, ಸಮಾರಂಭ ಚೆನ್ನಾಗಿ ನಡೆಯಲೆಂದು ಪ್ರಾರ್ಥಿಸಿ ವಿರಮಿಸುತ್ತೇನೆ.

14-10-2002

(ಚಿತ್ರಭಾನು ಸಂವತ್ಸರದ ಆಶ್ವಯುಜ

ಶುಕ್ಲನವಮಿ - ಮಹಾನವಮೀ)

ಸೌರವ್ಯೂಹ(Solar System)ದ ಉತ್ಪತ್ತಿ

ಮೋಡವಿಲ್ಲದ ರಾತ್ರಿ ಆಕಾಶದ ಕಡೆ ನೋಡಿದರೆ ಸಹಸ್ರಾರು ಚುಕ್ಕಿಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ಗ್ರಹಗಳು. ಕೆಲವು ನಕ್ಷತ್ರಗಳು ಮತ್ತೆ ಕೆಲವು ನಕ್ಷತ್ರಗಳ ಗುಂಪುಗಳು (Star Clouds), ಇನ್ನು ಕೆಲವು ಮುಂದೆ ನಕ್ಷತ್ರ ರೂಪವನ್ನು ಹೊಂದುವ ನಾಕ್ಷತ್ರ ಮೇಘ (nebulae)ಗಳು. ಇವುಗಳಲ್ಲಿ ಕೆಲವು ಘನರೂಪ (Solid)ದಲ್ಲಿವೆ; ಮತ್ತು ಕೆಲವು ದ್ರವರೂಪದಲ್ಲಿಯೂ ಇರಬಹುದು. ಆದರೆ ಅನಿಲರೂಪ (Gaseous) ದಲ್ಲಿರುವುದೇ ಬಹಳ ಹೆಚ್ಚು. ನಮಗೆ ಕಾಣುವ ಈ ಚುಕ್ಕಿಗಳೆಲ್ಲಾ ಸ್ವಪ್ರಕಾಶದಿಂದಲೇ ಹೊಳೆಯುತ್ತಿಲ್ಲ. ಗ್ರಹಗಳೂ (Planets) ಮತ್ತು ಉಪಗ್ರಹಗಳೂ (Satellites) ಸೂರ್ಯನ ಪ್ರಕಾಶವನ್ನು ಪ್ರತಿಫಲಿಸುವುದರಿಂದ ಪ್ರಕಾಶಮಾನವಾಗಿ ಕಾಣುತ್ತಿವೆ. ನಕ್ಷತ್ರಗಳು ಸ್ವಪ್ರಕಾಶದಿಂದ ಹೊಳೆಯುತ್ತಿವೆ. ಪ್ರಕಾಶವೇ ಇಲ್ಲದ ಕಪ್ಪುಬಣ್ಣದ ನಕ್ಷತ್ರಗಳೂ ಇವೆಯೆಂದು ಜ್ಯೋತಿಷ್ಕರು (Astronomers) ಕಂಡುಹಿಡಿದಿದ್ದಾರೆ.

ಇವುಗಳನ್ನು ನೋಡಿದರೆ ನಮಗೆ ಆಶ್ಚರ್ಯವೂ, ಇವುಗಳು ಹೇಗೆ ಉತ್ಪನ್ನ ವಾದುವೆಂದು ತಿಳಿಯಲು ಕುತೂಹಲವೂ ಉಂಟಾಗುವುದು ಸಹಜ. ನೂರಾರು ವರ್ಷಗಳ ಶೋಧನೆ (research)ಯ ಫಲವಾಗಿ ವೈಜ್ಞಾನಿಕರು (Scientists) ಇವುಗಳು ಉತ್ಪತ್ತಿಯಾದ ಕ್ರಮವನ್ನು ಊಹಿಸಿದ್ದಾರೆ.

ಕೋಟ್ಯಂತರ ವರ್ಷಗಳ ಹಿಂದೆ ಗ್ರಹಗಳಾಗಲೀ ನಕ್ಷತ್ರಗಳಾಗಲೀ ಇರಲಿಲ್ಲ. ನಕ್ಷತ್ರಗಳಿಂದ ತುಂಬಿರುವ ಅಂತರಾಳವೆಲ್ಲ ನಕ್ಷತ್ರದ ಮೂಲಪದಾರ್ಥಗಳಾದ ಅನಿಲರೂಪ ವಸ್ತುಗಳಿಂದ ತುಂಬಿತ್ತು. ಈ ಅನಿಲ ಅಣುಗಳು ಪರಸ್ಪರ ಆಕರ್ಷಣೆಯಿಂದ ಬೇರೆ ಬೇರೆ ಗಾತ್ರದ ಉಂಡೆಗಳಾದುವು. ಹೀಗೆ ಉಂಡೆಗಳಾಗುವಾಗ ಉಂಟಾದ ವೇಗದಿಂದ ಈ ಉಂಡೆಗಳು ತಮ್ಮಷ್ಟಕ್ಕೆ ತಾವೇ ಚಕ್ರದಂತೆ ಸುತ್ತಲು ಪ್ರಾರಂಭ ಮಾಡಿದುವು. ಹೀಗೆ ಸುತ್ತುವಾಗ ಸಾಂದ್ರತೆ (Density) ಹೆಚ್ಚಿ ಈ ಉಂಡೆಗಳು ಸಣ್ಣಗಾಗುತ್ತ ಬಂದವು. ಇವು ಸಣ್ಣಗಾಗುತ್ತ ಬಂದಂತೆಲ್ಲ ಸುತ್ತುವ ವೇಗವು ಹೆಚ್ಚುತ್ತ ಹೋಯಿತು. ಹೀಗೆ ಉಂಟಾದ ಉಂಡೆಗಳು ಬೇರೆ ಬೇರೆ ವೇಗದಲ್ಲಿ ತಮ್ಮ ಸುತ್ತ ತಾವೇ ಚಕ್ರದಂತೆ ಸುತ್ತುತ್ತಿದ್ದವು. ಈ ಉಂಡೆಗಳೇ ನಾಕ್ಷತ್ರ ಮೇಘಗಳು (nebulae). ನಮಗೆ ನಕ್ಷತ್ರಗಳಾಗಿ ಕಾಣುವ ಚುಕ್ಕಿಗಳಲ್ಲಿ ಅನೇಕ ಚುಕ್ಕಿಗಳು ಇಂತಹ ನಾಕ್ಷತ್ರ ಮೇಘಗಳು.

ಪ್ರಾರಂಭದಲ್ಲಿ ಈ ನಾಕ್ಷತ್ರ ಮೇಘಗಳೆಲ್ಲಾ ಗೋಳಾಕಾರ (Spherical)ವಾಗಿದ್ದುವು. ಇವುಗಳ ವ್ಯಾಸಗಳು (Diameters) ಕೋಟ್ಯನುಕೋಟಿ ಮೈಲಿಗಳು. ಇವುಗಳು ಸುತ್ತುವ ವೇಗವು ಹೆಚ್ಚಿದಂತೆಲ್ಲ ಇವು ಚಪ್ಪಟೆಯಾಗುತ್ತ ಬಂದು, ಕೊನೆಗೆ ಜಾಗಟೆಯಾಕಾರಕ್ಕೆ ಬಂದುವು. ಆಗ ವೇಗವು ಇನ್ನೂ ಹೆಚ್ಚಾಗಲು ಒಂದು ಕೊಳ್ಳಿಯನ್ನು ತಿರುಗಿಸಿದರೆ ಆದರಿಂದ ಕಿಡಿಗಳು ಹೊರಡುವಂತೆ ಇವುಗಳಿಂದ ಅನಿಲಪ್ರವಾಹಗಳು ಹೊರಟವು. ಇವುಗಳು ಪುನಃ ಆಕರ್ಷಣಾ ಶಕ್ತಿಯಿಂದ ಚಿಕ್ಕ ಚಿಕ್ಕ ಉಂಡೆಗಳಾದುವು. ಇವೇ ನಕ್ಷತ್ರಗಳು. ಇಂತಹ ನಕ್ಷತ್ರಗಳಲ್ಲಿ ಸೂರ್ಯನೂ ಒಂದು. ಸೂರ್ಯನ ವ್ಯಾಸ ಸುಮಾರು 8½ ಲಕ್ಷ ಮೈಲಿ. ಸೂರ್ಯನಿಗಿಂತ ನೂರುಪಾಲು ದೊಡ್ಡದಾದ ನಕ್ಷತ್ರಗಳೂ ಇವೆ. ಆದರೆ ಸೂರ್ಯನಿಗಿಂತ ಚಿಕ್ಕ ನಕ್ಷತ್ರಗಳೇ ಹೆಚ್ಚು. ಹೀಗೆಯೇ ತೂಕದಲ್ಲಿಯೂ ಪ್ರಕಾಶದಲ್ಲಿಯೂ ಕೂಡ ಸೂರ್ಯನನ್ನು ಮೀರಿಸಿದ ನಕ್ಷತ್ರಗಳಿಗಿಂತ ಸೂರ್ಯನಿಗಿಂತ ಕಡಿಮೆಯಾಗಿರುವ ನಕ್ಷತ್ರಗಳೇ ಬಹಳ.

ಹೀಗೆ ಉಂಟಾದ ನಕ್ಷತ್ರಗಳು ವೇಗದಿಂದ ತಿರುಗುತ್ತಾ ವೇಗವು ಬಹಳ ಹೆಚ್ಚಾದಾಗ ಚೂರುಚೂರಾಗಿ ಒಡೆದುಹೋಗಿ ನಕ್ಷತ್ರದ ಗುಂಪು (Star clouds)ಗಳಾಗಿವೆ. ಕೆಲವು ವೇಳೆ ಉಷ್ಣತೆಯು ಕಡಿಮೆಯಾಗಿ ನಕ್ಷತ್ರವು ದ್ರವರೂಪವನ್ನು ಸಮೀಪಿಸಿದಾಗ ಅದು ಸುತ್ತುವ ವೇಗದಿಂದ ಗೋಳಾಕಾರವಾಗಿದ್ದ ನಕ್ಷತ್ರವು ಕ್ರಮವಾಗಿ ಚಪ್ಪಟೆಯಾಗುತ್ತಾ ಬರುತ್ತದೆ. ಅನಂತರ ಅದರ ಮಧ್ಯಭಾಗವು ಸಣ್ಣಗಾಗುತ್ತ ಬಂದು ಕಾಲಕ್ರಮೇಣ ನಕ್ಷತ್ರವು ಒಡೆದು ಎರಡು ಪಾಲಾಗುತ್ತದೆ. ಹೀಗೆ ಪಾಲಾದ ಮೇಲೆ ಈ ಪಾಲುಗಳು ಒಂದರ ಸುತ್ತ ಮತ್ತೊಂದು ಸುತ್ತಲು ಪ್ರಾರಂಭಿಸುತ್ತವೆ. ಇವೇ ಯಮಳ ನಕ್ಷತ್ರ (Binary Stars)ಗಳು.

ಆಕಾಶದಲ್ಲಿ ಅನೇಕ ನಕ್ಷತ್ರಗಳಿದ್ದರೂ ಸೂರ್ಯನಂತೆ ಗ್ರಹಗಳಿಂದ ಕೂಡಿದ ನಕ್ಷತ್ರಗಳು ಬಹಳ ವಿರಳ. ಸುಮಾರು ಲಕ್ಷಕ್ಕೆ ಒಂದು ನಕ್ಷತ್ರಕ್ಕಿಂತ ಹೆಚ್ಚಾಗಿ ಗ್ರಹಗಳಿಂದ ಕೂಡಿದ ನಕ್ಷತ್ರಗಳಿಲ್ಲವೆಂದು ಶಾಸ್ತ್ರಜ್ಞರು ಊಹಿಸಿದ್ದಾರೆ. ಹೀಗೆ ಗ್ರಹಗಳು ಉತ್ಪತ್ತಿಯಾಗಲು ಕಾರಣವನ್ನು 1796ರಲ್ಲಿ ಲಾಪ್ಲಾಸ್ (Laplace) ಎಂಬ ಗಣಿತ ಶಾಸ್ತ್ರಜ್ಞನು ಮೊದಲು ಊಹಿಸಿದನು. ಇವನ ಮತ (theory)ದಂತೆ ನಕ್ಷತ್ರವು ಸುತ್ತುವ ವೇಗ ಹೆಚ್ಚಾದಂತೆಲ್ಲ ನಕ್ಷತ್ರವು ಸಣ್ಣಗಾಗಲು ಮೊದಲಾಗುತ್ತದೆ. ಹೀಗೆ ಸಣ್ಣಗಾಗುವಾಗ ಇದರ ಸ್ವಲ್ಪ ಭಾಗವು ಇದರಿಂದ ಬೇರ್ಪಟ್ಟು ಘನೀಭೂತವಾಗಿ (condense) ಒಂದು ಗ್ರಹವಾಗುತ್ತದೆ.

ಇನ್ನೂ ಸಣ್ಣಗಾದ ಮೇಲೆ ಇನ್ನೂ ಸ್ವಲ್ಪ ಭಾಗವು ಬೇರ್ಪಟ್ಟು ಇನ್ನೊಂದು ಗ್ರಹವಾಗುತ್ತದೆ. ನಕ್ಷತ್ರದಿಂದ ಗ್ರಹಗಳು ಹುಟ್ಟಿದಂತೆಯೇ ಗ್ರಹಗಳಿಂದ ಉಪಗ್ರಹಗಳುಂಟಾಗುತ್ತವೆ.

ಮೇಲಿನ ಸಿದ್ಧಾಂತವನ್ನು ಶಾಸ್ತ್ರಜ್ಞರು ಸುಮಾರು ಒಂದು ಶತಮಾನ ಕಾಲ ಸರಿಯೆಂದು ಒಪ್ಪಿದ್ದರು. ಆದರೆ ಈಚೆಗೆ ಇದಕ್ಕೆ ಬಹಳ ಆಕ್ಷೇಪಣೆಗಳುಂಟಾಗಿವೆ. ಮೇಲಿನ ಸಿದ್ಧಾಂತವು ನಿಜವಾಗಿದ್ದರೆ ಗ್ರಹಗಳನ್ನುಳ್ಳ ನಕ್ಷತ್ರಗಳು ಕಡಿಮೆಯಾಗಿರಲು ಕಾರಣವಿರಲಿಲ್ಲ. ಅಲ್ಲದೆ ಸುತ್ತುವ ವೇಗ ಹೆಚ್ಚಾಗಿ ನಕ್ಷತ್ರವು ಒಡೆದರೆ ಉಂಟಾಗುವ ಭಾಗಗಳು ಸುಮಾರಾಗಿ ಒಂದೇ ಗಾತ್ರದವಾಗಿರಬೇಕೆಂದು ತಿಳಿದು ಬಂದಿದೆ. ಆದರೆ ಗ್ರಹಗಳು ಸೂರ್ಯನಿಗಿಂತ ಬಹಳ ಚಿಕ್ಕವು. ಇವೇ ಮೊದಲಾದ ಆಕ್ಷೇಪಣೆಗಳ ದೆಸೆಯಿಂದ ಮೇಲಿನ ಸಿದ್ಧಾಂತವನ್ನು ಈಗ ಬಹಳ ಸಿದ್ಧಾಂತಿಗಳು (Astronomers) ಒಪ್ಪುವುದಿಲ್ಲ.

ಈಚೆಗೆ ಸರ್ ಜೇಂಸ್ ಜೀನ್ಸ್ (Sir James Jeans) ಎಂಬ ವೈಜ್ಞಾನಿಕನು ಬೇರೆ ಒಂದು ಸಿದ್ಧಾಂತವನ್ನು ಸೂಚಿಸಿದ್ದಾನೆ. ಈ ಸಿದ್ಧಾಂತದ ಪ್ರಕಾರ ಗ್ರಹಗಳು ಉತ್ಪತ್ತಿ ಯಾಗುವುದು ಎರಡು ನಕ್ಷತ್ರಗಳು ಒಂದನ್ನೊಂದು ತೀರ ಸಮೀಪಿಸಿದಾಗ, ಹೀಗೆ ನಕ್ಷತ್ರಗಳು ಸಮೀಪಿಸುವುದು ಬಹಳ ಅಪರೂಪ. ಆದುದರಿಂದಲೇ ಗ್ರಹಗಳಿಂದ ಕೂಡಿದ ನಕ್ಷತ್ರಗಳು ಬಹಳ ಕಡಿಮೆ.

ಎರಡು ನಕ್ಷತ್ರಗಳು ಒಂದನ್ನೊಂದು ಸಮೀಪಿಸಿದಾಗ ಸಮುದ್ರದಲ್ಲಿ ಅಲೆಗಳು ಉಬ್ಬುವಂತೆ, ಆ ನಕ್ಷತ್ರಗಳ ಪರಸ್ಪರ ಆಕರ್ಷಣಾ ಶಕ್ತಿಯಿಂದ ಎರಡರಲ್ಲಿಯೂ ಅಲೆಗಳುಂಟಾಗುವುವು. ಈ ನಕ್ಷತ್ರಗಳು ಸಮೀಪಿಸಿದಂತೆಲ್ಲ ಈ ಅಲೆಗಳ ಎತ್ತರವು ಹೆಚ್ಚುತ್ತ ಹೋಗುವುದು. ಕೊನೆಗೆ ಈ ಅಲೆಗಳು ಕೋಟ್ಯಂತರ ಮೈಲಿಗಳ ಎತ್ತರವಾಗಿರಬಹುದು. ಅನಂತರ ನಕ್ಷತ್ರಗಳು ದೂರವಾಗುತ್ತ ಹೋದಹಾಗೆಲ್ಲ ಕೋಡಿನಂತೆ ಹೊರಟಿರುವ ಅಲೆಯು ಸಣ್ಣ ನಕ್ಷತ್ರದಿಂದ ಬೇರ್ಪಡುವುದು. ಆದರೆ ಇದು ಸಣ್ಣ ನಕ್ಷತ್ರದ ಭಾಗವಾದುದರಿಂದ ಆ ನಕ್ಷತ್ರದಿಂದ ಬಹಳ ದೂರ ಹೋಗಲಾರದು. ಹೀಗೆ ಬೇರ್ಪಟ್ಟ ನಕ್ಷತ್ರದ ಭಾಗವು ನಕ್ಷತ್ರದ ಸುತ್ತಲೂ ಸುತ್ತಲು ಪ್ರಾರಂಭವಾಗಿ ವೇಗವು ಹೆಚ್ಚಾದಂತೆಲ್ಲ ಪುನಃ ಭಾಗವಾಗಿ ಸಣ್ಣ ಸಣ್ಣ ಉಂಡೆಗಳಾಗಿ ಮಾರ್ಪಡುವುದು. ಈ ಸಣ್ಣ ಸಣ್ಣ ಉಂಡೆಗಳೇ ಗ್ರಹಗಳು. ಹೀಗೆ ಮಾರ್ಪಡುವುದಕ್ಕೆ ಮುಂಚೆ ಈ ಬೇರ್ಪಟ್ಟ ಭಾಗವು ಮಧ್ಯದಲ್ಲಿ ದಪ್ಪನಾಗಿಯೂ ತುದಿಯಲ್ಲಿ ಸಣ್ಣಗೂ ಇರುತ್ತದೆ. ಆದುದರಿಂದ ಈ

ಭಾಗದಿಂದ ಗ್ರಹಗಳುಂಟಾದಾಗ ಮಧ್ಯದಲ್ಲಿ ದೊಡ್ಡ ಗ್ರಹಗಳೂ, ನಕ್ಷತ್ರಕ್ಕೆ ಸಮೀಪದಲ್ಲಿಯೂ ದೂರದಲ್ಲಿಯೂ ಸಣ್ಣಗ್ರಹಗಳೂ ಇರುತ್ತವೆ. ಸೌರವ್ಯೂಹದಲ್ಲಿ (Solar system) ಸಣ್ಣಗಿರುವ ಬುಧ, ಶುಕ್ರ, ಭೂಮಿ ಮತ್ತು ಅಂಗಾರಕ ಗ್ರಹಗಳು ಸೂರ್ಯನಿಗೆ ಸಮೀಪದಲ್ಲಿವೆ. ಆಚೆ ಗುರು, ಶನಿ ಎಂಬ ದೊಡ್ಡ ಗ್ರಹಗಳಿವೆ. ಇನ್ನೂ ಆಚೆ ಯೂರನಸ್, ನೆಪ್ಚೂನ್, ಪ್ಲೂಟೋ ಎಂಬ ಸಣ್ಣ ಗ್ರಹಗಳಿವೆ.

ಹೀಗೆ ಉಂಟಾದ ಗ್ರಹಗಳು ಮೊದಲು ಎರಡು ನಕ್ಷತ್ರಗಳ ಆಕರ್ಷಣಾ ಶಕ್ತಿಗೂ ಸಿಕ್ಕಿ ಬಹಳ ವಕ್ರವಾದ ಪಥ (orbit)ಗಳಲ್ಲಿ ಸಂಚರಿಸುತ್ತವೆ. ಆದರೆ ದೊಡ್ಡ ನಕ್ಷತ್ರವು ದೂರ ಹೋದಹಾಗೆಲ್ಲ ಪಥವು ಬದಲಾವಣೆ ಹೊಂದುತ್ತಾ ಕೊನೆಗೆ ದೀರ್ಘವೃತ್ತ (Ellipse)ದ ಆಕಾರವಾಗುತ್ತದೆ. ಈ ದೀರ್ಘವೃತ್ತಾಕಾರದ ಪಥದಲ್ಲಿ ಗ್ರಹಗಳು ತಮ್ಮ ಸೂರ್ಯ (ಅವುಗಳ ಮೂಲನಕ್ಷತ್ರ)ನ ಸುತ್ತಲೂ ಸುತ್ತುತ್ತವೆ. ಹೀಗೆ ಸುತ್ತುವಾಗ ಇವುಗಳು ಈ ಗ್ರಹಗಳಿಗೆ ಸೇರದೆ ಉಳಿದಿರುವ ಅನಿಲ (Gas)ದ ಮೂಲಕ ಹೋಗಬೇಕಾಗುವುದು. ಹಾಗೆ ಹೋಗುವಾಗ ಈ ಅನಿಲವೂ ಇವುಗಳಿಗೆ ಸೇರಿ ಇವು ದೊಡ್ಡದಾಗುವುದು ಮತ್ತು ಈ ಗ್ರಹಗಳ ಪಥವೂ ಕ್ರಮಕ್ರಮವಾಗಿ ವೃತ್ತಾಕಾರವಾಗುತ್ತ ಹೋಗುವುದು. ಅನಂತರ ಈ ಗ್ರಹಗಳು ತಂಪಾಗುತ್ತ ಹೋಗುವುವು. ನಮ್ಮ ಸೌರವ್ಯೂಹದಲ್ಲಿ ದೊಡ್ಡ ಗ್ರಹಗಳಾದ ಗುರು ಶನಿಗಳಿಗಿಂತ ಸಣ್ಣ ಗ್ರಹಗಳಾದ ಬುಧಶುಕ್ರರು ಬೇಗ ತಂಪಾಗಿ ಹೋಗಿ ಜಾಗ್ರತೆ ದ್ರವರೂಪವನ್ನೂ ಅನಂತರ ಘನರೂಪವನ್ನೂ ಹೊಂದಿದುವು.

ಹೀಗೆ ಉತ್ಪತ್ತಿಯಾದ ಗ್ರಹಗಳು ಸೂರ್ಯನನ್ನು ಸಮೀಪಿಸಿದಾಗ, ದೊಡ್ಡ ನಕ್ಷತ್ರಗಳ ಆಕರ್ಷಣೆಯಿಂದ ಸೂರ್ಯನಲ್ಲುಂಟಾದಂತೆ, ಸೂರ್ಯನ ಆಕರ್ಷಣೆಯಿಂದ ಈ ಗ್ರಹಗಳಲ್ಲೂ ದೊಡ್ಡ ಅಲೆಗಳೆದ್ದು, ಆದರಿಂದ ಉಪಗ್ರಹಗಳುಂಟಾದುವು. ಹೀಗೆ ಸೂರ್ಯನನ್ನು ಸಮೀಪಿಸಿದಾಗ ಗ್ರಹವು ದ್ರವರೂಪವನ್ನು ಹೊಂದಿದ್ದರೆ ಅದರಲ್ಲಿ ಉಪಗ್ರಹಗಳನ್ನುಂಟು ಮಾಡುವಷ್ಟು ದೊಡ್ಡ ಅಲೆಗಳಾಗಲಾರವು. ಆಗತಾನೇ ದ್ರವರೂಪವನ್ನು ಹೊಂದುತ್ತಿದ್ದರೆ, ಉಂಟಾಗುವ ಉಪಗ್ರಹಗಳು ಗಾತ್ರದಲ್ಲಿ ಗ್ರಹಕ್ಕಿಂತ ಬಹಳ ಚಿಕ್ಕದಾಗಿರುವುದಿಲ್ಲ. ಆದುದರಿಂದ ಸಣ್ಣ ಗ್ರಹಗಳಾಗಿ ಬೇಗ ದ್ರವರೂಪವನ್ನು ಹೊಂದಿದ ಬುಧ ಶುಕ್ರರಿಗೆ ಉಪಗ್ರಹಗಳಿಲ್ಲ. ಭೂಮಿಗೆ ದೊಡ್ಡದಾದ ಚಂದ್ರನೊಂದೇ ಉಪಗ್ರಹ. ಅಂಗಾರಕನಿಗೆ ಎರಡೇ ಉಪಗ್ರಹಗಳು. ನೆಪ್ಚೂನಿಗೆ ದೊಡ್ಡದಾದ ಒಂದೇ ಉಪಗ್ರಹ. ಆದರೆ ಯೂರನಸ್ಸಿಗೆ 4 ಸಣ್ಣ ಉಪಗ್ರಹಗಳು; ಶನಿಗೆ 8, ಗುರುವಿಗೆ 9. ಆದುದರಿಂದ ಬುಧ,

ಶುಕ್ರ ಮತ್ತು ಪ್ಲೂಟೋ ಗ್ರಹಗಳು ಬಹಳ ಬೇಗ ದ್ರವರೂಪವನ್ನು ಹೊಂದಿದುವೆಂದೂ, ಭೂಮಿ, ನೆಪ್ಚೂನ್‌ಗಳು ಅನಂತರ ದ್ರವರೂಪವನ್ನು ಹೊಂದಿದುವೆಂದೂ ಅಂಗಾರಕ, ಗುರು, ಯೂರನಸ್, ಶನಿಗಳು ದೀರ್ಘಕಾಲ ಅನಿಲರೂಪದಲ್ಲೇ ಇದ್ದುವೆಂದೂ ಊಹಿಸಬಹುದು.

ಹೀಗೆ ಮೊದಲು ನಾಕ್ಷತ್ರ ಮೇಘಗಳೂ, ಅವುಗಳಿಂದ ನಕ್ಷತ್ರಗಳೂ ಉಂಟಾಗಿ, ನಕ್ಷತ್ರಗಳಿಂದ ಗ್ರಹೋಪಗ್ರಹಗಳುಂಟಾದುವು. ಆಕಾಶದಲ್ಲಿ ಕೋಟ್ಯಂತರ ನಕ್ಷತ್ರಗಳಿದ್ದರೂ, ಗ್ರಹಗಳುಂಟಾಗುವಷ್ಟು ದೊಡ್ಡ ಅಲೆಗಳು ಹುಟ್ಟುವಷ್ಟು ಸಮೀಪಕ್ಕೆ ಎರಡು ನಕ್ಷತ್ರಗಳು ಬರುವುದು ಬಹಳ ಅಪರೂಪ. ಲಕ್ಷಕ್ಕೆ ಒಂದು ನಕ್ಷತ್ರಗಳಿಗೆ ಗ್ರಹಗಳ ಮಾಲೆಯಿದ್ದರೆ ಹೆಚ್ಚು ಗ್ರಹಗಳುಂಟಾದರೂ ಅವುಗಳಲ್ಲಿ ಜೀವಿಗಳು ಉಂಟಾಗಬೇಕಾದರೆ ಸರಿಯಾದಷ್ಟು ಶಾಖವಿರಬೇಕು. ಅತಿ ಉಷ್ಣವಿದ್ದರೂ, ಅತಿ ಶೀತವಿದ್ದರೂ ಸಸ್ಯಗಳಾಗಲೀ, ಪ್ರಾಣಿಗಳಾಗಲೀ ಜೀವಿಸಲಾರವು. ಭೂಮಿಯಲ್ಲಿರು ವಂತೆ ಸಸ್ಯಗಳಾಗಲೀ, ಪ್ರಾಣಿಗಳಾಗಲೀ ಇರಬೇಕಾದರೆ ವಾತಾವರಣ (atmosphere)ವಿರಬೇಕು. ಇಷ್ಟೆಲ್ಲಾ ಸೌಕರ್ಯಗಳಿದ್ದರೂ ಜೀವ (Life) ಉತ್ಪತ್ತಿಯಾಗಲೇಬೇಕೆಂಬ ನಿಯಮವಿಲ್ಲ. ಇದನ್ನೆಲ್ಲಾ ನೋಡಿದರೆ ವಿಶ್ವದಲ್ಲಿ ಜೀವವು ಅದರಲ್ಲೂ ಮನುಷ್ಯನು ಎಷ್ಟು ಅಲ್ಪಸ್ಥಾನವನ್ನು ಹೊಂದಿರಬೇಕೆಂದು ನಮಗೆ ಗೋಚರವಾಗದಿರದು.

Bibliography

1. The Universe Around Us - Sir James Jeans.
2. Mysterious Universe - Sir James Jeans.
3. An Outline of the Universe - J. G. Growther.

ಗ್ರಹಗಳ ವಯಸ್ಸು

ಸೂರ್ಯನನ್ನು ಮತ್ತೊಂದು ನಕ್ಷತ್ರವು ತೀರ ಸಮೀಪಿಸಿದಾಗ ಸೂರ್ಯನಲ್ಲುಂಟಾದ ಅಲೆಗಳು ಅದರಿಂದ ಬೇರ್ಪಟ್ಟು ಗ್ರಹಗಳಾದುವೆಂದು ಹಿಂದೆಯೇ (ಸಂಪುಟ 4, ಪುಟ 16) ತಿಳಿಸಿದೆಯಷ್ಟೆ. ಈಗ ಹೀಗೆ ಗ್ರಹಗಳು ಯಾವಾಗ ಉತ್ಪತ್ತಿಯಾದುವೆಂದು ವಿಚಾರಮಾಡೋಣ.

ಗ್ರಹಗಳೆಲ್ಲಾ ಏಕಕಾಲದಲ್ಲಿ ಉತ್ಪತ್ತಿಯಾದುದರಿಂದ ಭೂಮಿಯ ವಯಸ್ಸನ್ನು ಕಂಡುಹಿಡಿದರೆ ಉಳಿದ ಗ್ರಹಗಳ ವಯಸ್ಸನ್ನೂ ತಿಳಿದಂತಾಗುವುದು. ಭೂಮಿಯ ವಯಸ್ಸನ್ನು ಆಧುನಿಕ ಶಾಸ್ತ್ರಜ್ಞರು ಬೇರೆ ಬೇರೆ ಅನೇಕ ಕ್ರಮಗಳಿಂದ ಊಹಿಸಿದ್ದಾರೆ.

(i) ಭೂಗರ್ಭಶಾಸ್ತ್ರ (Geology)ದ ಕ್ರಮ :-

ಪ್ರತಿ ದಿನವೂ ಸಮುದ್ರಕ್ಕೆ ಹರಿದುಹೋಗುವ ನೀರಿನಲ್ಲಿ ಸ್ವಲ್ಪ ಭಾಗ ಉಪ್ಪು ಇರುತ್ತದೆ. ಇದು ಸಮುದ್ರವನ್ನು ಸೇರಿದ ಮೇಲೆ ನೀರು ಆವಿಯಾಗಿ ಹೋಗಿ ಉಪ್ಪು ಅಲ್ಲೇ ಉಳಿಯುತ್ತದೆ. ಹೀಗೆ ಸಮುದ್ರದ ನೀರಿನಲ್ಲಿರುವ ಉಪ್ಪಿನ ಪ್ರಮಾಣವು ಪ್ರತಿದಿನವೂ ಹೆಚ್ಚುತ್ತಾ ಹೋಗುವುದು. ಆದುದರಿಂದ ಸಮುದ್ರದ ನೀರಿನಲ್ಲಿರುವ ಉಪ್ಪಿನ ಪ್ರಮಾಣದಿಂದ ಭೂಮಿಯ ವಯಸ್ಸನ್ನು ಗೊತ್ತುಮಾಡಬಹುದೆಂದು ಹ್ಯಾಲೆ(Halley) ಎಂಬ ಶಾಸ್ತ್ರಜ್ಞನು ಸುಮಾರು ಇನ್ನೂರು ವರ್ಷಗಳ ಹಿಂದೆ ತಿಳಿಸಿದ್ದನು. ಇದರಿಂದ ಭೂಮಿಯ ವಯಸ್ಸನ್ನು ಊಹಿಸುವುದು ಸಾಧ್ಯವಲ್ಲದಿದ್ದರೂ ಇದೇ ರೀತಿಯ ಮತ್ತೊಂದು ಕ್ರಮದಿಂದ ಭೂಮಿಯ ವಯಸ್ಸನ್ನು ಕಂಡು ಹಿಡಿಯಲು ಪ್ರಯತ್ನಿಸಿದ್ದಾರೆ.

ಪ್ರತಿ ವರ್ಷವೂ ಮಳೆಯ ನೀರಿನಿಂದ ಎತ್ತರವಾದ ಸ್ಥಳಗಳಲ್ಲಿರುವ ಮಣ್ಣು ಕೊಚ್ಚಿಕೊಂಡು ಬಂದು ತಗ್ಗಾದ ಸ್ಥಳಗಳಲ್ಲಿ ನಿಲ್ಲುತ್ತದೆ. ಹೀಗೆ ಬಂದು ನಿಲ್ಲುವ ಮಣ್ಣು ಬೇರೆ ಬೇರೆ ಸ್ಥಳಗಳಲ್ಲಿ ಆಳ (depth)ದಲ್ಲಿರುತ್ತದೆ. ಅನೇಕ ವೇಳೆ ಹೀಗೆ ಸಾವಿರಾರು ಅಥವಾ ಲಕ್ಷಾಂತರ ಅಡಿಗಳಷ್ಟು ಮಣ್ಣು ನಿಂತ ಮೇಲೆ ಅದರ ಮೇಲೆ ಬೇರೆ ಜಾತಿಯ ಮಣ್ಣು ನಿಲ್ಲುತ್ತದೆ. ಹೀಗೆ ಬಂದು ನಿಂತ ಬೇರೆ ಬೇರೆ ಜಾತಿಯ ಮಣ್ಣಿನ ರಾಶಿಗಳಿಗೆ ಭೂಗರ್ಭಸ್ತರ (Geological layers)ಗಳೆಂದು ಹೆಸರು.

ಭೂಗರ್ಭಶಾಸ್ತ್ರಜ್ಞರು ಈ ಸ್ತರ (layer)ಗಳು ವರ್ಷಂಪ್ರತಿ ಯಾವ ವೇಗದಲ್ಲಿ ಬೆಳೆಯುತ್ತವೆಂದು ಊಹಿಸಿ ಅದರ ಸಹಾಯದಿಂದ ಭೂಮಿಯ ವಯಸ್ಸನ್ನು ಕಂಡು ಹಿಡಿಯಲು ಯತ್ನಿಸಿದ್ದಾರೆ. ಬಹಳ ಆಳವಾದ ಸ್ತರದ ಮಂದ ಸುಮಾರು 5 ಲಕ್ಷ ಅಡಿಗಳಿರಬಹುದು. ಒಂದು ಅಡಿ ಮಣ್ಣು ಬಂದು ನಿಲ್ಲಲು 1000ದಿಂದ 4000 ವರ್ಷ ಗಳವರೆಗೆ ಬೇಕಾಗಬಹುದು. ಆದುದರಿಂದ ಭೂಮಿಯ ವಯಸ್ಸು ಸುಮಾರು 50 ಕೋಟಿಯಿಂದ 200 ಕೋಟಿಗಳವರೆಗೆ ಇರಬಹುದೆಂದು ಭೂಗರ್ಭಶಾಸ್ತ್ರಜ್ಞರ ಮತ.

(ii) ಖಗೋಳಶಾಸ್ತ್ರ (Astronomy)ದ ಕ್ರಮ :-

ಗ್ರಹಗಳು ಉತ್ಪತ್ತಿಯಾದಾಗ ಅವು ಅಂಡಾಕಾರದ ಪಥ (elliptical orbit) ಗಳಲ್ಲಿ ಸೂರ್ಯನ ಸುತ್ತಲೂ ಸುತ್ತುತ್ತಿದ್ದುವು. ಆದರೆ ಗ್ರಹಗಳೊಳಗೆ ಸೇರದೆ ಇದ್ದ ವಾಯು(gas)ವಿನಿಂದ ಇವುಗಳ ಪಥಗಳು ಸ್ವಲ್ಪಸ್ವಲ್ಪವಾಗಿ ಮಾರ್ಪಟ್ಟು ಕೊನೆಗೆ ವೃತ್ತಾಕಾರವನ್ನು ಹೋಲುವಂತಾದುವು. ಹೀಗೆ ಪಥಗಳಲ್ಲುಂಟಾದ ವ್ಯತ್ಯಾಸವು ಒಂದೇ ವೇಗದಲ್ಲಿ ಉಂಟಾಗದೇ ಇದ್ದರೂ ಕೆಲವು ಗೊತ್ತಾದ ನಿಯಮಗಳಿಗೊಳಪಟ್ಟಿದೆ. ಗಣಿತಶಾಸ್ತ್ರಜ್ಞರು ಪಥದ ವ್ಯತ್ಯಾಸವು ಯಾವಾಗ, ಹೇಗೆ, ಎಷ್ಟೆಷ್ಟು ಉಂಟಾಯಿತೆಂದು ಕಂಡುಹಿಡಿದು, ಪಥವು ಈಗಿರುವ ಆಕಾರಕ್ಕೆ ಬರಲು ಸುಮಾರು ಎಷ್ಟು ಕಾಲ ಬೇಕಾಯಿತೆಂದು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದಾರೆ.

ಡಾಕ್ಟರ್ ಜೆಫ್ರೀಸ್ (Dr. Jeffreys) ಎಂಬುವರು ಚಂದ್ರನ ಪಥಕ್ಕೆ ಸಂಬಂಧಿಸಿದ ಗಣಿತದಿಂದ ಗ್ರಹಗಳ ವಯಸ್ಸು ಸುಮಾರು 400 ಕೋಟಿ ವರ್ಷಗಳಿರಬಹು ದೆಂದೂ, ಬುಧನ ಪಥದಿಂದ ಸುಮಾರು 100-1000 ಕೋಟಿ ವರ್ಷಗಳೆಂದೂ ಊಹಿಸಿದ್ದಾರೆ.

ಖಗೋಳಶಾಸ್ತ್ರಜ್ಞರು ಭೂಮಿಯ ವಯಸ್ಸನ್ನು ಮತ್ತೊಂದು ಕ್ರಮದಿಂದಲೂ ಊಹಿಸಿದ್ದಾರೆ. ಅನೇಕವೇಳೆ ಭೂಮಿಗೆ ನಕ್ಷತ್ರದಂತೆ ಪ್ರಕಾಶಿಸುವ ವಸ್ತುಗಳು ಬೀಳುತ್ತವೆ. ಇವು ಒಡೆದು ಹೋದ ಧೂಮಕೇತು (comet)ಗಳ ಭಾಗಗಳು. ಇವು ವಾಯು ಮಂಡಲದ ಸಂಘರ್ಷಣೆ(friction)ಯಿಂದ ಸಾಮಾನ್ಯವಾಗಿ ಉರಿದುಹೋಗುತ್ತವೆ. ಕೆಲವು ವೇಳೆ ಉರಿಯದೇ ಉಳಿದ ಭಾಗವು ಶಿಲಾ ರೂಪದಲ್ಲಿರುವುದು. ಇಂಥಾ ಶಿಲೆಗಳಿಗೆ ಉಲ್ಕೆ (meteorite)ಗಳೆಂದು ಹೆಸರು. ಇಂಥಾ ಒಂದು ಶಿಲೆಯು ಮುಸಲ್ಮಾನರ ಪವಿತ್ರಸ್ಥಳವಾದ ಮಕ್ಕಾದಲ್ಲಿದೆ.

ಈ ಉಲ್ಕೆಗಳು ಧೂಮಕೇತುಗಳ ಭಾಗಗಳಾದುದರಿಂದ, ಸೂರ್ಯನಿಂದ ಗ್ರಹಗಳು ಹುಟ್ಟಿದಾಗ ಉಂಟಾದ ವಸ್ತುಗಳಾಗಿರಬೇಕೆಂದು ಶಾಸ್ತ್ರಜ್ಞರ ಮತ. ಭೌತಶಾಸ್ತ್ರದ ಸಹಾಯದಿಂದ ಶಾಸ್ತ್ರಜ್ಞರು ಈ ಉಲ್ಕೆಗಳ ವಯಸ್ಸುಗಳನ್ನು ಕಂಡುಹಿಡಿದಿದ್ದಾರೆ. ಇದುವರೆಗೆ ಸಿಕ್ಕಿರುವ ಉಲ್ಕೆಗಳಲ್ಲೆಲ್ಲಾ ಬಹಳ ಪುರಾತನವಾದ ಉಲ್ಕೆಯ ವಯಸ್ಸು ಸುಮಾರು 290 ಕೋಟಿ ವರ್ಷಗಳು. ಆದುದರಿಂದ ಭೂಮಿಯ ವಯಸ್ಸೂ ಸುಮಾರು 300 ಕೋಟಿ ವರ್ಷಗಳಿರಬಹುದು.

(iii) ಭೌತಶಾಸ್ತ್ರ (Physics)ದ ಕ್ರಮ:-

ಕೆಲವು ಕಾಲದ ಹಿಂದೆ ಶಾಸ್ತ್ರಜ್ಞರು ಮೂಲದ್ರವ್ಯ (chemical elements) ಗಳನ್ನು ಬೇರೆ ದ್ರವ್ಯಗಳಾಗಿ ಒಡೆಯುವುದಕ್ಕೆ ಸಾಧ್ಯವಿಲ್ಲವೆಂದು ನಂಬಿದ್ದರು. ಆದರೆ ಈ ಅಭಿಪ್ರಾಯವು ಈಚೆಗೆ ಬಹಳ ಮಾರ್ಪಟ್ಟಿದೆ. ಯುರೇನಿಯಂ (Uranium) ಎಂಬ ಮೂಲದ್ರವ್ಯವು ಒಂದು ವಿಧವಾದ ಕಿರಣಗಳನ್ನು ಹೊರಡಿಸುತ್ತಾ ತಾನು ಬೇರೆ ಮೂಲದ್ರವ್ಯವಾಗಿ ಮಾರ್ಪಡುವುದೆಂದು ವೈಜ್ಞಾನಿಕರು ಕಂಡುಹಿಡಿದಿದ್ದಾರೆ. ಈ ದ್ರವ್ಯವು ಸುಮಾರು 500000 ಕೋಟಿ ವರ್ಷಗಳಲ್ಲಿ ರೇಡಿಯಂ (Radium) ಲೋಹ ವಾಗುತ್ತದೆ. ಇದು ಪುನಃ ಮಾರ್ಪಟ್ಟು ಸುಮಾರು 1700 ವರ್ಷಗಳಲ್ಲಿ ಸೀಸ (Lead)ವಾಗುತ್ತದೆ. ಹೀಗೆ ಮಾರ್ಪಡುವಾಗ ಹೊರಡುವ ಕಿರಣಗಳು ಹೀಲಿಯಂ (Helium) ಎಂಬ ಅನಿಲ (gas)ವಾಗುತ್ತವೆ. ಹೀಗೆ ಮಾರ್ಪಾಡಾಗುವುದರಿಂದ ಒಂದು ಔನ್ಸ್ (ounce) ಯುರೇನಿಯಂನಿಂದ .135 ಔನ್ಸ್ ಹೀಲಿಯಂ ಮತ್ತು .865 ಔನ್ಸ್ ಸೀಸ ಉಂಟಾಗುತ್ತವೆ. ಯುರೇನಿಯಂ ಪೂರ್ತಿಯಾಗಿ ಸೀಸವಾಗಲು 500000 ಕೋಟಿ ವರ್ಷಗಳಾಗುವುದರಿಂದ ಈ ಕಾಲಕ್ಕೆ ಮುಂಚೆ ಅದರಲ್ಲಿ ಸ್ವಲ್ಪ ಭಾಗ ಮಾತ್ರ ಸೀಸವಾಗುತ್ತದೆ. ಆದುದರಿಂದ ಎಷ್ಟು ಭಾಗ ಸೀಸವಾಗಿದೆಯೆಂದು ಗೊತ್ತುಮಾಡಿದರೆ, ಯುರೇನಿಯಂ ಒಡೆಯಲು ಪ್ರಾರಂಭವಾಗಿ ಎಷ್ಟು ಕಾಲವಾಯಿತೆಂದು ಕಂಡುಹಿಡಿಯ ಬಹುದು.

ಭೂಮಿಯು ದ್ರವರೂಪದಿಂದ ಘನರೂಪಕ್ಕೆ ಬಂದಾಗ ಕಲ್ಲುಗಳ ಮಧ್ಯೆ ಅಲ್ಲಲ್ಲಿ ಯುರೇನಿಯಂ ಸೇರಿದ್ದಿತು. ಇದರಿಂದ ನಾವು ಭೂಮಿಯ ವಯಸ್ಸನ್ನು ಕಂಡುಹಿಡಿಯ ಬಹುದು. ಎಲ್ಲಾ ಸೀಸವೂ ಯುರೇನಿಯಂನಿಂದಲೇ ಉತ್ಪತ್ತಿಯಾಗಿಲ್ಲದಿದ್ದರೂ ಯುರೇನಿಯಂನಿಂದ ಆದ ಸೀಸಕ್ಕೂ ಸಾಧಾರಣ ಸೀಸಕ್ಕೂ ಪರಮಾಣು ಭಾರ (atomic weight)ವು ಬೇರೆಯಾದುದರಿಂದ, ಯುರೇನಿಯಂಗೂ ಅದರಿಂದ ಉಂಟಾದ

ಸೀಸಕ್ಕೂ ಇರುವ ಪ್ರಮಾಣವನ್ನು ಕಂಡುಹಿಡಿದು, ಇದರ ಸಹಾಯದಿಂದ ಭೂಮಿಯು ಘನೀಭೂತವಾಗಿ 140 ಕೋಟಿ ವರ್ಷಗಳಾಗಿರಬಹುದೆಂದು ಕಂಡು ಹಿಡಿದಿದ್ದಾರೆ.

ಯುರೇನಿಯಂನಲ್ಲಿ ಬೇರೆ ಬೇರೆ ಭಾರದ ಎರಡು ತರದ ಪರಮಾಣು ಗಳಿವೆಯೆಂದೂ ಇವು ಬೇರೆ ಬೇರೆ ವೇಗದಲ್ಲಿ ಕಿರಣಗಳನ್ನು ಹೊರಗೆಡುವುದೆಂದೂ ಆಸ್ಟನ್ (Aston) ಎಂಬ ವೈಜ್ಞಾನಿಕನು ಕಂಡು ಹಿಡಿದಿದ್ದಾನೆ. ಈ ಎರಡು ತರದ ಪರಮಾಣುಗಳ ಪ್ರಮಾಣ (ratio)ದಿಂದ, ಭೂಮಿಯ ವಯಸ್ಸು 340 ಕೋಟಿ ವರ್ಷಗಳಿಗಿಂತ ಹೆಚ್ಚಾಗಿಲ್ಲವೆಂದು ರೂದರ್‌ಫರ್ಡ್ (Rutherford) ಎಂಬುವರು ಸಾಧಿಸಿದ್ದಾರೆ.

ಹೀಗೆ ಬೇರೆ ಬೇರೆ ತರದ ಶೋಧನೆಗಳಿಂದ ಭೂಮಿಯ ವಯಸ್ಸು ಬೇರೆ ಬೇರೆಯಾಗಿ ಊಹಿಸಲ್ಪಟ್ಟಿದೆ. ಇವೆಲ್ಲವನ್ನೂ ಚರ್ಚಿಸಿ ಸರ್ ಜೇಂಸ್ ಜೀನ್ಸ್ (Sir James Jeans) ಎಂಬ ಸಿದ್ಧಾಂತಿ (Astronomer)ಯು ಭೂಮಿಯ ವಯಸ್ಸು ಸುಮಾರು 200 ಕೋಟಿ ವರ್ಷಗಳಿರಬಹುದೆಂದು ಅಭಿಪ್ರಾಯಪಟ್ಟಿದ್ದಾನೆ.

ಇದುವರೆವಿಗೂ ಆಧುನಿಕ ವೈಜ್ಞಾನಿಕರ ಮತವನ್ನು ಪರೀಕ್ಷಿಸಿ ಭೂಮಿಯ ವಯಸ್ಸನ್ನು ತಿಳಿದುಕೊಂಡಾಯಿತು. ಇನ್ನು ಖಗೋಳ ಶಾಸ್ತ್ರದಲ್ಲಿ ಬಹಳ ಮುಂದು ವರಿದಿದ್ದ ಪುರಾತನ ಭಾರತೀಯ ಸಿದ್ಧಾನ್ತಿಗಳ ಅಭಿಪ್ರಾಯವನ್ನೂ ಸ್ವಲ್ಪ ಪರೀಕ್ಷಿಸೋಣ.

ಬ್ರಹ್ಮನು ತನ್ನ ಪ್ರತಿ ಹಗಲಿನ ಆದಿಭಾಗದಲ್ಲೂ ಭೂಮಿಯನ್ನು ಸೃಷ್ಟಿಮಾಡಿ ಸಂಧ್ಯಾಕಾಲದಲ್ಲಿ ಪುನಃ ನಾಶಮಾಡುತ್ತಾನೆಂದು ಪ್ರಾಚೀನ ಭಾರತೀಯರ ನಂಬಿಕೆ. ಬ್ರಹ್ಮನ ಹಗಲಿಗೆ ಕಲ್ಪವೆಂದು ಹೆಸರು. ಈಗ ನಡೆಯುತ್ತಿರುವ ಕಲ್ಪದಲ್ಲಿ ಎಷ್ಟು ವರ್ಷಗಳು ಕಳೆದಿವೆಯೋ ಅದೇ ಈ ಭೂಮಿಯ ವಯಸ್ಸು.

ಪ್ರಾಚೀನ ಜ್ಯೋತಿಷ ಗ್ರಂಥಗಳಲ್ಲೊಂದಾದ ಸೂರ್ಯಸಿದ್ಧಾಂತದಲ್ಲಿ ಸೃಷ್ಟಿಯಾಗಿ ಎಷ್ಟು ವರ್ಷಗಳಾದುವೆಂದು ಕಂಡುಹಿಡಿಯುವ ಕ್ರಮವನ್ನು ಈ ರೀತಿ ಕೊಟ್ಟಿದ್ದಾರೆ.

ಮಾಸೈರ್ದ್ವಾದಶಭಿರ್ವರ್ಷಂ ದಿವ್ಯಂ ತದಹರುಚ್ಯತೇ ।

....

ತತ್ಷಷ್ಟಿಷಡ್ಗುಣಾವರ್ಷಂ ದಿವ್ಯಮಾಸುರಮೇವ ಚ ।
ತದ್ದ್ವಾದಶಸಹಸ್ರಾಣಿ ಚತುರ್ಯುಗಮುದಾಹೃತಮ್ ॥
ಕೃತಾದೀನಾಂ ವ್ಯವಸ್ಥೇಯಂ ಧರ್ಮಪಾದವ್ಯವಸ್ಥಯಾ ।

....

ಯುಗಾನಾಂ ಸಪ್ತತಿಸ್ಸೈಕಾ ಮನ್ವಂತರಮಿಹೋಚ್ಯತೇ।
ಕೃತಾಬ್ದ ಸಂಖ್ಯಾತಸ್ಯಾಂತೇ ಸಂಧಿಃ ಪ್ರೋಕ್ತೋ ಜಲಪ್ಲವಃ॥
ಸಸಂಧಯಸ್ತೇ ಮನವಃ ಕಲ್ಪೇ ಜ್ಞೇಯಾಶ್ಚತುರ್ದಶ।
ಕೃತಪ್ರಮಾಣಃ ಕಲ್ಪಾದೌ ಸಂಧಿಃ ಪಂಚದಶಸ್ಮೃತಃ॥ ಅಧ್ಯಾಯ 1.

ಈ ಕ್ರಮದಂತೆ ಭೂಮಿ ಸೃಷ್ಟಿಯಾಗಿ ಆರು ಮನ್ವಂತರಗಳು ಕಳೆದು ಏಳನೆಯ ಮನ್ವಂತರದಲ್ಲಿ ಕೃತ, ತ್ರೇತಾ, ದ್ವಾಪರ, ಕಲಿಯುಗಗಳು 27 ಸಲ ಕಳೆದು 28ನೆಯ ಕಲಿಯುಗದಲ್ಲಿ 5040 ವರ್ಷಗಳಾಗಿವೆ. ಆದುದರಿಂದ ಭೂಮಿಯ ವಯಸ್ಸು

ಒಂದು ಮನ್ವಂತರಕ್ಕೆ 71 ಚತುರ್ಯುಗ (306720000 ವರ್ಷ)ಗಳಂತೆ 6 ಮನ್ವಂತರಗಳು	1840320000
7 ಮನ್ವಂತರ ಸಂಧಿಗಳು (1 ಸಂಧಿಗೆ 178000 ವರ್ಷಗಳು)	12096000
7ನೆಯ ಮನ್ವಂತರದಲ್ಲಿ 27 ಚತುರ್ಯುಗಗಳು	116640000
ಕೃತ, ತ್ರೇತಾ, ದ್ವಾಪರಯುಗಗಳು	3888000
ಕಲಿಯುಗದಲ್ಲಿ ಕಳೆದಿರುವುದು	5040
	1972949040

1972949040 ಅಥವಾ ಸುಮಾರು 197 ಕೋಟಿ ವರ್ಷಗಳು.

ಆದುದರಿಂದ ಪ್ರಾಚೀನ ಭಾರತೀಯ ಸಿದ್ಧಾಂತಿಗಳ ಮತದಂತೆಯೂ ಸಹ ಭೂಮಿಯ ಸೃಷ್ಟಿಯಾಗಿ ಸುಮಾರು 200 ಕೋಟಿ ವರ್ಷಗಳಾಯಿತೆಂದು ಹೇಳಬಹುದು.

ಹೀಗೆ ಅನೇಕ ಶೋಧನೆಗಳನ್ನು ಪರೀಕ್ಷಿಸಿ ಸರ್ ಜೇಂಸ್ ಜೀನ್ಸ್‌ರು ನಿಷ್ಕರ್ಷೆ ಮಾಡಿರುವ ವಯಸ್ಸನ್ನೇ ಪ್ರಾಚೀನ ಭಾರತೀಯರೂ ಸಹ ಕೊಟ್ಟಿರುವುದರಿಂದಲೂ, ಭಾರತೀಯರು ಖಗೋಳಶಾಸ್ತ್ರದಲ್ಲಿ ಅನೇಕ ಶೋಧನೆಗಳನ್ನು ನಡೆಸಿ ಬಹಳ ಮುಂದುವರೆದಿದ್ದರೆಂಬ ವಿಷಯವು ನಿರ್ವಿವಾದವಾಗಿರುವುದರಿಂದಲೂ ಸದ್ಯಃ ನಾವು ಭೂಮಿಯ ವಯಸ್ಸನ್ನು 200 ಕೋಟಿ ವರ್ಷಗಳೆಂದು ಇಟ್ಟುಕೊಳ್ಳಬಹುದು.

BIBLIOGRAPHY

1. Prof. Holmes-The Age of the Earth.

2. Sir James Jeans-The Universe around us.

3. J. G. Crowther-An outline of Universe.

4. ಸೂರ್ಯಸಿದ್ಧಾಂತ.

ಮಾಯಾಚೌಕ

ಪ್ರತಿಯೊಂದು ನಿಟುಸಾಲು (ಕಾಲಮ್), ಅಡ್ಡಸಾಲು (ರೋ) ಮತ್ತು ಕರ್ಣ (ಡಯಗೋನಲ್) ಇವುಗಳಲ್ಲಿರುವ ಸಂಖ್ಯೆಗಳ ಮೊತ್ತ ಸಮವಾಗುವಂತೆ ಸಂಖ್ಯೆಗಳನ್ನು ಅಳವಡಿಸಿರುವ ಚದುರಂಗದ ಮಣಿ ಹೋಲುವ ಚೌಕಕೃತಿ (ಮ್ಯಾಜಿಕ್‌ಸ್ಕ್ವಯರ್). ಭದ್ರವರ್ಗ ಪರ್ಯಾಯ ನಾಮ. ಸಾಮಾನ್ಯವಾಗಿ ಇಂಥ ಆಕೃತಿಗಳಲ್ಲಿ 1ರಿಂದ ಮೊದಲಾಗಿ ಕ್ರಮಗತ ಸಂಖ್ಯೆಗಳಿರುತ್ತವೆ. ಕ್ರಮಾಗತ ಸಂಖ್ಯೆಗಳಿಗೆ ಬದಲಾಗಿ ಸಮಾಂತರಸಂಖ್ಯೆಗಳನ್ನು (ಅರಿತ್ಮೆಟಿಕ್ ಪ್ರೋಗ್ರೆಶನ್) ಉಪಯೋಗಿಸಿ ಮಾಯಾಚೌಕ ಗಳನ್ನು ರಚಿಸಬಹುದು. ಚಿತ್ರ 1ರಲ್ಲಿರುವ ಮಾಯಾಚೌಕದಲ್ಲಿ 1ರಿಂದ 16ರವರೆಗಿನ ಸಂಖ್ಯೆಗಳಿವೆ. ಪ್ರತಿಯೊಂದು ಸಾಲಿನಲ್ಲಿಯೂ ಕರ್ಣದಲ್ಲಿಯೂ ಇರುವ ಸಂಖ್ಯೆಗಳ ಮೊತ್ತ 34. ಈ ಆಕೃತಿಯ ಪ್ರತಿಯೊಂದು ಸಾಲಿನಲ್ಲೂ 4 ಮನೆಗಳಿರುವುದರಿಂದ ಇದು 4ನೆಯ ದರ್ಜೆಯ (ಆರ್ಡರ್) ಮಾಯಾ ಚೌಕ. n ದರ್ಜೆಯ ಮಾಯಾಚೌಕದಲ್ಲಿ 1ರಿಂದ n^2 ವರೆಗಿನ ಸಂಖ್ಯೆಗಳನ್ನು ಉಪಯೋಗಿಸಿದರೆ ಪ್ರತಿಸಾಲಿನ ಸಂಖ್ಯೆಗಳ ಮೊತ್ತ ($\frac{1}{2}n^2(n^2+1)$) ಆಗುವುದು.

15	10	3	6
4	5	16	9
14	11	2	7
1	8	13	12

ಚಿತ್ರ 1

ಎರಡು ಸಾವಿರ ವರ್ಷಗಳಿಗಿಂತ ಹಿಂದೆಯೇ ಭಾರತದಲ್ಲಿಯೂ ಚೀನದಲ್ಲಿಯೂ ಮಾಯಾಚೌಕಗಳು ಪ್ರಚಾರದಲ್ಲಿದ್ದುವು. ಎಲ್ಲಿ ಇವನ್ನು ಮೊದಲು ಕಂಡುಹಿಡಿದರೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಕ್ರಿ.ಪೂ. ಸು. 2200ರಲ್ಲಿಯೂ ಎಂಬ ಚೀನ ಚಕ್ರವರ್ತಿಯ ಕಾಲದಲ್ಲಿ 3ನೆಯ ದರ್ಜೆಯ ಮಾಯಾಚೌಕಗಳನ್ನು ತಗಡು ಅಥವಾ ಕಲ್ಲಿನಲ್ಲಿ ಕೆತ್ತಿ ರಕ್ಷೆಗಳಾಗಿ ಉಪಯೋಗಿಸುತ್ತಿದ್ದ ರಂತೆ. ಇಂಥ ಚೌಕಗಳು ಈಗಲೂ ಸೀತಾಚಕ್ರ ಎಂಬ ಹೆಸರಿನಲ್ಲಿ ಭಾರತದ ಕೆಲವು ಪಂಚಾಂಗಗಳಲ್ಲಿ ಕಂಡುಬರುತ್ತಿವೆ. ಕ್ರಿ. ಶ. 5ನೆ ಯ ಶತಮಾನದಲ್ಲಿ ಆರ್ಯಭಟ ಮಾಯಾಚೌಕಗಳ ಬಗ್ಗೆ ಬರೆದಿದ್ದಾನೆ. ಝೂನ್ಸಿಯ ಸಮೀಪದಲ್ಲಿರುವ ದುಧಾಯಿಯ (ಕ್ರಿ. ಶ. ಸು. 11ನೆಯ ಶತಮಾನ) ಭಗ್ನಾವಶಿಷ್ಟ ದೇವಾಲಯದ ಕಲ್ಲೊಂದರ ಮೇಲೆ ಒಂದು ಮಾಯಾಚೌಕವಿತ್ತು. ಗ್ವಾಲಿಯರ್ ಕೋಟೆಯ ಬಾಗಿಲಿನ ಮೇಲೆ ದೇವನಾಗರೀ ಲಿಪಿಯಲ್ಲಿ ಕೆತ್ತಿರುವ ಒಂದು ಮಾಯಾಚೌಕವಿದೆ. ಈ ಆಕೃತಿಗಳನ್ನು ರಚಿಸುವ ಕಲೆಗೆ ಭದ್ರಗಣಿತವೆಂದು (ಮಾಯಾಚೌಕ ಗಣಿತ) ಹೆಸರು.

ಅರೇಬಿಯದ ತಾಬೀತ್ ಇಬ್ನ್ ಕೋರಾ (836-901)ಎಂಬ ಗ್ರಂಥಕಾರ ಮಾಯಾಚೌಕಗಳ ಬಗ್ಗೆ ಪ್ರಸ್ತಾವಿಸಿದ್ದಾನೆ. ಯೂರೋಪಿನಲ್ಲಿ ಮಾಯಾಚೌಕಗಳನ್ನು ಕುರಿತು ಮೊದಲು (ಸುಮಾರು 1300ರಲ್ಲಿ) ಬರೆದಾತ ಕಾನ್‌ಸ್ಟಾಂಟಿನೋಪಲಿನ ಇಮಾನುಯಲ್ ಮಾಸ್ಕೊಪೌಲಸ್. ಆಗ 3ರಿಂದ 9 ದರ್ಜೆಯವರೆಗಿನ ಮಾಯಾಚೌಕಗಳು ಅನುಕ್ರಮವಾಗಿ ಶನಿ, ಗುರು, ಕುಜ, ಸೂರ್ಯ, ಶುಕ್ರ, ಬುಧ, ಚಂದ್ರರಿಗೆ ಸಂಬಂಸಿವೆ ಎಂಬ ಭಾವನೆಯಿತ್ತು.

ಮಾಯಾಚೌಕಗಳನ್ನು ರಚಿಸುವ ಅನೇಕ ಕ್ರಮಗಳಲ್ಲಿ ಅಂಚುಕಟ್ಟುವ ಕ್ರಮ (ಬಾರ್ಡರಿಂಗ್ ಮೆಥಡ್) ಒಂದು. ಇದರಲ್ಲಿ ರಚಿಸಿದ ಆಕೃತಿಗಳಲ್ಲಿ ಹೊರಸುತ್ತಿನ ಮನೆಗಳನ್ನು ಒಂದೊಂದು ಸುತ್ತಾಗಿ ಕಳಚುತ್ತ ಹೋದರೆ ಪ್ರತಿಸಲವೂ ಉಳಿಯುವ ಆಕೃತಿಗಳೆಲ್ಲ ಮಾಯಾಚೌಕಗಳೇ, ಚಿತ್ರ 2ರಲ್ಲಿರುವುದು ಇಂಥ ಒಂದು ಆಕೃತಿ.

25	24	7	6	3
4	16	9	14	22
5	11	13	15	21
8	12	17	10	8
23	2	19	20	1

ಚಿತ್ರ 2

ವಿಷಮ (ಆಡ್), ವಿಷಮ ದ್ವಿಗುಣ (4ರಿಂದ ಭಾಗವಾಗದ ಸರಿ ಸಂಖ್ಯೆ, ಸಿಂಗ್ಲಿ ಈವನ್. 2,6,10, 14....) ಮತ್ತು ಸಮದ್ವಿಗುಣ 4ರಿಂದ ಭಾಗವಾಗುವ ಸರಿಸಂಖ್ಯೆ, ಡಬ್ಲಿ ಈವನ್, 4,8,12,16......) ದರ್ಜೆಗಳ ಮಾಯಾಚೌಕಗಳನ್ನು ರಚಿಸಲು ಬೇರೆ ಬೇರೆ ಕ್ರಮಗಳಿವೆ. ಎಲ್ಲ ದರ್ಜೆಗಳ ಆಕೃತಿಗಳನ್ನು ರಚಿಸಲು ಸಾರ್ವತ್ರಿಕ ವಿಧಾನವಿನ್ನೂ ಲಭ್ಯವಿಲ್ಲ. ಎಂದೂ ಲಭ್ಯವಾಗದೇನೋ!

ವಿಷಮದರ್ಜೆಯ ಮಾಯಾಚೌಕಗಳನ್ನು ರಚಿಸುಲು ಒಂದು ಕ್ರಮ : ಈ ಕ್ರಮದಲ್ಲಿ ಪ್ರತಿಯೊಂದು ಸಂಖ್ಯೆಯನ್ನೂ ಅದರ ಹಿಂದಿನ ಸಂಖ್ಯೆಯ ಮೇಲಿನ ಸಾಲಿನಲ್ಲಿ ಬಲಗಡೆಯ ಸ್ಥಾನದಲ್ಲಿ ಬರೆಯುತ್ತ ಹೋಗಬೇಕು. ಮೇಲಕ್ಕೆ ಸಾಲಿಲ್ಲದಿದ್ದರೆ ತೀರ ಕೆಳಗಿನ ಸಾಲಿನಲ್ಲೂ ಬಲಗಡೆಗೆ ಸ್ಥಾನವಿಲ್ಲದಿದ್ದರೆ ಎಡಗಡೆ ಮೊದಲನೆಯ ಸ್ಥಾನದಲ್ಲೂ ಬರೆಯಬೇಕು.ಬಲಗಡೆ ಮೇಲಿನ ಮೂಲೆಯಲ್ಲಿ ಬರೆದ ಮೇಲೆ ಮುಂದಿನ ಸಂಖ್ಯೆಯನ್ನುಕೆಳಗೆ ಬರೆಯಬೇಕು. ಹೀಗೆಯೇ, ಮುಂದಿನ ಸಂಖ್ಯೆ ಬರೆಯಬೇಕಾದ ಮನೆ ಆಗಲೇ ಭರ್ತಿಯಾಗಿದ್ದಾಗಲೂ ಕೆಳಗೆ ಬರೆಯಬೇಕು. ಪ್ರಾರಂಭಮಾಡುವಾಗ 1ನ್ನು

		1		
	5			
4				
				3
			2	

ಚಿತ್ರ 3 (a)

		1	8	
	5	7		
4	6			
10				3
			2	9

ಚಿತ್ರ 3 (b)

		1	8	15
	5	7	14	
4	6	13		
10	12			3
11			2	9

ಚಿತ್ರ 3 (c)

17	24	1	8	15
23	5	7	14	16
4	6	13	20	22
10	12	19	21	3
11	18	25	2	9

ಚಿತ್ರ 3 (d)

ಮೇಲಿನ ಸಾಲಿನ ಮಧ್ಯದ ಮನೆಯಲ್ಲಿ ಬರೆಯಬೇಕು. ಈ ಕ್ರಮದಲ್ಲಿ ರಚಿಸುವ 5ನೆಯ ದರ್ಜೆಯ ಆಕೃತಿಯನ್ನು ಚಿತ್ರ 3ರಲ್ಲಿ ಕೊಟ್ಟಿದೆ.

ಸಮದ್ವಿಗುಣ ದರ್ಜೆಯ ಮಯಾಚೌಕವನ್ನು ರಚಿಸುವ ಒಂದು ಕ್ರಮ : ಮೊದಲು ಎರಡು ಕರ್ಣಗಳಲ್ಲೂ ಇರುವ ಮನೆಗಳಲ್ಲಿ ಸಣ್ಣ ಚುಕ್ಕೆಗಳನ್ನು ಹಾಕಬೇಕು. ಅನಂತರ ದಪ್ಪಗೆರೆಗಳನ್ನೆಳೆದು ಆಕೃತಿಯನ್ನು 4 ಸಮಭಾಗ ಮಾಡಿಕೊಳ್ಳಬೇಕು. ಚುಕ್ಕಿ ಇಲ್ಲದ ಮನೆಯಲ್ಲಿ ಬರುವ ಸಂಖ್ಯೆಗಳನ್ನು ಬರೆದರೆ ಭದ್ರವರ್ಗ ಪೂರ್ಣವಾಗುವುದು.

ವಿಷಮದ್ವಿಗುಣ ದರ್ಜೆಯ ಮಾಯಾಚೌಕವನ್ನು ರಚಿಸುವ ಕ್ರಮ : ಮೊದಲು ದಪ್ಪ ಗೆರೆಗಳನ್ನೆಳೆದು ಆಕೃತಿಯನ್ನು 4 ಸಮಭಾಗ ಮಾಡಿಕೊಳ್ಳಬೇಕು; ಅನಂತರ ಎಡಪಕ್ಕದ ಮೇಲಿನ ಭಾಗದಲ್ಲಿ 1ರಿಂದ ಮೊದಲಾಗುವ ಕ್ರಮಾಗತ ಸಂಖ್ಯೆಗಳನ್ನು ಉಪಯೋಗಿಸಿ

		.			.		.
	.		.	.		.	
.		.			.		.
	.		.	.		.	
	.		.	.		.	
.		.			.		.
	.		.	.		.	
.		.			.		.

ಚಿತ್ರ 4 (a)

1		3			6		8
	10		12	13		15	
17		19			22		24
	26		28	29		31	
	34		36	37		39	
41		43			46		48
	50		52	53		55	
57		59			62		64

ಚಿತ್ರ 4 (b)

1	63	3	61	60	6	58	8
56	10	54	12	13	51	15	49
17	47	19	45	44	22	42	24
40	26	38	28	29	35	31	33
32	34	30	36	37	27	39	25
41	23	43	21	20	46	18	48
16	50	14	52	53	11	55	9
57	7	59	5	4	62	2	64

ಚಿತ್ರ 4 (c)

ವಿಷಮ ದರ್ಜೆಯ ಚೌಕವನ್ನು ಈ ಹಿಂದೆ ಹೇಳಿರುವ ಕ್ರಮದಲ್ಲಿ ರಚಿಸಬೇಕು. ಇದಲ್ಲಿಯ ಕೊನೆಯ ಸಂಖ್ಯೆ ಮುಂದಿನ ಸಂಖ್ಯೆಯಿಂದ ಆರಂಭಿಸಿ ಬಲಪಕ್ಕದ ಕೆಳಭಾಗದಲ್ಲಿ ಚೌಕ ರಚಿಸಿ, ಅನಂತರ ಅದೇ ರೀತಿಯಲ್ಲಿ ಬಲಪಕ್ಕದ ಮೇಲ್ಭಾಗದಲ್ಲೂ ಕೊನೆಯದಾಗಿ ಎಡಪಕ್ಕದ ಕೆಳಭಾಗದಲ್ಲೂ ಚೌಕಗಳನ್ನು ರಚಿಸಬೇಕು. ಈ ಮಾಯಾಚೌಕಗಳನ್ನು 1ನೆಯ, 2ನೆಯ, 3ನೆಯ ಮತ್ತು 4ನೆಯ ಚೌಕಗಳೆಂದು ಕರೆಯೋಣ. ಇಲ್ಲಿ ಎಡಪಕ್ಕದ ಮೇಲಿನ ಚೌಕವನ್ನು 1ರಿಂದ 25ರವರೆಗಿನ ಸಂಖ್ಯೆ ಗಳಿಂದಲೂ ಉಳಿದ ಮೂರು ಚೌಕಗಳನ್ನುಕ್ರಮವಾಗಿ 26ರಿಂದ 50, 51ರಿಂದ 75 ಮತ್ತು 76ರಿಂದ 100ರವರೆಗಿನ ಸಂಖ್ಯೆಗಳಿಂದಲೂ ರಚಿಸಿದೆ. ಅನಂತರ 1ನೆಯ ಚೌಕದ ಮಧ್ಯದ ಅಡ್ಡಸಾಲಿನಲ್ಲಿ ಎರಡನೆಯ ಸಂಖ್ಯೆಯಿಂದ ತೊಡಗಿ ಮಧ್ಯದ ಸಂಖ್ಯೆಯವರೆಗಿನವನ್ನೂ ಉಳಿದ ಅಡ್ಡ ಸಾಲುಗಳಲ್ಲಿ ಒಂದನೆಯ ಸಂಖ್ಯೆಯಿಂದ ತೊಡಗಿ ಮಧ್ಯದ ಹಿಂದಿನ ಸಂಖ್ಯೆಯವರೆಗಿನವನ್ನೂ ಗುರುತಿಸಬೇಕು. ಇದಾದ ಬಳಿಕ 3ನೆಯ ಚೌಕದ ಪ್ರತಿ ಅಡ್ಡಸಾಲಿನಲ್ಲೂ ಕೊನೆಯಿಂದ ತೊಡಗಿ ಮೊದಲಿನ ಚೌಕದ ಪ್ರತಿಸಾಲಿನಲ್ಲೂ ಎಷ್ಟು ಸಂಖ್ಯೆಗಳನ್ನು ಗುರುತಿಸಿದೆಯೋ ಅದಕ್ಕಿಂತ 1 ಕಡಿಮೆಯಾಗಿ ಸಂಖ್ಯೆಗಳನ್ನು ಗುರುತಿಸಿಕೊಳ್ಳಬೇಕು (ಪ್ರಸಕ್ತ ಉದಾಹರಣೆಯಲ್ಲಿ 1ನೆಯ ಚೌಕದಲ್ಲಿ ಪ್ರತಿಯೊಂದು

I ವರ್ಗ II ವರ್ಗ

17	24	1	8	15	67	74	51	58	65
23	5	7	14	16	73	55	57	64	66
4	6	13	20	22	54	56	63	30	72
10	12	19	21	3	60	62	69	71	53
11	18	25	2	9	61	68	75	52	59
92	99	76	83	90	42	49	26	33	40
98	80	82	89	91	48	30	32	39	41
79	81	88	95	97	29	31	38	45	47
85	87	94	96	78	35	37	44	46	28
86	93	100	77	84	33	43	50	27	34

IV ವರ್ಗ ಚಿತ್ರ 5(a) II ವರ್ಗ

ಅಡ್ಡಸಾಲಿನಲ್ಲೂ 2 ಸಂಖ್ಯೆಗಳನ್ನು ಗುರುತಿಸಿ ರುವುದರಿಂದ 3ನೆಯ ಚೌಕದ ಪ್ರತಿಯೊಂದು ಸಾಲಿನಲ್ಲೂ ಕೊನೆಯಿಂದ 1 ಸಂಖ್ಯೆಯನ್ನು ಮಾತ್ರ ಗುರುತಿಸಿದೆ). 1ನೆಯ ಚೌಕದಲ್ಲಿ ಗುರುತಿಸಿರುವ ಸಂಖ್ಯೆಗಳನ್ನು 4ನೆಯ ಚೌಕದಲ್ಲಿಯ ಸಂವಾದಿ ಸ್ಥಾನಗಳಲ್ಲಿರುವ ಸಂಖ್ಯೆಗಳೊಡನೆ ಮತ್ತು 3ನೆಯ ಚೌಕದಲ್ಲಿ ಗರುತಿಸಿರುವ ಸಂಖ್ಯೆಗಳನ್ನು 2ನೆಯ ಚೌಕದಲ್ಲಿಯ ಸಂವಾದಿಸ್ಥಾನ ಗಳಲ್ಲಿರುವ ಸಂಖ್ಯೆಗಳೊಡನೆ ವಿನಿಮಯ ಮಾಡಿದರೆ ಪೂರ್ಣ ಆಕೃತಿ ಮಾಯಾಚೌಕ ದೊರೆಯುತ್ತದೆ. ರಾಲ್‌ಸ್ಟಾಕೆ ಎಂಬಾತ ಈ ವಿಧಾನವನ್ನು ಶೋಧಿಸಿದ ಗಣಿತವಿದೆ. ಕೆಲವು ಮಾಯಾಚೌಕಗಳಲ್ಲಿ ಕರ್ಣ ದಲ್ಲಿರುವ ಸಂಖ್ಯೆಗಳ ಮೊತ್ತದಂತೆ ಭಿನ್ನಕರ್ಣಗಳ (ಬ್ರೋಕನ್ ಡಯಾಗೊನಲ್ಸ್) ಸಂಖ್ಯೆಗಳ ಮೊತ್ತಗಳೂ ಸಮವಾಗಿರುತ್ತವೆ. ಉದಾಹರಣೆಗೆ ಚಿತ್ರ 1ರಲ್ಲಿಯ ಭಿನ್ನಕರ್ಣಗಳಲ್ಲಿರುವ ಸಂಖ್ಯೆಗಳ

92	99	1	8	15	67	74	51	58	40
98	80	7	14	16	73	55	57	64	41
4	81	88	20	22	54	56	63	70	47
85	87	19	21	3	60	62	69	71	28
86	93	25	2	9	61	68	75	52	34
17	24	76	83	90	42	49	26	33	65
23	5	82	89	91	48	30	32	39	66
79	6	13	95	97	29	31	38	45	72
10	12	94	96	78	35	37	44	46	53
11	18	100	77	84	36	43	50	27	59

ಚಿತ್ರ 5(b)

ಮೊತ್ತಗಳಿವು : 10+16+7+1=3+9+14+8 = 6+4+11+13 = 8+2+9+15=13+7+4+10= 12+14+5+3=34 ಇಂಥ ಮಾಯಾಚೌಕಗಳಿಗೆ ಸರ್ವಕರ್ಣೀಯ (ಪಾನ್ ಡಯಾಗೊನಲ್) ಮಾಯಾಚೌಕ ಗಳೆಂದು ಹೆಸರು. ಮಹಾರಾಷ್ಟ್ರದ ನಾಸಿಕದಲ್ಲಿದ್ದ ಫ್ರಾಸ್ಟ್ ಎಂಬಾತ ಇಂಥ ಆಕೃತಿಗಳ ಬಗ್ಗೆ ಇಂಗ್ಲಿಷಿನಲ್ಲಿ ಮೊದಲು ಬರೆದ್ದರಿಂದ ಇವನ್ನು ನಾಸಿಕ ಚೌಕಗಳೆಂದೇ ಕರೆಯುವು ದುಂಟು. ಈ ಜಾತಿಯ ಮಾಯಾಚೌಕಗಳನ್ನು ಉದ್ದವಾಗಿ ಅಥವಾ ಅಡ್ಡವಾಗಿ ಯಾವ ಒಂದು ಗೆರೆಯನ್ನು ಅನುಸರಿಸಿ ಕತ್ತರಿಸಿ ಭಾಗಗಳನ್ನು ಅದಲು ಬದಲು ಮಾಡಿದರೂ ಪುನಃ ಸರ್ವಕರ್ಣೀಯ ಮಾಯಾಚೌಕಗಳಾಗಿಯೇ ಉಳಿದಿರುತ್ತವೆ.

ಮಾಯಾಚೌಕದ ಮಧ್ಯಬಿಂದುವಿಗೆ ವಿರುದ್ಧ ದಿಶೆಗಳಲ್ಲಿ ಒಂದೇ ದೂರದಲ್ಲಿರುವ ಮನೆಗಳೆರಡು ಪರಸ್ಪರ ವಿರುದ್ಧ ಸ್ಥಾನಗಳು. ಉದಾಹರಣೆಗೆ ಮೇಲಿನಿಂದ ಮೂರನೆಯ

ಸಾಲಿನಲ್ಲಿಯ ಮೊದಲಿನಿಂದ 2ನೆಯ ಮನೆಗೆ ವಿರುದ್ಧ ಸ್ಥಾನ ಕೆಳಗಿನಿಂದ ಮೂರನೆಯ ಸಾಲಿನಲ್ಲಿ ಕೊನೆಯಿಂದ 2ನೆಯ ಮನೆ. ಚಿತ್ರ 2ರಲ್ಲಿ 11,15: 5,21: 9, 17: 7,19: 16,10: 25,1: 12,14: 23,3,ಈ ಸಂಖ್ಯಾಯುಗ್ಮಗಳ ಮೊತ್ತ ಒಂದೇ,26. ಪರಸ್ಪರ ವಿರುದ್ಧ ಸ್ಥಾನ ಗಳಲ್ಲಿರುವ ಎರಡು ಸ್ಥಾನಗಳ ಮೊತ್ತ ಒಂದೇ ಸಮನಾಗಿರುವ (n ದರ್ಜೆಯ ಚೌಕದಲ್ಲಿ n^2+1) ಮಾಯಾಚೌಕಗಳಿಗೆ ಸಮಮಿತಿ (ಸಿಮೆಟ್ರಿಕಲ್) ಮಾಯಾಚೌಕಗಳೆಂದು ಹೆಸರು. ಈ ಹಿಂದೆ ಕೊಟ್ಟಿರುವ ಕ್ರಮಗಳಲ್ಲಿ ರಚಿಸಿದ ವಿಷಯ ಮತ್ತು ಸಮದ್ವಿಗುಣ ದರ್ಜೆಗಳ ಮಾಯಾಚೌಕಗಳು (ಚಿತ್ರ 3.6) ಸಮಮಿತಿ ಮಾಯಾ ಚೌಕಗಳು. ವಿಷಮ ದ್ವಿಗುಣ ದರ್ಜೆಗಳಲ್ಲಿ ಕ್ರಮಾಗತ ಸಂಖ್ಯೆಗಳನ್ನು ಉಪಯೋಗಿಸಿ ಸರ್ವಕಣೀಯ್ಮ ಅಥವಾ ಸಮಮಿತಿ ಮಾಯಾಚೌಕಗಳನ್ನು ರಚಿಸಲು ಸಾಧ್ಯವಿಲ್ಲ.

ಯಾವುದೇ ಮಾಯಾಚೌಕವನ್ನಾಗಲೀ ತಿರುಗಿಸಿ ಅಥವಾ ಮಗುಚಿ, ಬೇರೆ ಬೇರೆಯಾಗಿ ಕಾಣುವ 8 ಮಾಯಾಚೌಕಗಳನ್ನು ರಚಿಸಬಹುದು. ಆದರೆ ಮಾಯಾಚೌಕಗಳ ಎಣಿಕೆಯಲ್ಲಿ ಇಂಥ 8 ಆಕೃತಿಗಳನ್ನೂ ಒಂದೇ ಮೂಲಾಕೃತಿಯೆಂದು ಪರಿಗಣಿಸುತ್ತೇವೆ. 3ನೆಯ ದರ್ಜೆಯಲ್ಲಿರುವ ಮೂಲಾಕೃತಿ ಒಂದೇ. 4ನೆಯ ದರ್ಜೆಯಲ್ಲಿ 880 ಮೂಲಾಕೃತಿಗಳಿವೆ. 5ನೆಯ ದರ್ಜೆಯಲ್ಲಿ ಲಕ್ಷಕ್ಕೂ ಹೆಚ್ಚಾಗಿ ಮಾಯಾಚೌಕಗಳಿದ್ದು ಅವುಗಳಲ್ಲಿ 28,800 ನಾಸಿಕ ವರ್ಗಗಳೂ 174,240 ಅಂಚುಗಟ್ಟಿನ ಆಕೃತಿಗಳೂ ಇವೆಯೆಂದು ತಿಳಿದು ಬಂದಿದೆ.

ಕೆಲವು ವಿಶಿಷ್ಟ ಜಾತಿಯ ಮಾಯಾಚೌಕಗಳು : ಚಿತ್ರ 6ರಲ್ಲಿ ಅವಿಭಾಜ್ಯಗಳಿಂದಾದ ಮಾಯಾಚೌಕವನ್ನೂ 7ರಲ್ಲಿ ಸಮಾಂತರ ಶ್ರೇಣಿಯಲ್ಲಿರುವ ಅವಿಭಾಜ್ಯ

3	71	5	23
53	11	37	1
17	13	41	31
29	7	19	47

ಚಿತ್ರ 6

1669	199	1249
619	1039	1459
829	1879	409

ಚಿತ್ರ 7

125	118	123
120	122	124
121	126	119

ಚಿತ್ರ 8

2	1	4
3	5	7
6	9	8

ಚಿತ್ರ 9

3	1	2
9	6	4
18	36	12

ಚಿತ್ರ 10

12	9	2
1	6	36
18	4	3

ಚಿತ್ರ 11

7	53	41	27	2	52	48	30
12	58	38	24	13	63	35	17
51	1	29	47	54	8	28	42
64	14	18	36	57	11	23	37
25	43	55	5	32	46	50	4
22	40	60	10	19	33	61	15
45	31	3	49	44	26	6	56
34	20	16	62	39	21	9	59

ಚಿತ್ರ 12

ಗಳಿಂದಾದ ಮಾಯಾಚೌಕವನ್ನೂ 8ರಲ್ಲಿ ಕ್ರಮಾಗತ ವಿಭಾಜ್ಯ ಸಂಖ್ಯೆಗಳಿಂದಾದ ಮಾಯಾಚೌಕವನ್ನೂ ಕಾಣಿಸಿದೆ.

ವ್ಯವಕಲನ ಮಾಯಾಚೌಕ : ಪ್ರತಿಯೊಂದು ಸಾಲು ಅಥವಾ ಕರ್ಣದಲ್ಲಿಯ ಮೊದನೆಯ ಸಂಖ್ಯೆಯನ್ನು ಎರಡನೆಯದರಲ್ಲಿ ಕಳೆದು, ಬಂದ ಶೇಷವನ್ನು ಮೂರನೆ ಯದರಲ್ಲಿ ಕಳೆಯುವುದು ಆ ಶೇಷ ವನ್ನು ನಾಲ್ಕನೆಯದರಲ್ಲಿ ಈ ರೀತಿ ಮುಂದುವರಿ ಯುತ್ತ ಹೋದರೆ ಪ್ರತಿಯೊಂದು ಸಾಲಿಗೂ ಒಂದೇ ಫಲ ಬರಬೇಕು. ಚಿತ್ರ 9ರಲ್ಲಿ ಇಂಥ 3ನೆಯ ದರ್ಜೆಯ ಮಾಯಾಚೌಕವಿದೆ. ಪ್ರತಿಯೊಂದು ಸಾಲಿನ ಫಲ 5.

ಭಾಗಹಾರ ಮಾಯಾಚೌಕ : ಪ್ರತಿ ಯೊಂದು ಸಾಲು ಅಥವಾ ಕರ್ಣ ದಲ್ಲಿಯ ಮೊದಲನೆಯ ಸಂಖ್ಯೆಯಿಂದ ಎರಡನೆಯದನ್ನು ಭಾಗಿಸುವುದು. ಬಂದಲಬ್ಧದಿಂದ ಮೂರನೆಯದನ್ನು ಭಾಗಿಸುವುದು. ಹೀಗೆ ಮುಂದುವರಿದರೆ ಪ್ರತಿಯೊಂದು ಸಾಲಿಗೂ ಒಂದೇ ಫಲ ಬರಬೇಕು. ಚಿತ್ರ 10ರಲ್ಲಿ ಪ್ರತಿಯೊಂದು ಸಾಲಿನ ಫಲ 6.

ಗುಣಾಕಾರ ಮಾಯಾಚೌಕ : ಪ್ರತಿಯೊಂದು ಸಾಲು ಅಥವಾ ಕರ್ಣದ ಲ್ಲಿರುವ ಸಂಖ್ಯೆಗಳನ್ನು ಗುಣಿಸಿದರೆ ಒಂದೇ ಫಲ ಬರಬೇಕು. ಚಿತ್ರ 11ರಲ್ಲಿ ಫಲ 216. ಕೆಲವು ಮಾಯಾಚೌಕಗಳಲ್ಲಿ ಪ್ರತಿಯೊಂದು ಸಂಖ್ಯೆಯ ಸ್ಥಾನದಲ್ಲಿಯೂ ಅದರ ವರ್ಗವನ್ನೂ ಬರೆದರೂ ಮಾಯಾಚೌಕಗಳೇ ದೊರೆಯುತ್ತವೆ. 8ನೆಯ ದರ್ಜೆಯ ಆಕೃತಿಯೊಂದನ್ನು ಚಿತ್ರ 12ರಲ್ಲಿ ಕೊಟ್ಟಿದೆ. ಇನ್ನೂ ಕಡಿಮೆ ದರ್ಜೆಯಲ್ಲಿ ಇದು ಸಾಧ್ಯವಾಗದು. ಸಂಖ್ಯೆಗಳ ಬದಲು ಅವುಗಳ ವರ್ಗಗಳನ್ನು ಬರೆದರೂ ಅಥವಾ ಅವುಗಳ ಘನಗಳನ್ನು ಬರೆದರೂ ಮಾಯಾಚೌಕವೇ ಆಗುವಂತೆ 64ನೆಯ ದರ್ಜೆಯ ಆಕೃತಿಯೊಂದನ್ನು ರಚಿಸಿರುವುದಾಗಿ ತಿಳಿದುಬಂದಿದೆ.

ಮಾಯಾಘನಗಳು (ಮ್ಯಾಜಿಕ್ ಕೂಬ್ಸ್) : ಒಂದೊಂದು ಪದರದಲ್ಲಿಯ ಪ್ರತಿಯೊಂದು ಅಡ್ಡಸಾಲಿನ ಮತ್ತುಪ್ರತಿಯೊಂದು ನೀಟ ಸಾಲಿನ ಸಂಖ್ಯೆಗಳ ಮೊತ್ತವೂ ಮೇಲಿನ ಪದರದಿಂದ ಕೆಳಪದರಕ್ಕೆ ಹೋಗುವ ಪ್ರತಿಯೊಂದು ನೀಟಸಾಲಿನ ಸಂಖ್ಯೆಗಳ ಮೊತ್ತವೂ ಮೇಲಿನ ಪದರದ ಒಂದು ಮೂಲೆಯಿಂದ ಕೆಳಪದರದ ಎದುರು ಮೂಲೆಗೆ ಹೋಗುವ 4 ಕರ್ಣಗಳಲ್ಲಿ ಪ್ರತಿಯೊಂದರ ಸಂಖ್ಯೆಗಳ ಮೊತ್ತವೂ ಸಮವಾಗುವಂತೆ ಮಾಯಾ ಘನಗಳನ್ನು ರಚಿಸಬಹುದು. 3ನೆಯ ದರ್ಜೆಯ ಒಂದು ಮಾಯಾಘನದ ಪದರಗಳನ್ನು ಚಿತ್ರ 13ರಲ್ಲಿ ತೋರಿಸಿದೆ.

ಕೆಳಪದರ

4	12	26
11	35	6
27	5	10

ನಡುಪದರ

20	7	15
9	14	19
13	21	8

ಮೇಲುಪದರ

18	23	1
22	3	17
2	16	24

ಚಿತ್ರ 13

ಒಂದನೆಯ ಪದರ ಎರಡನೆಯ ಪದರ

1	8	61	60	48	41	20	21
62	59	2	7	19	22	47	42
52	53	16	9	29	28	33	40
15	10	51	54	34	39	30	27
32	25	36	37	49	56	13	12
35	38	31	26	14	11	50	55
45	44	17	24	4	5	64	57
18	23	46	43	63	58	3	6

ನಾಲ್ಕನೆಯ ಪದರ ಚಿತ್ರ 14 ಮೂರನೆಯ ಪದರ

ಚಿತ್ರ 14ರಲ್ಲಿರುವುದು ಹೀತ್ ಎಂಬವರಿಂದ ರಚಿತವಾದ ಒಂದು ಅಪೂರ್ವ ಮಾಯಾಚೌಕ. ಇದರ ಯಾವುದೇ ಸಾಲಿನಲ್ಲಿ ಅಥವಾ ಕರ್ಣದಲ್ಲಿರುವ 8 ಸಂಖ್ಯೆಗಳ ಪೈಕಿ ನಾಲ್ಕು ಪರ್ಯಾಯ ಸಂಖ್ಯೆಗಳ ಮೊತ್ತ 130. ಆಕೃತಿಯನ್ನು ದಪ್ಪಗೆರೆಗಳಿರುವ ಕಡೆ ಕತ್ತರಿಸಿದರೆ ಆಗುವ ನಾಲ್ಕು ಭಾಗಗಳೂ ಮಾಯಾಚೌಕಗಳೇ. ಈ ಭಾಗಗಳನ್ನು ಚಿತ್ರದಲ್ಲಿ ಸೂಚಿಸಿರುವಂತೆ ಪದರಗಳಾಗಿ ಸೇರಿಸಿದರೆ 4ನೆಯ ದರ್ಜೆಯ ಮಾಯಾಚೌಕವಾಗುತ್ತದೆ.

15	10	3	6
4	5	16	9
14	11	2	7
1	8	13	12

ಚಿತ್ರ 1

25	24	7	6	3
4	16	9	14	22
5	11	13	15	21
8	12	17	10	8
23	2	19	20	1

ಚಿತ್ರ 2

		1		
	5			
4				
				3
			2	

ಚಿತ್ರ 3 (a)

		1	8	
	5	7		
4	6			
10				3
			2	9

ಚಿತ್ರ 3 (b)

		1	8	15
	5	7	14	
4	6	13		
10	12			3
11			2	9

ಚಿತ್ರ 3 (c)

17	24	1	8	15
23	5	7	14	16
4	6	13	20	22
10	12	19	21	3
11	18	25	2	9

ಚಿತ್ರ 3 (d)

					.		.
	.		.	.		.	
.		.			.		.
	.		.	.		.	
	.		.	.		.	
.		.			.		.
	.		.	.			
.		.			.		.

1		3			6		8
	10		12	13		15	
17		19			22		24
	26		28	29		31	
	34		36	37		39	
41		43			46		48
	50		52	53		55	
57		59			62		64

1	63	3	61	60	6	58	8
56	10	54	12	13	51	15	49
17	47	19	45	44	22	42	24
40	26	38	28	29	35	31	33
32	34	30	36	37	27	39	25
41	23	43	21	20	46	18	48
16	50	14	52	53	11	55	9
57	7	59	5	4	62	2	64

17	24	1	8	15	67	74	51	58	65
23	5	7	14	16	73	55	57	64	66
4	6	13	20	22	54	56	63	30	72
10	12	19	21	3	60	62	69	71	53
11	18	25	2	9	61	68	75	52	59
92	99	76	83	90	42	49	26	33	40
98	80	82	89	91	48	30	32	39	41
79	81	88	95	97	29	31	38	45	47
85	87	94	96	78	35	37	44	46	28
86	93	100	77	84	33	43	50	27	34

92	99	1	8	15	67	74	51	58	40
98	80	7	14	16	73	55	57	64	41
4	81	88	20	22	54	56	63	70	47
85	87	19	21	3	60	62	69	71	28
86	93	25	2	9	61	68	75	52	34
17	24	76	83	90	42	49	26	33	65
23	5	82	89	91	48	30	32	39	66
79	6	13	95	97	29	31	38	45	72
10	12	94	96	78	35	37	44	46	53
11	18	100	77	84	36	43	50	27	59

3	71	5	23
53	11	37	1
17	13	41	31
29	7	19	47

ಚಿತ್ರ 6

1669	199	1249
619	1039	1459
829	1879	409

125	118	123
120	122	124
121	126	119

2	1	4
3	5	7
6	9	8

3	1	2
9	6	4
18	36	12

12	9	2
1	6	36
18	4	3

7	53	41	27	2	52	48	30
12	58	38	24	13	63	35	17
51	1	29	47	54	8	28	42
64	14	18	36	57	11	23	37
25	43	55	5	32	46	50	4
22	40	60	10	19	33	61	15
45	31	3	49	44	26	6	56
34	20	16	62	39	21	9	59

4	12	26
11	35	6
27	5	10

20	7	15
9	14	19
13	21	8

18	23	1
22	3	17
2	16	24

1	8	61	60	48	41	20	21
62	59	2	7	19	22	47	42
52	53	16	9	29	28	33	40
15	10	51	54	34	39	30	27
32	25	36	37	49	56	13	12
35	38	31	26	14	11	50	55
45	44	17	24	4	5	64	57
18	23	46	43	63	58	3	6

ಹೊಯ್ಸಳ ಕರ್ನಾಟಕ ಬ್ರಾಹ್ಮಣರ ಸಾಂಸ್ಕೃತಿಕ ಅಧ್ಯಯನ ಕೆಲವು ಟಿಪ್ಪಣಿಗಳು

I. ಈ ಬ್ರಾಹ್ಮಣರ ಬಗೆಗಿನ ಶಾಸನ, ತಾಮ್ರಶಾಸನ, ದಾಖಲೆಗಳು ನನಗೆ ತಿಳಿದಂತೆ ಇಲ್ಲ.

1. ಹೊಯ್ಸಳರ ನಾಡಿನಲ್ಲಿರುವ ಕರ್ನಾಟಕ ಬ್ರಾಹ್ಮಣರು, ಹೊಯ್ಸಳ ಕರ್ನಾಟಕರೆಂಬ ಹೆಸರಿನಿಂದ ಕರೆಯಲ್ಪಟ್ಟರು. ಬಡಗನಾಡು ಕರ್ನಾಟಕರು, ಸೀರ್ಯನಾಡು ಇತ್ಯಾದಿಯಂತೆ.
2. ಈ ಗುಂಪಿನವರು, ಹಾಸನ ಜಿಲ್ಲೆ, ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ಭಾಗ, ಬೆಂಗಳೂರಿನ ಕನಕಪುರ (ಕಾನಕಾನ ಹಳ್ಳಿ) ಭಾಗ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳು, ಶಿವಮೊಗ್ಗ ತರೀಕೆರೆ, ಇವುಗಳಲ್ಲಿ ಹೆಚ್ಚಾಗಿದ್ದಾರೆ. ನಮ್ಮ ಪೂರ್ವಿಕರು ಮೊದಲು ಕೊಯಿಮತ್ತೂರು ಜಿಲ್ಲೆಯ ಗೋಪಿಶೆಟ್ಟಿ ಪಾಳ್ಯದಲ್ಲಿದ್ದು ಅಲ್ಲಿಂದ ಹಾಸನ ಜಿಲ್ಲೆಯ ಆನೆಕೆರೆ, ಮುಂದೆ ಬೆಂಗಳೂರು ಜಿಲ್ಲೆಯ ಕನಕಪುರಕ್ಕೆ ಬಂದರೆಂದು ಕೇಳಿದ್ದೇನೆ. ಸುಮಾರು 50 ವರ್ಷಗಳ ಹಿಂದೆ ಕನಕಪುರದಲ್ಲಿ 50-60 ಮನೆಯವರು ನಮ್ಮ ಜಾತಿವರ್ಗದವರಿದ್ದರು. ನಮ್ಮ ತಾತಂದಿರು ಮತ್ತು ಅವರ ದೊಡ್ಡಪ್ಪನ ಮಗ ಈ ಎರಡು ಸಂಸಾರಗಳು ಅಲ್ಲಿಂದ ಗರ್ಗೇಶ್ವರಿಗೆ ಹೋದರು. ನಮ್ಮ ವಂಶಜರು ಕಾನಕನಹಳ್ಳಿಗೆ ಬಂದು 15 ತಲೆಮಾರು ಸುಮಾರು 400 ವರ್ಷಗಳಾದುವು.
3. ನನಗೆ ಯಾವ ಪುಸ್ತಕದ ವಿಷಯವೂ ತಿಳಿಯದು.
4. ಈ ಗುಂಪಿನವರದೇ ವಿಶೇಷವಾಗಿ ಯಾವ ಗೋತ್ರವೂ ಇಲ್ಲ. ಎಲ್ಲ ಗುಂಪಿನಲ್ಲಿರುವಂತೆಯೇ ಬೇರೆ ಬೇರೆ ಗೋತ್ರದವರಿದ್ದಾರೆ. ನನಗೆ ತಿಳಿದಂತೆ ಆಪಸ್ತಂಬ ಸೂತ್ರದವರು ಈ ಗುಂಪಿನಲ್ಲಿಲ್ಲ.

II. ಬದುಕುತ್ತಿರುವ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ

ಇವು ಹೊಯ್ಸಳ ಕರ್ನಾಟಕರಿಗೆ ವಿಶಿಷ್ಟವಾದುವುಗಳಲ್ಲ. ಅವರು ವಾಸಿಸುವ ಪ್ರದೇಶದಲ್ಲಿರುವ ಇತರ ಸ್ಮಾರ್ತ ಕನ್ನಡ ಬ್ರಾಹ್ಮಣರಿಗೂ ಇವರಿಗೂ ಇವು ಸಮಾನ. ಬೇರೆ ಬೇರೆ ಆಚಾರ ವ್ಯವಹಾರಗಳಿವೆ. ಉದಾಹರಣೆಗೆ, ಮೈಸೂರು ಪ್ರಾಂತದಲ್ಲಿನ ಕರ್ನಾಟಕರು

ಮಗುವನ್ನು ತೊಟ್ಟಿಲಲ್ಲಿಡುವ ದಿನ, ಕಾಯಿಕಡುಬು ಮಾಡುತ್ತಿದ್ದರು. ಬಳ್ಳಾರಿ ಪ್ರಾಂತದಲ್ಲಿ ವಾಸಿಸುತ್ತಿದ್ದ ಕರ್ನಾಟಕರಲ್ಲಿ ಈ ದಿನ ಕಡುಬು ವರ್ಜ್ಯ.

ಮೈಸೂರು ಪ್ರದೇಶದಲ್ಲಿರುವ ಹೊಯ್ಸಳ ಕರ್ನಾಟಕರ ಮದುವೆ, ಮುಂಜಿ ಮೊದಲಾದ ಶುಭ ಕಾರ್ಯಗಳಿಗೆ ಮುಂಚೆ ದೇವರ ಸಂತರ್ಪಣೆಯೆಂಬ ಹೆಸರಿನಲ್ಲಿ ಬ್ರಾಹ್ಮಣರ ಊಟ ನಡೆಸುತ್ತಾರೆ. ಆ ದಿನ ಬೇಳೆಯ ಹೋಳಿಗೆ (ಬೇಳೆ ಒಬ್ಬಟ್ಟು) ಮಾಡಲೇಬೇಕು. ಗಣಪತಿ ಹಬ್ಬ, ನಾಗರಪಂಚಮಿಗಳ ದಿನ ಕಾಯಿಕಡುಬು ಮಾಡುವ ರೂಢಿ ಇತ್ತು.

III. ಆಡುಭಾಷೆ ಮತ್ತು ಸಾಹಿತ್ಯ ರಚನೆ

ಇವು ಇತರ ಕನ್ನಡ ಸ್ಮಾರ್ತ ಬ್ರಾಹ್ಮಣರಂತೆಯೇ.

ತಂಜಾವೂರು ಪ್ರಾಂತದಲ್ಲಿ ನೆಲಸಿದ್ದ ನಾಯಕರಾಜರ ಪ್ರಧಾನಮಂತ್ರಿ (ಸುಮಾರು 60ವರ್ಷಕಾಲ) ಗೋವಿಂದ ದೀಕ್ಷಿತರು ಹೊಯ್ಸಳ ಕರ್ನಾಟಕರು. ಗೋವಿಂದ ದೀಕ್ಷಿತರು ಸಂಗೀತಸುಧಾನಿಧಿ ಎಂಬ ಗ್ರಂಥವನ್ನೂ, ಇತರ ಕೆಲವು ಗ್ರಂಥಗಳನ್ನೂ ರಚಿಸಿದ್ದಾರೆ. ಇವರಿಗೆ ಅದ್ವೈತ ವಿದ್ಯಾಚಾರ್ಯ ಎಂಬ ಬಿರುದಿತ್ತು. ಇವರ ಮಗ ವೆಂಕಟಮುಖಿ ಚತುರ್ದಂಡಿಪ್ರಕಾಶಿಕಾ ಎಂಬ ಸಂಗೀತ ಗ್ರಂಥವನ್ನು ಬರೆದಿದ್ದಾರೆ. 72 ಮೇಳ ಕರ್ತೃರಾಗಪದ್ಧತಿ ಇವರಿಂದ ಆರಂಭವಾಯಿತು. ದೀಕ್ಷಿತರ ಮತ್ತೊಬ್ಬ ಮಗ ಯಜ್ಞನಾರಾಯಣ ದೀಕ್ಷಿತರು ರಘುನಾಥ ಭೂಪಾಲ ವಿಜಯವೆಂಬ ಕಾವ್ಯವನ್ನೂ, ರಘುನಾಥವಿಲಾಸವೆಂಬ ನಾಟಕವನ್ನೂ ಸಂಸ್ಕೃತದಲ್ಲಿ ರಚಿಸಿದ್ದಾರೆ. ಇತರ ಗ್ರಂಥ ಗಳನ್ನೂ ಬರೆದಿದ್ದಾರೆ. ಗೋವಿಂದ ದೀಕ್ಷಿತರ ಮರಿಮಗ (ಮಗಳ ಮಗಳ ಮಗ) ವಾಂಛೇಶ್ವರಕವಿ ಅಥವಾ ಕುಟ್ಟಿಕವಿ ಮಹಿಷಶತಕವೆಂಬ ವಿಡಂಬನಾಕಾವ್ಯವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ. ಇವರ ಮರಿಮಗ ಕುಟ್ಟಿಶಾಸ್ತ್ರಿಗಳು ಪ್ರಸಿದ್ಧ ವಿದ್ವಾಂಸರು, ಮುಮ್ಮಡಿ ಕೃಷ್ಣರಾಜೊಡೆಯರ ಆಸ್ಥಾನದಲ್ಲಿ ಇವರು ಧರ್ಮಾಧಿಕಾರಿಗಳಾಗಿದ್ದರು. ಇವರ ಮಗ ನರಸಿಹ್ಮಶಾಸ್ತ್ರಿ ಇವರ ನಂತರ ಮುಮ್ಮಡಿ ಕೃಷ್ಣರಾಜೊಡೆಯರ, ಅವರ ಮಕ್ಕಳು, ಮೊಮ್ಮಕ್ಕಳ ಕಾಲದಲ್ಲೂ ಸಹ ಧರ್ಮಾಧಿಕಾರಿಯಾಗಿದ್ದರು. ಕುಟ್ಟಿಶಾಸ್ತ್ರಿಗಳು ಮಹಿಷಶತಕಕ್ಕೆ ವ್ಯಾಖ್ಯಾನವನ್ನೂ, ಅನೇಕ ಶಾಸ್ತ್ರ ಗ್ರಂಥಗಳನ್ನೂ ರಚಿಸಿದ್ದಾರೆ. ಗೋವಿಂದ ದೀಕ್ಷಿತರ, ಮೇಲೆ ಹೇಳಿದ ಇಬ್ಬರು ಮಕ್ಕಳೂ, ಅವರ ವಂಶೀಯರು ಅನೇಕರು ವಾಂಛೇಶ್ವರಕವಿ ಮತ್ತು ಅವರ ತಂದೆಯೂ ತಂಜಾವೂರಿನ ರಾಜರ ಮಂತ್ರಿಗಳಾಗಿದ್ದರು. ಸೋಸಲೆ ಗರಳಪುರಿ ಶಾಸ್ತ್ರಿಗಳು ಸಂಸ್ಕೃತದಲ್ಲಿ ಚಂಪೂರಾಮಾಯಣ ಯುದ್ಧಕಾಂಡವನ್ನು ಬರೆದಿದ್ದಾರೆ. ಇವರ ಮಗ ಸೋಸಲೆ ಅಯ್ಯಾಶಾಸ್ತ್ರಿಗಳು ಸಂಸ್ಕೃತ ಮತ್ತು ಕನ್ನಡಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

ಚಾಮರಾಜನಗರದ ಶ್ರೀಕಂಠಶಾಸ್ತ್ರಿಗಳು ಧಾತುರೂಪಪ್ರಕಾಶಿಕೆಯೆಂಬ ದೊಡ್ಡ ಉದ್ಗ್ರಂಥವನ್ನು ಬರೆದಿದ್ದಾರೆ. ಇವರ ತಮ್ಮ ಚಾಮರಾಜನಗರದ ರಾಮಶಾಸ್ತ್ರಿಗಳು ಸೀತಾರಾವಣ ಸಂವಾದಝುರೀ ಎಂಬ ಸಂಸ್ಕೃತ ಚಿತ್ರಕಾವ್ಯವನ್ನು ರಚಿಸಿದ್ದಾರೆ.

ಇವರೆಲ್ಲರೂ ಮೈಸೂರು ಆಸ್ಥಾನದಲ್ಲಿ ಮಹಾವಿದ್ವಾಂಸರಾಗಿದ್ದರು. ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರೂ, ಇವರ ಶಿಷ್ಯ ಚೆಲುವರಾಯಸ್ವಾಮಿ ಪ್ರಸಿದ್ಧ ವೈಣಿಕರು. ಚೆಲುವರಾಯಸ್ವಾಮಿ ಸಂಗೀತ ಗ್ರಂಥಗಳನ್ನು ರಚಿಸಿದ್ದಾರೆ. ವೀಣೆ ದೊರೆ-ಸ್ವಾಮಯ್ಯಂಗಾರ್ಯರು ವೆಂಕಟಗಿರಿಯಪ್ಪನವರ ಶಿಷ್ಯರು.

ವಿಜಯನಗರದಲ್ಲಿ ಮಂತ್ರಿಗಳಾಗಿದ್ದ ಮಾಧವಾಚಾರ್ಯ (ವಿದ್ಯಾರಣ್ಯ), ವೇದ ಭಾಷ್ಯಕಾರ ಸಾಯಣ ಹೊಯ್ಸಳ ಕರ್ನಾಟಕರು.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹೈದರಾಬಾದಿನಲ್ಲಿ ಮಂತ್ರಿಗಳಾಗಿದ್ದ ಡಾ. ಮೇಲುಕೋಟೆ, ಮೈಸೂರಲ್ಲಿ ಮಂತ್ರಿಗಳಾದ್ದ ಇವರ ಅಣ್ಣ ಎ. ಜಿ. ರಾಮಚಂದ್ರರಾವ್ ಹೊಯ್ಸಳ ಕರ್ನಾಟಕರು.

ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳೂ, ಇವರಿಗೆ ಹಿಂದೆ ಇದ್ದ ಅನೇಕ ಆಚಾರ್ಯರೂ ಹೊಯ್ಸಳ ಕರ್ನಾಟಕರು.

IV. ಜೀವನ ವೃತ್ತ ಮತ್ತು ಕಲಾವಂತಿಕೆ

ಇವೆಲ್ಲ ಇತರ ಕನ್ನಡ ಸ್ಮಾರ್ತ ಬ್ರಾಹ್ಮಣರಂತೆಯೇ.

IV. ಇಂದಿನ ಸ್ಥಿತಿಗತಿಗಳು

ವಿಶೇಷವೇನನ್ನೂ ಕಾಣೆ. ಇವೂ ಇತರರಂತೆಯೇ.

§§ ಎರಡು ವರ್ಷಗಳ ಹಿಂದೆ ಸ್ವರ್ಗಸ್ಥರಾದ ವಿದ್ವಾನ್ ಬಿ. ವೆಂಕಟರಾಮ ಭಟ್ಟರು ಸುಮಾರು 40 ಕೃತಿಗಳನ್ನು ಸಂಸ್ಕೃತ, ಕನ್ನಡಗಳಲ್ಲಿ ರಚಿಸಿದ್ದಾರೆ. ಇವರ 3 ಸಂಸ್ಕೃತಕೃತಿಗಳಿಂದ ಆಯ್ದ ಭಾಗಗಳು ಕಾವ್ಯಾಮೃತವೆಂಬ ಹೆಸರಿನಲ್ಲಿ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನಿಂದ ಅಚ್ಚಾಗಿವೆ.

ಸ್ಕಂದ ಸುಬ್ರಹ್ಮಣ: ಕೆಲವು ಉದ್ಧರಣಗಳು

I ಅಮರ ಪದವಿವೃತಿ :- ಲಿಂಗಯ ಸೂರಿಕೃತಾ(ಲಿಂಗಾಭಟ್ಟೀಯಂ)

1. ಈಶ್ವರಸ್ಯರೇತಸಃ ಸ್ಕಂದತೀತಿ ಸ್ಕಂದಃ ।
   ಶತ್ರೂನ್ ಸ್ಕಂದತಿ ಶೋಷಯತೀತಿ ವಾ ।
   "ಸ್ಕಂದಿರ್ ಗತಿ ಶೋಷಣಯೋಃ"
2. ಸೇನಾಂ ಗೂಹತೀತಿ ಗುಹಃ । "ಗುಹೂ ಸಂವರಣೇ" ।
3. ಬಹುಲಾನಾಂ ಕೃತ್ತಿಕಾನಾಮಪತ್ಯಂ ಪುಮಾನ್ ಬಾಹುಲೇಯಃ ।
4. ವಿಶಾಖಾಸು ಭವತೀತಿ ವಿಶಾಖಃ ।

II ಅಮರಪದಪಾರಿಜಾತಃ - ಮಲ್ಲಿನಾಥಸೂರಿ ಕೃತಃ
ಕಾರ್ತಿಕೇಯ ನಾಮಾನಿ । ಅನುಕ್ತಂ-
ಸುಬ್ರಹ್ಮಣ್ಯೋ ಬ್ರಹ್ಮಗರ್ಭೋ ನೀಲದಂಷ್ಟ್ರೋ ಹರಾತ್ಮಜಃ ।
ಸ್ವಾಮೀ ಶರೇಜಃ (ಜಲೇಜಃ) ಶರಜೋ ಗಾಂಗೇಯಃ ಕುಕ್ಕುಟಧ್ವಜಃ ॥

III ಅಮರಕೋಶೋದ್ಘಾಟನಂ- ಭಟ್ಟಕ್ಷೀರಸ್ವಾಮಿಕೃತಂ ವಿಶೇಷ್ಯ ನಿಘ್ನವರ್ಗಸ್ಯ 111 ತಮಶ್ಲೋಕ ವ್ಯಾಖ್ಯಾನಾಂತೇ, ವಾಚ್ಯಂಚಾತ್ರ- ಬ್ರಹ್ಮಣ್ಯೋಬ್ರಾಹ್ಮಣಹಿತೋ, ಇತ್ಯಾದಿ

IV Apte's Dictionary

(i) ಬ್ರಹ್ಮಣ್ಯಃ : An epithet of ಕಾರ್ತಿಕೇಯ (ಬ್ರಹ್ಮಣೇ ಹಿತಃ) Relating to Brahman, relating to the acquisition of several knowledge, friendly or hospitable to a Brahman = worthy of respect or reverence, excellent.

(ii) ಸುಬ್ರಹ್ಮಣ್ಯ : 1.an epithet of karthikeya, 2. Name of one of the 16 priests employed at a sacrifice.

V ಸ್ಕಾಂದಪುರಾಣಂ : Nag publishers edn ಶ್ರೀಸ್ಕಾಂದಮಹಾಪುರಾಣಂ

(1) Introduction(in vol.8) by Editor. Dr. R. N. Sharma

(a) "ಸ್ಕಂದ along with his other names like ಷಣ್ಮುಖ, ಜಯಂತ, ವಿಶಾಖ, ಸುಬ್ರಹ್ಮಣ್ಯ and ಮಹಾಸೇನ is referred to

in the Baudhayana Dharmasutra". (p.10)
In early stage of development,ಸ್ಕಂದ was the son of ಅಗ್ನಿ & ಸ್ವಾಹಾ; and ಅಗ್ನಿ is identified with ಸೂರ್ಯ; As ಅಗ್ನಿ was also known as ರುದ್ರ, ಸ್ಕಂದ was called ರುದ್ರಪುತ್ರ. At a later stage when ರುದ್ರ & ಶಿವ were assimilated ಶಿವ came to be known as father of ಸ್ಕಂದ. (p.11)
In another place of same ಪರ್ವ it is said ಶಿವ & ಪಾರ್ವತೀ assumed the form of ಅಗ್ನಿ & ಸ್ವಾಹಾ and begot ಸ್ಕಂದ (p.11)
There are various versions in ಭಾರತ & ರಾಮಾಯಣ. ಪತಂಜಲಿ refers to the worship of ಸ್ಕಂದ (p.12) (ಮಹಾಭಾಷ್ಯ 1.3.99)
ಮತ್ಸ್ಯ & ಶಿವ ಪುರಾಣ accounts(p.13)
ಬ್ರಹ್ಮಪುರಾಣ version, used by ಕಾಳಿದಾಸ ಕುಮಾರಸಂಭವ, ಕಾರ್ತಿಕೇಯ is latter known as ಸುಬ್ರಹ್ಮಣ್ಯ in the south. Skanda ಪುರಾಣ gives a full account of this war with the asura ತಾರಕ. (ಬ್ರಾಹ್ಮ-ಅಧ್ಯಾಯ 28) (p.14)

(b) Contents of ಸ್ಕಾಂದ
ಭುವಕೋಶ - Geographical matter, ಕ್ಷೇತ್ರ ಮಾಹಾತ್ಮ್ಯ's
ಕೇದಾರಖಂಡ - Himalayan region
ಕಾಶೀಖಂಡ - U.P
ಪುರುಷೋತ್ತಮಕ್ಷೇತ್ರಮಾಹಾತ್ಮ್ಯ - ಕಳಿಂಗ
ಅವಂತೀಖಂಡ - ಮಾಳವ, ಗುಜರಾತ್, ರಾಜಸ್ಥಾನ.
ನಾಗರಖಂಡ, ಪ್ರಭಾಸಖಂಡ } - Western Indian areas.
ಸೇತುಮಾಹಾತ್ಮ್ಯ, ವೆಂಕಟಾಚಲಮಾಹಾತ್ಮ್ಯ } South India. (p.15)
ಕುಮಾರಿಕಾಖಂಡ(Chapter 40) refers to ಶೂದ್ರಕ,

ನಂದರಾಜ್ಯ ವಿಕ್ರಮಾದಿತ್ಯ, ಶಕಬುದ್ಧ and ಪ್ರಮಿತಿ & gives dates in ಕಲಿ era..

Ruling dynasties of south are also mentioned. ದಂಡನೀತಿ

(c) There are 2 works ಸ್ಕಾಂದ ಮಹಾಪುರಾಣ, ಸ್ಕಾಂದ ಉಪಪುರಾಣ This book is the former.

7 Khandas, ಮಹೇಶ್ವರ, ವಿಷ್ಣು, ಬ್ರಹ್ಮ, ಕಾಶೀ ಆವಂತ್ಯ, ನಾಗರ, ಪ್ರಭಾಸ (p.16)

(d) There is a ಸ್ಕಾಂದ ಪುರಾಣ written in Gupta Land (middle of 7th cent. A. D. Skanda refers to king ಪ್ರಮಿತಿ, giving his date as about 1298 A.D. (P.19)

(e) As per vedic conception of ಅಗ್ನಿ ,he can be termed as ಸ್ಕಂದ progenitor, as he has been given many Characteristics (ಅಗ್ನಿ of ಸ್ಕಂದ ಕಾರ್ತಿಕೇಯ)

In ಶತಪಥ ಬ್ರಾಹ್ಮಣ, ಕುಮಾರ is mentioned as 9th form of ಅಗ್ನಿ or ರುದ್ರ; but not as god of war. ತೈತ್ತಿರೀಯ ಆರಣ್ಯಕ refers to ಪುರುಷ ಮಹಾಸೇನಷಣ್ಮುಖ. ಛಾಂದೋಗ್ಯ passage(7.26.2) identifies him with ಸನತ್ಕುಮಾರ.

ಸ್ಕಾಂದಯಾಗ text of ಅಥರ್ವವೇದ ಪರಿಶಿಷ್ಟ (called ಧೂರ್ತಕಲ್ಪ) - description agrees with puranic accounts. Author is not sure of ಕಾರ್ತಿಕೇಯ's parentage: of the verse.

ಆಗ್ನೇಯಂ ಕೃತ್ತಿಕಾಪುತ್ರಂ ಐಂದ್ರಂ ಕೇಚಿದಧೀಯತೇ ।
ಕೇಚಿತ್ಪಶುಪತಿಂರೌದ್ರಂ, ಯೋऽಸಿ ಸೋऽಸಿ ನಮೋಽಸ್ತುತೇ ॥

(p.20)

(f) In ಸ್ಕಾಂದ ಪುರಾಣ, ಕಾರ್ತಿಕೇಯ's birth & exploits are described in 5 places.

27th chapter of ಕೇದಾರಖಂಡ of ಮಹೇಶ್ವರಖಂಡ

34th chapter of ಅವಂತಿಕಾಕ್ಷೇತ್ರ ಮಾಹಾತ್ಮ್ಯ ನಾಗರಖಂಡ

ch. 70-71 of Chapter 246, (p.24 & f.n)

(2) Text of ಸ್ಕಾಂದಪುರಾಣ (Extracts)

(a) ಶಿವ ಪಾರ್ವತೀ ಸಮಾಗಮ. ಅಂತರ್ಗೃಹಕ್ಕೆ ಹ್ರಸ್ವರೂಪ ಧರಿಸಿ ಅಗ್ನಿಪ್ರವೇಶ. ಶಿವತೇಜಸ್ಸಿನಿಂದ ತಪ್ತನಾದ ಅಗ್ನಿಯಿಂದ ಆ ರೇತಸ್ಸು ಗಂಗೆಯಲ್ಲಿ ವಿಸರ್ಜಿತವಾಗಿ ಕುಮಾರ ಜನನ, ಬಿದಿರಿನ ಮೆಳೆ ಯಲ್ಲಿ, ಕೃತ್ತಿಕೆಯರು ಗಂಗೆಯಲ್ಲಿ ವಿಸರ್ಜಿಸಿದ್ದ ರೇತಸ್ಸಿನಿಂದ ಷಣ್ಮುಖನ ಜನನ.

ಗಂಗಾಯಾಃ ಪುಲಿನೇ ಜಾತಃ ಕಾರ್ತಿಕೇಯೋ ಮಹಾಬಲಃ ॥79॥

ಉಪವಿಷ್ಟೋಽಥಗಾಂಗೇಯೋ ಹ್ಯಹೋರಾತ್ರೋಷಿತಸ್ತದಾ।

ಶಾಖೋ ವಿಶಾಖೋಽತಿಬಲಃ ಷಣ್ಮುಖೋಽಸೌಮಹಾಬಲಃ ॥84॥

ಏಕಪದ್ಯೇನ ತೇ ಸರ್ವೇ ಸಹಿತಾ ಶ್ಯಂಕರೇಣ ತು।

ದ್ರಷ್ಟುಂ ಗಾಂಗೇಯ ಮಧಿಕಂಜಗ್ಮುಃ ಪುಲಿನಸಂಸ್ಥಿತಂ॥87॥

ಮಹೇಶ್ವರಖಂಡೇ ಕೇದಾರಖಂಡೇ, ಸಪ್ತವಿಂಶೋಽಧ್ಯಾಯಃ

(b) ಶಕ್ತಿಭೇದತೀರ್ಥ-ಶಿವ ಸ್ಕಂದನಿಗೆ ಜಟಾಭದ್ರಮಾಡಿದ ಸ್ಥಲ. ದಾನವರಿಗೆ ಸೋತ ಇಂದ್ರನು ಶಿವನನ್ನು ತಪಸ್ಸಿನಿಂದ ಪ್ರಸನ್ನನಾಗಿಸಿ ಮಹಾಸೇನ ಪತಿಯನ್ನು ಕೇಳಿದ. ತನ್ನ ಮಗ ಮಹಾಸೇನ ಸೇನಾನಿ ಯಾಗುವನೆಂದು ಹೇಳಿ ಶಿವ ದೇವದಾರು ವನದಲ್ಲಿ ಧ್ಯಾನಸ್ಥನಾದ; ಕಾಮದಹನ; ಪಾರ್ವತೀ ಶಿವ ವಿವಾಹ; ಷಡಾನನನ ಜನನ.

ಅವನಿಗೆ ಶಿವನು ಶಕ್ತ್ಯಾಯುಧವನ್ನೂ, ಗೌರಿಯು ನವಿಲು ವಾಹನ ವನ್ನೂ, ಅಗ್ನಿಯು ಆಡನ್ನೂ, ವರುಣನು ಕೋಳಿಯನ್ನೂ ಕೃತ್ತಿಕೆ ಯರು ಶೂಲವನ್ನೂ ಕೊಟ್ಟರು.

ದೇವಸೇನಾಪತಿಯಾಗಿ ಅಭಿಷೇಕ, ತಾರಕಾಸುರವಧೆ, ಆವಂತ್ಯ ಖಂಡೇ ಅವಂತೀ ಕ್ಷೇತ್ರಮಾಹಾತ್ಮ್ಯೇ ಚತುಸ್ತ್ರಿಂಶೋಧ್ಯಾಯಃ

(c) ಹಿರಣ್ಯಾಕ್ಷನ ಮಗ ತಾರಕ ಶಿವನನ್ನು ತಪಸ್ಸಿನಿಂದ ಪ್ರಸನ್ನನಾಗಿಸಿ ಶಿವನ ಹೊರತು ಇತರರಿಂದ ಅಜೇಯತ್ವ ವರವನ್ನು ಪಡೆದ. ಅವನಿಗೆ ಸೋತ ದೇವತೆಗಳು ಬೃಹಸ್ಪತಿಯನ್ನು ಉಪಾಯವೇನೆಂದು ಕೇಳಿದರು.

ಬೃಹಸ್ಪತಿ-ಶಿವನ ಹೊರತು ಇತರರಿಗೆ ತಾರಕ ಅಜೇಯ. ಶಿವ ತನ್ನ ಶಿಷ್ಯನನ್ನು ಕೊಲ್ಲುವುದಿಲ್ಲ. ''ಯೋ ವೈ ಪಿತಾ ಸ ಪುತ್ರಃ ಸ್ಯಾತ್''- ಶ್ರುತಿವಾಕ್ಯ. ಆದುದರಿಂದ ಶಿವನು ಪುತ್ರನನ್ನು ಪಡೆದು ಅವನು ನಮ್ಮ

ಸೇನಾಪತಿಯಾಗುವಂತೆ ಮಾಡಿಕೊಳ್ಳಿ, ಎಂದು ಸಲಹೆ ನೀಡಿದನು.
ದೇವತೆಗಳು ಶಿವನನ್ನು ಪ್ರಾರ್ಥಿಸಿ ಒಪ್ಪಿಸಿದರು.
ಶಿವನ ರೇತಸ್ಸಿನಿಂದ ಅಗ್ನಿಯಲ್ಲಿ ದ್ವಿಭುಜೈಕಮುಖಪುತ್ರನ ಜನನ. ಅವನ ರೋದನವನ್ನು ಕೇಳಿ ಕೃತ್ತಿಕೆಯರು ಬಂದಾಗ ದ್ವಾದಶಭುಜ ಷಣ್ಮುಖನಾದ.
ದೇವತೆಗಳು ಅವನಿಗೆ ಸ್ಕಂದನೆಂದು ನಾಮಕರಣ ಮಾಡಿದರು. ಶಿವನೇ ಅವನಿಗೆ ದೇವಸೇನಾಪತಿಯಾಗಿ ಅಭಿಷೇಕ ಮಾಡಿದ. ತಾರಕವಧೆ, ಷಣ್ಮುಖನ ಶಕ್ತ್ಯಾಯುಧ ತಾರಕನನ್ನು ಕೊಂದು ಚಮತ್ಕಾರ ಪುರದ ಮೇಲೆ ಬಿದ್ದಿತು. ಅನೇಕ ವಿಪ್ರರು ಹತರಾದರು. ಉಳಿದವರು ಸ್ಕಂದನಿಗೆ ಶಾಪ ಕೊಡಲು ಉದ್ಯುಕ್ತರಾದರು. ಸ್ಕಂದನು ಅಮೃತ ತಂದು ಸತ್ತ ಬ್ರಾಹ್ಮಣರನ್ನು ಉಜ್ಜೀವಿಸಿದ. ಅನಂತರ ಚಮತ್ಕಾರಪುರಕ್ಕೆ ಸ್ಕಂದಪುರವೆಂದು ಹೆಸರಾಯಿತು.
ನಾಗರಖಂಡೇ ಹಾಟಕೇಶ್ವರ ಕ್ಷೇತ್ರಮಾಹಾತ್ಮ್ಯೇ ಸಪ್ತತಿತಮ, ಏಕ ಸಪ್ತತಿತಮಾಧ್ಯಾಯೌ.

(d) 245ನೆಯ ಅಧ್ಯಾಯಾಂತ್ಯದಲ್ಲಿ:
ಮಯಾ ದತ್ತವರಶ್ಚಾಸೌ ಮಯ್ಯೆವೋಚ್ಛಿದ್ಯತೇ ನಹಿ ।

(46 ಶ್ಲೋಕ ಪೂರ್ವಾರ್ಧ)

ಪಾರ್ವತ್ಯಾಂ ಯೋಮಹೇಶಾನಾತ್ಸೂನುರುತ್ಪತ್ಸ್ಯತೇಹಿಸಃ ॥

(47 ಉತ್ತರಾರ್ಧ)

ದಿನಸಪ್ತಕವಾನ್ಸೂತ್ವಾ ತಾರಕಂ ಸ ಹನಿಷ್ಯತಿ (48 ಪೂರ್ವಾರ್ಧ)

ಶಿವಪಾರ್ವತಿಯೊಡನೆ ಏಕಾಂತದಲ್ಲಿದ್ದಾಗ ಪಾರಿವಾಳದ ರೂಪದಲ್ಲಿ ಅಗ್ನಿ ಪ್ರವೇಶಿಸಿದ. ಕ್ರುದ್ಧಳಾದ ಪಾರ್ವತಿ ದೇವತೆಗಳನ್ನು ಹೀಗೆ ಶಪಿಸಿದಳು : ನೀವು ಕಲ್ಲಾಗಿ. ನಿಮಗೆ ಮಕ್ಕಳಾಗದಿರಲಿ.

ನಾಗರಖಂಡೇ ಷಟ್ಚತ್ವಾರಿಂಶದುತ್ತರದ್ವಿಶತತಮೋಧ್ಯಾಯಃ

VI ಬ್ರಹ್ಮ ಮಹಾಪುರಾಣಂ -Nag publisher's edn.

(1) Introduction by Editor Dr. Rajendra Nath Sharma.
The purana has two parts :
(i) 138 chapters- about ಉತ್ಕಲದೇಶ
(ii) 105 chapters-ಗೌತಮೀಮಾಹಾತ್ಮ್ಯ-Later addition.

2nd chapter of ಗೌತಮೀಮಾಹಾತ್ಮ್ಯ relates to p.183
3rd chapter ಶಿವಪಾರ್ವತೀ ವಿವಾಹ, ಕಾರ್ತಿಕೇಯ ಜನನ p.184
4th chapter ವಾಮನಾವತಾರ, ಗಂಗೋತ್ಪತ್ತಿ p.184-6
5th chapter ಪಾರ್ವತೀ ವಿನಾಯಕರು ಗೌತಮಾಶ್ರಮಕ್ಕೆ ಹೋಗುವುದು. p.186-7

(2) Text of ಬ್ರಹ್ಮಪುರಾಣ-extracts

(a) ತಾರಕಾಸುರನಿಂದ ಬಾಧಿತರಾದ ದೇವತೆಗಳು ವಿಷ್ಣುವಿನ ಮೊರೆ ಹೋಗುವುದು. ಅವನ ಮರಣ 10ದಿನಗಳ ಬಾಲಕನಿಂದಲೇ ಆಗಬೇಕು. ಇದಕ್ಕೆ ಉಪಾಯ ಹೇಳೆಂದರು. ವಿಷ್ಣುವು ಶಿವಪುತ್ರ ನಿಂದಲೇ ಅವನ ಮರಣವಾಗಬೇಕೆಂದನು.
ಶಿವತಪೋಭಂಗ, ಕಾಮದಾಹ.
ಬ್ರಹ್ಮಪುರಾಣಗತ ಗೌತಮೀಮಾಹಾತ್ಮ್ಯೇ ದ್ವಿತೀಯೋಧ್ಯಾಯ :

(b) ಶಿವಪಾರ್ವತೀ ವಿವಾಹ. ಶಿವನುಬ್ರಹ್ಮನಿಗೆ ಗಂಗಾಸಹಿತವಾದ ಕಮಂಡಲುವನ್ನು ಕೊಟ್ಟನು.
ಬ್ರಹ್ಮಪುರಾಣಗತ ಗೌತಮೀಮಾಹಾತ್ಮ್ಯೇ ತೃತೀಯೋಧ್ಯಾಯಃ

(c) ವಾಮನ, ತ್ರಿವಿಕ್ರಮಾವತಾರಗಳು ಬ್ರಹ್ಮನು ಕಮಂಡಲುವಿನ ಜಲದಿಂದ ತ್ರಿವಿಕ್ರಮನ ಪಾದಕ್ಕೆ ಅರ್ಘ್ಯಪ್ರದಾನ ಮಾಡಿದ. ಅದು 4 ಭಾಗವಾದಾಗ ಒಂದು ಭಾಗವನ್ನು ಶಿವನು ಜಟೆಯಲ್ಲಿ ಸೇರಿಸಿದ.
ಬ್ರಹ್ಮಪುರಾಣಗತ ಗೌತಮೀಮಾಹಾತ್ಮ್ಯೇ ಚತುರ್ಥೋಧ್ಯಾಯ .

(d) ಶಿವನ ಜಟೆಯಲ್ಲಿದ್ದ ಗಂಗೆಯನ್ನು ನೋಡಿ ಉಮೆಯು ರುಷ್ಟಳಾದಳು. ವಿನಾಯಕ, ಜಯಾ, ಸ್ಕಂದರನ್ನು ಗುಟ್ಟಾಗಿ ಕರೆದು ಪುನಃ ತಪೋನಿರತಳಾದಳು.
ಆಗ ಲೋಕದಲ್ಲೆಲ್ಲ, ಬ್ರಹ್ಮಗಿರಿಯಲ್ಲಿದ್ದ ಗೌತಮಾಶ್ರಮ ಹೊರತಾಗಿ ಅನಾವೃಷ್ಟಿಯಾಯಿತು. ಇತರರು ಅಲ್ಲಿ ಹೋಗಿ ಅವನಿಂದ ಆತಿಥ್ಯ ಪಡೆದು ಅಲ್ಲಿ ನಿಂತರು. ವಿನಾಯಕನು ಅಲ್ಲಿ ಕೆಲದಿನವಿದ್ದು ಇನ್ನು ಹೆಚ್ಚುಕಾಲ ಇಲ್ಲಿರುವುದು ಸರಿಯಲ್ಲವೆಂದು ಬ್ರಾಹ್ಮಣರಿಗೆ ಹೇಳಲಾಗಿ ಅವರು ಹೊರಡಲು ಸಿದ್ಧರಾದರು. ಗೌತಮನು ಹೋಗಬೇಡಿರೆಂದು ಪ್ರಾರ್ಥಿಸಲಾಗಿ, ಬ್ರಾಹ್ಮಣರನ್ನು ಹೋಗಲೊಪ್ಪಿಸಿ ಒಂದುಪಾಯ ಹೂಡಿದನು. ವಿನಾಯಕ, ಬ್ರಾಹ್ಮಣರಿಗೆ ಕೈಜೋಡಿಸಿ, "ನಾವು ಇವನ

ಅನ್ನ ಕ್ರೀತರೇ ? ಇಲ್ಲಿ ಸಾಮೋಪಾಯ ಸಾಗದು. ಉಪಕಾರಿಯಾದ ಈ ದ್ವಿಜೋತ್ತಮನಿಗೆ ದಂಡಸಲ್ಲದು. ನಾನು ವ್ಯವಸ್ಥೆಮಾಡಲು ಅಪ್ಪಣೆ ಕೊಡಿ" ಂದು ಹೇಳಿ ವಿಜಯಳಿಗೆ ಗೋವೇಷ ಧರಿಸುವಂತೆ ಹೇಳಿದ. ಅವಳು ಹಾಗೆ ಮಾಡಿ ಗೌತಮನಿದ್ದ ಕಡೆಗೆ ಹೋಗಿ ಭತ್ತನನ್ನು ತಿನ್ನುತ್ತಿದ್ದಾಗ, ಗೌತಮನು ಹುಲ್ಲುಕಡ್ಡಿಯನ್ನೆಸೆದ. ಆಗ ಹಸು ಕೂಗುತ್ತಾ ನೆಲಕ್ಕೆ ಬಿತ್ತು. ಬ್ರಾಹ್ಮಣರು ನಾವು ಇನ್ನು ಇಲ್ಲಿರಲಾರೆವೆಂದು ಹೊರಟರು. ಗೌತಮನು ಆಗ ನನಗೆ ನೀವೇ ಶರಣು. ನಾನು ಪೂತನಾಗುವಂತೆ ಮಾಡಿ ಎಂದು ಬೇಡಿದನು. ಬ್ರಾಹ್ಮಣರ ಪ್ರತಿನಿಧಿಯಾಗಿ ವಿನಾಯಕನು ನೀನು ಬೇಗ ತಪೋಬಲದಿಂದ ಬ್ರಹ್ಮಕಮಂಡಲುವಿ ನಲ್ಲಿನ ಜಲವನ್ನು ತಂದು ಈ ಹಸುವಿಗೆ ಅಭಿಷೇಕ ಮಾಡೆ"ಂದನು. ಧ್ಯಾನಸ್ಥನಾದ ಗೌತಮನು ಎಲ್ಲವನ್ನು ಅರಿತು, ಇದು ಲೋಕದ ಶ್ರೇಯಸ್ಸಿಗಾಗಿ ಎಂದು ತಿಳಿದು ಶಿವನನ್ನು ಪ್ರಸನ್ನನಾಗಿಸಲು ಕೈಲಾಸಕ್ಕೆ ಹೊರಟನು.

ಬ್ರಹ್ಮಪುರಾಣಗತ ಗೌತಮೀಮಾಹಾತ್ಮ್ಯೇ ಪಂಚಮೋಧ್ಯಾಯ ಃ

VII ಶಿವಮಹಾಪುರಾಣ -Nag publishers Edn.

(1) Introduction by Editor Dr. Pushpendra Kumar.

1st Book-ವಿದ್ಯೇಶ್ವರ ಸಂಹಿತಾ-25 ಅಧ್ಯಾಯಗಳು

2nd Book-ರುದ್ರಸಂಹಿತಾ

5 ಖಂಡಗಳು-ಸೃಷ್ಟಿ ಖಂಡ (20 chap), ಸತೀಖಂಡ, ಪಾರ್ವತೀಖಂಡ, ಕುಮಾರಖಂಡ, ಯುದ್ಧಖಂಡ

3rd book-ಶತರುದ್ರಸಂಹಿತಾ-42 ಅಧ್ಯಾಯಗಳು

4th book-ಕೋಟಿರುದ್ರಸಂಹಿತಾ-43 ಅಧ್ಯಾಯಗಳು

5th book-ಉಮಾಸಂಹಿತಾ-51 ಅಧ್ಯಾಯಗಳು

6th book-ಕೈಲಾಸಸಂಹಿತಾ-23ಅಧ್ಯಾಯಗಳು

7th book-ವಾಯವೀಯಸಂಹಿತಾ-2 ಭಾಗಗಳು

1ನೇ ಭಾಗ 35 ಅಧ್ಯಾಯ;2ನೇ ಭಾಗ-41 ಅಧ್ಯಾಯ

(2) Extracts from text of ಶಿವಮಹಾಪುರಾಣಂ

(a) ದ್ವಿತೀಯಾಯಾಃ ರುದ್ರಸಂಹಿತಾಯಾಃ ತೃತೀಯೇ ಪಾರ್ವತೀಖಂಡೇ ಅಧ್ಯಾಯ 15 - ತಾರಕಾಸುರ ಜನನ, ಬ್ರಹ್ಮನಿಂದ ವರದಾನ-ಶಿವನ

ಪುತ್ರಸೇನಾಪತಿಯಿಂದ ಮಾತ್ರ ಮರಣ.

(b) ದ್ವಿತೀಯಾಯಾಃ ರುದ್ರಸಂಹಿತಾಯಾಃ ಚತುರ್ಥೇಕುಮಾರಖಂಡೇ
ಅಧ್ಯಾಯ 2-ಕಾರ್ತಿಕೇಯೋತ್ಪತ್ತಿ
ಅಧ್ಯಾಯ 3-ಯದೃಚ್ಛೆಯಿಂದ ಅಲ್ಲಿಗೆ ಬಂದ ವಿಶ್ವಾಮಿತ್ರನಿಂದ ಆ ಮಗು ಸಂಸ್ಕಾರವನ್ನು ಅಪೇಕ್ಷಿಸಿತು. ವಿಶ್ವಾಮಿತ್ರ ನಾನು ಕ್ಷತ್ರಿಯನೆನ್ನಲು, ನೀನು ನನ್ನವರಿಂದ ಬ್ರಹ್ಮರ್ಷಿಯಾದೆ ಎಂದು ಹೇಳಿ ಅವನಿಂದ ಸಂಸ್ಕಾರ ಹೊಂದಿ, ಅವನನ್ನು ಪುರೋಹಿತನಾಗಿ ಮಾಡಿಕೊಂಡಿತು.
ಅಗ್ನಿ ಆ ಮಗುವನ್ನು ಪುತ್ರನೆಂದು ಕರೆದು ಶಕ್ತ್ಯಾಯುಧವನ್ನು ಕೊಟ್ಟ. ಅದರಿಂದ ಬೆಟ್ಟಕ್ಕೆ ಹೊಡೆಯಲು, ಅದು ಉರುಳಿ ಅನೇಕ ಕೋಟಿ ರಾಕ್ಷಸರು ಸತ್ತರು. ಗಲಭೆಯನ್ನು ನೋಡಿ ಇಂದ್ರ ವಜ್ರದಿಂದ ಆ ಮಹಾತೇಜೋರೂಪದ ಮಗುವನ್ನು 3 ಕಡೆ ಹೊಡೆದಾಗ ಆ ಮಗುವನ್ನೇ ಹೋಲುವ ಶಾಖ, ವಿಶಾಖ, ನೈಗಮ (ನೈಗಮೇಯ) ಎಂಬ 3 ಮಕ್ಕಳು ಉದ್ಭವಿಸಿದವು.
ಅಧ್ಯಾಯ 4-ಮಕ್ಕಳನ್ನು ಕೃತ್ತಿಕೆಯರು ಸಾಕಿದರು.
ಅಧ್ಯಾಯ 10 - ತಾರಕವಧ.

VIII References listed in Puranic Encyclopedia

(i)	ಮಹಾಭಾರತ-ಆದಿಪರ್ವ 226-33	(a)
	ವನಪರ್ವ 223ರಿಂದ 231 ಅಧ್ಯಾಯಗಳು	(b)
	ಶಲ್ಯಪರ್ವ 46-90	(c)
	ಶಾಂತಿಪರ್ವ 122-32	(d)
	ಅನುಶಾಸನಪರ್ವ 85	(e)
(ii)	ವಾಮನಪುರಾಣ 57-61	
(iii)	ಬ್ರಹ್ಮಾಂಡಪುರಾಣ 81	
(iv)	ರಾಮಾಯಣ ಬಾಲಕಾಂಡ 36	
(v)	ಭವಿಷ್ಯಪುರಾಣ	

ಮಹಾಭಾರತ

(a) ಆದಿಪರ್ವ : ಅಧ್ಯಾಯ 227-33 in Nag publishers edn. ಖಾಂಡವದಹನ ಕಾಲದಲ್ಲಿ ಇಂದ್ರನು ಕೃಷ್ಣಾರ್ಜುನರೊಡನೆ ಯುದ್ಧ

ಮಾಡುವಾಗ,

ಸ್ಕಂದಃ ಶಕ್ತಿಂ ಸಮಾದಾಯತಸ್ಥೌಮೇರುರಿವಾಚಲಃ ॥ (ಪೂರ್ವಾರ್ಧ)

(b) **ವನಪರ್ವ** : ಅಧ್ಯಾಯ 224-ಪ್ರಜಾಪತಿ ಕನ್ಯೆಯರಾದ ದೈತ್ಯಸೇನಾ ದೇವಸೇನಾ ಇವರನ್ನು ಕೇಶಿ ಅಪಹರಿಸಿದ್ದು ಮತ್ತು ಇಂದ್ರ ದೇವಸೇನೆ ಯನ್ನು ರಕ್ಷಿಸಿದ್ದು.

ಅಧ್ಯಾಯ 225-ದಕ್ಷಕನ್ಯೆ ಸ್ವಾಹಾ, ಅರುಂಧತಿ ಹೊರತಾಗಿ ಉಳಿದ ಸಪ್ತರ್ಷಿ ಪತ್ನಿಯರ ರೂಪದಿಂದ ಅಗ್ನಿಯನ್ನು ಕಾಮಿಸಿದ್ದು. ಅದರಿಂದ ಸ್ಕಂದನ ಜನನ-ಷಣ್ಮುಖರೂಪದಲ್ಲಿ ಅಧ್ಯಾಯ 227-ವಿಶಾಖನ ಉತ್ಪತ್ತಿ.

ಅಧ್ಯಾಯ 229-ದೇವತೆಗಳ ಸೇನಾಪತಿಯಾಗಿ ಅಭಿಷೇಕ. ಶಿವನು ಚಿನ್ನದ ಹಾರವನ್ನು ಅವನಿಗೆ ಕಟ್ಟಿದ್ದು. ರುದ್ರಸೂನುವೆಂದು ಪ್ರಸಿದ್ಧನಾದದ್ದು. ದೇವಸೇನೆಯೊಡನೆ ವಿವಾಹ.

ಅಧ್ಯಾಯ 231-ರುದ್ರ ಅಗ್ನಿಯಲ್ಲಿಯೂ ಉಮೆಯು ಸ್ವಾಹಾದೇವಿಯಲ್ಲೂ ಸಮಾವೇಶವಾಗಿ ಸ್ಕಂದನು ಹುಟ್ಟಿದನೆಂದು ಅವನಿಗೆ ಬ್ರಹ್ಮ ಹೇಳಿದ್ದು.

ದೇವಸೇನಾಪತಿಸ್ತ್ವೇವಂ ದೇವಸೇನಾಭಿರಾವೃತ ಃ।

ಅನುಗಚ್ಛತಿ ದೇವೇಶಂ ಬ್ರಹ್ಮಣ್ಯಃ ಕೃತ್ತಿಕಾಸುತಃ ॥ 54ನೇ ಶ್ಲೋಕ

ಮಹಿಷಾಸುರನು ಸ್ಕಂದನಿಂದ ಹತನಾದುದ್ದು.

ಅಧ್ಯಾಯ 232-ವಿವಿಧ ನಾಮಗಳು.

ಆಗ್ನೇಯ, ಸ್ಕಂದ, ವಿಶಾಖ, ನೈಗಮೇಯ, ಗುಹ, ಷಡಾನನ, ಬ್ರಹ್ಮಣ್ಯ, ಬ್ರಹ್ಮವತಾಂವರಿಷ್ಠ ಬ್ರಾಹ್ಮಣಾನಾಂನೇತಾ

(c) ಶಲ್ಯಪರ್ವ : ಅಧ್ಯಾಯ 44-46

ಸ್ಕಂದನ ಜನನ, ಸೇನಾಪತ್ಯಭಿಷೇಕ, ತಾರಕವಧೇತ್ಯಾದಿ.

ಕೇಚಿದೇನಂ ವ್ಯವಸ್ಯಂತಿ ಪಿತಾಮಹಸುತಂ ಪ್ರಭುಂ।

ಸನತ್ಕುಮಾರಂ ಸರ್ವೇಷಾಂ ಬ್ರಹ್ಮಯೋನಿಂ ತಮಗ್ರಜಂ ॥ 46-98

ಕೇಚಿನ್ಮಹೇಶ್ವರ ಸುತಂ ಕೇಚಿತ್ಪುತ್ರಂ ವಿಭಾವಸೋಃ।

ಉಮಾಯಾಃ ಕೃತ್ತಿಕಾನಾಂ ಚ ಗಂಗಾಯಾಶ್ಚ ವದಂತ್ಯುತ ॥ 99

(d) ಶಾಂತಿಪರ್ವ : ಅಧ್ಯಾಯ 122

ಆಚಾರಸಂಕರವಾದಾಗ, ಬ್ರಹ್ಮನ ಪ್ರಾರ್ಥನೆಯಂತೆ ವಿಷ್ಣುವು "ದಂಡ"ವನ್ನು ಸೃಷ್ಟಿಸಿ, ಒಂದೊಂದು ಗುಂಪಿಗೂ ಒಬ್ಬೊಬ್ಬ ನಾಯಕನನ್ನು ನೇಮಿಸಿದ. ಭೂತಗಣಕ್ಕೆ ನಾಯಕ ಕುಮಾರಸ್ಕಂದ.

ತಸ್ಯ ತಸ್ಯ ನಿಕಾಯಸ್ಯ ಚಕಾರೈಕೈಕಮೀಶ್ವರಂ ॥ 26 ಉತ್ತರಾರ್ಧ
---- ಭೂತಾನಾಂ ಚ ಪ್ರಭುಂ ವರಂ ।
ಕುಮಾರಂ ದ್ವಾದಶಭುಜಂ ಸ್ಕಂದಂ ರಾಜಾನಮಾದಿಶತ್ ॥32

(e) **ಅನುಶಾಸನಪರ್ವ**

ಅಧ್ಯಾಯ 84-ನಿಮಗೆ ಮಕ್ಕಳಾಗದಿರಲಿ ಎಂದು ದೇವತೆಗಳಿಗೆ ರುದ್ರಾಣಿಯ ಶಾಪ. ಆಗ ಅಲ್ಲಿ ಇರಲಿಲ್ಲವಾದುದರಿಂದ ಅವನಿಗೆ ಅದು ಅನ್ವಯಿಸಲಿಲ್ಲ. ತಾರಕಾಸುರನಿಂದ ದೇವತೆಗಳಿಗೆ ಬಾಧೆ.

ಅಧ್ಯಾಯ 85. ಅಗ್ನಿಯಿಂದ ಗಂಗೆಯ ಗರ್ಭದಲ್ಲಿ ಸುವರ್ಣ ಮತ್ತು ಕುಮಾರೋತ್ಪತ್ತಿ. ಕೃತ್ತಿಕೆಯರಿಂದ ವರ್ಧಿತನಾದ ಕಾರ್ತಿಕೇಯನಿಂದ ತಾರಕವಧೆ.

IX **ಬೌಧಾಯನಧರ್ಮಸೂತ್ರಂ** - Motilal Banarasidass.(from Dharmasutras-Ed. Patrick Olivelle)

ಓಂ ಸನಕ್ಕುಮಾರಂ ತರ್ಪಯಾಮಿ;
ಓಂ ಸ್ಕಂದಂ ತರ್ಪಯಾಮಿ;
ಓಮಿಂದ್ರ ತರ್ಪಯಾಮಿ; ಓಂ ಷಷ್ಠೀಂ ತರ್ಪಯಾಮಿ;
ಓಂ ಷಣ್ಮುಖಂ ತರ್ಪಯಾಮಿ; ಓಂ ಜಯಂತಂ ತರ್ಪಯಾಮಿ;
ಓಂ ವಿಶಾಖಂ ತರ್ಪಯಾಮಿ; ಓಂ ಮಹಾಸೇನಂ ತರ್ಪಯಾಮಿ;
ಓಂ ಸುಬ್ರಹ್ಮಣ್ಯಂ ತರ್ಪಯಾಮಿ;
ಓಂ ಸ್ಕಂದಪಾರ್ಷದಾಂಸ್ತರ್ಪಯಾಮಿ;
ಓಂ ಸ್ಕಂದ ಪಾರ್ಷದೀಂಶ್ಚ ತರ್ಪಯಾಮಿ;
(ದ್ವಿತೀಯ ಪ್ರಶ್ನೇ, ನವಮಖಂಡೇ 8 ಸೂತ್ರ)

X **ಬ್ರಹ್ಮಾಂಡಪುರಾಣ** - Motilal Banarasidass

ಮಧ್ಯಭಾಗೇ ತೃತೀಯೇ ಉಪೋದ್ಘಾತಪಾದೇ ದಶಮಾಧ್ಯಾಯೇ- ಪ್ರಜಾಪತಿ ಪುತ್ರರಾದ ಪಿತೃಗಣಗಳ ಮಾನಸ ಕನ್ಯೆ ಮೇನಾ ಹಿಮವಂತನ ಪತ್ನಿ. ಇತರ ಮೂವರು ಕನ್ಯೆಯರಲ್ಲಿ ಮೊದಲನೆಯವಳು ಅಪರ್ಣಾ-ಇವಳೇ ರುದ್ರಾಣೀ- "ರುದ್ರಾಗ್ನಿಗಂಗಾ ತನಯಃ" - ಷಣ್ಮುಖ-ಕಾರ್ತ್ತಿಕೇಯ-ಸ್ಕಂದ. ತಾರಕಾಸುರನನ್ನು ಸಂಹರಿಸಿದ.

★ ತಾರಕಾಸುರನನ್ನು ಸಂಹರಿಸಿದನಂತರ ಪಾರ್ವತಿಯು ಮಗನನ್ನು ಬಲು ಮುದ್ದು ಮಾಡಿದುದರ ಪರಿಣಾಮವಾಗಿ ಕಾರ್ತಿಕೇಯ ದೇವಾಂಗನೆಯರ ಶೀಲಭಂಗ ಮಾಡಿದನೆಂದೂ, ಅವರು ಪಾರ್ವತಿಯಲ್ಲಿ ದೂರುಕೊಟ್ಟಾಗ ಅವಳು ಅವನಿಗೆ ಎಲ್ಲ

ಸ್ತ್ರೀಯರಲ್ಲೂ ತನ್ನ ಪ್ರತಿಬಿಂಬವನ್ನು ತೋರಿಸಲಾಗಿ, ಎಲ್ಲ ಸ್ತ್ರೀಯರನ್ನೂ ತನ್ನ ತಾಯಿಯಂತೆ ಕಾಣುವುದಾಗಿ ಮಾತುಕೊಟ್ಟು ಮುಂದೆ ಬ್ರಹ್ಮಚಾರಿಯಾಗಿಯೇ ಉಳಿದನೆಂದೂ Puranic encyclopaediaದಲ್ಲಿದೆ. ಬ್ರಹ್ಮಾಂಡಪುರಾಣ 81 ಆಕರವೆಂದು ಕೊಟ್ಟಿದೆ. ಆದರೆ ಮೇಲಿನ ಆವೃತ್ತಿಯಲ್ಲಿ ಈ ಪ್ರಸಂಗ ಕಂಡುಬರುವುದಿಲ್ಲ. 81ನೆಯ ಅಧ್ಯಾಯವೂ ಇಲ್ಲ.

XI **ವಾಮನಮಹಾಪುರಾಣಂ** - Nag publishers Edn.

ಅಧ್ಯಾಯ 57 ಕುಮಾರೋತ್ಪತ್ತಿ. ಚತುರ್ಮೂರ್ತಿಯಾಗಿ,

ಕುಮಾರಃ ಶಂಕರಮಗಾತ್ ವಿಶಾಖೋ ಗಿರಿಜಾಮಗಾತ್ ।

(ಗಂಗಾ) ಕುಟಿಲಾಮಭ್ಯಗಾಚ್ಛಾದೋ ನೈಗಮೇಯೋಗ್ನಿಮಭ್ಯಗಾತ್ ॥40

ಕುರುಕ್ಷೇತ್ರದಲ್ಲಿ ಸೇನಾಪತಿಯಾಗಿ ಅಭಿಷೇಕ.

ಅಧ್ಯಾಯ 58. ತಾರಕಮಹಿಷಾದಿದಾನವರ ವಧೆ. ಕ್ರೌಂಚಭೇದನ.

ಅಧ್ಯಾಯ 61. ಪುನ್ನಾಮ್ನೋನರಕಾತ್ತ್ರಾತಿ ಪುತ್ರಸ್ತೇನೇಹ ಗೀಯತೇ ।

ಶೇಷಪಾಪಹರಃ ಶಿಷ್ಯ ಇತೀಯಂ ವೈದಿಕೀಶ್ರುತಿಃ ॥76

XII **ಶ್ರೀಮದ್ವಾಲ್ಮೀಕಿ ರಾಮಾಯಣಂ** - ಚೌಖಂಬಾ ವಿದ್ಯಾಭವನ.

ಬಾಲಕಾಂಡ ಸರ್ಗ 36.

ದೇವತೆಗಳಿಗೆ, ನಿಮ್ಮ ಪತ್ನಿಯರಲ್ಲಿ ನಿಮ್ಮಿಂದ ಸಂತಾನೋತ್ಪತ್ತಿಯಾಗದಿರಲೆಂದು ಶಾಪ (ಪಾರ್ವತಿಯಿಂದ).

ಸರ್ಗ 37 ಅಗ್ನಿಯಿಂದ ಗಂಗೆಯಲ್ಲಿ ಪುತ್ರಜನನ; ಕೃತ್ತಿಕೆಯಿಂದ ಮಗುವಿಗೆ ಸ್ತನ್ಯಪಾನ. ಕಾರ್ತ್ತಿಕೇಯ, ಸ್ಕಂದ, ಷಡಾನನ.

ಗೃಹೀತ್ವಾ ಕ್ಷೀರಮೇಕಾಹ್ನಾ ಸುಕುಮಾರ ವಪುಸ್ತದಾ ।

ಅಜಯತ್ಸ್ವೇನ ವೀರ್ಯೇಣ ದೈತ್ಯ ಸೈನ್ಯಗಣಾನ್ವಿಭುಃ ॥30

XIII **ಭವಿಷ್ಯಮಹಾಪುರಾಣಂ** - Nagpublishers Edn

ಬ್ರಾಹ್ಮೇ ಪರ್ವಣಿ, ಅಧ್ಯಾಯ 39

ಷಷ್ಠೀತಿಥಿಯಲ್ಲಿ ಕಾರ್ತ್ತಿಕೇಯನಿಗೆ ಅರ್ಘ್ಯದಾನ ಮಂತ್ರ -

ಸಪ್ತರ್ಷಿದಾರಜಸ್ಕಂದ ಸ್ವಾಹಾಪತಿಸಮುದ್ಭವ ।

ರುದ್ರಾರ್ಯಮಾಗ್ನಿಜವಿಭೋ ಗಂಗಾಗರ್ಭ ನಮೋಸ್ತುತೇ ।

ಪ್ರೀಯತಾಂದೇವ ಸೇನಾನೀಃ ಸಂಪಾದಯತು ಹೃದ್ಗತಂ ॥6

ಉತ್ತರಪರ್ವಣಿ, ಅಧ್ಯಾಯ 42

ತಾರಕವಧ ಕಾರ್ತ್ತಿಕೇಯ ಪೂಜಾಷಷ್ಠೀ

ಮಾರ್ಗಶಿರಷಷ್ಠೀ - ಗುಹನು ತಾರಕನನ್ನು ಸಂಹರಿಸಿದ ದಿನ.
ದೇವ ಸೇನಾಪತೇ ಸ್ಕಂದ ಕಾರ್ತಿಕೇಯ ಭವೋದ್ಭವ ।
ಕುಮಾರಗುಹಗಾಂಗೇಯ ಶಕ್ತಿಹಸ್ತ ನಮೋಽಸ್ತುತೇ ॥9

XIV **The Purana Index** - V. R. Ramachandra Dikshitar, pub. Motilal Banarasi dass.

1. There are 2 entries under Subrahmanya - none refers to Skanda
2. Under Skanda, only the names ಕುಮಾರ & ಕಾರ್ತಿಕೇಯ are given.

XV **ಶ್ರೀಮದ್ಭಾಗವತಪುರಾಣಂ** - ಮೋತೀಲಾಲ ಬನಾರಸೀದಾಸ-
ಷಷ್ಠಸ್ಕಂದ, ಅಧ್ಯಾಯ 6
ಅಗ್ನೇರ್ಭಾರ್ಯಾ ವಸೋರ್ಧಾರಾ ಪುತ್ರಾದ್ರವಿಣಕಾದಯಃ ॥
(13 ಉತ್ತರಾರ್ಧ)
ಸ್ಕಂದಶ್ಚ ಕೃತ್ತಿಕಾಪುತ್ರೋಯೇ ವಿಶಾಖಾದಯಸ್ತತಃ ।
(14 ಪೂರ್ವಾರ್ಧ)
(ಶ್ರೀಧರ ಸ್ವಾಮಿ ವ್ಯಾಖ್ಯಾ)
ಸ್ಕಂದಶ್ಚ ಕೃತ್ತಿಕಾಸುತೋಽಗ್ನೇಃಪುತ್ರಃ ।
ಷಾಣ್ಮಾತುರ ಇತ್ಯಗ್ನಿಭೂರಿತಿ ಚ ಪ್ರಸಿದ್ಧೇಃ । ತತಃ ಸ್ಕಂದಾತ್ ।

XVI ಗುರುಗುಹಗಾನವೈಭವ-ಸಂಪಾದಕ ಆನಂದರಾಮ ಉಡುಪ
(ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು)
38. ಶ್ರೀಸುಬ್ರಹ್ಮಣ್ಯೋ ಮಾಂ ರಕ್ಷತು
46. ಸುಬ್ರಹ್ಮಣ್ಯೇನ ರಕ್ಷಿತೋಽಹಮ್
47. ಶ್ರೀಬಾಲಸುಬ್ರಹ್ಮಣ್ಯ
48. ಶ್ರೀಸುಬ್ರಹ್ಮಣ್ಯಾಯ ನಮಸ್ತೇ
54. ಬಾಲಸುಬ್ರಹ್ಮಣ್ಯಂ ಭಜೇಹಂ

XVII **ಶಬ್ದಾರ್ಥಚಿಂತಾಮಣಿಃ** - ಬ್ರಹ್ಮಾವಧೂತ ಶ್ರೀಸುಖಾನಂದನಾಥಃ
ಸುಬ್ರಹ್ಮಣ್ಯಃ-ಋತ್ವಿಗ್ವಿಶೇಷೇ । ಗುಹೇ ।
ಕೇರಲಾದಿದೇಶಪ್ರಸಿದ್ಧೇ ಸರ್ಪಾಧಿಕೃತೇ ದೇಶೇ, ತತ್ರತ್ಯೇ ಸರ್ಪರಾಜೇಚ ।

XVIII **Monier Williams Dictionary.**

Subrahmanya-very kind or dear to Brahmana(said of Vishnu)- Pancharatragama; name of one of the three assistants of the udgatr. priest; name of Siva- saivagama; name of Skanda or Kartikeya.

XIX ಶಬ್ದಸಾಗರ-ಜೀವಾನಂದ ವಿದ್ಯಾಸಾಗರ

(based on H. H. Wilson's Skt-Eng. Dict.)

ಸುಬ್ರಹ್ಮಣ್ಯ :-1.Kartikeya 2. Name of one of the 16 priests employed at a sacrifice

ಸು good and ಬ್ರಹ್ಮಣ್ಯ the Brahmanical order, of whom he is the special guardian.

XX Kittel's Kannada-English Dictionary

ಸುಬ್ರಮಣ್ಯ-ತದ್ಭವ ಸುಬ್ರಹ್ಮಣ್ಯ , a place of pilgrimage in South Canara where formerly Karttikeya was worshipped, but which now is a place of worship of the serpent ಆದಿಶೇಷ .

XXI ಶಬ್ದಕಲ್ಪದ್ರುಮಃ -ರಾಧಾಕಾಂತದೇವ, ಚೌಖಂಬಾ ಸಂಸ್ಕೃತಸೀರೀಸ್ ಆಫೀಸ್,
ಸುಬ್ರಹ್ಮಣ್ಯಃ ಕಾರ್ತಿಕೇಯಃ । ಇತಿ ಕೇಚಿತ್ ।

— ಇತಿ ಶಮ್ —

28-5-2001

ಸುಬ್ರಹ್ಮಣ್ಯ ಉಪ ಮಾ ಹ್ವಯಸ್ವ - ಕಾತ್ಯಾಯನ ಶ್ರೌತಸೂತ್ರ 12.4.29

(a) ಸುಬ್ರಹ್ಮಣ್ಯಃ ಪ್ರತಿಹರ್ತಾರ್ಥ ಯಜ್ಞೇ - ಗೋಪಥಬ್ರಾಹ್ಮಣ 1.5.24

(b) ಓಂ ಸುಬ್ರಹ್ಮಣ್ಯಂ ತರ್ಪಯಾಮಿ ಬೋಧಾಯನ ಧರ್ಮಸೂತ್ರ 2.5.9.8

ಸುಬ್ರಹ್ಮಣ್ಯ ಪಿತಾಪುತ್ರೀಯಾಂ ಸುಬ್ರಹ್ಮಣ್ಯಂ ಆಹ್ವಯ ಆಪಸ್ತಂಬ ಶ್ರೌತಸೂತ್ರ 11.20.3

(c) ಸುಬ್ರಹ್ಮಣ್ಯಂ ಅಂಗಿರಸೋ ವೋ ಅಸ್ತು - ಋಗ್ವೇದ ಸಂಹಿತಾ 10.62.4

ಸುಬ್ರಹ್ಮಣ್ಯ ಸುಬ್ರಹ್ಮಣ್ಯಾಮಾಹ್ವಯ - ಆಪಸ್ತಂಬ ಶ್ರೌತಸೂತ್ರ 10.28.4; 11.3.13 11.21.8; 12.3.15; 21.5.16; 21.6.1; 2.2.9

ಗೋಪಥ ಬ್ರಾಹ್ಮಣ ಮಾನವ ಶ್ರೌತಸೂತ್ರ 2.1.4.30; 2.1.40 2.5.9; 2.5.35; 3.2.1

ಸುಬ್ರಹ್ಮಣ್ಯೇ ಸುಬ್ರಹ್ಮಣ್ಯಾಮಾಹ್ವಯ - ಕಾತ್ಯಾಯನ ಶ್ರೌತಸೂತ್ರ 8.2.14
ಆಪಸ್ತಂಬ ಶ್ರೌತಸೂತ್ರ 12.3.16

(d) ಸುಬ್ರಹ್ಮಣ್ಯೋಪಹ್ವಯಸ್ವ ಲಾಟ್ಯಾಯನ ಶ್ರೌತಸೂತ್ರ 1.3.12
ಸುಬ್ರಹ್ಮಣ್ಯೋಂ ಷಡ್ವಿಂಶಬ್ರಾಹ್ಮಣ 1.1.8

(e) ಶತಪಥಬ್ರಾಹ್ಮಣ 3.3.4.17

(f) ತೈತ್ತಿರೀಯ ಆರಣ್ಯಕ 12.3

(g) ವೈತಾನಸೂತ್ರ 34.5
ಲಾಟ್ಯಾಯನ ಶ್ರೌತಸೂತ್ರ 1.2.20; 1.3.1
ಕಾತ್ಯಾಯನ ಶ್ರೌತಸೂತ್ರ 7.9.20

(a) ಗೋಪಥಬ್ರಾಹ್ಮಣೇ 1-4-6
ಅಥೋದ್ಗಾತ್ರೇ ಸುಬ್ರಹ್ಮಣ್ಯಂ ದೀಕ್ಷಯತಿ (P.61)
ಸುಬ್ರಹ್ಮಣ್ಯಃ ಪ್ರತಿಹರ್ತಾಥಯಜ್ಞೇ 1-5-24 (P.86)
ಸುಬ್ರಹ್ಮಣ್ಯ ಸುಬ್ರಹ್ಮಣ್ಯಾಮಾಹ್ವಯ 2-2-9 (P.110)

(b) ಬೋಧಾಯನಧರ್ಮಸೂತ್ರೇ ಅಧ್ಯಾಯ ಕಂಡಿಕಾ 2-5-9-8
ಓಂ ಸ್ಕಂದಂ ತರ್ಪಯಾಮಿ । xxxx । ಪ್ರಶ್ನ ಖಂಡ
ಓಂ ವಿಶಾಖಂ ತರ್ಪಯಾಮಿ । ಓಂ ಮಹಾಸೇನಂ ತರ್ಪಯಾಮಿ ।
ಓಂ ಸುಬ್ರಹ್ಮಣ್ಯಂ ತರ್ಪಯಾಮಿ । ಓಂ ಸ್ಕಂದ ಪಾರ್ಷದಾಂಸ್ತರ್ಪಯಾಮಿ
(P.272)

(c) ಋಗ್ವೇದ ಸಂಹಿತಾಯಾಂ 10.62.4
ಸುಬ್ರಹ್ಮಣ್ಯಮಂಗಿರಸೋ ವೋ ಅಸ್ತು
ಸಾಯಣಭಾಷ್ಯ-ಸುಬ್ರಹ್ಮಣ್ಯಂಶೋಭನಂ ಬ್ರಹ್ಮವಚನಂ (P.492)

(d) ಲಾಟ್ಯಾಯನ ಶ್ರೌತಸೂತ್ರೇ 1-2-17 (P.20)
(i) ಕ್ರೀತೇರಾಜನಿ ಸುಬ್ರಹ್ಮಣ್ಯ ಉತ್ತರೇಣ xxxx (ಅಗ್ನಿಸ್ವಾಮಿಭಾಷ್ಯ)
ಕ್ರೀತೇ ಸೋಮೇ ಸುಬ್ರಹ್ಮಣ್ಯ ಉತ್ತರೇಣ 1-2-18 (P.20)
(ii) ಅಧ್ವರ್ಯುರ್ ಸಂಪ್ರೈಷಂ ಸರ್ವತ್ರಾಕಾಂಕ್ಷೇತ್ ಸುಬ್ರಹ್ಮಣ್ಯಾಯಾಂ
1-2-20 (P.22)
(iii) ಸುಬ್ರಹ್ಮಣ್ಯೋಮಿತಿ ತ್ರಿರಾಹ್ವಯೇತ್ 1-2-23 (P.22)
(iv) ದಕ್ಷಿಣಮನಡ್ವಾಹಂ ಸುಬ್ರಹ್ಮಣ್ಯಾಯ ದದ್ಯಾತ್1-3-1 (P.24)
(v) xxx ಸುಬ್ರಹ್ಮಣ್ಯೋಮಿತಿ ತ್ರಿರುಕ್ತ್ವಾ xxx 1-3-12 (P.28)

(vi) ಪತ್ನೀಯಜಮಾನಾವುಪಹವಮಿಚ್ಛಮಾನೌ
ಸುಬ್ರಹ್ಮಣ್ಯೋಽಪಹ್ವಯಸ್ವೇತಿ (ಅನುಜ್ಞಾಂ)

(e) ಮಾಧ್ಯಂದಿನ ಶತಪಥಬ್ರಾಹ್ಮಣೇ 3-3-4-17 (P.113)
ಅಥಸುಬ್ರಹ್ಮಣ್ಯಾಮಾಹ್ವಯತಿ । xxx ದೇವೇಭ್ಯೋಯಜ್ಞಂ ನಿವೇದಯತಿ
ಸುಬ್ರಹ್ಮಣ್ಯೋಂ ಸುಬ್ರಹ್ಮಣ್ಯೋಮಿತಿ
ಹರಿಸ್ವಾಮಿಭಾಷ್ಯ-ಬ್ರಹ್ಮ ದೇವಾನಾಮಾಹ್ವಾನಸಾಧನೋ ಮಂತ್ರಃ
ಶೋಭನಂಬ್ರಹ್ಮ 'ಸುಬ್ರಹ್ಮ', ತದರ್ಹತೀತಿ 'ಸುಬ್ರಹ್ಮಣ್ಯಾ' ಕಾಚನ ದೇವತಾ

(f) ತೈತ್ತಿರೀಯಾರಣ್ಯಕೇ ಪ್ರಪಾಠಕ 1-12-3 (P.102) ಅನುವಾಕ
ಸುಬ್ರಹ್ಮಣ್ಯೋಂಸುಬ್ರಹ್ಮಣ್ಯೋಂ ಸುಬ್ರಹ್ಮಣ್ಯೋಂ ।
ಭಟ್ಟಭಾಸ್ಕರಭಾಷ್ಯ-ಶೋಭನಂಬ್ರಹ್ಮ ಸುಬ್ರಹ್ಮವೇದಃ, ತಸ್ಮೈಹಿತಂ ।
(From ವೈದಿಕ ಕೋಶ-ಹಂಸರಾಜ ಏವಂ ಬ್ರಹ್ಮದತ್ತ, ವಾರಾಣಸೀ)

I 1. ತದಾಹುಃ ಕಿಂ ಸುಬ್ರಹ್ಮಣ್ಯಾಯೈ ಸುಬ್ರಹ್ಮಣ್ಯಾತ್ವಮಿತಿ (P.12)
ವಾಗೇವೇತಿ ಬ್ರೂಯಾದ್ವಾಗ್ವೈ ಬ್ರಹ್ಮಚ ಸುಬ್ರಹ್ಮ ಚೇತಿ (P.13)
ಐತರೇಯ ಬ್ರಾಹ್ಮಣ 6.3 ಪಂಚಕ ಖಂಡ
ಷಡ್ಗುರುಶಿಷ್ಯವೃತ್ತಿ - ಬ್ರಹ್ಮೇತಿ ವಾಙ್ಮಯಸ್ಯಾಖ್ಯಾ ಸುಬ್ರಹ್ಮೇತಿ ಚ ಸುಷ್ಠುವಾಕ್ ।
ವೇದವಾದಿ ಬ್ರಹ್ಮಶಬ್ದಾತ್ ತತ್ರಸಾಧುಚತತ್ ಪದಂ ॥

2. ವಾಗ್ಘಿ ಸುಬ್ರಹ್ಮಣ್ಯೇತಿಬ್ರೂಯಾತ್ತೇನೇತಿ (P.13)
3. ಸೋಮೇರಾಜನಿಕ್ರೀತೇ ಸುಬ್ರಹ್ಮಣ್ಯಾಮಾಹ್ವಯಂತಿ ಯಥಾ
ಧೇನುಮುಪಹ್ವಯೇತ್ ತೇನವತ್ಸೇನ ।
4. ವಾಗ್ವೈ ಸುಬ್ರಹ್ಮಣ್ಯಾ (P.11)
ವೃತ್ತಿ-ಇಂದ್ರಾಗಚ್ಛಾದಿನಿಗದಃ ಸುಬ್ರಹ್ಮಣ್ಯೇತಿ ಸಾಮಗಾಃ ।
ಸರ್ವವಾಙ್ಮಯ ಸಾರತ್ವಾತ್ ಸುಬ್ರಹ್ಮಣ್ಯೇತಿ ವಾಙ್ಮತಾ ॥

II ಕೌಷೀತಕೀ ಬ್ರಾಹ್ಮಣ 27.6
ಬ್ರಹ್ಮವೈ ಸುಬ್ರಹ್ಮಣ್ಯಾ
[ಸುಬ್ರಹ್ಮಣ್ಯಾ ಪ್ರತೀಕಂ ಅಭಿವ್ಯಾಹೃತ್ಯ-ಶಾಂಖಾಯನ ಶ್ರೌತಸೂತ್ರ x.21.17.
Rg. Veda Brahmanas-Keith P.513]

III ಬ್ರಹ್ಮಶ್ರೀರ್ವೈನಾಮೈತತ್ಸಾಮ ಯತ್ಸುಬ್ರಹ್ಮಣ್ಯಾ (ಷಡ್ವಿಂಶ 1.2)
Additional references given in Vedic Index by
Macdonnel & Keith (P.456)

(1) ಶತಪಥಬ್ರಾಹ್ಮಣೇ 3-3-4-9 (P.109)
ತದಂತರೇಣ ತಿಷ್ಠನ್ತ್ಸುಬ್ರಹ್ಮಣ್ಯಃ ಪ್ರಾಜತಿ
ಹರಿಸ್ವಾಮಿಭಾಷ್ಯ-ತತ್ತಯೋಃ ಫಲಕಯೋಃ 'ಅಂತರೇಣ' ಮಧ್ಯೇ 'ತಿಷ್ಠನ್'
ಸುಬ್ರಹ್ಮಣ್ಯಃ। ಭೂಮಿಷ್ಠ ಏವಸನ್ 'ಪ್ರಾಜತಿ' ಪ್ರೇರಯತಿ ಅನಡ್ವಾಹೌ ।

(2) (i) ಪಂಚವಿಂಶ ಬ್ರಾಹ್ಮಣೇ ಖಂಡ ಅಧ್ಯಾಯ XVIII 9.19
ಅಜೌ ಸುಬ್ರಹ್ಮಣ್ಯಾಯೈ ॥
ಸಾಯಣಭಾಷ್ಯ-ಸುಬ್ರಹ್ಮಣ್ಯಾಯೈಸುಬ್ರಹ್ಮಣ್ಯಸ್ಯ ಭಾಗೋಽಯೋಗ್ಯಃ
(ii) ಯಃ ಪ್ರತಿಪ್ರಸ್ಥಾತಾ ಸೋಽಗ್ನೀತ್ಸ ಉನ್ನೇತಾಗೃಹಪತಿರ್ಗೃಹಪತಿಃ
ಸುಬ್ರಹ್ಮಣ್ಯಸ್ಸುಬ್ರಹ್ಮಣ್ಯಃ XXV 4.5
(iii) ವಾಕ್ಸುಬ್ರಹ್ಮಣ್ಯಃ XXV 18.4





ಕನ್ನಡ ಪುಸ್ತಕ ಪ್ರಾಧಿಕಾರವು ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರ ಲೇಖನಗಳ ಒಂದು ಕಟ್ಟನ್ನು ಕನ್ನಡಿಗರಿಗೆ ಕೊಡಮಾಡುತ್ತಿದೆ. ಶಾಸ್ತ್ರಕುತೂಹಲ ಗ್ರಂಥವು ಆಕರಗ್ರಂಥ ಮಾಲೆಯ ಒಂದು ವಿದ್ವತ್ ಕೃತಿ. ಇಲ್ಲಿಯ ಬರಹಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ಸಾಹಿತ್ಯಕ್ಕೆ, ಸಂಬಂಧಿಸಿವೆ. ಇವು ಆಳವಾದ ವ್ಯುತ್ಪತ್ತಿಯನ್ನೂ ಅಪರೂಪದ ತಿಳಿವಳಿಕೆಯನ್ನೂ ಜೋಡುಹೆಣಿಗೆಯಾಗಿ ಹಿಡಿದಿವೆ.

ಅವರು ಈಗ ತೊಂಭತ್ತನಾಲ್ಕರ ಇಳಿವಯಸ್ಸಿನಲ್ಲಿದ್ದಾರೆ. ಜ್ಞಾನದ ಹಂಬಲ ಅವರಿಗೆ ಇನ್ನೂ ಹಿಂಗಿಲ್ಲ. ಅವರ ಈ ಬರಹಗಳು

ಆ ಹಂಬಲದ ಸಂಕೇತಗಳಾಗಿವೆ. ಇಂಥ ಬರಹಗಳು ನಮ್ಮ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸುತ್ತವೆಂಬ ನಂಬಿಕೆ ನನ್ನದಾಗಿದೆ. ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರು ಸ್ವಂತ ವ್ಯಾಸಂಗದಿಂದ ಕನ್ನಡ ಮತ್ತು ಸಂಸ್ಕೃತ ಭಾಷಾಸಾಹಿತ್ಯಜ್ಞಾನ ಸಂಪಾದಿಸಿಕೊಂಡು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹಲವಾರು ಲೇಖನಗಳನ್ನು ಬರೆದಿದ್ದಾರೆ.

ಪ್ರೊ.ಗರ್ಗೇಶ್ವರಿ ವೆಂಕಟಸುಬ್ಬಯ್ಯ ಅವರ ಕನ್ನಡ ಲೇಖನಗಳು ಕನ್ನಡ ಜ್ಞಾನಶಾಸ್ತ್ರಕ್ಕೆ ಬೆಲೆಯುಳ್ಳ ಕೊಡುಗೆಗಳಾಗಿವೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ನ್ನಡ ಪುಸ್ತಕ ಪ್ರಾಧಿಕಾರ ISBN 81-7713-163-X ಬೆಲೆ : 150/-